



ಅನುಪಮ ಅಭಿನಂದನ

ಅಮುವಿಮ್ಗ ಅಭಿನಂದನ

೧೯೮೮

ಕರ್ನಾಟಕ ಸಂಘ
ಪುತ್ತೂರು, ೫೭೪೨೦೧ (ದ.ಕ.)

ಅನುಪಮ ಅಭಿನಂದನ

ಪ್ರಧಾನ ಸಂಪಾದಕ :

ಬೊಳಂತಕೋಡಿ ಈಶ್ವರ ಭಟ್ಟ

ಸಹ ಸಂಪಾದಕರು :

ವಿ. ಬಿ. ಮೊಳೆಯಾರ

ವಿ. ಬಿ. ಅರ್ತಿಕಜೆ

೧೯೮೮

ಕರ್ನಾಟಕ ಸಂಘ

ಪುತ್ತೂರು – 574 201, ದಕ್ಷಿಣ ಕನ್ನಡ

ANUPAMA ABHINANDANA - A Felicitation Volume containing articles by various writers on the life and works of Dr. Anupama Niranjana.
Published by Karnataka Sangha, Puttur - 574 201. D. K.

First Impression : 1988

Pages : viii+369 Price : Rs. 80

ರಕ್ಷಾಪುಟ ವಿನ್ಯಾಸ : ಮೋಹನ್ ಸೋನ

ಚಿತ್ರಗಳು : ನಾಗೇಶ್ ಮತ್ತು ರಾಜಾರಾಂ

ಮುದ್ರಣ :

ರಾಜೇಶ್ ಪವರ್ ಪ್ರೆಸ್

ದರ್ಬೆ - 574201, ಪುತ್ತೂರು, ದ. ಕ.

ಬೆಲೆ : ರೂಪಾಯಿ ಎಂಬತ್ತು

ಪ್ರಸ್ತಾವನೆ

ಅಚ್ಚಿನಲ್ಲಿರುವವುಗಳೂ ಸೇರಿ, ೯ ಕಥಾಸಂಕಲನಗಳು, ೨೨ ಕಾದಂಬರಿಗಳು, ೧ ನಾಟಕ, ೧೨ ಶಿಶುಸಾಹಿತ್ಯ ಕೃತಿಗಳು, ೧ ಆತ್ಮವೃತ್ತ, ೨ ಪ್ರವಾಸ ಕಥನಗಳು, ೨ ಲೇಖನ ಸಂಗ್ರಹಗಳು, ಮಹಿಳೆಯರಿಗಾಗಿ ಬರೆದ ೩ ಕೃತಿಗಳು, ದಾಂಪತ್ಯ ವಿಜ್ಞಾನಕ್ಕೆ ಸಂಬಂಧಿಸಿದ ೨ ಪುಸ್ತಕಗಳು, ೯ ವೈದ್ಯಕೀಯ ವಿಜ್ಞಾನ ಗ್ರಂಥಗಳು- ಹೀಗೆ ಕನ್ನಡ ಸಾಹಿತ್ಯಕ್ಕೆ ಒಟ್ಟು ೬೩ ಕೃತಿಗಳ ಕೊಡುಗೆ. ಇದು ಕನ್ನಡದ ಸುಪ್ರಸಿದ್ಧ ಸಾಹಿತಿ ಡಾ। ಅನುಪಮಾ ನಿರಂಜನ ಅವರ ಸಾಹಿತ್ಯಕ ಸಾಧನೆ - ೩೬ ವರ್ಷಗಳಲ್ಲಿ.

ಡಾ। ಅನುಪಮಾ ನಿರಂಜನ ಇಂದು ಕನ್ನಡದ ಮೊದಲ ಪಂಕ್ತಿಯ ಸಾಹಿತಿಗಳಲ್ಲಿ ಒಬ್ಬರು. ವಿಮರ್ಶಕರ ಅವಜ್ಞೆಗೆ ತುತ್ತಾಗಿದ್ದರೂ, ಅವರ "ಘೋಷ" ಮತ್ತು "ಮಾಧವಿ" ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಹೊಸ ಆಯಾಮವನ್ನು ಸೃಷ್ಟಿಸಿದ ಕೃತಿಗಳು. ಆತ್ಮವೃತ್ತ "ನೆನಪು: ಸಿಹಿ - ಕಹಿ" ಒಂದು ವಿಶಿಷ್ಟ ಆತ್ಮಕಥನ. ಅವರ ವಿಜ್ಞಾನ ಸಾಹಿತ್ಯ ಕನ್ನಡಕ್ಕೆ ಅಮೂಲ್ಯ ಕೊಡುಗೆ.

ಬದುಕಿಗೆ ಬದ್ಧರಾದ, ಜನಪರ ನಿಲುವಿನ, ಖಚಿತ ಸಿದ್ಧಾಂತ ಮತ್ತು ಧೋರಣೆಗಳ ಕೆಲವರೇ ಕನ್ನಡ ಸಾಹಿತಿಗಳಲ್ಲಿ ಅನುಪಮಾ ಒಬ್ಬರು. 'ಸಾಹಿತ್ಯಕ್ಕಾಗಿ ಸಾಹಿತ್ಯ' ಎಂದು ತಿಳಿಯದೆ, "ಸಾಹಿತ್ಯ ಪ್ರತ್ಯಕ್ಷವಾಗಿ ಅಲ್ಲದಿದ್ದರೂ, ಪರೋಕ್ಷವಾಗಿ ಬದಲಾವಣೆಗಳಿಗೆ ನೆರವಾಗಬೇಕು" ಎಂದು ನಂಬಿದವರು. ನಡೆ - ನುಡಿಗಳಲ್ಲಿ ಏಕತೆಯನ್ನು ತೋರಿಸಿಕೊಟ್ಟವರು. ಸಾಹಿತ್ಯದ "ದಂತಗೋಪುರ"ದಲ್ಲಿ ಉಳಿಯದೆ, ಜನಪರ ಹೋರಾಟಗಳಲ್ಲಿ ಸ್ವತಃ ಭಾಗವಹಿಸಿದ ಸಾಹಿತಿ ಡಾ। ಅನುಪಮಾ. ಸ್ನೇಹಜೀವಿ; ಪ್ರೋತ್ಸಾಹಕಿ. ಬದುಕಿಗಾಗಿ ಹೋರಾಡಿದ "ವೀರವನಿತೆ". ಅವರ ಜೀವನವೇ ಒಂದು ವೀರಗಾಥೆ.

ಡಾ। ಅನುಪಮಾ ನಿರಂಜನರ ಸಾಹಿತ್ಯ ಎಷ್ಟು ಅಭ್ಯಾಸ ಯೋಗ್ಯವೋ, ಅವರ ಬದುಕು ಕೂಡ ಅಷ್ಟೇ ಅಭ್ಯಾಸ ಯೋಗ್ಯ.

*   *   *   *

ಎರಡು ವರ್ಷಗಳ ಹಿಂದೆ "ನಿರಂಜನ ಅಭಿನಂದನ" ಪ್ರಕಟಿಸಿ ಕನ್ನಡಿಗರ ಅಭಿನಂದನೆಗೆ ಪಾತ್ರರಾದ ನಮಗೆ, ಅದೇ ಮಾದರಿಯಲ್ಲಿ "ಅನುಪಮಾ ಅಭಿನಂದನ" ಏಕೆ ಪ್ರಕಟಿಸಬಾರದು? ಎಂಬ ಪ್ರಶ್ನೆ ಮೂಡಿ ಬಂದದ್ದು ೧೦ ತಿಂಗಳುಗಳ ಹಿಂದೆ. ಆ ಪ್ರಶ್ನೆಗೆ ಉತ್ತರವೇ ನಿಮ್ಮ ಕೈಯಲ್ಲಿರುವ "ಅನುಪಮಾ ಅಭಿನಂದನ"

ಡಾ। ಅನುಪಮಾ ನಿರಂಜನರ ಬದುಕು - ಬರೆಹಗಳ ಸ್ಥೂಲ ಪರಿಚಯ ಮಾಡಿಕೊಡುವುದು ಈ ಗ್ರಂಥದ ಉದ್ದೇಶ. ನಾಲ್ಕು ಭಾಗಗಳಾಗಿ ವಿಂಗಡಿಸಿದ "ಅನುಪಮಾ ಅಭಿನಂದನ"ದ ಮೊದಲ ಭಾಗದಲ್ಲಿ ಮುಖ್ಯವಾಗಿ ವೈಯಕ್ತಿಕ ಸ್ನೇಹ-ಸಂಬಂಧಗಳ ನಿರೂಪಣೆಯ ೪೨ ಲೇಖನಗಳಿವೆ. ಎರಡನೆಯ ಭಾಗದಲ್ಲಿ ಮುಖ್ಯವಾಗಿ ಅವರ ಸಾಹಿತ್ಯಕ ಮತ್ತು ಇತರ ಚಟುವಟಿಕೆಗಳ ಬಗ್ಗೆ ಬರೆಹಗಳಿವೆ. ಮೂರನೆಯ ಭಾಗ ಅವರ ಕೃತಿಗಳ ಅವಲೋಕನಕ್ಕೆ ಮೀಸಲು. ನಾಲ್ಕನೆಯ ಭಾಗ ಅನುಬಂಧ ರೂಪದಲ್ಲಿದೆ.

ಎಂಬತ್ತನಾಲ್ಕು ಲೇಖಕ - ಲೇಖಕಿಯರು ಬರೆದ ೮೩ ಲೇಖನಗಳಲ್ಲಿ ಅಲ್ಲಲ್ಲಿ ಪುನರುಕ್ತಿಗಳು ಬರುವುದು ಅಸಹಜವೇನಲ್ಲ. ಅದೇ ರೀತಿ, ಭಾಷೆ, ಶೈಲಿ, ಪದಪ್ರಯೋಗಗಳಲ್ಲಿ ಏಕರೂಪತೆ ಇರುವುದು ಸಾಧ್ಯವಿಲ್ಲ. ಕೆಲವೊಂದು ಘಟನೆಗಳು, ಅಂಕೆ - ಸಂಖ್ಯೆಗಳು ಇತ್ಯಾದಿಗಳಲ್ಲಿ ಹೊಂದಾಣಿಕೆ ಇಲ್ಲದಿರಲೂಬಹುದು. ಇಂತಹ ಗ್ರಂಥಸಂಪಾದನೆಯ ಕೆಲಸದಲ್ಲಿ ಇರುವ ಇತಿಮಿತಿಗಳನ್ನು ಅರಿತುಕೊಂಡು ಓದುಗರು ಮತ್ತು ವಿಮರ್ಶಕರು ಇದನ್ನು ಅರ್ಥೈಸಿಕೊಳ್ಳುವರೆಂದು ನಾವು ಭಾವಿಸುತ್ತೇವೆ.

*   *   *   *

ನಮ್ಮ ಯೋಜನೆಯ ಸಾಧನೆಗೆ ನೆರವಾದವರು ೮೪ ಮಂದಿ ಲೇಖಕ-ಲೇಖಕಿಯರು; ಗ್ರಂಥ ಪ್ರಕಟಣೆಗೆ ಒಪ್ಪಿಗೆಯಿತ್ತ ಡಾ। ಅನುಪಮಾ; ಸಹಕರಿಸಿದ ಆತ್ಮೀಯ ಮಿತ್ರ ನಿರಂಜನ; ಆಕರ್ಷಕ ರಕ್ಷಾಕವಚ ಬರೆದುಕೊಟ್ಟ ಕಲಾವಿದ ಮೋಹನ ಸೋನ; ಭಾವಚಿತ್ರಗಳನ್ನೊದಗಿಸಿದ ನಾಗೇಶ್ ಮತ್ತು ರಾಜಾರಾಂ; ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಮಿತ್ರ ಎಂ. ಎಸ್. ರಘುನಾಥ ರಾವ್ ಮತ್ತು ಕಾರ್ಮಿಕ ಬಂಧುಗಳು. ಇವರಿಗೆಲ್ಲ ನಾವು ಋಣಿಗಳು.

ಬೋಳಂತಕೋಡಿ ಈಶ್ವರ ಭಟ್ಟ
ಪ್ರಧಾನ ಸಂಪಾದಕ
ಮತ್ತು ಅಧ್ಯಕ್ಷ, ಕರ್ನಾಟಕ ಸಂಘ

ಪುತ್ತೂರು
ದಿನಾಂಕ ೧೫-೦೨-೧೯೮೮

ಒಳಗಿನ ಪುಟಗಳಲ್ಲಿ

೧

೨

೩

೪

++++

"ಸಾಹಿತ್ಯ ಹೊರ ನೋಟಕ್ಕೆ ಸರಳವಾಗಿ ಕಂಡರೂ ಅದು ಸಂಕೀರ್ಣ ಸ್ವರೂಪದ್ದು. ನಿಜವಾದ ಸಾಹಿತ್ಯ ಆಯಾ ಕಾಲದ ಸಾಮಾಜಿಕ, ರಾಜಕೀಯ, ಧಾರ್ಮಿಕ ಆಗುಹೋಗುಗಳನ್ನು ದಾಖಲೆ ಮಾಡುತ್ತದೆ. ಸಮಾಜದ ತಳಮಳ ಚಿತ್ರಿಸುವುದರೊಂದಿಗೆ ಅದರ ಸ್ಥಿತಿಗತಿಯ ಬದಲಾವಣೆಗೆ ಪರೋಕ್ಷವಾಗಿ ಸಹಾಯ ಮಾಡುತ್ತದೆ"

-ಡಾ। ಅನುಪಮಾ ನಿರಂಜನ



ಡಾ। ಅನುಪಮಾ ನಿರಂಜನ



ಪುಟ್ಟ ವೆಂಕು (೧೯೪೭)



ಅನುಪಮಾ (೧೯೫೪)



ನಿರಂಜನ - ಅನುಪಮಾ (೧೯೫೬)



ಶಾಶ್ವತೀ ವಸ್ತು ಸಂಗ್ರಹಾಲಯಕ್ಕೆ ವಸ್ತು ಸಂಗ್ರಹಕ್ಕೋಸ್ಕರ ಪಾದಯಾತ್ರೆ



ಮುಂಬಯಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿ (೧೯೭೯)



ಪುತ್ತೂರಿನಲ್ಲಿ ನಿರಂಜನ ಅಭಿನಂದನ ಸಮಾರಂಭದಲ್ಲಿ (೧೯೮೬)



ತೇಜಸ್ವಿನಿ, ನಿರಂಜನ, ಅನುಪಮಾ, ಸೀಮಂತಿನಿ

ಅನುಪಮಾ ಅಭಿನಂದನ

೧

ಅಣ್ಣನ ಮಗಳು ಅನುಪಮಾ

-ಡಾ| ಡಿ. ಪಿ. ಜಯರಾಂ

ನನ್ನ ತಂದೆ* ಮತ್ತು ಅವರ ನಾಲ್ಕು** ಅಣ್ಣಂದಿರ ಗಂಡುಮಕ್ಕಳಲ್ಲಿ ಹಿರಿಯವರು ಶಿವರಾಮಯ್ಯ. ಅವರೇ ನನ್ನ ಅಣ್ಣ. ಅವರು ತಮ್ಮ ಹಿರಿಯ ಮಗಳಿಗೆ ಅಜ್ಜಿ ಮತ್ತು ತಾಯಿ ಹೆಸರುಗಳೆರಡನ್ನೂ ಸೇರಿಸಿ ವೆಂಕಟಲಕ್ಷ್ಮಿ ಎಂದು ನಾಮಕರಣ ಮಾಡಿದರು. ವೆಂಕಟಲಕ್ಷ್ಮಿ ಚಿಕ್ಕ ವಯಸ್ಸಿನಿಂದಲೇ ಪದ್ಯ, ಸಣ್ಣ ಕಥೆಗಳನ್ನು ಬರೆಯುತ್ತಿದ್ದಳು. ಸ್ವಲ್ಪ ದೊಡ್ಡವಳಾದ ಮೇಲೆ ಅನುಪಮಾ ಎಂಬ ಕಾವ್ಯನಾಮವನ್ನು ಆರಿಸಿಕೊಂಡಳು. ಮದುವೆಯಾದ ಮೇಲೆ ಅನುಪಮಾ ವ್ಯವಹಾರ ನಾಮವಾಯಿತು. ಸಹಸ್ರಾರು ಓದುಗರಿಗೂ, ಸಾಹಿತಿಗಳಿಗೂ ಈಗ ಈ ಹೆಸರಿನಿಂದಲೇ ಪರಿಚಿತಳಾಗಿದ್ದಾಳೆ.

ನನ್ನ ಅಣ್ಣ ಮೈಸೂರು ಮೆಡಿಕಲ್ ಕಾಲೇಜಿನ ಮೊದಲ ಬ್ಯಾಚಿನ ವಿದ್ಯಾರ್ಥಿಯಾಗಿ ಸೇರಿದರು. ಆದರೆ ಹೆಣ ಕೊಯ್ಯುವ ಪಾಠಕ್ರಮಕ್ಕೆ ಬೇಸರಪಟ್ಟು ಕಾಲೇಜು ಬಿಟ್ಟರು. ನಂತರ ಮನೆತನದ ಹಲವು ಹಿರಿಯರ ಮಾಸ್ತರಗಿರಿ ಜಾಡೇ ಸರಿಯೆಂದು ಮೈಸೂರು ವಿಶ್ವವಿದ್ಯಾನಿಲಯದ B.A. ಮತ್ತು B.T. ಪದವಿ ಪಡೆದು

ವಿದ್ಯಾ ಇಲಾಖೆಯನ್ನು ಸೇರಿದರು. ಮಕ್ಕಳ ಮನೋವಿಜ್ಞಾನ ಶಾಸ್ತ್ರದಲ್ಲಿ (Child Psychology) ಬೊಂಬಾಯಿ ವಿಶ್ವವಿದ್ಯಾನಿಲಯದಿಂದ M.Ed. ಪದವಿಯನ್ನು ಸ್ವಲ್ಪಕಾಲಾನಂತರ ಗಳಿಸಿದರು. ಅದೇ ಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಗಳಿಸುವ ತಮ್ಮ ಹೆಬ್ಬಯಕೆಯನ್ನೂ ನಿವೃತ್ತರಾಗುವ ೧–೨ ವರ್ಷಗಳ ಮುಂಚೆ ಸಾಧಿಸಿದರು. ಸರ್ಕಾರೀ ಸೇವೆ, ಸೌಕರ್ಯ ಪಡೆಯುವ ದೃಷ್ಟಿಯಿಂದ ಇದು ನಿಷ್ಪ್ರಯೋಜಕವೆಂದು ಇಲಾಖೆಯವರೂ, ಪ್ರಪಂಚ ಜ್ಞಾನವಿಲ್ಲದವರೆಂದು ಅನೇಕ ಬಂಧುಮಿತ್ರರೂ ಅವರನ್ನು ಹೀಯಾಳಿಸಿದರು. ಜ್ಞಾನ ಸಂಪಾದನೆಯಿಂದಾಗಲೀ, ಕಾವ್ಯ ಬರೆಯುವುದರಿಂದಲಾಗಲೀ ಒಬ್ಬ ವ್ಯಕ್ತಿಗೆ ಬರುವ ತೃಪ್ತಿಯನ್ನು ಹಣಕಾಸುಗಳಿಂದ ಅಳೆಯಲಾಗದು. ಒಂದು ಗುರಿಯನ್ನು ಇಟ್ಟುಕೊಂಡ ಮೇಲೆ ಇತರರಿಂದ ಪ್ರಭಾವಿತರಾಗದೆ ಏಕಾಗ್ರತೆಯಿಂದ ಎಲ್ಲಾ ತೊಡಕುಗಳನ್ನೂ ಬಗೆಹರಿಸಿ ಸಾಧಿಸುವ ಗುಣ ತೋರಿಸುತ್ತದೆ.

ಮನೆಯಲ್ಲಿ ನನ್ನ ಅಣ್ಣ ಮಕ್ಕಳನ್ನೆಲ್ಲಾ ಮನೋವಿಜ್ಞಾನದನುಸಾರ ಬೆಳೆಸಿದರು. ಇದರಲ್ಲಿ ಅವರ ಪತ್ನಿಯವರೂ ನೆರವಾದರು. ಹಿರಿಯ ಮಗಳಾದ ಅನುಪಮಾಳಿಗೆ ಇದರ ಪೂರ್ಣ ಲಾಭ ಸಿಕ್ಕಿತು. ನಿರ್ಭಯತೆ, ಸ್ವಂತ ತೀರ್ಮಾನಕ್ಕೆ ಬರುವ ಗುಣ, ತನ್ನ ಕಾಲ ಮೇಲೆ ತಾನು ನಿಲ್ಲಬಲ್ಲ ಶಕ್ತಿ, ಜನರ ಗುಣವನ್ನು ಅರಿತುಕೊಳ್ಳುವ ಸಾಮರ್ಥ್ಯ ಇದರಿಂದ ಪಡೆದಳು.

ನನ್ನ ಅಣ್ಣ ಮೈಸೂರು ಮೆಡಿಕಲ್ ಕಾಲೇಜು ಬಿಟ್ಟ ೪-೫ ದಶಕಗಳ ನಂತರ ಅನುಪಮಾ ಅವಳ ತಂದೆ ಪೂರ್ಣಮಾಡಲಾಗದ ವೈದ್ಯ ವಿದ್ಯಾಭ್ಯಾಸವನ್ನು ಸಾಧಿಸಲು ನಿಶ್ಚಯಿಸಿದಳು. ಆಗ ನನ್ನ ಅಣ್ಣ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ನಾನು ಮೈಸೂರು ಮೆಡಿಕಲ್ ಕಾಲೇಜಿಗೆ ಸೇರಿದ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆ ಚರ್ಮರೋಗ ವಿಭಾಗದ ಮುಖ್ಯಸ್ಥನಾಗಿದ್ದೆ. ಒಂದು ದಿನ ಬೆಳಗ್ಗೆ ಸುಮಾರು ೧೨ ಗಂ. ಸಮಯದಲ್ಲಿ ನನ್ನ ಮುಂದೆ ಬಂದು ನಿಂತು 'ನಾನು ಮೆಡಿಕಲ್ ಕಾಲೇಜು ಸೇರಲು ಬಂದೆ' ಅಂದಳು. 'ಸರಿ, ಹಾಗಾದರೆ ಕಾಲೇಜಿನ ಆಫೀಸಿಗೆ ಹೋಗೋಣ' ಅಂದೆ. 'ಎಲ್ಲಾ ಆಯಿತು. ಶುಲ್ಕವನ್ನು ಕಟ್ಟಿ ಬಂದೆ' ಎಂದು ರಶೀತಿಯನ್ನು ತೋರಿಸಿದಳು. 'ಹಾಗಾದರೆ ಕೂಡಲೇ ಹಾಸ್ಟೆಲ್ ಸೀಟಿಗೆ ಬರೆದುಕೋ' ಎಂದೆ. 'ಅದೂ ಆಯಿತು. ನನಗೆ ಹಾಸ್ಟೆಲಿನಲ್ಲಿ ಸೀಟು ಕೊಟ್ಟಿದ್ದಾರೆ' ಎಂದಳು. 'ಬೆಳಗ್ಗೆ ಬೆಂಗಳೂರಿನಿಂದ ಬಂದು ೨-೩ ಗಂಟೆಯಲ್ಲಿ ಇಷ್ಟೆಲ್ಲಾ ಕೆಲಸ ಮಾಡಿರುವೆ. ಶಹಭಾಷ್' ಎಂದೆ. 'ಹಾಗಾದರೆ ೧-೨ ನಿಮಿಷ ಕುಳಿತುಕೋ. ನನ್ನ ಉಳಿದಿರುವ ಕೆಲಸ ಮುಗಿಸುತ್ತೇನೆ. ನಂತರ ಮನೆಗೆ ಊಟಕ್ಕೆ ಹೋಗೋಣ' ಅಂದೆ. ಈ ಪ್ರಸಂಗ ಆಕೆ ಯಾರ ಸಹಾಯವೂ ಇಲ್ಲದೆ ತನ್ನ ಕೆಲಸ ತಾನು ಮಾಡಿಕೊಳ್ಳಬಲ್ಲ ಶಕ್ತಿ ಎಷ್ಟರಮಟ್ಟಿಗೆ ಬೆಳೆಸಿಕೊಂಡಿದ್ದಳೆಂಬುದನ್ನು

ತೋರಿಸುತ್ತದೆ. ಈ ಘಟನೆ ನಡೆದ ೨೦ ವರ್ಷಗಳ ಮೇಲೆ ನಾನು ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ, ನನ್ನ ಹತ್ತಿರದ ನೆಂಟರ ಮಗ ಕಾಲೇಜು ಸೇರಲು ದೊಡ್ಡಬಳ್ಳಾಪುರದಿಂದ ಬಂದು ನಮ್ಮ ಮನೆಯಲ್ಲಿ ಉಳಿದು ಕೊಂಡನು. ಮರುದಿನ ಆತನ ಜೊತೆ ಕಾಲೇಜು ಆಫೀಸಿಗೆ ಹೋಗಿ ದಾಖಲೆ ಮಾಡಿಸಲು ನಾನೇ ಸಹಾಯ ಮಾಡಬೇಕಾಯಿತು. ಹಾಗೆಯೇ ಹಾಸ್ಟೆಲಿನ ಸೀಟಿಗೂ ಕೂಡ. ಅವನ ಹಾಸ್ಟೆಲ್ ನಮ್ಮ (Staff Quarters) ಮನೆಯ ಎದುರು. ಹಾಸ್ಟೆಲ್ ತೆರೆದ ದಿನ ಹಾಸ್ಟೆಲ್ ಸೇರಿದ್ದೂ ಆಯಿತು. ಅದೇ ದಿನ ರಾತ್ರಿ ೧೧ ಗಂಟೆಯ ಸುಮಾರಿಗೆ ಹಾಸ್ಟೆಲಿನಿಂದ ಚೀರುತ್ತಾ ನಮ್ಮ ಮನೆಗೆ ಓಡಿಬಂದನು. ಅವನ ಸಹಪಾಠಿ ಗಳು ಲೇವಡಿ (Rag) ಮಾಡಿದ್ದರಿಂದ ಹೀಗಾಯಿತೆಂದು ತಿಳಿಯಿತು. ಇವರಿಬ್ಬರಿಗೂ ಎಷ್ಟು ವ್ಯತ್ಯಾಸ! ಈ ಹುಡುಗ ಹಳ್ಳಿಯಿಂದ ಬಂದವನು. ಅವನ ಮನೆತನದಲ್ಲಿ ಇಷ್ಟು ಮುಂದಕ್ಕೆ ಯಾರೂ ಓದಿರಲಿಲ್ಲ. ಮನೆಯ ವಾತಾವರಣ, ಓನ್ನೆಲೆ ವ್ಯಕ್ತಿಯ ಪರಿಪಕ್ವತೆಗೆ ಎಷ್ಟು ಮುಖ್ಯ. ಅನುಪಮಾ ಕಾಲೇಜಿನಲ್ಲಿ ಚೆನ್ನಾಗಿ ಓದುತ್ತಾ, ವರ್ಷೇ ವರ್ಷೇ ಪರೀಕ್ಷೆಗಳಲ್ಲಿ ಉತ್ತೀರ್ಣಳಾಗಿ ನಿಯಮಿತ ಕಾಲದಲ್ಲಿ M.B.B.S. ಪದವಿಯನ್ನು ಪಡೆದಳು. ಧಾರವಾಡ ಮತ್ತು ಬೆಂಗಳೂರಿನಲ್ಲಿ ಬಹಳ ಜನಪ್ರಿಯ ಡಾಕ್ಟರಾಗಿ ಸೇವೆ ಮಾಡಿದಳು.

ಅನುಪಮಾಳ ಮುಂದಿನ ಹೆಜ್ಜೆ ನಿರಂಜನರೊಡನೆ ಮದುವೆ. ಈ ಅಂತರಜಾತಿ ಮದುವೆಗೆ ತಾಯಿ ತಂದೆಯರ ಒಪ್ಪಿಗೆ ಇರಲಿಲ್ಲ. ಇಂತಹ ಮದುವೆ ಗಳಲ್ಲಿ ಇದು ಸಾಮಾನ್ಯ. ನನ್ನ ಮಟ್ಟಿಗೆ ಅಸಮ್ಮತಿಗೆ ೩ ಕಾರಣ. (೧) ಭಾವೀ ಪತಿಯ ಹೆಸರು, ಉದ್ಯೋಗ, ಸಂಪಾದನೆ, ತಂದೆತಾಯಿಯರು, ಯಾವ ಊರಿನವರು ಎಂಬುದು ಆಗ ತಿಳಿದಿರಲಿಲ್ಲ. (೨) ಇದರಿಂದಾಗಿ ಕೆಲವು ತಪ್ಪು ಮಾಹಿತಿಗಳು ಪ್ರಚಲಿತವಾಗಿದ್ದವು (೩) ೨೦-೨೩ ವಯಸ್ಸಿನ ಯುವತಿಗೆ ಪತಿಯಾಗುವವನ ಗುಣಾವಗುಣಗಳನ್ನು ಒರೆಹಚ್ಚಿ ಸ್ವಯಂ ನಿರ್ಧಾರಕ್ಕೆ ಬರಲು ಸಾಧ್ಯವೇ? ಮೆಡಿಕಲ್ ಕಾಲೇಜಿನ ಮಹಿಳಾ ಪ್ರಾಧ್ಯಾಪಕರನೇಕರು ಇಂತಹ ಸ್ವಯಂ ವರಾನ್ವೇಷಣೆಯಲ್ಲಿ ಮೋಸಹೋಗಿರುವುದನ್ನು ನಾನು ನೋಡಿದ್ದೇನೆ. ಯಾವಾಗಲೂ ಮೇಧಾವಿಗಳನ್ನು ಮೋಸಮಾಡುವುದು ಸಾಮಾನ್ಯರನ್ನು ಮೋಸಮಾಡುವುದಕ್ಕಿಂತ ಸುಲಭ. ಮೋಸಗಾರ ನೊಬ್ಬ ಡಾ॥ ಸಿ. ವಿ. ರಾಮನ್ ಅವರನ್ನು ಸುಲಭವಾಗಿ ಮೋಸಮಾಡಲಿಲ್ಲವೇ? ಆದರೆ ಅನುಪಮಾ ಅಂತಹ ತಪ್ಪು ಮಾಡಲಿಲ್ಲ. ಈ ಆಯ್ಕೆಗೆ ಅನುಪಮಾಳಿಗೆ ಪೂರ್ಣ ಅಂಕಗಳನ್ನು ಕೊಡಲಾಗುವುದಿಲ್ಲ. ಈ ತೀರ್ಮಾನದಲ್ಲಿ ವಧೂವರರಿಬ್ಬರ ಜವಾಬ್ದಾರಿಯೂ ಸೇರಿದೆ. ಅದರಿಂದ ಇಬ್ಬರಿಗೂ ೫೦-೫೦ ಅಂಕಗಳು ಸೇರತಕ್ಕದ್ದು. ನಿರಂಜನರಂತಹ ಸದ್ಗುಣಿ ಸಿಕ್ಕಿದ್ದು ಅದೃಷ್ಟವೂ ಹೌದು, ಹಿರಿಯರ ಆಶೀರ್ವಾದವೂ ಹೌದು. ಇವರಿಬ್ಬರ ಕೌಟುಂಬಿಕ ಜೀವನ ಒಬ್ಬರಿಗಾಗಿಯೇ ಇನ್ನೊಬ್ಬರನ್ನು

ಸೃಷ್ಟಿಸಿದಂತಿದೆ. ತೇಜಸ್ವಿನಿ ಮತ್ತು ಸೀಮಂತಿನಿ ಇವರ ಇಬ್ಬರು ಮಕ್ಕಳು. ಇವರು ತಂದೆತಾಯಿಯವರನ್ನು ಸಾಹಿತ್ಯಪ್ರಪಂಚದಲ್ಲಿ ಮೀರಿಸುವುದರಲ್ಲಿ ಸಂಶಯವಿಲ್ಲ. ತೇಜಸ್ವಿನಿ ಈಗಾಗಲೇ ಇಂಗ್ಲೀಷ್ ಸಾಹಿತ್ಯದಲ್ಲಿ ಅಮೆರಿಕಾದ ಒಂದು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾಳೆ. ಸೀಮಂತಿನಿಯೂ ಅದೇ ಹಾದಿಯಲ್ಲಿ ಮುಂದುವರಿಯುತ್ತ ಇದ್ದಾಳೆ.

ಅನುಪಮಾ ಮದುವೆಯಾದ ಮೇಲೆ ಹುಟ್ಟಿದ ಮನೆಯಿಂದ, ಒಡಹುಟ್ಟಿದವರಿಂದ ಕೆಲವು ಕಾಲ ದೂರವಾದಳು. ಆಕೆಗೆ ತನ್ನ ಮಿತ್ರರೇ ಬಂಧುಬಳಗದವರಾದರು.

ಸಮಾಜವನ್ನೇ ಹೀಗೆ ಎದುರುಹಾಕಿಕೊಂಡು ದಿಟ್ಟತನದಿಂದ ತನ್ನ ತೀರ್ಮಾನದಂತೆ ನಡೆಯುವ ಶಕ್ತಿ ಎಲ್ಲಿಂದ ಬಂತು? ಅವರ ತಂದೆ ಕೊಟ್ಟ ಅವಕಾಶ ಒಂದಾದರೆ ಇವರ ತಾತಂದಿರ ಪ್ರಭಾವವೂ ಇದರಲ್ಲಿ ಸೇರಿದೆ. ತಾತನ ಹೆಸರು ರಾಮಣ್ಣ. ಹಳ್ಳಿಯ ಸ್ಕೂಲ್ ಮಾಸ್ತರು. ಹಿಡಿದ ಕೆಲಸವನ್ನು ಬಿಡುವವರಲ್ಲ. ಅವರು ಬೆಳಗಿನ ಜಾವ ಪ್ರತಿದಿನ ಎದ್ದು ಊರಿನ ಕಂದಕದಲ್ಲಿ ಬಿಟ್ಟಿರುವ ತುಂಬೆ ಹೂವುಗಳನ್ನು ಒಂದು ದೊಡ್ಡ ಬುಟ್ಟಿ ತುಂಬುವಷ್ಟು, ರಾಮನಾಮವನ್ನು ಜಪಿಸುತ್ತಾ ಬಿಡಿಸಿ, ಅವರ ಅಣ್ಣನವರ ದೇವರ ಪೂಜೆಗೆ ತರುತ್ತಿದ್ದರು. ಮಳೆ ಸುರಿಯುತ್ತಿದ್ದರೂ ಈ ಕೆಲಸವನ್ನು ಎಂದಿಗೂ ಬಿಡುತ್ತಿರಲಿಲ್ಲ. ತುಂಬೆ ಹೂವು ಬಿಡಿಸುವುದು ಸುಲಭವಲ್ಲ. ಅದಕ್ಕೆ ಏಕಾಗ್ರತೆ ಬೇಕು. ಸಂಯಮ ಬೇಕು. ಶಾಂತಿ ಬೇಕು. ಗುರಿಮುಟ್ಟುವ ದೃಢ ನಿರ್ಧಾರವೂ ಬೇಕು. ಈ ಗುಣಗಳನ್ನು ಅನುಪಮಾಳಲ್ಲಿ ಕಾಣುತ್ತೇವೆ.

ಅನುಪಮಾಳಿಗೆ ಕಷ್ಟಗಳನ್ನು ಎದುರಿಸುವ ಧೈರ್ಯ ಅಸಾಧಾರಣ. ಅವಳ ತಂದೆಯವರಿಗೆ ಪಿಂಚಿಣಿಯಾದ ೧-೨ ವರ್ಷಗಳಲ್ಲಿ ಅನ್ನನಾಳದ ಕ್ಯಾನ್ಸರ್ ಆಗಿತ್ತು. X-Ray ಪರೀಕ್ಷೆ ಮಾಡಿದ ದಿನ ನಾನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೆ. ಆಗತಾನೇ ನನ್ನ ಕೈಸೇರಿದ X-Ray Photo ನಾನು ನೋಡುತ್ತಿರುವಾಗ ಅನುಪಮಾ ನನ್ನ ರೂಮಿಗೆ ಬಂದಳು. ''ಬಹಳ ಮುಂದುವರಿದ ಅನ್ನನಾಳದ ಕ್ಯಾನ್ಸರ್ ಆಗಿದೆ ಅಣ್ಣಯ್ಯನಿಗೆ" ಅಂತ ದುಃಖದಿಂದ ಹೇಳಿದೆ. ಅದರೆ ಅವಳ ಪ್ರತಿಕ್ರಿಯೆಯನ್ನು ಕೇಳಿ ನಾನು ದಂಗುಬಡಿದಂತವನಾದೆ! ''ಹಾಗಾದರೆ ಇದ್ದಷ್ಟು ದಿನ ಗಟ್ಟಿ" ಅಂತ ಹೇಳಿ ಅಲ್ಲಿಂದ ಹೊರಟುಬಿಟ್ಟಳು! ಇದನ್ನು ಏನೆಂದು ಹೇಳಬೇಕೋ ಇಂದಿಗೂ ತಿಳಿಯದು. ಇಂತಹ ನಿರ್ಲಿಪ್ತತೆ ಸನ್ಯಾಸಿಗಳಿಗೂ ಮೀರಿದ್ದು. ಅನೇಕ ವರ್ಷಾನಂತರ ನಿರಂಜನ ಅವರಿಗೆ ಪಾರ್ಶ್ವವಾಯು ಬಡಿದಾಗಲೂ ಅದೇ ಸ್ಥೈರ್ಯ ತೋರಿಸಿದಳು. ತನಗೇ ಕ್ಯಾನ್ಸರ್ ಬಂದಾಗಲೂ ಆ ಮಾರಿಯೊಡನೆ ಹೋರಾಡಿ ದೂರದಲ್ಲಿಟ್ಟಿದ್ದಾಳೆ. ಇತ್ತೀಚಿನ ಅವಳ ಲೇಖನ ಒಂದರಲ್ಲಿ ಡಾ|| ಡಿ.ವಿ.ಜಿ.ಯವರ

'ಮಂಕುತಿಮ್ಮನ ಕಗ್ಗ'ದ ಕೆಲವು ಸಾಲುಗಳನ್ನು ತಾನು ಅನುಸರಿಸುತ್ತಿದ್ದೇನೆಂದು ಉಲ್ಲೇಖಿಸಿದ್ದಾಳೆ. ಅದರ ಧಾಟಿ ಹೀಗಿದೆ : " ಕಲ್ಲಾಗು ಕಷ್ಟಗಳ ಮಳೆಯು ವಿಧಿ ಸುರಿಸೆ...." ಈ ನಿರ್ಲಿಪ್ತತೆ ಅಸಾಮಾನ್ಯ. ನಿರಂಜನ ಅವರಲ್ಲಿಯೂ ಇದನ್ನು ನಾನು ಕಂಡಿಲ್ಲ. ಎಷ್ಟೋ ಸಲ ಅವರು ಸಾರ್ವಜನಿಕ ಸಭೆಗಳಲ್ಲಿ ಕಣ್ಣೀರನ್ನು ತಡೆಯಲಾರದೇ ಹೋದದ್ದನ್ನು ಕಂಡಿದ್ದೇನೆ. ಅಷ್ಟು ಮೃದು ಸ್ವಭಾವ.

ಅನುಪಮಾಳ ಬರವಣಿಗೆಗಳ ಬಗ್ಗೆ ಬರೆಯುವ ಯೋಗ್ಯತೆ ನನಗಿಲ್ಲ. ಕಥೆ-ಕಾದಂಬರಿಗಳಿಗೂ ನನಗೂ ಬಹಳ ದೂರ. ವೈದ್ಯಕೀಯ ವಿಷಯಗಳಲ್ಲಿ ಬರೆದಿರುವ ಪುಸ್ತಕಗಳು ಜನಸಾಮಾನ್ಯರಿಗೆ ತಿಳಿಯುವಂತೆ ಬರೆದಿದ್ದಾಳೆ. ಉಪಯುಕ್ತವಾಗಿಯೂ ಇವೆ. ಅನುಪಮಾ ಬರೆದಿರುವ ಕಾದಂಬರಿಗಳನ್ನು ಆಗಿಂದಾಗ್ಗೆ ಪ್ರೀತಿಪೂರ್ವಕವಾಗಿ ನನಗೆ ತಂದುಕೊಡುತ್ತಿದ್ದಳು. ಅವುಗಳೆಲ್ಲವನ್ನೂ ಓದಿದ್ದೇನೆ. ಇವುಗಳನ್ನು ವಿಮರ್ಶೆ ಮಾಡಲಾರೆ. ಸಾಮಾನ್ಯ ಓದುಗನ ಅನಿಸಿಕೆ ಹೇಳಬಲ್ಲೆ. ಇವಳ ಯಾವ ಕಾದಂಬರಿಯೇ ಆಗಲಿ ಕೈಗೆತ್ತಿಕೊಂಡರೆ ಪೂರೈಸುವ ತನಕ ಕೆಳಗಿಡಲಾಗದು. ಕಥಾಸರಣಿ ಅಷ್ಟರ ಮಟ್ಟಿಗೆ ಓದುಗನನ್ನು ಕಟ್ಟುಹಾಕಿರುತ್ತದೆ. ಸಾಮಾನ್ಯ ಜನಜೀವನದ ಕಥೆಗಳಲ್ಲಿ ದುಃಖಮಯವಾದ ಸಂದರ್ಭಗಳು ಬಹಳ ನೈಜವಾಗಿದ್ದು ಕಣ್ಣೀರು ಸುರಿಸುವ ಜಾಯಮಾನವಿರುವವರು ಯಥೇಚ್ಛವಾಗಿ ಕಣ್ಣೀರು ಸುರಿಸುವಂತಿವೆ. ಇದು ಅವಳ ಕಾದಂಬರಿಗಳಲ್ಲಿ ಕಂಡ ಎರಡನೇ ಗುಣ. ತಾವು ಕಣ್ಣೀರು ಸುರಿಸಬೇಕಾದ ಕಾಲದಲ್ಲಿ ಅದನ್ನು ಅದುಮಿ ತಡೆದಿಟ್ಟು ತನ್ನ ಓದುಗರ ಕಣ್ಣೀರ ಕಟ್ಟೆಯನ್ನು ಒಡೆದು ಧಾರಾಕಾರವಾಗಿ ಕಣ್ಣೀರ ಹೊಳೆಯನ್ನು ಹರಿಸುವುದು ಒಂದು ಪವಾಡವೇ. ವೈಯಕ್ತಿಕವಾಗಿ ಹೇಳಬೇಕೆಂದರೆ ಅನುಪಮಾಳ ಕಾದಂಬರಿಗಳನ್ನು ಓದಿದಾಗ ಸುರಿಸಿರುವ ನನ್ನ ಕಣ್ಣೀರನ್ನೆಲ್ಲಾ ಕೂಡಿಟ್ಟಿದ್ದರೆ ೨-೩ ಲೋಟ ತುಂಬಿರುತ್ತಿತ್ತು! ಇದರಲ್ಲಿ ಉತ್ಪ್ರೇಕ್ಷೆ ಇಲ್ಲ.

ಕೆಸರಿನಲ್ಲಿ ಹುಟ್ಟಿದ ಕಮಲದಂತೆ - ಯಾವ ಹೆಸರಿನಲ್ಲಿ ಕರೆದರೂ ಗುಲಾಬಿ ತನ್ನ ನಿಜ ಸೌರಭವ ಚೆಲ್ಲುವಂತೆ - ನನ್ನ ಅಣ್ಣನ ಮಗಳಾಗಿ ಹುಟ್ಟಿ ಈ ಶತಮಾನದ ಒಬ್ಬ ಮಾದರಿ ಹೆಣ್ಣಾಗಿ, ತಾನು ಹಿಡಿದ ಎಲ್ಲಾ ಕ್ಷೇತ್ರಗಳಲ್ಲಿಯೂ ಅನುಪಮಾ ತನ್ನ ಪ್ರಭಾವ ಬೀರಿದ್ದಾಳೆ. ಆಗೊಮ್ಮೆ ಈಗೊಮ್ಮೆ ಇಂತಹವರು ಹತ್ತಾರು ಲಕ್ಷ ಮಹಿಳೆಯರಲ್ಲಿ ಒಬ್ಬರಾಗಿ ಕಾಣಿಸಿಕೊಳ್ಳುತ್ತಾರೆ. ಲಕ್ಷಾಂತರ ಹೆಣ್ಣುಮಕ್ಕಳಿಗೆ ಮಾರ್ಗದರ್ಶಕರಾಗುತ್ತಾರೆ. ಎಲ್ಲರ ವ್ಯಕ್ತಿತ್ವದಲ್ಲಿಯೂ ಅಲ್ಲೊಂದು ಇಲ್ಲೊಂದು ಕೊಂಕು ಇದ್ದೇ ಇರುತ್ತದೆ. ಯಾವ ವ್ಯಕ್ತಿಯೂ ಸದ್ಗುಣಗಳ ಮುದ್ದೆಯಲ್ಲ.

ಅನುಪಮಾ ತನ್ನ ಜೀವನದಲ್ಲಿ ಅನೇಕ ಗುರಿಗಳನ್ನು ಸಾಧಿಸಿದ್ದಾಳೆ. "ಅನುಪಮಾ" ಕಾವ್ಯನಾಮವಾಗಿ ಹೊತ್ತು, ರೂಢನಾಮವಾಗಿ ಮಾಡಿಕೊಂಡು ಕೊನೆಗೆ ಅನ್ವರ್ಥನಾಮವಾಗಿ ಸಾಧಿಸಿದ್ದಾಳೆ. ಇಂತಹ ಮಗಳನ್ನು ಪಡೆದ ನನ್ನ ಅಣ್ಣ ಅದೃಷ್ಟಶಾಲಿಯಲ್ಲವೇ?

---

* ಡಾ॥ ಡಿ. ಎಸ್. ಪುಟ್ಟಣ್ಣ- ಮೈಸೂರು ಸರ್ಕಾರದ ವೈದ್ಯಕೀಯ ಇಲಾಖೆಯ ಹಿರಿಯ ಅಧಿಕಾರಿಯಾಗಿದ್ದರು. ಮದ್ರಾಸ್ ಮೆಡಿಕಲ್ ಕಾಲೇಜಿನ ಒಬ್ಬ ಆಂಗ್ಲ ಪ್ರಾಧ್ಯಾಪಕನ ಮೇಲೆ ಪಣತೊಟ್ಟು FRCS (Edinburgh) ಪದವಿ ಪಡೆದವರು.

** ಕ್ರಮವಾಗಿ :

1. ರಾಜಸೇವಾಸಕ್ತ ಡಿ. ಸಿ. ಸುಬ್ಬರಾಯಪ್ಪ - ಮೈಸೂರು ಸರ್ಕಾರದ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸೇವೆ.

2. ದೊಡ್ಡ ಸುಬ್ಬರಾಯಪ್ಪ - ನಿಸ್ವಾರ್ಥಿ - ಸ್ಕೂಲ್ ಮಾಸ್ತರ - ದೊಡ್ಡಬಳ್ಳಾಪುರದ ಅವಿಭಕ್ತ ಕುಟುಂಬದ ಹೊಣೆ ಹೊತ್ತವರು.

3. ರಾಮಣ್ಣ - ಶಿಸ್ತುಗಾರ - ಸ್ಕೂಲ್ ಮಾಸ್ತರ - ದೊಡ್ಡಬಳ್ಳಾಪುರ.

4. ಲೋಕಸೇವಾನಿರತ ಡಿ. ಕೊಂಗಾಡಿಯಪ್ಪ - ಖಾಲಿ ಜೋಬಿನ ಸ್ಕೂಲ್ ಮಾಸ್ತರ - ಆದರೂ ಅವರ ಊರಿನ ಬೇಡಿಕೆಗಳನ್ನು ತುಂಬಿದವರು.

ಅಪರೂಪದ ಜೋಡಿ

- ಸುಭದ್ರಾ ಸದಾಶಿವಯ್ಯ

ನನಗೆ ಮದುವೆಯಾದಾಗ ಅನುಪಮಾ ಇನ್ನೂ ೫ ವರ್ಷದ ಹುಡುಗಿ. ಅವಳ ತಂದೆ ನನ್ನ ಯಜಮಾನರ ಅಣ್ಣಂದಿರು. ಅವರಿಬ್ಬರೂ ಸರ್ಕಾರಿ ಹುದ್ದೆಗಳಲ್ಲಿದ್ದುದರಿಂದ ಬೇರೆ ಬೇರೆ ಊರುಗಳಲ್ಲಿ ಇರಬೇಕಾಗಿತ್ತು. ಅನುಪಮಾ ಡಾಕ್ಟರಾಗಬೇಕೆಂಬುದು ಅವಳ ತಂದೆಯವರ ಇಚ್ಛೆ. ಜೊತೆಗೆ ಅವಳು ಮೊದಲಿನಿಂದಲೂ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಿದ್ದಳು. ಆದ್ದರಿಂದ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶ ಸುಲಭವಾಗಿ ದೊರಕಿತು. ಆಗ ಮೈಸೂರು ಪ್ರಾಂತ್ಯಕ್ಕೆಲ್ಲಾ ಇದ್ದುದು ಒಂದೇ ಒಂದು ಕಾಲೇಜು. ಅದೂ ಮೈಸೂರಿನಲ್ಲಿಯೇ. ಅವಳ ತಂದೆ ಎರಡು ವರ್ಷಗಳ ನಂತರ ಮೈಸೂರಿಗೆ ವರ್ಗವಾಗಿ ಬಂದರು. ಅನುಪಮಾಳ ವೈದ್ಯಕೀಯ ವ್ಯಾಸಂಗ ಮುಗಿಯುವ ಹೊತ್ತಿಗೆ ನಿರಂಜನರೊಂದಿಗೆ ವಿವಾಹವಾಯಿತು. ಆ ವೇಳೆಯಲ್ಲಿ ನಾವು ಇಂಡಿಯಾ ಸರ್ಕಾರದ ಪರವಾಗಿ ಜಪಾನಿಗೆ ಹೋಗಿ ೩ ವರ್ಷ ಇದ್ದೆವು. ಆಗ ನನ್ನ ತಂದೆಯವರಿಂದ ಈ ವಿವಾಹದ ವಿಷಯ ಪತ್ರಮುಖೇನ ತಿಳಿಯಿತು. ಇದು ಅಂತರ್‌ಜಾತೀಯ ವಿವಾಹವಾದ್ದರಿಂದ ನಮ್ಮ ಸಮೀಪದ ಬಂಧುಗಳೆಲ್ಲಾ ಅಸಮಾಧಾನದಿಂದಿದ್ದರು. ಅನುಪಮಾ ಮೊದಲಿನಿಂದಲೂ ಧೈರ್ಯಸ್ಥೆ. ಅವಳು ಇವರನ್ನು ಎದುರಿಸಬಲ್ಲಳು ಎಂಬ ವಿಶ್ವಾಸ ನನಗಿತ್ತು. ನಮ್ಮಿಬ್ಬರ ಹೃತ್ಪೂರ್ವಕ ಆಶೀರ್ವಾದಗಳನ್ನು ಬರೆದು ತಿಳಿಸಿದ್ದೆ. ಎರಡು ವರ್ಷಗಳ ನಂತರ ನಾವು ಸ್ವದೇಶಕ್ಕೆ ಹಿಂತಿರುಗಿದಾಗ ಅನುಪಮಾ - ನಿರಂಜನರು ಧಾರವಾಡದಲ್ಲಿ ನೆಲಸಿರುವುದಾಗಿ ತಿಳಿಯಿತು.

೧೯೬೧ರಲ್ಲಿ ಅವರು ಬೆಂಗಳೂರಿಗೆ ಬಂದು ಜಯನಗರದಲ್ಲಿ ಕ್ಲಿನಿಕ್ ಪ್ರಾರಂಭಮಾಡಿದರು. ಆಗಲೇ ನಮಗೆ ನಿರಂಜನರ ಪರಿಚಯವಾದದ್ದು. ಅವರನ್ನು ನೋಡಿದ ಮೊದಲನೆ ದಿನವೇ ನನಗೆ ಅವರ ಪ್ರತಿಭೆಯ ಅರಿವಾಯಿತು. ಅವಳು ಸುಖವಾಗಿ ಇರಬಲ್ಲಳು ಎಂದುಕೊಂಡೆವು. ನಾವು ಜಯನಗರದಲ್ಲಿ ಅವರ ನೂತನ ಮನೆಗೆ ಮೊದಲನೇ ಸಲ ಹೋದಾಗ ನಮಗೆ ಬಹಳ ಆಶ್ಚರ್ಯ ಕಾದಿತ್ತು. ಆ ಮನೆ ನಮ್ಮ ಎಲ್ಲರ ಮನೆಗಳಂತೆ ಇರಬಹುದು ಎಂದು ನಾನು ಊಹಿಸಿದ್ದೆ. ಒಳಗೆ ಹೋದ ನಂತರ ಮುಂದಿನ ರೂಮಿನಲ್ಲಿ ನಾನು ಮತ್ತು ನನ್ನ ಯಜಮಾನರು ಕೂತೆವು. ಎದುರು ಪೂರ್ಣ ಗಾಜು ಇರುವ ಕಿಟಿಕಿ. ಜೊತೆಗೆ ಹಸಿರು ಹುಲ್ಲಿನ ತೋಟ. ಪಕ್ಕ ಮತ್ತು ಹಿಂದಿನ ಗೋಡೆಗಳೆಲ್ಲಾ ಪೂರ್ತಿ ಪುಸ್ತಕಗಳಿಂದ ತುಂಬಿದ್ದವು. ದಂಪತಿಗಳಿಬ್ಬರಿಗೂ ಬೇರೆ ಬೇರೆ ಕೋಣೆ - ಮೇಜು - ಕುರ್ಚಿ ಇತ್ಯಾದಿ. ಜೊತೆಗೆ ಇಲ್ಲಿಯೂ ಪುಸ್ತಕಗಳು.

ಯಾವಾಗಲೂ ನಾನು ನನ್ನ ಯಜಮಾನರ ಜೊತೆಯಲ್ಲಿ ಅವರ ಮನೆಗೆ ಹೋಗುತ್ತಿದ್ದೆ. ನಾವು ಹೋದ ಸ್ವಲ್ಪಹೊತ್ತಿನ ನಂತರ ನಿರಂಜನರೂ ಬಂದು ನಮ್ಮ ಜೊತೆ ಸೇರುತ್ತಿದ್ದರು.

ಅನುಪಮಾ ಮದುವೆಯ ಮೊದಲೂ ಕಥೆಗಳನ್ನು ಬರೆಯುತ್ತಿದ್ದಳು. ನಿರಂಜನರ ಪ್ರೋತ್ಸಾಹದಿಂದ ಅವಳು ಉತ್ತಮ ಸಾಹಿತಿಯಾದಳೆಂದರೆ ಅತಿಶಯೋಕ್ತಿಯಾಗಲಾರದು. ವೈದ್ಯಕೀಯ ವೃತ್ತಿಯಲ್ಲಿ ಒಳ್ಳೆಯ ಹೆಸರು ಪಡೆದು ತನ್ನ ಅನಾರೋಗ್ಯದ ನಿಮಿತ್ತ ಅದಕ್ಕೆ ಸಂಪೂರ್ಣ ತಿಲಾಂಜಲಿಯನ್ನಿತ್ತು ಸಾಹಿತ್ಯದಲ್ಲಿ ಪರಿಣತಿಯನ್ನು ಪಡೆದು, ಅನೇಕ ಪ್ರಶಸ್ತಿಗಳನ್ನೂ ಪಡೆದಿರುವುದು ನನಗೆ ಬಹಳ ಹೆಮ್ಮೆಯ ವಿಷಯ. ಇವರಿಬ್ಬರದು ಬಹು ಅಪರೂಪದ ಜೋಡಿ ಎನ್ನಬಹುದು (Made for each other). ಸಾಕಷ್ಟು ಕಷ್ಟಗಳು ಬಂದರೂ ಅವುಗಳನ್ನು ಧೈರ್ಯದಿಂದ ಎದುರಿಸಿ ಸಂತೋಷದಿಂದ ತಮ್ಮ ತಮ್ಮ ಸ್ವಂತ ಬರವಣಿಗೆಯನ್ನು ಅವರು ಮುಂದುವರಿಸುತ್ತಿರುವುದನ್ನು ನೋಡಿದಾಗ ನಾನು ಅಭಿಮಾನಪಡುತ್ತೇನೆ. ಈ ದಂಪತಿಗಳ ಆದರ್ಶ ಬದುಕನ್ನು ಅಭಿನಂದಿಸುತ್ತೇನೆ.

ಸಾರ್ಥಕ ಬದುಕು ೩

- ಟಿ. ಎಸ್. ಅನ್ನಪೂರ್ಣ

ನಾನು ಮತ್ತು ವೆಂಕಟಲಕ್ಷ್ಮಿ (ಮೊದಲ ಹೆಸರು) ೧೯೪೫–'೪೭ರ ಅವಧಿಯಲ್ಲಿ ಸಹಪಾಠಿಗಳು. ತುಮಕೂರಿನ ಎಂಪ್ರೆಸ್ ಬಾಲಿಕಾ ಮಾಧ್ಯಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಲ್ಲಿ ಅಭ್ಯಾಸ ಮಾಡಿದೆವು. ಆಗಿನ ನೆನಪು ನನಗಿನ್ನೂ ಹಸಿರಾಗಿದೆ. ಅಂದಿನ ಮುಖ್ಯೋಪಾಧ್ಯಾಯಿನಿಯರು ಮತ್ತು ಉಪಾಧ್ಯಾಯಿನಿಯರು ತುಂಬ ಆಸಕ್ತಿಯಿಂದ ಒಳ್ಳೆಯ ಶಿಕ್ಷಣ ಕೊಡುತ್ತಿದ್ದರು. ನಾವಿಬ್ಬರೂ ಮೊದಲನೆಯ ಬೆಂಚಿನಲ್ಲಿ ಕೂರುತ್ತಿದ್ದೆವು. ತಪ್ಪು ಮಾಡಿದರೆ ಏಟು ಬೀಳುತ್ತದೆಂಬ ಭಯಕ್ಕೆ ಮೊದಲನೆಯ ಬೆಂಚು ಅನೇಕರಿಗೆ ಇಷ್ಟವಾಗಿರಲಿಲ್ಲ. ಬುದ್ಧಿವಂತರ ಸಾಲಿಗೆ ಸೇರಿದ ವೆಂಕು ತುಂಬ ಸರಳ ಸಭ್ಯ ವಿದ್ಯಾರ್ಥಿನಿ. ಅಷ್ಟೇನೂ ಎತ್ತರವಲ್ಲ. ಸರಳ ಉಡುಗೆ, ನಗುಮುಖ, ಚಟುವಟಿಕೆಯ ವ್ಯಕ್ತಿತ್ವ. ಸ್ನೇಹಪರ ವ್ಯಕ್ತಿ. ಲೆಕ್ಕದಲ್ಲಿ ಮುಂದು. ಆದರೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಮುಂದೆ ಆಕೆ ಸಾಹಿತ್ಯಪ್ರಪಂಚದಲ್ಲಿ ಹೆಸರು ಮಾಡಿಯಾಳೆಂಬ ಕಲ್ಪನೆಯೂ ನನಗೆ ಆಗ ಇರಲಿಲ್ಲ. ಪ್ರೌಢಶಾಲೆಯಲ್ಲಿ ನಮ್ಮೊಂದಿಗೆ ಅವಳ ಮನೆಯ ಸಮೀಪ ಇದ್ದ ಜೂಡಾವತ್ನ ಸೇರಿದಳು. ಆಕೆ ಈಗ

ಭೌತಶಾಸ್ತ್ರ ಪ್ರೊಫೆಸರ್ ಆಗಿ ಧಾರವಾಡದಲ್ಲಿದ್ದಾಳೆ. ಇನ್ನೊಬ್ಬ ಸಹಪಾಠಿ ಕನಕ ಈಗ ಅಶ್ವಿನಿ ಎಂಬ ಹೆಸರಿನಲ್ಲಿ ಕಾದಂಬರಿಗಳನ್ನು ಬರೆದು ಪ್ರಸಿದ್ಧಳಾಗಿದ್ದಾಳೆ. ಇವರೆಲ್ಲ ಲೆಕ್ಕದಲ್ಲಿ ಮತ್ತು ಇತರ ಪಾಠಗಳಲ್ಲಿ ಮುಂದಿದ್ದರೂ ಸಾಹಿತ್ಯದಲ್ಲಿ ಅಂತಹದೇನೂ ಸಾಧಿಸಿರಲಿಲ್ಲ. ಈ ಮಾತು ಏತಕ್ಕೆಂದರೆ ಬಾಲ್ಯದಲ್ಲಿಲ್ಲದ ವಿಶೇಷ ಆಸಕ್ತಿ ಸಾಧನೆಯಿಂದ ಮುಂದೆ ಬೆಳೆಯಲು ಸಾಧ್ಯ ಎಂಬುದನ್ನು ಅನುಪಮಾ ಸಾಧಿಸಿದ್ದಾರೆ ಎನ್ನುವುದಕ್ಕಾಗಿ. ವೆಂಕು ಮಾತಿನಲ್ಲಿ ಚುರುಕಿದ್ದ ಪ್ರತಿಭಾವಂತ ವಿದ್ಯಾರ್ಥಿನಿ. ಈ ವೇಳೆಗೆ ವೆಂಕುವಿನ ತಂದೆಗೆ ವರ್ಗವಾದ ಪ್ರಯುಕ್ತ ನಾವಿಬ್ಬರೂ ದೂರವಾದೆವು. ಮಧ್ಯೆ ಮಧ್ಯೆ ಪತ್ರ ವ್ಯವಹಾರವಿದ್ದುದರಿಂದ ಒಬ್ಬರನ್ನೊಬ್ಬರು ಮರೆಯಲಿಲ್ಲ.

ಎಸ್.ಎಸ್.ಎಲ್.ಸಿ. ಮುಗಿಸಿ ನಾನು ತುಮಕೂರು ಸರ್ಕಾರಿ ಕಾಲೇಜಿನ ಇಂಟರ್‌ಮೀಡಿಯೇಟ್ ಸೇರಿದೆ. ವೆಂಕು ಬೆಂಗಳೂರು ಮಹಾರಾಣಿ ಕಾಲೇಜು ಸೇರಿದೆನೆಂದೂ ಮಾರ್ಕ್ ವಿವರ ಕೊಟ್ಟು ನನ್ನನ್ನೂ ವಿಚಾರಿಸಿ ತಪ್ಪದೆ ಪತ್ರ ಬರೆಯುತ್ತಿದ್ದಳು. ಅಲ್ಲದೆ ಹೊಸದಾಗಿ ಓದಿದ ಪುಸ್ತಕಗಳು. ಅವರ ಅಧ್ಯಾಪಕಿ ಶ್ರೀಮತಿ ಚಂಪಾಬಾಯಿಯವರ ಬಗ್ಗೆ. ಅವರ ಗೆಳತಿ ಸ್ವರ್ಣ ಮೊದಲಾದವರೊಡನೆ ಸಾಹಿತ್ಯದ ಬಗೆಗಿನ ಚರ್ಚೆಯ ಕುರಿತು ಆಗೊಮ್ಮೆ ಈಗೊಮ್ಮೆ ಪತ್ರ ಬರೆಯುತ್ತಿದ್ದಳು. ಆ ವೇಳೆಗೆ ಸಾಹಿತ್ಯದಲ್ಲಿ ನನಗೆ ಆಸಕ್ತಿ. ಅಭಿರುಚಿ ಮೂಡಿತ್ತು.

ಮುಂದೆ ಇಂಟರ್ ಮುಗಿಸಿ ಆಕೆ ಮೈಸೂರು ಮೆಡಿಕಲ್ ಕಾಲೇಜು ಸೇರಿದ್ದು ನನ್ನ ಪರಿಚಯದ ಗೆಳತಿಯರಿಂದ ತಿಳಿಯಿತು. ನಾನೂ ಸಸ್ಯಶಾಸ್ತ್ರದ ಆನರ್ಸ್ ಮಾಡಲು ಸೆಂಟ್ರಲ್ ಕಾಲೇಜ್ ಸೇರಿ ಬೆಂಗಳೂರಿನಲ್ಲುಳಿದೆ. ಅಲ್ಲಿಗೆ ನಮ್ಮ ಪತ್ರ ವ್ಯವಹಾರ ನಿಂತಿತ್ತು. ಆದರೆ ನನ್ನ ಗೆಳತಿಯರಿಂದ ವೆಂಕು ಬಗ್ಗೆ ಪ್ರಶಂಸೆ ಕೇಳುತ್ತಿದ್ದ. ಆಕೆಯ ವಿದ್ಯಾಭ್ಯಾಸದ ಪ್ರಗತಿಯ ಬಗ್ಗೆ ತಿಳಿಯುತ್ತಿದ್ದೆ.

ನಾನು ಒಮ್ಮೆ ಅಕ್ಕನ ಮನೆಗೆ ಹೋದಾಗ ವೆಂಕುವನ್ನು ಸಂಧಿಸಿದೆ. ನಮ್ಮ ಮನೆಯ ಸಮೀಪವೇ ಇತ್ತು ಅವರ ಮನೆ. ತಂದೆಗೆ ಮೈಸೂರಿಗೆ ವರ್ಗವಾದ ವಿಷಯ ತಿಳಿಸಿದಳು. ಆಗ ಆಕೆ ತನ್ನ ತಮ್ಮ ತಂಗಿಯರ ಬಗ್ಗೆ ತಿಳಿಸಿದಳು. ತುಂಬ ಆತ್ಮೀಯತೆಯಿಂದ ಅವರ ಮನೆಗೆ ಕರೆದೊಯ್ದಳು. 'ಮೆಡಿಕೋ' ಎಂಬ ಹಮ್ಮು ಬೆಳೆಸಿಕೊಳ್ಳದೆ ಹಿಂದಿನ ವ್ಯಕ್ತಿತ್ವ ಉಳಿಸಿಕೊಂಡಿದ್ದಳು. ಆಕೆಯಲ್ಲಿ ಸಾಹಿತ್ಯದ ಹುಚ್ಚು ಹೆಚ್ಚಿದ್ದು ವಿಶೇಷವೆನಿಸಿತು. ಆಗಾಗ್ಗೆ ಅವಳ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ ಎಂಬುದು ಸುದ್ದಿಯಾಗಿತ್ತು. ತುಂಬ ಖುಷಿಯಾಯ್ತು. ನನಗೆ ಮುಂಚಿನಿಂದಲೂ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಆದರೆ ಬರೆದರೂ ಪ್ರಕಟಿಸುವುದರಲ್ಲಿ ಹಿಂಜರಿಕೆ. ವೆಂಕು ನನ್ನನ್ನು ಬರೆಯಲು ಪ್ರೋತ್ಸಾಹಿಸಿ, ನನಗೆ ' ನೀ ಬರೆದು ಕೊಡು. ನನ್ನ ಸಾಹಿತಿ ಮಿತ್ರರಿಗೆ ತಿಳಿಸುವೆ - ಪ್ರಕಟಿಸುವೆ' ಎಂದಾಗ ಸಾಹಿತ್ಯ ನಿರ್ಮಾಣ

ಕಾರ್ಯದಲ್ಲಿ ಸ್ನೇಹಿತರೂ ಪಾಲ್ಗೊಳ್ಳಬೇಕೆಂಬ ಅವಳ ಉತ್ಸಾಹ, ಸೌಜನ್ಯ ನನ್ನನ್ನು ಬೆರಗುಗೊಳಿಸಿತು. ಆಗ ನಿರಂಜನರ 'ಸಾಧನ ಸಂಚಯ ಪ್ರಕಟವಾಗುತ್ತಿತ್ತು. ನಾನು ತಪ್ಪದೆ ಓದುತ್ತಿದ್ದೆ.

ನಮ್ಮ ಭಾವನವರು ಗಾನವಿಶಾರದ ಡಾ. ಬಿ. ದೇವೇಂದ್ರಪ್ಪನವರನ್ನು ಶಾಂತಿಸಮಿತಿಯವರು ೧೯೫೪ರಲ್ಲಿ ಚೀನಾಕ್ಕೆ ಕಳುಹಿಸಿದರು. ಆ ಸಂದರ್ಭದಲ್ಲಿ ಅವರು ವಾಪಾಸಾದಾಗ, ಬೆಂಗಳೂರಿನಲ್ಲಿ ಶಾಂತಿಸಮಿತಿಯವರು ಏರ್ಪಡಿಸಿದ್ದ ಸಮಾರಂಭದಲ್ಲಿ ನನಗೆ ನಿರಂಜನರ ಪರಿಚಯವಾಯಿತು. ಮುಂದೆ ಅನುಪಮಾಳೊಂದಿಗೆ ಅವರ ವಿವಾಹವಾದದ್ದು ತಿಳಿಯಿತು. ಅಷ್ಟರಲ್ಲೇ, ವೆಂಕುವಿನ ಸಾಹಿತ್ಯ ಪ್ರೇಮ ಸಾಹಿತಿ ಪತಿಯ ಆಯ್ಕೆ ಮಾಡಿಕೊಳ್ಳುವಷ್ಟು ಬೆಳೆದಿತ್ತು. ಅಂತರ್‌ಜಾತಿ ವಿವಾಹವಾದ್ದರಿಂದ ಅವರು ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾದರೂ, ದಿಟ್ಟತನದಿಂದ ವೈದ್ಯವೃತ್ತಿಯನ್ನೂ ಬಿಡದೆ, ಸಾಹಿತಿ ಬಳಗವನ್ನೂ ಬಿಡದೆ ಬರವಣಿಗೆಯನ್ನು ಸಾಗಿಸಿಕೊಂಡು ಬಂದುದು ಆಕೆಯ ಸಾಹಸವೇ ಸರಿ. ಈ ಮಧ್ಯೆ ನನಗೆ ಅನುಪಮಾ ಸಂಪರ್ಕ ಹಲವು ವರ್ಷಗಳು ಇಲ್ಲ. ಪತ್ರವ್ಯವಹಾರವೂ ಮುಂದುವರೆಯಲಿಲ್ಲ ನಮ್ಮ ಸಂಸಾರ ತಾಪತ್ರಯಗಳಲ್ಲಿ. ಆದರೆ ತಪ್ಪದೆ ಆಕೆಯ ಪ್ರಕಟಣೆಗಳನ್ನೆಲ್ಲಾ ಓದುತ್ತಿದ್ದೆ. ಧಾರವಾಡದಲ್ಲಿದ್ದ ಜೂಡಾರತ್ನಳ ಮೂಲಕವೂ ವಿಚಾರಿಸುತ್ತಿದ್ದೆ. ೧೯೮೪ರಲ್ಲಿ ತುಮಕೂರಿನಲ್ಲಿ ನಡೆದ ಲೇಖಕಿಯರ ಸಮ್ಮೇಳನದಲ್ಲಿ ಮತ್ತೆ ವೆಂಕುವಿನೊಂದಿಗೆ ಹಲವು ವರ್ಷಗಳ ನಂತರ ನನ್ನ ಪುನರ್ಮಿಲನ. ಆಕೆಯ ಸನ್ಮಾನ ನನಗೆ ಸಂತಸಪಡುವ ಅವಕಾಶ ನೀಡಿತು. ಅವರ ಮನೆ 'ಕಥೆ'ಗೂ ಹೋಗಿ ಬಂದೆ.

ಅನುಪಮಾ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಸಾಧನೆ ಮಾಡಿ ಪುರಸ್ಕಾರ ಪ್ರಶಸ್ತಿಗಳನ್ನು ಪಡೆದದ್ದು ನಮಗೆಲ್ಲ ತುಂಬ ಸಂತಸ, ಸಂಭ್ರಮ. ಸಹಪಾಠಿ ಪುಟ್ಟ ವೆಂಕು ಎತ್ತರಕ್ಕೆ ಬೆಳೆದ ಬಗ್ಗೆ ತುಂಬ ತೃಪ್ತಿ ನಮ್ಮ ನಾರೀಲೋಕಕ್ಕೆ. ಈ ಸಾಧನೆಯಲ್ಲಿ ನಿರಂಜನರು ನೀಡಿದ ಉತ್ತೇಜನ ಉಪೇಕ್ಷಿಸುವಂತಹದ್ದಲ್ಲ. ಯಾವುದೇ ಶಕ್ತಿ, ಪ್ರಯತ್ನಕ್ಕೆ ಪೋಷಣೆ ಬೇಕೇ ಬೇಕು. ಅನುರೂಪ ದಾಂಪತ್ಯ - ಸುಸಂಸ್ಕೃತ ಮಕ್ಕಳು-ವೃತ್ತಿಯಲ್ಲಿ ತೃಪ್ತಿ, ಸಹೃದಯರ ಬಳಗ, ಸಾಹಿತಿಗಳ, ಸಾಹಿತ್ಯಪ್ರೇಮಿಗಳ ಅಭಿಮಾನ ಎಲ್ಲ ದೊರಕಿ ಅನುಪಮಾ ದಂಪತಿಗಳು ಬದುಕಿನ ಸಾರ್ಥಕತೆ ಕಂಡಿದ್ದಾರೆ. ಅವರ ಜೀವನ ಕಹಿಸಿಹಿಗಳ ಸಮ್ಮಿಲನ-ಅವರಿಬ್ಬರ ಅನಾರೋಗ್ಯ ದೊಡ್ಡ ಆಘಾತ. ಆದರೂ ಸಾಹಿತ್ಯಕೃಷಿ ಮುಂದುವರಿಸಿ ಮಹಿಳೆಯರಿಗೆ ಎಂಥ ಸಂಕೀರ್ಣ ಸಂದರ್ಭದಲ್ಲೂ ಬದುಕಿನಲ್ಲಿ ವಿಮುಖರಾಗದೆ ದಿಟ್ಟತನದಿಂದ ಗುರಿಮುಟ್ಟಿ ಯಶಸ್ವಿಯಾಗಬಹುದೆಂದು ಅನುಪಮಾ ತಮ್ಮ ಬದುಕಿನಿಂದ ತೋರಿಸಿದ್ದಾರೆ.

೪ ಬಾಲ್ಯದ ಗೆಳತಿ

- ಚೂಡಾರತ್ನ ತಿಗಡಿ

ಅನುಪಮಾ ಮತ್ತು ನಾನು ಚಿಕ್ಕಂದಿನ ಗೆಳತಿಯರು. ನಾವು ಹೈಸ್ಕೂಲು ಮೊದಲ ವರ್ಷ ಓದುತ್ತಿದ್ದಾಗ ನಮ್ಮ ಗೆಳೆತನ ಕೂಡಿ ಬಂತು. ಅನುಪಮಾಳ ತಂದೆ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಮನೆಯಲ್ಲಿ ಓದಿಗೆ ಉತ್ತೇಜಕ ವಾತಾವರಣವಿತ್ತು. ಅವರ ಮನೆಯ ತುಂಬಾ ಸಣ್ಣ ಮಕ್ಕಳಿದ್ದುದರಿಂದ ಆಕೆಗೆ ಒಂದಲ್ಲ ಒಂದು ಮಗುವಿನ ಹೊಣೆಗಾರಿಕೆ ಇರುತ್ತಿತ್ತು. ಇದರಿಂದಾಗಿ ಆಕೆಗೆ ಸಮಯವೇ ಸಿಗುತ್ತಿರಲಿಲ್ಲ-ಹೆಚ್ಚಿನ ವ್ಯಾಸಂಗಕ್ಕೆ. ವಾತ್ಸಲ್ಯಮಯಿಯಾದ ಅನುಪಮಾ ಚಿಕ್ಕ ಮಕ್ಕಳಿಗೆ. ತಾನೇ ಕತೆ ಕಟ್ಟಿ ಹೇಳಿ ಆನಂದಪಡಿಸುತ್ತಿದ್ದಳು. ಅನುಪಮಾಳ ವಿದ್ಯಾಶ್ರದ್ಧೆ ಮತ್ತು ಸಾಹಿತ್ಯಪ್ರೇಮ ಎಳೆತನದಲ್ಲಿ ಮೂಡಿಬಂದದ್ದು. ಅದನ್ನು ವೃದ್ಧಿಸಿ, ಚೊಕ್ಕಗೊಳಿಸಿದ ಹಿರಿಮೆ ನಿರಂಜನರದು.

ನಾವು ಕನ್ನಡ ಮೀಡಿಯಂ ಮುಗಿಸಿ ಇಂಗ್ಲೀಷ್ ಮೀಡಿಯಂ ಸೇರಿದ್ದೆವು. ನನಗೆ ಭಾಷೆಯ ತೊಡಕು-ಇದರಿಂದ ವಿಷಯಗಳು ಕಠಿಣವೆನಿಸುತ್ತಿದ್ದವು. ಆದರೆ ಅನುಪಮಾಗೆ ಭಾಷಾಪ್ರೌಢಿಮೆ ಇತ್ತು. ಸ್ನೇಹಪೂರ್ಣವಾಗಿ ಅನುಪಮಾ ನನಗೆ ಅಭ್ಯಾಸದಲ್ಲಿ ನೆರವಾದಳು. ಆ ಸಮಯದಲ್ಲೇ ಅನುಪಮಾಗೆ ಕತೆ ಬರೆಯುವ ಚಟವಿತ್ತು. 'ನಾವು ಕತೆ ಬರೆಯೋಣ' ಎಂದು ಆಕೆ ನನ್ನನ್ನು ಪ್ರೋತ್ಸಾಹಿಸಿದ್ದಳು. ಎಡವಿ-ತಡವಿ ಬರೆದ ನನ್ನ ಬರವಣಿಗೆಯನ್ನು ಓದಿ ಆನಂದಿಸುತ್ತಿದ್ದಳು. ಅನುಪಮಾ. ಸುತ್ತಮುತ್ತಲಿನವರ ನಡವಳಿಕೆಯನ್ನು ಮತ್ತು ಕೇಳಿದ ವಿಚಾರಗಳನ್ನು ಸುಲಭವಾಗಿ ಕತೆಗಳ ರೂಪದಲ್ಲಿ ಬರೆಯುತ್ತಿದ್ದಳು. ಬಹಳ ವರ್ಷಗಳ ಬಳಿಕ, ನನ್ನ ಅವಳ ಭೇಟಿ ಧಾರವಾಡದಲ್ಲಿ ಆಯಿತು. ಆ ವೇಳೆಗೆ ಅವಳು ಸಾಹಿತ್ಯ ರಚನೆಯಲ್ಲಿ ಬಹುದೂರ ನಡೆದಿದ್ದಳು. ಅವಳ ಸಾಹಿತ್ಯಪ್ರಗತಿಯಲ್ಲಿ ಆಕೆಯ ಪತಿಯ ನೆರವು ಮತ್ತು ಒತ್ತಾಸೆಗಳು ಇದ್ದವು. ಆದರೆ ಅನುಪಮಾ ಸ್ವತಃ ಬರಹಗಾರ್ತಿ ಎನ್ನುವುದು ಚಿಕ್ಕಂದಿನಲ್ಲೇ ನನಗೆ ತಿಳಿದ ವಿಷಯ.

ಚಿಕ್ಕವಳಿರುವಾಗಲೇ, ಯಾವ ಕಾರ್ಯವನ್ನಾಗಲಿ, ಪಟ್ಟುಹಿಡಿದು ಮಾಡಿ ಮುಗಿಸುವ ಮನೋದಾರ್ಢ್ಯ ಆಕೆಗಿತ್ತು. ಒಮ್ಮೆ ನಾನು-ಅನುಪಮಾ ಸೈಕಲ್‌ಸವಾರಿ ಕಲಿಯಬೇಕೆಂದು ಆಸೆಪಟ್ಟೆವು. ಮನೆಯಲ್ಲಿ ಅದು ಹೆಣ್ಣುಮಕ್ಕಳಿಗೆ ಶೋಭೆ ತರುವ ಕೆಲಸವಲ್ಲವೆಂದರು. ಅನುಪಮಾ ಇದಕ್ಕೆ ಕಿವಿಗೊಡದೆ, ತಂದೆಯ ಸೈಕಲ್ ತಂದಳು. ಒಬ್ಬರಿಗೊಬ್ಬರು ನೆರವಾಗಿ ಸವಾರಿಮಾಡಲು ಪ್ರಯತ್ನಿಸಿದೆವು. ಆದರಿಂದ ಬಿದ್ದು ನನಗೆ ಪೆಟ್ಟಾಯಿತು. ನಾನು ಹೆದರಿ ಹಿಂಜರಿದೆ. ಆದರೆ ಗಾಯಕ್ಕೆ ಮಣಿಯದೆ

ಅನುಪಮಾ ಹಠತೊಟ್ಟು ಸೈಕಲ್ ಸವಾರಿ ಕಲಿತೇಬಿಟ್ಟಳು. ತಾನು ಕೈಗೊಂಡ ಕೆಲಸ ವನ್ನು ಹೆದರಿ, ಬೇಸರಿಸಿ ಬಿಡುವ ಸ್ವಭಾವ ಆಕೆಯದಲ್ಲ. ಮುನ್ನುಗ್ಗಿ ವಿಜಯ ಸಾಧಿಸುವುದು ಅವಳ ಸ್ವಭಾವವಾಗಿತ್ತು. ಅವಳು ಒರಟಾಗಿ ವರ್ತಿಸುತ್ತಿರಲಿಲ್ಲ. ಆಕೆಯ ಮುತ್ತಿನ ಬರವಣಿಗೆ ಮತ್ತು ಸುಂದರ ವಾಕ್ಯಗಳು ಶಾಲೆಯ ಉಪಾಧ್ಯಾಯಿನಿ ಯರ ಮೆಚ್ಚುಗೆ ಗಳಿಸಿದ್ದುವು.

ಜೀವನದ ಆಗು-ಹೋಗುಗಳನ್ನು, ಧಾರ್ಮಿಕ ನಂಬಿಕೆಗಳನ್ನು ಜಿಜ್ಞಾಸು ದೃಷ್ಟಿಯಿಂದ ನೋಡುತ್ತಿದ್ದಳು. ಆ ಬಗ್ಗೆ ಹಿರಿಯರೊಡನೆ ಚರ್ಚಿಸಿ - ತಲೆಹರಟೆ ಎನಿಸಿಕೊಳ್ಳುತ್ತಿದ್ದಳು. ಅನುಪಮಾ ಜೀವನದ ಸಮಸ್ಯೆಗಳನ್ನು ಶಾಂತಚಿತ್ತದಿಂದ ಎದುರಿಸಿದಳು. ಆಕೆಗೆ ಕ್ಯಾನ್ಸರ್ ಆಗಿ ಸಾವಿನ ದವಡೆಯಲ್ಲಿ ಸಿಕ್ಕಾಗ, ಧೈರ್ಯಗೆಡದೆ, ಬಂದದ್ದನ್ನು ಎದುರಿಸಿದ ಧೀರೆ. ತನ್ನ ನೋವು-ಸಂಕಟಗಳನ್ನು ಇತರರಿಗೆ ಧೈರ್ಯ-ಆಶ್ವಾಸನೆ ಕೊಡಬಲ್ಲ ಸಾಹಿತ್ಯವನ್ನಾಗಿ ಮಾರ್ಪಡಿಸಿದ ಸಾಹಸಿ. ಅನುಪಮಾ-ನಿರಂಜನರು ಜಾತಿ-ಅಂತಸ್ತುಗಳ ಸಂಕೋಲೆಯನ್ನು ಕಿತ್ತೊಗೆದು ಪ್ರೇಮ ವಿವಾಹ ಮಾಡಿಕೊಂಡರು. ಅವರನ್ನು ತಿರಸ್ಕರಿಸಿದವರಿಗೆ ಸವಾಲೆಂಬಂತೆ ಸಫಲ ದಾಂಪತ್ಯ ಜೀವನ ನಡೆಸಿದ ಹಿರಿಮೆ, ಅನುಪಮಾ-ನಿರಂಜನ ಜೋಡಿಯದು. ಎರಡು ಹೃದಯ ಗಳು ಬೆಸೆದು-ಧನ್ಯದಾಂಪತ್ಯ ಜೋಡಿಯಾಗುವುದು-ಪ್ರೇಮ ವಿವಾಹ ಅಥವಾ ಸಾಂಪ್ರದಾಯಿಕ ವಿವಾಹದ ಸೊತ್ತಲ್ಲ. ಇಬ್ಬರು ವ್ಯಕ್ತಿಗಳ ಮಧ್ಯೆ ಪ್ರೀತಿ-ಗೌರವಗಳು ಮೂಡಿ ಶಾಶ್ವತವಾಗಿ ನಿಲ್ಲಬೇಕಾದರೆ. ಅವರಿಬ್ಬರೂ ಒಂದು ಆದರ್ಶದ ಗುರಿಯನ್ನು ಸಾಧಿಸಲು ದುಡಿಯಬೇಕು. ಇಲ್ಲವೇ. ನೋವು-ಸಂಕಟಗಳನ್ನು ಹಂಚಿಕೊಂಡು ಬಾಳಿರ ಬೇಕು. ನನಗೆ ಧಾರವಾಡದಲ್ಲಿ ನಿರಂಜನರ ಪರಿಚಯವಾಯಿತು. ಅವರ ವ್ಯಕ್ತಿತ್ವ, ಸಾಧನೆಯ ತೀವ್ರತೆ ಮತ್ತು ಸುಸಂಸ್ಕೃತ ನಡವಳಿಕೆ ನನಗೆ ಹಿಡಿಸಿತು. ಇಂತಹವರ ಸಹವಾಸದಲ್ಲಿ ಅನುಪಮಾ ಪ್ರಗತಿ ಸಾಧಿಸಿರುವುದು ಸಹಜವೆನಿಸಿತು.

'ಜೀವ-ಜೀವಕೆ ಉದ್ದೀಪನವಾದುದೆ ಜೀವನವು'. ಅಂತಹ ಧನ್ಯಜೀವನವು ನನ್ನ ಗೆಳತಿಯದಾಗಿದೆ ಎನ್ನುವುದು ನನ್ನ ಹಿಗ್ಗು.

ನನ್ನ ಗೆಳತಿ ವೆಂಕು

-ಡಾ। ಶಾರದಾ ಸುಬ್ಬಯ್ಯ

ವೆಂಕು ನನ್ನ ಅಚ್ಚುಮೆಚ್ಚಿನ ಗೆಳತಿ. ವೆಂಕಟಲಕ್ಷ್ಮಿ ಆಕೆಯ ನಿಜನಾಮ. ಮುಂದೆ ಅವಳೇ ಅನುಪಮಾ ನಿರಂಜನಳಾದ ಖ್ಯಾತ ಡಾಕ್ಟರ್ ಹಾಗೂ ಸಾಹಿತಿ. ನಮ್ಮ ಸ್ನೇಹ ಚಿಗುರೊಡೆದುದು ೧೯೫೧ರಲ್ಲಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ. ಅದು ಬೆಳೆದುದು **Anatomy class**ನಲ್ಲಿ. ಬೆಳಗ್ಗಿನಿಂದ ಮಧ್ಯಾಹ್ನದ ವರೆಗೆ ಹೆಣದ ಮುಂದೆ ಕುಳಿತು **Dissection** ಮಾಡಿ ಬೇಸರವಾದ ವೇಳೆಗಳಲ್ಲಿ. ಆರಂಭದಲ್ಲಿ ಅದು-ಇದು ಕಾಡುಹರಟೆಯಿಂದ ತೊಡಗಿ ಪರಿಚಯ ಹೆಚ್ಚುತ್ತಾ ಬೆಳೆದು ಆತ್ಮೀಯತೆಗ ಲಗ್ಗೆ ಹಾಕುತ್ತ, ನಮ್ಮಿಬ್ಬರೊಳಗೆ ಮೈತ್ರಿಯ ಮಾಧುರ್ಯ ದೃಢವಾಗುತ್ತ, ಇಂದಿನ ವರೆಗೆ ಬೆಳೆದಿದೆ. ಇಂದಿಗೂ ಆ ದಿನಗಳ ಸವಿ ನೆನಪುಗಳು ನನಗೆ ಉಲ್ಲಾಸ ನೀಡುತ್ತಿವೆ.

Anatomy Dissection ಮಾಡುತ್ತಿದ್ದಾಗ ನಮ್ಮ ಗುಂಪಿನ ಸಹವಿದ್ಯಾರ್ಥಿನಿಯಾದ ವೆಂಕುವಿನೊಡನೆ ಹರಟುತ್ತ "ನೀನು ಯಾರನ್ನು ಮದುವೆಯಾಗುತ್ತೀಯಾ?" ಎಂದು ಕೇಳಿದಾಗ ಆಕೆ "ಸಾಹಿತಿಯನ್ನು" ಎಂದು ನಿಖರವಾಗಿ ಹೇಳಿ ನಮ್ಮನ್ನು ಚಕಿತಗೊಳಿಸಿದ್ದಳು. ನಾವು ಯಾರೂ ಆ ಸಮಯದಲ್ಲಿ ನಮ್ಮ ಮದುವೆಯ ವಿಷಯದ ಕುರಿತು ಯಾವ ಅಭಿಪ್ರಾಯಕ್ಕೂ ಬಂದಿರಲಿಲ್ಲ. ವೆಂಕು ಆಗಲೇ ತನ್ನ ಭವಿಷ್ಯದ ಕುರಿತು ನಿರ್ಧರಿಸಿದ್ದಳು. ನಾಲ್ಕನೆಯ **M.B. B.S.**ನಲ್ಲಿ ಓದುತ್ತಿದ್ದಾಗ ಈ ಸಾಹಿತ್ಯ ಪ್ರಿಯ ವೆಂಕು ೩-೪ ದಿನ ಕ್ಲಾಸಿಗೆ ಚಕ್ಕರ್ ಹಾಕಿದ್ದಳು. ನಾವೆಲ್ಲರೂ ಆಕೆಗೆ ಆರೋಗ್ಯ ಸರಿ ಇಲ್ಲವೆಂದು ಭಾವಿಸಿದ್ದೆವು. ನಾಲ್ಕನೆಯ ದಿನ ಕ್ಲಾಸಿಗೆ ಬಂದ ವೆಂಕು "ಏ, ಶಾರಿ. ನಾನು ಹಿಂದೊಮ್ಮೆ ಹೇಳಿದ ಹಾಗೆ ಬರಹಗಾರ ನಿರಂಜನರನ್ನು ಮದುವೆ ಮಾಡಿಕೊಂಡಿದ್ದೇನೆ. ನೀವೆಲ್ಲರೂ ಇಂದು ಸಾಯಂಕಾಲವೇ **reception**ಗೆ ಖಂಡಿತ ಬರಬೇಕು" ಎಂದು ಹೇಳಿ ಹೊರಟಾಗ ನಮಗೆಲ್ಲರಿಗೂ ಆದ ಆಶ್ಚರ್ಯ ಇಂದಿಗೂ ಖುಶಿಕೊಡುತ್ತಿದೆ. ನಮಗೋ ಅವಳಿಗಿಂತ ಹೆಚ್ಚು ಕುತೂಹಲ, ಸಂಭ್ರಮ! ಸಂಜೆ ತರಗತಿ ಮುಗಿಸಿ, ಅಲಂಕರಿಸಿಕೊಂಡು ದಾಸಪ್ರಕಾಶ ಹೋಟೆಲಿನಲ್ಲಿ ಜರಗಲಿರುವ **Reception** ಸಮಾರಂಭದಲ್ಲಿ ಪಾಲ್ಗೊಳ್ಳಲು ಧಾವಿಸಿದೆವು. ಅಲ್ಲಿ ಸುಸಜ್ಜಿತವಾದ ಏರ್ಪಾಡು. ತಳಿರು-ತೋರಣಗಳ ಸುಂದರ ಶೃಂಗಾರ. ಪ್ರಾಧ್ಯಾಪಕ ಡಾಕ್ಟರರುಗಳು. ಕಿರಿಯ ಡಾಕ್ಟರರುಗಳು, ಸಹಪಾಠಿಗಳು, ಸ್ನೇಹಿತರು. ಸಾಹಿತಿಗಳ ಬಳಗಗಳಿಂದ ವಿಶಾಲ ಕೊಠಡಿ ತುಂಬಿತ್ತು. ಇಬ್ಬರು, ಮೂವರು **Senior Doctors** ವೇದಿಕೆಯನ್ನಲಂಕರಿಸಿದ್ದರು. ಈ ನವ ದಂಪತಿಗಳ ವಿಚಾರವನ್ನು ತಿಳಿಸಿ ಅವರು ಶುಭಾಶಯ ಕೋರಿದರು. ಅಂದಿನ ಆ ದಿನದ ಸಂತೋಷದ ಉಲ್ಲಾಸ ಇಂದಿಗೂ ನನ್ನ ಗೆಳತಿಯ ಬಾಳಿನಲ್ಲಿ ನಾನು ಕಾಣುತ್ತಿದ್ದೇನೆ. ಆ ವಿವಾಹವನ್ನು ಎರಡು ಮನೆಯವರೂ

ಒಪ್ಪಿರಲಿಲ್ಲ. ಆದರೂ, ಆ ಕಹಿಯನ್ನು ತೋರಗೊಡದೆ ನಗುನಗುತ್ತಾ, ಸಹನೆಯಿಂದ ಉತ್ಸಾಹದ ಚಿಲುಮೆಯಂತಿದ್ದ ನನ್ನ ಗೆಳತಿ ವೆಂಕು ಅಂದಿನಂತೆ ಇಂದೂ ಅನುಪಮಾ ನಿರಂಜನಳಾಗಿಯೂ ಧೀರಚೇತನಳಾಗಿದ್ದಾಳೆ. ಅವಳ ಗೆಳೆತನದ ಮೋಡಿ ಬಹಳ ಹಿತವಾದುದು. ಅಂದೂ ಇಂದೂ.

ಅನುಪಮಾ ಕಷ್ಟಸಹಿಷ್ಣು. ಕಷ್ಟವನ್ನೇ ಸುಖವಾಗಿ ತಿಳಿದುಕೊಳ್ಳುವ, ತನ್ನ ಕಷ್ಟವನ್ನೇ ಹೇಳಿಕೊಳ್ಳುತ್ತ ಇತರರ ಕಿವಿಕೊರೆಯದ, ಅದನ್ನು ಧೀರತೆಯಿಂದ ಎದುರಿಸಿ ಗೆಲ್ಲಬಲ್ಲ ಸ್ಥೈರ್ಯ ಆಕೆಯಲ್ಲಿ ಹಾಸುಹೊಕ್ಕಾಗಿದೆ. ತನ್ನ ಹಾಗೂ ನಿರಂಜನರ ಅನಾರೋಗ್ಯಗಳ ಅಗ್ನಿಪರೀಕ್ಷೆಯಲ್ಲಿ ಗೆದ್ದು ಬಂದ ನನ್ನ ಈ ಗೆಳತಿಯ ಜೀವನವೇ ಒಂದು ವೀರಕಾವ್ಯ.

ನನ್ನ ಗೆಳತಿಯೊಂದಿಗೆ ಮೆಡಿಕಲ್ ಕಾಲೇಜಿನಲ್ಲಿ ಕಳೆದ ಆ ಸುಂದರ ದಿನಗಳನ್ನು, ನಾವು ಹನ್ನೆರಡು ಮಂದಿ ಗೆಳತಿಯರೂ, ಇಂದು ಎಂದಾದರೊಮ್ಮೆ ಸಂಧಿಸಿದಾಗ ಸ್ಮರಿಸಿಕೊಳ್ಳುತ್ತ, ನಕ್ಕುನಲಿಯುತ್ತ, ಮೆಲುಕುಹಾಕಿಕೊಳ್ಳುತ್ತೇವೆ. ಅನುಪಮಾಳ ಮಾತುಗಳನ್ನು ಇಂದು ಆಕಾಶವಾಣಿಯಲ್ಲಿ ಕೇಳಿದಾಗ - ಇಂದು ಸಹ ಅಂದಿನ ಅದೇ ಗಾಂಭೀರ್ಯ, ಸರಳವಾದ ಮಾತು, ನಗು, ಖಚಿತ ಉತ್ತರಗಳು ನೆನಪಾಗುತ್ತವೆ. ನನ್ನ ಗೆಳತಿ ವೆಂಕು-ವೆಂಕಟಲಕ್ಷ್ಮಿ-ಅನುಪಮಾ ಎಂದೂ ಬದಲಾಗದ ಒಂದು ಸಂತೋಷದ ಚಿಲುಮೆ.

ಹದಿಹರೆಯದಲ್ಲೇ ಮೌಲ್ಯಾನ್ವೇಷಣೆ

- ಲೀಲಾ ಮಿರ್ಲೆ

ಕಾಲೇಜಿನಿಂದ ಸಂಜೆ ಮನೆಗೆ ಬಂದ ಮೇಲೆ ನಾವು ಮೂರು ಜನ ಅಕ್ಕ ತಂಗಿಯರು ನಮ್ಮ ಕ್ಲಾಸುಗಳಲ್ಲಿ ನಡೆದ ವಿಶೇಷ ಪ್ರಸಂಗಗಳನ್ನು ಹೇಳುವುದು ರೂಢಿಯಾಗಿತ್ತು. ಒಮ್ಮೆ ಅಕ್ಕ ಕಮಲ "ಇವತ್ತು ವೆಂಕಟಲಕ್ಷ್ಮಿಯ ಭಾಷಣ ಬಿರುಸಿನಿಂದ ಸಾಗಿತ್ತು" ಎಂದಳು. "ಯಾರು ವೆಂಕಟಲಕ್ಷ್ಮಿ?" ಎಂದೆ, "ಆ ಹುಡುಗಿ ಕಮ್ಯೂನಿಸ್ಟು. ನೋಡಕ್ಕೆ ಏನೂ ಗೊತ್ತಾಗಲ್ಲ. ಮರದ ಕೆಳಗೆ ಒಂದಿಷ್ಟು ಹುಡುಗಿಯರನ್ನು ಜಮಾಮಾಡಿ ಬಿಗೀತಾಳೆ ಭಾಷಣಾನ". "ಏನು, ಕಮ್ಯೂನಿಸ್ಟ್ ಆಗಿ ಅಂತ್ಲೇ?" ಎಂದೆ. "ಇಲ್ಲಾ, ಅಂಧಕಾರದಲ್ಲಿರುವ ಸ್ತ್ರೀಯರು ಬೆಳಕಿಗೆ ಬರಬೇಕು, ಅಂಧಕಾರದಲ್ಲಿರುವ ಸ್ತ್ರೀಯರು ಹಾಗೆ ಮಾಡಬೇಕು, ಹೀಗೆ ಮಾಡಬೇಕು ಅಂತೆಲ್ಲಾ ಹೇಳ್ತಾ ಇರುತ್ತಾಳೆ" ಎಂದಳು.

ನಮ್ಮ ಸಂಜೆಯ ವಿಚಾರವಿನಿಮಯ ಗೋಷ್ಠಿಯಲ್ಲಿ ವೆಂಕಟಲಕ್ಷ್ಮಿ ಆಗಾಗ ಕಾಣಿಸಿಕೊಳ್ಳುತ್ತಿದ್ದ ವ್ಯಕ್ತಿ. ನಾವು ಅಕ್ಕತಂಗಿಯರು ಆಕೆಗೆ ಇಟ್ಟ ಅಡ್ಡ ಹೆಸರು "ಅಂಧಕಾರದಲ್ಲಿರುವ ಸ್ತ್ರೀ". ಕಾಲೇಜಿನಲ್ಲಿ ಈ ಕಮ್ಯೂನಿಸ್ಟ್ ಹುಡುಗಿಯನ್ನು ದೂರದಿಂದ ನೋಡಿದ್ದೆ ಅಷ್ಟೆ ವಿನಾ ಪರಿಚಯವಿರಲಿಲ್ಲ.

ನಾನು ಮದುವೆಯಾದ ನಂತರ ಕೆಲವು ವರ್ಷಗಳು ಬೊಂಬಾಯಿಯಲ್ಲಿದ್ದೆ. ಒಮ್ಮೆ ಬೇಸಿಗೆಯಲ್ಲಿ ಬೆಂಗಳೂರಿಗೆ ಬಂದಿದ್ದಾಗ, ನಮ್ಮ ತಂದೆ ರಾ. ಶಿ. ಯವರು ಮಾತನಾಡುತ್ತಾ "ಅನುಪಮಾ ಮತ್ತು ನಿರಂಜನ ದಂಪತಿಗಳಿಬ್ಬರೂ ಸಾಹಿತಿಗಳು. ಆಕೆ ಡಾಕ್ಟರ್ ಕೆಲಸಾನೂ ಮಾಡಿಕೊಂಡು ಬರೆಯುವ ಹವ್ಯಾಸವನ್ನೂ ಇಟ್ಟು ಕೊಂಡಿದ್ದಾಳೆ. ತುಂಬ ಮುಂದೆ ಬರ್‍ತಾಳೆ. ಅವಳು ಕಮಲಳ ಕ್ಲಾಸ್‌ಮೇಟಂತೆ" ಎಂದರು. ನನಗೆ ಆಶ್ಚರ್ಯವಾಯಿತು. ನಮ್ಮ ಕಾಲೇಜು ದಿನಗಳ ಸಂಜೆಯ ಹರಟೆಯ ಗೋಷ್ಠಿಗಳಲ್ಲಿ ಯಾವ ಅನುಪಮಾಳ ಹೆಸರೂ ಬಂದಿರಲಿಲ್ಲ. ಕಮಲ ಸಿಕ್ಕಾಗ, "ಯಾರು ಈ ಅನುಪಮಾ. ಅಪ್ಪ ತುಂಬಾ ಹೊಗಳ್ತಾ ಇದ್ರು. ನಿನ್ನ ಕ್ಲಾಸ್‌ಮೇಟಂತೆ" ಎಂದೆ. "ಅವಳೇಮ್ಮಾ. ನಮ್ಮ ಅಂಧಕಾರದಲ್ಲಿರುವ ಸ್ತ್ರೀ" ಎಂದಳು ಕಮಲ. ಕಾಲೇಜಿನಲ್ಲಿ ಕಂಡ ವೆಂಕಟಲಕ್ಷ್ಮಿ ಈಗ ಬರಹಗಾರ್ತಿ ಡಾ। ಅನುಪಮಾ ನಿರಂಜನರಾಗಿ ಪರಿವರ್ತಿಸಿದ್ದು ಅರಿವಾಯಿತು. ಆಳವಾಗಿ ವಿಚಾರಮಾಡುತ್ತಿದ್ದ ಹುಡುಗಿಗೆ ಇಂಥ ಔಟ್‌ಲೆಟ್ ಅನಿವಾರ್ಯ ಎಂದುಕೊಂಡೆ. ಕುತೂಹಲದಿಂದ ಆಕೆಯ ಪುಸ್ತಕಗಳನ್ನು ಓದಿದೆ. ಸಮಾಜದಲ್ಲಿ ಶೋಷಿತರಾದ ಸ್ತ್ರೀಯರ ಕಷ್ಟ ಮಾತ್ರವಲ್ಲದೆ, ಮಾನವ ಕುಲದ ಕಾರ್ಪಣ್ಯಗಳನ್ನು ನೋಡಿ ಆಕೆಯ ಹೃದಯ ಮಿಡಿಯುವುದನ್ನು ಆ ಕಾದಂಬರಿಗಳಲ್ಲಿ ಕಂಡೆ. ಅವರನ್ನು ಭೇಟಿಯಾಗಬೇಕೆಂಬ ಆಸೆ ಇದ್ದರೂ ವರ್ಷಕ್ಕೊಮ್ಮೆ ತಿಂಗಳ ಮಟ್ಟಿಗೆ ಬೆಂಗಳೂರಿಗೆ ಬರುತ್ತಿದ್ದ ನನಗೆ ಅವರನ್ನು ಕಾಣುವ ಅವಕಾಶವೇ ಸಿಕ್ಕಿರಲಿಲ್ಲ.

"ಸುಧಾ" ವಾರಪತ್ರಿಕೆಯಲ್ಲಿ ನನ್ನ ಮೊದಲ ಲೇಖನ ಪ್ರಕಟವಾದಾಗ ಗಂಡ, ಮಕ್ಕಳೆಲ್ಲಾ ಬೆನ್ನು ತಟ್ಟಿದರು. ಖುಷಿಪಟ್ಟದ್ದು ನಿಜ. ಆದರೆ ಒಳಮನಸ್ಸಿನಲ್ಲಿ ಶ್ರೀಮತಿ ಅನುಪಮಾರವರಂತಹ ನುರಿತ ಸಾಹಿತಿಗಳು ನನ್ನ ಲೇಖನವನ್ನು ಓದಿ ಮೆಚ್ಚಿದರೆ ಎಷ್ಟು ಚೆನ್ನು ಎನಿಸಿತ್ತು. ಟೆಲಿಪತಿಯೋ ಎನ್ನುವಂತೆ ಒಂದು ದಿನ ಬೆಳಗ್ಗೆ ಅನುಪಮಾರವರೇ ಫೋನ್ ಮಾಡಿದರು. ನನ್ನ ಲೇಖನದ ಬಗ್ಗೆ ಪ್ರೋತ್ಸಾಹದ ಮಾತುಗಳನ್ನಾಡಿದರು. ಅಂದಿನಿಂದ ನಮ್ಮ ಸ್ನೇಹ ಬೆಳೆಯಲು ಪ್ರಾರಂಭ. ಅವರ ಮನೆ 'ಕಥೆ'ಗೆ ನಾನು ರೆಗ್ಯುಲರ್ ವಿಸಿಟರ್ ಆದೆ.

ನಮ್ಮ ಮನೆಯಲ್ಲಿ ಎಂದಾದರೂ ಹೂದಾನಿಯಲ್ಲಿ ಹೂ ಜೋಡಿಸಿ ಮನೆಯನ್ನು ಸಿಂಗರಿಸಲು ಪ್ರಯತ್ನಿಸಿದರೆ, ನನ್ನ ಮಕ್ಕಳು ಮೊದಲು ಕೇಳುವ ಪ್ರಶ್ನೆ "ಅನುಪಮಾ ಅವರ ಮನೆಗೆ ಹೋಗಿ ಬಂದಿರಾ?". ಅವರ ಮನೆಯ ಸ್ವಚ್ಛತೆ, ಅಚ್ಚುಗಟ್ಟು ಒಂದು ತರಹ ಸಾಂಕ್ರಾಮಿಕ!

ಅನುಪಮಾ ಅವರು ಪ್ರಸಿದ್ಧ ಲೇಖಕಿಯಾದರೂ, ಹೊಸ ಲೇಖಕಿಯರನ್ನು ಪ್ರೋತ್ಸಾಹಿಸುವುದು ಅವರ ಮನೋವೈಶಾಲ್ಯವನ್ನು ತೋರಿಸುತ್ತದೆ. ನನ್ನಂಥ ತಾಮಸ ಪ್ರಕೃತಿಯ ಅನೇಕ ಲೇಖಕಿಯರಿಗೆ ಅವರು ಚೇತನವನ್ನು ತುಂಬಿ, ಬರೆಯುವ ಹವ್ಯಾಸದ ತಳಪಾಯವನ್ನು ಭದ್ರ ಮಾಡಿದ್ದಾರೆ.

ಸೋದರಿ ಅನುಪಮಾ ನನಗೆ ನನ್ನ ವೃತ್ತಿಯಲ್ಲೂ ಪರೋಕ್ಷವಾಗಿ ನೆರವಾಗಿದ್ದಾರೆ. ಶಾಲೆಯೊಂದರಲ್ಲಿ ಕನ್ನಡದ ಉಪಾಧ್ಯಾಯಿನಿ ನಾನು. ಪಾಠೇತರ ಚಟುವಟಿಕೆಗಳಲ್ಲಿ ಕಥೆ ಓದುವುದೂ ಮುಖ್ಯವೆಂದು ನನ್ನ ನಂಬಿಕೆ. ಮಕ್ಕಳು ಕಥೆ ಹೇಳಿ ಎಂದಾಕ್ಷಣ ಕಥೆಗಳು ನೆನಪಿಗೆ ಬರುತ್ತಿರಲಿಲ್ಲ. ಅವರ 'ದಿನಕ್ಕೊಂದು ಕಥೆ' ಈ ದಿಸೆಯಲ್ಲಿ ತುಂಬ ಸಹಕಾರಿಯಾಯಿತು. ಸ್ವಾರಸ್ಯವಾದ ಚಿಕ್ಕ ಕಥೆಗಳನ್ನು ಆಡುಭಾಷೆಯಲ್ಲಿ, ಮಕ್ಕಳ ಕುತೂಹಲ ಕೆರಳುವಂತೆ, ಆಸಕ್ತಿ ಮೂಡುವಂತೆ ಸರಳವಾಗಿ ಬರೆದು ಶಿಶು ಸಾಹಿತ್ಯಕ್ಕೆ (ಹಾಗೂ ಉಪಾಧ್ಯಾಯಿನಿಯರಿಗೆ!) ಅಪಾರ ಉಪಕಾರ ಮಾಡಿದ್ದಾರೆ ಅನುಪಮಾ.

ಒಮ್ಮೆ ಅವರ ಮನೆಗೆ ಹೋಗಿ ಅಲ್ಲಿಂದ ನಾವೆಲ್ಲ ಅವರೊಂದಿಗೆ ಯಾವುದೋ ಸಮಾರಂಭಕ್ಕೆ ಹೋಗುವುದಿತ್ತು. "ಪೋಸ್ಟ್ ಆಫೀಸ್ ಮುಂದಿನಿಂದ ಹೋಗೋಣ, ಒಂದು ಪತ್ರ ಪೋಸ್ಟ್ ಮಾಡೋದಿದೆ" ಎಂದರು ಅನುಪಮಾ. ತಿಪಟೂರಿನ ತರುಣಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಾಗ ಆ ಊರಿನ ಜನರು ಒಗ್ಗಟ್ಟಾಗಿ ನಿಂತು ನ್ಯಾಯಕ್ಕಾಗಿ ಹೋರಾಡಿದರು. ತಿಪಟೂರಿನ ಜನತೆಯನ್ನು ಅಭಿನಂದಿಸಿ ಅನುಪಮಾ ಪತ್ರಿಕೆಯೊಂದಕ್ಕೆ ಕಾಗದ ಬರೆದಿದ್ದರು. ಸಮಾಜದ ದೋಷಗಳನ್ನು ದೂಷಿಸುತ್ತಾ ಕೂರುವವರೇ ಹೆಚ್ಚು ಮಂದಿ. ಅನುಕರಣೀಯವಾದ ಕಾರ್ಯಗಳಲ್ಲಿ ನಿರತರಾದವರನ್ನು ಅಭಿನಂದಿಸಿ, ಪ್ರೋತ್ಸಾಹಿಸುವುದು ಎಂತಹ ಉದಾತ್ತ ಗುಣ ಎನ್ನಿಸಿತು ನನಗೆ.

ಲೇಖಕಿಯರ ಸಂಘಗಳಿಗೆ ಅವಿಶ್ರಾಂತವಾಗಿ ದುಡಿಯುತ್ತಿರುವ ಅನುಪಮಾ ಅವರೊಂದಿಗೆ ಒಮ್ಮೆ ಮಾತನಾಡುತ್ತಿದ್ದಾಗ "ಸಾಹಿತ್ಯ ಸೃಜನಾತ್ಮಕವಾದದ್ದು. ಅದರಲ್ಲಿ ಲಿಂಗಭೇದವಿಲ್ಲ. ಲೇಖಕಿಯರಿಗೇ ಬೇರೆ ವೇದಿಕೆ ಇದ್ದರೆ ನಮ್ಮನ್ನು ನಾವೇ ಪ್ರತ್ಯೇಕಿಸಿಕೊಂಡಂತಾಗುವುದಿಲ್ಲವೇ? ಉತ್ತಮ ಮಟ್ಟದ ಬರಹದಿಂದ ನಾವು ಮೇಲೆ ಬರಲು ಸಾಧ್ಯವೇ ವಿನಾ, ಪ್ರತ್ಯೇಕ ವೇದಿಕೆಯಿಂದಲ್ಲ. ಅಲ್ಲವೆ?" ಎಂದು ತರ್ಕ ಮಾಡಿದೆ. "ನೀವು ಹೇಳುವುದು ನಿಜ. ಆದರೆ ಬರಹಗಳ ಮಟ್ಟವನ್ನು ಏರಿಸುವುದರ ಜೊತೆಗೆ, ಪುಸ್ತಕಗಳನ್ನು ಪ್ರಕಟಿಸಲು, ವಿಚಾರ ವಿನಿಮಯ ಮಾಡಿಕೊಳ್ಳಲು ಈ ಸಂಘಗಳ ಅವಶ್ಯಕತೆ ಇದೆ. ಸ್ತ್ರೀ ಪುರುಷರು ಸಮಾನರು ಎನ್ನುವುದನ್ನು ನಮ್ಮ ಜನರು ಮನಃಪೂರ್ವಕವಾಗಿ ನಂಬುವ ತನಕ ಮಹಿಳೆಯರಿಗೆ ಬೆಂಬಲ ಬೇಕೇ ಬೇಕು" ಎಂದರು. ಅನುಪಮಾ ಅನುಭವಸ್ಥೆ. ಅವರ ಮಾತಿನಲ್ಲಿ ಸತ್ಯಾಂಶವಿದೆ ಎನಿಸಿತು.

"ಅಂಧಕಾರದಲ್ಲಿರುವ ಸ್ತ್ರೀ" ಎಂದು ತಮಾಷೆಗೆ ನಾವು ಇಟ್ಟ ಹೆಸರಿನಲ್ಲಿ ಎಂತಹ ವಿಪರ್ಯಾಸವಿದೆ ಎನಿಸುತ್ತದೆ ಈಗ. ಸುಮಾರು ಮೂವತ್ತೈದು ವರ್ಷಗಳ ಹಿಂದೆಯೇ ಅಂಧಕಾರದಿಂದ ಹೊರಬಂದು ಹದಿಹರೆಯದಲ್ಲೇ ಮೌಲ್ಯಗಳನ್ನು ಸ್ಪಷ್ಟವಾಗಿ ಕಂಡಿದ್ದರು ಅನುಪಮಾ.

ವೈದ್ಯೆ - ಸಾಹಿತಿ - ಗೆಳತಿ

- ಕೆ. ಶಾಂತಾ

೧೯೫೧–೫೨ರಲ್ಲಿ ಒಬ್ಬಳು ಹದಿನೇಳು ವರ್ಷದ ಹುಡುಗಿ ಮಫ್ತಿಯಲ್ಲಿದ್ದ ಪೋಲೀಸಿಗೆ ಹೆದರಿ, ನಮ್ಮ ಮಲ್ಲೇಶ್ವರದ ಮನೆಗೆ ನುಗ್ಗಿ ಮಹಡಿಗೆ ಬಂದು, ಹಿಂಬದಿಯಲ್ಲಿದ್ದ ಇನ್ನೊಂದು ಮೆಟ್ಟಲಿನಿಂದ ಇಳಿದು ಹಿಂಬಾಗಿಲಿನಿಂದ ಆಚೆ ಓಡಿ ಹೋದಳಂತೆ. ಮಫ್ತಿಯಲ್ಲಿದ್ದ ಪೋಲೀಸ್ ಅವಳ ಹಿಂದೆ ದುಂಬಾಲು ಬೀಳಲು ಕಾರಣ ಅವಳು ನಿರಂಜನರ ಜೊತೆ ಮಾತನಾಡಿದುದು. ಆಗ ನಿರಂಜನ ಕಮ್ಯೂನಿಸ್ಟ್. ಅವರ ಸಂಪರ್ಕವಿರಿಸಿಕೊಂಡಿದ್ದ ಆ ಹುಡುಗಿಯೂ ಕಮ್ಯೂನಿಸ್ಟ್ ಆಗಿರಬೇಕೆಂಬ ತರ್ಕ. ನನ್ನ ವಯಸ್ಸು, ಬಣ್ಣ, ಎತ್ತರ ಸಾಮಾನ್ಯ ಆ ಹುಡುಗಿಯನ್ನೇ ಹೋಲುವಂತಿದ್ದುದರಿಂದ ನನ್ನ ಮೇಲೆ ಗುಮಾನಿ ಇಟ್ಟಿದ್ದ ಪೋಲೀಸರು ಆ ಕುರಿತಾಗಿ ದಿನವೂ ನನ್ನನ್ನು ಹಿಂಬಾಲಿಸಿ ಒಂದು ದೊಡ್ಡ fileನ್ನೇ ಸಿದ್ಧಮಾಡಿದ್ದರಂತೆ! ಕಾಲೇಜಿನಲ್ಲಿ ಓದುತ್ತಿದ್ದ ನನಗೆ ನನ್ನ ವಿದ್ಯಾಭ್ಯಾಸ, ಅನಂತರ ಮದುವೆ - ಸಂಸಾರ ಇತ್ಯಾದಿ ಮಾತ್ರ ತಿಳಿಯುತ್ತಿದ್ದ ಕಾಲ ಅದು. ಮನೆ, ಕಾಲೇಜ್, ಗೆಳತಿಯರೊಂದಿಗೆ ಕಬ್ಬನ್‌ಪಾರ್ಕ್, ಸಿನೆಮಾ, ಹೋಟೆಲ್‌ಗಳ ಕಾಫಿ ಸೇವನೆಗಳಲ್ಲೇ ನಾನು ಕಾಲ ಕಳೆಯುತ್ತಿದ್ದ ಆ ದಿನಗಳಲ್ಲಿ, ನನ್ನ ತಂದೆಯವರಿಗೆ ಆ fileನ ವಿಷಯ ತಿಳಿದು, ಅವರು ಅದನ್ನು ಪರಿಹರಿಸಿದ ವಿಚಾರವನ್ನು ಹತ್ತಾರು ವರ್ಷಗಳ ಅನಂತರ ನನಗೆ ತಿಳಿಸಿದುದು.

ಹೀಗೆ ಒಂದು ದಿನ ನನ್ನನ್ನು ಗೊಂದಲದಲ್ಲಿ ಸಿಕ್ಕಿಸಿದ ಆ ಹುಡುಗಿಯೇ ನಿರಂಜನರ ಬಾಳಗೆಳತಿಯಾದ ಅನುಪಮಾ. ನನಗೆ ಆಕೆಯ ಸರಿಯಾದ ಪರಿಚಯವಾದುದು ಆಕೆ **M.B. B.S.** ಕಲಿಯುತ್ತಿದ್ದಾಗ, ಅನಂತರ ವಿಲ್ಸನ್ ಗಾರ್ಡನ್ ಮನೆಯಲ್ಲಿ ವಾಸ ಮಾಡುತ್ತಿದ್ದಾಗ. ಸ್ನೇಹಿತೆ ಎಂದ ಮೇಲೆ-ವಿಚಾರ ವಿನಿಮಯ, ಲೇಖಕಿಯರ ಪರಿಚಯ, ತ್ರಿವೇಣಿ ಆಗ ತಾನೇ ಬರೆಯಲು ಆರಂಭಿಸಿದ ಕಾದಂಬರಿಗಳಿಗೆ ವಸ್ತು ಸಂಗ್ರಹಿಸಲು ನೆರವು, ಪರಸ್ಪರ ಪತ್ರ ವ್ಯವಹಾರ-ಇತ್ಯಾದಿ (ಹಾಳು ಹರಟೆ ಮಾತ್ರ

ಎಂದಿಗೂ ಇಲ್ಲ) ನಡೆಸುತ್ತಿದ್ದೆವು. ಅನುಪಮಾ ಆಗ ಇದ್ದುದು ಮೈಸೂರಿನಲ್ಲಿ. ಅವಳ Boy friend ಆದರ್ಶವಾದಿ ನಿರಂಜನರು ಇದ್ದದ್ದು ಬೆಂಗಳೂರಿನಲ್ಲಿ ನಮ್ಮ ಮನೆಯ ಹತ್ತಿರ. ಅವರು ನಮ್ಮ ಮನೆಯವರಿಗೆಲ್ಲ ಆತ್ಮೀಯರಾಗಿದ್ದವರು.

ನನ್ನ ಓದಿನ ವಿಷಯ ಗೃಹವಿಜ್ಞಾನ. ಸ್ನೇಹಿತೆಯದೋ ವೈದ್ಯಕೀಯ. ಅನೇಕ ವಿಷಯಗಳಲ್ಲಿ ನಮ್ಮದು ಸಮಾನ ಆಸಕ್ತಿ. ಆಗ ಸ್ನೇಹಿತೆ ಹೇಳಿಕೊಟ್ಟ ವಿಷಯಗಳು, ತಿಳಿಸಿದ ಸಂಗತಿಗಳು, ನೀಡಿದ ನೆರವು ಇಂದಿಗೂ ನನ್ನಲ್ಲಿ ಮನೆಮಾಡಿವೆ. ನನ್ನ ಕೆಲಸಕಾರ್ಯಗಳಲ್ಲಿ ಸಹಕಾರಿಗಳಾಗಿವೆ. ಆದರೆ, ಆಕೆಯಂತೆ ಮನದಲ್ಲಿರುವುದನ್ನು ಸಮರ್ಪಕವಾಗಿ ಲೇಖನದಲ್ಲಿ ರೂಪಿಸಲು ನನ್ನಿಂದ ಸಾಧ್ಯವಾಗಲಾರದು.

ಅನುಪಮಾ-ನಿರಂಜನರ ಮೆಚ್ಚುಗೆ, ಒಲವು 'ಸಾಧನ' ರೂಪದಲ್ಲಿ ಬಂದುದನ್ನು ತಿಳಿಸುತ್ತ, ಅನುಪಮಾ ನನಗೊಬ್ಬಳಿಗೆ ಮಾತ್ರ ಮೈಸೂರಿನ ಒಂದು ಸಣ್ಣ ಹೋಟೆಲಿನಲ್ಲಿ ನೀಡಿದ ಕಾಫಿ-ತಿಂಡಿ, ತೋರಿಸಿದ 'ನಾಗೀನ್' ಸಿನೆಮಾಗಳಲ್ಲಿ ಆಕೆಯ ಸಂತೋಷದಲ್ಲಿ ಪಾಲ್ಗೊಂಡ ಆ ರಸನಿಮಿಷಗಳನ್ನು ನಾನು ಸದಾ ಸ್ಮರಿಸಿಕೊಳ್ಳುತ್ತಿದ್ದೇನೆ. ಆ ವಯಸ್ಸು, ಆಸೆಗಳು, ಅನಿಸಿಕೆಗಳು, ಕನಸುಗಳು, ಮಾತುಗಳ ಹಿಡಿತಕ್ಕೂ ಪದಗಳ ಬಂಧನಕ್ಕೂ ಸಿಗದಂತಿದ್ದುವು. ನಾವು ಜೊತೆಯಲ್ಲಿ ಮೈಸೂರು-ಬೆಂಗಳೂರುಗಳಿಗೆ ಪಯಣಿಸಿದ ದಿನಗಳಲ್ಲಿ ಕಂಗೊಳಿಸಿದ ಆ ಎರಡು ಊರುಗಳ ನಡುವಣ ನಿಸರ್ಗ ಸೌಂದರ್ಯ ಎಷ್ಟು ರೋಚಕವೋ ಅಷ್ಟೇ ಆಹ್ಲಾದಕರ ಇಂದಿಗೂ ನಮ್ಮಿಬ್ಬರ ಗೆಳೆತನದ ಸೊಗಸು.

ನನ್ನ ತಮ್ಮತಂಗಿಯರು ತಿರುಪತಿಗೆ ಜೊತೆಯಲ್ಲಿ ಹೋಗಿ ಅನುಪಮಾ-ನಿರಂಜನರ ಮದುವೆಗೆ ನೆರವಾದುದು, ಬೆಂಗಳೂರಿನ ಆರತಕ್ಷತೆಯಲ್ಲಿ ತಾಯಿ, ತಂದೆ, ನಾನು ಮತ್ತು ಗೆಳತಿಯರು ಓಡಿಯಾಡಿದುದು ಇಂದಿಗೂ ನನಗೆ ಸ್ಮರಣೀಯ ಘಟನೆಗಳಾಗಿವೆ. ನಿರಂಜನರ ಜಾಣ್ಮೆ, ಶಿಸ್ತು, ನಲ್ಮೆ, ತಿಳುವಳಿಕೆಗಳ ಪ್ರಭಾವ, ಅವರು ನೀಡುತ್ತಿದ್ದ ಸ್ವತಂತ್ರ ಮನೋಭಾವಗಳಿಂದ ಅನುಪಮಾ ಯೋಚನಾಕ್ರಮದಲ್ಲಿ, ಶ್ರಮವಹಿಸುವ ರೀತಿಯಲ್ಲಿ, ಪಟ್ಟುಬಿಡದೆ ನೆರವೇರಿಸುವ ಕಾರ್ಯದಲ್ಲಿ, ಸದಾ ಕ್ರಿಯಾಶೀಲ ಸ್ವಭಾವದಲ್ಲಿ, ಮಾನವೀಯ ಅಂತಃಕರಣದ ಕಳಕಳಿಯಲ್ಲಿ ತನ್ನತನವನ್ನು ಕಂಡುಕೊಂಡಿದ್ದಾಳೆ, ಬೆಳೆಸಿಕೊಂಡಿದ್ದಾಳೆ. ಅನುಪಮಾ - ನಿರಂಜನರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ-ಅನನ್ಯ ದಂಪತಿಗಳು.

ನನ್ನ ಸ್ನೇಹಿತೆ ಗೃಹಿಣಿಯಾದಳು, ವೈದ್ಯಳಾದಳು. ನಾಡು-ಹೊರನಾಡುಗಳಲ್ಲಿ ಸಂಚರಿಸಿದಳು. ಸಂಸಾರ, ಮಕ್ಕಳು, ಅವರ ವಿದ್ಯಾಭ್ಯಾಸ, ಮಗಳ ಮದುವೆ, ಗಂಡನ ಶುಶ್ರೂಷೆ, ಸಾಹಿತ್ಯ ನಿರ್ಮಾಣಗಳಲ್ಲಿ ಕೃತಕೃತ್ಯಳಾದಳು. ಅಪಾರ

ಸ್ನೇಹಿತರನ್ನೂ ಅಭಿಮಾನಿಗಳ ಬಳಗವನ್ನೂ ಗಳಿಸಿದಳು. ಅನುಪಮಾ ಸಲ್ಲಿಸಿದ ವೈದ್ಯಕೀಯ ಸೇವೆ ಅಸಾಧಾರಣವಾದುದು. ಸಮಾಜದಲ್ಲಿ ತಲತಲಾಂತರಗಳಿಂದ ವೈದ್ಯರು ಸೇವೆಸಲ್ಲಿಸುತ್ತಾ ಬಂದಿದ್ದಾರೆ. ಮುಂದೆಯೂ ಬರಲಿದ್ದಾರೆ. ಆದರೆ, ಅವರಲ್ಲಿ ಎಷ್ಟು ಜನ ವೈದ್ಯರು (ಅದರಲ್ಲೂ ಮಹಿಳೆಯರು) ರೋಗಿಗಳ ರೋಗಗಳನ್ನು ಗುಣಪಡಿಸುವುದು ಮಾತ್ರವಲ್ಲ ಸಮಾಜದಲ್ಲಿ ಅವರು (ವೃದ್ಧರು. ಮಹಿಳೆಯರು, ಯುವತಿಯರು, ಮಕ್ಕಳು) ತಮ್ಮ ಸ್ಥಾನ, ಮಾನ, ಮರ್ಯಾದೆ. ಸ್ವಾತಂತ್ರ್ಯ, ಹಕ್ಕು, ಕರ್ತವ್ಯ, ಧೈರ್ಯ, ಸ್ಥೈರ್ಯ ಇವುಗಳನ್ನು ಅರಿತುಕೊಂಡು ಜನತೆಯ ದೌರ್ಜನ್ಯಕ್ಕೆ ಸಿಕ್ಕದೆ, ಸಮಾಜಘಾತುಕರಾಗದೆ, ತಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಬಾಳುವಂಥ "ಟಾನಿಕ್" ಕೊಡುತ್ತಾರೆ? ವೈದ್ಯೆ ಅನುಪಮಾ ತನ್ನ ಚಿಕಿತ್ಸಾಲಯದಲ್ಲಿ, ಬಿಳೀ ಪರದೆಯ ಮರೆಯಲ್ಲಿ ತನ್ನ ರೋಗಿಗಳೊಡನೆ ಅದೆಷ್ಟು ಸವಿಯಾಗಿ, ಮನಮುಟ್ಟುವಂತೆ ಮಾತನಾಡಿ ಮನವೊಲಿಸಿಕೊಂಡು ಅವರ ಒಳಹೊರಗಿನ ಕಾಯಿಲೆಗಳನ್ನು ಗುಣಪಡಿಸುತ್ತಿದ್ದಳೆಂಬುದನ್ನು ಬಹಳ ಜನರಿಂದ ನಾನು ಕೇಳಿ ತಿಳಿದುಕೊಂಡಿದ್ದೇನೆ. ಈಗ ದೂರದರ್ಶನದ ಮೂಲಕ ನನ್ನ ಗೆಳತಿ ಈ ಕಾರ್ಯವನ್ನು ಹೆಚ್ಚು ಪ್ರಯೋಜನಕಾರಿಯಾಗಿ ಮಾಡಿದ್ದಾಳೆ. ಬರವಣಿಗೆಯಲ್ಲಿ ವೈದ್ಯಕೀಯ, ವೈದ್ಯಕೀಯ ಸೇವೆಯಲ್ಲಿ ಜನರಿಗೆ ತಿಳುವಳಿಕೆ-ಹೀಗೆ ಎರಡನ್ನೂ ಸಮನ್ವಯಗೊಳಿಸಿ ಸಾಧಿಸಿದ ಅನುಪಮಾ ಭಾರತೀಯ ಸ್ತ್ರೀಸಮುದಾಯಕ್ಕೆ ನೀಡಿದ ಕೊಡುಗೆ ಚಿರಸ್ಥಾಯಿಯಾದುದು.

ಈಕೆ ನಮ್ಮ ಮನೆಯ ಹುಡುಗಿ, ನನ್ನ ಜೊತೆಯವಳು ಎನ್ನುವ ಹೆಮ್ಮೆ ನನಗೆ. ಅನುಪಮಾ ಮತ್ತು ನನ್ನ ಸ್ನೇಹ ಕಮಲದ ಎಲೆಯ ಮೇಲಿನ ನೀರಿನಂತೆ - ಯಾರು ಎಲೆ ಯಾರು ನೀರು ಎಂಬುದನ್ನು ನಿರ್ಧರಿಸಲು ನನಗೆ ಅಸಾಧ್ಯ. ಅಸಾಧ್ಯವೆಂದು ನಾನು ಬಗೆದುದೆಲ್ಲವನ್ನೂ ಸಾಧಿಸಿದ ಸಾಹಸಿ ಅನುಪಮಾ ಎಂಬುದನ್ನು ಮಾತ್ರ ನಾನು ಸಾರಿ ಹೇಳಬಲ್ಲೆ, ಅಷ್ಟೆ.

ಬವಣೆಯನ್ನೂ ಬೆಲ್ಲವಾಗಿಸಬಲ್ಲ ಧೀರೆ

- ಕಮಲಾ ರಾಮಸ್ವಾಮಿ

"ಏ ಶಾಂತ, ಹಣ್ಣೆಲ್ಲಾ ಅಲ್ಲೇ ತಿಂದು, ಕಾಯಿ ಮಾತ್ರ ಕೆಳಗೆ ಹಾಕ್ತಾ ಇದ್ದೀಯಾ?" ಕೆಳಗಿನಿಂದ ಕೂಗಿದೆ. "ಅಲ್ದೇ ಮತ್ತೇ! ನೀನ್ನೆ ನೀನು ನಾನು ಇಳಿದು ಬರೋ ಹೊತ್ಗೆ ಹಣ್ಣೆಲ್ಲಾ ತಿಂದು ಕಾಯಿ ಮಾತ್ರ ಕೊಟ್ಟಿದ್ದು?" ಶಾಂತ ಪನ್ನೇರಳೆ ಮರದ ಮೇಲಿಂದ ದಬಾಯಿಸಿದಳು. "ಹಾಗಾದ್ರೆ ನಂಗೆ ಬೇಡ್ವೇ ಬೇಡ". ಎಲ್ಲಾ

ಕಾಯುತ್ತಾ ಮಹಡಿಯಿಂದ ಇಳಿದೆ. "ಓಹೋ! ಹೊಸ ಹಕ್ಕಿ". ಶಾಂತಳ ಉದ್ಗಾರ. "ಎಲ್ಲೀ?" ಮುಗಿಲ ಕಡೆ ಮರದ ಮೇಲೆ ನೋಡಿದೆ. "ಅಲ್ಲಿ ನೋಡು". ಶಾಲೆಯ ಗೇಟಿನ ಕಡೆ ಕೈಮಾಡಿದಳು.

ದುಂಡು ಮುಖ, ತುಂಬಿದ ಕೆನ್ನೆಗಳು, ಗುಂಗುರು ಕೂದಲಿನ ಹೊಸ ಹುಡುಗಿಯೊಬ್ಬಳು ಸ್ವಲ್ಪ ವೇಗವಾಗಿ ನಡೆದು ಬರುತ್ತಿದ್ದಳು, ಕ್ಲಾಸಿಗೆ ಹೋದ ನಂತರ ತಿಳಿಯಿತು. ಹೊಸ ಹಕ್ಕಿಯ ಹೆಸರು "ವೆಂಕಟಲಕ್ಷ್ಮಿ" ಅಂತ. ಹೀಗೆ ಮಲ್ಲೇಶ್ವರದ ಬಾಲಕಿಯರ ಪ್ರೌಢಶಾಲೆಯಲ್ಲಿ ಮೊದಲ ಬಾರಿಗೆ ವೆಂಕಟಲಕ್ಷ್ಮಿ - ಈಗ-ಅನುಪಮಾ ಅವರನ್ನು ಕಂಡದ್ದು.

ಶಾಲೆಯ ನಂತರ ಇಬ್ಬರೂ ಒಂದೇ ಕಾಲೇಜಿನಲ್ಲಿ ಓದಿದರೂ ತರಗತಿಗಳು ಬೇರೆ. ನಾನು ಆರ್ಟ್ಸ್ ವಿದ್ಯಾರ್ಥಿ. ವಿಜ್ಞಾನ ಆಕೆಯ ಪಠ್ಯ ವಿಷಯ. ಕ್ಲಾಸು ಮುಗಿದ ನಂತರ, ಬಿಡುವಿನ ವೇಳೆಗಳಲ್ಲಿ ವೆಂಕಟಲಕ್ಷ್ಮಿಯವರ ವಿಚಾರಧಾರೆಯನ್ನು ಕೇಳುತ್ತಿದ್ದೆ. ಮೊದಲಿನಿಂದ ಒಂದೇ ಸೊಲ್ಲು -'ಹೆಣ್ಣುಮಕ್ಕಳ ವಿದ್ಯಾಭ್ಯಾಸ, ಸ್ವಾತಂತ್ರ್ಯ -ಅದರಲ್ಲೂ ಆರ್ಥಿಕ ಸ್ವಾತಂತ್ರ್ಯ ಮುಖ್ಯ. ಮೂಢನಂಬಿಕೆಗಳನ್ನು ತೊರೆದು, ಆತ್ಮವಿಶ್ವಾಸ ಬೆಳೆಯಿಸಿಕೊಂಡು, ತನ್ನ ಕಾಲ ಮೇಲೆ ತಾನು ನಿಲ್ಲುವ ಯತ್ನ ಮಾಡಬೇಕು'-ಇದು ಆಕೆಯ ತೀವ್ರ ಅನಿಸಿಕೆ.

ಅನುಪಮಾ ಅವರ "ಸಂಕೋಲೆಯೊಳಗಿಂದ" ಕಾದಂಬರಿ ಹೊರಬಿದ್ದಾಗ ನಮ್ಮ ತಂದೆ ರಾ. ಶಿ. ಯವರೊಂದಿಗೆ ಅದರ ಬಗ್ಗೆ ಚರ್ಚಿಸಿದ್ದು ಚೆನ್ನಾಗಿ ನೆನಪಿದೆ. ಆ ಸಂದರ್ಭದಲ್ಲಿ ನನ್ನ ಗೆಳತಿ ಆಗಲೇ ಪುಸ್ತಕ ಬರೆದುಬಿಟ್ಟಳಲ್ಲಾ ಎಂಬ ಹೆಮ್ಮೆ. ಹಾಗೂ ಮಿಕ್ಕವರ ಅಭಿಪ್ರಾಯ ಏನಿದೆ ಎಂದು ತಿಳಿಯುವ ಕುತೂಹಲವೂ ಸೇರಿತ್ತು. "ನೋಡು, ಡಾಕ್ಟರಾದರೆ ಇದೊಂದು ಅನುಕೂಲ. ನಾನಾ ರೀತಿಯ ಜನರನ್ನು ನೈಜ ಸ್ವರೂಪದಲ್ಲಿ ಕಾಣಬಹುದು. ನೋವಿನಲ್ಲಿ ನಟನೆ ಇರುವುದಿಲ್ಲ. ಬರೆಯಲು ಬೇಕಾದಷ್ಟು ವಿಷಯ ಸಿಗುತ್ತದೆ. ವೃತ್ತಿ ಯಾವುದೇ ಆಗಲಿ, ವ್ಯಕ್ತಿಯ ಪರಿಸರ, ವಿದ್ಯಮಾನ, ಬದುಕುವ ಬಗೆ ಎಲ್ಲವನ್ನೂ ಕುರಿತು ಬರೆದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಯಾವ ಸಾಹಿತ್ಯ ಜನಜೀವನವನ್ನು ಪ್ರತಿಬಿಂಬಿಸುತ್ತದೋ ಅದು ಜನಪ್ರಿಯವಾಗುತ್ತದೆ, ಶೈಲಿ ಸರಳವಾಗಿದ್ದರೆ" ಎಂದಿದ್ದರು ರಾ. ಶಿ. ಯವರು.

ಭಾನುವಾರ ಸಂಜೆ ಅನುಪಮಾ-ನಿರಂಜನ ಅವರ ಮದುವೆಯ ನಂತರ ಆರತಕ್ಷತೆಗೆ ಹೋಗಿ ಬಂದು ತಂದೆಯವರು "ನಿನ್ನ ಕ್ಲಾಸ್‌ಮೇಟ್ ಅಂತೆ, ಆಕೆಯ ಮದುವೆ ನಿರಂಜನರೊಡನೆ ಆಯಿತು. ಸಾಹಿತ್ಯಾಭಿರುಚಿ ಇದ್ದವರು ಒಬ್ಬರನ್ನೊಬ್ಬರು ಅರಿತು ಮದುವೆಯಾದರೆ ಬಾಳು ಬಲು ಹಿತ ಕಣೆ" ಎಂದಿದ್ದರು.

ನನಗೆ ಮದುವೆಯಾಗಿ ಉತ್ತರ ಭಾರತಕ್ಕೆ ಹೊರಟುಹೋದ ಮೇಲೆ ಕನ್ನಡ ಸಾಹಿತ್ಯದೊಂದಿಗೆ ಸಂಪರ್ಕ ಅಪರೂಪವಾಯಿತು. ಬೇಸಿಗೆಯಲ್ಲಿ ತೌರಿಗೆ ಬಂದಾಗ ಮಾತ್ರ ಕನ್ನಡ ಓದಾಣಿಕೆ. ಅನುಪಮಾ ಅವರ ಎಲ್ಲಾ ಹೊಸ ಕಾದಂಬರಿಗಳನ್ನು ಆಸಕ್ತಿಯಿಂದ ಓದುತ್ತಿದ್ದೆ. ಭಾನುವಾರ ಸಂಜೆ ಒಮ್ಮೊಮ್ಮೆ ನಿರಂಜನ ದಂಪತಿಗಳು ತಮ್ಮ ಮಕ್ಕಳೊಂದಿಗೆ ನಮ್ಮ ಮನೆಗೆ ಬರುತ್ತಿದ್ದರು. ನಿರಂಜನ ಅವರು ರಾ.ಶಿ. ಯವರೊಡನೆ ಮಾತಿಗೆ ಕೂತರು. ಮಕ್ಕಳು ನನ್ನ ಮಗಳೊಂದಿಗೆ ಆಟಕ್ಕೆ ಶುರು ಮಾಡಿದರು. ಅನುಪಮಾ ಅವರೊಂದಿಗೆ ನನ್ನ ಹರಟೆ. ಹಳೆಯ ಗೆಳೆತನ, ಬಹು ದಿನದ ನಂತರದ ಭೇಟಿ-ಮಾತಿಗೆ ಕೂತಾಗ ಹೊತ್ತು ಹೋಗಿದ್ದೇ ತಿಳಿಯಲಿಲ್ಲ. "ನಿನ್ನ ಮಗಳ ಹೆಸರೇನು" ಅನುಪಮಾ ಕೇಳಿದರು. "ಬಕುಲ" ಎಂದೆ. "ಹಾಗೆಂದರೆ"? ಎಂದರು. "ಒಂದು ಪುಟ್ಟ ಹೂವಿನ ಹೆಸರು. ಹೂವಿನ ಚೆಲುವಿಗಿಂತ ಕಂಪು ಹೆಚ್ಚು. ಬಾಡಿದರೂ ಪರಿಮಳ ಇರುವ ಪುಷ್ಪ" ಎಂದಿದ್ದೆ. ಅವರಿಗೆ ಆ ಹೆಸರು ಇಷ್ಟವಾಗಿರ ಬೇಕು. ಮುಂದಿನ ಸಾರಿ ಬಂದಾಗ "ಹೃದಯ ವಲ್ಲಭ"ದ ನಾಯಕಿ ಬಕುಲ ಆಗಿದ್ದಳು, ಪುಸ್ತಕ ರಾ.ಶಿ.ಯವರಿಗೆ ಅರ್ಪಿತವಾಗಿತ್ತು.

"ನಗುನಗುತ್ತಾ ಬಂದ ರೋಗಿಗಳ ನೋವು ಸಂಕಟಗಳನ್ನು ವಿಚಾರಿಸಿ, ಸಹೃದಯತೆಯಿಂದ ನಡೆದುಕೊಳ್ಳುವ ನಿಗರ್ವಿ ಡಾಕ್ಟರು" ಎಂದು ಹೆಸರುಪಡೆದಿದ್ದ ಅನುಪಮಾ ಅವರ ಬಗ್ಗೆ ಒಮ್ಮೆ ರಾ.ಶಿ.ಯವರು ನುಡಿದಿದ್ದರು. "ಸಾಹಿತ್ಯದಲ್ಲಿ ಆಸಕ್ತಿ ಇದ್ದು, ವೈದ್ಯರೂ ಆಗಿದ್ದರೆ ಬಹಳಷ್ಟು ಕೆಲಸ ಮಾಡಬಹುದು. ಅನುಪಮಾ ವೈದ್ಯಕೀಯ ಸಾಹಿತ್ಯ ಬರೆಯುವುದನ್ನು ರೂಢಿಸಿಕೊಂಡಲ್ಲಿ ಜನತೆಗೆ ಅರ್ಥವಾಗುವಂತೆ ಸರಳವಾಗಿ ತಿಳಿಯಹೇಳಬಲ್ಲಳು. ಇಂಗ್ಲೀಷ್‌ನಲ್ಲಿ ಇಂತಹ ಸಾಹಿತ್ಯ ಬೇಕಾದಷ್ಟಿದೆ. ಕನ್ನಡದಲ್ಲಿ ಇಂತಹವು ಬಂದರೆ ಬಹಳ ಉಪಯೋಗ" ಎಂದಿದ್ದರು.

ನನ್ನ ಮರುಭೇಟಿಯಲ್ಲಿ ಅನುಪಮಾ ಅವರ "ತಾಯಿ-ಮಗು", "ಕೇಳು ಕಿಶೋರಿ" ಇವುಗಳನ್ನು ಕಂಡೆ. ಈ ವಿಜ್ಞಾನಯುಗದಲ್ಲಿ ಮೂಢನಂಬಿಕೆಗಳನ್ನು ತೊರೆದು, ನಮಗೆ ಒಳಿತಾವುದು, ಕೆಡುಕಾವುದು ಎಂಬುದನ್ನು ಸುಲಭವಾಗಿ ತಿಳಿಯು ವಂತೆ ಹೇಳುವ ಕಲೆ ಅವರದಾಗಿತ್ತು.

ಜಾತಿ, ಕುಲ ಇವುಗಳ ಕಟ್ಟುಪಾಡು ಪ್ರಬಲವಾಗಿ, ಸಮಾಜದಿಂದ ಬಹಿಷ್ಕೃತ ರಾದರೆ ಹೇಗಪ್ಪಾ ಎನ್ನುವ ಕಾಲದಲ್ಲಿ ಅನುಪಮಾ ಅಂತರ್ಜಾತೀಯ ವಿವಾಹ ಮಾಡಿ ಕೊಂಡು, ಬಂದ ಕಷ್ಟ-ಸುಖಗಳನ್ನೆಲ್ಲಾ ಕಹಿ-ಸಿಹಿ ಎಂದು ಉಂಡರು. ಸಮಾಜವನ್ನು ಧೈರ್ಯದಿಂದ ಎದುರಿಸಿದರು. ಹೆಣ್ಣುಮಕ್ಕಳು ಹೊಸ್ತಿಲಿಂದಾಚೆಗೆ ಕಾಲಿಡಬಾರದು, ಮನೆ, ಸಂಸಾರ ಅದರಲ್ಲೇ ಅವಳ ಮುಕ್ತಿ ಎನ್ನುವ ಕಾಲದಲ್ಲಿ, ಕಥೆ, ಕಾದಂಬರಿ;

ಲೇಖನ, ಭಾಷಣ ಎಲ್ಲಾ ಮಾಧ್ಯಮಗಳ ಮೂಲಕ ಸ್ತ್ರೀಯರ ಬಗ್ಗೆ ನಡೆಯುತ್ತಿರುವ ಶೋಷಣೆ, ಅದನ್ನು ಎದುರಿಸುವ ಬಗೆ, ಅದರಿಂದ ನಮ್ಮ ಏಳಿಗೆ ಹೇಗೆ ಸಾಧ್ಯ ಎಂದು ತೋರಿಸಿಕೊಟ್ಟಿದ್ದಾರೆ.

ಬಾಳಿನ ಗುರಿ ಸಾಧಿಸಬೇಕಾದರೆ ಶಿಸ್ತು ಅತ್ಯಗತ್ಯ. ಒಂದು ನಿಮಿಷವೂ ವ್ಯರ್ಥವಾಗದಂತೆ ಅಡಿಗೆ. ತೋಟ, ಮನೆಯ ಓರಣ, ಬರವಣಿಗೆ, ಬಂದು ಹೋಗುವವರ ಆತಿಥ್ಯ, ಅಲ್ಲದೆ ಹೊರಗಿನ ಕಾರ್ಯಕಲಾಪಗಳು ಎಲ್ಲವನ್ನೂ ನಗುಮುಖದಿಂದ, ಉತ್ಸಾಹದಿಂದ ವಿಚಕ್ಷಣೆಯಿಂದ ಮಾಡುತ್ತಾ ಯಾವಾಗಲೂ ಲವಲವಿಕೆಯಿಂದಿರುವ ಅನುಪಮಾ ಅವರ ಸಾಮರ್ಥ್ಯ ನಿಜಕ್ಕೂ ಅನ್ವರ್ಥ.

"ಸಾವಿನ ಬಗ್ಗೆ ಹೆದರಿಕೆಯಿರಲಿಲ್ಲ. ಆದರೆ ಬದುಕಿನ ಬಗ್ಗೆ ವಿಪರೀತ ಗೌರವ ಬಂದುಬಿಟ್ಟಿತು" ಎಂದ ಅನುಪಮಾ ಅವರನ್ನು ಜೇನೆ ಪುನಃ ಪುನಃ ಕಾಡಿದಾಗ "ಇದರಿಂದ ನಿಮಗೆ ಡಿಪ್ರೆಷನ್ ಆಗುವುದಿಲ್ಲವೆ" ಎಂದು ಕೇಳಿದೆ. "ಅದು ಆಗುವುದು ಸಹಜ-ಆಗಲು ಬಿಟ್ಟರೆ ಕೇಳಿದ ತಕ್ಷಣ, ಮುಂದೆ ಮಾಡಬೇಕಾದ ಕೆಲಸಗಳು. ಕಳುಹಿಸಬೇಕಾದ ಲೇಖನಗಳು, ಆಸ್ಪತ್ರೆ ಸೇರುವ ಮೊದಲು ಮುಗಿಸಬೇಕಾದ ಕೆಲಸಗಳ ಪಟ್ಟಿ ಮಾಡಿ, ಮುಗಿಸುವ ಹೊತ್ತಿಗೆ ಡಿಪ್ರೆಷನ್ ಮಾಯ" ಎಂದರು. ಅವರ ಸಹನೆಯ ಬಗ್ಗೆ ರಾ. ಶಿ. ಯವರಿಗೆ ಅಪಾರ ಗೌರವವಿತ್ತು. "ನೋಡು ವಿಧಿ ಟಾಂಗ್ ಕೊಡುತ್ತೆ. ಆದರೆ ಯಾರಿಗೆ ಎದ್ದು ಕೂರುವ ತಾಖತ್ತು ಇರುತ್ತೋ ಅವರಿಗೆ ಅದು ಮತ್ತೆಮತ್ತೆ ಕೊಡುತ್ತೆ" ಎಂದಿದ್ದರು.

ತಂದೆಯವರ ಆರೋಗ್ಯ ದಿನದಿನಕ್ಕೂ ಕ್ಷೀಣಿಸುತ್ತಿತ್ತು. ರಾ. ಶಿ. ಯವರ ಆರೋಗ್ಯ ವಿಚಾರಿಸಿ ಅನುಪಮಾ ಬರೆದ ಯೋಗಕ್ಷೇಮದ ಇನ್‌ಲ್ಯಾಂಡ್ ಪತ್ರವೊಂದು ಯಾವಾಗಲೂ ಪಕ್ಕದ ಮೇಜಿನ ಮೇಲೆ ಇಟ್ಟಿರುತ್ತಿದ್ದರು. ಏಕೆ ಎಂದು ಕೇಳಿದಾಗ "ನನಗೆ ನೋವು ಹೆಚ್ಚಾದಾಗ, ಕೆಮ್ಮಲಾರದೆ ಒದ್ದಾಡುವಾಗ, ಆ ಕಾಗದ ನೋಡಿ ಸಮಾಧಾನ ಮಾಡಿಕೊಳ್ಳುತ್ತೇನೆ" ಎಂದಿದ್ದರು.

ಬಾಳು ಬಹು ನಿಷ್ಠುರ. ಅದನ್ನು ಇದಿರಿಸುವ ರೀತಿ ಅವರವರ ಮನೋಭಾವವನ್ನು ಅವಲಂಬಿಸುತ್ತದೆ. ನಮ್ಮ ಕಾಲದ ಹೆಣ್ಣುಮಕ್ಕಳಿಗೆ ಆಪತ್ತು ಬಂದಾಗ ದೇವರು ದೊಡ್ಡ ಆಸರೆ. ಆದರೆ ಎಂತಹ ಕಷ್ಟ ಬಂದರೂ-ಸನ್ನಿವೇಶದ ಸೂಕ್ಷ್ಮತೆಯನ್ನು ತಿಳಿದು. ಕರ್ತವ್ಯಕ್ಕೆ ಲೋಪ ಬರದಂತೆ ಬದುಕನ್ನು ನಗುಮುಖದಿಂದ ಇದಿರಿಸಿರುವವರು ಬಹಳ ವಿರಳ-ಅವರಲ್ಲಿ ಅನುಪಮಾ ಒಬ್ಬರು. "ನನಗೆ ಕೆಲಸವೇ

ದೇವರು. ಅವನ್ನು ಮಾಡುತ್ತಾ ಇದ್ದರೆ ನನಗಿನ್ನೇನೂ ಬೇಕಿಲ್ಲ. ನನಗೆ ಅದು ಆನಂದ ವನ್ನು ಕೊಡುವುದಲ್ಲದೆ, ನಾಲ್ಕು ಜನಕ್ಕೆ ಖುಷಿಯಾದರೆ ಸಾರ್ಥಕವಲ್ಲವೆ" ಎನ್ನುತ್ತಾರೆ ಅನುಪಮಾ.

ಬೇಂದ್ರೆಯವರು ಒಮ್ಮೆ ಹಾಡಿದ್ದರು :

"ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ ನೀಡುವೆನು ರಸಿಕ! ನಿನಗೆ!
ಕಲ್ಲುಸಕ್ಕರೆಯಂಥ ನಿನ್ನೆದೆಯು ಕರಗಿದರೆ, ಆ ಸವಿಯು ಹಣಸು ನನಗೆ!"

ಮಾದರಿಯ ದಾರಿದೀಪ

- ಟಿ. ಎಸ್. ಸತ್ಯನಾರಾಯಣ ರಾವ್

ಮೈಸೂರಿನಲ್ಲಿ ಕಾಲೇಜು ವ್ಯಾಸಂಗದಲ್ಲಿದ್ದಾಗ, ನನ್ನ ಸಹಪಾಠಿ ಡಿ. ಎಸ್. ರಾಮಕೃಷ್ಣ. ವಿಜ್ಞಾನದ ವಿದ್ಯಾರ್ಥಿಗಳಾದ ನಮಗೆ ಆಸಕ್ತಿ ಇದ್ದದ್ದು ಕನ್ನಡ ಸಾಹಿತ್ಯ ದಲ್ಲಿ. ಮುಖ್ಯವಾಗಿ, ನಾವು ಚರ್ಚೆ ಮಾಡುತ್ತಿದ್ದುದು ಕತೆ ಕಾದಂಬರಿಗಳ ವಿಷಯ ವನ್ನು. "ನಮ್ಮ ಅಕ್ಕ ಅನುಪಮಾ ಸಣ್ಣ ಕತೆ ಬರೆದಿದ್ದಾರೆ, ನೀವು ಓದಿ ಅಭಿಪ್ರಾಯ ತಿಳಿಸಿ" ಎಂದು ರಾಮಕೃಷ್ಣ ನನಗೆ "ಒಂಟಿ ಹಾಯಿ" ಕೊಟ್ಟರು. ಕತೆ ನನಗೆ ಬಹಳ ಇಷ್ಟವಾಯಿತು. ಆದರೂ "ವಿಮರ್ಶಕ"ನಂತೆ ಹೇಳಿದೆ "ಕತೆ ಉದ್ದವಾಯಿತು;ಕಡಿಮೆ ಮಾಡಿದರೆ ಪರಿಣಾಮ ಇನ್ನೂ ಚೆನ್ನಾಗಿರುತ್ತದೆ" ಎಂದು. ಇದರಿಂದ ನನಗೆ ಅನುಪಮಾರವರ ಪರಿಚಯವಾಯಿತು. ವೈದ್ಯಕೀಯ ವಿದ್ಯಾರ್ಥಿನಿಯಾಗಿದ್ದೂ ಸಾಹಿತಿಯಾಗುವ ಇಚ್ಛೆ ಅವರದು. ಸಣ್ಣಕತೆಗಳಿಂದ ಪ್ರಾರಂಭವಾಗಿತ್ತು ಅವರ ಸಾಹಿತ್ಯದ ಬರವಣಿಗೆ.

ಈ ಸಂದರ್ಭದಲ್ಲಿ ರಾಮಕೃಷ್ಣನ ಮೂಲಕ ನನಗೆ ನಿರಂಜನರ ಪರಿಚಯ ವಾಯಿತು. ಶ್ವೇತವಸ್ತ್ರಧಾರಿಯಾದ ನಿರಂಜನರ ಮೋಹಕ ನಗೆ, ಸರಳ, ಸ್ಪಷ್ಟ ಮಾತುಗಳು ಮೋಡಿಮಾಡಿದುವು. ಅನುಪಮಾರವರಿಗೆ ಸ್ಫೂರ್ತಿ ನೀಡಿದ್ದು ನಿರಂಜನ ಎಂದು ಗೊತ್ತಾಗಿತ್ತು. ನಿರಂಜನರ ಸಾಹಿತ್ಯವನ್ನು ನಾನು ಓದಲು ಪ್ರಾರಂಭಿಸಿದ್ದು ಆಗಲೇ. ಅನುಪಮಾ "ವಾಚಾಳಿ" ಎಂದು ನನಗೆ ಅನಿಸಿದರೂ, ನಿರಂಜನ 'ಗಂಭೀರ' ಎಂದೇ ತೋರಿದರು. ನಿರಂಜನ-ಅನುಪಮಾ ವಿವಾಹವಾದರೆ ಎಷ್ಟು ಚೆನ್ನ ಎಂದು ಯೋಚಿಸಿದ್ದೆ. ಅದೂ ಕೂಡಿ ಬಂತು. ಒಂಟಿಕೊಪ್ಪಲಿನಲ್ಲಿ

ಮನೆ ಮಾಡಿ. ನಿರಂಜನ ಸಂಸಾರಿಯಾದರು. ಈ ವಿವಾಹಕ್ಕೆ. ಅನುಪಮಾರವರಿಗೆ ವಿರೋಧ ಬಂದಿದ್ದು ಅವರ ಮನೆಯವರಿಂದಲೇ. ಹಾಗಾಗಿ ನಾನು 'ರಾಯಭಾರಿ' ಯಾಗಿದ್ದೂ ಉಂಟು. ಆ ದಿನಗಳು ನನಗೆ ರೋಮಾಂಚಕಾರಿಯಾಗಿದ್ದು, ನಾನು ಬಹಳ ಉತ್ಸಾಹ. ಸಂತೋಷದಿಂದ ಇದ್ದೆ. ವಿವಾಹದ ನಂತರ ಅನುಪಮಾ ಸಂಬಂಧಿಗಳು ಅವರಿಂದ ದೂರವಾದರು. ಆ ಕೊರಗು ಅವರಲ್ಲಿ ಇನ್ನೂ ಉಳಿದುಕೊಂಡಿದೆ.

ನಿರಂಜನ-ಅನುಪಮಾ ಧಾರವಾಡ ಸೇರಿದರು. ಅಲ್ಲಿ ಅನುಪಮಾ ವೈದ್ಯ ವೃತ್ತಿ ನಡೆಸಿದ ಸಮಯದಲ್ಲಿ, ನಾನು ಶರಾವತಿ ಕಣಿವೆ ಯೋಜನೆಯಲ್ಲಿ ಅಲೆಮಾರಿಯಾಗಿದ್ದೆ. ತೇಜಸ್ವಿನಿಯ ಆಗಮನದ ನಂತರ ಅವರು ಬೆಂಗಳೂರಲ್ಲಿ ನೆಲೆಸಿದರು. ನಾನೂ ಬೆಂಗಳೂರಿಗೆ ಬಂದಿದ್ದೆ. ಅನುಪಮಾ. ಹಗಲು - ಸಂಜೆ. ವೈದ್ಯಕೀಯ ವೃತ್ತಿಯಲ್ಲಿ ತೊಡಗಿದರು. ನಿರಂಜನರ ಬರವಣಿಗೆ ಬೆಳೆಯುತ್ತಲೇ ಇತ್ತು. ನನಗೆ ತೇಜಸ್ವಿನಿಯ ಒಡನಾಟ. ಸೀಮಂತಿನಿಯ ಆಗಮನ ನನಗಂತೂ ಇನ್ನೂ ಹೆಚ್ಚಿನ ಸಂಭ್ರಮ ತಂದಿತು. ಈ ಮಕ್ಕಳೊಡನೆ ನಾನು ಕಳೆದ ಕೆಲವು ವರ್ಷಗಳು ನನಗೆ ಸದಾ ಸ್ಮರಣೀಯ. ನಿರಂಜನ ಬರವಣಿಗೆಯಲ್ಲಿದ್ದಾಗ ಯಾರೂ ಕೊಠಡಿಗೆ ಹೋಗುತ್ತಿರಲಿಲ್ಲ. ಹೀಗಾಗಿ ಆಟ. ಪಾಟಗಳಲ್ಲಿ ನಾವು ಮೂವರೂ ಸಮಯ ಕಳೆಯುತ್ತಿದ್ದೆವು. ಅನುಪಮಾ ಮನೆಗೆ ಬಂದ ನಂತರ ನಾನು ಹೊರಡುತ್ತಿದ್ದೆ. ಸಾಹಿತ್ಯದ ವಿಷಯದ ಬಗ್ಗೆ ನಾನು ಅವರಲ್ಲಿ ಹೆಚ್ಚು ಮಾತಾಡುತ್ತಿರಲಿಲ್ಲ. ಈ ನಡುವೆ ಸ್ವಂತ ನೆಲೆಯಿಲ್ಲದ ನನಗೆ, ನಿರಂಜನ-ಅನುಪಮಾ. ಮನೆ ಪಡೆಯಲು ನೆರವಾದರು. ಅನಂತರ, ಅಲೆಮಾರಿಯಾಗಿದ್ದ ನಾನು. ರುಕ್ಮಿಣಿಯ ಕೈಹಿಡಿದು "ಗೃಹಸ್ಥ"ನಾಗಲು ಕಾರಣರಾದರು.

ಆ ದಿನಗಳಲ್ಲಿ ನಮಗೆಲ್ಲರಿಗೂ ಸಂಭ್ರಮ. ಸಡಗರ. ಸಂತೋಷ. ಹಿಗ್ಗು - ಎಲ್ಲಾ ಇತ್ತು. ಬದುಕು ಸಿಹಿ ಕಹಿಗಳ ಮಿಶ್ರಣ: ಕಷ್ಟ. ಸುಖ-ಇವುಗಳೂ ಅಷ್ಟೇ, ಬೇಕು. ಬೇಡಗಳ ಆಯ್ಕೆ ಸಾಧ್ಯವೇ ಇಲ್ಲ. ಬಂದದ್ದನ್ನೇ ಅನುಭವಿಸಬೇಕು ಎನ್ನುವುದನ್ನು ನಾನು ಅರ್ಥಮಾಡಿಕೊಂಡದ್ದು ನಿರಂಜನ-ಅನುಪಮಾರವರಿಂದಲೇ.

ಸೂಕ್ಷ್ಮ ಮನಸ್ಸಿನವರಾದ ನಿರಂಜನ ಶಾರೀರಿಕ ಶ್ರಮವನ್ನು ನಿರ್ಲಕ್ಷಿಸಿ. ಹಗಲು ರಾತ್ರಿಗಳ ವ್ಯತ್ಯಾಸವಿಲ್ಲದೆ ದುಡಿಯುತ್ತಿದ್ದರು. ಇದ್ದಕ್ಕಿದ್ದಂತೆ, ಪಾರ್ಶ್ವವಾಯುವಿಗೆ ತುತ್ತಾದರು. ಆ ವರ್ತಮಾನ ನನಗೆ ತಿಳಿದದ್ದು ಕೂಡಾ ತೀರಾ ಅನಿರೀಕ್ಷಿತವಾಗಿ. ಇದ್ದಕ್ಕಿದ್ದಂತೆ, ಸಂಜೆ, ನಮ್ಮ ಮನೆಗೆ ಬಂದ ಅನುಪಮಾ, ಪ್ರೀತಿಯ ನಾಯಿ ಬ್ರೂನೋವನ್ನು ನಮ್ಮ ವಶಕ್ಕೊಪ್ಪಿಸಿ ಹೇಳಿದರು: "ನಿರಂಜನರಿಗೆ ಪಾರ್ಶ್ವವಾಯು ಆಗಿದೆ, ಮಕ್ಕಳನ್ನು ಕುಸುಮಾಕರ್‌ರವರ ಮನೆಯಲ್ಲಿ ಬಿಟ್ಟಿದ್ದೇನೆ. ಈಗ ನಾನು

ಮೈಸೂರಿಗೆ ಹೊರಟಿದ್ದೇನೆ" ಹೀಗೆ ಹೇಳಿ ಅಷ್ಟೇ ವೇಗವಾಗಿ ಹೊರಟುಹೋದರು. ನಾನು ಯಾವಾಗಲೂ ನಿಧಾನ ಪ್ರಕೃತಿಯವನು. ಈ ಆಘಾತದ ಸುದ್ದಿಯನ್ನು ಅರ್ಥಮಾಡಿಕೊಳ್ಳಲೂ ನನಗೆ ಸಾಕಷ್ಟು ಸಮಯ ಹಿಡಿಯಿತು. ಆಗಲೂ. ನನಗೆ ಏನು ಮಾಡಬೇಕು ಎಂದು ಹೊಳೆಯಲಿಲ್ಲ. ಆ ನಂತರ, ನನಗೆ ತಿಳಿದುಬಂದಿದ್ದು ನಿರಂಜನ ಮೂರು ದಿನಗಳ ಕಾಲ. ಜೀವನ ಮರಣದ ಉಯ್ಯಾಲೆಯಲ್ಲಿದ್ದರು ಎಂದು.

ಆಗ ಅನುಪಮಾರವರ ಮನಃಸ್ಥಿತಿ ಹೇಗಿದ್ದಿರಬೇಕು? ಆ ದಿನಗಳಲ್ಲಿ. ಅವರಿಗೆ ಪ್ರತಿದಿನವೂ ಒಂದು ರೀತಿಯ ಮಾನಸಿಕ ಹೋರಾಟವೇ. ಮಕ್ಕಳ ಯೋಗ ಕ್ಷೇಮ. ನಿರಂಜನರ ಆರೈಕೆ. ಈ ಸಮಯದಲ್ಲಿ ನಿರಂಜನರ ತಾಯಿಯವರ ಅಳಲನ್ನು ಊಹಿಸಿಕೊಳ್ಳಬೇಕು. ಅಷ್ಟೆ. 'ಶಿವಾ' ಎಂದು ಮಗನನ್ನು ಕರೆಯುತ್ತಿದ್ದರು; ಮಗನ ಕೈ ಹಿಡಿದು ಸಮೀಪ ಕುಳಿತಿರುತ್ತಿದ್ದರು. ಮಗ ಏಕೆ ಹೀಗೆ ಎಂದು ಅವರಿಗೆ ಯೋಚನೆ.

ಕ್ರಮೇಣ. ಪರಿಸ್ಥಿತಿಗೆ ಎಲ್ಲರೂ ಒಗ್ಗಿಕೊಂಡೆವು. ಛಲಗಾರ ನಿರಂಜನ ಆ ಅವಸ್ಥೆಯಲ್ಲಿಯೇ ಸಾಹಿತ್ಯದಲ್ಲಿ ಭಾರಿ ಯೋಜನೆಗಳನ್ನು ಪೂರೈಸಿದರು. ಐದನೆಯ ಬ್ಲಾಕ್‌ನಲ್ಲಿ ಮನೆ ಕಟ್ಟಿಸಿದರು. ಪ್ರವಾಹ ಒಮ್ಮೆ ಬಂದು ಹಾವಳಿ ಮಾಡಿ ಹೋದ ಮೇಲೆ ಶಾಂತಿ ನೆಲೆಸಿತು ಎನ್ನುವಂತೆ, ಹೊಸ ಮನೆಯಲ್ಲಿಯೂ ಹೊಂದಾಣಿಕೆ ಮಾಡಿಕೊಂಡೆವು.

ಬದುಕು ಪರೀಕ್ಷೆಗಳಿಂದಲೇ ಇದೆ. ಕಷ್ಟಗಳು ಬಂದಾಗ ಒಂಟಿಯಾಗಿ ಬರುವುದಿಲ್ಲ. ಈಗ ಅನುಪಮಾರವರ ಸರದಿ. ಅರ್ಬುದ ಇವರನ್ನು ಆರಿಸಿಕೊಂಡಿತು. ಇದರ ಅರಿವಾದಾಗ, ಸಹಜವಾಗಿ ಅನುಪಮಾ ಅಧೀರರಾದರು. ಆದರೆ ಅವರಿಗೆ ಧೈರ್ಯ ಹೇಳಿ, ಪರಿಸ್ಥಿತಿಯನ್ನು ಎದುರಿಸಲು ನೆರವಾದವರು ನಿರಂಜನ. ೧೯೭೮ರಲ್ಲಿ ಅನುಪಮಾ ಅರ್ಬುದ ಸಂಬಂಧವಾಗಿ ಶಸ್ತ್ರಚಿಕಿತ್ಸೆಗೊಳಗಾದರು. ಆ ನಂತರ ಎಲ್ಲರ ಬಲವಂತಕ್ಕೆ "ಅನುಪಮಾ ಚಿಕಿತ್ಸಾಲಯ" ಎರಡು ಹೊತ್ತು ತೆರೆದಿರುವ ಬದಲು. ಒಂದೇ ಹೊತ್ತು ತೆರೆದಿರುವ ವ್ಯವಸ್ಥೆಗೆ ಒಳಪಟ್ಟಿತು. ಮತ್ತೆ, ಅನುಪಮಾ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಾಗ "ಅನುಪಮಾ ಚಿಕಿತ್ಸಾಲಯ" ಶಾಶ್ವತವಾಗಿ ಮುಚ್ಚಿತು. ವೈದ್ಯೆಯಾಗಿ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಸಹಸ್ರಾರು ರೋಗಿಗಳನ್ನು ಗುಣಮುಖ, ನಗುಮುಖರನ್ನಾಗಿ ಮಾಡಿದ್ದ ಅನುಪಮಾ "ನಿವೃತ್ತ"ರಾದಾಗ ಬಹಳ ವ್ಯಥೆಪಟ್ಟರು. ಆವಶ್ಯಕ ಎನಿಸಿದ್ದ ಬಿಡುವು ಆಗ ಅವರಿಗೆ ದೊರೆಯಿತು. "ಈಗ, ಎರಡೂ ಹೊತ್ತು ಬಿಸಿಯಾದ ಊಟ ಮಾಡುತ್ತಿದ್ದೇನೆ" ಎಂದು ಹಾಸ್ಯವಾಗಿ ನನ್ನಲ್ಲಿ ಹೇಳಿದ್ದಾರೆ. ಈ ಬಿಡುವು ಅವರಿಗೆ ಸಾಹಿತ್ಯರಚನೆಗೆ ಉಪಯೋಗವಾಗುತ್ತಿದೆ. ಅವರಿಗೆ ಸಭೆ, ಸಮಾರಂಭ, ಆಕಾಶವಾಣಿ, ದೂರದರ್ಶನ, ಸಮ್ಮೇಳನ ಇವುಗಳಲ್ಲಿ

ಪಾಲ್ಗೊಳ್ಳಲು ಸಾಧ್ಯವಾಗಿದೆ. ಅವರು ಅರ್ಬುದವನ್ನು ದೂರವಿರಿಸುವ ಪ್ರಯತ್ನ ಮಾಡುತ್ತಿದ್ದರೆ, ಆ ಏಡಿ ಇವರನ್ನು ಬಿಡಬೇಕಲ್ಲ. ಬೊಂಬಾಯಿ ಟಾಟಾ ಮೆಮೋರಿಯಲ್ ಆಸ್ಪತ್ರೆ, ಬೆಂಗಳೂರಿನ ಕಿದ್ವಾಯ್ ಸ್ಮಾರಕ ಆಸ್ಪತ್ರೆಗಳ ಉಪಚಾರ ಆಯಿತು.ಬದುಕು ಹೋರಾಟವಾಗಿರಲೇಬೇಕು ಎನ್ನುವುದು, ನಿರಂಜನ-ಅನುಪಮಾರವರ "ಪದ್ಧತಿ" ಯಾಗಿಬಿಟ್ಟಿದೆ! ಸರದಿ ಪ್ರಕಾರ ಇಬ್ಬರ ಆರೋಗ್ಯ ಆತಂಕ ಉಂಟು ಮಾಡುತ್ತಲೇ ಇದೆ. ೧೯೮೮ರ ಏಪ್ರಿಲ್ ೨೫ರಂದು ಅನುಪಮಾರವರಿಗೆ ಮತ್ತೆ ಶಸ್ತ್ರ ಚಿಕಿತ್ಸೆ ಆಗ ಬೇಕಾಯಿತು. ಈ ಸಲ ದೇಹದಾರ್ಢ್ಯ ಕೂಡಾ ಕಡಿಮೆ. ನಮಗೆಲ್ಲ ಆತಂಕ. ಶಸ್ತ್ರ ಚಿಕಿತ್ಸೆಯ ನಂತರ, ಮನೆಯಲ್ಲಿ ನಿರಂಜನ ಒಬ್ಬರೇ ಎಂಬ ಯೋಚನೆ ಅನುಪಮಾ ರನ್ನು ಬಾಧಿಸಿದರೆ, ತಾನು ಆ ಸ್ಥಿತಿಯಲ್ಲಿ ಅನುಪಮಾರ ಸಮೀಪ ಇದ್ದು ಸಮಾಧಾನ ಹೇಳಲು ಆಗುತ್ತಿಲ್ಲವಲ್ಲ ಎಂಬ ಭಾವನೆ ನಿರಂಜನರಿಗೆ.

ಮನೆಗೆ ಬಂದ ಮೇಲೆ, ಜ್ವರ ಇಳಿಮುಖವಾಗದೆ ನಿಶ್ಶಕ್ತಿಯಿಂದ ಬಳಲಿದರು ಎದ್ದು ನಿಲ್ಲಲೂ ಆಗದಂತಹ ಸ್ಥಿತಿಯಲ್ಲಿದ್ದವರು. ಈಗ ಚೇತರಿಸಿಕೊಳ್ಳುತ್ತಿದ್ದಾರೆ. ಓಡಾಟ ಸುಧಾರಿಸಿದೆ; ಗೆಲುವಾಗಿ, ನಗುಮುಖದಿಂದ ಇದ್ದಾರೆ. ಯಥಾಪ್ರಕಾರ, ಬಂದವರಿಗೆ ಅದೇ ರೀತಿಯ ಆತ್ಮೀಯತೆಯ ಸ್ವಾಗತ, ಮಾತು.

ಜೀವನಸಂಧ್ಯಾಕಾಲದಲ್ಲಿ ಪ್ರತಿಯೊಬ್ಬರೂ ಬಯಸುವುದು ಶಾಂತಿ, ನೆಮ್ಮದಿ ಯನ್ನು. ಆದರೆ ನಿರಂಜನರ ದಾರಿ ಸದಾ ಕ್ರಿಯಾತ್ಮಕ. ಪ್ರತಿಯೊಂದರಲ್ಲಿಯೂ ಅವರು ಶಿಸ್ತು, ಶ್ರಮ, ನಿಯಮಗಳ ಪಾಲಕರು. ಅನುಪಮಾ ಈ ಎಲ್ಲ ವಿಷಯ ಗಳಲ್ಲಿಯೂ ಭಿನ್ನ. ಈ ಸಂಧ್ಯಾಕಾಲದಲ್ಲಿ ಏನನ್ನು ಬಯಸಬಹುದು? ವ್ಯಾಸಂಗ ಬರವಣಿಗೆ ಎರಡೂ ಬಿಡಲಾಗದ ಹವ್ಯಾಸಗಳು. ಮುಪ್ಪು ಬರುವುದು ಶರೀರಕ್ಕೆ, ಮನಸ್ಸಿಗಂತೂ ಅಲ್ಲವೇ ಅಲ್ಲ. ಈ "ಅಪೂರ್ವಜೋಡಿ" ಛಲ, ಹೋರಾಟ, ಆತ್ಮ ವಿಶ್ವಾಸಗಳನ್ನು ಕಾಣಬಯಸುವವರಿಗೆ ದಾರಿದೀಪ. ತೇಜಸ್ವಿನಿ, ಸೀಮಂತಿನಿ, ಅನುಪಮಾ, ನಿರಂಜನ ಈ ನಾಲ್ವರೂ, ಚೌಕದ ನಾಲ್ಕು ಬಿಂದುಗಳು; ಒಬ್ಬರಂತೆ ಇನ್ನೊಬ್ಬರು ಇಲ್ಲ, ಎಲ್ಲ ಅರ್ಥದಲ್ಲಿಯೂ "ಸ್ವತಂತ್ರ"ರು. ನನಗೆ ಇವರ ಪರಿಚಯ ಇದೆ ಎಂದು ಹೇಳಬಲ್ಲನೇ ಹೊರತು, ಅರ್ಥಮಾಡಿಕೊಂಡಿದ್ದೇನೆ ಎಂದು ಹೇಳಲಾರೆ. ಆದರೆ, ನಾನು ಈ ಸಂಸಾರದ ನಡುವೆ ಕಳೆಯುತ್ತಿರುವ ಕಾಲದಲ್ಲಿ ಕಲಿಯುತ್ತಲೇ ಇದ್ದೇನೆ. ಅವರಿಗೆ ನಾವು ಕೋರುವಂತಹುದೂ ಇಲ್ಲ, ಕೊಡುವಂತಹುದೂ ಇಲ್ಲ, ಭಾವನೆಗಳ ಅಲೆಗಳು ಮನಸ್ಸಿನಲ್ಲಿ ಇರುವಾಗ ಹೆಚ್ಚು ಮಾತು ಹೊರಡುವುದಿಲ್ಲ, ಮೌನವೇ ಲೇಸು. ಇವರು ಹೀಗೆಯೇ ನನ್ನಂತಹವರಿಗೆ ದಾರಿದೀಪವಾಗಿರಲಿ, ಬೆಳಕು ತೋರುತ್ತಿರಲಿ.

೦ ನನ್ನ ಅಕ್ಕರೆಯ ಅಕ್ಕ

- ನಂದಾ ಡಿ. ಎಸ್.

ವಯಸ್ಸಿನ ಅಂತರ ಇದ್ದಾಗ ಸಾಮಾನ್ಯವಾಗಿ ಸಲಿಗೆ ಮೂಡುವುದು ಅಪರೂಪ; ಅದರಲ್ಲೂ ಅವಿಭಕ್ತ ಕುಟುಂಬಗಳಲ್ಲಿ. ಇದು ಇನ್ನೂ ಹೆಚ್ಚಾಗುವುದು ವಯಸ್ಸಿಗೆ ಬಂದ ಹೆಣ್ಣು ವಿವಾಹವಾಗಿ ದೂರವಿದ್ದಾಗ; ಕೊನೆಯ ತಂಗಿ-ತಮ್ಮಂದಿರಿಗೆ ಅಪರಿಚಿತರಾಗಿ ಉಳಿಯಬಹುದು.

ಬಾಲ್ಯದಲ್ಲಿ ಅಕ್ಕ ಒಬ್ಬರು ಇದ್ದರು ಎಂಬುದೇ ನನಗೆ ತಿಳಿಯದು. ನಂತರ ಪರಿಚಯವಾದದ್ದು ತಂದೆಯನ್ನು ಅನಾರೋಗ್ಯ ನಿಮಿತ್ತ ಆಸ್ಪತ್ರೆಗೆ ಸೇರಿಸಿದಾಗ. ಮುಂದೆ ತಂದೆಯವರು ಮರಣಹೊಂದಿದಾಗ. ಅಕ್ಕ ತನ್ನ ಮನೆಗೆ ಮೊದಲ ಬಾರಿಗೆ ಕರೆದೊಯ್ದು ರಾತ್ರಿ ತಲೆಗೆ ಸ್ನಾನ ಮಾಡಿಸಿದರೆಂಬ ಖುಶಿಯಲ್ಲಿ ತಂದೆಯ ಆ ದಿನದ ಸಾವಿನ ಬಗ್ಗೆ ಗಮನವಿರಲಿಲ್ಲ. ಅಲ್ಲಿಂದ ಮುಂದೆ ಅಕ್ಕನ ಪರಿಚಯಕ್ಕಿಂತ ಅವರ ಮಗಳ ಜೊತೆ ನನ್ನ ಬಾಂಧವ್ಯ-ಸ್ನೇಹದ ಬೆಸುಗೆ ಗಾಢವಾಗುತ್ತಾ ಬಂತು.

ವಿದ್ಯಾಭ್ಯಾಸದ ನಂತರ ಕೆಲಸಕ್ಕೆ ಸೇರುವ ಹಂತದಲ್ಲಿ ಅಕ್ಕನ ಜೊತೆಗಿನ ಸಂಬಂಧ ದಟ್ಟವಾಗುತ್ತಾ ಬಂದಿತು. ನನ್ನೆಲ್ಲ ಬೇಸರ, ದುಃಖ, ಸಂತೋಷ ಹಂಚಿಕೊಂಡು ಒಂದಾಗುತ್ತಾ ಬಂದೆ. ಅಕ್ಕನಾಗಿ, ಗೆಳತಿಯಾಗಿ, ನನ್ನ ಬಾಳಿನಲ್ಲಿ ಅವರು ಬೆರೆತುಹೋದರು. ಒಟ್ಟಿನಲ್ಲಿ ನನ್ನೆಲ್ಲಾ ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತಾ; ಕಾಲಕಾಲಕ್ಕೆ ಸೂಕ್ತ ಸಲಹೆಗಳನ್ನು ಕೊಡುತ್ತಾ ಬಂದರು.

ಅವರ ವೈಯಕ್ತಿಕ ಜೀವನವನ್ನು ಕಂಡಾಗ, ನನಗರಿವಾಗದೆಯೇ....ಆ ರೀತಿಯ ಜೀವನ ಎಷ್ಟು ಚೆಂದ! ಪರಸ್ಪರ ಸಹಬಾಳ್ವೆಯಿಂದ ಬದುಕುವ ಗಂಡ-ಹೆಂಡಿರು! ಅಂಥ ಜೀವನವನ್ನು ನಾನು ಸಾಗಿಸುವಂತಾದರೆ ಎಷ್ಟು ಚೆನ್ನ! ಎಂಬೆಲ್ಲಾ ಅನಿಸಿಕೆಗಳು ನನ್ನಲ್ಲಿ ಮೂಡತೊಡಗಿದವು. ಆದರೂ ನನಗೆ ಮೊದಲು ಮುಖ್ಯವಾದದ್ದು ಓದಿ ಕೆಲಸಕ್ಕೆ ಸೇರಿ, ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು. ನಂತರ ಪ್ರೀತಿ-ಪ್ರೇಮ ಜಗತ್ತು ಎಂಬ ನಿರ್ಧಾರ ಎಲ್ಲಕ್ಕಿಂತ ಗಟ್ಟಿಯಾಗಿತ್ತು. ಸುತ್ತಲಿನವರು 'ಅಂತರಜಾತಿಯ ವಿವಾಹ ಮಾಡಿಕೊಳ್ಳುತ್ತೀಯಾ?' ಎಂದಾಗ ನನ್ನ ಉತ್ತರ 'ಯಾಕಾಗಬಾರದು?' ಎಂಬುದಾಗಿತ್ತು. ಇಂತಹ ಸಂದರ್ಭಗಳಲ್ಲಿ ನನ್ನಲ್ಲಿನ ಸುಪ್ತಮನಸ್ಸು ಜಾಗೃತವಾಗಿ ವಿಚಾರಮಂಥನಕ್ಕೆ ತೊಡಗುತ್ತಿತ್ತು. ಅಂತೂ ಕೊನೆಗೆ ನಾನು ಇಷ್ಟಪಟ್ಟ ಬದುಕನ್ನು ಪಡೆಯುವಲ್ಲಿ ಯಶಸ್ವಿಯಾದೆ.

ಅಕ್ಕನ ಸಾಹಿತ್ಯಿಕ ಪ್ರಪಂಚದ ಬಗ್ಗೆ ಸಾಮಾನ್ಯವಾಗಿ ಅವರು ಹೇಳುತ್ತಿದ್ದ ವಿಷಯಗಳನ್ನು ಕೇಳುತ್ತಿದ್ದೆನೆ ಹೊರತು ಆ ಬಗ್ಗೆ ನನ್ನ ಅಭಿಪ್ರಾಯಗಳನ್ನು ಅವರ ಮುಂದೆ ಹೇಳುತ್ತಿದ್ದುದು ತುಂಬಾ ಅಪರೂಪ. ಅದನ್ನ ಈ ಕೆಲಸವನ್ನು ನನ್ನ ಇತರ ಕಾರ್ಯಕ್ಷೇತ್ರದಲ್ಲಿ ಮಾಡುತ್ತಿದ್ದೆ. ಈ ವಿಷಯವನ್ನು ಆಗಾಗ್ಗೆ ಅವರಲ್ಲಿ ಹೇಳುತ್ತಿದ್ದೆ.

ಅಕ್ಕನಾಗಿ, ಗೆಳತಿಯಾಗಿ, ತಾಯಿಯಾಗಿ ನನ್ನಲ್ಲಿ ಬೆರೆತುಹೋದ ಅನುಪಮಾ ಇಂದಿಗೂ ಆ ಸ್ಥಾನದಲ್ಲೇ ಉಳಿದಿದ್ದಾರೆ.

ಸಾಹಿತಿ ಅನುಪಮಾ ಸೋದರಿಯಾದಾಗ ೧

- ಕಾಮಾಕ್ಷಿ ಧಾರೇಶ್ವರ

ಸುಪ್ರಸಿದ್ಧ ಲೇಖಕಿ ಅನುಪಮಾರ ಬಗ್ಗೆ ನಾನು ಬರೆಯುವುದೆಂದರೆ-ಕುರುಡರು ಆನೆಯನ್ನು ಕೈಯಿಂದ ಮುಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದಂತಾಗಬಹುದೇನೋ! ಸಾಹಿತಿ ಅನುಪಮಾ ನನಗೆ ಎಂದಿನಿಂದಲೂ ಪರಿಚಿತರೇ ಎನ್ನಬಹುದು; ಅವರ ಕತೆ-ಕಾದಂಬರಿಗಳಿಂದ-ಲೇಖನಗಳಿಂದ. ಅವರ ಕಾದಂಬರಿಯ ವಸ್ತು, ಲೇಖನ ಶೈಲಿ ಎಲ್ಲಾ ನನಗೆ ಅಚ್ಚು-ಮೆಚ್ಚು. ನಾನು ಓದಿದ ಅವರ ಕಾದಂಬರಿಗಳಲ್ಲಿ ನನಗೆ ಹೆಚ್ಚು ಇಷ್ಟವಾದದ್ದು ಅವರ 'ಮಾಧವಿ'. 'ನೆನಪು; ಸಿಹಿ-ಕಹಿ'ಯ ಸ್ವಾದ ಸವಿಯಲಿಕ್ಕಾಗಿಯೇ ತರಂಗ ವಾರಪತ್ರಿಕೆಯನ್ನು ಕೊಳ್ಳಲು ಪ್ರಾರಂಭಿಸಿದ್ದೆ.

ಅದರೆ ಅವರನ್ನು ಪ್ರತ್ಯಕ್ಷ ಕಾಣುವ, ಮಾತನಾಡುವ ಸದವಕಾಶ ಸಿಕ್ಕಿದ್ದು ೧೯೮೪ರ ಜನವರಿಯಲ್ಲಿ; ನನ್ನ ಮಗ ವಿವೇಕ ಹಾಗೂ ಅವರ ಮಗಳು ತೇಜಸ್ವಿನಿ ವಿವಾಹವಾಗಲು ನಿಶ್ಚಯಿಸಿದ್ದರ ಹಿನ್ನೆಲೆಯಲ್ಲಿ. ಮಾತಾಡಲು ಸ್ವತಃ ನಿರಂಜನರೇ ನಮ್ಮನ್ನು ತಮ್ಮ ಮನೆಗೆ ಆಮಂತ್ರಿಸಿದ್ದರು, ತಮಗೆ ನಾವಿದ್ದಲ್ಲಿಗೆ ಬರಲು ಸಾಧ್ಯವಾಗದ ಮೂಲಕ.

ಕನ್ನಡದ ಖ್ಯಾತ ಬರಹಗಾರ್ತಿ ಅನುಪಮಾರನ್ನು ಪ್ರತ್ಯಕ್ಷ ಕಂಡು ಮಾತಾಡುವ ಸಂತೋಷ ಒಂದು ಕಡೆಯಾದರೆ, ಇಂಥ ಪ್ರಸಿದ್ಧ ವ್ಯಕ್ತಿಯೊಡನೆ ಹೇಗೆ ಮಾತಾಡುವುದು? ವ್ಯವಹರಿಸುವುದು ಹೇಗೆ? ಎಂಬ ಅಳುಕು-ಸಂಕೋಚ ಇನ್ನೊಂದು ಕಡೆ. ಆ ದಿನ ಅವರ ನಿವಾಸ 'ಕಥ'ಯಲ್ಲಿ ಕಾಲಿಟ್ಟಾಗ ಎದುರಿಗೇ ಬಂದು ನಿಂತ ಅನುಪಮಾ ಚಿರಪರಿಚಿತರಂತೆ ಕಂಡರು. ಅವರ ಸರಳ-ಸಜ್ಜನಿಕೆಯ ನಡೆ-ನುಡಿ; ಸ್ನೇಹಮಯ

ನಡೆವಳಿಕೆ ನನ್ನ ಸಂಕೋಚಗಳನ್ನೆಲ್ಲ ದೂರವಾಗಿಸಿ ಆತ್ಮೀಯ ಸೋದರಿಯ ಪರಿಚಯ ಮಾಡಿಸಿದವು. ಅಂದಿನಿಂದ ನನಗೆ ಅವರು ಬರೇ ಸಾಹಿತಿ ಅನುಪಮಾರಾಗಿರದೆ ಸೋದರಿ ಅನುಪಮಾ ಆಗಿದ್ದಾರೆ. ನಮ್ಮೆರಡು ಕುಟುಂಬಗಳ ಸಂಬಂಧ ಶಾಶ್ವತವಾದ ಸುಮಧುರವಾದ ಅನುಬಂಧವಾಗಿದೆ.

ಸೋದರಿ ಅನುಪಮಾರಲ್ಲಿ ನಾನು ಎರಡು ವ್ಯಕ್ತಿಗಳನ್ನೂ ಗುರುತಿಸಿದ್ದೇನೆ. ಒಬ್ಬಳು ವೈದ್ಯೆ ವೆಂಕಟಲಕ್ಷ್ಮಿ! ಇನ್ನೊಬ್ಬಳು ಸಾಹಿತಿ ಅನುಪಮಾ! ಅವರು ಈ ಎರಡು ವಿಭಿನ್ನ ಕ್ಷೇತ್ರಗಳನ್ನೂ ತನ್ನದಾಗಿಸಿಕೊಂಡು ಯಶಸ್ವಿಯಾದರು. ಅವರು ಜನಪ್ರಿಯ ಲೇಖಕಿಯಾದಂತೆ ಒಳ್ಳೆಯ ವೈದ್ಯೆಯೂ ಹೌದು. ಅವರ ಕತೆ-ಕಾದಂಬರಿಗಳಷ್ಟೇ ವೈದ್ಯಕೀಯ ಲೇಖನಗಳೂ ಪ್ರಸಿದ್ಧ-ಪ್ರಯೋಜಕ!

ಅನುಪಮಾ-ನಿರಂಜನ ಕನ್ನಡ ಸಾಹಿತ್ಯಲೋಕದ ಒಂದು ಅಪರೂಪದ ಜೋಡಿ, ನಿರಂಜನರು ಒಂದು ಕಡೆ ಹೇಳಿದ್ದಾರೆ: "ಸಾವಿತ್ರಿ ಸತ್ಯವಾನನನ್ನು ಬದುಕಿಸಿದಂತೆ ಅನುಪಮಾ ನನ್ನನ್ನು ಉಳಿಸಿಕೊಂಡರು" ಇವರದು ಸಾವಿತ್ರಿ-ಸತ್ಯವಾನರ ಜೋಡಿ! ಶಿವ-ಶಕ್ತಿಯರ ಜೋಡಿ.

ಪ್ರಜಾವಾಣಿಯ ಫೆಬ್ರುವರಿ ೧೪-೧೯೮೮ರ ಸಂಚಿಕೆಯ 'ಸಂಪ್ರತಿ'ಯಲ್ಲಿ ಡಾ। ಹಾ. ಮಾ. ನಾಯಕರು ಖ್ಯಾತ ತಮಿಳು ಲೇಖಕ ದಿ। ಅಖಿಲನ್‌ರ ಒಂದು ಮಾತನ್ನು ಉದ್ಧರಿಸಿದ್ದಾರೆ. "ನಾವು ಹೇಗೆ ಬದುಕಿದ್ದೇವೆ ಎಂಬುದು ಮುಖ್ಯವಲ್ಲ. ಏನು ಮಾಡುತ್ತಿದ್ದೇವೆ ಎಂಬುದು ಮಹತ್ವದ್ದು." ಈ ಮಾತು ಇವರ ಬದುಕಿಗೆ ಎಷ್ಟೊಂದು ಸಮಂಜಸ!

ಗೆಲುವಿನ ರೂವಾರಿ

-ಎಂ. ಎಸ್. ಸುಮಿತ್ರಾ

ಮಟಮಟ ಮಧ್ಯಾಹ್ನ. ಸೂರ್ಯ ನಿರ್ದಯನಾಗಿ ಭೂತಾಯಿಯನ್ನು ತೀಕ್ಷ್ಣ ಕಿರಣಗಳಿಂದ ಘಾಸಿಗೊಳಿಸುತ್ತಿದ್ದ. ಹಕ್ಕಿಗಳು ಕೂಡಾ ಮರದ ನೆರಳನ್ನು ಆಶ್ರಯಿಸಿದ್ದುವೇನೋ? ಒಂದರ ಸುಳಿವೂ ಇರಲಿಲ್ಲ. ನಾನು, ತಂಗಿ ಕಮಲ ರೂಮಿನಲ್ಲಿ ಕೂತು ಹರಟುತ್ತಿದ್ದೆವು. ಊಟ, ಚುಟುಕು ನಿದ್ದೆ ಮುಗಿದಿತ್ತಾಗಿ ಇಬ್ಬರಲ್ಲೂ ಲವಲವಿಕೆ ತುಂಬಿತ್ತು. ನಮ್ಮ ಮಾತಿನ ಲಹರಿಗೆ ಬ್ರೇಕ್ ಹಾಕುವಂತೆ ಕೇಳಿಬಂತು ಧ್ವನಿ-

"ದಾನಸುವರ ಮನೆ ಇದೇನಾ?"

ನಾವಿಬ್ಬರೂ ಹೊರಕ್ಕೆ ಬಂದೆವು. ಸರಳ ಉಡುಪು ಧರಿಸಿದ್ದ ಹದಿಹರೆಯದ ಹುಡುಗಿಯೊಬ್ಬರು ವರಾಂಡಾದಲ್ಲಿ ನಿಂತಿದ್ದರು. ಸುಟಿ, ಕುತೂಹಲ. ದಾಕ್ಷಿಣ್ಯ ಸೂಸುತ್ತಿದ್ದ ಕಣ್ಣುಗಳು, ಮುಗುಳ್ನಗುತ್ತಿದ್ದ ತುಟಿಗಳು. ನಮ್ಮನ್ನು ನೋಡಿ–

"ನಮಸ್ಕಾರ. ವಾಣಿಯವರು ಇದಾರಾ?" ಎಂತ ವಿಚಾರಿಸಿದರು.

"ಬನ್ನಿ ಒಳಗೆ. ಅಮ್ಮ ಇದಾರೆ. ಕರ್ಕೊಂಡು ಬರ್ತೀನಿ ಅವರನ್ನ".

ಡ್ರಾಯಿಂಗ್ ರೂಮಿನಲ್ಲಿ ಅವರನ್ನು ಕೂರಿಸಿ, ಕಮಲ ಒಳಕ್ಕೆ ಹೋದಳು. ನಾನು ಅವರೊಡನೆ ಮಾತಾಡುತ್ತಾ ಇದ್ದೆ. ಕಮಲ ಅಮ್ಮನನ್ನು ಕರೆದುಕೊಂಡು ಬಂದಳು. ಹುಡುಗಿ ಎದ್ದು ನಿಂತು-

"ನಮಸ್ಕಾರ ವಾಣಿಯವರೇ. ನಾನು ಅನುಪಮಾ. ಇಲ್ಲಿ ಮೆಡಿಕಲ್ ಕಾಲೇಜಿಗೆ ಸೇರಿಕೊಂಡಿದೀನಿ. ನಿಮ್ಮನ್ನು ಕಾಣಬೇಕೆಂದು ಎಷ್ಟೋ ದಿವಸಗಳಿಂದ ಹಂಬಲಿಸುತ್ತಿದ್ದೆ. ಇವತ್ತು ನನ್ನ ಆಸೆ ನೆರವೇರಿತು ನೋಡಿ". ತುಂಬು ಹೃದಯದಿಂದ ಹೇಳಿದರು.

ಅವರ ಕೃತಿಗಳ ಬಗ್ಗೆ ಮೆಚ್ಚುಗೆ ಸೂಚಿಸಿ ಮಾತಾಡಿದರು ಅಮ್ಮ. ನಾವೂ ಮಾತಿನಲ್ಲಿ ಭಾಗಿಯಾದೆವು.

ನಾನು ಅನುಪಮಾರನ್ನು ಮೊದಲು ಕಂಡದ್ದು ಹೀಗೆ. ಅವರು ನಮ್ಮ ಮನೆಗೆ ಆಗಾಗ ಬರುತ್ತಿದ್ದರು. ವಯಸ್ಸಿನ ಅಂತರ ಮರೆತು ಅಮ್ಮ, ಅನುಪಮಾ ಆತ್ಮೀಯ ಗೆಳತಿಯರಾದರು. ನಾವಿಬ್ಬರಂತೂ ಸರಿಯೇ ಸರಿ. ಹೆಣ ಕುಯ್ಯಲು ಚಾಕು ಹಿಡಿಯುವ ಕೈ ಪೆನ್ ಹಿಡಿದು ಸುಂದರ ಸಾಹಿತ್ಯ ರಚಿಸುವುದಲ್ಲ ಅಂತ ನಮಗೆ ಅಚ್ಚರಿ! ಅನುಪಮಾ ಬಂದರೆ ನಾವೂ ಮಾತಿಗೆ ಸೇರಿಕೊಳ್ಳುತ್ತಿದ್ದೆವು.

ನನಗೆ ಆಗಿನ್ನೂ ಸಾಹಿತ್ಯದ ಬಗ್ಗೆ ಒಲವು ಮೂಡಿರಲಿಲ್ಲ. ಕಥೆ, ಕಾದಂಬರಿಗಳನ್ನು ಆಸಕ್ತಿಯಿಂದ ಓದುತ್ತಿದ್ದೆ ಅಷ್ಟೇ. ವಿಮರ್ಶಿಸುವ ಕೆಲಸಕ್ಕೆ ಕೈಹಾಕಿರಲಿಲ್ಲ. ಅನುಪಮಾರ ಕೃತಿಗಳನ್ನೂ ಓದಿದ್ದೆ. ಓದಿ ಆನಂದಿಸಿದ್ದೆ.

ಅನುಪಮಾರ ತಂದೆಗೆ ಮೈಸೂರಿಗೆ ವರ್ಗವಾದುದರಿಂದ ಅವರಿಗೆ ಹಾಸ್ಟೆಲ್ ವನವಾಸ ತಪ್ಪಿತು. ನಮ್ಮಿಬ್ಬರನ್ನೂ ಮನೆಗೆ ಬರಲೇಬೇಕೆಂದು ಬಲವಂತ ಮಾಡಿದರು. ಒಂದು ಸಂಜೆ ನಾವಿಬ್ಬರೂ ಅವರ ಮನೆಗೆ ಹೋದೆವು. ಮಹಡಿಯ ಮೇಲಿದ್ದ ತಮ್ಮ ರೂಮಿಗೆ ನಮ್ಮನ್ನು ಕರೆದೊಯ್ದರು. ನಾವು ಹೋಗಿದ್ದು ಅವರಿಗೆ ತುಂಬಾ ಸಂತೋಷ ಉಂಟುಮಾಡಿತ್ತು. ಅವತ್ತು ಅವರು ತೋರಿಸಿದ ಅವರ ವಿಶ್ವಾಸ ಇವತ್ತಿಗೂ ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿದೆ.

ಮೆಡಿಕಲ್ ಕೊನೆಯ ವರ್ಷ ಮುಗಿಯುವ ಮೊದಲೇ ನಿರಂಜನರೊಡನೆ ಅನುಪಮಾರ ಮದುವೆ ನೆರವೇರಿತು. ಅದು ಸುಲಭವಾಗಿರಲಿಲ್ಲ. ಸುಲಭವಲ್ಲದು ದನ್ನು ಅವರು ಸಾಧಿಸಿದರು. ಅತ್ತೆಮನೆಯಿಂದ ಕಾಲೇಜಿಗೆ ಹೋಗುತ್ತಿದ್ದು, ಮೆಡಿಕಲ್ ಓದಿ, ಮುಗಿಸಿದರು.

ಖಾಸಗಿ ಔಷಧಾಲಯ ತೆರೆಯುವುದೆಲ್ಲಿ? ಅನ್ನೋ ಸಮಸ್ಯೆ ತಲೆ ಎತ್ತಿತು. ಅವರು ಆರಿಸಿಕೊಂಡ ಕ್ಷೇತ್ರ ಧಾರವಾಡ. ಅಲ್ಲೂ ಬದುಕು ಅವರ ಪಾಲಿಗೆ ಸುಗಮ ವಾಗಿರಲಿಲ್ಲ. ಕಷ್ಟಗಳನ್ನೆದುರಿಸುತ್ತ, ಅದರ ಮಧ್ಯೆ ಕ್ಲಿನಿಕ್ ಹಾಗೂ ಸಂಸಾರ ಎಂಬ ಎರಡೂ ದೋಣಿಗಳಲ್ಲಿ ಏಕಕಾಲದಲ್ಲಿ ಕಾಲಿರಿಸಿಕೊಂಡು ದಡಮುಟ್ಟಿದವರು ಅವರು. ಇದರಲ್ಲೇ ಸಾಹಿತ್ಯರಚನೆಯನ್ನೂ ಮಾಡಿದರು. ಅನುಭವಗಳ ಮೂಸೆಯಲ್ಲಿ ಪಕ್ವವಾದ ಹೃದಯ ಮನಸ್ಸುಗಳಿಂದ ಹರಿದುಬಂದುದು ಒಳ್ಳೆಯ ಸಾಹಿತ್ಯವಾಯಿತು.

ಬೆಂಗಳೂರಿಗೆ ಬಂದು ನೆಲಸಿದ್ದು ಮತ್ತೊಂದು ದಿಟ್ಟ ಹೆಜ್ಜೆ. ಬಲು ಬೇಗ ಜನಪ್ರಿಯತೆ ಗಳಿಸಿಕೊಂಡ ಅನುಪಮಾ ಯಶಸ್ಸಿನ ಶಿಖರವೇರುವುದು ತಡವಾಗಲಿಲ್ಲ. ತೇಜಸ್ವಿನಿ, ಸೀಮಂತಿನಿ ಅವರ ಮಕ್ಕಳು. ತೇಜಸ್ವಿನಿಯೂ ಸಾಹಿತ್ಯಕ್ಷೇತ್ರಕ್ಕೆ ಕಾಲಿರಿಸಿ ದ್ದಾರೆ.

ನಿರಂಜನರ ಕಲ್ಪನೆಯ ಕೂಸು 'ಜ್ಞಾನ ಗಂಗೋತ್ರಿ'. ಏಳು ಸಂಪುಟಗಳಲ್ಲಿ ವಿಶ್ವದ ಜ್ಞಾನಭಂಡಾರವನ್ನು ಕಿರಿಯರಿಗಾಗಿ ಸಿದ್ಧಗೊಳಿಸಿದ ಸಾಧಕರು ನಿರಂಜನ. ಆ ಸಾಧನೆಯಲ್ಲಿ ಅನುಪಮಾರ ಕೊಡುಗೆ ಅಲ್ಪವಾಗಿರಲಿಲ್ಲ. ಮೊದಲನೆಯ ಸಂಪುಟ ಹೊರ ಬಂದಾಗಿತ್ತು. ಎರಡನೆಯ ಸಂಪುಟದ ಕೆಲಸ ನಡೆಯುತ್ತಿದ್ದಾಗ ನಿರಂಜನರಿಗೆ ಪಾರ್ಶ್ವವಾಯು ತಗಲಿತು, ಅದೂ ಆತ ಮೈಸೂರಿಗೆ ಬಂದಿದ್ದಾಗ. ಅನುಪಮಾ ಧೈರ್ಯದಿಂದ ಪರಿಸ್ಥಿತಿಯನ್ನೆದುರಿಸಿದರು. ಮೈಸೂರಿನಲ್ಲಿ ಉಳಿದು, ನಿರಂಜನರ ಶುಶ್ರೂಷೆಗೆ ನಿಂತರು. ಅವರ ಸ್ಥಿತಿ ಕೊಂಚ ಸುಧಾರಿಸಿದ ಮೇಲೆ ಬೆಂಗಳೂರಿಗೆ ಕರೆದುಕೊಂಡು ಬಂದರು. ಅದೊಂದು ಹೋರಾಟದ ಕಾಲ. ನಿರಂಜನ ಕೋಲು ಹಿಡಿದು ನಡೆಯುವಂತಾದರು.

ಯೂರೋಪ್-ಅಮೆರಿಕ ಪ್ರವಾಸ ಅನುಪಮಾಗೆ ಬಿಡುವಿಲ್ಲದ ದುಡಿಮೆ ಯಿಂದ ಕೆಲವು ಕಾಲದ ಮಟ್ಟಿಗಾದರೂ ವಿಶ್ರಾಂತಿ ದೊರಕಿಸಿಕೊಟ್ಟಿತು. ಮರಳಿ ಬಂದ ಮೇಲೆ 'ಅಂಗೈಯಲ್ಲಿ ಯೂರೋ-ಅಮೆರಿಕ' ಪುಸ್ತಕ ಬರೆದರು.

ಈ ಎಲ್ಲಾ ಓಡಾಟಗಳ ನಡುವೆ ಕಳ್ಳನಂತೆ ಅನುಪಮಾರ ದೇಹ ಪ್ರವೇಶಿ ಸಿತ್ತು ಕ್ಯಾನ್ಸರ್. ಸ್ವತಃ ವೈದ್ಯರಾದ ಅವರು ಅದನ್ನು ಬೇಗ ಗುರುತಿಸಿ,ಮುಂಬಯಿಗೆ ಹೋಗಿ ಚಿಕಿತ್ಸೆ ಪಡೆದರು. ನಾನು ಅವರ ಆರೋಗ್ಯ ವಿಚಾರಿಸಿ ಕಾಗದ ಬರೆದಿದ್ದೆ.

ಅವರ ಪತ್ರದಲ್ಲಿದ್ದ 'ಸಾವಿನ ಬಾಗಿಲನ್ನು ತಟ್ಟಿ ಬಂದೆ' ವಾಕ್ಯ ನನ್ನ ಮನಸ್ಸಿಗೆ ತಟ್ಟಿತು. ಅವರು ಎಷ್ಟು ನೋವು ಅನುಭವಿಸಿರಬೇಕು? ಎಷ್ಟು ಸಂಕಟಪಟ್ಟರೋ ಎಂದೆಲ್ಲಾ ತಳಮಳಿಸಿದೆ.

೧೯೮೮ರ ಜನವರಿಯಲ್ಲಿ ಕರ್ನಾಟಕ ಲೇಖಕಿಯರ ಸಂಘದವರು ಏರ್ಪಡಿಸಿದ್ದ ಲೇಖಕಿಯರ ಸಮ್ಮೇಳನದಲ್ಲಿ ಅವರ ಭೇಟಿಯಾಯಿತು. ಸಮಾರೋಪ ಸಮಾರಂಭ ದಲ್ಲಿ ಮಾತಾಡುತ್ತಾ ಸಂಘದವರು ತಮ್ಮನ್ನು ಸಮಾರೋಪ ಭಾಷಣ ಮಾಡಲು ಆಹ್ವಾನಿಸಿದಾಗ "ಬದುಕಿದ್ದರೆ ಬರುತ್ತೇನೆ" ಎಂದು ಹೇಳಿದ್ದರಂತೆ, ಅನುಪಮಾ ಬಂದರು, ಭಾಷಣ ಮಾಡಿದರು.

ಸಾವಿಗೆ ಸವಾಲು ಹಾಕಿ ಅವರು ಹೀಗೇ ಅನೇಕ ಕಾಲ ಇರಲಿ ಅಂತ ನನ್ನಾಸೆ.

ಮಮತೆಯ ಮಾಮಿ ೧

- ಡಾ। ರಘುವೀರ ಭಟ್ಟ

ಮೂವತ್ತು ವರ್ಷಗಳ ಹಿಂದಿನ ಘಟನೆ. ಮಾಮಿ ಆಗ ಧಾರವಾಡದಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಳು. ನನಗೆ ಆಗ ಕೇವಲ ೮ ವರ್ಷ ಪ್ರಾಯ. ಕಪಿಚೇಷ್ಟೆ ಮಾಡುತ್ತಿದ್ದಾಗ ಒಮ್ಮೆ ನನ್ನ ಬಲಗಾಲು ಪೂರ್ತಿಯಾಗಿ ಸುಟ್ಟುಹೋಗಿತ್ತು. ಪ್ರತಿ ನಿತ್ಯ ಕಾಲಿಗೆ ಪಟ್ಟಿಹಾಕಲು ದೂರದಿಂದ ಟಾಂಗಾದಲ್ಲಿ ಮಾಮಿ ಬರುತ್ತಿದ್ದಳು. ಅವಳ ಬ್ಯಾಗ್ ಕಸಿದುಕೊಂಡು, ಕಾಲು ಝಾಡಿಸುತ್ತ, ಕೂಗಾಡುತ್ತ ನಾನು ಅವಳಿಗೆ ಪಟ್ಟಿ ಹಾಕಲು ಬಿಡುತ್ತಿರಲಿಲ್ಲ. ಆದರೆ ಶಾಂತವಾಗಿ ನನಗೆ ಸಮಾಧಾನ ಹೇಳಿ, ಪ್ರೀತಿ ಯಿಂದ ಪಟ್ಟಿಯನ್ನು ಹಾಕಿ, ಮಾಮಿ ತನ್ನ ಕಾರ್ಯ ಪೂರೈಸಿ ಹೋಗುತ್ತಿದ್ದಳು. ಅವಳು ತೋರಿದ ಆ ಮಾತೃವಾತ್ಸಲ್ಯವನ್ನು ನಾನು ಮರೆಯಲಾರೆ. ೩೦ ವರ್ಷಗಳು ಕಳೆದರೂ ಆ ಪ್ರೀತಿಯ ಸಂಬಂಧ ನಮ್ಮಲ್ಲಿ ಹಾಗೇ ಉಳಿದುಕೊಂಡು ಬಂದಿದೆ.

೧೯೬೫ರಲ್ಲಿ ವಿಜ್ಞಾನ ಪ್ರದರ್ಶನಕ್ಕಾಗಿ ಶಾಲಾ ಪ್ರತಿನಿಧಿಯಾಗಿ ಬೆಂಗಳೂರಿಗೆ ಹೋಗಿದ್ದೆ. ನಿರಂಜನ ಮಾವಯ್ಯ ಒಂದು ಸಾಯಂಕಾಲ ಬಂದು ಮನೆಗೆ ಕರೆದು ಕೊಂಡು ಹೋದ. ಮಾಮಿ ರಾತ್ರೆ ಆಸ್ಪತ್ರೆ ಕೆಲಸ ಮುಗಿಸಿ ಸಾಕಷ್ಟು ದಣಿದು ಬಂದಳು. ಅನಂತರ ಅಡುಗೆಮಾಡಿ ಪ್ರೀತಿಯಿಂದ ಬಡಿಸಿದಳು. ಹೋಟೆಲ್ ಊಟ ದಿಂದ ಬೇಸತ್ತ ನನಗೆ ಆ ರುಚಿಯಾದ ಊಟ ನೆಮ್ಮದಿ ನೀಡಿತು. ಯಶಸ್ವೀ ವೈದ್ಯ ಳಾದ ಮಾಮಿ ಆದರ್ಶ ಗೃಹಿಣಿ ಕೂಡ ಅಂತ ನನಗೆ ಆಗಲೇ ಮನವರಿಕೆಯಾಯಿತು.

೧೯೭೯ರಲ್ಲಿ ಕ್ಯಾನ್ಸರ್ ಚಿಕಿತ್ಸೆಯ ಸಲಹೆಗಾಗಿ ಮಾಮಿ ಮುಂಬೈಗೆ ಬಂದಿದ್ದಳು. ಚಿಕಿತ್ಸೆಯ ಸಲಹೆ ಪಡೆದು ಎರಡೇ ದಿವಸಗಳಲ್ಲಿ ಬೆಂಗಳೂರಿಗೆ ಹಿಂದಿರುಗುವ ಯೋಜನೆ ಅವಳದಾಗಿತ್ತು. ಮೂರನೇ ಅಂತಸ್ತು ಹತ್ತಿ ನಮ್ಮ ಮನೆಗೆ ಬರಲು ಸಾಧ್ಯವಿಲ್ಲ. ಹಾಗಾಗಿ ಬೇರೆ ಕಡೆ ಉಳಿದುಕೊಳ್ಳುತ್ತಾಳೆ ಅಂತ ನಿರಂಜನ ಮಾಮಯ್ಯ ಪತ್ರದ ಮೂಲಕ ತಿಳಿಸಿದ್ದ. ಮನೆ ಮೂರನೆ ಅಂತಸ್ತಿನಲ್ಲಿದೆ ಅಂತಲೋ ಅಥವಾ ಚಿಕ್ಕದಿದೆ ಅಂತಲೋ ಮಾಮಿ ಮಾನಸಿಕವಾಗಿ ನಮ್ಮಲ್ಲಿ ಉಳಿದುಕೊಳ್ಳಲು ಸಿದ್ಧಳಾಗಿ ಬಂದಿರಲಿಲ್ಲ. ಹಾಗಾಗಿ ಮಾಮಿಯನ್ನು ಕಾಣಲು ಟಾಟಾ ಆಸ್ಪತ್ರೆಗೆ ನಾನು ನಿಶ್ಚಿತ ಸಮಯಕ್ಕೆ ಹೋದೆ. ಡಾ। ಪಿ. ಬಿ. ದೇಸಾಯಿ ಪರೀಕ್ಷಿಸಿದ ನಂತರ ೪೦ ದಿವಸಗಳ ರೇಡಿಯೇಶನ್ ಚಿಕಿತ್ಸೆಯ ಸಲಹೆ ನೀಡಿದರು. ಮುಂಬೈಯಲ್ಲಿ ೨ ತಿಂಗಳ ವಾಸ ಅನಿವಾರ್ಯವಾಯಿತು. ಮಾಮಿ ಯಾರಲ್ಲಿ ಉಳಿದುಕೊಳ್ಳಲಿ ಅಂತ ಚಿಂತಿಸುತ್ತಿದ್ದಳು. ಅವಳನ್ನು ಕಾಣಲು ಬಂದವರೆಲ್ಲ ಆ ಬಗ್ಗೆ ವಿವಿಧ ಸಲಹೆ ನೀಡಿದರು. ನಮ್ಮಲ್ಲಿ ೩ನೇ ಅಂತಸ್ತು ಹತ್ತಿ ಬರಲು ತೊಂದರೆ ಅಂತ ಗೊತ್ತಿದ್ದರೂ, ಏನೋ ಒಂದು ಆಸೆಯಿಂದ ನಮ್ಮಲ್ಲಿ ಉಳಿದುಕೊಳ್ಳುವಂತೆ ಪ್ರೀತಿಯಿಂದ ಆಮಂತ್ರಣ ನೀಡಿದೆ. ಕರುಳಿನ ಕರೆಯನ್ನು ಮಾಮಿ ಆ ಕೂಡಲೇ ಸ್ವೀಕರಿಸಿದಳು. ನನ್ನ ಮನಸ್ಸಿಗೆ ಎಷ್ಟೋ ಹಿತವಾಯಿತು. ಮಾಮಿಯ ಜೊತೆಗೆ ಪ್ರತಿನಿತ್ಯ ಟಾಟಾ ಆಸ್ಪತ್ರೆಗೆ ನನ್ನ ಪ್ರಯಾಣ. ಹೋಗುವಾಗ ಬರುವಾಗ ಚಿಂತೆ, ದುಃಖ, ಅಳುಕು ಯಾವುದೂ ಇಲ್ಲ. ನಮ್ಮ ವೃತ್ತಿಯಲ್ಲಿಯ ಹಾಸ್ಯದ ಅನುಭವಗಳ ವಿನಿಮಯ, ನಗು, ತಮಾಷೆಯ ಮಾತುಕತೆಯಲ್ಲಿ ದಿನ ಕಳೆದದ್ದೇ ಗೊತ್ತಾಗಲಿಲ್ಲ. ಬಿಡುವಿನ ಸಮಯದಲ್ಲಿ ಬಲ್ಲಾಳ, ಮಂಡನ್, ಸುವರ್ಣ, ದೇಸಾಯಿ ಮುಂತಾದವರ ಮನೆಗೆ ಭೇಟಿ. ಒಂದು ದಿವಸ ನೆಹರೂ ಪ್ಲಾನಿಟೋರಿಯಂ ನೋಡಿ ಬಂದೆವು. ಮನೆಯಲ್ಲಿದ್ದಾಗ ಅಡುಗೆ ಮನೆಯಲ್ಲಿ ಅಮ್ಮನ ಜೊತೆ ತಾಸುಗಟ್ಟಲೆ ಹರಟೆ. ಆಗಾಗ ಓದು, ಸ್ವಲ್ಪ ಬರವಣಿಗೆ. ಯಾವಾಗಲೂ ಉತ್ಸಾಹ, ಲವಲವಿಕೆ ಮಾಮಿಯಲ್ಲಿ ಕಂಡುಬರುತ್ತಿತ್ತು. ರೋಗ, ಸುಖ, ದುಃಖ ಇವೆಲ್ಲ ಜೀವನದ ಒಂದು ಅಂಗ. ಅದರ ಬಗ್ಗೆ ಚಿಂತೆಮಾಡದೆ ಬದುಕಿದ್ದಷ್ಟು ದಿವಸ ಜೀವನದಲ್ಲಿ ಒಂದು ಹೊಸತನ, ಅರ್ಥ ಮತ್ತು ಗುರಿ ಹುಡುಕಿಕೊಂಡು ಸಾರ್ಥಕವಾಗಿ ಬಾಳಲು ಕಲಿಯಬೇಕು ಎಂಬುದನ್ನು ಮಾಮಿಯ ಆ ಕೆಲವು ದಿವಸಗಳ ಸಹವಾಸದಿಂದ ಕಲಿತುಕೊಂಡೆ.

ಮಾಮಿಯ ಕೃತಿಗಳಲ್ಲಿ ಮುಖ್ಯವಾಗಿ ವೈದ್ಯಕೀಯ ಹಾಗೂ ಮಹಿಳೆಯರಿಗಾಗಿ ಬರೆದ ಪುಸ್ತಕಗಳನ್ನು ವಿಶೇಷವಾಗಿ ನಾನು ಮೆಚ್ಚಿಕೊಂಡಿದ್ದೇನೆ. ಮಹಿಳೆಯರ ಸಮಸ್ಯೆಗಳನ್ನು ಆಳವಾಗಿ ಅಭ್ಯಾಸಮಾಡಿ, ತಮ್ಮ ವೈದ್ಯಕೀಯ ಅನುಭವವನ್ನು ಚೆನ್ನಾಗಿ ಸೇರಿಸಿ, ಸರಳ ಹಾಗೂ ಸುಂದರ ಶೈಲಿಯಲ್ಲಿ ಸಾಮಾನ್ಯರಿಗೂ ತಿಳಿಯುವಂತೆ ಮಾಮಿ ಬರೆದಿದ್ದಾಳೆ. ಈ ತರದ ಕೃತಿಗಳು ಕನ್ನಡದಲ್ಲಿ ವಿರಳ.

ಆದರ್ಶ ಗೃಹಿಣಿ ಮತ್ತು ಯಶಸ್ವಿ ವೈದ್ಯಳಾದ ಮಾಮಿ ಕಳೆದ ಒಂದು ದಶಕದಲ್ಲಿ ನಾಲ್ಕೈದು ಶಸ್ತ್ರಕ್ರಿಯೆಗೆ ಒಳಗಾದರೂ ಧೈರ್ಯ ಕಳೆದುಕೊಳ್ಳದೆ ನಗು ನಗುತ್ತಾ ಸಾಹಿತ್ಯಸೇವೆಯನ್ನು ಸಾಗಿಸಿಕೊಂಡು ಹೋಗುತ್ತಿರುವುದು ಒಂದು ಪವಾಡವೇ. ಕಳೆದ ತಿಂಗಳು ಮಾಮಿಗೆ ಒಂದು ಪತ್ರ ಬರೆದಿದ್ದೆ. ಆದರೆ ಆ ಪತ್ರ ತಲುಪುವ ವೇಳೆಗೆ ಮಾಮಿ ಆಸ್ಪತ್ರೆಯಲ್ಲಿದ್ದಳು. 'ಆರೋಗ್ಯ ಚೆನ್ನಾಗಿಲ್ಲ;ಮತ್ತೊಂದು ಶಸ್ತ್ರಕ್ರಿಯೆ ಆಗಲಿದೆ. ಹಾಗಾಗಿ ನಿನ್ನ ಪತ್ರಕ್ಕೆ ಉತ್ತರ ಬರೆಯಬಹುದು ಅಥವಾ ಬರೆಯಲಿಕ್ಕೂ ಇಲ್ಲಾ' ಅಂತ ನಿರಂಜನ ಮಾವಯ್ಯ ನಿರಾಸೆಯಿಂದ ಮೇ ೨೫ಕ್ಕೆ ಪತ್ರ ಬರೆದಿದ್ದಾನೆ. ಆದರೆ ಈ ಶಸ್ತ್ರಕ್ರಿಯೆಯನ್ನು ಧೈರ್ಯವಾಗಿ ಎದುರಿಸಿ ಮಾಮಿ ಆದಷ್ಟು ಬೇಗನೆ ಮನೆಗೆ ಬರುತ್ತಾಳೆ. ಅಷ್ಟೇ ಅಲ್ಲ, ತನ್ನ ಈ ಕಹಿ ಅನುಭವವನ್ನೂ ಸಿಹಿಯಾಗಿ ಸುಂದರವಾಗಿ ನಿರೂಪಿಸಿ ಒಂದು ಉತ್ತಮ ಕಾದಂಬರಿಯನ್ನು ಕಥೆಯಿಂದ (ಮನೆಯ ಹೆಸರು) ಪ್ರಕಟಿಸುತ್ತಾಳೆ ಎಂಬ ಭರವಸೆ ನನಗಿದೆ.

ಅನುಪಮ ಗುಣಸಂಪನ್ನೆ ೧೪

-ಶಾಂತಾದೇವಿ ಮಾಳವಾಡ

ಅನುಪಮಾ ಅವರನ್ನು ಕಳೆದ ಮೂವತ್ತು ವರುಷಗಳಿಂದ ಬಲ್ಲೆ. ಹೆಸರಿಗೆ ತಕ್ಕ ಗುಣ. ಎತ್ತರಕ್ಕೆ ತಕ್ಕ ಮೈಮಾಟ. ಹೊಳೆವ ಕಣ್ಣು ಅವರ ಬುದ್ಧಿ ಚಾತುರ್ಯಕ್ಕೆ ಸಾಕ್ಷಿಯಾಗಿವೆ. ವಿಶಾಲವಾದ ಹಣೆ ಹೃದಯದ ವೈಶಾಲ್ಯತೆಯನ್ನು ತೋರುತ್ತದೆ. ಮಂದಸ್ಮಿತ ನಗು ಸ್ನೇಹದ ಸಂಕೇತವಾಗಿದೆ. ಪ್ರತಿಭೆ ಪಾಂಡಿತ್ಯವಿದ್ದರೂ. ಸರಳತೆಯ ಸಾಕಾರ ಮೂರ್ತಿಯಾಗಿದ್ದಾರೆ ಅನುಪಮಾ. ಅವರನ್ನು ಕಂಡರೆ ನನಗೆ ವಾತ್ಸಲ್ಯದ ತಂಗಿಯನ್ನು ಕಂಡಂತೆ ಆಗುವದು.

ಅನುಪಮಾ-ನಿರಂಜನರದು ಅನುರೂಪ ದಾಂಪತ್ಯ. ಅವರದು ಪ್ರೇಮ ವಿವಾಹ-ಅಂತರ್ಜಾತೀಯ ವಿವಾಹ. ಅದೆಷ್ಟೋ ಪ್ರೇಮ ವಿವಾಹಗಳನ್ನು ನೋಡಿದ್ದೇನೆ. ಆರ್ಥಿಕ ಭದ್ರತೆ ದೊರೆಯದೆ ಇದ್ದಾಗ. ಸಾಮಾಜಿಕ ಸಮಾನತೆ ಸಿಗದೆ ಇದ್ದಾಗ, ಸಂಸ್ಕಾರ, ಸಂಸ್ಕೃತಿಗಳು ಭಿನ್ನವಾದಾಗ, ವೈಷಮ್ಯ ತಲೆದೋರಿ ಬಿಡುಗಡೆ ಹೊಂದುವದುಂಟು. ಒಂದೇ ಮನೆಯಲ್ಲಿದ್ದರೂ ಪರಸ್ಪರ ದ್ವೇಷಿಗಳಾಗಿ, ಆಪ್ತೇಷ್ಟರ ಕಣ್ಣಿಗೆ, ಸಮಾಜದ ಕಣ್ಣಿಗೆ ದಂಪತಿಗಳೆಂದು ಬಾಳುವವರೂ ಇದ್ದಾರೆ. ಕಾಮವೇ ಪ್ರೇಮವೆಂದು ನಂಬಿ, ಕೆಲಕಾಲದ ನಂತರ ನಿರಾಶರಾಗಿ ವಿಚ್ಛೇದನ ಪಡೆದವರೂ ಇದ್ದಾರೆ. ಆದರೆ ದಾಂಪತ್ಯ ಬಾಹ್ಯ ಸುಖ - ಸಂಪತ್ತು - ಸೌಕರ್ಯಗಳಿಗೆ ಸೀಮಿತವಾದುದಲ್ಲ.

ನಿಜವಾದ ಪ್ರೇಮ, ಪರಸ್ಪರ ತಿಳುವಳಿಕೆಯಲ್ಲಿದೆ, ಪೂರಕ ಶಕ್ತಿಯಾಗುವುದರಲ್ಲಿದೆ ಎಂದು ನಂಬಿ ಆದರ್ಶ ಬಾಳನ್ನು ನಡೆಸುತ್ತಿರುವವರು, ಅನುಪಮಾ-ನಿರಂಜನರು. ಅವರಿಬ್ಬರೂ ತಮ್ಮ ಜೀವನವನ್ನು ಸಾಹಿತ್ಯಕೃಷಿಗೆ ಮುಡುಪಿಟ್ಟಿದ್ದಾರೆ. ಸದಾ ಉತ್ಸಾಹಿಗಳಾಗಿ ಕಾರ್ಯತತ್ಪರರಾಗಿರುವ ಈ ದಂಪತಿಗಳ ಜೀವನ ಆದರ್ಶವಾಗಿದೆ. ಅವರಿಬ್ಬರಿಗೊದಗಿದ ದೈಹಿಕ ಅನಾರೋಗ್ಯದ ತೊಂದರೆ, ಬೇರೆ ಯಾರಿಗಾದರೂ ಆಗಿದ್ದರೆ, ಸುತ್ತಲಿನ ಪರಿಸರವನ್ನು ಕಹಿಯಾಗಿಸುತ್ತಿದ್ದರು. ದೈನ್ಯತೆಯಿಂದ ಪರರ ಸಹಾನುಭೂತಿಯನ್ನು ಅಪೇಕ್ಷಿಸುತ್ತಿದ್ದರು. ಎಂಥ ಕಠಿಣ ಪರಿಸ್ಥಿತಿ ಒದಗಿದಾಗಲೂ ಪರರ ಸಹಾಯವನ್ನು ಅಪೇಕ್ಷಿಸಿದವರಲ್ಲ. ಸ್ವಾಭಿಮಾನದಿಂದ, ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಡಾ। ಅನುಪಮಾ ಅವರು ರೋಗಿಗಳಿಗೆ ಔಷಧಿ ಕೊಡುವಾಗ ಕಹಿ ಮಾತ್ರೆಗಳಿಗೆ ಸಿಹಿ ಲೇಪಿಸಿದುದನ್ನು ಕೊಡುವುದು ವಾಡಿಕೆ. ಅಂತೆಯೆ ಅನುಪಮಾ ತಮ್ಮ ಜೀವನದಲ್ಲಿ ದೈಹಿಕ ತೊಂದರೆಯನ್ನು ನುಂಗಿ, ಮೇಲಿನ ಸಿಹಿ ಲೇಪನದ ಸವಿಯನ್ನು ಸುತ್ತಲಿನ ಸ್ನೇಹಿತ ವರ್ಗಕ್ಕೆ, ಸಮಾಜಕ್ಕೆ, ಸಾಹಿತ್ಯಕ್ಷೇತ್ರಕ್ಕೆ ಸಲ್ಲಿಸುತ್ತಿದ್ದಾರೆ.

ರೋಗಗಳ ಮೂಲವನ್ನರಿತ ಡಾಕ್ಟರರಿಗೆ ಜೇನೆ, ಬೇಸರಿಕೆ ಬಂದರೆ ಬಹಳ ಕಷ್ಟ. ಎಲ್ಲವನ್ನೂ ಬಲ್ಲ ಡಾ। ಅನುಪಮಾ ಛಲದಿಂದ, ಆತ್ಮವಿಶ್ವಾಸದಿಂದ, ಮಾನಸಿಕ ಸ್ಥಿಮಿತತೆಯಿಂದ ವೀರವಹಿಳೆಯಂತೆ ಬಾಳನ್ನು ಎದುರಿಸುತ್ತಿದ್ದಾರೆ. ನಿರಂಜನರೂ ಅಷ್ಟೇ. ಈ ವರುಷ ಸಾಹಿತ್ಯಪರಿಷತ್ತಿನಲ್ಲಿ ಅವರ ಪುಸ್ತಕ ಪ್ರಕಟನಾ ಸಮಾರಂಭಕ್ಕೆ ಹೋದಾಗ, ವೇದಿಕೆಯನ್ನು ಹತ್ತುವಾಗ ಕಾಲಿನ ತೊಂದರೆಯಿಂದ, ಕಾಲು ಜಾರಿದಾಗ "ಈ ವೇದಿಕೆಯ ಮೇಲೆ ನೂರಾರು ಬಾರಿ ಓಡಾಡಿ ಕಾರ್ಯಮಾಡಿದೆ. ಆದರೆ ಇಂದು ಕನ್ನಡ ತಾಯಿಗೆ ಸಾಷ್ಟಾಂಗ ನಮಸ್ಕಾರ ಮಾಡಿದೆ" ಎನ್ನುವ ಮಾತಿನಲ್ಲಿ ಅವರ ಜೀವನದ ಕೆಚ್ಚು ಅಡಗಿದೆ. 'ನೂರಕ್ಕೆ ೯೦ ರೋಗಗಳು ಅಂಜಿಕೆಯಿಂದ ಬರುತ್ತವೆ. ಶಾಂತಿ, ಸ್ಥಿರತೆಯಿಂದ ಬಂದ ರೋಗಗಳನ್ನು ಎದುರಿಸಿದರೆ ಕಡಿಮೆಯಾಗುತ್ತವೆ' ಎಂಬ ಅನುಭವ ವಾಣಿಯನ್ನು ಅನುಪಮಾ-ನಿರಂಜನರು ನಿತ್ಯಜೀವನದಲ್ಲಿ ಅಳವಡಿಸಿ ಕೊಂಡಿದ್ದಾರೆ, ಒಬ್ಬರಿಗೊಬ್ಬರು ಆಧಾರಸ್ತಂಭಗಳಾಗಿದ್ದಾರೆ. ಅವರ ಬಾಳು ಹೀಗೇ ಸಾಗಲಿ, ಕನ್ನಡ ಸಾಹಿತ್ಯಕಣಜ ಅವರಿಂದ ಸಂಪದ್ಭರಿತವಾಗಲಿ.

ಸಾಂಪ್ರದಾಯಿಕ ಜೀವನ ನಡೆಸಿದ ನಿರಂಜನ ಅವರ ತಾಯಿಯವರ ಆಚಾರ, ವಿಚಾರಗಳಿಗೆ, ನಿತ್ಯನಿಯಮಗಳಿಗೆ ಅನುಕೂಲೆಯಾಗಿ, ಆದರ್ಶ ಸೊಸೆಯಾಗಿ ಬಾಳಿದರು ಅನುಪಮಾ. ನಿರಂಜನರ ಸಾಹಿತ್ಯ ಸಂಪತ್ತು, ಪ್ರೇಮ ಸಂಪತ್ತೇ ಸರ್ವಸ್ವವೆಂದು ನಂಬಿ ಆದರ್ಶ ಪತ್ನಿಯಾಗಿ ಬಾಳುತ್ತಿದ್ದಾರೆ. ಆದರ್ಶ ತಾಯಿಯಾಗಿ ತೇಜಸ್ವಿನಿ, ಸೀಮಂತಿನಿಯರನ್ನು - ಧೀಮಂತಿನಿಯರನ್ನಾಗಿಸಿದ್ದಾರೆ. ತೇಜಸ್ವಿನಿ ಕವಯಿತ್ರಿ. ಚಿಕ್ಕ ವಯಸ್ಸಿನಲ್ಲಿಯೇ ಕವಿತೆಗಳನ್ನು ಬರೆಯಹತ್ತಿದಳು. ಪರಭಾಷೆಗಳ ಕವಿತೆಗಳನ್ನು

ಕನ್ನಡಕ್ಕೆ ಅನುವಾದಿಸಿದ್ದಾಳೆ. ಇಬ್ಬರು ಮಕ್ಕಳೂ ಪ್ರತಿಭಾವಂತೆಯರು, ಅಂತಃಕರುಣೆಯ ಸ್ವಭಾವದವರು, ಸದ್ಗುಣಿಗಳು. ವೈದ್ಯಕೀಯ ವೃತ್ತಿ, ಮಕ್ಕಳಹೊಣೆಗಾರಿಕೆ, ಪತಿಯ ಶುಶ್ರೂಷೆ, ಸಾಹಿತ್ಯ ರಚನೆ, ಸಾಮಾಜಿಕ ಸಂಘಟನೆ, ಮನೆಗೆಲಸಗಳಲ್ಲಿ ಬಿಡುವಿಲ್ಲದೆ ಪರಿಶ್ರಮಿಸುವ ಅನುಪಮಾ, ಅತಿಥಿಗಳು ಯಾವ ವೇಳೆಯಲ್ಲಿಯೋ ಮನೆಗೆ ಬರಲಿ, ಅವರನ್ನು ನಗುನಗುತ್ತ ಸ್ವಾಗತಿಸಿ ಸತ್ಕರಿಸುತ್ತಾರೆ. ಸ್ನೇಹಜೀವಿ ಅನುಪಮಾ ಅವರು ಎಲ್ಲರೊಂದಿಗೆ ಬೆಲ್ಲದ ಹೇರಾಗಿ ಬಾಳುತ್ತಿದ್ದಾರೆ. ಅವರ ಆತ್ಮೀಯತೆಗೆ ನಾನು ಮಾರುಹೋಗಿದ್ದೇನೆ.

ನಾನು ಧಾರವಾಡದಲ್ಲಿ ಓರ್ವ ಮಹಿಳಾ ಡಾಕ್ಟರ್ ಬಳಿ ಔಷಧಿಗಾಗಿ ಹೋಗುತ್ತಿದ್ದೆ. ಹೋದಾಗಲೆಲ್ಲ ಅವರು ಈಜಿಚೇರಿನಲ್ಲಿ ಕುಳಿತುಕೊಂಡು ಗಂಟು ಮುಖದಿಂದ, 'ಬರ್ರಿ ನನಗ್ಯ ತಲೆಶೂಲಿ ಎದ್ದ್ವದ, ಕಾಲುನೋವು' ಎನ್ನುವುದು ವಾಡಿಕೆಯಾಗಿತ್ತು. ಇಂಥ ಡಾಕ್ಟರನ್ನು ಕಂಡರೆ ರೋಗಿಗಳ ರೋಗ ಉಲ್ಬಣಗೊಳ್ಳದಿದ್ದೀತೆ? ಸೋದರಿ ಅನುಪಮಾ ಧಾರವಾಡದಲ್ಲಿ ಕೆಲವೇ ವರುಷ ಇದ್ದರು. ಅಷ್ಟೇ ವೇಳೆಯಲ್ಲಿ 'ಡಾಕ್ಟರ ಕೈಗುಣ ಒಳ್ಳೆಯದು. ರೋಗಿಗಳನ್ನು ಅಂತಃಕರುಣೆಯಿಂದ ನೋಡಿಕೊಳ್ಳುತ್ತಾರೆ' ಎಂದು ಜನಪ್ರಿಯರಾಗಿದ್ದರು. ಅವರ ಚೊಚ್ಚಿಲು ಬಸಿರು, ಬಾಣಂತನಗಳು ಧಾರವಾಡದಲ್ಲಿ ಆದವು. ಈ ಸಾಹಿತ್ಯ ದಂಪತಿಗಳು ಬಿಡುವಾದಾಗ ನಮ್ಮ ಮನೆಗೆ ಬರುತ್ತಿದ್ದರು. ನಾವೂ ಯಾವಾಗಲಾದರೊಮ್ಮೆ ಅವರ ಮನೆಗೆ ಹೋಗುತ್ತಿದ್ದೆವು. ನಮ್ಮ ಭಾಗದಲ್ಲಿ ಚೊಚ್ಚಿಲು ಗರ್ಭಿಣಿಯರನ್ನು ಅವರ ಆಪ್ತರು, ಸ್ನೇಹಿತರು ಊಟ, ಉಪಾಹಾರಗಳಿಗೆ ಕರೆಯುವ ರೂಢಿಯಿದೆ. ಹಾಗೆ ನಾನು ಅನುಪಮಾ, ನಿರಂಜನರನ್ನು ಊಟಕ್ಕೆ ಕರೆದಿದ್ದೆ. ಈಗ ನಾವು ವಾಸಿಸುತ್ತಿರುವ ಕಲ್ಯಾಣನಗರ ಆಗ ನಿರ್ಜನ ಪ್ರದೇಶವಾಗಿತ್ತು. ನಮ್ಮ ಔಟ್‌ಹೌಸ್ ಕಟ್ಟಿಸುವುದು ಮುಗಿದಿತ್ತು. ನಿಸರ್ಗದ ಮಡಿಲಲ್ಲಿರುವ ಈ ಸ್ಥಳದಲ್ಲಿ ಸುತ್ತಲಿನ ಗುಡ್ಡ - ಹಸಿರು ಕೊಳ್ಳಗಳನ್ನು ನೋಡುತ್ತ ನಮ್ಮೊಂದಿಗೆ ಅನುಪಮಾ-ನಿರಂಜನರು ಸಂತಸದಿಂದ ಧಾರವಾಡದ ಊಟ ಮಾಡಿದರು. ಹಾಗೆ ಈ ಸುಂದರ ಸ್ಥಳದಲ್ಲಿ ಎಷ್ಟೋ ಜನರು ಊಟ ಮಾಡಿದ್ದಾರೆ. ಆದರೆ ಅನುಪಮಾ ೨೦ ವರುಷಗಳ ಅನಂತರ ಆ ಊಟದ ಸವಿಯ ನೆನಪನ್ನು ತಮ್ಮ ಒಂದು ಲೇಖನದಲ್ಲಿ ಬರೆದಿದ್ದಾರೆ.

ನಾನು ಬರೆದ 'ಸೊಬಗಿನ ಮನೆ' ಗೃಹಾಲಂಕಾರದ ಪುಸ್ತಕವನ್ನು ಬಹಳ ವರುಷಗಳ ನಂತರ ಭೇಟಿಯಾದ ಅನುಪಮಾ ಅವರಿಗೆ ಕೊಟ್ಟೆ. ಅದನ್ನು ಓದಿ ಸಂತಸಪಟ್ಟು ಪತ್ರಬರೆದರು : "ಸೊಬಗಿನ ಮನೆ ಗೃಹಿಣಿಯರಿಗೆ ಉಪಯುಕ್ತವಾಗಿದೆ. ಇಂಥ ಒಳ್ಳೆಯ ಪುಸ್ತಕದ ಪರಿಚಯ ಬೆಂಗಳೂರು ಭಾಗದಲ್ಲಿ ಆಗಿಲ್ಲ." ೧೯೬೪ರಲ್ಲಿ ಧಾರವಾಡದ "ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ"ದವರು ಆ ಪುಸ್ತಕವನ್ನು ಪ್ರಕಟಿಸಿದ್ದರು. ಪ್ರಸಿದ್ಧ ಸಾಹಿತಿಗಳ ಹಲವಾರು ಪುಸ್ತಕಗಳು ಪ್ರಕಟವಾಗಿದ್ದರೂ ಪುಸ್ತಕ

ವ್ಯಾಪಾರದ ಬಗೆಗೆ ಆಸಕ್ತಿಯಿಲ್ಲದ ಮೂಲಕ ನೂರಾರು ಪುಸ್ತಕಗಳು ಆ ಸಂಸ್ಥೆಯ ನೆಲಮನೆಯಲ್ಲಿ ಹಾಳಾಗುತ್ತಿದ್ದವು. ಅನುಪಮಾ ಅವರ ಪತ್ರ ಬಂದ ಮೇಲೆ ನಾನು ಆ ಸಂಸ್ಥೆಗೆ ಹೋದೆ. ಒಳ್ಳೆಯ ಸ್ಥಿತಿಯಲ್ಲಿದ್ದ ೧೫೦ ಪುಸ್ತಕಗಳನ್ನು ಕೊಂಡು ತಂದೆ. ಧಾರವಾಡದ ಮಹಿಳಾ ಸಂಸ್ಥೆಗಳ ಸೋದರಿಯರು ಆ ಪುಸ್ತಕಗಳನ್ನೆಲ್ಲ ಆಸಕ್ತಿಯಿಂದ ಕೊಂಡುಕೊಂಡರು. ಅನುಪಮಾ ಅವರೇ ಇದಕ್ಕೆ ಕಾರಣರೆಂದು ನನ್ನ ಆತ್ಮೀಯ ಸ್ನೇಹಿತೆಯರಿಗೆ ಹೇಳಿದೆ. ಸಾಹಿತಿಗಳಲ್ಲಿ ತಾವು ಬರೆದ ಪುಸ್ತಕಗಳಷ್ಟೇ ಶ್ರೇಷ್ಠ ಎನ್ನುವ ಭಾವನೆ ಹೆಚ್ಚಾಗಿ ಇರುತ್ತದೆ. ಅನುಪಮಾ ಅವರಲ್ಲಿ ಇಂಥ ಸಂಕುಚಿತ ಭಾವನೆ ಇಲ್ಲ.

ಅನುಪಮಾ ಅವರು ಬೆಂಗಳೂರಿಗೆ ಹೋದಮೇಲೆ ವೈದ್ಯಕೀಯ ವೃತ್ತಿಯಲ್ಲಿ ಖ್ಯಾತರಾದರು. ಸಾಹಿತ್ಯರಚನೆಯಲ್ಲಿ ಮುಂದಾದರು. ಮನೆ ಕಟ್ಟಿಸಿದರು. ಇವನ್ನೆಲ್ಲ ಕಂಡು ನನಗೆ ಅಭಿಮಾನವೆನಿಸಿತು. ಪರಸ್ಪರ ಭೇಟಿ ಅಪರೂಪವಾಗಿತ್ತು. ಮೈಸೂರು ವಿಶ್ವವಿದ್ಯಾಲಯದವರು, ಬೆಂಗಳೂರು ಸಾಹಿತ್ಯ ಪರಿಷತ್ತಿನವರು ಲೇಖಿಕೆಯರ ಸಮ್ಮೇಳನ ಕರೆದಾಗ ನಮ್ಮಿಬ್ಬರ ಭೇಟಿಯಾಯಿತು. ಪ್ರಖ್ಯಾತ ಸಾಹಿತಿಯಾಗಿದ್ದರೂ ೨೦ ವರುಷದ ಹಿಂದಿನಂತಹ ಸರಳ ಸಾದಾ ವೇಷ, ನಗು ಮುಖ, ಇಬ್ಬರೂ ಭೇಟಿಯಾಗಿ ಸಂತಸಪಟ್ಟೆವು. ಧಾರವಾಡದಲ್ಲಿ ಅನುಪಮಾ ಕಳೆದ ದಿನಗಳನ್ನು ನೆನೆದೆವು. ತೇಜಸ್ವಿನಿ ತನ್ನ ಕವನಗಳನ್ನು ಓದಿ ಹೇಳಿದಳು. ಅನುಪಮಾ ಅವರ ಜೀವನದಂತೆಯೆ ಅವರ ಸಾಹಿತ್ಯ, ಶೈಲಿ ಸರಳವಾದದು. ಮಧ್ಯಮ ವರ್ಗದ ಜೀವನ ಚಿತ್ರಣ ಹೃದಯಸ್ಪರ್ಶಿಯಾಗಿ ಅವರ ಕಥೆ, ಕಾದಂಬರಿಗಳಲ್ಲಿ ಮೂಡಿಬಂದಿದೆ, ಮಕ್ಕಳ ಕಥೆ. ವೈದ್ಯಕೀಯಶಾಸ್ತ್ರ ಪರಿಚಯದ ಗ್ರಂಥಗಳ ಜೊತೆಗೆ ಪರದೇಶಗಳ ಪ್ರವಾಸ, ಆತ್ಮಚರಿತ್ರೆಯನ್ನೂ ಬರೆದಿದ್ದಾರೆ. ವೈವಿಧ್ಯಮಯ ಸಾಹಿತ್ಯವನ್ನು, ನವಭಿರುಚಿಯ ಸಾಹಿತ್ಯವನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ನಾನು ಓದಿದ ಅವರ ಮೊದಲ ಕಾದಂಬರಿ 'ಶ್ವೇತಾಂಬರಿ'. ಇತ್ತೀಚೆಗೆ 'ಆಳ' ಓದಿದೆ. ಮನಸ್ಸಿನ, ಮಾನವನ ಸಂಬಂಧಗಳ ಉತ್ಖನನದ ಆಳ ಅನುಪಮಾ ಅವರ ಅನುಭವದ ಆಳ-ವಿಸ್ತಾರಗಳನ್ನು ಎತ್ತಿ ತೋರುತ್ತಿದೆ, ಅವರ ಬಗೆಗಿನ ಅಭಿಮಾನ ಹೆಚ್ಚುತ್ತಿದೆ.

ಹೋದ ವರುಷ ಮಾಳವಾಡರ ಆರೋಗ್ಯ ಸರಿಯಿಲ್ಲದಾಗ ಧಾರವಾಡಕ್ಕೆ ಬಂದ ಸೋದರಿ ಅನುಪಮಾ ಮನೆಗೆ ಬಂದರು. ಮಾಳವಾಡರ ಯೋಗಕ್ಷೇಮ ವಿಚಾರಿಸಿದರು. ಸೋದರಿಯ ಅಂತಃಕರುಣೆಯ ಮಾತುಗಳಿಂದ ಮಾಳವಾಡರಿಗೆ ಆನಂದವಾಯಿತು. ಅನುಪಮಾ-ನಿರಂಜನ ಅವರು ಆರೋಗ್ಯ ಭಾಗ್ಯ ಪಡೆದು, ಕನ್ನಡ ಸಾಹಿತ್ಯಸಂಪತ್ತನ್ನು ಹೆಚ್ಚಿಸಲಿ ಎಂದು ಹಾರೈಸುವೆ.

ನುರಿತ ಡಾಕ್ಟರ್, ಸಹೃದಯಿ ಸಾಹಿತಿ ೧೫

-ಡಾ। ಮೀರಾ ಆರ್. ಕಾಮತ್

ನಾನು ಮೊದಲು ಡಾ। ಅನುಪಮಾರವರನ್ನು ಕಂಡದ್ದು ಧಾರವಾಡದಲ್ಲಿ. ಅಲ್ಲಿಯ ಸಿವಿಲ್ ಆಸ್ಪತ್ರೆಗೆ ಲೇಡಿ ಮೆಡಿಕಲ್ ಆಫೀಸರ ಆಗಿ, ನಾನು ೧೯೫೮ರ ಜನವರಿಯಲ್ಲಿ ಬೆಳಗಾಂವಿನಿಂದ ವರ್ಗವಾಗಿ ಬಂದಿದ್ದೆ. ನಿರಂಜನ ಮತ್ತು ಡಾ। ಅನುಪಮಾ ಧಾರವಾಡದಲ್ಲಿ ಮನೆ ಮಾಡಿದ್ದರು. ಅನುಪಮಾ ಆಗ ಮೊದಲನೆಯ ಸಲ ಗರ್ಭಿಣಿ ಯಾಗಿದ್ದರು, ನನಗೆ ತೋರಿಸಲು ಬಂದಿದ್ದರು. ನಾನು ನಿರಂಜನರ ಪುಸ್ತಕಗಳನ್ನು ಓದಿದ್ದೆ. ಅವರಿಬ್ಬರ ಬಗ್ಗೆ ಕೇಳಿದ್ದೆ, ಹೊರತು ಭೇಟಿಯಾಗಿರಲಿಲ್ಲ. ಅವರ ಪರಿಚಯವಾಗಿ ನನಗೆ ತುಂಬಾ ಸಂತೋಷವಾಯಿತು. ಕತೆ ಕಾದಂಬರಿಗಳನ್ನು ಓದುವು ದೆಂದರೆ ನನಗೆ ತುಂಬಾ ಇಷ್ಟ. ಅವುಗಳನ್ನು ಬರೆಯುವವರನ್ನು ಅದೇ ಮೊದಲ ಸಲ ನೋಡಿ ಮಾತಾಡುವ ಅವಕಾಶ ಒದಗಿದುದಕ್ಕಾಗಿ ನನಗೆ ಬಹಳ ಹೆಮ್ಮೆಯಾಗಿತ್ತು.

ಅವರ ಮಗಳು ತೇಜಸ್ವಿನಿ ಹುಟ್ಟಿದ್ದು ಧಾರವಾಡದಲ್ಲಿ. ಚೊಚ್ಚಲು ಹೆರಿಗೆಯಾದರೂ ಅವರು ಧೈರ್ಯದಿಂದಿದ್ದರು. ಮುಂದೆ. ಸ್ವಲ್ಪ ಸಮಯದ ಅನಂತರ ಅವರು ಧಾರವಾಡದಲ್ಲಿ ತಮ್ಮ ಪ್ರಸೂತಿಗೃಹವನ್ನು ಪ್ರಾರಂಭಿಸಿದರು. ಅದರ ಉದ್ಘಾಟನೆಗೆ ನನ್ನನ್ನು ಆಮಂತ್ರಿಸಿದ್ದರು. ಸಮಾರಂಭಕ್ಕೆ ಬಹಳ ಜನ ಮಿತ್ರರು ಬಂದಿದ್ದರು. ಅನುಪಮಾರವರಿಗೆ ಮಾತು ಬೇಕು. ಜನಬೇಕು. ಬೇಗನೆ ಮೈತ್ರಿ ಬೆಳೆಯುತ್ತಿತ್ತು. ಇದರಿಂದ ಧಾರವಾಡದಲ್ಲಿ ಅವರಿಗೆ ದೊಡ್ಡ ಮಿತ್ರಬಳಗ ವಿತ್ತು. ಆಸ್ಪತ್ರೆ ಶುರುವಾದೊಡನೆ ಅವರ ಕೆಲಸ ಹೆಚ್ಚಿತು. ಬಿಡುವು ಸಿಗುತ್ತಿರಲಿಲ್ಲ. ರಾತ್ರಿಹೊತ್ತು ಕೂಡಾ ತುರ್ತು ಚಿಕಿತ್ಸೆಗೆ ಎದ್ದು ಬರಬೇಕಾಗುತ್ತಿತ್ತು. ಒಂದೆರಡು ಸಲ ತಮ್ಮ ಸಹಾಯಕ್ಕೆ ನನ್ನನ್ನೂ ಕರೆದಿದ್ದರು. ಇಷ್ಟೆಲ್ಲ ಕೆಲಸಗಳ ನಡುವೆ - ಅಂದರೆ ಮನೆಗೆಲಸ, ಮಗುವಿನ ಆರೈಕೆ ಮತ್ತು ಆಸ್ಪತ್ರೆಯ ಕೆಲಸಗಳಿಂದಲೂ ಬಿಡುವು ಮಾಡಿಕೊಂಡು ಬರೆಯುವ ಕೆಲಸವನ್ನು ಮುಂದುವರಿಸಿದ್ದರು. ಅವರ ಬಹುಮುಖ ಪ್ರತಿಭೆ ನಿಜವಾಗಿಯೂ ಪ್ರಶಂಸೆಗೆ ಪಾತ್ರವಾಗಿದೆ.

ಅಲ್ಪಕಾಲದ ಪರಿಚಯದಲ್ಲಿ ಅನುಪಮಾ ನನಗೆ ಆತ್ಮೀಯರಾಗಿದ್ದರು. ಅವರಿಗೂ ಜನರನ್ನು ಆಕರ್ಷಿಸುವ ಶಕ್ತಿಯಿತ್ತು. ಒಮ್ಮೆ ಮಿತ್ರರಾದವರನ್ನು ಅವರು ಎಂದೂ ಮರೆಯುತ್ತಿರಲಿಲ್ಲ. ಅವರ ದೊಡ್ಡ ಮಿತ್ರವರ್ಗದಲ್ಲಿ ನಾನೂ ಸೇರಿ ಕೊಂಡಿದ್ದೆ. ಅವರ ಪ್ರೀತಿಯನ್ನು ನಾನೂ ಮರೆಯುವಂತಿಲ್ಲ. ಅವರು ತಮ್ಮ ಪುಸ್ತಕ "ರೂಪಾರಿಯ ಲಕ್ಷ್ಮಿ"ಯನ್ನು "ಕೆಲಕಾಲದ ಒಡನಾಟದ ಚಿರಕಾಲದ ನೆನಪಿಗೆ" ಎಂದು ನನಗೆ ಅರ್ಪಿಸಿದ್ದರು. ಎಂತಹ ಸೌಹಾರ್ದತೆ ಮತ್ತು ಹೃದಯ ವೈಶಾಲ್ಯ! ತಮ್ಮ ಆತ್ಮಕಥೆ "ನೆನಪು: ಸಿಹಿ ಕಹಿ"ಯಲ್ಲಿಯೂ ನನ್ನ ಬಗ್ಗೆ ಬರೆದರು.

ಮುಂದೆ ನಾನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ೧೯೬೦ರ ಅಕ್ಟೋಬರದಲ್ಲಿ ಮದ್ರಾಸಿಗೆ ಹೋದೆ. ಅನುಪಮಾ ಮತ್ತು ನಿರಂಜನರು ಧಾರವಾಡ ಬಿಟ್ಟು ಬೆಂಗಳೂರಿಗೆ ಹೋಗಿ ನೆಲಸಿದರು. ಕೆಲವು ವರ್ಷಗಳೇ ಸಂದವು, ನಾನು ಅವರನ್ನು ಪುನಃ ಸಂಧಿಸಲು. ನಾನು ಬೆಂಗಳೂರಿಗೆ ಹೋದಾಗ ಅವರಲ್ಲಿಗೆ ಹೋಗಿದ್ದೆ. ನನ್ನನ್ನು ತುಂಬಾ ಆತ್ಮೀಯತೆಯಿಂದ ಬರಮಾಡಿದರು. ಧಾರವಾಡದ ಅನುಭವ ದಿಂದ ಬೆಂಗಳೂರಿನಲ್ಲಿ ಪ್ರಸೂತಿಗೃಹವನ್ನು ತೆರೆಯುವ ಆಲೋಚನೆ ಬಿಟ್ಟಿದ್ದರು. ಜನರಲ್ ಪ್ರಾಕ್ಟೀಸ್ ಮಾತ್ರ ಮಾಡುತ್ತಿದ್ದರು. ಅವರಿಗೆ ತಮ್ಮ ವೈದ್ಯಕೀಯ ವೃತ್ತಿಯಷ್ಟೇ ಪ್ರಿಯವಾಗಿತ್ತು ಬರವಣಿಗೆ. ಅದನ್ನು ಬಿಡಲು ಸಿದ್ಧರಿರಲಿಲ್ಲ. ಅವರ ಎರಡನೇ ಮಗಳು ಬೆಂಗಳೂರಿನಲ್ಲಿ ಹುಟ್ಟಿದಳು. ಇನ್ನು ಮಕ್ಕಳು ಸಾಕೆಂದು "ಸೀಮಾ" ಎಂದು ಹೆಸರಿಟ್ಟಿದ್ದೇವೆಯೆಂದು ಅನುಪಮಾ ನಗುಮುಖದಿಂದ ನನಗೆ ತಿಳಿಸಿದರು. ಅವರೂ ನಿರಂಜನರೂ ತಮ್ಮ ಹಲವು 'ಪುಸ್ತಕಗಳ ಪ್ರತಿಗಳನ್ನು ತಮ್ಮ ಹಸ್ತಾಕ್ಷರ ದೊಡನೆ ನನಗೆ ಅಂದು ಕೊಟ್ಟರು. ಈ ಸಹೃದಯತೆಯಿಂದ ನನ್ನ ಹೃದಯ ತುಂಬಿ ಬಂತು.

ಮತ್ತೆ ನಾನು ಅವರನ್ನು ಕಂಡದ್ದು ಅವರು ದಾವಣಗೆರೆಗೆ ಸಾಹಿತ್ಯ ಸಮ್ಮೇಳನಕ್ಕೆ ಬಂದಾಗ. ಅನುಪಮಾ, ಮಗಳು ತೇಜಸ್ವಿನಿಯೊಡನೆ ನಮ್ಮ ಮನೆಗೆ ಬಂದಿದ್ದರು. ಈ ನಡುವೆ, ನಿರಂಜನರೂ ಅನುಪಮಾರೂ ಬಹಳಷ್ಟು ಕಾಯಿಲೆ ಯಿಂದ ಬಳಲಿ, ತಿರುಗಿ ಚೇತರಿಸಿಕೊಳ್ಳುತ್ತಿದ್ದರು. ನಿರಂಜನರಿಗೆ ನಡೆಯಲು ಪ್ರಯಾಸವಾಗುತ್ತಿತ್ತು. ಆದರೂ ಅವರಿಬ್ಬರೂ ಜೀವನವನ್ನು ನಗುಮುಖದಿಂದಲೇ ಎದುರಿಸುತ್ತಿದ್ದರು. ಅವರ ಧೈರ್ಯಸ್ಥೈರ್ಯಗಳನ್ನು ಮೆಚ್ಚಬೇಕಾದ್ದೆ!

ನಾನು ೧೯೮೩ರಲ್ಲಿ ದಾವಣಗೆರೆ ಬಿಟ್ಟು ಮೂಲ್ಕಿಯಲ್ಲಿ ನೆಲೆನಿಂತೆ. ೧೯೮೬ರಲ್ಲಿ ಪುತ್ತೂರಿನ ಕರ್ನಾಟಕ ಸಂಘದವರು ನಿರಂಜನರನ್ನು ಅಭಿನಂದಿಸುವ ಸಮಾರಂಭ ವನ್ನು ಏರ್ಪಡಿಸಿದ್ದರು. ನಾನೂ, ನನ್ನ ತಮ್ಮ ರಂಗನಾಥ ಕಾಮತರೂ, ಅವರನ್ನು ಕಾಣಲು ಪುತ್ತೂರಿಗೆ ಹೋಗಿದ್ದೆವು. ಅನುಪಮಾ ತಮ್ಮ ಹಾಸ್ಯಪ್ರವೃತ್ತಿಯನ್ನು ಬಿಟ್ಟಿರಲಿಲ್ಲ. ನಗುಮುಖದಿಂದ ಮಾತಾಡಿಸಿದರು. ನಿರಂಜನರು ಮಾತ್ರ ಬಳಲಿ ದಂತೆ ಕಾಣುತ್ತಿದ್ದರು. ಸೀಮಾ ತನ್ನ ತಂದೆತಾಯಿಯವರೊಡನೆ ಬಂದಿದ್ದಳು. ನಾನು ಅವಳನ್ನು ಮಗುವಾಗಿದ್ದಾಗ ನೋಡಿದ್ದೆ. ಈಗ ಬೆಳೆದುನಿಂತ ಸೀಮಾ ತಂದೆತಾಯಿಯ ವರಿಗೆ ಆಧಾರವಾಗಿದ್ದಳು. ಅನುಪಮಾ ಮಾತಿನಲ್ಲಿ ಹೇಳುವುದಾದರೆ ಅವಳು ಅವರ ರಕ್ಷೆಯಾಗಿದ್ದಳು.

ವೈದ್ಯಕೀಯ ವೃತ್ತಿಯನ್ನು ನಡೆಸುವಾಗ ಬೆಂಗಳೂರಿನಲ್ಲಿ ಅನುಪಮಾ ಒಳ್ಳೆಯ ಹೆಸರನ್ನು ಗಳಿಸಿದ್ದರು. ನಾನು ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಕೆಲಸಮಾಡುವಾಗ ಅನುಪಮಾ ಅವರ ಕೆಲವು ರೋಗಿಗಳು ಹೆಚ್ಚಿನ ಚಿಕಿತ್ಸೆಗೆ ಬಂದಿದ್ದರು.

ನನ್ನ ಅನುಭವಕ್ಕೆ ಬಂದಂತೆ ಅವರ ರೋಗಿಗಳನ್ನು ನಾನು ಪರೀಕ್ಷಿಸಿದಾಗ, ಅವರ ರೋಗಪರೀಕ್ಷಾ ವಿಧಾನದಲ್ಲಿಯೂ, ಚಿಕಿತ್ಸಾ ಕ್ರಮದಲ್ಲಿಯೂ ಏನೂ ಕುಂದು ಕೊರತೆಗಳನ್ನು ಕಂಡಿರಲಿಲ್ಲ. ಎಲ್ಲವೂ ಸರಿಯಾಗಿಯೇ ಇರುತ್ತಿತ್ತು. ಅವರು ಬರೆವಣಿಗೆಯನ್ನು ಎಷ್ಟು ಶ್ರದ್ಧೆಯಿಂದ ಮಾಡುತಿದ್ದರೋ ಅಷ್ಟೇ ಪರಿಶ್ರಮದಿಂದ ಮತ್ತು ಆಸ್ಥೆಯಿಂದ ರೋಗಿಗಳ ಆರೈಕೆ ಮಾಡುತ್ತಿದ್ದರು.

ಸಾರ್ಥಕ ಬದುಕಿಗೆ ಇನ್ನೊಂದು ಹೆಸರು ೧೬

- ಪದ್ಮಾ ಶೆಣೈ

ಅನುಪಮಾರ ಬಗ್ಗೆ ಏನು ಹೇಳಹೊರಟರೂ ಒಂದು ಮಾತನ್ನು ಮೊದಲು ಪ್ರಸ್ತಾಪಿಸಬೇಕು. ಇದು ಅನ್ವರ್ಥನಾಮ. ಅವರಂತೆ, ಇವರಂತೆ.... ಎಂದು ಯಾರಿಗೂ ಹೋಲಿಸಲಾಗದ, ತಾನು ತಾನಾಗಿಯೇ ಬದುಕಿದ, ಬಾಳಿದ, ಬೆಳಗಿದ, ವಿಜೃಂಭಿಸಿದ ಸಾರ್ಥಕ ಬದುಕಿಗೇ ಇನ್ನೊಂದು ಹೆಸರು ಅನುಪಮಾ.

ಬದುಕನ್ನೂ, ಬರೆಹವನ್ನೂ ಸಮನ್ವಯಿಸಿಕೊಳ್ಳಲಾಗದೇ ಲೇಖನಿ ಸೊರಗುವುದುಂಟು. ಎರಡನ್ನೂ ತೂಗಿಸಿಕೊಂಡು ಹೋಗುವವರದ್ದೇ ಒಂದು ಕತೆಯಾದರೆ, ಜೀವನದ ಸವಾಲುಗಳನ್ನು ಸ್ವೀಕರಿಸಿ ಬದುಕನ್ನು ಪಣವಾಗಿಟ್ಟುಕೊಂಡೇ ಬರೆಯುವ ಧೀಮಂತ ಮಹಿಳೆ ಈಕೆ. ಆ ಮನೋದಾರ್ಢ್ಯ, ಸ್ಥಿರತೆ ಯಾರನ್ನೂ ಬೆರಗುಗೊಳಿಸುವಂತಹುದು!

ಇದೇ ಕಾರಣವಾಗಿ ತಮ್ಮ ಬದುಕಿನ ಸುಖ, ದುಃಖ, ನೋವು, ನಲಿವುಗಳನ್ನು 'ಸಿಹಿ-ಕಹಿ'ಯನ್ನಾಗಿ ಛಟ್ಟಿಯಿಳಿಸಿ ಅಪಾರ ಜನಮೆಚ್ಚುಗೆಯನ್ನು ಗಳಿಸಿದ್ದಾರೆ. 'ಸಾವಿತ್ರಿಯಾಗಿ ನನ್ನನ್ನುಳಿಸಿಕೊಂಡಿರಿ' ಎಂದಿದ್ದರು ಪತಿ ನಿರಂಜನರೊಮ್ಮೆ. ಹಗಲೂ ರಾತ್ರೆ ಗೈದ ಸೇವೆ, ಪತಿಯನ್ನು ಉಳಿಸಿಕೊಳ್ಳುತ್ತೇನೆ ಎನ್ನುವ ಛಲ, ಪ್ರಸಂಗಾವಧಾನತೆ....ಎಲ್ಲವನ್ನು ಈ ಮೂರಕ್ಷರಗಳು ಧ್ವನಿಸಿದ್ದುವು. ನನಗನಿಸುತ್ತಿದೆ, ಅನುಪಮಾ ಇನ್ನೂ ಒಂದೊಂದೇ ಹೆಜ್ಜೆ ಮುಂದಿಟ್ಟರು. ಬೆಳೆಯುತ್ತಲೇ ಹೋದರು, ಎಲ್ಲಿಯವರೆಗೆ? ಕಾಲಪುರುಷನನ್ನೇ ಹೊಸಿಲಲ್ಲಿ ನಿಲ್ಲಿಸಿ, ಉತ್ತರಿಸಿದರು; "ಸ್ವಲ್ಪ ನಿಲ್ಲು; ನನಗೆ ಪುರುಸೊತ್ತಿಲ್ಲ ಅಂದ". ಅವರ ಈ ಲೇಖನವನ್ನು ಓದಿದಾಗ ಸಂತೋಷಾತಿರೇಕದಿಂದ ಕಣ್ಣುಗಳು ಹನಿಗೂಡಿದುವು. ದೇವರನ್ನು ಬಲವಾಗಿ ನಂಬಿದವಳು ನಾನು. ಈ ದೃಷ್ಟಿಯಲ್ಲಿ ಈಕೆ ತೀರ ಭಿನ್ನ. ಆದರೂ, ನನ್ನ ದೇವರನ್ನು ನಾನು 'ಅನುಪಮಾಗೆ

ದೀರ್ಘಾಯುಸ್ಸು ಕೊಡು' ಎಂದು ಬೇಡಿಕೊಳ್ಳಲು ಅಡ್ಡಿಯಿಲ್ಲವಷ್ಟೆ? ಬಹುಶಃ ನನ್ನಂತಹ ಸಾವಿರಾರು ಭಗಿನಿಯರ, ಬಂಧುಗಳ ಪ್ರಾರ್ಥನೆ, ಹಾರೈಕೆಗಳು ಅವರ ಬೆನ್ನಿಗೆ ಶ್ರೀರಕ್ಷೆಯಾಗಿರಬೇಕು ಎಂದು ನನ್ನ ತಿಳಿವಳಿಕೆ. ಏಕೆಂದರೆ ಕಾಲನನ್ನು ನಿಲ್ಲ ಹೇಳಿ ಈಕೆ ಕತೆ, ಕವನಗಳನ್ನು ಬರೆದರು; ಕಾದಂಬರಿಗಳನ್ನು ಮುಗಿಸಿದರು; ಸಭೆ, ಸಮಾರಂಭಗಳಲ್ಲಿ ಭಾಗವಹಿಸಿದರು. ಈ ಸಾಧನೆಗೆ ಸಾಟಿ ಇದೆಯೇ?

ನಾನು ಮೊಟ್ಟಮೊದಲು ಕಂಡದ್ದು ಡಾಕ್ಟರ್ ಅನುಪಮಾರನ್ನು. ಲೇಖಕ ನಿರಂಜನರ ಮಡದಿಯಾಗಿ. ಬೀಜರೂಪವಾಗಿದ್ದ ಅವರ ಸಾಹಿತ್ಯಸೃಷ್ಟಿಯ ಶಕ್ತಿಯನ್ನು ಗುರುತಿಸುವ ವಯಸ್ಸು ಅದು ಅಲ್ಲ. ಅಲ್ಲದೆ ಹೊತ್ತುಗೊತ್ತಿಲ್ಲದ ಡಾಕ್ಟರ್ ವೃತ್ತಿ. ನಿದ್ದೆ, ನೀರಡಿಕೆಗಳಿಗೆ ಸಮಯ ಸಿಕ್ಕಿದರೇನೇ ಪುಣ್ಯ. ಸಾಹಿತಿ ಗಂಡ.... ಈ ಲೇಖಕರ 'ಮೂಡ್ಸ್'ಗಳನ್ನು ಹೊಂದಿಸಿಕೊಂಡು ಹೇಗಪ್ಪಾ ಬರೆದಾರು ಎಂದು ಕಂಡಿತ್ತು. ಎರಡನೆಯ ಪ್ರಶ್ನೆ ನನ್ನ ಮನದೊಳಗೇ ಉಳಿದಿತ್ತು; ಪ್ರಕಟವಾಗಲಿಲ್ಲ ಎನ್ನುವ ನೆನಪು. ಮೊದಲ ಪ್ರಶ್ನೆಯನ್ನು ಕೇಳಿಯೇ ಬಿಟ್ಟೆ.

"ನಿಮಗೆ ಬರೆವಣಿಗೆಗೆ ಸಮಯ ಸಿಗುತ್ತೋ, ಇಲ್ಲವೋ". ಎಂದಿದ್ದೆ.

"ಯಾಕೆ?" ತೀಕ್ಷ್ಣವಾಗಿ ಬಂದಿತ್ತು ಪ್ರಶ್ನೆ.

"ನಿಮ್ಮ ಡಾಕ್ಟರ್ ವೃತ್ತಿ".

"ಹೋಗಲಿ ಬಿಡಿ. ಮನಸ್ಸಿದ್ದರೆ ಮಾರ್ಗ ಉಂಟು. ಅಲ್ವಾ? ನಿರಂಜನರು ಸಾಹಿತಿ. ಮನೇಲಿ ಸಾಹಿತ್ಯಕ ವಾತಾವರಣವೇ ಇರುತ್ತೆ. ಸುಲಭದಲ್ಲಿ ಬರೀಬಹುದು" ಅಂದಿದ್ದರು.

ಅದು ಮಳೆಗಾಲದ ದಿನ. ಬತ್ತೇರಿಯ ಮೇಲೆ ನಿಂತುಕೊಂಡು ಉಕ್ಕಿ ಹರಿವ ನದಿಯನ್ನು ನೋಡುತ್ತಾ ಅನುಪಮಾ ತಮ್ಮ ಅನುಭವವನ್ನು ಹೇಳಿಕೊಂಡಿದ್ದರು. "........ನಾವು ಬರುವಾಗ ರಸ್ತೆ ಮೇಲೆ ನೆರೆನೀರು ಬಂದಿತ್ತು. ಡ್ರೈವರ್ ಪ್ರವಾಹದಲ್ಲಿ ಬಸ್ಸನ್ನು ಮೆಲ್ಲನೆ ಬಿಟ್ಟುಕೊಂಡು ಬಂದ ನೋಡಿ. ಸ್ವಲ್ಪ ಅತ್ತಿತ್ತವಾದರೂ ಯಾರ ಜೀವದಾಸೆಯೂ ಇರಲಿಲ್ಲ....ಇಂತಹ ಕ್ಷಣಗಳಲ್ಲಿ ನಾವು ಎಷ್ಟು ಕ್ಷುಲ್ಲಕರು ಅನ್ನುವುದನ್ನು ಕಂಡುಕೊಳ್ಳುತ್ತೇವೆ. ನಮ್ಮೊಳಗಿನ ಭೇದಭಾವಗಳು, ಮನಸ್ತಾಪಗಳು.... ಎಲ್ಲವೂ ಅರ್ಥ ಕಳಕೊಂಡು ಮನಸ್ಸು ವಿಶಾಲವಾಗಿ ಬಿಡುತ್ತೆ".

ಸ್ವಲ್ಪ ಸಮಯದಲ್ಲಿ ಇದೇ ಕಥಾವಸ್ತುವಾಗಿ ಅನುಪಮಾರ ಸುಂದರ ಕಥೆಯೊಂದು ಪ್ರಕಟವಾಗಿತ್ತು. ಅರೆ! ಲೇಖಕಿಯೆಂದರೆ ಹೀಗಿರಬೇಕು ಎಂದು ಮೆಚ್ಚಿಕೊಂಡಿದ್ದೆ. ಒಂದರ ಹಿಂದೊಂದು ಈಕೆಯ ಕತೆಗಳು, ಕಾದಂಬರಿಗಳು ವೈದ್ಯಕೀಯ

ತ್ರಿಳಿವಳಿಕೆಗೆ ಸಂಬಂಧಪಟ್ಟ ಪುಸ್ತಕಗಳು ಪ್ರಕಟವಾಗುತ್ತಲೇ ಹೋದುವು. ಗೃಹಿಣಿ ಲೇಖಕಿಯರಿಗಿಂತಲೂ ವೇಗವಾಗಿ ಬರೆವಣಿಗೆ ಸಾಗಿತ್ತು. ಬೆಂಗಳೂರಿಗೆ ಹೋದಾಗ ಕ್ಲಿನಿಕ್‌ನಲ್ಲಿಯೇ ಅವರನ್ನು ಭೇಟಿಯಾಗಿದ್ದೆ. ರೋಗಿಗಳ ಸಂಖ್ಯೆ ಸಾಕಷ್ಟು ಇತ್ತು. ಸ್ವಲ್ಪ ಕಾಯಬೇಕಾಗಿ ಬಂತು.

"ಇಷ್ಟೊಂದು 'ಬಿಜಿ'ಯಾಗಿಯೂ ಹೇಗೆ ಬರೆಯುತ್ತೀರಪ್ಪಾ!" ಆಶ್ಚರ್ಯ, ಮೆಚ್ಚುಗೆಗಳಿಂದ ಉದ್ಗರಿಸಿದ್ದೆ.

"ದಿನಕ್ಕೊಂದಿಷ್ಟು ಬರೀಲೇಬೇಕು ಎನ್ನುವ ಗಟ್ಟಿ ನಿರ್ಧಾರ ಮಾಡಿ ಮಲಗುವ ಮೊದಲು ದಿನಾ ಅಷ್ಟನ್ನು ಮುಗಿಸಲೇಬೇಕು. ನಾವು ಊಟ, ತಿಂಡಿ, ನಿದ್ದೆ ಮಾಡೋ ಹಾಗೇನೇ. ಇಲ್ದೇ ಇದ್ರೇ ನಾಳೆ ಬರೀತೀನಿ....ಪುರುಸೊತ್ತಾಗಿಲ್ಲ, ನಾಳ್ದು ನೋಡೋಣ ಅನ್ನುತ್ತಾ ಆ ನಾಳೆ, ನಾಳ್ದು ಬರೋದೇ ಇಲ್ಲ" ಎಂದಿದ್ದರು. "ಬರೆವಣಿಗೆಗೆ ಶಿಸ್ತು ಬೇಕು" ಎನ್ನುವುದು ಅವರ ಅಭಿಪ್ರಾಯ. ಗಟ್ಟಿ ಸ್ವರದ ಅವರ ಮಾತುಗಳಿಗೆ ಅವುಗಳದ್ದೇ ಒಂದು ತೂಕ.

ಕ್ಲಿನಿಕ್ಕಿನ ಸುತ್ತ ಕಣ್ಣಾಡಿಸಿದ್ದೆ. ಹೇಳಿಕೊಳ್ಳುವಷ್ಟು ದೊಡ್ಡದೇನೂ ಅಲ್ಲ. ಆದರೂ ಎಷ್ಟೊಂದು ಅಚ್ಚುಕಟ್ಟು! ಸ್ವಲ್ಪವೂ ಜಾಗ ಹಾಳಾಗದಂತಹ ವ್ಯವಸ್ಥೆ! ಶಿಸ್ತು, ಅಚ್ಚುಕಟ್ಟುತನವನ್ನು ಮೈಗೂಡಿಸಿಕೊಂಡ ಡಾ। ಅನುಪಮಾ ಆತ್ಮವಿಶ್ವಾಸದಿಂದ ಅತ್ತಿತ್ತ ಓಡಾಡುತ್ತಿರುವುದನ್ನು ನೋಡುವುದೇ ಸಂತೋಷ ಅನ್ನಿಸಿತ್ತು. ಸಮಾರಂಭದ ಅಧ್ಯಕ್ಷ ಸ್ಥಾನಗಳಲ್ಲೂ ಅವರನ್ನು ಅನೇಕ ಸಲ ಕಂಡಿದ್ದೇನೆ. ಓಟದ ನಡಿಗೆ ಅವರದ್ದು. ಜೀವನೋಲ್ಲಾಸ ತುಂಬಿತುಳುಕುವ ಹೆಜ್ಜೆಗಳು. ಅಷ್ಟೇ ಸ್ಫೂರ್ತಿದಾಯಕವಾದ ಮಾತುಗಳು. 'ಹೆಣ್ಮಕ್ಕಳು ಮೈಚಳಿ ಬಿಟ್ಟು ಬರೆಯುತ್ತಾರಲ್ಲ, ಅವರಿಗೆ ಸರಿಯಾದ ಅವಕಾಶಗಳನ್ನು ಕೊಡಿ. ಬೆಳೆದೇ ಬೆಳೆಯುತ್ತಾರೆ' ಎಂದು ಬೆನ್ನುತಟ್ಟುವವರು. ಪ್ರಗತಿಪರ ವಿಚಾರವಾದಿಗಳು. 'ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಿ. ಎಲ್ಲದಕ್ಕೂ ಗಂಡಸರ ಮೊರೆ ಹೋಗಬೇಡಿ' ಎಂದು ಹೇಳಿದ ಅವರು ಒಮ್ಮೆ ತಮ್ಮ ಹೆಸರು ನಿರಂಜನರ ಜೊತೆ ಸೇರಿರುವುದನ್ನು ಪ್ರಸ್ತಾಪಿಸಿ 'ಆಗ ಇನ್ನೂ ಬುದ್ಧಿ ಬೆಳೆದಿರಲಿಲ್ಲ ಬಿಡಿ; ಈಗ ಬರೀ 'ಅನುಪಮಾ' ಎಂದರೂ ಜನಗಳು 'ಅನುಪಮಾ ನಿರಂಜನ' ಎಂದೇ ಗುರುತಿಸುತ್ತಾರೆ' ಎನ್ನುತ್ತಾ ನಕ್ಕಿದ್ದರು.

ಸ್ನೇಹದ ದೃಷ್ಟಿಯಿಂದ ಈಕೆ ತುಂಬ ಒಳ್ಳೇ ಗೆಳತಿ; ಸದಾ ಹುರಿದುಂಬಿಸುವ ಮನೋವೃತ್ತಿ. ತುರ್ತು ಪರಿಸ್ಥಿತಿಯ ದಿನಗಳಲ್ಲಿ ನಾನು ಅನಿವಾರ್ಯವಾಗಿ ವ್ಯಾಪಾರ ವಹಿವಾಟುಗಳನ್ನು ನೋಡಿಕೊಳ್ಳಬೇಕಾಗಿ ಬಂದಾಗ, ಇದನ್ನು ಕೇಳಿಸಿಕೊಂಡ ಅವರು ನಮ್ಮ ಅಂಗಡಿಗೆ ಬಂದು ನನ್ನನ್ನು ಭೇಟಿಯಾಗಿ 'ನಿಮ್ಮ ಧೈರ್ಯವನ್ನು ಮೆಚ್ಚಿಕೊಂಡೆ' ಎಂದಾಡಿ ನೈತಿಕ ಬೆಂಬಲ ಕೊಟ್ಟುದನ್ನು ಮರೆಯುವಂತೆಯೇ ಇಲ್ಲ.

ಸ್ವತಃ ಈಕೆಯ ಮನೋಸ್ಥೈರ್ಯ ದಂಗುಬಡಿಸುವಂತಹುದು! ಇವರನ್ನು ಕಂಡ ಅಪರಿಚಿತರು (?) ಯಾರಿಗೂ ಈಕೆಯ ಅನಾರೋಗ್ಯದ ಸುಳಿವು ಸಿಗುವುದಿಲ್ಲ. ಮಾತುಕತೆಯಲ್ಲಿ. ನಗು ಉಲ್ಲಾಸಗಳಲ್ಲಿ. ನಡೆಯಲ್ಲಿ....ಊಹುಂ....ಎಲ್ಲೂ ವಿಷಾದದ ಛಾಯೆಯಿಲ್ಲ. ಕರ್ನಾಟಕದಲ್ಲಿ ಈಕೆಗೆ ಅಪರಿಚಿತರೂ ಇಲ್ಲ. ಅಂತಹ ಜನಪ್ರಿಯ ಮತ್ತು ಮೌಲಿಕ ಸಾಹಿತ್ಯದ ಕರ್ತೃ ಈಕೆ. ಇಲ್ಲಿ ಈಕೆಯ ಪತಿ ನಿರಂಜನರನ್ನು ಸ್ಮರಿಸಲೇಬೇಕು. ಹೆಂಡತಿಯ ವ್ಯಕ್ತಿತ್ವವನ್ನು ಸದಾ ಗೌರವಿಸುವ. ಎಂತಹ ಅಸುವು ಆಪತ್ತಿನಲ್ಲಿಯೂ ಹೆಂಡತಿಯ ಬೆಂಬಲಕ್ಕೆ ನಿಂತ ಅಪರೂಪದ ಜೊತೆಗಾರ ಆತ. ಹೆಂಡತಿಯ ಡಾಕ್ಟರ್ ವೃತ್ತಿ. ಬರವಣಿಗೆ, ಸಭೆ ಸಮಾರಂಭಗಳು, ವಿದೇಶ ಪ್ರವಾಸ.... ಎಲ್ಲದಕ್ಕೂ ಅವರ ಪ್ರೋತ್ಸಾಹಕ ನಿಲುವು....ಅನುಪಮಾಗ ಲೇಖನಿಯ ಶಕ್ತಿಯೋ ಅವರೇನೋ ಅಂದುಕೊಳ್ಳುವಷ್ಟು ಅನ್ಯೋನ್ಯ ದಾಂಪತ್ಯ. ಇಬ್ಬರು ಹೆಣ್ಮಕ್ಕಳ ತಾಯಿಯಾಗಿ. ಸದ್ಗೃಹಿಣಿಯಾಗಿ ಅನುಪಮಾ ಸಂತೃಪ್ತಜೀವಿ. ಅವರು ಹಾಸ್ಯವಾಗಿ ಹೇಳಿದ 'ಜನ ನನ್ನನ್ನು ಅನುಪಮಾ ನಿರಂಜನ ಎಂದೇ ಗುರುತಿಸುತ್ತಾರೆ' ಎನ್ನುವ ಮಾತು ನೂರಕ್ಕೆ ನೂರು ಪಾಲು ಸತ್ಯ. ಸಕ್ಕರೆಯೊಳಗಣ ಸವಿಯಂತೆ ಪರಸ್ಪರ ಒಂದಾದ ಈ ಎರಡು ಜೀವಿಗಳನ್ನು ನೋಡುವುದೇ ಕಣ್ಣಿಗೆ ಹಬ್ಬ.

ನಮ್ಮ ಕುಟುಂಬ ವೈದ್ಯೆ

-ಶಾರದೆ

ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನಡೆದ ಮಾತು. ನಾನು ಆಗ ತಾನೇ ಸಾಹಿತ್ಯಕ್ಷೇತ್ರದಲ್ಲಿ ಕಾಲಿಟ್ಟಿದ್ದೆ. ಆಗ ಎಲ್ಲ ಹದಿಹರೆಯದ ಹುಡುಗಿಯರ ಹುಚ್ಚು ತಾನೇ ಅದು? ನಾನೂ ಅದಕ್ಕೆ ಹೊರತಾಗಿರಲಿಲ್ಲ. ಹೀಗೆ ನನ್ನ ಎರಡನೆಯ ಕಾದಂಬರಿಯಾಗಿ 'ಜೋಡಿ ಹಕ್ಕಿ' ಪ್ರಕಟವಾಯಿತು. ಆ ವೇಳೆಗಾಗಲೇ ನಾನು ಅನುಪಮಾ ಅವರ ಹೆಸರನ್ನು ಸಾಕಷ್ಟು ಕೇಳಿ ಆಗಿತ್ತು. ನನ್ನ ಮೆಚ್ಚಿನ ಲೇಖಕ ನಿರಂಜನರ ಪತ್ನಿ ಹೇಗಿದ್ದಾರೆ ಎಂಬುದನ್ನು ತಿಳಿಯುವ ಕುತೂಹಲ ಬೇರೆ! ಸ್ವತಃ ಕಾದಂಬರಿಗಾರ್ತಿಯಾಗಿ ಹೆಸರುಮಾಡಿದ್ದ ಅವರಿಗೆ ನನ್ನ ಕಾದಂಬರಿಯ ಪ್ರತಿಯನ್ನು ಕೊಟ್ಟು ಓದಿ ಅಭಿಪ್ರಾಯ ತಿಳಿಸಿ ಎಂದು ಕೇಳಿಕೊಳ್ಳುವ ಆಸೆ ಬೇರೆ! ಹೀಗೆ ನಾನು ಅವರನ್ನು ಮೊದಲ ಬಾರಿಗೆ ಕಂಡೆ.

ಅನುಪಮಾ ಆಗ ಜಯನಗರದ ೩ನೇ ಬ್ಲಾಕಿನಲ್ಲಿ ಚಿಕಿತ್ಸಾಲಯ ಇಟ್ಟುಕೊಂಡಿದ್ದರು. ಹೊಸದಾಗಿ ಪ್ರಾರಂಭಿಸಿದ್ದರೂ ಸಾಕಷ್ಟು ಜನರನ್ನು ಆಕರ್ಷಿಸಿದ್ದರು. ನನ್ನ ಪುಸ್ತಕವನ್ನು ಕಂಡಕೂಡಲೇ ಅನುಪಮಾ 'ಅರೇ! ಈ ಪುಸ್ತಕ ನೀವು ಬರೆದದ್ದಾ?'

ಎಂದು ಆಶ್ಚರ್ಯದಿಂದ ಉದ್ಗರಿಸಿದರು. 'ಇದು ವಿಮರ್ಶೆಗಾಗಿ ನನ್ನ ಹತ್ತಿರ ಬಂದಿದೆ. ನಾನಾಗಲೇ ಓದಿದ್ದಾಯಿತು. ಕಾದಂಬರಿ ನಿಜಕ್ಕೂ ಚೆನ್ನಾಗಿದೆ. ಮುಂದೆಯೂ ಹೀಗೆ ಒಳ್ಳೆಯ ಕಾದಂಬರಿಗಳನ್ನು ಬರೆಯಿರಿ' ಎಂದು ಮನಃಪೂರ್ವಕವಾಗಿ ಹಾರೈಸಿದರು. ಅಷ್ಟೇ ಅಲ್ಲ, 'ಪ್ರಜಾವಾಣಿ' ಪತ್ರಿಕೆಯಲ್ಲಿ 'ಭರವಸೆ ನೀಡುವ ಕಾದಂಬರಿ' ಎಂದು ಪ್ರಶಂಸೆ ಮಾಡಿ ಕಾದಂಬರಿ ಕ್ಷೇತ್ರದಲ್ಲಿ ನಾನಿಟ್ಟ ಹೆಜ್ಜೆ ಸ್ಥಿರವಾಗಿ ನಿಲ್ಲುವುದಕ್ಕೆ ಕಾರಣಕರ್ತರೂ ಆದರು.

ನಂತರ ನನ್ನ ಮದುವೆಯಾಗಿ ನಾನು ಜಯನಗರದಲ್ಲೇ ನೆಲೆಸಿದಾಗ ಸಹಜವಾಗಿ ಅನುಪಮಾ ನನಗೆ, ನನ್ನ ಕುಟುಂಬಕ್ಕೆ ವೈದ್ಯೆಯೂ ಆದರು. ನನ್ನ ಮದುವೆಗೆ ಬಂದು ನೆನಪಿನ ಕಾಣಿಕೆಯಾಗಿ ಕೊಟ್ಟಿದ್ದ 'ತಾಯಿ-ಮಗು' ಪುಸ್ತಕ ನನಗೆ ಎಷ್ಟೋ ಪ್ರಯೋಜನಕ್ಕೆ ಬಂತು. ನನಗೊಬ್ಬಳಿಗೇ ಏಕೆ? ನಮ್ಮ ಕುಟುಂಬದಲ್ಲಿ ಯಾವ ಹೆಣ್ಣು ಮೊದಲು ಬಸಿರಾದರೂ ಈ ಪುಸ್ತಕ ಅವರಿಗೆ ಹೋಗಿದ್ದುಂಟು. ಅವರ ಈ ಉಪಯುಕ್ತ ಕಾಣಿಕೆ ನನ್ನ ಬಳಿ ಇಂದಿಗೂ ಇದೆ. ಅದರಲ್ಲಿದ್ದ ಅಮೂಲ್ಯ ಸಲಹೆಗಳು, ಅವುಗಳನ್ನು ಹೇಳುತ್ತಿದ್ದ ಸರಳವಾದ ಶೈಲಿಯಿಂದ ಅದು ಮನೆಮಾತಾಗಿತ್ತು.

ವೈದ್ಯೆಯಾಗಿ ಅನುಪಮಾ ಒಳ್ಳೆಯ ಹೆಸರನ್ನು ಪಡೆದಿದ್ದರು. ಪ್ರಜಾವಾಣಿಯಲ್ಲಿ ಬರುತ್ತಿದ್ದ ವೈದ್ಯಕೀಯ ಸಮಸ್ಯೆಗಳ ಪ್ರಶ್ನೋತ್ತರಗಳಿಂದ ಅವರ ಹೆಸರು ಸಾಕಷ್ಟು ಪ್ರಚಲಿತವಾಗಿತ್ತು. ತಮ್ಮ ಮೃದು ಮಧುರವಾದ ಮಾತಿನಿಂದ, ಇಂಪಾದ ದನಿಯಿಂದ ಹಾಗೂ ಸರಳವಾದ ಶೈಲಿಯಿಂದ ಅನುಪಮಾ ನಿಜಕ್ಕೂ ಮೋಡಿ ಮಾಡಿದರು! ಒಮ್ಮೆ ಅವರ ಬಳಿ ಬಂದವರು ಮತ್ತೆ ಬೇರೆ ವೈದ್ಯರನ್ನು ಹುಡುಕಿಕೊಂಡ ಪ್ರಸಂಗವನ್ನು ನಾನು ಕಂಡಿಲ್ಲ. ಕೇಳೂ ಇಲ್ಲ. ಜಯನಗರದ ನಿವಾಸಿಗಳಿಗೆ, ಅದರಲ್ಲೂ ಹೆಚ್ಚಾಗಿ ಮಹಿಳೆಯರಿಗೆ, ಅನುಪಮಾ ಅವರ ಹೆಸರು ಚಿರಪರಿಚಿತವಾಯಿತು. ನೋಡು ನೋಡುತ್ತಿದ್ದಂತೆಯೇ ಅವರ ಚಿಕಿತ್ಸಾಲಯ ಜೇನುಗೂಡಾಯಿತು. ಸ್ಥಳ ಸಾಲದಾಯಿತು. ಎರಡು ಬಾರಿ ಕಟ್ಟಡವನ್ನೇ ಬದಲಿಸಬೇಕಾಯಿತು. ಆದರೆ ಅವರಲ್ಲಿಗೆ ಬರುತ್ತಿದ್ದವರು ಡಾಕ್ಟರರನ್ನು ಬದಲಿಸಲಿಲ್ಲ.

ಪರಿಚಯದವರು, ಇಲ್ಲದವರು, ಹೊಸಬರು, ಹಳಬರು, ಶ್ರೀಮಂತರು, ಬಡವರು ಎಂಬ ತಾರತಮ್ಯ ಅವರ ಚಿಕಿತ್ಸಾಲಯದಲ್ಲಿ ಇರಲಿಲ್ಲ. ಮುಂಚೆ ಬಂದು ಹೆಸರು ಕೊಟ್ಟು ಕಾಯುತ್ತಾ ಇರಬೇಕು. ಕರೆದವರಿಗೆ ಮಾತ್ರ ಪ್ರವೇಶ. ಅವರು ಕೊಡುತ್ತಿದ್ದ ಔಷಧಿಯೊಂದೇ ಅಲ್ಲ, ನೀಡುತ್ತಿದ್ದ ಸಲಹೆಗಳೂ ಅಮೂಲ್ಯವಾಗಿದ್ದವು. ಜನಪ್ರಿಯತೆಯ ಉತ್ತುಂಗ ಶಿಖರದಲ್ಲಿದ್ದಾಗಲೇ ಅನುಪಮಾ ಚಿಕಿತ್ಸಾಲಯವನ್ನು ಮುಚ್ಚಬೇಕಾಯಿತು. ಮೇಲಿಂದ ಮೇಲೆ ಕಾಡಿದ ಅನಾರೋಗ್ಯ ಅವರನ್ನು ಹಣ್ಣು ಮಾಡಿತ್ತು. 'ಪ್ರಾಕ್ಟೀಸ್ ಮಾಡಲು ಮನಸ್ಸಿಗೆ ತುಂಬಾ ಆಸೆ, ಆದರೆ ಶರೀರ ಕೇಳಲಿಲ್ಲವಲ್ಲ,' ಎಂದು ಹೇಳಿಕೊಂಡಿದ್ದರು.

"ಎಷ್ಟೋ ಡಾಕ್ಟರುಗಳ ಹತ್ತಿರ ಹೋಗಿದ್ದೇವೆ. ಆದರೆ ಅನುಪಮಾ ಅವರಂತೆ ವಿಶ್ವಾಸವಾಗಿ ಮಾತನಾಡಿಸಿ ನೋಡಿಕೊಳ್ಳುವವರು ಯಾರೂ ಸಿಗಲಿಲ್ಲ" ಎಂದು ಎಷ್ಟೋ ಜನ ಹೇಳಾಡಿಕೊಂಡಿದ್ದು ನನ್ನ ಕಿವಿಗೆ ಬಿದ್ದಿದೆ.

ಹಳೆಯ ಮೂಢ ನಂಬಿಕೆಗಳಿಗೆ, ಕಟ್ಟುನಿಟ್ಟಾದ ಜಾಣಂತನಕ್ಕೆ ಅವರು ಕಟ್ಟಾ ವಿರೋಧಿಯಾಗಿದ್ದರು. 'ನೀವೆಲ್ಲ ಓದಿದವರು ಹಳೆಯದನ್ನೇ ಅನುಸರಿಸಬೇಡಿ-ಹೊಸ ವಿಚಾರಗಳನ್ನು ರೂಢಿಸಿಕೊಳ್ಳಿ' ಎಂದು ನನಗೂ ನನ್ನ ಪರಿಚಯದವರಿಗೂ ಎಷ್ಟೋ ಸಲ ಹೇಳಿದ್ದಾರೆ.

ನನ್ನ ಮಕ್ಕಳು ಸತ್ಯನ್ ಮತ್ತು ಚೇತನ್ ಅನುಪಮಾ ಅವರ ಕಣ್ಣು ಗಾವಲಲ್ಲೇ ಬೆಳೆದರು. ಜ್ವರ ಏನಾದರೂ ಬಂದಾಗ ಫೋನ್ ಮಾಡಿದರೆ ಕೂಡಲೇ ಮನೆಗೆ ಬಂದು 'ಏನಣ್ಣ? ಹ್ಯಾಗಿದೀ?' ಎಂದು ಅಳುವ ಮಕ್ಕಳನ್ನು ನಗಿಸುತ್ತಿದ್ದರು. ಆ ಮಧುರ ಬಾಂಧವ್ಯವನ್ನು ನಾವಾಗಲೀ, ಅನುಪಮಾ ಅವರಾಗಲೀ ಮರೆತಿಲ್ಲ. ಕೆಲವು ವರ್ಷಗಳ ಹಿಂದೆ ಸತ್ಯನ್‌ಗೆ ಬ್ರಹ್ಮೋಪದೇಶವನ್ನು ನೆರವೇರಿಸಿದಾಗ ಅನುಪಮಾ ಊರಿನಲ್ಲಿರಲಿಲ್ಲ. ಆದರೆ ಊರಿಗೆ ಬಂದೊಡನೆ ಮನೆಗೆ ಬಂದು ವಟುವನ್ನು ಆಶೀರ್ವದಿಸಿ ಒಂದು ಒಳ್ಳೆಯ ಪುಸ್ತಕವನ್ನು ಕೊಟ್ಟರು. 'ಹೋಗಲಿ ಇಷ್ಟು ಹೊತ್ತಿಗೆ ಬಂದಿರಲ್ಲಾ' ಎಂದಾಗ 'ನಾನು ಔಷಧಿ ಕೊಟ್ಟು ಬೆಳೆಸಿದ ಹುಡುಗ; ನಾನು ಬರದೆ ಇರುತ್ತೇನೆಯೇ?' ಎಂದರು. ಈ ಅನಿರೀಕ್ಷಿತ ಘಟನೆಯನ್ನು ನಾವು ಯಾರೂ ಮರೆತಿಲ್ಲ.

ಸಾಹಿತ್ಯಕೂಟಕ್ಕೆ ಅವರೇ ನನ್ನನ್ನು ಸೇರಿಸಿಕೊಂಡಿದ್ದರು. ಆ ಸಾಹಿತ್ಯ ಕೂಟದ ಸಭೆಗಳಲ್ಲಿ ಆದ ಪರಿಚಯಗಳು, ಬೆಳೆದ ವಿಚಾರಧಾರೆ ನನ್ನನ್ನೂ ನನ್ನ ಸಾಹಿತ್ಯವನ್ನೂ ರೂಪಿಸುವಲ್ಲಿ ಒಳ್ಳೆಯ ಪರಿಣಾಮವನ್ನು ಬೀರಿವೆ. ಅನುಪಮಾ ಅವರು ಅನಾರೋಗ್ಯದಿಂದ ಕೂಟಕ್ಕೆ ಬರುವುದನ್ನು ನಿಲ್ಲಿಸಿದ ಮೇಲೆ ಅದರ ಕಳೆ ಕಡಿಮೆಯಾಯಿತು. ಕೊನೆಗೆ ಸಾಹಿತ್ಯಕೂಟ ನಿಂತೇಹೋಯಿತು. ಅದರ ಆ ಮಧುರ ಸ್ಮರಣೆ ಈಗಲೂ ನನ್ನ ಮನಸ್ಸನ್ನು ಪುಲಕಗೊಳಿಸುತ್ತಿದೆ.

ಆತ್ಮೀಯ ಅಕ್ಕ ೧

-ಡಾ। ಕೆ. ಗಂಗಾಧರ ಶೇಕ

“........ನೀನು ಕೈಯಾರೆ ಉಣಿಸಿದ ಎರಡು ಕೈತುತ್ತಿನ ಫಲವೋ ಏನೋ, ಎದ್ದು ಕುಳಿತುಕೊಳ್ಳುವ ಹಾಗೆ ಆಗಿದ್ದೇನೆ. ಪೆನ್ನು ಹಿಡಿದು ನಾಲ್ಕು ಪಂಕ್ತಿ ಬರೆಯುವಷ್ಟು ಶಕ್ತಿ ಬಂದಿರುತ್ತದೆ. ಬಹುಶಃ ನಿಮ್ಮೆಲ್ಲರ ಹಾರೈಕೆ, ಆರೈಕೆ, ಪ್ರೀತಿಗಳು ಆದಷ್ಟು ಬೇಗ ನನ್ನನ್ನು ಹಿಂದಿನ ಆರೋಗ್ಯಕ್ಕೆ ಬರುವಂತೆ ಮಾಡುವುದು....” ಇತ್ತೀಚೆಗೆ ನಾನು, ನನ್ನ ಎಂದಿನ ಲಯನ್ಸ್ ಕಾರ್ಯಕ್ರಮಕ್ಕಾಗಿ ದಾವಣಗೆರೆಗೆ ಹೋಗುವ ಹಾದಿಯಲ್ಲಿ ನನ್ನ ಆತ್ಮೀಯ ಸ್ನೇಹಿತರಾದ ಡಾ। ನರೇಂದ್ರ ಹಾಗೂ ಡಾ। ವೃಂದಾರವರನ್ನು ಭೇಟಿ ಮಾಡಲು ಭದ್ರಾವತಿಯ ಭದ್ರಾ ನರ್ಸಿಂಗ್ ಹೋಂಗೆ ಹೋಗಿದ್ದೆ. ನನ್ನ ಜೀಪ್ ಕೊಂಚ ರಿಪೇರಿ ಇದ್ದುದರಿಂದ ಒಂದೆರಡು ಗಂಟೆಗಳ ಕಾಲಾವಕಾಶವಿತ್ತು. ತುಂಬಿದ ರೋಗಿಗಳ ಮಧ್ಯೆಯೂ ವೈದ್ಯ ದಂಪತಿಗಳ ಜತೆ ಆತ್ಮೀಯ ಮಾತುಕತೆ ಸಾಗುತ್ತಾ ಇತ್ತು. "ನಮ್ಮ ಅನುಪಮಾ ಮಗದೊಮ್ಮೆ ಮರಣಾಂತಿಕವಾಗಿ ಆಸ್ಪತ್ರೆ ಸೇರಿದ್ದು ನಿಮಗೆ ಗೊತ್ತೇ?" ಎಂದು ಡಾಕ್ಟರ್ ವೃಂದಾ ಮಧ್ಯೆ ಬಾಂಬು ಸಿಡಿಸಿದ್ದಳು. ಕೆಲವು ಗಳಿಗೆ ಮಾತೇ ದೂರವಾಗಿತ್ತು. ಮುಖವೆಲ್ಲಾ ಬೆವರಿತ್ತು. ನನ್ನ ಮಾನಸಿಕ ತುಮುಲವನ್ನು ತಿಳಿದು ಡಾ। ವೃಂದಾ ಕೂಡಲೇ "ಹಾಗೇನಿಲ್ಲ, ಈಗ ಸುಧಾರಿಸಿಕೊಂಡು ಮನೆಗೆ ವಾಪಾಸ್ ಬಂದಿರುತ್ತಾರೆ. ಅವರೇ ಸ್ವತಃ ಪತ್ರ ಬರೆದಿರುತ್ತಾರೆ. ನೋಡಿ" ಎಂದು ಒಳಗಿಂದ, ಚಿರಪರಿಚಿತವಾದ ಕೈಬರಹವುಳ್ಳ ಒಂದು ಇನ್‌ಲೇಂಡ್ ಲೆಟರನ್ನು ತಂದು ಕೊಟ್ಟರು. ಬಹುಶಃ ನಾನು ಓದಿರಬಹುದಾದ ಪ್ರೇಮದ ಮಹಾಪೂರವನ್ನೇ ಹರಿಸಿರುವ ಕೆಲವೇ ಪತ್ರಗಳಲ್ಲಿ ಅದೊಂದು. ಪ್ರತಿ ಅಕ್ಷರವೂ ಆತ್ಮೀಯತೆಯ ಜೇನುಹನಿಯನ್ನು ಸೂಸುತ್ತಿತ್ತು. ಆ ಪತ್ರದ ಆರಂಭದ ಕೆಲ ವಾಕ್ಯಗಳನ್ನೇ ನಾನು ಮೇಲೆ ನಮೂದಿಸಿರುವುದು.

೧೯೭೮ರ ಮಧ್ಯಭಾಗದಿಂದ ಮುಂದಿನ ಏಳು ವರ್ಷಗಳಲ್ಲಿ ಕ್ಯಾನ್ಸರಿಗೆಂದು ಮೂರು ಬಾರಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು, ಕೇವಲ ದೃಢಸಂಕಲ್ಪದಿಂದ ಎಲ್ಲಾ ತೊಂದರೆಗಳನ್ನೂ ಎದುರಿಸಿ ಹಿಮ್ಮೆಟ್ಟಿಸಿ ಬಂದ ‘ಶಿವಶಕ್ತಿ’ಗೆ ಕಾಲ ಮತ್ತೊಂದು ಸವಾಲೆಸೆದಿತ್ತು. ಹಿಂದಿನ ಶಸ್ತ್ರ ಚಿಕಿತ್ಸೆಯ ಗಾಯ ಬಿರುಕು ಬಿಟ್ಟಿತ್ತು. ಗಡಿಬಿಡಿಯಲ್ಲಿದ್ದ ನಿರಂಜನರಿಗೆ ನರಗಳು ಮತ್ತೊಮ್ಮೆ ಕೈಕೊಡುವ ಸೂಚನೆಗಳನ್ನು ನೀಡಿತ್ತು ಎಂದು ತಿಳಿದಾಗ ‘ಛೇ, ಇದೇನು’ ಎಂದು ಅನುಪಮಾ-ನಿರಂಜನರು ನಂಬಿದ ದೇವರಿಗೆ ಮನಸ್ಸು ಬೈದಿತ್ತು.

ಹುಲ್ಲಾಗು ಬೆಟ್ಟದಡಿ. ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ,
ಎಲ್ಲರೊಳಗೊಂದಾಗು - ಮಂಕುತಿಮ್ಮ

ಡಿ. ವಿ. ಜಿ.ಯವರ ಈ ಎಲ್ಲ ಮಾತುಗಳು ಯಾರ ಬದುಕಿನಲ್ಲಾದರೂ ಅಕ್ಷರಶಃ ಸತ್ಯವಾಗಿದ್ದರೆ ಅದು ಅನುಪಮಾ-ನಿರಂಜನರ ಜೀವನದಲ್ಲಿ.

ಜೀಪು ಸರಿಯಾಗಿ ಬಂದಿತ್ತು. ದಾವಣಗೆರೆಯ ಕರ್ತವ್ಯ ಕೈಬೀಸಿ ಕರೆಯಿತು. ವಿಚಲಿತ ಮನಸ್ಸಿನೊಂದಿಗೆ ಆತ್ಮೀಯ ಗೆಳೆಯರಿಗೆ ವಿದಾಯ ಹೇಳಿ ಬಂದು ಜೀಪಿನಲ್ಲಿ ಕುಳಿತೆ. ಜೀಪು ನಾಗಾಲೋಟದಿಂದ ಮುಂದುವರಿದ ಹಾಗೆಯೇ ಯೋಚನೆಯ ಅಂಗಳದಲ್ಲಿ ನೆನಪಿನ ಸುರುಳಿ ಒಂದೊಂದಾಗಿ ಬಿಚ್ಚತೊಡಗಿತು.

'ಲೇ. ನಮ್ಮ ಪಕ್ಕದ ಮನೆ ಹುಡುಗಿ ನಮ್ಮ ಕುರಿತು ಒಂದು ಕಾದಂಬರಿ ಬರೆದಿದ್ದಾಳೆ....' ಸುಮಾರು ೨೫ ವರ್ಷಗಳ ಹಿಂದೆ ಮೈಸೂರು ಆಯುರ್ವೇದ ಕಾಲೇಜ್ ಆಸ್ಪತ್ರೆಯ ಶ್ವೇತಾಂಬರಿಯರಿಬ್ಬರು-ಅನುಪಮಾಪ್ರಿಯರು ಮಾತಾಡುತ್ತಿದ್ದ ಈ ಕಿವಿಮಾತುಗಳು ರೋಗಿಯನ್ನು ನೋಡಲು ಬಂದ ನನ್ನ ಕಿವಿಗೆ ಬಿದ್ದುವು. ಕಾದಂಬರಿಗಿಂತಲೂ ಅದನ್ನು ಬರೆದ ಇವರ ಪಕ್ಕದ ಮನೆಯ ಹುಡುಗಿ ಯಾರು ಎಂದು ತಿಳಿದುಕೊಳ್ಳುವ ಕುತೂಹಲದಿಂದ 'ನೋಡೋಣ' ಎಂದೆ. ಕೈಗೆ ಬಂತು. ನಾನೋದಿದ ಅನುಪಮಾರ ಪ್ರಥಮ ಕಾದಂಬರಿ 'ಶ್ವೇತಾಂಬರಿ'. ಕಾದಂಬರಿ ಅವರ ಕೈಗೆ ಮರಳಿದುದು ಮರುದಿನ ನಾನೋದಿ ಮುಗಿಸಿದ ಬಳಿಕ.

ಆಸ್ಪತ್ರೆಯೊಂದರ ನರ್ಸ್‌ಗಳ ಜೀವನ, ನಂಬುಗೆ, ಸಂಕಟ, ಸಂತೋಷಗಳ ಕುರಿತು ಬರೆದ ಈ ಕಾದಂಬರಿ ಮುಂದೆ ಅನುಪಮಾರ ಎಲ್ಲ ಸಾಹಿತ್ಯರಚನೆಗಳನ್ನೂ ಕೊಂಡು ಓದುವಂತೆ ಮಾಡಿತು. ಮೈಸೂರಿನ ಆಯುರ್ವೇದ ಕಾಲೇಜಿನ ಪಕ್ಕದಲ್ಲೇ ಇರುವುದು ಮೆಡಿಕಲ್ ಕಾಲೇಜು. ಆಧುನಿಕ ವೈದ್ಯಕೀಯ ಜ್ಞಾನಕ್ಕಾಗಿ ದಿನದ ಅರ್ಧವನ್ನು ಕಳೆಯುತ್ತಿದ್ದ ಈ ಕಾಲೇಜು ನಮಗೆ ಪಕ್ಕದ ಮನೆಯಾಗಿತ್ತು. ಅಲ್ಲಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ನಮಗೆ ಪಕ್ಕದ ಮನೆಯ ಹುಡುಗ ಹುಡುಗಿಯರಾಗಿದ್ದರು.

ಅನುಪಮಾ ಅತ್ಯಂತ ನಿಷ್ಠುರ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದಕರು. ಅದು ಅವರ ಆರಂಭದ ಕಾದಂಬರಿಗಳಲ್ಲೊಂದಾದ 'ಸಂಕೋಲೆಯೊಳಗಿಂದ'ಲೇ ಹೊರ ಚಿಮ್ಮಿತ್ತು. ಮುಂದೆ ಬಂದ ಮಾಧವಿ, ಘೋಷಗಳು ಇದನ್ನು ಬಂಡಾಯದ ಹಂತಕ್ಕೆ

ತಂದು ನಿಲ್ಲಿಸುವುವು. ಗಂಡಿನ ದಬ್ಬಾಳಿಕೆಗೆ ಸಿಲುಕಿ ರೋಗಗ್ರಸ್ತಳಾಗುವ ಹೆಂಗಸೊಬ್ಬಳ ದಿಟ್ಟ ಜೀವನದ ಕಥನ 'ಸಂಕೋಲೆಯೊಳಗಿಂದ'. ಕಾದಂಬರಿಯಿಂದ ಘಾಸಿಗೊಂಡ ಮನಸ್ಸು, ಪುಸ್ತಕದ 'ನಂದಾ'ಳ ಕುರಿತು ವಿಮರ್ಶಿಸಿತ್ತು. ಬರೆದ ನಾಲ್ಕು ಪುಟಗಳನ್ನು ಯಾವುದೋ ಒಂದು ಮಾಸಪತ್ರಿಕೆಗೆ ಕಳುಹಿಸಿದೆ. ಹೆಸರು ನೆನಪಿಲ್ಲ. ಮುಂದಿನ ತಿಂಗಳು ಉತ್ತಮ ವಿಮರ್ಶೆಯೆಂದು ಲೇಖನ ಪ್ರಕಟವಾಗಿ, ಪತ್ರಿಕೆಯ ಒಂದು ಪ್ರತಿ ಕಾಂಪ್ಲಿಮೆಂಟರಿಯಾಗಿ ಬಂತು. ಮುಂದೆ ಅನುಪಮಾರವರ ಕೆಲವು ಕಾದಂಬರಿಗಳನ್ನು ವಿಮರ್ಶಿಸಿ ಈ ಮಾಸಪತ್ರಿಕೆಗೆ ಬರೆದೆ. ಕ್ರಮೇಣ ವೈದ್ಯಕೀಯ ಓದಿನ ಜತೆ ಸಾಹಿತ್ಯ ಚಟುವಟಿಕೆ ನಿಂತೇ ಹೋಯಿತು.

ಆದರೆ ಈ ಪಕ್ಕದ ಮನೆಯ ಹುಡುಗಿಯ ಪರಿಚಯ ಬೆಳೆಸಿಕೊಳ್ಳಬೇಕೆಂಬ ಹಂಬಲ ಹೆಚ್ಚುತ್ತಾ ಬಂತು. ಕಾರಣ-ಅನುಪಮಾರವರ ಹೃದಯ ಮಿಡಿಯುವ ಕಾದಂಬರಿ ಕಥನ. ಜತೆಯಾಗಿ ಅವರ ಬಾಳಸಂಗಾತಿಯಾಗಿರುವ ನಿರಂಜನ್ ನಮ್ಮೂರವರೆಂಬ ಅಭಿಮಾನ. ನನ್ನ ತಂದೆಯವರು ಹದಿನೈದು ವರ್ಷಗಳ ತನಕ ಸುಬ್ರಹ್ಮಣ್ಯ ದೇವಳದ ಧರ್ಮದರ್ಶಿ ಮಂಡಲಿಯ ಅಧ್ಯಕ್ಷರಾಗಿ ದುಡಿದವರು. ಮೂಲತಃ ಪುತ್ತೂರು ತಾಲೂಕಿನವರಾದ ನಮಗೆ ಕುಳುಕುಂದ, ಪಂಜ, ಸುಳ್ಯ, ಕಾವುಗಳೆಲ್ಲಾ ಆಡುಂಬೊಲಗಳು. ಕಾಲೇಜಿನಲ್ಲಿರುವಾಗ ಒಂದೆರಡು ಪತ್ರಗಳನ್ನು ಬರೆದ ನೆನಪು. ಪ್ರತಿ ಪತ್ರಕ್ಕೂ ಕಾರ್ಡಿನಲ್ಲಿ ಆತ್ಮೀಯತೆಯನ್ನು ಸೂಸುವ ಚಿಕ್ಕ. ಚೊಕ್ಕ ಉತ್ತರ. 'ಸಮಯ ಸಿಕ್ಕಾಗ ಮನೆಗೊಮ್ಮೆ ಬನ್ನಿ' ಎನ್ನುವ ಪ್ರೀತಿಯ ಆಹ್ವಾನ. 'ನಿರಂಜನರೂ ನಿಮ್ಮನ್ನು ಬರಲು ಹೇಳಿರುತ್ತಾರೆ' ಎಂಬ ಒತ್ತು. ಆದರೂ....ಬಹಳಷ್ಟು ಕಾಲ ಹೋಗಲು ಆಗಲೇ ಇಲ್ಲ. ಮುಂದೊಂದು ದಿನ ತೇಜಸ್ವಿನಿಯ ಮದುವೆಯ ಸಂತೋಷಕೂಟದ ಆಮಂತ್ರಣಪತ್ರವೂ ಬಂದಿತ್ತು. ಹೋಗಿ ನನ್ನ ಆದರ್ಶಮೂರ್ತಿಗಳನ್ನು ನೋಡಿ ಬರಬೇಕೆಂದು ಮನಸ್ಸು ಚಡಪಡಿಸುತ್ತಿತ್ತು; ಅಷ್ಟೇ.

ಇಷ್ಟು ಹೊತ್ತಿಗೆ ಅನುಪಮಾ-ನಿರಂಜನರಿಬ್ಬರ ಎಲ್ಲಾ ಹೊತ್ತಗೆಗಳನ್ನೂ ನಾನು ಸಂಗ್ರಹಿಸಿದ್ದೆ. ಆದರೆ ಅನುಪಮಾರವರ 'ಕಣ್ಮಣಿ', ನಿರಂಜನರ ಅಂಕಣಗಳ ಸಂಗ್ರಹಗಳು ಸಿಗಲೇ ಇಲ್ಲ. ಒಂದು ಸಲ ನಮ್ಮ ಸ್ಥಳೀಯ ಲೈಬ್ರೆರಿಯಲ್ಲಿ ಅನುಪಮಾ-ನಿರಂಜನರ ಪುಸ್ತಕಗಳ ಕುರಿತು ವಿಚಾರಿಸಿದಾಗ "ಕೇವಲ ಒಂದೆರಡು ಪುಸ್ತಕಗಳ ಹೊರತು ಬೇರಾವುದೂ ಇಲ್ಲ" ಎಂದು ಉತ್ತರ ದೊರೆಯಿತು. ಆ ದಿನ ಲೈಬ್ರೆರಿಯನ್ ಜತೆ ದೊಡ್ಡ ಜಗಳವೇ ಆಯಿತು. "ಅಷ್ಟು ಅಭಿಮಾನ ಇರುವವರು ನೀವೆ ಏಕೆ ಒಂದು ಸೆಟ್ ನಮಗೆ ಕೊಡಬಾರದು?" ಮನಸ್ಸು ನೊಂದಿತ್ತು. ಆದರೆ ಸೋಲೊಪ್ಪಿಕೊಳ್ಳಲು ತಯಾರಿರಲಿಲ್ಲ. ಮರುದಿನ ನನ್ನಲ್ಲಿದ್ದ ನಿರಂಜನರ ಹಾಗೂ ಅನುಪಮಾರವರ ಎಲ್ಲಾ ಪುಸ್ತಕಗಳನ್ನೂ, ಬೇರಾರಿಂದಲೋ ಪಡೆದು, ಹಿಂತಿರುಗಿಸದೇ ಇದ್ದ

'ಕಣ್ಮಣಿ'ಯ ಸಹಿತ, ನಮ್ಮ ಲೈಬ್ರೆರಿಗೆ ಉತ್ತಮ ಪುಸ್ತಕ ಬೇಕು ಎಂದಾಗ ದಯವಿಟ್ಟು ಪತ್ತೇದಾರಿಗಳ ಬದಲು ಈ ಪುಸ್ತಕಗಳನ್ನು ಕೊಡಿ-ಎಂಬ ಸಲಹೆಯ ಜತೆ ಸಲ್ಲಿಸಿ, ಮತ್ತೊಮ್ಮೆ ಹೊಸ ಸಂಗ್ರಹಕ್ಕೆ ಶುರುಮಾಡಿದೆ.

೧೯೮೬-ಆಗಸ್ಟ್ ತಿಂಗಳು. ಪುತ್ತೂರಲ್ಲಿ ಬಂಧು ಮೊಳೆಯಾರರು ಸಿಕ್ಕಿದರು. ಕರ್ನಾಟಕ ಸಂಘದ ಭೀಮಕಾರ್ಯಕ್ರಮದ ವಿವರ ತಿಳಿಸಿದರು. ಹೃದಯದಲ್ಲಿ ಸಂತೋಷದ ಅಲೆಗಳು ಹರಡಲು ಶುರುವಾಗಿತ್ತು. ಬಹುದಿನಗಳ ಕನಸು ನೆನಸಿನ ಹಾದಿಯ ಕೊನೆಗೆ ಬಂದಿತ್ತು. ಸ್ನೇಹ, ಅಭಿಮಾನಗಳ ಬಹಿರಂಗ ಪ್ರದರ್ಶನಗಳನ್ನು ಎಂದೂ ಒಪ್ಪದವರು ನಿರಂಜನ ದಂಪತಿಗಳು. ಆದರೆ ನಮ್ಮ ಮನಸ್ಸು ಕೇಳಬೇಕಲ್ಲ. ಅದಕ್ಕೊಂದು ಸುವರ್ಣಾವಕಾಶವನ್ನು ಕಲ್ಪಿಸಿಕೊಟ್ಟಿದ್ದರು-ಬೋಳಂತಕೋಡಿ ಹಾಗೂ ಮೊಳೆಯಾರರು.

ನವಂಬರ್ ೨೯, ೧೯೮೬ ಶನಿವಾರ ಅಪರಾಹ್ನ ಓಡೋಡಿ ಬಂತು-ಬಹುದಿನಗಳಿಂದ ಕಾದಿದ್ದ ಆ ದಿನ. ಯಾವತ್ತೂ ಸೋಲನ್ನೊಪ್ಪಿಕೊಳ್ಳದೇ ಜೀವನದಲ್ಲಿ ಗೆದ್ದು ಬಂದ ಆ ಆದರ್ಶ ದಂಪತಿಗಳನ್ನು ಕಾಣುವ ಶುಭಗಳಿಗೆ. ಈರ್ವರನ್ನೂ ಕಣ್ಣು ತುಂಬಾ ನೋಡಿದೆ, ಕಿವಿತುಂಬಾ ಕೇಳಿದೆ. ನನ್ನ ಅವ್ಯಕ್ತ ಒಲವನ್ನು, ಅಭಿಮಾನವನ್ನು ವ್ಯಕ್ತಪಡಿಸಬೇಕಾದ ಆ ಗಳಿಗೆ ಬಂದೇ ಬಂತು. ಆಗ ತಾನೇ ಬಿಡುಗಡೆಗೊಂಡ ನಿರಂಜನ ಅಭಿನಂದನ ಗ್ರಂಥದ ಪ್ರತಿಯೊಡನೆ, ಅಭಿಮಾನಿಗಳ ಮುತ್ತಿಗೆಯಿಂದ ತುಸು ಬಿಡುಗಡೆ ದೊರೆತಾಗ....'ನಾನು ಡಾ। ಗಂಗಾಧರ ಶೇಕ ಅಂತ. ಬೆಳ್ತಂಗಡಿ....' "ಬನ್ನಿ, ಬನ್ನಿ ಡಾಕ್ಟ್ರೇ. ಬಹಳ ದಿವಸಗಳಿಂದ ನಿಮ್ಮನ್ನು ಮುಖತಃ ಭೇಟಿಯಾಗಲು ಬಯಸಿದ್ದೆ". ನನ್ನ ಆತಂಕಗಳೆಲ್ಲಾ ಒಂದೇ ಕ್ಷಣದಲ್ಲಿ ಅವರ ಮಾತಿನ ಆತ್ಮೀಯತೆಯಲ್ಲಿ ಕೊಚ್ಚಿಹೋಗಿದ್ದುವು.

ಆ ಮೋಡಿ ನನ್ನನ್ನು ಅವರವನನ್ನಾಗಿಸಿತ್ತು. ಅಭಿನಂದನ ಗ್ರಂಥ ಅವರೆದುರು ಹಿಡಿದೆ. 'ನಿಮ್ಮದೇ ಪುಸ್ತಕ ನಾನು ಕೊಟ್ಟ ಹಾಗೆ ಬರೆಯುತ್ತೇನೆ' ಎಂದು, ಡಾ। ಶೇಕರಿಗೆ, ಒಲವಿನೊಂದಿಗೆ-ನಿರಂಜನ ಎಂದು ಬರೆದು ಹಿಂತಿರುಗಿಸಿದರು. 'ಅಕ್ಕನ ಸಹಿ ಬೇಕಿತ್ತು....' 'ಡಾಕ್ಟ್ರೇ, ಇವರ ಪರಿಚಯ ಇದೆಯೇ?' ಅನುಪಮಾರಿಂದ ಅನುಮಾನದ ಒಂದು ಕಣ್ನೋಟ. ಪರಿಚಯಿಸಿದರು. ಅವರೂ ಅನುಮಾನದ ತೆರೆ ಸರಿಯಲಿಲ್ಲ. 'ಕಾಲೇಜು ದಿನಗಳಿಂದ ಬರೆಯುತ್ತಿರುವವರ ಪರಿಚಯ ಹೇಗೆ ಹಿಂದೋಡಿತು?' ಪರಿಚಯದ ಮುಗುಳ್ನಗು ಹೊರಸೂಸಿತು. ಗ್ರಂಥ ಪಡಕೊಂಡು ನಿರಂಜನರ ಸಹಿ ಕೆಳಗೆ ಅನುಪಮಾ ನಿರಂಜನ ಎಂದು ನಮೂದಿಸಿದರು. ಮುಂದಿನ ಸಲ ಬಂದಾಗ ನಿಮ್ಮಲ್ಲಿ ಬಂದಿರುತ್ತೇವೆ ಎಂದು ದಂಪತಿಗಳ ಭರವಸೆ; ಬೆಂಗಳೂರಿಗೆ ಬಂದಾಗ ಮನೆಗೆ ಖಂಡಿತಾ ಬನ್ನಿ ಎಂದು ಆತ್ಮೀಯತೆಯ ಆಹ್ವಾನ. ಮುಂದೆ ಒಂದೇ

ತಿಂಗಳೊಳಗೆ ಬೆಂಗಳೂರಿಗೆ ಹೋದಾಗ 'ಕಥೆ'ಗೆ ಭೇಟಿ ನೀಡಿದ್ದೆ-ಸೊಸೆ ಉಷಾಳ ಜತೆ. ಅಕ್ಕನ ಕೈಯ ಬಿಸಿಬಿಸಿ ಕಾಫಿ ಹೀರಿದ್ದೆ - ಅವರಿಬ್ಬರ ಮಮತೆಯನ್ನು ಮೆಲು ಕಾಡುತ್ತಾ.

ಎಷ್ಟೊಂದು ಜನರಿಗೆ ಈ ಮಮತೆಯ ಕೈತುತ್ತು ಇತ್ತಿದೆಯೋ ಈ ಜೀವ. ಬದುಕಿನ ಕುರಿತು ಅಚಲ ಶ್ರದ್ಧೆ, ಮಾನವ ಜನಾಂಗದ ಕುರಿತು ಅಸೀಮ ಮಮತೆ, ಎಲ್ಲರ ಉತ್ಕರ್ಷದಲ್ಲೂ ಆನಂದಪಡುವ ಧೀಮಂತ ಮೂರ್ತಿ. ಎಂತಹ ಕಷ್ಟದಲ್ಲೂ ಸೋಲನ್ನೊಪ್ಪದ ಮೇರುಗಿರಿ-ಅಕ್ಕ, ಅನುಪಮಾ.

ಕೆಚ್ಚೆದೆಯ ಬದುಕು ೧

- ಡಾ। ಎನ್. ಲಲಿತ

ಆಕೆ ತಾವೇ ಸ್ವತಃ ವೈದ್ಯರಾಗಿದ್ದು ಇಂಥ ಕಠಿಣ ಕಾಯಿಲೆಯನ್ನು (ಕ್ಯಾನ್ಸರ್) ಎದುರಿಸುವ ರೀತಿಯನ್ನು ನೋಡಿ ವೈದ್ಯವೃತ್ತಿಯಲ್ಲಿರುವ ನಾನು ಕೂಡ ಮೆಚ್ಚಿದ್ದೇನೆ. ಈ ಕಾಯಿಲೆಯ ಜೊತೆಯಲ್ಲಿ ಸುಮಾರು ಹತ್ತು ವರ್ಷಗಳಿಂದಲೂ ಹೋರಾಡುತ್ತಾ ಬಂದಿದ್ದಾರೆ. ಒಂದೇ, ಎರಡೇ, ಐದು ಗಂಭೀರ ಶಸ್ತ್ರಚಿಕಿತ್ಸೆಗಳು, ಕಡು ಕಠಿಣವಾದ ಔಷಧ ಮತ್ತು ಚುಚ್ಚುಮದ್ದಿನ ಚಿಕಿತ್ಸೆಗಳನ್ನೆಲ್ಲಾ ತಾಳಿಕೊಂಡು ಬಂದಿದ್ದಾರೆ. ಅಂತಹವರಲ್ಲೂ ಧೈರ್ಯಗೆಡದೆ ತಮ್ಮ ಬರವಣಿಗೆಯನ್ನು ಕೈಬಿಡದೆ ಸಾಧಿಸಿ ಮುನ್ನಡೆಯುವ ಧ್ಯೇಯ ಅವರದು.

ವೈದ್ಯಕೀಯ ಚಿಕಿತ್ಸೆಗಿಂತಲೂ ಅವರ ವಿಶ್ವಾಸವೇ ಅವರ ಕಾಯಿಲೆಯನ್ನು ತಡೆಹಿಡಿದಿರುವ ಅಪೂರ್ವ ಶಕ್ತಿಯಾಗಿದೆ.

ಶ್ರೀಮತಿ ತಿರುಮಲಾಂಬರವರ ಹೆಸರಿನಲ್ಲಿ ಮಹಿಳೆಯರಿಗಾಗಿ ಇಟ್ಟಿರುವ 'ಶ್ರೇಷ್ಠ ಪ್ರಶಸ್ತಿ' ಶ್ರೀಮತಿ ಅನುಪಮಾ ನಿರಂಜನರಿಗೆ ಅವರದೇ ಆದ ಜೀವನ ಚರಿತ್ರೆ "ನೆನಪು: ಸಿಹಿ. ಕಹಿ"ಗೆ ಸಿಕ್ಕಿದೆ. ಆ ಹೊತ್ತಿಗೆಯಲ್ಲಿ ಅವರದೇ ಆದ ಜೀವನ ಕಥನ ದಲ್ಲಿ ತಮಗೆ ಆದ ಮಾನಸಿಕ, ದೈಹಿಕ ಮತ್ತು ಸುತ್ತಮುತ್ತ ನಡೆದುಬಂದ ಪ್ರಸಂಗಗಳನ್ನು ಸಹಜ ಮತ್ತು ಸರಳ ರೀತಿಯಲ್ಲಿ ರೂಪಿಸಿ ಬರೆದು ಕನ್ನಡ ಸಾಹಿತ್ಯಕ್ಕೆ ಒಂದು ಉತ್ತಮ ಕೊಡಿಗೆಯನ್ನು ಕೊಟ್ಟಿದ್ದಾರೆ. ಅವರ ಕಥೆ, ಕಾದಂಬರಿಗಳು, ವೈದ್ಯಕೀಯ, ಸಾಮಾಜಿಕ ಮುಂತಾದ ಹಲವು ಬೋಧಪ್ರದ ಲೇಖನಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವುದಲ್ಲದೆ, ಸ್ವತಃ ಕೂಡ ಪ್ರಕಾಶಪಡಿಸಿದ್ದಾರೆ.

ಅವರು ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಕೊಡುವ ದರ್ಶನಗಳಲ್ಲಿ ಕಾಯಿಲೆಗಳ ವಿಷಯವಲ್ಲದೆ ಇನ್ನೂ ಎಷ್ಟೋ ತರಹದ ಕಾರ್ಯಕ್ರಮಗಳನ್ನು ಬಹಳ ಸರಳವಾಗಿ ಎಲ್ಲರಿಗೂ ಮನಮುಟ್ಟುವಂತೆ ಹೇಳುವುದನ್ನು ಎಲ್ಲರೂ ಕೇಳಿದ್ದಾರೆ.

ಅವರಿಗೆ ಶಾರೀರಿಕವಾಗಿ ತೊಂದರೆಗಳಿದ್ದರೂ ದಿಟ್ಟತನದಿಂದ ಕಾಯಕವನ್ನು ನಡೆಸುತ್ತಾ ಇದ್ದಾರೆ.

ವೈದ್ಯಕೀಯ ತಜ್ಞೆಯಾಗಿ ಈ ಕಾಯಿಲೆಯಿಂದ ಬಳಲುವ ಹಲವಾರು ರೋಗಿಗಳನ್ನು ದಿನದಿನವೂ, ಮುಂದೂ ನೋಡುತ್ತಾ ಇರುವ ನಾನು, ಬೇರೆ ರೋಗಿಗಳೂ ಶ್ರೀಮತಿ ಅನುಪಮಾ ನಿರಂಜನರವರ ಆದರ್ಶವನ್ನು ಅನುಸರಿಸಲಿ ಎಂದು ಹಾರೈಸುತ್ತೇನೆ.

೦ ಮೃದು ಮಧುರ ಸ್ನೇಹ

- ಶಾಂತಾದೇವಿ ಕಣವಿ

ನಾವು ೧೯೬೧ರ ಡಿಸೆಂಬರನಲ್ಲಿ ಸಾರಸ್ವತಪುರದ ಮನೆಯನ್ನು ಬಿಟ್ಟು ಕರ್ನಾಟಕ ವಿಶ್ವವಿದ್ಯಾಲಯದ ಕ್ವಾರ್ಟರ್ಸನಲ್ಲಿ ವಾಸಿಸಲು ಹೋದ ಸಂದರ್ಭದಲ್ಲಿ ಅನುಪಮಾ ನಿರಂಜನರನ್ನು ಧಾರವಾಡದಿಂದ ಬೆಂಗಳೂರಿಗೆ ಬೀಳ್ಕೊಟ್ಟೆವು. ಅವರು ಹೋಗುವ ಮೊದಲು ಪುಟ್ಟ ತೇಜುನೊಡನೆ ನಮ್ಮ ಮನೆಗೆ ಬಂದಾಗ ರಸಗುಲ್ಲ ತಿನ್ನಲು ಕೊಟ್ಟ ನೆನಪು. ಅಂದಿನಿಂದ ಇಂದಿನ ವರೆಗೂ ಅವರ ಸ್ನೇಹ ಮೃದು, ಮಧುರ.

ಬೆಂಗಳೂರಿಗೆ ಹೋಗಿ ಸಲೆಸಿ ತಿಂಗಳು ಕಳೆದ ಮೇಲೆ ಅನುಪಮಾರಿಂದ ಮೊದಲ ಪತ್ರ ಬಂದಿತು, ೨೨–೯–೬೨ರಂದು. ಅಂದಿನಿಂದ ಇಂದಿಗೂ ಪತ್ರದೂತ ನಮ್ಮಿಬ್ಬರ ನಡುವಿನ ನೂರಾರು ಮೈಲುಗಳ ಅಂತರವನ್ನು ಕಡಿಮೆ ಮಾಡಿದ್ದಾನೆ ಎನ್ನುವುದು ಸಂತೋಷದ ಸಂಗತಿ. ಈ ಪತ್ರಗಳ ಮೂಲಕ ಅನುಪಮಾ ಅವರ ಅಂತರಂಗ ಇನ್ನಷ್ಟು ತುಂಬಿಕೊಂಡು ಇವರ ವ್ಯಕ್ತಿತ್ವದ ಬಗ್ಗೆ ಆತ್ಮೀಯತೆಯನ್ನು ಹೆಚ್ಚಿಸುತ್ತದೆ.

ಮಕ್ಕಳ ಪಾಲನೆ, ಗಂಡನ ಯೋಗಕ್ಷೇಮ, ಕ್ಲಿನಿಕ್‌ನ ಬಿಡುವಿಲ್ಲದ ಕೆಲಸ, ಬರವಣಿಗೆ, ತಮ್ಮ ಅನಾರೋಗ್ಯ, ಸಾಲುಸಾಲಾಗಿ ಯಮದೂತರಂತೆ ಬಂದ ಆಪರೇಶನ್‌ಗಳು, ಸಭೆ-ಸಮ್ಮೇಳನ - ಭಾಷಣಗಳು, ವಿದೇಶ-ಪ್ರವಾಸ, ಮಗಳ ಮದುವೆ ಈ ಎಲ್ಲ ಕೆಲಸಗಳ ಮಧ್ಯೆಯೂ ನನ್ನ ಪತ್ರಗಳಿಗೆ ತಕ್ಷಣ ಉತ್ತರ ಬರೆದು ನನ್ನ ಹೃದಯಕ್ಕೆ ಇನ್ನೂ ಹತ್ತಿರವಾದರು ಅನುಪಮಾ.

ಅವರು ಧಾರವಾಡದಿಂದ ಹೊರಟಾಗ ನಾನು ಗರ್ಭಿಣಿ. ನಾನು ಸುದ್ದಿ ತಿಳಿಸುವ ಮೊದಲೇ ಅವರು ಬರೆದರು: "ಶ್ರೀಮತಿ ಶಾಂತಾದೇವಿ ಮಾಳವಾಡ ನಮ್ಮಲ್ಲಿ ಬಂದಾಗ ನಿಮಗೆ ಮಗ ಹುಟ್ಟಿದ ವಾರ್ತೆ ತಿಳಿಸಿದರು. ಕೇಳಿ ಸಂತೋಷವಾಯಿತು. ಮಗನಿಗೆ ಏನೆಂದು ಹೆಸರಿಟ್ಟಿದ್ದೀರಿ? ಅವನು ಆರೋಗ್ಯವಾಗಿರುವನೆ? ಪ್ರಿಯದರ್ಶಿ ಹೇಗಿದ್ದಾನೆ? ರಂಜನಾ, ಆನಂದ, ಚಂದ್ರ ಚೆನ್ನಾಗಿರುವರೇ?" ಇದು ಅವರು ಸ್ನೇಹ ವನ್ನು ಉಳಿಸಿ ಬೆಳೆಸಿಕೊಳ್ಳುವ ರೀತಿ.

ನಡುವೆ ಕೆಲವು ಕಾಲ ನಮ್ಮ ನಡುವೆ ಪತ್ರವ್ಯವಹಾರವಿರಲಿಲ್ಲ. ಆದರೆ ಅವರ ಕಥೆ, ಕಾದಂಬರಿಗಳನ್ನು ಓದುತ್ತ ಇದ್ದುದರಿಂದ ದೂರವಾಗಿದ್ದೆವೆಂದು ನನಗೇನೂ ಅನಿಸಿರಲಿಲ್ಲ. ೭೯ರಲ್ಲಿ ಅವರಿಗೆ ಕ್ಯಾನ್ಸರ್ ಆಗಿದ್ದ ವಿಷಯ ತಿಳಿಯಿತು. ದುಃಖವಾಯಿತು. ಆದರೆ ಮೊದಲೇ ಸಂಕೋಚ ಸ್ವಭಾವದ ನನಗೆ ಈ ವಿಷಯ ಅವರಿಗೇ ನೇರವಾಗಿ ಬರೆಯಲೂ ಅಧೈರ್ಯ. ಆಗ ಅವರೇ ಬರೆದರು:

"ಕಳೆದ ವರ್ಷ ನನಗೆ ಜಡ್ಡಾದ ಸುದ್ದಿ ನೀವು ಕೇಳಿರಬೇಕು. ಸ್ತನದಲ್ಲಿ ಗಡ್ಡೆಯಾಗಿತ್ತು. ಅಪರೇಶನ್ ಮಾಡಿಸಿದಾಗ ಅದು ಕ್ಯಾನ್ಸರ್ ಎಂದು ತಿಳಿಯಿತು. ಮುಂಬಯಿಗೆ ಹೋಗಿ ಚಿಕಿತ್ಸೆ ಪಡೆದು ಬಂದೆ. ಈಗ ಒಂದೂವರೆ ವರ್ಷವಾಯಿತು. ದೈಹಿಕವಾಗಿ ಯಾವ ತೊಂದರೆಯೂ ಇಲ್ಲದೆ ಸೌಖ್ಯವಾಗಿದ್ದೇನೆ. ಬೆಳಗಿನ ಒಂದು ಹೊತ್ತು ಕ್ಲಿನಿಕ್‌ಗೆ ಹೋಗಿ ಬರುತ್ತೇನೆ, ಸಂಜೆ ಮನೆಯಲ್ಲೇ. ಬರವಣಿಗೆ, ಓದು, ಚರ್ಚೆ ಇತ್ಯಾದಿಗಳಿಗೆ ಈಗ ಸಂಜೆ ಮೀಸಲು. ಆರು ತಿಂಗಳಿಗೊಮ್ಮೆ ಮುಂಬಯಿಗೆ ಚೆಕ್‌ಅಪ್‌ಗೆಂದು ಹೋಗಿಬರುತ್ತಿದ್ದೇನೆ.

ಅಂತೂ ಬದುಕಿನಲ್ಲಿ ಏಟುಗಳ ಮೇಲೆ ಏಟು ಬಿದ್ದು ಜರ್ಜರಿತರಾಗಿದ್ದೇವೆ. ಆದರೂ ಮೇಲೆದ್ದು ನಡೆಯುವ ಆಸೆ".

ಹೋರಾಟದ ಮನೋಭಾವದ ಅನುಪಮಾ ಶರೀರದೊಡನೆಯೂ ಹೋರಾಡಿ ಗೆಲ್ಲುತ್ತಿದ್ದಾರೆ. ಇದು ಅವರ ಮಾನಸಿಕ ಶಕ್ತಿಯ ವಿಜಯ. ಪ್ರತಿ ಆರು ತಿಂಗಳಿಗೊಮ್ಮೆ ಮರುಹುಟ್ಟು ಪಡೆಯುತ್ತಿರುವೆನೆನ್ನುವ ಅನುಪಮಾ ತಮ್ಮ ತೆಕ್ಕೆಗೆ ಸಿಕ್ಕುವ ಪ್ರತಿ ಕ್ಷಣವನ್ನೂ ಬಳಸಬಯಸುತ್ತಾರೆ. ಅವರ ಇನ್ನೊಂದು ಕಾಗದ ಹೀಗಿತ್ತು:

"ನಾನು ಯುರೋ ಅಮೇರಿಕ ಪ್ರವಾಸ ಹೋದಾಗ ರೋಂ, ಫ್ಲಾರೆನ್ಸ್, ಮಿಲಾನ್, ಜಿನೀವಾ, ಬರ್ನ್, ಪ್ಯಾರಿಸ್, ಲಂಡನ್, ನ್ಯೂಯಾರ್ಕ್, ವಾಶಿಂಗಟನ್, ಫ್ಲೋರಿಡಾ, ಲಾಸ್ ಎಂಜಲಿಸ್ ಮುಂತಾದುವನ್ನು ನೋಡಿದೆ. 'ಆಂಗೈಯಲ್ಲಿ ಯುರೋ ಅಮೇರಿಕ' ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರವಾಸ ಕಥನವನ್ನು ಬರೆದಿದ್ದೇನೆ.

ಹೀಗೆ ಪ್ರವಾಸ ಹೋದದ್ದು-ಆರೋಗ್ಯ ಚೆನ್ನಾಗಿರುವಾಗ ವಿದೇಶ ನೋಡಿ ಬರಬೇಕೆನ್ನುವ ಸನ್ನಾಸೆ ಪೂರೈಸಿಕೊಳ್ಳಲಿಕ್ಕಾಗಿ. ಮುಂದೆ ಯಾವಾಗ ಏನಾಗುತ್ತದೋ ಬಲ್ಲವರಾರು?"

ಇಂಥದೇ ಒಂದು ಮನಸ್ಥಿತಿಯಲ್ಲಿ ಮತ್ತೊಮ್ಮೆ ಬರೆದರು:

"ಇಪ್ಪತ್ತೈದು ವರ್ಷಗಳ ಹಿಂದೆ ನೀವು ಮೈಸೂರಿಗೆ ಬಂದದ್ದು. ಮಗುವಾದ ರಂಜನಾಳನ್ನು ಕಂಡು 'ಇಂಥ ಮುದ್ದು ಮಗು ನನಗೂ ಬೇಕು' ಅನಿಸಿದ್ದು, ಇವೆಲ್ಲ ನೆನಪುಗಳು ಇನ್ನೂ ನಿಚ್ಚಳವಾಗಿವೆ".

"ಹಾಗೆಂದೇ ನನ್ನ ನೆನಪುಗಳ ಹೊತ್ತಗೆಯೊಂದನ್ನು ಬರೆಯಲಾರಂಭಿಸಿರುವೆ. ನಮ್ಮ ಬದುಕಿನಲ್ಲಿ ನಲಿವೂ ಹೆಚ್ಚು; ನೋವೂ ಹೆಚ್ಚು. ನಾವು ಕಂಡ ಸ್ನೇಹಿತರು, ಅವರ ವಾತ್ಸಲ್ಯ; ಇದು ಕೂಡಾ ಮಹಾಪೂರವೇ. ನನ್ನ ಆಯುಸ್ಸು ಸೀಮಿತ ಎಂದು ನನಗೆ ಗೊತ್ತು. ಆದ್ದರಿಂದ ಬರೆಯಬೇಕು ಎನ್ನಿಸಿದುದನ್ನು ನಾಳೆಗೆ ಎಂದು ಇಡುವ ಧೈರ್ಯವಿಲ್ಲ. [ಸಾಮಾನ್ಯವಾಗಿ ನೆನಪು-ಆತ್ಮಕಥನ ಬರೆಯುವವರಿಗೆ ೬೦ ವರ್ಷವಾದರೂ ಆಗಿರಬೇಕು. ನನಗೀಗ ೪೮.]"

ಹೀಗೆ ಮೂಡಿ ಬೆಳೆದು ಪ್ರಕಟಣೆಗೊಂಡ ಆತ್ಮಕಥನ 'ನೆನಪು; ಸಿಹಿ-ಕಹಿ'ಯ ಬಗ್ಗೆ ಮತ್ತೆ ಬರೆದರು:

"ನೆನಪು; ಸಿಹಿ-ಕಹಿಗೆ ಬರುತ್ತಿರುವ ಪ್ರತಿಕ್ರಿಯೆ ನನ್ನನ್ನು ದಂಗು ಬಡಿಸಿದೆ. ಎಲ್ಲ ಸ್ತರದ ಜನರಿಂದ, ಗಂಡು-ಹೆಣ್ಣು, ಜಾತಿ, ಧರ್ಮ ಭೇದವಿಲ್ಲದೆ ದಿನವೂ ಪತ್ರಗಳು ಬರುತ್ತಿವೆ. ನನ್ನ ಸಾಹಿತ್ಯಿಕ ಬದುಕಿನಲ್ಲಿ ಇಂಥ ಸಾಮೂಹಿಕ ಒಲವಿನ ಅನುಭವ ಎಂದೂ ಆಗಿರಲಿಲ್ಲ. ಬಹುಶಃ ನನ್ನ ಜೇತರಿಕೆಗೆ ಈ ಶುಭ ಹಾರೈಕೆಗಳು ಕಾರಣ ಎಂದು ತಿಳಕೊಂಡಿದ್ದೇನೆ".

"ನೆನಪು: ಸಿಹಿ-ಕಹಿ"ಗೆ ತಿರುಮಲಾಂಬಾ ಪ್ರಶಸ್ತಿ ದೊರೆತದ್ದು ಎಲ್ಲರ ಸಂತೋಷಕ್ಕೆ ಕಾರಣವಾಯಿತು.

ಮಾತೃವತ್ಸಲೆ ಅನುಪಮಾರ ಪತ್ರ ಹೀಗಿತ್ತು :

"ತೇಜಸ್ವಿನಿ ೧೫ರಂದು ಅಮೇರಿಕೆಗೆ ಹೊರಟಳು, ಮುಂಬಯಿಯಿಂದ. ಅವಳನ್ನು ಕಳಿಸಿಕೊಡಲು ನಾವ್ಯಾರೂ ಹೋಗಲಿಲ್ಲ. ಇಲ್ಲಿಯೇ ವಿದಾಯ ಹೇಳಿದೆವು. ನಾವು ಇಲ್ಲವೆಂದು ಮುಂಬಯಿ ಸ್ನೇಹಿತರು ಅವಳಿಗೆ ಹೆಚ್ಚಿನ ಪ್ರೀತಿ ತೋರಿಸುವಲ್ಲಿ ಮುಂದಾದರು. ಇದು ನಮ್ಮ ಭಾಗ್ಯ. ತೇಜಸ್ವಿನಿ ಲಾಸ್ ಎಂಜಲಿಸ್ ತಲುಪಿ ಕೇಬಲ್, ಕಾಗದ, ಫೋನು ಎಲ್ಲ ಬಂದವು. ಫೋನಿನಲ್ಲಿ ಅವಳು ಮಾತಾಡಿದಾಗ ಅವಳ

ಧ್ವನಿ ಕೇಳಿ ನಮಗೆಲ್ಲ ಪುಳಕ! ೧೨,೦೦೦ ಮೈಲು ದೂರದಾಚೆಯಿಂದ ಆ ಧ್ವನಿ ಎಷ್ಟು ಸ್ಪಷ್ಟವಾಗಿ ಕೇಳುತ್ತಿತ್ತು! ಅವಳು ಹೊಸ ವಾತಾವರಣಕ್ಕೆ ಹೊಂದಿಕೊಳ್ಳು ತ್ತಿದ್ದಾಳೆ.

"ಸೀಮಾ ಮೊದಲನೆಯ P.U.C.ಯಲ್ಲಿ ಕಾಲೇಜಿಗೆ ಮೊದಲ ರ್‍ಯಾಂಕ್ ಬಂದಿದ್ದಾಳೆ. ಅಕ್ಕನಿಗಿಂತ ಇವಳು ಓದಿನಲ್ಲಿ ಹಿಂದಿಲ್ಲ ಎಂಬುದು ನನಗೆ ತುಂಬಾ ಸಮಾಧಾನ. ನಿರಂಜನರಿಗೆ ವಿಶ್ವಕಥಾಕೋಶ ಸಂಪಾದನೆಯ ಕೆಲಸದಲ್ಲಿ ತುಂಬಾ ಸಹಾಯ ಮಾಡುತ್ತಾಳೆ."

ತೇಜಸ್ವಿನಿ-ಸೀಮಂತಿನಿ ಇಬ್ಬರೂ ಅನುಪಮಾ-ನಿರಂಜನರ ಅನಾರೋಗ್ಯಕ್ಕೆ ಸಂಜೀವನಿಯಾಗಿದ್ದಾರೆ.

"ಮಕ್ಕಳು ದೊಡ್ಡವರಾದಾಗ ನಾವು ಇದ್ದಕ್ಕಿದ್ದಂತೆ ಒಂಟಿಯಾಗುವ ಪ್ರಸಂಗ ಎಷ್ಟು ಕರುಣಾಜನಕ ಅಲ್ಲವೆ?" ಎಂದು ಒಮ್ಮೆ ಬರೆದರೆ ಇನ್ನೊಮ್ಮೆ "ತೇಜಸ್ವಿನಿ ಕ್ಯಾಲಿಫೋರ್ನಿಯಾಕ್ಕೆ ಹೋಗುತ್ತಾಳೆ ಸಪ್ಟಂಬರಿನಲ್ಲಿ. ನನ್ನ ಕಾಯಿಲೆಗೂ ಅವಳು ಹೋಗುವುದಕ್ಕೂ ಯಾವ ತಾಳೆಯೂ ಇಲ್ಲ. ಮಕ್ಕಳ ಭವಿಷ್ಯಕ್ಕೆ ನಾವು ಅಡ್ಡಿ ಬರಲೇಬಾರದು. ನಾವು ದಾರಿಯ ಕೊನೆಗೆ ಬಂದು ನಿಂತವರು. ಅವರ ಬದುಕಿನ್ನೂ ಅರಳುತ್ತಿರುವಂಥದು. ಅಲ್ಲಿಯೂ ತೇಜಸ್ವಿನಿ ಒಳ್ಳೆಯ ಹೆಸರು ಪಡೆಯುವುದರಲ್ಲಿ ಸಂಶಯವಿಲ್ಲ" ಎಂದು ಬರೆದಾಗ ಅನುಪಮಾ ಎಂದರೆ ಉಪಮಾತೀತ ಎಂದುಕೊಂಡೆ.

ಬಹಳ ವರ್ಷಗಳ ಬಳಿಕ ಅವರ ಮನೆಗೆ ಹೋದಾಗಲೂ ನನಗೆ ಅವರ ಆರೋಗ್ಯದ ಬಗ್ಗೆ ಕೇಳಲು ಬಾಯಿ ಬರದೆ ಬೇರೆಲ್ಲಾ ಹರಟೆ ಹೊಡೆದು ತಿರುಗಿ ಊರಿಗೆ ಬಂದ ಮೇಲೆ ಆ ವಿಷಯ ಕುರಿತು ಬರೆದೆ. ತಕ್ಷಣ ಉತ್ತರ ಬಂದಿತು:

"ನೀವು ನಮ್ಮ ಮನೆಗೆ ಬಂದಾಗ ನಾವೂ ನೀವೂ ಭೇಟಿಯಾಗಿ ಹಲವು ವರ್ಷ ಗಳಾಯಿತು ಎಂದು ನನಗನಿಸಲೇ ಇಲ್ಲ. ಪತ್ರಗಳ ಮುಖೇನ ನಡೆಯುವ ಸ್ನೇಹ ಸಿಂಚನ ನಮ್ಮನ್ನು ಅಷ್ಟು ಹತ್ತಿರಕ್ಕೆ ತಂದಿದೆ. ಹಳೆಯ ಎಳೆಯನ್ನು ಹಿಡಿದು ಮಾತಾಡಿದೆವು. ತುಂಬ ಆನಂದವಾಯಿತು. ನೀವು ಬಂದು ಹೋದದ್ದು. ಹೀಗೇ ಆಗಾಗ ಬರುತ್ತಿರಿ. ನನ್ನ ಆರೋಗ್ಯದ ಬಗ್ಗೆ ವಿಚಾರಿಸುವಂಥದು ಏನಿತ್ತು? ಎಲ್ಲ ವನ್ನೂ ಪತ್ರದಲ್ಲಿ ಬರೆದಿದ್ದೆನಲ್ಲ. ಇಂಜೆಕ್ಷನ್ ಮುಗಿದು ಮಾತ್ರೆಗಳು ಆರಂಭವಾಗಿವೆ. ಆಗಸ್ಟವರೆಗೂ ಇವೆ. ಸಪ್ಟಂಬರಿನಲ್ಲಿ ಚೆಕಪ್‌ಗೆ ಮುಂಬಯಿಗೆ ಹೋಗಬೇಕು. ಲವಲವಿಕೆಯಿಂದಿದ್ದೇನೆ. ಮನೆಗೆಲಸ, ಬರವಣಿಗೆ, ಓದು ಇವುಗಳನ್ನು ನಿರಾಯಾಸ ದಿಂದ ನಡೆಸಿಕೊಂಡು ಹೋಗುತ್ತಿದ್ದೇನೆ. ಇದಕ್ಕಿಂತ ಹೆಚ್ಚಿಗೆ ಯಾಕೆ ಆಸೆ ಪಡ ಬೇಕು?"

ಜೀವನದೊಡನೆ ಅನುಪಮಾ ರಾಜಿ ಮಾಡಿಕೊಳ್ಳುವುದು ಈ ರೀತಿಯಾಗಿ.

ನನ್ನ ಕಥಾಸಂಗ್ರಹಗಳನ್ನು, ಅಲ್ಲಲ್ಲಿ ಪತ್ರಿಕೆಗಳಲ್ಲಿ ಬಂದ ಕಥೆಗಳನ್ನು ಓದಿ ಕೂಡಲೆ ನನಗೆ ತಮ್ಮ ಅನಿಸಿಕೆಯನ್ನು ಬರೆಯುತ್ತಾರೆ. "ಅಂದ ಹಾಗೆ ನೀವು ಕಾದಂಬರಿ ಬರೆಯುವುದು ಯಾವಾಗ? ಕೈಗೆ ಬಿಡುವಿದೆ ಎಂದಿದ್ದೀರಿ. ಬೇಗ ಬರೆಯಿರಿ. ನೀವು ಕಾದಂಬರಿ ಬರೆದ ಹೊರತು ನನಗೆ ಸಮಾಧಾನವಿಲ್ಲ" ಎಂದು ಪ್ರೀತಿಯ ಒತ್ತಾಯ ತರುತ್ತಾರೆ. ಸಹಲೇಖಕಿಯರೊಡನೆ ಅನುಪಮಾ ನಡೆದುಕೊಳ್ಳುವ ಸೌಜನ್ಯ ಯುತ ರೀತಿ ಇದು.

ಬರವಣಿಗೆಗಾಗಿಯೇ ನಾನು ಬದುಕಿದ್ದೇನೆ ಎಂದು ನಂಬಿಕೊಂಡ ಅನುಪಮಾ ಒಂದು ಮುಗಿದೊಡನೆ ಇನ್ನೊಂದು ಕೈಗೆತ್ತಿಕೊಳ್ಳುತ್ತ ಇತ್ತೀಚೆಗೆ ಹೊಸ ವಸ್ತು, ಹೊಸ ವಿಚಾರ, ಹೊಸ ತಂತ್ರಗಳ ಕೆಲವು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. "ಕೊಳಚೆ ಕೊಂಪೆಯ ದಾನಿಗಳು", "ಘೋಷ", "ಮುಕ್ತಚಿತ್ರ", "ಅಳ" ಇತ್ಯಾದಿ ಇಲ್ಲಿ ಹೆಸರಿಸಬಹುದು.

ಕಥಾಸಂಕಲನಗಳು, ಕಾದಂಬರಿಗಳು, ಆತ್ಮಕಥನ, ವೈದ್ಯಕೀಯ ಪುಸ್ತಕ ಗಳು, ಶಿಶುಸಾಹಿತ್ಯ ಹೀಗೆ ಬೇರೆ ಬೇರೆ ಪ್ರಕಾರದ ಸಾಹಿತ್ಯ ರಚಿಸಿದ ಅನುಪಮಾರ ಲೇಖನಿಗೆ ದಣಿವಿಲ್ಲ. ಅವರು ಈಚೆಗೆ ಕವನಗಳನ್ನೂ ಬರೆಯುತ್ತಿದ್ದು ಸದ್ಯದಲ್ಲಿಯೇ ಕವನ ಸಂಕಲನ ಪ್ರಕಟಿಸಿದರೆ ಆಶ್ಚರ್ಯಪಡಬೇಕಿಲ್ಲ. ಮಹಿಳಾ ಸಾಹಿತ್ಯವನ್ನು ಎರಡನೆ ದರ್ಜೆಯ ಸಾಹಿತ್ಯವೆಂದು ತಿಳಿದು ದಿವ್ಯ ನಿರ್ಲಕ್ಷ್ಯ ತೋರುವ ವಿಮರ್ಶಕರ ಕುರಿತು ಅನುಪಮಾಗೆ ಸಾತ್ವಿಕ ಕೋಪ. ಅದನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಅವರು ಪ್ರಕಟಪಡಿಸಿದ್ದಾರೆ.

ನಾವೊಮ್ಮೆ ಅವರ ಮನೆಗೆ ಹೋದಾಗ ನಿರಂಜನರು, "ನೋಡ್ರಿ ಶಾಂತಾ, ಇವರು ನಮ್ಮ ಕೈಬಿಟ್ಟು ಹೊರಟಿದ್ದರಲ್ರಿ" ಎಂದು ಅನುಪಮಾನತ್ತ ಕೈತೋರಿಸಿದರು.

"ಅವರಿಗೆ ಇನ್ನೂ ಇಪ್ಪತ್ತು ವರ್ಷ ಏನೂ ಆಗೂದಿಲ್ರೀ. ಆರಾಮಾಗಿ ಇರ್ತಾರ" ಎಂದೆ ನಾನು ನಗುತ್ತ ಒಳಗೇ ನೋಯುತ್ತಿದ್ದರೂ.

"ಅಯ್ಯೋ ಬೇಡಪ್ಪಾ, ಹಣ್ಣು ಮುದುಕಿ ಆಗೋದು ನಂಗೆ ಬೇಡಾ" ಅಂದರು ಅನುಪಮಾ. ಎಲ್ಲರೂ ನಕ್ಕೆವು.

ಅನುಪಮಾಗೆ ಆಪರೇಶನ್ ಆಗುತ್ತಿದ್ದಾಗ ನಿರಂಜನರ "ಪೆಜ್ಜೆ" (ಕಾದಂಬರಿ) ನಿಲ್ಲುತ್ತದೆ. ನಿರಂಜನರಿಗೆ ತಲೆತಿರುಗು ಬಂದರೆ ಅನುಪಮಾರ ಪೆನ್ನು ಕುಂಟುತ್ತದೆ. ಪೆಜ್ಜೆ ನಿಲ್ಲದೆ, ಪೆನ್ನು ಕುಂಟದೆ ಅನುಪಮಾ - ನಿರಂಜನರು ನಮ್ಮ ನಡುವೆ ಹಲವು ವರ್ಷ ಹರ್ಷದಿಂದ ಬಾಳುವಂತಾಗಲಿ ಎಂಬುದೇ ನಮ್ಮೆಲ್ಲರ ಹೃದಯದ ಹಾರೈಕೆ.

ಅನುಕರಣೀಯ ವ್ಯಕ್ತಿತ್ವ

- ಭುವನೇಶ್ವರಿ ಹೆಗಡೆ

ಎಲ್ಲವೂ ಅನುಕೂಲಕರವಾಗಿದ್ದಾಗ, ದೈವ ಉತ್ತೇಜಕ ವಾತಾವರಣವನ್ನಷ್ಟೆ ಕಲ್ಪಿಸಿಕೊಟ್ಟಾಗ ಯಶಸ್ಸಿನತ್ತ ಮುನ್ನಡೆಯುವುದಾಗಲೀ ಸಾಧನೆಗೈಯುತ್ತಲೇ ಹೋಗುವುದಾಗಲಿ ಆಶ್ಚರ್ಯದ ಮಾತಲ್ಲ. ಆದರೆ ಎದೆನಡುಗಿಸುವ ಪ್ರತಿಕೂಲ ವಾತಾವರಣದಲ್ಲಿಯೂ ಸಮತೋಲನ ಕಳೆದುಕೊಳ್ಳದೇ ಕಷ್ಟಪರಂಪರೆಗಳ ಪ್ರಹಾರಕ್ಕೆ ತಮ್ಮನ್ನು ಒಡ್ಡಿಕೊಂಡೂ ಸಾಧನೆಯ ಪದದಿಂದ ವಿಚಲಿತರಾಗದೇ ಯಶಸ್ಸನ್ನು ಸಾಧಿಸುವುದು ಅಪರೂಪದ ವ್ಯಕ್ತಿಗಳು ಮಾತ್ರ ಮಾಡಿತೋರಿಸಬಹುದಾದ ಅಪರೂಪದ ಸಾಧನೆ.

ಡಾ। ಅನುಪಮಾರತ್ತ ನಾನು ಆಕರ್ಷಿತಳಾದುದು ಅವರಲ್ಲಿ ನಾನು ಗುರುತಿಸಿದ ಈ ಅಪರೂಪದ ಗುಣದಿಂದಾಗಿಯೇ. 'ತರಂಗ' ವಾರಪತ್ರಿಕೆಯಲ್ಲಿ ಅನುಪಮಾರ 'ನೆನಪು: ಸಿಹಿ-ಕಹಿ' ಆತ್ಮಕಥನ ಧಾರಾವಾಹಿಯಾಗಿ ಪ್ರಕಟಗೊಳ್ಳುತ್ತಿದ್ದ ದಿನಗಳವು. ಸಾಹಿತ್ಯ ಕ್ಷೇತ್ರದಲ್ಲಿ ಅಷ್ಟಿಷ್ಟು ಮಹಾತ್ವಾಕಾಂಕ್ಷೆ ಹೊಂದಿದ ನನ್ನಂಥ ಅನೇಕ ಯುವತಿಯರನ್ನು ನೇರ ಸ್ಪಂದನಕ್ಕೆ ಒಳಪಡಿಸುತ್ತಿದ್ದ ಅವರ ಅನುಭವಗಳು, ಅಭಿಪ್ರಾಯಗಳು ಅವರ ಕುರಿತಾದ ನನ್ನ ಗೌರವವನ್ನು ಹೆಚ್ಚಿಸುತ್ತಲೇ ಹೋದವು. ಅವರ ಸಂಪರ್ಕದಲ್ಲಿ ಬಂದುಹೋದ ಅಗಣಿತವಾದ ಗಣ್ಯ ವ್ಯಕ್ತಿಗಳು ಮನುಷ್ಯ ಸಂಬಂಧಗಳನ್ನು ಮೀರಿ ನಿಲ್ಲಬಲ್ಲ ಮಾನವೀಯ ಸಂಬಂಧಗಳನ್ನು ತಮ್ಮ ಜೀವನದಲ್ಲಿ ಪಡೆದು ಉಳಿಸಿಕೊಂಡ ಅನುಪಮಾರ ವಿಶಾಲ ಬಂಧುತ್ವ ನನ್ನನ್ನು ಬೆರಗುಗೊಳಿಸಿತ್ತು.

ಈ ಬೆರಗು, ಕುತೂಹಲ, ಗೌರವ ಎಲ್ಲವನ್ನೂ ತಣಿಸಿಕೊಳ್ಳೋಣವೆಂದರೆ ಅವರ ಪರಿಚಯವೇ ನನಗಿರಲಿಲ್ಲ. ಆ ಅವಕಾಶ ಒದಗಿ ಬಂದಿದ್ದು ನನ್ನ ಪ್ರಥಮ ಕೃತಿ 'ಮುಗುಳು' ಹೊರಬಂದಾಗ. ಪುಸ್ತಕದ ಒಂದು ಪ್ರತಿಯನ್ನು ಅನುಪಮಾರಿಗೆ ಗೌರವಪೂರ್ವಕವಾಗಿ ಕಳಿಸಿಕೊಟ್ಟೆ. ಸಾಮಾನ್ಯವಾಗಿ ಅಪರಿಚಿತ ಕಿರಿಯ ಲೇಖಕರಿಂದ ಪುಸ್ತಕಗಳು ಬಂದಾಗ ಹಿರಿಯ ಸಾಹಿತಿಗಳು ಉತ್ತೇಜನದ ದೃಷ್ಟಿಯಿಂದ ನಾಲ್ಕು ಮೆಚ್ಚುಗೆಯ ಮಾತುಗಳನ್ನಾಡಿ ಬರೆಯುತ್ತಾರೆ ಎಂಬುದು ಸಾಮಾನ್ಯ ನಿರೀಕ್ಷೆ. ನನ್ನ ಪುಸ್ತಕಕ್ಕೆ ಬಂದ ಅನುಪಮಾರ ಪ್ರತಿಕ್ರಿಯೆ ನನ್ನ ಈ ನಿರೀಕ್ಷೆಯನ್ನು ಹುಸಿಗೊಳಿಸಿತ್ತು. ಅವರು ಇಡೀ ಪುಸ್ತಕವನ್ನು ಆಸಕ್ತಿಯಿಂದ ಓದಿ ವಿಮರ್ಶಿಸಿದ್ದರಷ್ಟೇ ಅಲ್ಲ, ಗುಣದೋಷಗಳೆರಡನ್ನೂ ಪಟ್ಟಿಮಾಡಿದ್ದರು. ಇದರಿಂದಾದ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಲೇ ನಾನವರಿಗೆ ಪತ್ರ ಬರೆದೆ. ಅಲ್ಲಿಂದ ನಮ್ಮ ನಡುವೆ ಪತ್ರ ವ್ಯವಹಾರ ಪ್ರಾರಂಭವಾದದ್ದು.

ಹಿರಿ ಕಿರಿಯ ಭೇದಗಳೊಂದಕ್ಕೂ ಆಸ್ಪದವೀಯದ ಅವರ ಆತ್ಮೀಯ ಧಾಟಿಯ ಪತ್ರಗಳು 'ವ್ಯಕ್ತಿ'ಯಾಗಿ ಅನುಪಮಾ ಹೇಗಿರಬಹುದು ಎಂಬ ಚಿತ್ರವನ್ನು ನನ್ನಲ್ಲಿ ಮೂಡಿಸಿದವು. ಒಂದು ಪತ್ರದಲ್ಲಿ :

"ನಿಮ್ಮ ಹೆಸರು ತುಂಬ ಉದ್ದವಪ್ಪ. ಮನೆಯಲ್ಲಿ ನಿಮ್ಮನ್ನು ಏನೆಂದು ಕರೆಯುತ್ತಾರೆ?" ಎಂದು ಕೇಳಿದ್ದರು. ಈಗಲೂ ಅವರಿಂದ 'ಭುವನಾ' ಎಂದು ಸಂಬೋಧಿಸಿಕೊಳ್ಳುವಾಗೆಲ್ಲ ಒಂದು ಬಗೆಯ ಆತ್ಮೀಯತೆಯ ಸಿಂಚನವಾದಂತಾಗುತ್ತದೆ.

ಹೀಗೆ ಸಾಹಿತಿಯಾಗಿ ಇಷ್ಟೊಂದು ಪ್ರಸಿದ್ಧರಾಗಿರುವ ಡಾ। ಅನುಪಮಾ ವ್ಯಕ್ತಿಯಾಗಿ ಓರ್ವ ಹಿರಿಯಕ್ಕನಂತೇ ಎಂಬ ವಿಚಾರ ಮನದಟ್ಟಾದಾಗ ಅವರನ್ನು ಮುಖತಃ ಭೇಟಿಯಾಗಬೇಕೆನ್ನಿಸಿತ್ತು. ೧೯೮೭ರ ಏಪ್ರಿಲ್‌ನಲ್ಲಿ ನಾನು ಬೆಂಗಳೂರಿಗೆ ಹೋಗಿದ್ದೆ. ಡಾ। ಅನುಪಮಾರಿಗೆ ಆ ವರ್ಷದ ತಿರುಮಲಾಂಬಾ ಪ್ರಶಸ್ತಿ ದೊರಕಿದ್ದು ಪ್ರಕಟವಾದದ್ದೂ ಅದೇ ಸಂದರ್ಭದಲ್ಲಿಯೇ. ಅವರ ಮನೆ 'ಕಥೆ'ಗೆ ಹೋಗಿ ನನ್ನ ಮೆಚ್ಚಿನ ಲೇಖಕಿಯನ್ನು ಕಂಡು ಅಭಿನಂದಿಸುವ ಮನಸ್ಸಾಗಿ ಅವರ ಮನೆಗೆ ಹೋದೆ. ಅವರಲ್ಲಿಗೆ ಹೋಗುವಾಗಲೂ ಅದೇ ನನ್ನದು ಲೋಕವ್ಯವಹಾರದಿಂದ ಪ್ರೇರಿತವಾದ ನಿರೀಕ್ಷೆ! ಪರಿಚಯದ ನಾಲ್ಕು ಮಾತು, ಲೋಕಾಭಿರಾಮದ ನಾಲ್ಕು ಮಾತು, ಸಾಹಿತ್ಯಿಕವಾಗಿ ನಾಲ್ಕು, ವೈಯಕ್ತಿಕ ವಿವರ ಕುರಿತು ನಾಲ್ಕು........ಹೆಚ್ಚೆಂದರೆ ಹದಿನೈದೋ ಇಪ್ಪತ್ತೋ ನಿಮಿಷ ಎಂದು ನನ್ನೊಳಗಿನ ಅರ್ಥಶಾಸ್ತ್ರದ ಮೇಡಂ ಲೆಕ್ಕಾಚಾರ ಹಾಕಿದ್ದಳು. ಅವರ ಮನೆಯೊಳಗೆ ಪ್ರವೇಶಿಸುತ್ತಲೇ ಮತ್ತೆ ಲೆಕ್ಕಾಚಾರ ತಲೆಕೆಳಗೆ!

ಮನೆ ಮನ ಎರಡೂ ವಿಶಾಲವಾಗಿದ್ದಲ್ಲಿ ಪ್ರವೇಶಿಸಿದ ಹಿತವಾದ ಅನುಭವ ನನಗಲ್ಲಿ ಕಾದಿತ್ತು. ಮಾತಾಡಿಸಿದ ಅನುಪಮಾ ಆತ್ಮೀಯವಾಗಿ ಮಾತಾಡುತ್ತಲೇ ಹೋದರು. ನನ್ನೊಳಗಿನ ಅರ್ಥಶಾಸ್ತ್ರದ ಮೇಡಂ ಪೂರ್ತಿ ಬಾಯಿಹೊಲಿದು ಕುತೂಹಲ ಮೆಚ್ಚುಗೆಗಳನ್ನು ಮಾತ್ರ ತೋರ್ಪಡಿಸುವ ಮಗುವಿನಂತಾಗಿದ್ದಳು. ಒಳಗಡೆ ಇದ್ದ ನಿರಂಜನರೂ ಹೊರಬಂದು ನಮ್ಮ ಮಾತುಗಳಲ್ಲಿ ಸೇರಿಕೊಂಡರು. ಇಬ್ಬರೂ ತಮ್ಮ ಸರಳ ಸಜ್ಜನಿಕೆಗಳಿಂದ ನನ್ನ ಹೃದಯ ತುಂಬಿಬರುವಂತೆ ಮಾಡಿದರು. ನಾನು ರೂಮಿನಿಂದ ರೂಮಿಗೆ ಓಡಾಡಿ ಅಲ್ಲಿ ಸಂಗ್ರಹಿಸಿಡಲಾದ ಪುಸ್ತಕಗಳನ್ನೆಲ್ಲ ನೋಡಿದೆ. ಅನುಪಮಾರು ಬರೆಯುವ ಕೋಣೆಯಲ್ಲಿ ಹೋಗಿ ಕುಳಿತೆವು. ಎಲ್ಲೆಲ್ಲೂ ಅಚ್ಚುಕಟ್ಟು. ಓರಣ, ಮೇಲಾಗಿ ಒಂದು ಬಗೆಯ ಶ್ರದ್ಧೆ.

ಅವರ ಸ್ವಂತ ಕೃತಿಗಳು, ಸಂಗ್ರಹಗಳತ್ತ ಕಣ್ಣಾಡಿಸುತ್ತಲೇ ಎರಡು ಘಂಟೆಗೂ ಮಿಕ್ಕು ನಾವು ಮಾತಾಡಿದೆವು. ನನ್ನ ಹಾಸ್ಯಲೇಖನಗಳ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿ "ಮತ್ತೆ ಹೀಗೆ ಹೊಗಳ್ದೆ ಅಂತ ಉಬ್ಬಿಕೋಬೇಡ ಹುಡುಗೀ"

ಎನ್ನುತ್ತ ನಕ್ಕರು. "ಚೆನ್ನಾಗಿಟ್ಟುಬಿಡ. ಅಂತೆಯೇ ಕಿವಿಯಿಂದಂಬ ಅಧಿಕಾರ ಹಿರಿಯರಾದ ನಿಮಗಿದ್ದೇ ಇದೆ" ಎನ್ನುತ್ತ ನಾನೂ ನಕ್ಕೆ. ಸಂಬಂಧಗಳಲ್ಲಿ ಹೀಗೆ ವಾತ್ಸಲ್ಯಪೂರ್ಣ ಸಹಜತೆ ಅನುಪಮಾರ ಗುಣವಾದುದರಿಂದಲೇ ಕನ್ನಡದ ಹಿರಿ ಕಿರಿಯ ಲೇಖಕ ಲೇಖಕಿಯರೆಲ್ಲರಿಗೂ ಅವರು ಅಚ್ಚುಮೆಚ್ಚು.

ಡಾ। ಅನುಪಮಾ ವೃತ್ತಿಯಿಂದ ವೈದ್ಯರಾಗಿ ಸಾಹಿತ್ಯಕ್ಷೇತ್ರದಲ್ಲಿ ತಮ್ಮನ್ನು ಪೂರ್ತಿಯಾಗಿ ತೊಡಗಿಸಿಕೊಂಡಿದ್ದು ಎಷ್ಟು ಅಚ್ಚರಿಯ ಅಂಶವೋ ಅಷ್ಟೇ ಆಶ್ಚರ್ಯದ ಸಂಗತಿ ಇನ್ನೊಂದಿದೆ. ನಿರಂಜನರಂಥ ಸುಪ್ರಸಿದ್ಧ ಸಾಹಿತಿಯ ಪತ್ನಿಯಾಗಿ ಪತಿಯ ಜನಪ್ರಿಯ ಒಡನಾಟಗಳಲ್ಲಿ ಪಾಲ್ಗೊಳ್ಳುತ್ತಲೇ ತಾವೂ ಓರ್ವ ಸಾಹಿತಿಯಾಗಿ ತಮ್ಮದೇ ಸ್ವಂತ ಸ್ವತಂತ್ರ ಸ್ಥಾನವನ್ನು ಕನ್ನಡ ಸಾಹಿತ್ಯದಲ್ಲಿ ಈಕೆ ಸಾಧಿಸಿದ್ದಾರೆ. ಇದು ನಮ್ಮ ಭಾರತೀಯ ಪತಿಪತ್ನಿ ವ್ಯವಸ್ಥೆಯಲ್ಲಿ ಪತಿಯ ನೆರಳಾಗಿ (ನೆರಳು ಮಾತ್ರಳಾಗಿ!) ತನ್ನ ಅಸ್ತಿತ್ವವನ್ನೇ ಮರೆತುಬಿಡುವ ನಮ್ಮ ಪತ್ನಿಯರನೇಕರು ಗಮನಿಸಬೇಕಾದ ಸಂಗತಿ. 'ಅನುಪಮಾ-ನಿರಂಜನ' ಕೌಟುಂಬಿಕವಾಗಿ, ಸಾಮಾಜಿಕವಾಗಿ ಅದ್ವೈತ ಸಾಧಿಸಿದವರು ನಿಜ. ಆದರೆ ಸಾಹಿತ್ಯಿಕವಾಗಿ ಇಬ್ಬರಿಗೂ ತಮ್ಮದೇ ಆದ ಸ್ವತಂತ್ರ ಭಿನ್ನ ವಿಚಾರ ಸರಣಿ, ಶೈಲಿ ಹಾಗೂ ಪ್ರಕಾರಗಳಿವೆ. ಈ ಬಗೆಯ ಮಾನಸಿಕ ಸ್ವಾತಂತ್ರ್ಯವನ್ನು ಅನುಪಮಾರಂಥ ಅನುಪಮ ಮಹಿಳೆ ಹೇಗೆ ಸದುಪಯೋಗಪಡಿಸಿಕೊಂಡಿದ್ದಾರೆಂಬುದು ವೇದ್ಯವಾದಾಗ ಅನುಪಮಾರ ಕುರಿತು ಅಚ್ಚರಿಮಿಶ್ರಿತ ಆರಾಧನಾಭಾವನೆ ಮೂಡದಿರದು.

ಅನುಪಮಾರ ಅನೇಕ ಭಾಷಣಗಳನ್ನು ನಾನು ಕೇಳಿರುವೆನಾದರೂ ಕಳೆದ ೮೮ರ ಫೆಬ್ರುವರಿಯಲ್ಲಿ ಬೆಂಗಳೂರಲ್ಲಿ ಸಮಾವೇಶಗೊಂಡ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ ಇವರು ಮಾಡಿದ ಸಮಾರೋಪ ಭಾಷಣ, ಕರ್ನಾಟಕ ಮಟ್ಟದಲ್ಲಿ ಆದ ಲೇಖಕಿಯರ ಸಂಘಟನೆಯ ಕುರಿತು ಇವರಿಗಾದ ಸಂತೋಷವನ್ನು ಪ್ರತಿಧ್ವನಿಸುತ್ತಿತ್ತು. ಸಮ್ಮೇಳನಕ್ಕೆ ಬಂದ ಮೂರು ತಲೆಮಾರಿನ ಲೇಖಕಿಯರಲ್ಲಿ ಬಹುತೇಕ ಪ್ರತಿಯೊಬ್ಬರೂ "ಅನುಪಮಾರ ಭೇಟಿ ಆಯ್ತೆ?", "ಅನುಪಮಾರಿಗೊಂದು ಹೇಳಿಬಿಟ್ಟು ಊರಿಗೆ ಹೊರಡೋಣ"....ಇತ್ಯಾದಿ ಮಾತಾಡಿಕೊಳ್ಳುತ್ತಿದ್ದುದನ್ನು ನಾನು ಕೇಳಿದ್ದೆ. ಮನೆಯಲ್ಲಿ ಮಂಗಲ ಕಾರ್ಯವೊಂದು ಯಶಸ್ವಿಯಾಗಿ ಮುಗಿದಾಗ ಮನೆಯ ಹಿರಿಯ ಯಜಮಾನ/ನಿಗಾಗುವ ಸಂಭ್ರಮಭರಿತ ಸಮಾಧಾನವನ್ನು ಆವತ್ತಿನ ಅವರ ಸಮಾರೋಪ ಭಾಷಣದಲ್ಲಿ ಗುರುತಿಸಬಹುದಾಗಿತ್ತು.

ನಿಜ, ಹೀಗೆ ಸಂತೋಷಪಡುವುದು ಅನುಪಮಾರ ಗುಣ. ಇವರ ಜೀವನ ಶೈಲಿಯನ್ನೂ, ಕಾರ್ಯೋತ್ಸಾಹವನ್ನೂ, ಸಾಹಿತ್ಯಶ್ರದ್ಧೆಯನ್ನೂ ಕಿರಿಯರು ಕೊನೆಯಪಕ್ಷ ಅನುಕರಿಸಬೇಕು.

೨ ಅನುಕಂಪದ ಅನುಪಮಾ

- ಡಾ। ವೃಂದಾ ಟಿ.

ಸುಮಾರು ಇಪ್ಪತ್ತು ವರ್ಷಗಳಿಂದ ನಾನು ಅವರನ್ನು ತಿಳಿದಿದ್ದೇನೆ. ಮೊದಲ ಹತ್ತು ವರ್ಷ ದೂರದಿಂದ. ಅನಂತರ ತುಸು ಹತ್ತಿರದಿಂದ; ಮೊದಮೊದಲು ಭಯಭಕ್ತಿಯಿಂದ. ಅನಂತರ ಅಚ್ಚರಿಯಿಂದ. ಮೆಚ್ಚುಗೆಯಿಂದ.

ವಯಸ್ಸಿನಲ್ಲಿ. ಅನುಭವದಲ್ಲಿ ಅವರು ನನಗೆ ಮಾತೃಸಮಾನರು. ಆ ವಾತ್ಸಲ್ಯವನ್ನು ನೀಡುವುದರೊಂದಿಗೆ ಅವರು ತನ್ನ ಸ್ನೇಹದ ಹಸ್ತವನ್ನೂ ನನ್ನೆಡೆಗೆ ಚಾಚಿದ್ದಾರೆ.

ನನ್ನ ಹದಿಹರೆಯದಲ್ಲೆಲ್ಲ ನಾನು ಅವರ ಬರವಣಿಗೆಯಿಂದ ಸಾಕಷ್ಟು ಪ್ರಭಾವಿತೆಯಾಗಿದ್ದೇನೆ. ಅವರಂತೆಯೇ ವೈದ್ಯೆಯಾಗಬೇಕು, ಸಾಹಿತಿಯಾಗಬೇಕು ಎಂಬ ಕನಸು ಕಂಡಿದ್ದೇನೆ. ಅಂತೆಯೇ ಅವರಿಗೆ ಬರೆದೂ ಇದ್ದೆ-ಎಂದು ನೆನಪು. ನಾನೇನನ್ನೂ ಸಾಧಿಸದಿದ್ದರೂ ಅವರ ಪ್ರೀತಿ-ವಿಶ್ವಾಸಗಳು ನಿರಂತರ ನನಗೆ ದೊರಕಿವೆ.

೧೯೭೭ರ ಸುಮಾರಿಗೆ ಅವರಿಗೆ ಮೊದಲ ಬಾರಿಗೆ ಆಪರೇಶನ್ ಎಂದು ಪತ್ರ ಮುಖೇನ ತಿಳಿದಾಗ ನಾನು ಗುಟ್ಟಾಗಿ ಅತ್ತಿದ್ದೆ. ಏನು ಉತ್ತರ ಬರೆಯೋಣ-ಎಂದು ತೋಚದೆ ಸುಮ್ಮನಾಗಿಬಿಟ್ಟಿದ್ದೆ. ಮತ್ತೆ ಸುಮಾರು ಒಂದು ವರ್ಷದ ಬಳಿಕ ಅವರನ್ನು ಕಂಡಾಗ ಇವರೇನೇ ಆಪರೇಶನ್ ಆದವರು? ಎಂದು ಸೋಜಿಗಪಟ್ಟಿದ್ದೆ. ಅವರು ತಪ್ಪಿಯೂ ತಮ್ಮ ಕಾಯಿಲೆಯ ಬಗ್ಗೆ ಮಾತಾಡಲಿಲ್ಲ, ತೊಂದರೆಗಳನ್ನು ಹೇಳಿಕೊಳ್ಳಲಿಲ್ಲ.

ಮತ್ತೊಮ್ಮೆ ಆಪರೇಶನ್, ಮಗದೊಮ್ಮೆ ಆಪರೇಶನ್ ಆದಾಗಲೂ ಅಷ್ಟೆ-ಅವರು ಹೆದರಿದುದನ್ನು ನಾನು ಕಾಣೆ. ಆಪರೇಶನ್ ಆಗಿ ಅವರು ಚೇತರಿಸಿಕೊಳ್ಳುತ್ತಿರುವಂತೆ ನಾನು ಹೋಗಿದ್ದೆ. ಅವರೋ ಎಂದಿನಂತೆ ಹಸನ್ಮುಖಿ. ನಾನು ಅಳುಮೋರೆ ಮಾಡಿದಂತೆ 'ಅಯ್ಯೋ ಯಾಕಷ್ಟು ಬೇಜಾರು ಮಾಡಿಕೊಳ್ಳುತ್ತೀಯಾ? ನನಗೇನೂ ಆಗುವುದಿಲ್ಲ, ಸುಮ್ಮನಿರು' ಎಂದು ಅವರೇ ಸಮಾಧಾನ ಮಾಡಿದ್ದಾರೆ. ಸಾವಿನ ಬಗ್ಗೆ ಅವರಿಗಿರುವ ನಿರ್ಲಕ್ಷ್ಯ ನನಗೆ ಇಂದಿಗೂ ಆಶ್ಚರ್ಯಕರ.

೧೯೮೫ರ ಸುಮಾರಿಗೆ ನನ್ನದೊಂದು ಕಥೆ ಪ್ರಕಟವಾದಾಗ ಅವರು ಬಲು ಹಿಗ್ಗಿನಿಂದ ನನಗೊಂದು ಪತ್ರ ಬರೆದರು. ಅದು ಯಾವ ಆರಂಭಶೂರರಿಗೂ ಮಾರ್ಗದರ್ಶಿಯಾಗಬಹುದೆಂದು ಅನ್ನಿಸಿ ಇಲ್ಲಿ ಉದ್ಧರಿಸಿದ್ದೇನೆ.

"ಮೊನ್ನೆ........ದಲ್ಲಿ ಬಂದ ನಿನ್ನ ಕತೆಯನ್ನೋದಿದೆ. ನೀನು ಬರೆಯಲಾರಂಭಿಸಿದೆ ಎನ್ನುವುದೇ ನನಗೆ ತುಂಬ ಆನಂದ ಕೊಟ್ಟ ವಿಚಾರ. ಕತೆಯ ವಸ್ತು ಚೆನ್ನಾಗಿದೆ, ನಿರೂಪಣೆ, ಶೈಲಿಗಳಲ್ಲಿ ಕೈ ಪಳಗಬೇಕು. ಇಂಥ ಅನುಭವದ ಕತೆಗಳನ್ನು ನೀನು ಖಂಡಿತ ಬರೆಯಬೇಕು.

"ಕಥಾವಸ್ತುವಿನ ಸುತ್ತಘಟನೆಗಳು, ಸಂಭಾಷಣೆ, ಪಾತ್ರಗಳು ಕಲಾತ್ಮಕವಾಗಿ ಹಬ್ಬಿಕೊಳ್ಳಬೇಕು. ಇವು ಬರೆಯುತ್ತ ಸಾಧಿತವಾಗುವಂಥವುಗಳು. ಅನಾವಶ್ಯಕ ಪಾತ್ರಗಳು, ಘಟನೆಗಳು. ಇವನ್ನೂ ಬಿಟ್ಟು ಬಿಡಬೇಕು. ನಡೆದುದನ್ನು ನಡೆದ ಹಾಗೆಯೇ ಬರೆಯಲು ಸಾಧ್ಯವಿಲ್ಲ. ಓದುಗರಿಗೆ ಬೋರ್ ಆಗಬಹುದು. ಉದಾಹರಣೆಗೆ ನಿನ್ನ ಕತೆಯ ಆರಂಭದಲ್ಲಿ ಬರುವ ಡಾ। ದೇಶಪಾಂಡೆ ಮತ್ತು ಇತರ ಡಾಕ್ಟರುಗಳ ಯಾದಿ. ಡಾ। ದೇಶಪಾಂಡೆಯವರು ಮತ್ತು ನಿರೂಪಕಿ ಡಾಕ್ಟರೊಂದಿಗೆ ಇನ್ನೊಬ್ಬರು ಇದ್ದರೆ ಸಾಕಾಗಿತ್ತು. ಏಕೆಂದರೆ ಉಳಿದ ಡಾಕ್ಟರ್ ಪಾತ್ರಗಳು ಮುಂದೆ ಬರುವುದಿಲ್ಲ. ಕತೆಯ ಬೆಳವಣಿಗೆಗೆ ಪೂರಕವಾಗುವುದಿಲ್ಲ. ಹಾಗೆಯೇ ವಾರ್ಡಿನಲ್ಲಿದ್ದ ಮಂದಿಯ ವಿವರವೂ ಅಗತ್ಯವಾಗುವುದಿಲ್ಲ. ಇವು ಕಲಾತ್ಮಕತೆಗೆ ಮತ್ತು ಒಟ್ಟಾರೆ ಅಭಿವ್ಯಕ್ತಿಗೆ ಅಡ್ಡಿಯಾಗುತ್ತವೆ. (ಕಾಮತರ ಪಾತ್ರ ತುಂಬಾ ಚೆನ್ನಾಗಿದೆ).

"ಇಷ್ಟೆಲ್ಲಾ ವಿವರ ಯಾಕೆ ಬರೆದೆನೆಂದರೆ ಮುಂದೆ ಕತೆ ಬರೆಯುವಾಗ ಅನು ಇನ್ನೂ ಚೆನ್ನಾಗಿ ಬರಲಿ ಎನ್ನುವ ಆಶಯದಿಂದ. ಕತೆ ಮನಸ್ಸಿನಲ್ಲಿ ಬೆಳೆಯಲು ಅವಕಾಶ ಕೊಡು. ಅನಂತರ ಅವಸರವಿಲ್ಲದೆ ಬರೆ. ನೀನು ಒಳ್ಳೆಯ ಬರೆಹಗಾರ್ತಿಯಾಗಬಹುದೆಂದು ನಾನು ೧೦-೧೨ ವರ್ಷಗಳ ಹಿಂದೆಯೇ ಕನಸು ಕಂಡಿದ್ದೆ. ಹಾಗಾಗಬೇಕು - ನೀನು".

ಸ್ತ್ರೀ ಸಮಾನತೆಯ ಬಗೆಗಿರಲಿ, ಸ್ತ್ರೀಯ ಅಸಹಾಯಕತೆಯ ಬಗೆಗಿರಲಿ, ನಮ್ಮಲ್ಲಿ ಚರ್ಚೆ ಬಂದಾಗ ಚಿಕ್ಕವಳಾದರೂ ನನ್ನ ಮಾತುಗಳನ್ನು ಅವರು ಶ್ರದ್ಧೆಯಿಂದ ಆಲಿಸಿದ್ದಾರೆ. ಸಮಸ್ಯೆಯ ಇನ್ನೊಂದು ಮುಖವನ್ನು ಎತ್ತಿಹಿಡಿದಾಗ 'ಹೌದಲ್ಲವೇ'? ಎಂದು ಒಪ್ಪಿಕೊಳ್ಳುವ ಉದಾರ ಗುಣವನ್ನೂ ತೋರಿದ್ದಾರೆ.

ಬರೆದಂತೆಲ್ಲ ಅವರ ವ್ಯಕ್ತಿತ್ವ ಇನ್ನೂ ಹಿರಿದು ಎಂದೆನ್ನಿಸುತ್ತದೆ. ಇನ್ನೂ ಬರೆದರೆ ಬರೀ ಹೊಗಳಿಕೆಯಾದೀತೇ ಎಂಬ ಅಳುಕೂ ಕಾಣಿಸಿಕೊಳ್ಳುತ್ತದೆ.

ಆದರೂ ಅವರು ಪರಿಪೂರ್ಣ ಸ್ತ್ರೀ, ಮನದನ್ನೆ, ತಾಯಿ, ವೈದ್ಯೆ, ಲೇಖಿಕೆ. ಎಂದೋ ಇದನ್ನರಿತ ಜಾಣ ಬಾಳಸಂಗಾತಿ ಅವರಿಗೆ ಇರಿಸಿದ ಹೆಸರಿಗೆ ತಕ್ಕಂತೆ ಅವರು "ಅನುಪಮಾ".

೨ ಬರವಣಿಗೆಯೇ ಉಸಿರು....

- ವೈದೇಹಿ

ಬೆಂಗಳೂರಿನ ಜಯನಗರದ ಆ ಭಾಗ ಸಾಕಷ್ಟು ಶಾಂತ. ಬಂದಿಳಿಯುವಾಗ ಸಂಜೆ. ಮಂದ ಚಳಿಯ ಗಾಳಿ. ಗೇಟಿಗೇ ಬಂದರು ಅನುಪಮಾ. ಆ ಮುಖದಲ್ಲಿ ಹಾಗೆ ನಗೆಯಿದ್ದರೆ ಎಂತಹ ಲಕ್ಷಣ!

ನೋಡದೆ ಬಹುಕಾಲವಾಗಿತ್ತಲ್ಲವೆ? ಹಾಗನ್ನಿಸುತ್ತಿತ್ತು. ಆದರೆ ಈಗ ಅಲ್ಲ. ವರ್ಷಗಳ ಗೋಡೆ ಮಧ್ಯೆ ನಿಲ್ಲಲೇ ಇಲ್ಲ. ಪರಸ್ಪರ ಭೇಟಿಯನ್ನು ಹೊಂದಿಸಿಕೊಳ್ಳಲು ಪೀಠಿಕೆಯಾದ ಕ್ಲೀಷೆಯ ಮಾತುಗಳು ಯಾವುವೂ ಇಣುಕಿಯೂ ನೋಡಲಿಲ್ಲ.

ಅನುಪಮಾ ವ್ಯಕ್ತಿತ್ವವೇ ಹಾಗೆ. ಬಹುಶಃ ಮನುಷ್ಯರನ್ನು ಪ್ರೀತಿಸುವವರ ಗುಣವೇ ಹಾಗೆ. ಬಂದವರೆದುರು ಎಂದಿಗೂ ಕೃತಕವಾಗುವುದಿಲ್ಲ. ಬದಲು ಸಂಭ್ರಮವಾಗುತ್ತಾರೆ - ಹೊಸಬರಾಗುವುದಿಲ್ಲ. ಆತ್ಮೀಯರಾಗುತ್ತಾರೆ....ಪೂರ್ವಭಾಷಿಯಾಗುತ್ತಾರೆ. ...."ಹೆಂಗಸರ ವೇದಿಕೆ ಎಂದು ಪ್ರತ್ಯೇಕ ಬೇಡವೆಂತ ಹೇಳಿದ ಕಾಲ ಒಂದಿತ್ತು. ಆದರೆ ಈಗನಿಸುತ್ತದೆ - ಲೇಖಕಿಗೆ ತ್ರಿಶಂಕು ಸ್ವರ್ಗ ಅಂತ. ಪ್ರತ್ಯೇಕತೆ ಬೇಡವೆಂದು ಕಳಚಿಕೊಂಡೆವು. ವಿಮರ್ಶಕರಂತೂ ಮಹಿಳೆಯರ ಕೃತಿಗಳನ್ನು ತಮ್ಮ ದೃಷ್ಟಿವಲಯದೊಳಗೂ ಸೇರಿಸಿಕೊಳ್ಳುವುದಿಲ್ಲ. ನಾವೂ ನಮ್ಮ (ಮಹಿಳೆಯರ) ಕೃತಿಗಳ ಕುರಿತು ವಿಚಾರ ವಿನಿಮಯ ಸಂಕಿರಣಗಳನ್ನುಮಾಡಲು, ಆ ಮೂಲಕ ನಾವು ಎಲ್ಲಿದ್ದೇವೆ ಎಂದು ನಿಖರವಾಗಿ ಗುರುತಿಸಿಕೊಳ್ಳಲು ಅವಕಾಶ ಸಿಗಲಿಲ್ಲ. ಮಹಿಳೆ-ಯಾವ ಗುಂಪಿಗೂ ಸೇರದೆ ಬರೆಯುತ್ತಿದ್ದಾಳೆ. ಈ ವಿಚಾರ ಒಳ್ಳೆಯದು ಎಷ್ಟೋ ಅಷ್ಟೇ ಅನಾನುಕೂಲದ್ದು ಕೂಡ. ನಮಗೀಗ ಒಂದು ವೇದಿಕೆ ಬೇಕಾಗಿದೆ. ನಮ್ಮನ್ನೇ ವಿಮರ್ಶಿಸಿಕೊಳ್ಳಲಿಕ್ಕಾಗಿ...."

ಉದ್ದಾನುದ್ದದ ಬಳಲಿಕೆಯ ದಾರಿಯಲ್ಲಿ ನಡೆದು ಬಂದವರು ಅನುಪಮಾ. ಆದರೆ ಮೊದಲು ಕಂಡ ವ್ಯಕ್ತಿಗೂ, ಈಗಿನ ಅನುಪಮಾಗೂ ವ್ಯತ್ಯಾಸ ಹೆಚ್ಚಿರಲಿಲ್ಲ. ಕಣ್ಣ ಸುತ್ತಿನ ತೆಳುಗಪ್ಪಿನ ಆವರಣವೊಂದು ಕಂಡಿತಾದರೂ ಅವರ ದೃಷ್ಟಿಯ ಹೊಳಪಿನ ಎದುರು ಅದು ಮಸುಕಾಯಿತು. ...."ನೀವು ಅದೇ ಅನುಪಮಾ". ಮಾತಿಗೆ ಅವರದೆ ಆದ ನಗೆ. (ಈ ನಗೆ ಸದಾ ಇರಲಿ.)

ಮಾತು ಹೆಜ್ಜೆಯಿಡುತ್ತಾ "ನೆನಪು ಸಿಹಿಕಹಿ"ಯತ್ತ ಬಂತು. ಜನ ಅದನ್ನು ತುಂಬ ಮೆಚ್ಚಿದ್ದರು. ಅವರ ಮೆಚ್ಚಿಗೆ ಲೇಖಕಿಯನ್ನು ಭಾವವಶಮಾಡಿತ್ತು. "ಈ ನೆನಪು ಸಿಹಿಕಹಿ ಪ್ರಕಟವಾಗುವಾಗ ನಾ ಜೀವಿಸಿರುತ್ತೇನೆ ಎಂದು ಎಣಿಸಿರಲಿಲ್ಲ. ಬಲು ಉದ್ದಕ್ಕು ಧಾರಾವಾಹಿ ಹರಿದುಬರುತ್ತಿರುವುದನ್ನು ಕಂಡು ಜನರಿಗೆ ಬೋರಾಗುತ್ತದೆ ಎಂತಲೇ ಎಣಿಸಿದ್ದೆ. ಆದರೆ ಹಾಗಾಗಲಿಲ್ಲ....ಜನ ಮೆಚ್ಚಿದ್ದಾರೆ ಎಂಬುದೇ ತೃಪ್ತಿ".

–ಇವರಲ್ಲಿ ಏನೋ ಮಹಾ ಬರೆದಿದ್ದೇನೆ ಎಂಬ ಗರಿಮೆಯ ಒಣ ಪ್ರತಿಷ್ಠೆ ಇಲ್ಲ. ಒಂದು ಒಳ್ಳೆಯ ಜೀವ ತಾನು ಬದುಕಲ್ಲಿ ಉಂಡ ಪ್ರೀತಿಯನ್ನು, ಅನುಭವವನ್ನು, ಹಾದುಹೋದ ಸಮಸಮೂನೆಯ ಗಳಿಗೆಗಳನ್ನು ಬಂಧುಬಾಂಧವ ಸ್ನೇಹಿತರನ್ನು ಚುಟುಕಾಗಿ ಮೆಲುಕು ಹಾಕುತ್ತಾ ಸಣ್ಣ ಸಣ್ಣ ಶಬ್ದಗಳಲ್ಲಿ ಆಡಂಬರವಿಲ್ಲದೆ ಹೇಳುತ್ತಾ ಹೋದದ್ದು-ಜನಮನಕ್ಕೆ ಹತ್ತಿರವಾಯಿತು ಎನ್ನೋಣವೇ? ಒಂದು ಬಗೆಯಲ್ಲಿ ಈ ಕೃತಿ ತಾನು ಒಡನಾಡಿದ ಜನಗಳಿಗೆ ಸಲ್ಲಿಸಿದ ವಿಪುಲ ಕೃತಜ್ಞತೆಯೂ ಹೌದು.

ಅನುಪಮಾ ಎದ್ದು ಒಳಗೆ ನಡೆದರು. ಸಾಕಷ್ಟು ಎತ್ತರದ ಸ್ಥೂಲಕಾಯದ ವ್ಯಕ್ತಿ. ತಕ್ಕಂತೆ ನಿಧಾನ ನಡಿಗೆ ಮಾತ್ರ ಇಲ್ಲ. ಲವಲವಿಕೆ, ಚುರುಕು-ಒಂದು ಹೆಜ್ಜೆ ಇಟ್ಟು ಮುಗಿಯಿತೆನ್ನುವುದರೊಳಗೆ ಇನ್ನೊಂದು ಹೆಜ್ಜೆ ಮುಂದೆ ಹೋಗಿಯಾಯಿತು. "ಹೋಯ್, ನೀವು ಓಡುವುದಾ ನಡೆಯುವುದಾ?"-ಎಂದು ಕೇಳುವಷ್ಟು. ಚುರುಕಿನಲ್ಲೇ ಬಂತು ಪೇಯ. "ಇವತ್ತು ಹೋಗಬಾರದು. ಇಲ್ಲಿಯೇ". ಯಾವ ಅತಿರೇಕವಿಲ್ಲದೆ ಸುಂದರ ಸ್ನೇಹಸೂತ್ರದಿಂದ ಕಟ್ಟಿ ಹಾಕುವುದರಲ್ಲಿ ಅನುಪಮಾ ನಿಸ್ಸೀಮೆ!

ಮನೆಯಲ್ಲೇ ವಿಮರ್ಶಕ ಮಹಾಶಯ

"ಈ ಕ್ಷಣ ನನ್ನದು-ನಾನದನ್ನು ಬದುಕಬೇಕು"-ಎನ್ನುವ ಅನ್ಯಾದೃಶ ಛಲದ ನಿರಂಜನ. ಪ್ರತಿಭೆ-ಅನವರತ ಅಭ್ಯಾಸದ ಪ್ರಖರ ವ್ಯಕ್ತಿತ್ವ. ನಮ್ಮ ಮಾತು ಸಾಗುತ್ತಿದ್ದಂತೆ ನಿರಂಜನರೂ ಪಾಲ್ಗೊಂಡರು. ಅಲ್ಲಿ ಗಂಡ ಹೆಂಡತಿಯ ಮಾಮೂಲಿ ಸಂಬಂಧವಿರಲಿಲ್ಲ. ಅನುಪಮಾ ಮಾತನ್ನು ತನಗೆ ಕಂಡಂತೆ ಎಸಳು ಬಿಡಿಸಿ ವಿಮರ್ಶಿಸುವ ವಿಚಾರವಂತಿಕೆಯ ಸಂಬಂಧವಿತ್ತು.

"ನೀವೇಕೆ ನಿಮ್ಮ ಆತ್ಮಕಥೆ ಬರೀಲಿಲ್ಲ?" ಎಂದರೆ

"ಬರೆಯೋದಿಲ್ಲ, ಯಾಕೇಂದ್ರೆ ಒಬ್ಬ ಲೇಖಕ ತನ್ನ ಕೃತಿಗಳಲ್ಲೇ ತನ್ನನ್ನು ಒಂದು ಬಗೆಯಲ್ಲಿ ತೆರೆದುಕೊಳ್ಳುತ್ತಾನೆ. ಮತ್ತೆ ಆತ್ಮಕತೆಯನ್ನು ಬರೀಬೇಕಾದ ಅಗತ್ಯ ಎಲ್ಲಿದೆ?"

ತಕ್ಷಣ ಕೇಳಿದರು ಅನುಪಮಾ. "ಇದನ್ನ ನಾನೊಪ್ಪುವುದಿಲ್ಲ. ನಾನು ನೆನಪು ಸಿಹಿ-ಕಹಿ ಬರೆದದ್ದು ತಪ್ಪು ಎಂದು ಇದರರ್ಥವಲ್ಲವೆ? ಆದರೆ ಅದು ತಪ್ಪಲ್ಲ".

ಚಕಮಕಿಗಳ ದಂಪತಿಗಳು. ಆ ಚಕಮಕಿಗಳಾದರೂ ಎಂತಹವು!

ಯಾವುದೋ ಒಂದು ಶಬ್ದದ ನುಡಿಗಟ್ಟಿನ,ವರ್ತನೆ-ಸಂಸ್ಕೃತಿಗಳ ಅರ್ಥಕ್ಕಾಗಿ, ಅದರ ಮೂಲಕ್ಕಾಗಿ, ಅದರ ಪ್ರಯೋಗ ರೀತಿಗಾಗಿ, ಸಾಮಾನ್ಯ ಬಳಕೆಗಾಗಿ ಮನೆಯಲ್ಲೇ ಜನಿಸುವ ಕತೆ ಕಾದಂಬರಿಗಳ ಸೂಕ್ಷ್ಮಅವಲೋಕನಕ್ಕಾಗಿ,....ಅಷ್ಟೇ ಅಲ್ಲ,

ಬಹುಶಃ ಅನುಪಮಾ ಎಲ್ಲವನ್ನೂ ಬಿಡೆ ಇಲ್ಲದೆ ಬರೆದಿಟ್ಟರೆ ಕೇವಲ ದಾಂಪತ್ಯದ ಒಣ ಪರಿಮಿತಿಯನ್ನು ಮೀರಿದ ಗಂಡು ಮನಸ್ಸು ಮತ್ತು ಹೆಣ್ಣು ಮನಸ್ಸುಗಳಲ್ಲಿನ ವಿಚಾರ ವ್ಯತ್ಯಾಸ, ಸಾಮೀಪ್ಯ. ತಜ್ಜನಿತ ಘರ್ಷಣೆಗಳ ಒಂದು ಮೌಲಿಕ ಪುಸ್ತಕವೇ ಹೊರ ಬಂದೀತು.

ಟಿ. ವಿ.ಯಲ್ಲಿ ಸುದ್ದಿ ಮುಗಿಯಿತು. ಉರ್ದು ಶಾಯರಿಗಳು ಆರಂಭವಾದವು. ಗಂಟೆ ಸದ್ದಿಲ್ಲದೆ ಓಡುತ್ತಿತ್ತು. ಯಾರ ಕಣ್ಣಲ್ಲಿಯೂ ನಿದ್ದೆ ಇರಲಿಲ್ಲ. ಕೊನೆಗೆ ವೈದ್ಯೆ ನಿರಂಜನರಿಗೆ ಆದೇಶವಿತ್ತಳು. “ಇನ್ನು ಮಲಗಿ”.

ಈ ಖಂಡತುಂಡ ವಿಮರ್ಶಕನೆದುರು ಕಂಪಿಸದೆ ಬರೆದವರು ಅನುಪಮಾ.

“ನಾ ಬರೆದದ್ದೆಲ್ಲ ಶ್ರೇಷ್ಠವೆಂದು ನಾನೇನೂ ಹೇಳಿಲ್ಲ. ಆದರೆ ಶ್ರೇಷ್ಠವಾದದ್ದನ್ನು ಬರೆಯಬೇಕೆಂಬ ಆಸೆ ಇದೆ. ಒಂದು ಬಗೆಯಲ್ಲಿ ನನಗೆ ಹೀಗೆ ಆದದ್ದು ಒಳ್ಳೆಯದೇ ಆಯಿತು. ಈಗ ಮನೆಯಲ್ಲೇ ಇರುವಂತಾಗಿ ಆಳ ಅಧ್ಯಯನ ಮಾಡಲೂ ಬರವಣಿಗೆಯತ್ತ ಪೂರ್ಣ ಮನಸ್ಸು ತೊಡಗಿಸಲೂ ಸಾಧ್ಯವಾಯಿತು. ಇಷ್ಟರ ವರೆಗೆ ಬರೆದದ್ದನ್ನು ಪ್ರತಿ ತೆಗೆಯಲೂ ನನಗೆ ಬಿಡುವಿರಲಿಲ್ಲ. ಹಾಗೆ ಹಾಗೇ ಕಳಿಸುತ್ತಿದ್ದೆ. ಎರಡನೆಯ ಬಾರಿ ಪುನಃ ಬರೆಯುವಾಗ ಕೃತಿ ಎಷ್ಟು ಪುಷ್ಟವಾಗುತ್ತದೆ ಎಂದು ಈಗ ನನಗೆ ಅನುಭವವಾಗುತ್ತದೆ”. ಬರವಣಿಗೆಗೆ ಪೂರ್ಣ ತೆತ್ತುಕೊಂಡ ಮನಸ್ಸು ಮಾತ್ರ ಕಟು ಕಷ್ಟಗಳಿಗೆ ಈ ರೀತಿ ಪ್ರತಿಕ್ರಿಯಿಸೀತು.

“ಈಗ ಮನೆಯಲ್ಲಿರುವಾಗ ಅನಿಸುತ್ತದೆ - ಹಿಂದೆ ನಾನು ಪ್ರಾಕ್ಟೀಸಿಗೆ ಹೋಗುತ್ತಿದ್ದ ಕಾಲದಲ್ಲಿ ನಿರಂಜನರೊಬ್ಬರೇ ಮನೆಯಲ್ಲಿರುತ್ತಿದ್ದರಲ್ಲ! ಹೇಗಿರುತ್ತಿದ್ದರು! ಎಷ್ಟು ಕಷ್ಟವಾಗುತ್ತಿತ್ತೋ. ನೆನೆದರೆ ಸಂಕಟವಾಗುತ್ತದೆ. ನಿಜವಾಗಿಯೂ ಹೇಳುತ್ತಿದ್ದೇನೆ. ಬದುಕಿನ ಈ ಘಟ್ಟದಲ್ಲಾದರೂ ನಾವು ಜೊತೆಗೇ ಸಮಯ ಕಳೆಯುವಂತಾಯಿತು. ಏನಂತೀರಿ?”

ಏನನ್ನಬೇಕು?

ಸೀಮಾ ಮಾತಿಲ್ಲದೆ ಓಡಾಡಿಕೊಂಡಿದ್ದಳು. ಅಮ್ಮನಿಗೆ ಕೆಲಸದಲ್ಲಿ ನೆರವಾಗುತ್ತಿದ್ದಳು. ಇರುವುದೇ ತಿಳಿಯದಂತೆ ಇರುವ ಹುಡುಗಿ. ಅಧ್ಯಯನದ ಹುಚ್ಚು ಹತ್ತಿಸಿಕೊಂಡವಳು. ಮನೆಯಲ್ಲಿ ಸೋಶಿಯಾಲಜಿಯ ದೊಡ್ಡದೊಂದು ಸಂಗ್ರಹ ಅವಳದೇ. ಮನೆ ಸುತ್ತಿಸಿದರು ಅನುಪಮಾ. ಎಲ್ಲ ಕಡೆ ಶಿಸ್ತು. ಓರಣ. ಚೊಕ್ಕ. ವ್ಯವಸ್ಥೆ. ಅನುಪಮಾ ಅಕ್ಷರವೂ ಹಾಗೆಯೇ ಅಲ್ಲವೇ? ಎಂದಿಗೂ ಅತ್ತಿತ್ತಾ ಹರಿದ್ದಿಲ್ಲ: ಗಡಿಬಿಡಿಯಲ್ಲೂ. ವಿರಾಮದಲ್ಲೂ.

ಮೃದು ಮನದ ದೃಢ ನಿರ್ಧಾರದ ತೀವ್ರ ಚಡಪಡಿಕೆಯ ಅಷ್ಟೇ ಸಮತೋಲನದ ವ್ಯಕ್ತಿ ಅನುಪಮಾ. ನೆನಪು ಸಿಹಿ-ಕಹಿ ಇದಕ್ಕೊಂದು ಗಟ್ಟಿ ದಾಖಲೆ. ಮಾನವೀಯ ಅಂತಃಕರಣದ ಅಪರೂಪದ ವ್ಯಕ್ತಿ. ಜೊತೆ ಬರಹಗಾರರನ್ನು ಅಸೂಯೆ ರಹಿತವಾಗಿ ವಿಮರ್ಶಿಸುವ, ಹುರಿದುಂಬಿಸುವ, ಅಭಿನಂದಿಸುವ ಗುಣವನ್ನು ಕಂಡುಂಡವರು ಕೆಲವರಲ್ಲ.

“ಇನ್ನು ಮಲಗುವ?”

ನಡುರಾತ್ರಿಯಲ್ಲಿ ಎಚ್ಚರ.

ಅನುಪಮಾ ಮಲಗಿದ ಮಂಚದತ್ತ ಕತ್ತು ತಿರುಗಿಸಿದೆ. ನಿಶ್ಶಬ್ದ ವಾತಾವರಣದಲ್ಲಿ ಅವರು ಉಸಿರಾಡುವುದು ಕೇಳಿಸುತ್ತಿತ್ತು.

ಅದು ಕನ್ನಡದ ಹಿರಿಯ ಲೇಖಕಿಯ, ಕನಸುಗಾತಿಯ, ಬಳಲಿದರೂ ಸೋಲೊಪ್ಪದ, ಎಚ್ಚರವುಳ್ಳ ಜವಾಬ್ದಾರಿಯುತ ಮಹಿಳೆಯ ಉಸಿರು. “ಬರೆಯದೇ ಬದುಕಲಾರೆ” ಎಂದ ಉಸಿರು.

ಆಲೈಸಿದೆ.

....ಅನುಪಮಾ ಬಗ್ಗೆ ಬರೆಯಬೇಕೆಂದರೆ ನೆನಪುಗಳ ಸರಮಾಲೆ ಆರಂಭವಾಗುತ್ತದೆ.

ಇಷ್ಟು, ಹೀಗೆ...., ಮತ್ತೂ ಮುಂದೆ....

ಅಖಂಡ ಆತ್ಮವಿಶ್ವಾಸಿ

- ನೇಮಿಚಂದ್ರ

ಕವಿ ಜಯಸುದರ್ಶನರ ಮನೆಯಲ್ಲಿ ಒಂದು ದಿನ ಮಾತನಾಡುವಾಗ ಡಾ। ಅನುಪಮಾರವರ ಹೆಸರು ಬಂತು. “ನಿರಂಜನ ದಂಪತಿಗಳು ಇಲ್ಲೇ ಜಯನಗರದಲ್ಲಿದ್ದಾರೆ. ಬಹಳ ಸ್ನೇಹ ಸ್ವಭಾವದವರು. ಹೋಗಿ ಭೇಟಿ ಮಾಡಿ” ಎಂದಾಗ ಅನುಪಮಾರವರ ದೂರವಾಣಿ ನಂಬರ್ ತೆಗೆದುಕೊಂಡು ಬಂದಿದ್ದೆ. ಆಗ ನಾನು ‘ಟಾಟಾ ಇನ್‌ಸ್ಟಿಟ್ಯೂಟ್’ನಲ್ಲಿ ಸಂಶೋಧನಾ ವಿದ್ಯಾರ್ಥಿನಿಯಾಗಿದ್ದ ಕಾಲ. ಆಗಷ್ಟೆ ಕೆಲವು ಕತೆಗಳು ಪ್ರಕಟವಾಗಿದ್ದವು. ಅಂದು ನನ್ನ ವಿಭಾಗದಿಂದ ಫೋನ್ ಮಾಡಿದಾಗ ಎತ್ತಿಕೊಂಡವರು ಡಾ। ಅನುಪಮಾರವರೆ. ನನ್ನ ಪರಿಚಯ ಮಾಡಿಕೊಂಡು ಅವರನ್ನು ಭೇಟಿಯಾಗುವ ಅಭಿಲಾಷೆ ವ್ಯಕ್ತಪಡಿಸಿದೆ. ಮುಕ್ತಕಂಠದಿಂದ ಮನೆಗೆ ಆಹ್ವಾನಿಸಿದರು.

ಮೊದಲ ಭೇಟಿಯಲ್ಲೇ ಆತ್ಮೀಯರಾಗುವುದು ಅನುಪಮಾರವರ ವೈಶಿಷ್ಟ್ಯ. ನಮ್ಮ ನಡುವಿನ ವಯಸ್ಸಿನ ಅಂತರವನ್ನು, ಅವರ ಪ್ರಸಿದ್ಧಿ, ಜನಪ್ರಿಯತೆಗಳ ಎತ್ತರವನ್ನು ಇಲ್ಲವಾಗಿಸಿ ತಟ್ಟನೆ ಸಮವಯಸ್ಕ ಸ್ನೇಹಿತೆಯಂತೆ ವ್ಯವಹರಿಸಿದ ಸಹೃದಯತೆ ಅವರದು. ಮೊದಲ ಭೇಟಿಯಲ್ಲಿ ಏನೇನು ಮಾತನಾಡಿದೆ ನೆನಪಿಲ್ಲ. ಆದರೆ ಒಂದು ಬಗೆಯ ಸ್ನೇಹ ಬಾಂಧವ್ಯ ಬೆಸೆದು ಹೊರಬಂದಿದ್ದೆ. ನಾ ತಂದಿದ್ದ ನನ್ನ ಕೆಲವು ಕತೆಗಳನ್ನು ಅವರಲ್ಲಿ ಬಿಟ್ಟು ಬಂದಿದ್ದೆ. ಆದರೆ ಅವನ್ನು ಅವರು ಓದಿ ಅಷ್ಟು ಬೇಗ ತಮ್ಮ ಸಲಹೆ, ಅಭಿಪ್ರಾಯಗಳನ್ನು ವಿವರವಾಗಿ ಬರೆದು ತಿಳಿಸುತ್ತಾರೆ ಎಂದು ನಿರೀಕ್ಷಿಸಿರಲಿಲ್ಲ. ಕಿರಿಯರಿಗೆ ಮುಕ್ತ ಪ್ರೋತ್ಸಾಹ ನೀಡುವ ಅನುಪಮಾರವರದು ಕಿರಿಯರಲ್ಲಿಯ ಪ್ರತಿಭೆಯನ್ನು ಯಾವುದೇ ಬಗೆಯ ಸಾಹಿತ್ಯರಂಗದ ಸವತೀ ಮಾತ್ಸರ್ಯವಿಲ್ಲದೆ ಹೊಗಳುವ ಸ್ವಭಾವ. ವೈದೇಹಿಯವರ ಕಾವ್ಯದ ಅನುಭವ ನೀಡುವ ಕತೆಗಳನ್ನು ಓದಿ 'ನಿಮ್ಮ ಹಾಗೆ ಭಾಷೆ ದುಡಿಸಿಕೊಳ್ಳೋದು ನಾವುಗಳು ಯಾವಾಗ ಕಲೀತೀವೊ' ಎಂದಿದ್ದರು. ಉತ್ತಮ ಕತೆಗಳನ್ನು ಓದಿದರೆ ಅವನ್ನು ಸುತ್ತ ಮಂದಿಗೂ ತಿಳಿಸುವ, ಎಂಥಾ ವೇದಿಕೆಯ ಮೇಲೂ ಬಿಚ್ಚುಮನಸ್ಸಿನಿಂದ ಮೆಚ್ಚುವ ಗುಣ ಅವರದು. "ಮಹಿಳೆಯರ ಕೃತಿಗಳಿಗೆ ಸರಿಯಾದ ಗಮನ ಕೊಡುತ್ತಿಲ್ಲ, ಪೂರ್ವಗ್ರಹದ ದೃಷ್ಟಿ ಹೋಗಿಲ್ಲ" ಎಂದು ಎಲ್ಲ ಸಮಾರಂಭಗಳಲ್ಲೂ ಅವರು ಒತ್ತಿ ಹೇಳುವ ಮಾತುಗಳು.

ಅನುಪಮಾರವರ ಮತ್ತೊಂದು ಪ್ರಶಂಸಾರ್ಹ ಗುಣವೆಂದರೆ, ಸುಮಾರು ಎಲ್ಲ ಪತ್ರಿಕೆಗಳಲ್ಲೂ ಕಣ್ಣಾಡಿಸುತ್ತಾರೆ. ಪರಿಚಿತರ, ಸ್ನೇಹಿತರ ಕತೆ, ಲೇಖನ ಎಲ್ಲೇ ಇರಲಿ ಓದಿ, ತಮ್ಮೆಲ್ಲ ಕೆಲಸ ಕಾರ್ಯಗಳ ನಡುವೆಯೂ ಸಮಯ ಮಾಡಿಕೊಂಡು ತಕ್ಷಣ ತಮ್ಮ ಅಭಿಪ್ರಾಯ, ಮೆಚ್ಚುಗೆಗಳನ್ನು ಬರೆದು ತಿಳಿಸುತ್ತಾರೆ. ಎಷ್ಟೋ ಬಾರಿ ಅವರ ಪತ್ರಕ್ಕೆ ತಡವಾಗಿ ಉತ್ತರಿಸಿದ ನನ್ನ ಸೋಮಾರಿತನಕ್ಕೆ ನಾಚಿದ್ದೇನೆ. ಈ ವಯಸ್ಸಿಗೆ ಅಂಟಿದ ಜಡತ್ವವನ್ನು ಝಾಡಿಸಲು ಸತತ ಪ್ರಯತ್ನಿಸಿದ್ದೇನೆ. ಆಗೆಲ್ಲ ಅನುಪಮಾರವರು ಅಷ್ಟೆಲ್ಲ ಆತ್ಮೀಯರನ್ನು ಗಳಿಸಿರುವುದು, ಉಳಿಸಿಕೊಂಡಿರುವುದು, ಅವರ ಚಟುವಟಿಕೆ, ಚುರುಕುತನ, ಇತರರ ಬಗ್ಗೆ ತೋರುವ ಕಾಳಜಿ ಹಾಗೂ ವಾತ್ಸಲ್ಯದ ಮೂಲಕವೇ ಅನಿಸುತ್ತದೆ.

ಅನುಪಮಾರವರ ವೈಶಿಷ್ಟ್ಯ ಕಾಲದ ಜೊತೆಗೆ ಹಳತಿಗೆ ಅಂಟಿ ಕೊಳ್ಳೆಯದೆ, ಹೊಸ ವಿಚಾರಗಳಿಗೆ, ಹೊಸ ಚಿಂತನೆಗಳಿಗೆ ತೆರೆದುಕೊಂಡ ಬಗೆ. ಹಾಗಾಗಿಯೆ ಅವರ-ನಮ್ಮ ನಡುವೆ ಪೀಳಿಗೆಗಳ ಅಂತರದ ಅನುಭವ ಆಗುವುದಿಲ್ಲ. ಅವರದೇ ವಯಸ್ಸಿನ ಬಹಳಷ್ಟು ಲೇಖಕಿಯರಿನ್ನೂ ಮನೆ, ಮಕ್ಕಳು, ಗೃಹಿಣೀಧರ್ಮ, ಮಾತೃತ್ವವನ್ನು ವೈಭವೀಕರಿಸಿ ಬೋಧಿಸುತ್ತಾ ಇರುವಾಗ, ಅನುಪಮಾರವರು ಸ್ತ್ರೀ ಧೋರಣೆ,

ವ್ಯಕ್ತಿಗತ ಸಾಧನೆ, ಸರಿಸಮಾನತೆಯ ಬಗ್ಗೆ ನಮ್ಮಲ್ಲಿ ಒಬ್ಬರಾಗಿ ಅರ್ಥಮಾಡಿಕೊಂಡಿದ್ದಾರೆ. ಅವರ ಕತೆಗಳಲ್ಲೂ ಇಂಥಾ ಸ್ತ್ರೀ ಪಾತ್ರಗಳು ಎದ್ದು ನಿಲ್ಲುತ್ತವೆ. ನಿಜ, ಸ್ತ್ರೀ ವಿಮೋಚನೆಯನ್ನೇ ಮುಖ್ಯ ವಸ್ತುವಾಗಿಸಿದ ಅವರ ಕತೆಗಳಲ್ಲಿ message ಸ್ವಲ್ಪ ಗಟ್ಟಿಯಾಗಿ ಹೇಳಿದಂತೆ ಅನಿಸಿದ್ದುಂಟು. ಸ್ತ್ರೀಯನ್ನು ಸ್ವತಂತ್ರ ಮನೋಭಾವದ ವ್ಯಕ್ತಿಯಾಗಿ ಚಿತ್ರಿಸಿದ ಲೇಖಕಿಯರಲ್ಲಿ ಅನುಪಮಾ ಮುಂದಿದ್ದಾರೆ.

ಅನುಪಮಾರವರ ಸಾಹಿತ್ಯದಂತೆ, ಬದುಕೂ ದಿಟ್ಟವಾಗಿದೆ. ತಮ್ಮಲ್ಲಿ ಅಸ್ವಸ್ಥತೆಯಲ್ಲೂ, ತೌರುಮನೆಗೆ ಹೋಗಿಬಂದಷ್ಟೆ ಸಲೀಸಾಗಿ ಆಪರೇಷನ್ ಥಿಯೇಟರಿನ ಒಳಹೊಕ್ಕು ಬಂದಿದ್ದಾರೆ. ರೋಗದಿಂದ ಅಧೀರರಾಗದೆ, ತುಂಬು ಬದುಕು ಬದುಕುತ್ತಿದ್ದಾರೆ. ಆಗ ಅವರು ಮೂರನೇ ಆಪರೇಷನ್ ಮಾಡಿಸಿಕೊಂಡು, ವಾರಗಟ್ಟಲೆ ಕೀಮೋಥೆರಪಿಯ ನಂತರ ಮನೆಗೆ ಬಂದ ಸಂದರ್ಭ. ಅನುಪಮಾರವರದು ಮಾತ್ರ ಎಂಥಾ ನೋವಿನಲ್ಲೂ ಬತ್ತದ ಜೀವನೋತ್ಸಾಹ. ನಾನು ಸ್ನೇಹಿತೆ ಸುಮಿ ಜೊತೆಯಲ್ಲಿ ಅವರ ಮನೆಗೆ ಹೋಗಿದ್ದೆ. ಒಳಕೋಣೆಯಲ್ಲಿ ಆಯಾಸದಿಂದ ಮಲಗಿದ್ದರು. ಕೀಮೋಥೆರಪಿಯಿಂದಾಗಿ ಕೂದಲೆಲ್ಲ ಉದುರಿತ್ತು. ನಾವು ಹೋದೊಡನೆ ಉತ್ಸಾಹದಿಂದ ಎದ್ದು ಕುಳಿತರು. ಓರ್ವ ರೋಗಿಯೊಡನೆ ಸಪ್ಪೆ ಮುಖ ಹಾಕಿಕೊಂಡು ರೋಗದ ವಿವರಗಳನ್ನು ಕೇಳುವಂಥಾ ಪ್ರಸಂಗ ಅದಾಗಿರಲಿಲ್ಲ. ಉತ್ಸಾಹದಿಂದ ಸಾಹಿತ್ಯರಂಗದಲ್ಲಿ ಏನೇನಾಗುತ್ತಿದೆ ಕೇಳಿ ತಿಳಿದುಕೊಂಡರು. ಆಪರೇಷನ್ ಬಗ್ಗೆ, ಅವರ ನೋವಿನ ಬಗ್ಗೆ ಮಾತನಾಡಿದ್ದು ಅತ್ಯಲ್ಪವೆ. ಆ ವರ್ಷದ ದೀಪಾವಳಿ ಸಂಚಿಕೆಯಲ್ಲಿ ಸ್ವಲ್ಪಮಟ್ಟಿಗೆ ಸ್ವಗತವೆನಿಸಿದ ಕತೆ ಓದಿದಾಗಲೇ ಆಪರೇಷನ್ ಹಾಗೂ ಖೀಮೋಥೆರಪಿಗಳ ಭೀಕರತೆಯ ಪೂರ್ಣ ಪ್ರಮಾಣದ ಅರಿವು ನಮಗಾದದ್ದು.

ಬಹಳಷ್ಟು ಲೇಖಕ/ಲೇಖಕಿಯರಂತೆ ಅನುಪಮಾ ತಮ್ಮ ಸುತ್ತ ಪರಿಧಿ ಕಟ್ಟಿಕೊಂಡು ದೂರ ಉಳಿದವರಲ್ಲ. ಆತ್ಮೀಯರಾಗಿ ಹತ್ತಿರ ಬಂದು ಬರಹದೊಡನೆ, ಬದುಕನ್ನೂ ಹಂಚಿಕೊಂಡವರು. ಈಗ ಅನುಪಮಾರವರು ಮತ್ತೊಂದು ಆಪರೇಷನ್‌ಗೆ ಹೊರಟ ವಿಷಯ ಕೇಳಿ ತುಂಬ ದುಃಖವಾಗಿದೆ. ನೋವಿಗೂ ಒಂದು ಮಿತಿ ಬೇಡವೆ? ಆದರೆ ಅನುಪಮಾರವರ ಧೈರ್ಯ, ಆತ್ಮವಿಶ್ವಾಸದ ಎದುರು ಎಂಥಾ ನೋವಿಗೂ ಸೋಲಿರುವುದು ಮಾತ್ರ ಖಂಡಿತ.

-ಕೆ. ಉಷಾ ಪಿ. ರೈ

ಚಿಕ್ಕಂದಿನಿಂದಲೂ ನಿರಂಜನ ದಂಪತಿಗಳ ಕಾದಂಬರಿಗಳನ್ನು ಓದಿ ಮೆಚ್ಚಿದ್ದ ನಾನು ಅವರನ್ನು ಪ್ರತ್ಯಕ್ಷವಾಗಿ ನೋಡಿದ್ದು ಇತ್ತೀಚೆಗೆ, ಸುಮಾರು ೮ ವರುಷಗಳ ಹಿಂದೆ. ಅನುಪಮಾರವರ "ನೆನಪು-ಸಿಹಿ ಕಹಿ" ಓದಿದ ಮೇಲೆ, ಈ ದಂಪತಿಗಳನ್ನೊಮ್ಮೆ ನೋಡಬೇಕು ಎಂದು ನನ್ನ ಎಳೆತನದಲ್ಲಿ ಮೂಡಿದ್ದ ಆಸೆ, ನೋಡಲೇ ಬೇಕು ಎಂಬ ಹೆಬ್ಬಯಕೆಯಾಗಿ ಮಾರ್ಪಟ್ಟಿತ್ತು. ಗುರುತು ಪರಿಚಯವಿಲ್ಲದೆ ಸೀದಾ ಹೇಗೆ ಹೋಗಲಿ ಎಂಬ ಅಳುಕು ನನ್ನ ಆಸೆಗೆ ಕಡಿವಾಣ ಹಾಕಿ ಎಳೆಯುತ್ತಿದ್ದರೂ ನೋಡಬೇಕೆನ್ನುವ ಆಸೆ ಮಾತ್ರ ಕಾಡುತ್ತಿತ್ತು. ಆಗ ನಾನೂ ಬರೆಯಲು ಪ್ರಾರಂಭಿಸಿದ್ದ ದಿನಗಳು. ಎರಡು ಕಾದಂಬರಿಗಳು ಪ್ರಕಟವಾಗಿತ್ತಷ್ಟೇ. ಬರವಣಿಗೆ ಮುಂದುವರೆಸುವೆನೆಂಬ ಧೈರ್ಯವೂ ಇರಲಿಲ್ಲ. ಹಾಗಾಗಿ ಲೇಖಕಿಯೆಂದು ಪರಿಚಯಿಸಿಕೊಳ್ಳುವ ಹಾಗೂ ಇರಲಿಲ್ಲ. ನನ್ನ ಆಸೆಯನ್ನು ನನ್ನವರೊಡನೆ ಹೇಳಿದಾಗ, ಅವರು ಅದಕ್ಕೇನು, ವಿಳಾಸ ತಿಳಿದುಕೋ, ಹೋಗಿ ಬರೋಣ ಎಂದಿದ್ದರು. ಹಾಗೆ ೩-೪ ದಿನ ಯೋಚಿಸಿ, ಏನು ತಿಳಿಯುವರೋ ಎಂಬ ಜಿಜ್ಞಾಸೆಯೊಂದಿಗೆ ಅವರಿಗೆ ಫೋನು ಹಚ್ಚಿದಾಗ ನನ್ನ ಮನದ ಅಳುಕನ್ನು ಹೋಗಲಾಡಿಸಿ ನನ್ನ ಕಿವಿಯೊಳಗೆ ಆತ್ಮೀಯತೆಯ ರಾಗ ತುಂಬಿದರು ಅನುಪಮಾ. ನನ್ನ ಆಸೆ ವ್ಯಕ್ತಪಡಿಸಿದಾಗ, "ಓ, ಅದಕ್ಕೇನು, ಮನೆಗೆ ಬನ್ನಿ, ಮಾತನಾಡೋಣ" ಎಂದು ವಿಳಾಸಕೊಟ್ಟು ಆಹ್ವಾನಿಸಿದಾಗ ನನ್ನ ಸಂತಸಕ್ಕೆ ಪಾರವೇ ಇರಲಿಲ್ಲ.

ಹೇಳಿದ ದಿನ ನಾವು ಅವರಲ್ಲಿಗೆ ಹೋದೆವು. ಅಪರಿಚಿತರಾಗಿ ಹೋದವರು ಸ್ನೇಹಿತರಾಗಿ ಹಿಂದೆ ಬಂದೆವು !

ಹೆಸರಾಂತ ದಂಪತಿಗಳು, ಹೇಗೆ ನಮ್ಮನ್ನು ಎದುರುಗೊಳ್ಳುವರೋ ಎಂಬ ಸಂಕೋಚದಿಂದ ಅವರ ಮನೆಗೆ ಹೋಗಿದ್ದರೂ, ಅವರ ನಗುಮೊಗದ ಸ್ವಾಗತ ನಮ್ಮ ಸಂಕೋಚವನ್ನು ಕಿತ್ತೆಸೆಯಿತು. ಅಲ್ಲೇ ನನಗೆ ಅವರಲ್ಲಿ "love at first sight" ಆಯಿತೆಂದು ಹೇಳಬಹುದು. ಅವರನ್ನು ಭೇಟಿಯಾದ ಕೆಲವೇ ನಿಮಿಷಗಳಲ್ಲಿ ಅವರ ಸ್ನೇಹಸಂಕೋಲೆಯೊಳಗೆ ನಾವು ಬಂದಿಯಾದೆವು. ಅಂದಿನಿಂದ ಇಂದಿನವರೆಗೆ ನಾನು ಕಂಡದ್ದು ಆ ಸ್ನೇಹದ ಆರೋಹಣವನ್ನೇ. ಅಪರಿಚಿತರಂತೆ ಭೇಟಿಯಾದರೂ ನಿರಂಜನರು ನನ್ನ ತೀರ್ಥರೂಪ ಕೆ. ಹೊನ್ನಯ್ಯ ಶೆಟ್ಟರ (ಪತ್ರಿಕೋದ್ಯಮಿ) ಸಂಪರ್ಕವನ್ನು ತನ್ನ ಎಳೆ ಹರೆಯದಲ್ಲೇ ಹೊಂದಿದ್ದರೆಂದು ತಿಳಿದಾಗ ಆ ಅಪರಿಚಿತ ಮನೋಭಾವ ಮಾಯವಾಗಿ ಅಲ್ಲಿ ಬೆಳೆದು ನಿಂತದ್ದು ಆತ್ಮೀಯತೆ!

ಅನುಪಮಾ-ನಿರಂಜನರಂಥ ದಂಪತಿಗಳನ್ನು ನಾನೀವರೆಗೆ ನೋಡಿಲ್ಲ. ಮುಂದೆ ನೋಡುವುದೂ ಸಾಧ್ಯವಿಲ್ಲ. ಅವರಿಬ್ಬರೂ ಒಬ್ಬರಿಗೊಬ್ಬರು ಪೂರಕವಾಗಿರುವ ವ್ಯಕ್ತಿಗಳು - made for each other ! ಒಬ್ಬರಿಲ್ಲದೆ ಇನ್ನೊಬ್ಬರಿಲ್ಲ. ಅವರಿಬ್ಬರ ಯೋಜನೆಗಳು, ವಿಚಾರಧಾರೆಗಳು, ಬರೆಯುವ ಶೈಲಿ ಎಲ್ಲಾ ಬೇರೆಬೇರೆಯಾಗಿರ ಬಹುದು. ಆದರೆ ಅದರ ಮೂಲ ಸೆಲೆ ಒಂದೇ ಎಂಬುದಂತೂ ಸತ್ಯ. ಸಾರವತ್ತಾದ ಜೀವನ ಸಾಗಿಸಿರುವ ಅವರ ಜೀವನ ಕಹಿ-ಸಿಹಿಗಳ ಸಮ್ಮಿಶ್ರಣ! ಬಾಗಿಲಿಗೆ ಬಂದ ಮೃತ್ಯುವನ್ನು ತಮಗಿನ್ನೂ ಸ್ವಲ್ಪ ಕೆಲಸವಿದೆಯೆಂದು ತಮ್ಮ ಬಗಲಲ್ಲೇ ಇಟ್ಟುಕೊಂಡು ನಗುನಗುತ್ತಾ ಜೀವಿಸುತ್ತಿರುವ ಈ ದಂಪತಿಗಳ ಮನೋಸ್ಥೈರ್ಯಕ್ಕೆ ಏನೂ ಸಾಟಿಯಿಲ್ಲ.

"ಕಥೆ" ಅನುಪಮಾರವರ ಸುಂದರವಾದ ಮನೆಯ ಹೆಸರು. ಅವರ ಯಶಸ್ವೀ ಗೃಹಿಣಿತ್ವದ ಸಂಕೇತ. ಮನೆ ತುಂಬಾ ತುಂಬಿರುವ ಪುಸ್ತಕಗಳ ರಾಶಿ ಅವರ ನಿರಂತರ ಅಧ್ಯಯನಕ್ಕೆ ಸಾಕ್ಷಿ. ಸ್ನೇಹಿತರಿಗಾಗಿ 'ಕಥೆ'ಯ ಬಾಗಿಲು ಸದಾ ತೆರೆದಿರುತ್ತದೆ. ದೊಡ್ಡವರು, ಚಿಕ್ಕವರು ಎಂಬ ಭೇದಭಾವವನ್ನು ಮೀರಿನಿಂತು, 'ಕಥೆ'ಯ ಅಂಗಣದ ಗುಲಾಬಿ ಗೊಂಚಲುಗಳು ಅನುಪಮಾರವರ ತುಂಬು ನಗುವಿಗೆ ಪೂರಕವಾಗಿ ನಮ್ಮನ್ನು ಸ್ವಾಗತಿಸುತ್ತವೆ.

ನನಗೆ ತಿಳಿದ ಹಾಗೆ ಅನುಪಮಾರವರ ಜೀವನ ಹೂವಿನ ಹಾಸಿಗೆಯಲ್ಲ. ಮೆಚ್ಚಿನಿಯ ಮನೆ, ಉಂಡುಡಲು ಬೇಕಷ್ಟು ಐಶ್ವರ್ಯ ಇದೆ; ಮೆಚ್ಚಿದ ಗಂಡ, ನೆಚ್ಚಿನ ಮಕ್ಕಳು, ಅರಿತು ನಡೆಯುವ ಸ್ನೇಹಿತರು, ಕೊಂಡಾಡುವ ಜನತೆ ಎಲ್ಲಾ ಅವರ ಸುತ್ತಲೂ ಇದ್ದಾರೆ ನಿಜ. ಆದರೆ, ಸ್ವರ್ಗಕ್ಕೆ ಕಿಚ್ಚು ಹಚ್ಚಿದಂತೆ, ಅವರ ಸಿಹಿಯಾದ ಜೀವನದಲ್ಲಿ ಕಹಿಯಾಗಿ ಬಂದಿರುವುದು ಅವರಿಬ್ಬರನ್ನೂ ಕಾಡುತ್ತಿರುವ ಮಾರಕ ಕಾಯಿಲೆ. ದೊಡ್ಡ ಕಾಯಿಲೆಯ ಬಿಗಿಹಿಡಿತಕ್ಕೊಳಗಾಗಿದ್ದರೂ ಈ ಕಾರಣದಿಂದ ಅವರಿಬ್ಬರ ಯಾವ ಚಟುವಟಿಕೆಗಳೂ ಸ್ಥಗಿತವಾಗಿಲ್ಲ. ಓಡಾಡುವ ಕಷ್ಟದಿಂದ ಮನೆ ಯೊಳಗೇ ಇರಬೇಕಾದ ಸಂದರ್ಭ ನಿರಂಜನರಿಗಿದ್ದರೂ, ಅವರಿಗೆ ಬೇಕಾದ ಬೌದ್ಧಿಕ ಸಖ್ಯ ಕೊಡುವಲ್ಲಿ ಅನುಪಮಾ ಯಶಸ್ವಿಯಾಗಿದ್ದಾರೆ. ಅನುಪಮಾರವರು ತನ್ನ ನೋವು ಮರೆತು ಎಲ್ಲಾ ಕಡೆ ಓಡಾಡುತ್ತಾ ಎಲ್ಲಾ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಭಾಗಿಯಾಗು ತ್ತಾರೆ. ಅವರಿಲ್ಲದ ಸಭೆ ಸಮಾರಂಭಗಳು ಉಪ್ಪಿಲ್ಲದ ಊಟದಂತೆ ಬರೇ ಸಪ್ಪೆ. ಲೇಖಕಿಯರೆಲ್ಲರಲ್ಲೂ ಎದ್ದು ತೋರುವ ಅನುಪಮಾ, ನೆರೆದವರೆಲ್ಲರೊಡನೆ ನಗು ನಗುತ್ತಾ ಮಾತಾಡಿದರೇನೇ ಆ ಸಮಾರಂಭಕ್ಕೆ ಕಳೆ! ಹಿರಿಯರೊಡನೆ ಗೆಳೆಯರಾಗಿ ಕಿರಿಯರೊಡನೆ ಮಾರ್ಗದರ್ಶಕರಾಗಿ ಮಾತನಾಡುವ ಅವರ ರೀತಿ ತುಂಬಾ ಆಕರ್ಷಣೀಯ.

ನಾನಂತೂ ಮಾನಸಿಕವಾಗಿ ಅಧೀರಳಾದಾಗ ಓಡುವುದು ಅನುಪಮಾರವರಲ್ಲಿಗೆ. ಈ ದಂಪತಿಗಳೊಡನೆ ಒಂದು ಹದಿನೈದು ನಿಮಿಷ ಮಾತನಾಡಿದರೆ ಸರಿ, ಏನೋ ಸಮ್ಮೋಹನಕ್ಕೆ ಒಳಗಾದಂತೆ ಮನಸ್ಸಿಗೆ ಸಿಗುವ ಶಾಂತಿ, ಧೈರ್ಯ ಎಲ್ಲೂ ಸಿಗುವುದಿಲ್ಲ. ೧೦-೧೫ ನಿಮಿಷ ನೋಡಿ ಬರುವಾ ಎಂದು ಹೋದರೆ ಎರಡು ಗಂಟೆಯಾದರೂ ಅಲ್ಲಿ ಸಮಯದ ಓಟ ತಿಳಿಯುವುದಿಲ್ಲ. ಹೆಚ್ಚಿನ ಮಾತುಗಾರರಲ್ಲದ ನನ್ನವರು ಕೂಡಾ ಅಲ್ಲಿ ಹೋದಾಗ ಗಂಟೆ ಗಟ್ಟಲೆ ಹರಟೆ ಹೊಡೆದು, ತನ್ನ ನೋವು ನಲಿವುಗಳನ್ನು ಹಂಚಿ ಕೊಳ್ಳುತ್ತಾರೆ. ಅನುಪಮಾ ನಿರಂಜನರ ಸ್ನೇಹಸುಧೆಯಲ್ಲಿ ಮಿಂದವರಿಗೇ ಗೊತ್ತು ಅದರ ಸಿಹಿ!

ಮೊದಲ ಭೇಟಿಯಲ್ಲಿಯೇ 'ನೀವು ಚೆನ್ನಾಗಿ ಬರೆಯಬಲ್ಲಿರಿ. ಪ್ರಚಲಿತ ದಲ್ಲಿರುವ ಪ್ರೀತಿ ಪ್ರೇಮದ ಫಾರ್ಮುಲಾ ಬಿಟ್ಟು ಭಿನ್ನವಾಗಿ ಬರೆಯಿರಿ. ಜನಪ್ರಿಯತೆ ಯೊಂದೇ ಗುರಿಯಾಗಿರಬಾರದು, ಬರೆದುದು ಮೌಲ್ಯವುಳ್ಳದ್ದಾಗಿರಬೇಕು' ಎಂದು ಬೆನ್ನು ತಟ್ಟಿ ಹೇಳಿದ ಅವರ ಮಾತು ನಾನು ಬರೆಯುವಾಗಲೆಲ್ಲಾ ನನ್ನ ಮನದ ಪರದೆ ಯಲ್ಲಿ ಮೂಡಿ ನನ್ನನ್ನು ಎಚ್ಚರಿಸುತ್ತಿರುತ್ತದೆ. ನನ್ನ ಕಾದಂಬರಿಗಳನ್ನು ಓದಿ, ಅವುಗಳ ಒಳಿತು ಕೆಡುಕುಗಳನ್ನು ತೋರಿಸಿ ನನ್ನ ಬರವಣಿಗೆ ಬೆಳೆಯಲು ಕಾರಣರಾಗಿರುವ ಅನುಪಮಾರವರಿಗೆ ನಾನು ಸದಾ ಋಣಿ. ಯಾವುದಾದರೂ ಒಂದು ಬರವಣಿಗೆ ಮೆಚ್ಚುಗೆಯಾದರೆ, ಓದಿದ ಮರುಕ್ಷಣದಲ್ಲೇ ಮೆಚ್ಚುಗೆ ಸೂಸಿ ಬರೆಯುವ ಅವರ ಬಿಚ್ಚು ಮನದ ಪ್ರೋತ್ಸಾಹ ಕೊಡುವ ನುಡಿಗಳು ನನ್ನಲ್ಲಿ ಸ್ಫೂರ್ತಿ ತುಂಬುವ ಒಸಗೆಗಳು. ಇನ್ನೊಬ್ಬರು ಬರೆದುದನ್ನು ಮೆಚ್ಚಿ ಆಡುವ ಬರಹಗಾರರು ಕಡಿಮೆ. ಮೆಚ್ಚಿದರೂ, ಮೆಚ್ಚದಿದ್ದರೂ ಮೌನವಾಗಿರುವವರೇ ಹೆಚ್ಚು. ಆದರೆ ಅನುಪಮಾ ಹಾಗಲ್ಲ. ಮೆಚ್ಚಿದರೆ ಮನಬಿಚ್ಚಿ ಹೇಳುವ, ಮೆಚ್ಚದಿದ್ದರೆ ಎಲ್ಲಿ ದೋಷವಿದೆಯೆಂದು ಬೆಟ್ಟು ಮಾಡಿ ತೋರುವ ವಿಮರ್ಶಾತ್ಮಕ ದೃಷ್ಟಿಯವರು.

ಅವರ ಪ್ರೋತ್ಸಾಹದ ನುಡಿಗಳು ಬರವಣಿಗೆಗೆ ಮಾತ್ರ ಸೀಮಿತವಾಗಿಲ್ಲ. ಇದಕ್ಕೊಂದು ಚಿಕ್ಕ ಉದಾಹರಣೆ; ನಾನು ಕಾರು ನಡೆಸಲು ಕಲಿಯುತ್ತಿದ್ದ ಸಂದರ್ಭ. ಸೈಕಲು ಕೂಡಾ ತುಳಿಯಲು ಗೊತ್ತಿಲ್ಲದ ನಾನು ಕಾರು ಬಿಡುವ ಧೈರ್ಯ ಮಾಡಿದ್ದು ಪರಿಸ್ಥಿತಿಯ ಒತ್ತಡಕ್ಕೆ. ಆಗ ಒಮ್ಮೆ ಮನೆಯ ಮುಂದಿನ ಗೋಡೆಗೆ ಗುದ್ದಿದೆ. ಆ ಮೇಲೆ ಕಾರು ಮುಟ್ಟಲೇ ಧೈರ್ಯ ಬರಲಿಲ್ಲ. ಆಗೊಮ್ಮೆ ಅನುಪಮಾರವರಲ್ಲಿ ಹೋಗಿದ್ದಾಗ ಕೇಳಿದರು, "ಹೇಗಿದೆ ನಿಮ್ಮ ಡ್ರೈವಿಂಗ್?." "ಡ್ರೈವಿಂಗ್ ಮಾಡಿ ಮಾರುತಿಯ ಮೂತಿ ಚಟ್ಟೆಯಾಗಿದೆ. ಈಗ ಧೈರ್ಯವಿಲ್ಲ" ಎಂದು ನಾನಂದಾಗ ಅವರು ಹೇಳಿದ ಮಾತನ್ನು ನಾನೆಂದೂ ಮರೆಯಲಾರೆ. "ಅಯ್ಯೋ ಬಿಡಿ, ನಾಲ್ಕು ಸಲ ಗುದ್ದಿದರೆ ತಾನೇ ಡ್ರೈವಿಂಗ್ ಸರಿಯಾಗಿ ಬರುವುದು? ಅಲ್ಲಿ ಇಲ್ಲಿ ತಾಗುತ್ತಲೇ ಇರುತ್ತದೆ. ಅಷ್ಟಕ್ಕೆ ಹೆದರಿದರೆ ಆಯಿತೇ? ತಾಗಲಿ ಬಿಡಿ, ಇನ್ಸೂರನ್ಸ್ ಇದೆ, ರಿಪೇರಿ ಮಾಡಿಸಬಹುದು. ತಾಗಿತೆಂದು ಡ್ರೈವಿಂಗ್ ಮಾತ್ರ ನಿಲ್ಲಿಸಬೇಡಿ."

ಅವರಂದ ಮಾತು ನನ್ನೆದೆಯಿಂದ ಭಯವನ್ನು ಕಿತ್ತೆಸೆದು ಡ್ರೈವಿಂಗ್ ಪುನಃ ಸುರುಮಾಡಿದೆ. ಆಮೇಲೆ ಇನ್ನೊಮ್ಮೆ ನಿಂತ ಕಾರೊಂದಕ್ಕೆ ಡಿಕ್ಕಿಹೊಡೆದಾಗ ನನ್ನ ಕಿವಿಗೆ ಕೇಳಿಸಿದ್ದು ಹೊಡೆದ ಶಬ್ದವಲ್ಲ: ಅನುಪಮಾರವರ ದನಿ. "ತಾಗಲಿ ಬಿಡಿ. ತಾಗಿಸಿದೆನೆಂದು ಎದೆಗುಂದಬೇಡಿ. ಹೀಗೆ ತಾಗುತ್ತಾ ಇರುತ್ತದೆ. ನೀವು ಹೋಗುತ್ತಾ ಇರಬೇಕು. ಆವಾಗಲೇ ಡ್ರೈವಿಂಗ್ ಸರಿಯಾಗಿ ಬರುವುದು!"

ಆಳವಾಗಿ ಯೋಚಿಸಿದರೆ ಅನುಪಮಾರವರ ಮಾತು ಡ್ರೈವಿಂಗ್‌ಗೆ ಮಾತ್ರ ಅನ್ವಯಿಸುವುದೆಂದು ನನಗನಿಸುವುದಿಲ್ಲ. ಜೀವನಕ್ಕೂ ಸರಿಹೊಂದುವ ಮಾತದು. 'ಈಸಬೇಕು, ಇದ್ದು ಜಯಿಸಬೇಕು' ಎನ್ನುವ ತತ್ವಕ್ಕೆ ಹೊಂದುವ ಮಾತು. ನಮ್ಮ ಅದೃಷ್ಟದ ಕರ್ಮಚಾರಿಗಳು ನಾವೇ ಎಂದು ಎದೆ ಬೀಸಿ ನಡೆದರೂ, ಕಾಣದ ಕೈಯೊಂದು ನಮಗೆ ಏಟುಕೊಡುತ್ತಲೇ ಇರುತ್ತದೆ. ನಮ್ಮ ಪ್ರಯಾಣವನ್ನು ತಡೆಯುತ್ತಲೇ ಇರುತ್ತದೆ. ಆದರೆ ಈ ಏಟುಗಳಿಗೆ ಹೆದರಿ ನಾವು ನಿಂತರೆ ಜೀವಿಸುವುದು ಹೇಗೆ? ಬಿದ್ದಲ್ಲಿಂದ ಎದ್ದು, ನೋವನ್ನು ಮರೆತು, ಹೋರಾಡುತ್ತಾ ಚಲಿಸಲೇಬೇಕು. ಈ ಹೋರಾಟದಲ್ಲೇ ಜೀವನದ ಸಾರವಿರುವುದು. ಅನುಪಮಾರವರದ್ದು ಇಂಥ ಹೋರಾಟದ ಜೀವನ. ತನ್ನ ಸಿಡಿತುಂಬಿದ ಜೀವನದಲ್ಲಿ ಕಟುವಾಗಿ ಬಂದ ಕಾಯಿಲೆಯ ನೋವನ್ನು ಮರೆತು ನಗುತ್ತಾ ಜೀವನದೊಡನೆ ಹೊಂದಾಣಿಕೆ ಮಾಡಿಕೊಂಡಿರುವುದು ಅವರ ಸ್ಥಿತಪ್ರಜ್ಞತೆಯಿಂದ ಮಾತ್ರ ಸಾಧ್ಯವಾಗಿದೆ ಎಂದರೆ ಸುಳ್ಳಲ್ಲ.

ಧೀಮಂತ ಧೀರೆ ೨

- ಆನಂದಿ ಸದಾಶಿವ ರಾವ್

ಆತ್ಮೀಯ ಗೆಳತಿ ಅನುಪಮಾರ ಬಗ್ಗೆ ಬರೆಯುವುದೆಂದರೆ ಸಾಹಸವೇ. ಲೇಖನ ಕತೆಗಳನ್ನು ಬರೆಯಲು ಪ್ರಾರಂಭಿಸಿದ ನನಗೆ ಸಮರ್ಥ ಲೇಖಕಿಯಾದ ಅನುಪಮಾರ ಕೃತಿಗಳೆಂದರೆ ತುಂಬಾ ಮೆಚ್ಚುಗೆ. ಆದರಿಂದ ಅವರೊಡನೆ ಪತ್ರವ್ಯವಹಾರ ಪ್ರಾರಂಭಿಸಿ ಐವತ್ತನೆ ದಶಕದ ಉತ್ತರಾರ್ಧದಲ್ಲಿಯೇ ಪರಿಚಯ ಮಾಡಿಕೊಂಡಿದ್ದೆನು. ನಮ್ಮೊಳಗೆ ಪತ್ರಗಳ ವಿನಿಮಯ ನಡೆಯುತ್ತಲೇ ಇದ್ದಾಗ, ಅವರ ವಿವಾಹವಾಯಿತು. ಅನುಪಮಾ ಪತಿ ನಿರಂಜನರೊಡನೆ ಮಂಗಳೂರಿಗೆ ಆಗಮಿಸಿದಾಗ ಅವರ ಮುಖತಃ ಭೇಟಿಯಾಗುವ ಸುಯೋಗ ಲಭಿಸಿತು. ವೈದ್ಯಕೀಯ ವಿದ್ಯಾಭ್ಯಾಸ ಪೂರೈಸಿದ ಡಾ। ಅನುಪಮಾ ಆಗಿನ್ನೂ ಎಳೆಯರು. ಆದರೂ ಕಾವ್ಯಮಯ ಶೈಲಿಯ ಬರಹಗಾರ್ತಿ ಅನುಪಮಾ ಆಗಲೇ ಸಾಕಷ್ಟು ಪ್ರಸಿದ್ಧರು. ನನಗೆ ಅನುಪಮಾರ ಬಗ್ಗೆ ಅವರ ಪತಿ ನಿರಂಜನರ ಮೇಲೆ ಇರುವಂತೆ ಗೌರವಾದರ.

ಅನುಪಮಾ ಶ್ರೀರಾ ಮುಗ್ಧ ಹೃದಯಿ. ಮಕ್ಕಳಲ್ಲಿ ಇರುವಂತಹ ಕುತೂಹಲ, ಹೊಸದನ್ನು ತಿಳಿಯುವ ಲವಲವಿಕೆ. ಚಿಕ್ಕ ವಿಷಯಗಳಲ್ಲಿ ಸಂತಸಪಡುವ ಮನೋಭಾವ, ನಿಷ್ಕಲ್ಮಶ ಹೃದಯದಿಂದ ಹೊರಸೂಸುವ ಮಾತಿನ ನಡುವೆ ಕುಲುಕುಲು ನಗು, ನೋಡಿದೊಡನೆ ಗೌರವಭಾವ ಮೂಡುವ ವ್ಯಕ್ತಿತ್ವ ಪಡೆದ ಅನುಪಮಾ ತಮ್ಮ ಸರಳ ಸಜ್ಜನಿಕೆಯಿಂದ ಸ್ನೇಹಿತೆಯರಿಗೆಲ್ಲಾ ಮೋಡಿ ಹಾಕುವರು.

ಇದು ಅವರ ಒಂದು ಮುಖವಾದರೆ. ಸಾಮಾಜಿಕ ಅನ್ಯಾಯದ ವಿರುದ್ಧ, ಮಹಿಳಾ ಶೋಷಣೆಯ ಬಗ್ಗೆ, ದುಡಿಯುವ ಸ್ತ್ರೀಯರ ಸಮಸ್ಯೆಗಳನ್ನು ಕುರಿತು ಖಚಿತ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ನೀಡಿ, ಅಷ್ಟೇ ಮನೋಸ್ಥೈರ್ಯದಿಂದ ಇದಿರಾದ ಸಮಸ್ಯೆಗಳ ಸವಾಲನ್ನು ಸ್ವೀಕರಿಸಿ. ವೃತ್ತಿ ಮತ್ತು ಸೃಜನಶೀಲತೆಯ ವಿಕಸನದಲ್ಲಿ ಜ್ವಲಂತ ಸತ್ಯಶೋಧನೆಯನ್ನು ನಡೆಸಿದ ಧೀರ ವನಿತೆಯಾಗಿಯೂ ಅನುಪಮಾ ಖ್ಯಾತರು.

ವೈದ್ಯಕೀಯ ವೃತ್ತಿ ಮತ್ತು ಸಾಹಿತ್ಯ ಇವುಗಳಲ್ಲಿ ಅನುಪಮಾರಿಗೆ ಸಾಹಿತ್ಯದ ಮೇಲೆ ಹೆಚ್ಚಿನ ಒಲವು. ಲೇಖಕಿಯರೆಲ್ಲಾ ಅವರ ನೆಚ್ಚಿನ ಸೋದರಿಯರು. ನನ್ನ ಕಥಾಸಂಕಲನ 'ಅಪರ್ಣಾ'ವನ್ನು ಬೆಂಗಳೂರಿನ ಗೆಳೆಯರ ಬಳಗ ಪ್ರಕಟಿಸಿದಾಗ ಅನುಪಮಾ, ಸಂಕಲನದ ಮುನ್ನುಡಿ ಬರೆದು ಪ್ರೋತ್ಸಾಹಿಸಿದರು. ಕೆಲವು ವರ್ಷಗಳ ಹಿಂದೆ ಅವರು ಮಂಗಳೂರಿಗೆ ಬಂದಾಗ ಮಹಿಳಾ ಸಭಾದಲ್ಲಿ ನಾನು ಅವರ ಭಾಷಣ ಕಾರ್ಯಕ್ರಮವನ್ನು ಏರ್ಪಡಿಸಿದ್ದೆನು. ಸಭಾದ ಸದಸ್ಯೆಯರಿಗೆ ಪ್ರಸಿದ್ಧ ಲೇಖಕಿಯನ್ನು ಕಾಣುವ. ಭಾಷಣವನ್ನು ಆಲಿಸುವ ಕುತೂಹಲ. ಆದರಿಂದ ಸಭಿಕರ ಸಂಖ್ಯೆ ಎಂದಿಗಿಂತ ಹೆಚ್ಚಿತ್ತು. ಡಾ। ಅನುಪಮಾ. ಸಾಹಿತಿ ಅನುಪಮಾ ದಕ್ಷಿಣ ಕನ್ನಡದ ಸೊಸೆ ಎಂದು ನಾನು ಅವರ ಪರಿಚಯ ಮಾಡಿಕೊಟ್ಟಿದ್ದನ್ನು ಅವರು ತುಂಬಾ ಮೆಚ್ಚಿಕೊಂಡರು. ಅನುಪಮಾರ ಭಾಷಣವಾದ ಬಳಿಕ ತೇಜಸ್ವಿನಿ ಸ್ವರಚಿತ ಆಂಗ್ಲ ಕವನಗಳನ್ನು ಓದಿ ಸಭಿಕರನ್ನು ರಂಜಿಸಿದಳು. ಸಭಾದ ಸದಸ್ಯೆಯರಿಗೆ ಆ ದಿನದ ಕಾರ್ಯಕ್ರಮ ಮರೆಯಲಾಗದಂತಹ ಅನುಭವವಾಯಿತು.

ಡಾ। ಅನುಪಮಾ ತಮ್ಮ ವೈದ್ಯಕೀಯ ವೃತ್ತಿಯೊಡನೆ ಸಾಹಿತ್ಯರಚನೆಯಲ್ಲಿ ಗಮನಾರ್ಹ, ಗಣನೀಯ ಮೆಟ್ಟಿಲನ್ನು ಒಂದೊಂದಾಗಿಯೇ ಏರುತ್ತಾ ಬಂದರು. ನೋಡಿದ, ಅನುಭವಿಸಿದ ಘಟನೆಗಳನ್ನು ರಸವತ್ತಾಗಿ ಕಾವ್ಯಮಯ ಶೈಲಿಯಲ್ಲಿ ಓದುಗರ ಮುಂದೆ ಇಡುವ ಸಿದ್ಧಿ ಅವರು ಬಹಳ ಹಿಂದೆಯೇ ಪಡೆದಿದ್ದರು. ಅವರ ಕಾದಂಬರಿಗಳು. ವೈಜ್ಞಾನಿಕ ಗ್ರಂಥಗಳು. ಮಕ್ಕಳಿಗಾಗಿ ಬರೆದ ಕತೆಗಳು. ಪ್ರವಾಸ ಕಥನಗಳು ಜನಪ್ರಿಯವಾಗಿ ಕರ್ಣಾಟಕಾದ್ಯಂತ ಮನೆಮಾತಾದವು. ಉತ್ತಮ ವಾಗ್ಮಿ, ಭಾಷಣಕಾರರು. ಸಭೆ ಸಮ್ಮೇಳನಗಳಲ್ಲಿ. ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯ ಜನ ಮನ ತಟ್ಟುವಂತೆ ಮಾಡಿದರು.

ಅನುಪಮಾರ ಹೃದ್ಯ ಗದ್ಯವು ಹಿತಕರವಾಗಿ, ಅನುಭವಗಳ ಸುರುಳಿಯನ್ನು ಎಳೆಎಳೆಯಾಗಿ ಬಿಡಿಸಿ ಓದುಗರ ಹೃದಯಕ್ಕೆ ತೀರಾ ಸಮೀಪವಾಗುತ್ತಾ ಅಲ್ಲಿಯೇ ಅಳಿಯದೆ ಉಳಿಯುವುದು. ವೈದ್ಯೆಯಾಗಿ, ಸಾಹಿತಿಯಾಗಿ, ಗೃಹಿಣಿಯಾಗಿ ಇಷ್ಟೊಂದು ಕಾರ್ಯವೈವಿಧ್ಯವನ್ನು ತೂಗಿಸಿಕೊಂಡು ಹೇಗೆ ಹೋಗುತ್ತಿರುವರು ಎಂದು ಯಾರೂ ಅಚ್ಚರಿಪಡಬೇಕು. ಅವರಲ್ಲಿ ಸುಪ್ತವಾಗಿದ್ದ ಚಿರಂತನ ಶಕ್ತಿಯೇ ಬದುಕಿನ ಮೇಲಿನ ಶ್ರದ್ಧೆ, ನಿರಂತರ ಚಟುವಟಿಕೆ, ಅಸದೃಶ ಕಾರ್ಯತತ್ಪರತೆ ಕಾರಣ ಎನ್ನಬೇಕು.

ರಾಜ್ಯಮಟ್ಟದ ಪುರಸ್ಕಾರ, ಇನ್ನಿತರ ಸನ್ಮಾನಗಳು ಅವರನ್ನು ಅರಸುತ್ತಾ ಬಂದಿವೆ. ಕಳೆದ ವರ್ಷ ಅತ್ಯಂತ ಗೌರವಪೂರ್ಣ ಎನಿಸುವ ಶಾಶ್ವತೀ ಪ್ರಶಸ್ತಿಯು "ನೆನಪು ಸಿಹಿ-ಕಹಿ" ಆತ್ಮಕಥನಕ್ಕೆ ದೊರಕಿರುವುದು ಕನ್ನಡನಾಡಿನ ಲೇಖಕಿಯರನ್ನು, ಸೋದರಿಯರನ್ನು ಸಂತೋಷಗೊಳಿಸಿದೆ. ಅಲ್ಲದೆ ಕರ್ನಾಟಕ ಅಂತಹ ಶ್ರೇಷ್ಠ ಮಟ್ಟದ ಲೇಖಕಿ ಅನುಪಮಾರನ್ನು ಪಡೆದಿದೆ ಎಂದು ಎಲ್ಲರೂ ಅಭಿಮಾನ ಪಡುವಂತಾಗಿದೆ.

ಸಮಾಜಕ್ಕೆ ವರದಾನವಾದ ಮಹಿಳೆ ೨೭

-ಸುವಾಸಿನಿ ಭಂಡಾರಿ

ಅನುಪಮಾರವರನ್ನು ನಾನು ಮೊದಲು ಕಂಡದ್ದು ಪುತ್ತೂರಿನ ಸೈಂಟ್ ಫಿಲೋಮಿನಾ ಹೈಸ್ಕೂಲಿನಲ್ಲಿ, ಪ್ರಗತಿಪಂಥ ದ್ವಿತೀಯ ಸಮ್ಮೇಳನದಲ್ಲಿ. ಬಹುಶಃ ೧೯೭೭ನೇ ಇಸವಿಯಲ್ಲಿರಬೇಕು. ಪತಿ ನಿರಂಜನ ಮತ್ತು ಮಕ್ಕಳಾದ ತೇಜಸ್ವಿನಿ, ಸೀಮಂತಿನಿಯರ ಜೊತೆ ಬಂದಿದ್ದರು. ಸುಸಂಸ್ಕೃತ ನಡವಳಿಕೆಯ, ಸಾಮಾನ್ಯ ವೇಷ ಭೂಷಣದ ಆ ಮಹಿಳೆಯನ್ನು ಕಂಡಾಗ ನನಗೆ ಆಶ್ಚರ್ಯ. ಡಾಕ್ಟರರಾಗಿ, ಸಾಹಿತಿಯಾಗಿ, ಸಾಹಿತಿಯ ಪತ್ನಿಯಾಗಿ, ಅವೆಲ್ಲವನ್ನೂ ಮೆಟ್ಟಿ ನಿಲ್ಲುವ ನಗುಮೊಗದ, ಸ್ನೇಹಪರ ಅನುಪಮಾರವರು ನಿಜಕ್ಕೂ ಅಭಿನಂದನೀಯರು. ಈಗಿನ ಥಳಕು ಬೆಳಕಿನ ಆಡಂಬರದ ಯುಗದಲ್ಲಿ ನಮ್ಮ ಭಾರತೀಯ ನಾರಿಯ ಸಂಸ್ಕೃತಿಯೇ ಮೈವೆತ್ತು ನಿಂತಂಥ ಮಹಿಳೆ ಆಕೆ. ಅಂತಹವರು ವಿರಳ. ಎಲ್ಲ ಮಹಿಳೆಯರಿಗೂ ಅಂತಹವರು ಅನುಕರಣೀಯರು.

ಅನುಪಮಾರವರು ತಮ್ಮ ಕರ್ತವ್ಯದಲ್ಲಿ ಎಲ್ಲೂ ಸೋಲು ಕಂಡಿಲ್ಲವೆಂದು ನನ್ನ ಭಾವನೆ. ತಮ್ಮ ತಾಯ್ತನವನ್ನವರು ಚೆನ್ನಾದ ರೀತಿಯಲ್ಲೇ ನಿಭಾಯಿಸಿಕೊಂಡು ಬಂದಿರಬೇಕು. ತೇಜಸ್ವಿನಿಯನ್ನೂ ಸಾಹಿತ್ಯದ ದಾರಿಯಲ್ಲೇ ಕೊಂಡೊಯ್ಯಬೇಕೆಂದಿತ್ತೆಂದು ಕಾಣುತ್ತದೆ. ಪುತ್ತೂರಿನಲ್ಲಿ ನಡೆದ ಸಮ್ಮೇಳನದಲ್ಲಿ ತೇಜಸ್ವಿನಿ ಇಂಗ್ಲೀಷ್

ಕವಿಯು (ಕವಿಯ ಹೆಸರು ನೆನಪಿಲ್ಲ) ಒಂದು ಕವಿತೆಯನ್ನು ಭಾಷಾಂತರಿಸಿ ಸಭೆಯಲ್ಲಿ ಓದಿದ್ದಳು. ಮಕ್ಕಳಲ್ಲೂ ಸಾಹಿತ್ಯದ ಅಭಿಮಾನವನ್ನು ತುಂಬಲು ಅವರು ಪ್ರಯತ್ನಿಸಿದ್ದಿರಬೇಕು. ಸಾಹಿತ್ಯ ಸಭೆಗೆ ಮಕ್ಕಳಿಬ್ಬರನ್ನೂ ಕರೆ ತಂದಿದ್ದರು. ಸಾಹಿತ್ಯದ ಬಗ್ಗೆ ಕಂಡು, ಕೇಳಿ ಅವರೂ ಆ ಬಗ್ಗೆ ಅಭಿಮಾನಪಟ್ಟುಕೊಳ್ಳಬೇಕೆಂದಿರಬೇಕು.

ನಾವು ಕೆಲವರ್ಷಗಳಿಂದ ಕಾಸರಗೋಡಲ್ಲಿದ್ದವರು ಮಂಗಳೂರಿಗೆ ಬಂದಿದ್ದೆವು. ಕನ್ನಡ ನೆಲವಾದ ಕಾಸರಗೋಡು ಕೇರಳಕ್ಕೆ ಹೋದ ನಂತರ, ಅದನ್ನು ಕನ್ನಡ ನಾಡಿಗೆ ಸೇರಿಸಲು ನನ್ನ ಯಜಮಾನರು, ಅವರ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಅದಕ್ಕೋಸ್ಕರ ಅವಿಶ್ರಾಂತ ಹೋರಾಟ ನಡೆಸಿ, ಅವರ ಆರೋಗ್ಯವೂ ಕೆಟ್ಟಿತ್ತು. ಹಾಗಾಗಿ ನಾವು ಮಂಗಳೂರಿಗೆ ವಲಸೆ ಬಂದೆವು. ಆ ವರ್ಷವೇ ಇರಬೇಕು. ಅನುಪಮಾರವರು ಪತಿ ಮತ್ತು ಮಕ್ಕಳೊಡನೆ ನಮ್ಮ ಮನೆಗೆ ಬಂದಿದ್ದರು. ನಿರಂಜನರಿಗೆ ನನ್ನ ಯಜಮಾನರಲ್ಲಿ ತುಂಬಾ ಅಭಿಮಾನ. ನನ್ನವರಿಗೆ, ಅವರು ಬರೆದ ಪುಸ್ತಕಗಳ ಒಂದೊಂದು ಪ್ರತಿಯನ್ನು ತಂದಿದ್ದರು. ಅವರು ಬರುವಾಗ ಕತ್ತಲಾಗುತಿತ್ತು. ನಾನವರಿಗೆ ಜೇನುತುಪ್ಪ ಬೆರಸಿದ ನಿಂಬೆಹಣ್ಣಿನ ಶರಬತ್ತು ಮಾಡಿ ಕೊಟ್ಟೆ. ಕುಡಿದಾಗ ಅನುಪಮಾರವರು, 'ಶರಬತ್ತಿಗೆ ಏನು ಹಾಕಿದ್ದೀರಿ' ಎಂದು ಕೇಳಿದರು. 'ಸ್ವಲ್ಪ ಜೇನುತುಪ್ಪ ಹಾಕಿದ್ದೇನೆ. ಯಾಕೆ ಏನಾಗಿದೆ'? ಎಂದು ಕೇಳಿದೆ. 'ಚೆನ್ನಾಗಿದೆ. ಅದಕ್ಕೇ ಕೇಳಿದ್ದು' ಎಂದರು. ಹಾಗೆ ಸ್ವಲ್ಪ ಹೊತ್ತು ಮಾತಾಡುತ್ತಾ ಕೂತಿದ್ದರು. ನಿರಂಜನರು ನನ್ನವರೊಡನೆ ಸ್ವಲ್ಪ ಹೊತ್ತು ಸಾಹಿತ್ಯದ ಬಗ್ಗೆ ಮಾತಾಡಿದರು. ಅಷ್ಟರಲ್ಲಿ ಸೀಮಂತಿನಿ ಹೋಗುವಾ ಎಂದು ವರಾತ ಹಚ್ಚಿದಳು. ನಂತರ ಅವರನ್ನು ಕಳುಹಿಸಿ ಕೊಟ್ಟೆವು.

ಅನಂತರ ನಾನವರನ್ನು ಕಂಡದ್ದು ಕಾಸರಗೋಡಿನಲ್ಲಿ. ಮಹಿಳೆಯರ ಕನ್ನಡ ಪರಿಷತ್ತು ನಡೆದಿತ್ತು. ಅಲ್ಲಿಗೆ ಅನುಪಮಾರೊಂದಿಗೆ ಟಿ. ಸುನಂದಮ್ಮ, ಎಚ್.ಎಸ್. ಪಾರ್ವತಿಯವರೂ ಬಂದಿದ್ದರು. ತಾರೆ ಕಲ್ಪನಾರವರನ್ನೂ ಆಮಂತ್ರಿಸಲಾಗಿತ್ತು. ಹಾಗಾಗಿ ಅವರೂ ಬಂದಿದ್ದರು. ಅವರೂ ಆ ಸಭೆಯಲ್ಲಿ ಮಾತಾಡಿದ್ದರು. ಅವರಿಗೆಲ್ಲಾ ಅಲ್ಲಿನ ತೆಂಗಿನ ಫಾರ್ಮಿನಲ್ಲಿದ್ದ ರೆಸ್ಟ್ ಹೌಸ್‌ನಲ್ಲಿ ಇಳಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಅವರ ಅನುಕೂಲತೆಗಳನ್ನು ನೋಡಿಕೊಳ್ಳಲು ನಾನಾಗಿ. ಯು. ಪಿ. ಕುಣಿಕುಳ್ಳಾಯರ ಪತ್ನಿ ಲಕ್ಷ್ಮೀದೇವಿ, ವಕೀಲರಾದ ಶ್ಯಾನುಭೋಗರ ಪತ್ನಿ ಹಾಗೂ ಇನ್ನು ಕೆಲ ಮಹಿಳೆಯರೊಂದಿಗೆ ಹೋಗಿದ್ದೆ. ಅಲ್ಲಿ ಎಚ್. ಎಸ್. ಪಾರ್ವತಿ, ಟಿ. ಸುನಂದಮ್ಮನವರನ್ನು ನಮ್ಮಲ್ಲೊಬ್ಬರು ಪರಿಚಯ ಮಾಡಿ ಕೊಡುತ್ತಿದ್ದರು. ಅನುಪಮಾರು ಹಿಂದೆ ನಿಂತಿದ್ದರು. ನಾನವರನ್ನು ನೋಡಲಿಲ್ಲ. ಪರಿಚಯಿಸುವಾಗ ಪಕ್ಕನೆ ಹಿಂದೆ ನೋಡಿದೆ. ನನಗೆ ಆಶ್ಚರ್ಯವಾಗಿ-'ಅರೇ ನೀವು'?

ಎಂದೆ. "ನೀವು ನನ್ನನ್ನು ಗಮನಿಸಲೇ ಇಲ್ಲ" ಎಂದು ನಕ್ಕರು. ಯಾವ ಸ್ವಪ್ರತಿಷ್ಠೆಯೂ ಇಲ್ಲದ ನಿರ್ಮಲ ನಗು. ನಾನೆಂದೆ "ನೀವಂತೂ ಗಮನಿಸಲೇ ಬೇಕಾದವರು. ಅಲ್ಲದೆ ನೀವು ನಮ್ಮ ಅತಿಥಿಗಳು". ಸಮಾರಂಭದುದ್ದಕ್ಕೂ ಸರಳತೆಯಿಂದ ಅವರು ನಡೆದು ಕೊಂಡದ್ದು ಎಲ್ಲರಿಗೂ ಮೆಚ್ಚಿಕೆಯಾಗಿತ್ತು. ಸುನಂದಮ್ಮ, ಪಾರ್ವತಿಯವರೂ ಹಾಗೇ ನಡೆದುಕೊಂಡಿದ್ದರು.

ಅನುಪಮಾರವರ ನಿಗರ್ವ. ಎಲ್ಲರಲ್ಲೂ ಹೊಂದಿಕೊಂಡು ಹೋಗುವ ಅವರ ಸ್ವಭಾವವೇ ಅವರನ್ನು ಜನಪ್ರಿಯಗೊಳಿಸಿದ್ದಿರಬೇಕೆಂದು ನನ್ನ ಭಾವನೆ. ಅವರು ಡಾಕ್ಟರ್. ಸಾಹಿತಿಯಾಗಿದ್ದರೂ, ಅದಕ್ಕಿಂತ ಅವರ ಸರಳತೆಯೇ ದೊಡ್ಡ ಆಸ್ತಿ. ಅವರ ಲೇಖನಗಳನ್ನು ಎಲ್ಲಿ ಕಂಡರೂ ಓದುವ ಆಸಕ್ತಿ ನನಗೆ. 'ಸುಧಾ'ದಲ್ಲಿ ಗರ್ಭಿಣಿಯರ ಬಗ್ಗೆ ಲೇಖನಗಳು ಬರುತ್ತಿದ್ದುವು. ಎಲ್ಲಾ ಸ್ತ್ರೀಯರಿಗೂ ಆ ಬಗ್ಗೆ ಸಾಮಾನ್ಯ ಜ್ಞಾನ ಇರುವುದು ಒಳ್ಳೆದೆಂದು ಡಾಕ್ಟರರಾದ ಅವರಿಗಿದ್ದಿರಬೇಕು. ಹಾಗೇ ಪತಿಯ ಅನಾರೋಗ್ಯ, ತಮ್ಮ ಅನಾರೋಗ್ಯವನ್ನೂ ಗಮನಿಸದೆ ಜನಹಿತಕ್ಕಾಗಿ ತಮ್ಮಿಂದಾದದ್ದನ್ನು ಮಾಡುತ್ತಲೇ ಇರುವುದು, ತಮ್ಮ ಜೀವನದಲ್ಲಿ ಆ ಬಗ್ಗೆ ಸಾರ್ಥಕತೆಯನ್ನು ಸಾಧಿಸುತ್ತಿರುವುದು ಜೀವನವನ್ನವರು ಚೆನ್ನಾಗಿ ತಿಳಿದುಕೊಂಡ ಬಗೆಯನ್ನು ತೋರಿಸುತ್ತದೆ.

ಅನುಪಮಾರವರನ್ನು ನಾನು ಕಾಣದೆ ಈಗ ತುಂಬಾ ವರ್ಷಗಳಾದುವು. ಆದರೂ ಆಗಾಗ ಅವರ ನೆನಪಾಗುತ್ತಿರುತ್ತದೆ. ಜೀವನದ ಕಹಿ ನೋವುಗಳನ್ನುಂಡ ಜೀವ ನನ್ನದು ಕೂಡ. ಹಾಗಾಗಿ ಅಂತಹ ನೋವು ಇನ್ನೊಬ್ಬ ಹೆಣ್ಣಿಗೆ ಬರಬಾರದು ಎಂದು ನನ್ನಿಚ್ಛೆ. ಅನುಪಮಾರವರಿಗೆ ಅವರ ಪತಿಯು ಆಧಾರ ಕಡೆಯವರೆಗಿದ್ದು, ಸಾಹಿತ್ಯಸೇವೆಯ ಮೂಲಕ, ವೈದ್ಯಕೀಯದ ಮೂಲಕ ಜನರ ಸೇವೆ ಅವರಿಂದ ಇನ್ನಷ್ಟು ವರ್ಷಕಾಲ ಸಾಗುತ್ತಿರಲಿ ಎಂದು ಅಂತರ್ಯಾಮಿಯಲ್ಲಿ ನನ್ನ ಅನನ್ಯ ಬೇಡಿಕೆ.

೨೮ ನೇರ ನುಡಿ–ನೇರ ನಡೆ

-ಎ. ಪಿ. ಮಾಲತಿ

ಪ್ರಥಮ ಭೇಟಿಯಾದದ್ದು ೧೯೭೭ ಸೆಪ್ಟೆಂಬರ್‌ನಲ್ಲಿ ನಡೆದ ಕಾಸರಗೋಡು ಸಮ್ಮೇಳನದಲ್ಲಿ. ತಮ್ಮ ಕಥೆ ಕಾದಂಬರಿ, ವೈದ್ಯಕೀಯ ಲೇಖನಗಳಿಂದ ಸಾಹಿತ್ಯ ಲೋಕಕ್ಕೆ ಪರಿಚಿತರಾಗಿದ್ದ ಡಾ। ಅನುಪಮಾ ನಿರಂಜನರ ಹಿರಿದಾದ ವ್ಯಕ್ತಿತ್ವದೆದುರು ನಾನಾಗ ಸಾಹಿತ್ಯದಲ್ಲಿ ಕಣ್ಣು ಬಿಡುತ್ತಿದ್ದ ಶಿಶು. ಅಂದಿನ ಸಮ್ಮೇಳನದಲ್ಲಿ ಅವರು ಅಧ್ಯಕ್ಷೆ, ನನಗೆ ಪ್ರದರ್ಶನದ ಉದ್ಘಾಟನೆ. ಹೇಗಪ್ಪ ಇವರನ್ನು ಮಾತನಾಡಿಸಲಿ? ಎಂದು ಅಳುಕುತ್ತಿದ್ದಾಗಲೆ ಅವರು ತಾನಾಗಿಯೇ ನನ್ನ ಪರಿಚಯ ಮಾಡಿಕೊಂಡು ತಮ್ಮ ಸ್ನೇಹ ಹಸ್ತ ಚಾಚಿದ್ದರು. ಆ ದಿನ ನಾನು ಗಮನಿಸಿದ್ದು ಯಾರಿಗೂ ಮೆಚ್ಚಿಗೆಯಾಗುವ ಅವರ ವ್ಯಕ್ತಿತ್ವ. ಅವರ ಕಣ್ಗಳಲ್ಲಿ ತೀಕ್ಷ್ಣ ಹೊಳಪು, ತುಟಿಯಂಚಿನಲ್ಲಿ ಎದುರಾಳಿಯನ್ನೂ ಮೋಡಿ ಮಾಡಬಲ್ಲ ನಗು ಮಿಂಚು, ನಲ್ಮೆಯಿಂದ ಇನ್ನೊಬ್ಬರ ಅಂತರಂಗ ಬಗೆಯುವ ಬಯಕೆ ಇವು ನನಗಿಷ್ಟವಾದುವು. ನಾನು ಬಯಸಿದ್ದರೆ ಅಂದೇ ನಮ್ಮ ಸ್ನೇಹಕ್ಕೆ ನಾಂದಿ ಹಾಡಬಹುದಿತ್ತು. ಹಾಗಾಗಲಿಲ್ಲ. ನಮ್ಮೀರ್ವರಲ್ಲಿ ಸ್ನೇಹ, ಪತ್ರವ್ಯವಹಾರ ಕುದುರಲು ಮುಂದೆ ಆರು ವರ್ಷಗಳು ಬೇಕಾದುವು. ಈ ನಡುವೆ ನಡೆದ ಮೂರು ಲೇಖಕಿಯರ ಸಮ್ಮೇಳನಗಳಲ್ಲಿ ನಾವಿಬ್ಬರೂ ಪರಸ್ಪರ ನಗು ವಿನಿಮಯ ಮಾಡಿಕೊಂಡೆವು ಅಷ್ಟೇ.

೧೯೮೩ರಲ್ಲಿ ನನ್ನ ಪುಸ್ತಕವೊಂದಕ್ಕೆ ಲಭಿಸಿದ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸ್ವೀಕರಿಸಲು ಬೆಂಗಳೂರಿಗೆ ಹೋದಾಗ ಆಕಸ್ಮಾತ್ ಅನುಪಮಾ ನಿರಂಜನ ಮನೆಯ ಹೊಸ್ತಿಲು ತುಳಿಯಬೇಕಾಯಿತು. ಅಂದು ಜಯನಗರದಲ್ಲಿದ್ದ ನಮ್ಮ ಬಂಧುಗಳ ಮನೆ ಹುಡುಕುತ್ತ ಅಲೆದು, ಅದು ಸಿಗದೆ ನಿರಾಶರಾಗಿ ನಾನೂ ನನ್ನ ಪತಿಯೂ ದಾರಿಬದಿಯಲ್ಲೇ ನಿಂತ ಹೊತ್ತಿನಲ್ಲಿ ಎದುರು ಮನೆಯೊಂದರ ಗೇಟಿನ ಮೇಲೆ ಕಾಣಿಸಿತು ಒಂದು ಫಲಕ, "ಕಥೆ" ಅರೆ! ಇದು ಸಾಹಿತಿ ನಿರಂಜನರ ಮನೆಯಲ್ಲವೇ? ನಾವಿಬ್ಬರೂ ಸಂದಿಗ್ಧಕ್ಕೆ ಒಳಗಾಗಿ ಗೇಟಿನ ಬಳಿ ನಡೆದು ಅದರ ಹಿಡಿ ಹಿಡಿದು ಮೀನ ಮೇಷ ಎಣಿಸುತ್ತಿದ್ದಾಗ ಮನೆಯ ಒಳಗಿನಿಂದ ಅನುಪಮಾ ಓಡಿಯೋಡಿ ಬರುವುದು ಕಾಣಿಸಿತು. ನಮಗೋ ಆಶ್ಚರ್ಯ. ಅನುಪಮಾ ಹೀಗೆ ನಮ್ಮನ್ನು ಎದುರುಗೊಳ್ಳುವ ನಿರೀಕ್ಷೆ ನಮಗೇ ಇದ್ದಿರಲಿಲ್ಲ. ಅವರ ಮುಖದಲ್ಲಿದ್ದ ಅಚ್ಚರಿ, ಅನಿರೀಕ್ಷಿತ ಸಂತೋಷ, ಆ ಉತ್ಸಾಹ ಇಂದಿಗೂ ನಾನು ಮರೆತಿಲ್ಲ. ಗೇಟಿನ ಬಳಿ ಬಂದು "ಮಾಲತಿ ಅಲ್ಲವೇ? ಯಾಕೆ ಸಂಕೋಚದಲ್ಲಿ ನಿಂತಿದ್ದೀರಿ? ಬನ್ನಿ ಒಳಗೆ" ಎನ್ನುತ್ತ ಅಲ್ಲೇ ಕಾವಲು ಕಾಯುತ್ತಿದ್ದ ತಮ್ಮ ಬಿಳಿನಾಯಿಯನ್ನು ಕೆಲಸದವನ ವಶಕ್ಕೊಪ್ಪಿಸಿ ಸ್ನೇಹದಿಂದ ಬರಮಾಡಿಕೊಂಡರು. ಎಂತಹ ವಿಧಿಯೋಗವಿದು! ಬಂಧುಗಳ ಮನೆ

ಸಿಗದಿದ್ದರೂ ಈ ಸಾಹಿತಿ ಬಂಧುವಿನಿಂದ ದೊರೆಯಿತು ಆತ್ಮೀಯ ಉಪಚಾರ. ಆ ಸಂಜೆ ಹೊರಗಿನ ಹಿತವಾದ ಸೋನೆ ಮಳೆ ನೋಡುತ್ತ ನಾವಿಬ್ಬರೂ ವಿಚಾರ ಸಾಹಿತ್ಯ, ಮಹಿಳಾ ಸಾಹಿತ್ಯ, ಕಾದಂಬರಿ ಎನ್ನುತ್ತ ಎಷ್ಟು ಹೊತ್ತು ಹರಟಿದೆವೋ. ಅನುಪಮಾ ಕೇವಲ ಲೇಖಕಿಯಲ್ಲ. ಉತ್ತಮ ಸಲಹಾಗಾರ್ತಿ ಎಂದೂ ತಿಳಿದದ್ದು ಆಗಲೇ. ನನ್ನ ಯಾವ ಪುಸ್ತಕಕ್ಕೆ ಪ್ರಶಸ್ತಿ ಬಂದಿತೆಂದು ಕೇಳಿ ಅದನ್ನು ಪಡೆದುಕೊಂಡು ತಮ್ಮದೊಂದು ಕೃತಿ ನನಗಿತ್ತು "ವಿಮರ್ಶೆ ಬರೆಯುತ್ತೇನೆ" ಎಂದರು. ನಮ್ಮ ಮಾತಿನ ಮಧ್ಯೆ ನಿರಂಜನರೂ ಬಂದು ಸೇರಿದಾಗ ಮಾತು ಇನ್ನಷ್ಟು ಕಳೆಯೇರಿತು. ಅನುಪಮಾ ಅವರಿಗೆ ಯೋಗ್ಯ ಸಂಗಾತಿ ನಿರಂಜನರು. ಈ ಸಾಹಿತ್ಯ ದಂಪತಿಗಳೊಡನೆ ಕಳೆದ ಆ ಸಂಜೆ ನಮ್ಮ ಮನದಂಗಳದಲ್ಲಿ ಸದಾ ಹಸಿರು ನೆನಪು.

ಅಲ್ಲಿಂದ ಮುಂದೆ ಈ ಐದು ವರ್ಷಗಳಲ್ಲಿ ನನ್ನ ಮತ್ತು ಅನುಪಮಾ ಮಧ್ಯೆ ಪತ್ರವ್ಯವಹಾರ. ಸ್ನೇಹ ಗಟ್ಟಿಯಾಗುತ್ತ ಬಂದಿದೆ. ನಮಗನ್ನಿಸಿದ್ದನ್ನು ಪತ್ರದಲ್ಲಿ ಹೇಳಿಕೊಳ್ಳುತ್ತ ನಾವಿಬ್ಬರೂ ಇನ್ನಷ್ಟು ಹತ್ತಿರವಾಗಿದ್ದೇವೆಂದು ನನ್ನ ಅನಿಸಿಕೆ. ಅವರ ಸಾಹಿತ್ಯಾಭಿರುಚಿ, ಆಸಕ್ತಿ, ಉತ್ಸಾಹ ಕಂಡು ಬೆರಗಾಗಿದ್ದೇನೆ.

ಅನುಪಮಾ ಸ್ನೇಹಜೀವಿ. ಅನುಭವಿಸಿದವರಿಗೆ ಗೊತ್ತು ಅವರ ಸ್ನೇಹದ ಸಿಹಿ. ಅವರಿಗೆ ಸ್ನೇಹಿತೆಯರ ಬಳಗವೂ ಜಾಸ್ತಿ. ಅವರ 'ನೆನಪು ಸಿಹಿ-ಕಹಿ' ಪುಸ್ತಕದಲ್ಲಿ ಇಂದಿನ ಎಲ್ಲ ಹಿರಿ-ಕಿರಿಯರ ಲೇಖಕಿಯರ ಹೆಸರು ಬಂದದ್ದು ಇದಕ್ಕೆ ಸಾಕ್ಷಿ. ಪರಿಚಯ ಒಂದೇ ಅಲ್ಲ. ಅವರ ಮಾತಿನ ಮೋಡಿ, ಪತ್ರಗಳು ಎಲ್ಲ ಲೇಖಕಿಯರನ್ನು ಅವರತ್ತ ಸೆಳೆಯುತ್ತವೆ. ತಮ್ಮ ಶಾರೀರಿಕ ಕಾಯಿಲೆ, ಪತಿಯ ಅನಾರೋಗ್ಯ, ಕೌಟುಂಬಿಕ ಕಷ್ಟಗಳನ್ನೆಲ್ಲ ನುಂಗಿ ಇನ್ನೊಬ್ಬರ ಬಗ್ಗೆ ಕೇಳುವ ವಿಶಾಲ ಹೃದಯವಂತಿಕೆ. ಅವರ ನಿಕಟವರ್ತಿಗಳೊಬ್ಬರ ಮಾತಿನಲ್ಲಿ ಹೇಳುವುದಾದರೆ, "ಅನುಪಮಾ ಬಳಿ ಮಾತನಾಡುತ್ತ ನಾವು ಅವರಿಗೆ ಕಹಿ ತಿನ್ನಿಸಿ ಅವರಿಂದ ಸಿಹಿ ಪಡೆದು ಬರುತ್ತೇವೆ". ನಿಜ, ನೋವು ತುಂಬಿದ ಹೃದಯಗಳಿಗೆಲ್ಲ ಅವರೊಂದು ಹೊರೆಗಲ್ಲು! ವ್ಯಕ್ತಿಯಾಗಿ ಈ ಸಿದ್ಧಿ ಸಾಧಿಸಿದ್ದಲ್ಲ. ಸಾಹಿತಿಯಾಗಿ ಜನಮನ ಅರಿತು ನಡೆಯುವುದೇ ಬಹು ದೊಡ್ಡ ಸಾಧನೆ.

ಹೀಗಿದ್ದರೂ ಕೆಲವೊಮ್ಮೆ ನಿಟ್ಟುಸಿರು ಹೊರಹೊಮ್ಮುತ್ತದೆ. "ನೋವು ತಿನ್ನುವುದೊಂದೇ ನನ್ನ ಬದುಕಾಗಿ ಹೋಯಿತೇ? (ಇದು ಅವರ ಕಾಯಿಲೆ ನುಡಿಸುವ ಮಾತು) ತೂಗಾಡುತ್ತಿರುವ ಕತ್ತಿಯ ಕೆಳಗೆ ಬದುಕುತ್ತಿರುವ ಪರಿಸ್ಥಿತಿ ನನ್ನದಾಗಿದೆ. ಆದರೂ ಬರವಣಿಗೆಯಲ್ಲಿ ಬದುಕಿಗೊಂದು ಅರ್ಥ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ, ಬರವಣಿಗೆ ನಿಂತಾಗ ನನ್ನ ಬದುಕು ಮುಗಿದಂತೆ."

ಬರವಣಿಗೆಯೇ ಬದುಕು. ಬದುಕೇ ಬರವಣಿಗೆ ಅವರ ಪಾಲಿಗೆ. ಇದರಿಂದಲೇ ಅವರು ಪಾದರಸದಂತೆ ಚುರುಕು. ಯಾವಾಗಲೂ ಉತ್ಸಾಹಿ. ಲೇಖನಿಗೆ ಬಿಡುವಿಲ್ಲದಷ್ಟು ಕೆಲಸ. ಓದುಗರಿಗೆ ಹೊಸತನ್ನು ಕೊಡುವ ಪ್ರಯತ್ನ. "ನನ್ನ ಹಿಂದಿನ ಕೃತಿಗಳಿಗಿಂತ ಭಿನ್ನವಾದದ್ದು. ಚೆನ್ನಾದದ್ದು ಬರೆಯಬೇಕು. ಇಲ್ಲವಾದರೆ ಬರೆದೂ ಪ್ರಯೋಜನವಿಲ್ಲ" ಎಂದವರ ಕೊರಗು. ತಮ್ಮ ಕೃತಿಗಳ ಲೋಪ-ದೋಷಗಳನ್ನು ಅರಿತು ತಾವೇ ವಿಮರ್ಶಿಸುತ್ತ ಸಾಗಿದ ಕಾರಣದಿಂದಲೇ ಇಂದು ಅನುಪಮಾ ಸಾಹಿತ್ಯಲೋಕಕ್ಕೆ ಹಲವಾರು ಉತ್ತಮ ಕೃತಿಗಳನ್ನು ಕೊಡಲು ಸಾಧ್ಯವಾಯಿತು. ಸಹಜವಾಗಿ ಪುರಸ್ಕಾರಗಳೂ ಲಭ್ಯವಾದವು.

ಬೇರೆಯವರ ಕೃತಿಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸುವುದು ಅವರ ಜಾಯಮಾನ. ಯಾರ ಕೃತಿಯೇ ಇರಲಿ ಅವರ ಕೈಗೆ ಬಂದಾಕ್ಷಣ ಮಗುವಿನಂತೆ ಎತ್ತಿಟ್ಟು ಪ್ರೀತಿಯಿಂದ ಮೈಸವರಿ ಸಂತೋಷಿಸುತ್ತಾರೆ. ತಿಂಗಳು ಕಳೆಯಲಿಕ್ಕಿಲ್ಲ. ಅವರಿಂದ ಆ ಕೃತಿಯ ವಿಮರ್ಶೆ ಬರುತ್ತದೆ ಬರೆದವರಿಗೆ. ಕೇವಲ ಹೊಗಳಿಕೆ ಒಂದೇ ಅಲ್ಲ, ಅಲ್ಲಲ್ಲಿ ಟೀಕೆಗಳು, ಎಲ್ಲಿ ತಿದ್ದಿಕೊಳ್ಳಬೇಕೆಂಬ ಪ್ರಾಮಾಣಿಕ ಸಲಹೆಗಳು. 'ವಸ್ತುನಿಷ್ಠ ವಿಮರ್ಶೆ ಇದ್ದಾಗಲೆ ಲೇಖಕಿ ಇನ್ನೂ ಎತ್ತರಕ್ಕೇರಲು ಸಾಧ್ಯ' ಎಂದವರ ಅಭಿಪ್ರಾಯ. ಬೇರೆಯವರೂ ತಮ್ಮ ಕೃತಿಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಬೇಕೆಂದು ಅವರ ಆಸೆ. ಕಳೆದ ವರ್ಷ ಗುಲ್ಬರ್ಗಾದಲ್ಲಿ ಅವರ ಸಮಗ್ರ ಕೃತಿಗಳ ಮೇಲೆ ಒಂದು ವಿಚಾರ ಸಂಕಿರಣ ನಡೆದಿತ್ತು. ಆಗ ತಮ್ಮ ಕೃತಿಗಳ ವಸ್ತುನಿಷ್ಠ ವಿಮರ್ಶೆ ಹೇಗೆ ನಡೆಯಿತೆಂದು ಅವರು ಹೆಮ್ಮೆಯಿಂದ ನನಗೆ ಪತ್ರ ಬರೆದಿದ್ದರು.

ಅವರ ಸಾಹಿತ್ಯಾಭಿರುಚಿ ಬರವಣಿಗೆಗೆ ಮಾತ್ರ ಮೀಸಲಾಗಿಲ್ಲ. ಅಧ್ಯಯನವೂ ಬಹು ಮುಖ್ಯವಾದದ್ದು. ಅವರ ಹೊರ ಕೋಣೆಯ ಗ್ರಂಥ ಭಂಡಾರವನ್ನೊಮ್ಮೆ ನೋಡಿದರೆ ಅರ್ಥವಾದೀತು. ಬಿಡುವಿನ ವೇಳೆಯನ್ನು ಅಧ್ಯಯನದಲ್ಲಿ ಕಳೆಯುವ ಅವರಿಗೆ ಪ್ರವಾಸ-ತಿರುಗಾಟವೂ ಇಷ್ಟವಂತೆ. ಭಾರತ ಒಂದೇ ಅಲ್ಲ, ಹೊರದೇಶಗಳನ್ನು ಸುತ್ತಿ ಬಂದ ಅವರ ಜ್ಞಾನದಾಹ ಇನ್ನೂ ಹಿಂಗಿಲ್ಲ. ಇನ್ನೂ ಇನ್ನೂ ಅನುಭವಗಳನ್ನು ಪಡೆಯುವಾಸೆ. "ಅನುಭವ ಪಕ್ವವಾದಷ್ಟು ಲೇಖಕಿಯ ಕೃತಿಗಳು ಗಟ್ಟಿಯಾಗುತ್ತವೆ. ಮಾಲತಿ, ಚೆನ್ನಾಗಿ ಅಧ್ಯಯನ ಮಾಡಿ. ವರ್ಜೀನಿಯಾ ವೂಲ್ಫಳ ಕೃತಿ ನಮಗೆ ಹೊಸ ದೃಷ್ಟಿ ಕೊಡುತ್ತದೆ. ಓದಿ ನೋಡಿ" ಎಂದು ತಾವು ಓದಿದ ಯಾವುದೇ ಉತ್ತಮ ಕೃತಿಯ ಬಗ್ಗೆ ನನಗೂ ಬರೆಯುತ್ತಾ ಇರುತ್ತಾರೆ.

ಮಹಿಳಾ ಸಮುದಾಯದ ಮೇಲೆ ಈ ಲೇಖಕಿಗಿರುವ ಕಾಳಜಿ, ಕಳಕಳಿ ಅಪಾರ. ಮಹಿಳೆಯರಲ್ಲಿ ಹೊಸ ವೈಚಾರಿಕ ದೃಷ್ಟಿ ಬೆಳೆಯಬೇಕು, ಬೆಳೆಸಬೇಕು ಎನ್ನುವ ಕೆಲವೇ ಪ್ರಜ್ಞಾವಂತರಲ್ಲಿ ಇವರೂ ಒಬ್ಬರು. ನಮ್ಮ ನೂರೆಂಟು ಸಮಸ್ಯೆಗಳಿಗೆ,

ದುಃಖಗಳಿಗೆ ಮೂಲಕಾರಣ ನಮ್ಮ ಅಜ್ಞಾನ, ಅಂಧಶ್ರದ್ಧೆ, ಮೂಢನಂಬಿಕೆ ಎನ್ನುವ ಅವರು ಪ್ರತಿ ಮಹಿಳಾ ಸಮ್ಮೇಳನದಲ್ಲಿ ಅವುಗಳ ವಿರುದ್ಧ ಧ್ವನಿ ಎತ್ತುವವರು. ಮೂಢನಂಬಿಕೆ ಕುರಿತು ಅವರಾಡುವ ಮಾತುಗಳು ತೀಕ್ಷ್ಣವಾಗಿದ್ದರೆ, ನಮ್ಮ ರೂಢ ಮೂಲ ಸಂಪ್ರದಾಯಗಳ ಬಗ್ಗೆ ಹೇಳುವಾಗ ಕೆರಳಿದ್ದೂ ಉಂಟು. ಎಷ್ಟೋ ಬಾರಿ ಶ್ರೋತೃಗಳ ಆಕ್ರೋಶಕ್ಕೆ ತುತ್ತಾಗಿದ್ದಾರೆ. ಅವರ ನಿಲುವನ್ನು ನೇರವಾಗಿ ಅನೇಕರು ಎದುರಿಗೇ ಖಂಡಿಸಿದ್ದಾರೆ. ಉದಾ: ಕರಿಮಣಿ ತಾಳಿ ಹೆಣ್ಣಿಗೆ ಅಗತ್ಯವೇ? ಅದು ದಾಸ್ಯದ ಚಿಹ್ನೆ. ಗಂಡನ ಹೆಸರನ್ನು ಮಹಿಳೆ ತನ್ನ ಹೆಸರಿನೊಂದಿಗೆ ಸೇರಿಸಿಕೊಳ್ಳಬೇಕೇ? ಅದು ಹೆಣ್ಣನ್ನು ಶೋಷಿಸುವ ವಿಧಿ ಇತ್ಯಾದಿ. ಗಂಡನ ಹೆಸರನ್ನು ಸೇರಿಸಿಕೊಳ್ಳುವ ವಿಷಯದಲ್ಲಿ ಪತ್ರಿಕೆಯೊಂದರಲ್ಲಿ ವಾದವಿವಾದ ನಡೆದದ್ದನ್ನು ಇಲ್ಲಿ ಸ್ಮರಿಸಬಹುದು.

ಹೀಗಿದ್ದ ಅನುಪಮಾ ತಮ್ಮ ಹೆಸರಿನ ಹಿಂದೆ ನಿರಂಜನರನ್ನು ಸೇರಿಸಿಕೊಳ್ಳುತ್ತಾರೆ. ಕೇಳಿದರೆ "ನಮ್ಮ ಕಾಲದಲ್ಲಿ ಗಂಡನ ಹೆಸರನ್ನು ಸೇರಿಸಿಕೊಂಡಾಯ್ತು. ಇನ್ನು ತೆಗೆಯುವ ಹಾಗಿಲ್ಲ" ಎನ್ನುತ್ತಾರೆ ನಗುತ್ತ. ಈ ನಗುವಿನ ಹಿಂದೆ ಮಹಿಳೆಯರ ಬಗ್ಗೆ ಅಪಾರ ಅನುಕಂಪವಿದೆ; ಅವರು ಚೆನ್ನಾದ ಹಾದಿಯಲ್ಲಿ ತಮ್ಮ ಬದುಕನ್ನು ಸಾಗಿಸಬೇಕೆಂಬ ಪ್ರಾಮಾಣಿಕ ಕಳಕಳಿ ಇದೆ. ನಿರ್ಭಿಡೆಯಿಂದ ತಮಗೆ ತೋಚಿದ್ದನ್ನು ನೇರವಾಗಿ ಆಡುವ, ಲೇಖನಿಗೆ ಮೂಡಿಸುವ ಒಳಗೊಂದು ಹೊರಗೊಂದು ಇಲ್ಲದ ಈ ಅನುಪಮಾ ನಿಜಕ್ಕೂ ಅನುಪಮ.

ಆತ್ಮೀಯ ಸಹೃದಯಿ ೨೯

- ಗಾಯತ್ರೀ ಅಮ್ಮೆಂಬಳ

ಆ ದಿನ ಬೆಳಗ್ಗೆಯಿಂದಲೇ ನನ್ನಲ್ಲಿ ವಿಚಿತ್ರ ಅನುಭವ. ಸಂಭ್ರಮ ಅನ್ನಲೆ? ಅಳುಕು ಅನ್ನಲೆ? ಭಯ ಅನ್ನಲೆ?! ಎಲ್ಲ ಜಾಚಾ ಆದ ಭಾವಾನುಭವಗಳ ಸಮ್ಮಿಲನ ಎಂದು ಕರೆಯಲಿ? ಏಕೆನ್ನುತ್ತೀರಾ....?

ಅದು ೧೯೭೫, ಫೆಬ್ರವರಿ ಮೊದಲ ಭಾಗ. ನಿರಂಜನ ಕುಟುಂಬ ದಕ್ಷಿಣ ಕನ್ನಡದ ಭೇಟಿಯಲ್ಲಿದ್ದರು. ನಮ್ಮ ಮದುವೆಯಾದ ಹೊಸತಿನ ದಿನಗಳವು. ನಮ್ಮ ಹೊಸ ಜೋಡಿಯನ್ನು ಮೋತಿಮಹಲ್‌ನಲ್ಲಿ ಡಿನ್ನರಿಗೆ ಆಹ್ವಾನಿಸಿದ್ದರು ನಿರಂಜನ ದಂಪತಿಗಳು. ದಿನದ ಎಣಿಕೆಯಲ್ಲಿ ಒಂದೊಂದನ್ನು ಕಳಚಿಕೊಂಡ ಆ ಸುದಿನ ಆದಾಗ ಎದುರು ನಿಂತಿತ್ತು.

ನನಗೆ ಮೊದಲಿನಿಂದಲೂ ಅನುಪಮಾ (ಲೇಖಕಿಯಾಗಿ) ಅಚ್ಚುಮೆಚ್ಚು. ನನ್ನ ಕಾಲೇಜು ದಿನಗಳ ಓದಿನಲ್ಲಿ ಅನುಪಮಾರ ಬರವಣಿಗೆಗೆ ಮೊದಲ ಆದ್ಯತೆ ಸಲ್ಲುತ್ತಿತ್ತು. (ಇಂದೂ ಅದೇ ಪಟ್ಟ) ಹೀಗಾಗಿ ಅವರ ಬಹುಮಟ್ಟಿನ ಎಲ್ಲ ಕತೆ. ಕಾದಂಬರಿಗಳನ್ನು ಓದುವ ಚಟ ನನ್ನದಾಯಿತು. ಆ ವಯಸ್ಸಿಗೆ ಸಹಜವಾದ ಭಾವುಕತೆಯೂ ನನ್ನಲ್ಲಿತ್ತು. ಅನುಪಮಾರ ಕತೆ, ಕಾದಂಬರಿಗಳನ್ನು ಓದಿದಾಗೆಲ್ಲ ನನ್ನ ಮನಸ್ಸು ಅನುಪಮಾರನ್ನು ಒಮ್ಮೆ ನೋಡಬೇಕೆಂಬ ಕನಸು ಕಾಣುತ್ತಿತ್ತು. ಹೀಗೆ ಮನದ ಕಲ್ಪನೆಯ ಕುಸುರಿ ಹೆಣಿಕೆಯಲ್ಲಿ ಜನ್ಮತಾಳಿದ ಅನುಪಮಾ ಬಹಳ ಗಂಭೀರೆ, ಮಿತಭಾಷಿ, ವೈದ್ಯೆಯ ಗತ್ತುಗಾರಿಕೆ ಮೈಹೊತ್ತ ಸ್ಫುರದ್ರೂಪಿ. ಯಾರನ್ನು ಒಮ್ಮೆ ಕಾಣಬೇಕು ಎಂದು ಅನಂತಕಾಲ ತಪಿಸಿದ್ದೆನೊ ಈಗ ಅವರ ಆತಿಥ್ಯ ಸ್ವೀಕರಿಸುವ ಭಾಗ್ಯ ನನ್ನದಾದುದು ನನಗಂತೂ ತೀರಾ ಆಕಸ್ಮಿಕ. ಕನ್ನಡದ ಹಿರಿಯ ಸಾಹಿತಿ ದಂಪತಿಗಳ ಆಹ್ವಾನದಿಂದ ನಾನು ಉಬ್ಬಿಹೋಗಿದ್ದೆ. ಹೊಸೆದ ಚಿತ್ರ ಮತ್ತೆಮತ್ತೆ ಸ್ಫುಟವಾಗುತ್ತಿತ್ತು.

ಆದರೆ ನಾನಲ್ಲಿ ಕಂಡದ್ದೇನು? ಸ್ಫುರದ್ರೂಪಿಯಲ್ಲದಿದ್ದರೂ ಲಕ್ಷಣವಾದ ಮುಖಭಾವ, ತೀರಾ ಸರಳ ಹಾಗೂ ಆತ್ಮೀಯ ಸಹೃದಯ. ನಿಜ ಹೇಳಬೇಕೆಂದರೆ ಸೋದರಿಯ ಸೆಳೆಮಿಂಚು ನನ್ನೆದೆಯಲ್ಲಿ ಮಿಂಚಿತು. ಆ ಬೆಳಗ್ಗೆ ೧೧ರಿಂದ ಸಂಜೆ ೫ರ ತನಕ ಏನಾಡಿದೆವು? ಏನೆಲ್ಲ ಬಂತು? ನೆನಪಿಗೆ ಬರುತ್ತಿಲ್ಲ. "ನೀವಿನ್ನೂ ಚಿಕ್ಕವರು. ಬದುಕನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಿ" ಎಂದು ನನ್ನ ಹೆಗಲುಮುಟ್ಟಿ ಅಕ್ಕ ಹರಸಿದ್ದು ನನಗಿನ್ನೂ ಹಸಿರು ನೆನಪು. 'ವಧುವಿಗೆ ಕಿವಿಮಾತು', 'ದಾಂಪತ್ಯ ದೀಪಿಕೆ', 'ತಾಯಿ ಮಗು' ಉಡುಗೊರೆಯಾಗಿ ನೀಡಿದರು. ಅಂತೂ ಆ ದಿನದ ಸಂತೋಷ ಮತ್ತೆಲ್ಲೂ ನನ್ನ ಬದುಕಿನಲ್ಲಿ ಸಿಗಲಿಲ್ಲ ಎಂದಷ್ಟೆ ಹೇಳಬಲ್ಲೆ. ಅನುಪಮಾರ ಬಗೆಗೆ ಹೊಸ ಭಾವನೆಗಳನ್ನು ತುಂಬಿಕೊಂಡು ಹೊರಬಂದೆ.

ಮುಂದೆ ನನ್ನ-ಅಕ್ಕ ಅನುಪಮಾರ ಭೇಟಿ ಅದೆಷ್ಟು ಬಾರಿ? ಪರಸ್ಪರ ಪತ್ರಗಳು ನಮ್ಮ ಮಧ್ಯೆ ಓಡಾಡಿದ್ದೆಷ್ಟು? ಲೆಕ್ಕವಿಟ್ಟವರಾರು? ಲೆಕ್ಕದ ಕೂಡು-ಕಳೆಗೆ ಅಲ್ಲಿ ಮುಖತೋರಿಸುವ ಧೈರ್ಯ ಎಲ್ಲಿದ್ದೀತು? ನಮ್ಮಿಬ್ಬರ ಮಾತುಕತೆಯಲ್ಲಿ ಸಾಹಿತ್ಯದಿಂದ ಹಿಡಿದು ಸಾಮಾಜಿಕ, ವೈಯಕ್ತಿಕ ಬದುಕಿನಲ್ಲೂ ಮಾತು ಹರಿದಿದೆ. ನಾನು ಬಹುಬಾರಿ ಅವರನ್ನು ಕಂಡದ್ದು ಅವರ ಮನೆ 'ಕಥೆ'ಯಲ್ಲಿ. ನಮ್ಮ ಬರವನ್ನು ದೂರದಿಂದ ಕಂಡವರೆ ಸ್ವಾಗತಕ್ಕೆ ಹೊರಗೆ ಹಾಜರು. ಅಂದೂ ಇಂದೂ ಅದೇ ನಗು ಮೊಗ, ಅದೇ ವಿಶ್ವಾಸ. ಅದೇ ಆತಿಥ್ಯ. ಗೇಟಿನ ವರೆಗೆ ಬಂದು ಬೀಳ್ಕೊಡುವ ಅವರ ಹೃದಯವಂತಿಕೆಗೆ ಏನೆನ್ನಬೇಕು?! ನನ್ನಲ್ಲಿ ಮಾತಿಲ್ಲ. ಬೆಂಗಳೂರಿಗೆ ಹೋದಾಗಲೆಲ್ಲ ಅವರಿಗೇಕೆ ತೊಂದರೆ ಕೊಡುವುದು ಎಂದುಕೊಂಡರೂ ಮನಸ್ಸು ಕೇಳದು.

ಕೊನೆಗೂ ಅವರ ಹಟಕ್ಕೇ ಜಯ! ಅನುಪಮಾ ಹಿರಿಯರೊಂದಿಗೆ ಹೇಗೋ ಹಾಗೆ ಮಕ್ಕಳೊಂದಿಗೂ ಸಹಜವಾಗಿ ಹರಟಬಲ್ಲರು. ನಮ್ಮ ಮಕ್ಕಳನ್ನು ಸಕ್ಕ ನಗಿಸುವುದನ್ನು, ಅಕ್ಕರೆಯಿಂದ ಮೃದುವಾಗಿ ಪ್ರೋತ್ಸಾಹಿಸುವುದನ್ನು ಕಂಡಿದ್ದೇನೆ. ಪ್ರತಿ ಬಾರಿಯೂ ಆ ಮಕ್ಕಳಿಗೆ ಮಕ್ಕಳ ಪುಸ್ತಕಗಳು ಅತ್ತೆಯ ಉಡುಗೊರೆಯಾಗಿ ಸಂದಿವೆ.

ನಮ್ಮ ಬದುಕಿನ ಹಲವೊಂದು ವಿಲಕ್ಷಣ ಘಟ್ಟದಲ್ಲಿ ನನ್ನವಗು ಕೈತೋರಿದ್ದು ಅನುಪಮಾರ ಆತ್ಮಧೈರ್ಯದತ್ತ, ಜೀವನ ಶ್ರದ್ಧೆಯತ್ತ. ಹೌದು, ಆ ನೆನಪೇ ಒಂದು ಸ್ಫೂರ್ತಿ. ಆ ಜೀವನ ಶ್ರದ್ಧೆಗೆ, ಆ ಹಿರಿತನಕ್ಕೆ ನನ್ನ ತುಂಬು ನಮನ.

ನಾನು ಕಂಡಂತೆ ಅನುಪಮಾ ಅವರದು ಎಲ್ಲದರಲ್ಲೂ ಒಂದು ಶಿಸ್ತು. ಒಂದು ಅಚ್ಚುಕಟ್ಟು, ಇದು ಅವರ ಬರವಣಿಗೆಗೂ ಅನ್ವಯಿಸುವ ಮಾತು.

ಕನ್ನಡತಿಯರ ಆದರ್ಶ ಇದ

-ಬಿ. ಟಿ.ಲಲಿತಾ ನಾಯಕ್

ಡಾ। ಅನುಪಮಾ ನಿರಂಜನ ಅವರನ್ನು ನಾನು ಮುಖತಃ ನೋಡಿದ್ದು ಒಂದು ದಶಕದ ಹಿಂದೆ ಯಾವುದೋ ಒಂದು ಲೇಖಕಿಯರ ಸಮ್ಮೇಳನದ ಸಂದರ್ಭದಲ್ಲಿ. ಅದಕ್ಕಿಂತ ಮೊದಲೇ ಅವರ ಕೃತಿಗಳನ್ನು ಓದಿ ಅವರ ಅಭಿಮಾನಿಯಾಗಿದ್ದೆ.

ಕೃತಕ ನಗೆಯ ಮುಖವಾಡದಿಂದ ದೂರವಾದ ಡಾ। ಅನುಪಮಾ ಅವರು ತುಸು ಗಂಭೀರ ಮುಖಮುದ್ರೆಯುಳ್ಳವರಾಗಿ ನನಗೆ ತೋರಿದರು.

ಕನ್ನಡದ ಲೇಖಕಿಯರಲ್ಲಿ ಇವರನ್ನು ವಿಶೇಷವಾಗಿ ನನ್ನಂಥವರು ಗುರುತಿಸುವುದಕ್ಕೆ, ಆದರಿಸುವುದಕ್ಕೆ ಬಲವಾದ ಕಾರಣಗಳಿವೆ: ಡಾ। ಅನುಪಮಾ ಮೇಲುಜಾತಿಯವರಾದರೂ ಸಂಕುಚಿತ ಭಾವನೆಗಳಿಂದ, ಕಂದಾಚಾರ, ಮೂಢ ಸಂಪ್ರದಾಯಗಳಿಂದ ಸಂಪೂರ್ಣವಾಗಿ ಹೊರಬಂದವರು.

ನಿರಂಜನರಂಥಹ ವಿಚಾರವಾದಿಗಳ ಸಂಪರ್ಕದಿಂದಾಗಿ ವೈಚಾರಿಕ ಪರಿಪಕ್ವತೆ ಗಳಿಸಿಕೊಂಡವರು. ಅಂತರ್ಜಾತೀಯ ವಿವಾಹದ ನೋವು-ನಲಿವು, ಸಾಧಕ - ಬಾಧಕಗಳನ್ನು ಕೇವಲ ಕಲ್ಪನೆಯಿಂದ ಕಥೆ-ಕಾದಂಬರಿಗಳಲ್ಲಿ ಹೊಸೆಯದೆ, ಸ್ವತಃ ಕಂಡುಂಡವರು. ದೇಶ-ವಿದೇಶಗಳನ್ನು ಸುತ್ತಾಡಿ ಅಲ್ಲಿಯ ಸಾಮಾಜಿಕ ಸ್ಥಿತಿ-ಗತಿಯನ್ನು ವಾಸ್ತವ ರೂಪದಲ್ಲಿ ಅಭಿವ್ಯಕ್ತಿಸಿದವರು.

ವನಿತೆಯರಿಗೆ, ಕಿಶೋರಿಯರಿಗೆ, ವಧುವಿಗೆ, ದಂಪತಿಗಳಿಗೆ - ಹೀಗೆ ಬದುಕಿನ ಎಲ್ಲಾ ಮಜಲುಗಳಲ್ಲಿಯೂ 'ಸಾಹಿತ್ಯಕ ಕಿವಿಮಾತು' ಹೇಳಿ ವೈಜ್ಞಾನಿಕ ಪ್ರಜ್ಞೆ ಮೂಡಿಸಿದವರು; ಇನ್ನೂ ಮೂಡಿಸುತ್ತಿರುವವರು. ಮೇಲಾಗಿ ಉತ್ತಮ ಗೃಹಿಣಿ, ಉತ್ತಮ ವೈದ್ಯೆ, ಉತ್ತಮ ಲೇಖಕಿಯಾಗಿ ಬದುಕನ್ನು ಗಾಢವಾಗಿ ಪ್ರೀತಿಸುವವರು. ಅಂತಲೇ ಕ್ಯಾನ್ಸರ್‌ನಂತಹ ಮಾರಕ ರೋಗದ ಪಾಶದಿಂದ ಮುಕ್ತರಾದರು. ಪಾರ್ಶ್ವ ವಾಯು ಪೀಡಿತ ಪತಿಯನ್ನು ತಮ್ಮ ಏಕಾಗ್ರತೆಯ ಆರೈಕೆಯಿಂದ ಬದುಕಿಸಿಕೊಂಡರು.

ನಾನು ಓದಿದ ಇವರ ಬಹಳಷ್ಟು ಕೃತಿಗಳಲ್ಲಿ-ಮಕ್ಕಳು ಬೆಳೆದು ದೊಡ್ಡವರಾದ ಅನಂತರ ಹೆತ್ತ ತಂದೆ-ತಾಯಿಗಳನ್ನು ಕಡೆಗಾಣಿಸಿ ದೂರೀಕರಿಸುತ್ತಾರೆ ಎಂಬುವ ಭಾವನೆ ಹೆಚ್ಚಾಗಿ ವೇದ್ಯವಾಗುತ್ತದೆ. (ಇದು ವಾಸ್ತವಾಂಶ ಕೂಡ).

ಪುರಾಣಕಾಲದಲ್ಲಿಯಾದರೂ ಸಹ ಹೆಣ್ಣಿನ ಶೋಷಣೆ ಪರಾಕಾಷ್ಠೆಗೆ ಮುಟ್ಟಿದ್ದರ ಬಗ್ಗೆ ಹೇಳುತ್ತಾ, ಅವಳನ್ನು ಪಶುವಿಗಿಂತಲೂ ಕೀಳಾಗಿ ಕೈಯಿಂದ ಕೈಗೆ ಮಾರಾಟ ಮಾಡುವ ಪರಿಯನ್ನು ವರ್ಣಿಸುತ್ತಾರೆ. ('ಮಾಧವಿ').

ನಾನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯೆಯಾಗಿ ಇದ್ದ ಅವಧಿಯಲ್ಲೇ ಅವರ ಕೃತಿಗೆ ಅಕಾಡೆಮಿ ಪ್ರಶಸ್ತಿ ಲಭ್ಯವಾದಾಗ ಅಭಿವಂದಿಸಿ ಪತ್ರ ಬರೆದಿದ್ದೆ.

ಅಲ್ಲಿಂದ ಮುಂದೆ ಅವರ ನನ್ನ ನಡುವೆ ಹಲವಾರು ಬಾರಿ ಪತ್ರವ್ಯವಹಾರ ನಡೆಯಿತು. ಕನ್ನಡ ಚಳವಳಿ-ಮಹಿಳಾ ವೇದಿಕೆಗಳಂತಹ ಅನೇಕ ಕಡೆ ನಾವು ಮತ್ತೆ ಮತ್ತೆ ಕಲೆತೆವು. ಹಾಗೆಯೇ ನಿಕಟತೆಯೂ ಹೆಚ್ಚಿತು.

ಒಟ್ಟಾರೆಯಾಗಿ ಡಾ। ಅನುಪಮಾ ಅವರ ಬಗ್ಗೆ ಹೇಳುವುದಾದರೆ ಅವರು 'ಕನ್ನಡತಿಯರ ಆದರ್ಶ'.

- ಸುಮಿತ್ರಾ ಕುಸುಮಾಕರ್

ನನ್ನ ಮತ್ತು ಅನುಪಮಾ ಸ್ನೇಹ ಬಾಂಧವ್ಯ ಪ್ರಾರಂಭವಾದುದು ಇಪ್ಪತ್ತೆರಡು ವರುಷಗಳ ಹಿಂದೆ. ಆಗ ನಿರಂಜನರು ದೆಹಲಿಯ "ಇನ್‌ಫಾ" ಎಂಬ ಸುದ್ದಿಸಂಸ್ಥೆಗೆ ಪ್ರತಿನಿಧಿಯಾಗಿದ್ದರು. ಕುಸುಮಾಕರ್‌ರವರು ಬೊಂಬಾಯಿಯ "ಟೈಮ್ಸ್ ಆಫ್ ಇಂಡಿಯಾ" ದಿನಪತ್ರಿಕೆಗೆ ಕರ್ನಾಟಕಕ್ಕೆ ಪ್ರತಿನಿಧಿಯಾಗಿದ್ದರು. ಆಗ ಇವರಿಬ್ಬರಿಗೂ ಒಂದೇ ವೃತ್ತಿ. ನಾನು ನಿರಂಜನರ ಹಾಗೂ ಡಾ। ಅನುಪಮಾರ ಕೆಲವು ಪುಸ್ತಕಗಳನ್ನು ಓದಿದ್ದೆ. ಅವರ ವಿಷಯವನ್ನು ಸಾಕಷ್ಟು ಕೇಳಿದ್ದೆ-ಇಬ್ಬರು ಪ್ರತಿಭಾವಂತರು ಹಾಗೂ ಬುದ್ಧಿಜೀವಿಗಳು ಎಂದು. ಅವರ ಪರಿಚಯ ಮಾಡಿಕೊಳ್ಳುವ ಕುತೂಹಲ-ಆಸೆ ನನಗಿತ್ತು.

ಒಂದು ಸಂಜೆ ಅಕಸ್ಮಾತ್ ನಿರಂಜನ ದಂಪತಿಗಳು ತಮ್ಮ ಇಬ್ಬರು ಪುಟ್ಟ ಹುಡುಗಿಯರೊಂದಿಗೆ ನಮ್ಮಲ್ಲಿಗೆ ಬಂದರು. ಅವರನ್ನು ಕಂಡು ನನಗೆ ಬಹಳ ಖುಷಿಯಾಯಿತು. ಅವರ ಹಸನ್ಮುಖ, ಸ್ನೇಹಪರತೆ ನನ್ನ ಮನಸ್ಸಿನ ಮೇಲೆ ಮೈತ್ರಿಯ ಅಚ್ಚೊತ್ತಿದವು. ಅವರ ಮಕ್ಕಳು ತೇಜಸ್ವಿನಿ ಮತ್ತು ಸೀಮಂತಿನಿ, ನನ್ನ ಮಗಳು ಚಂದ್ರಿಕ ಸ್ನೇಹಿತೆಯರಾದರು. ಅನುಪಮಾರ ನಗುಮುಖ ನೋಡಿದಾಗಲೆಲ್ಲಾ "ಈಕೆ ಹಸನ್ಮುಖಿ, ಸದಾಸುಖಿ" ಎಂದುಕೊಳ್ಳುತ್ತಿದ್ದೆ. ನಿಗರ್ವಿಯೂ ಹೌದು ಎಂದುಕೊಂಡೆ.

ನನ್ನ ಮತ್ತು ಅನುಪಮಾರ ಭೇಟಿಯಾದಾಗ, ಅನುಪಮಾ ಧಾರವಾಡದಿಂದ ಬೆಂಗಳೂರಿಗೆ ಬಂದು ಎರಡು ಮೂರು ವರ್ಷಗಳಾಗಿತ್ತು. ಆಗಲೇ ಅವರು ತಮ್ಮ ವೈದ್ಯಕೀಯ ವೃತ್ತಿಯಲ್ಲಿ ಹೆಸರು ಗಳಿಸಿದ್ದರು. ಅವರು ಆಗ ಜಯನಗರದ 'ಟಿ' ಬ್ಲಾಕ್‌ನಲ್ಲಿರುತ್ತಿದ್ದರು. ಹತ್ತಿರದಲ್ಲೆ ಅವರ "ಕ್ಲಿನಿಕ್" ಇತ್ತು. ಅವರ ಸ್ಮಿತವದನ, ಅನುಕಂಪ ಹಾಗೂ ರೋಗಿಗಳ ಜೊತೆಗೆ ಅವರು ನಡೆದುಕೊಳ್ಳುತ್ತಿದ್ದ ರೀತಿ ಅವರಿಗೆ ವೃತ್ತಿಯಲ್ಲಿ ಒಳ್ಳೆ ಹೆಸರನ್ನು ಗಳಿಸಿಕೊಟ್ಟಿದ್ದವು. ನನಗೆ ತಿಳಿದವರೊಬ್ಬರು ಅವರ ಹತ್ತಿರ ಹೋಗಿ ಬಂದು "ನೋಡು, ನಾನು ಅನುಪಮಾ ಡಾಕ್ಟರ್ ಹತ್ತಿರ ಪರೀಕ್ಷೆ ಮಾಡಿಸಿಕೊಂಡು ಔಷಧಿ ತೆಗೆದುಕೊಂಡೆ. ಅವರು ನನ್ನ ಹತ್ತಿರ ಮಾತನಾಡುವ ರೀತಿಯಲ್ಲೇ ನನಗೆ ಅರ್ಧ ಕಾಯಿಲೆ ವಾಸಿಯಾಯಿತು" ಎಂದರು. "ಅನುಪಮಾರ ಕೈಗುಣ ಒಳ್ಳೆಯದಿದೆ" ಎಂದು ಎಷ್ಟೋ ಜನ ನನ್ನ ಹತ್ತಿರ ಹೇಳಿದ್ದಾರೆ.

ಅನುಪಮಾರ "ಪ್ರಾಕ್ಟೀಸು" ದಿನೇ ದಿನೇ ಬೆಳೆಯುತ್ತಲೇ ಇತ್ತು. ಚೆನ್ನಾಗಿ ಸಂಪಾದನೆಯೂ ಇತ್ತು. ಅನುಪಮಾ ಹಾಗೂ ನಿರಂಜನರದು ಒಳ್ಳೆಯ ಜೋಡಿ. ತಮ್ಮ ವೃತ್ತಿಗಳ ಜೊತೆಗೆ ಬರವಣಿಗೆಯ ಕೆಲಸ ಸದಾ ನಡೆಯುತ್ತಿತ್ತು.

ನಿರಂಜನರು ಕಿರಿಯರ ವಿಶ್ವಕೋಶವನ್ನು ಹೊರತರಲಿಕ್ಕೆ ಬಹಳ ಶ್ರಮಿಸುತ್ತಿದ್ದರು. ಅನುಪಮಾಗೆ ವೈದ್ಯಕೀಯ ವೃತ್ತಿಯ ಜೊತೆಗೆ ಬರವಣಿಗೆ ಹಾಗೂ ಸಂಸಾರ ನಡೆಸುವ ಹೊಣೆಯೂ ಇತ್ತು. ಆದರೆ ಅನುಪಮಾ ಈ ಮೂರೂ ಕೆಲಸಗಳನ್ನು ಒಳ್ಳೆ ಶಿಸ್ತಿನಿಂದ ನಡೆಸಿಕೊಂಡು ಹೋಗುತ್ತಿದ್ದರು.

ನಾವು ಸಾಧಾರಣವಾಗಿ ಹದಿನೈದು ದಿನಗಳಿಗೊಮ್ಮೆಯಾದರೂ ಭೇಟಿಯಾಗುತ್ತಿದ್ದೆವು. ನನಗೆ ಬರುವ ಸಣ್ಣಪುಟ್ಟ ಅಡಿಗೆಗಳನ್ನು ಅವರು ಕಲಿತುಕೊಂಡರು. ನಾನು ಜೀವನದಲ್ಲಿ ಎಷ್ಟೋ ವಿಷಯಗಳನ್ನು ಅವರಿಂದ ಕಲಿತುಕೊಂಡೆ. ನಮ್ಮ ಮೈತ್ರಿ ಕುಟುಂಬ ಬಾಂಧವ್ಯವಾಗಿ ಪರಿಣಮಿಸಿತು. ನನಗೆ ಇಲ್ಲದ ತಂಗಿಯನ್ನು ನಾನು ಅನುಪಮಾರಲ್ಲಿ ಕಂಡೆ.

೧೯೭೧ರಲ್ಲಿ ಅನುಪಮಾಗೆ ಮೊದಲನೆಯ ಶಸ್ತ್ರಚಿಕಿತ್ಸೆಯಾಯಿತು. (ಅದು ಕ್ಯಾನ್ಸರ್ ಅಪರೇಶನ್ ಅಲ್ಲ). ಅವರು ಬಹುಬೇಗ ಚೇತರಿಸಿಕೊಂಡು ತಮ್ಮ ವೈದ್ಯಕೀಯ ವೃತ್ತಿಗೆ ಹಿಂತಿರುಗಿದರು. ಅನುಪಮಾ ಸಂಸಾರವನ್ನು ನೋಡಿದವರಿಗೆ-ಇವರೆಷ್ಟು ಭಾಗ್ಯಶಾಲಿಗಳು ! ಒಳ್ಳೆಯ ಪ್ರತಿಭಾವಂತ ಪತಿ - ಮುತ್ತಿನಂತಹ ಎರಡು ಮಕ್ಕಳು. ಜೀವನದಲ್ಲಿ ಆರ್ಥಿಕ ಬಿಕ್ಕಟ್ಟೂ ಇಲ್ಲ. ಅವರ ಜೀವನದಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ. ಅನುಪಮಾರ ನಯ-ವಿನಯ-ಸೌಜನ್ಯಶೀಲತೆ ಅವರನ್ನು ಮುಂದೆಮುಂದೆ ಕರೆದೊಯ್ಯುತ್ತಿದ್ದವು. [ವಿಧಿಗೆ ಇದನ್ನು ನೋಡಿ ಸಹಿಸಲಾಗಲಿಲ್ಲವೋ ಏನೋ] ೧೯೭೧ರಲ್ಲಿ ಒಂದು ದಿನ ಮಧ್ಯಾಹ್ನ ಅನುಪಮಾರ ಟೆಲಿಫೋನ್ ಬಂತು. "ನಿರಂಜನರಿಗೆ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೀಟಿಂಗ್‌ನಲ್ಲಿ ಕುಳಿತಾಗ 'ಸ್ಟ್ರೋಕ್' ಆಗಿದೆ ಎಂದು ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಂದ ಫೋನ್ ಬಂದಿದೆ. ನನಗೆ ದಿಕ್ಕೇ ತೋಚುತ್ತಿಲ್ಲ" ಎಂದು. ಮನೆಯಲ್ಲಿ ನಿರಂಜನರ ವಯಸ್ಸಾದ ತಾಯಿ-ಎರಡು ಪುಟ್ಟ ಮಕ್ಕಳು ಮತ್ತು ಅವರ ಪ್ರೀತಿಯ ನಾಯಿ ಬ್ರೂನೋ. ಕುಸುಮಾಕರ್ ಹಾಗೂ ನಾನು ಇಬ್ಬರೂ ತಕ್ಷಣ ಅವರ ಮನೆಗೆ ಹೋದೆವು. ನಾನು ಅನುಪಮಾಗೆ ಸಮಾಧಾನ ಹೇಳಿ ಮಕ್ಕಳನ್ನೂ - ನಾಯಿಯನ್ನೂ ಕರೆದುಕೊಂಡು ನಮ್ಮ ಮನೆಗೆ ಬಂದೆ. ಕುಸುಮಾಕರ್ ಅನುಪಮಾರವರನ್ನು ಕರೆದುಕೊಂಡು ಮೈಸೂರಿಗೆ ಹೋದರು. ಅಲ್ಲಿ ನಿರಂಜನರ ಸ್ಥಿತಿ ಚಿಂತಾಜನಕವಾಗಿತ್ತು. ಅವರಿಗೆ 'ಸ್ಟ್ರೋಕ್' ಜೋರಾಗಿಯೇ ಆಗಿತ್ತು. ಮಾತು ನಿಂತುಹೋಗಿತ್ತು, ಎಡ ಪಾರ್ಶ್ವಕ್ಕೆ ಅರ್ಧಾಂಗವಾಯು ತಗುಲಿತ್ತು. ಅವರನ್ನು ಮೈಸೂರಿನಿಂದ ಕರೆತರಲು ಸಾಧ್ಯವೇ ಇರಲಿಲ್ಲ. ಅನುಪಮಾ ನಿರಂಜನರನ್ನು ನೋಡಿಕೊಂಡು ಹದಿನೈದು ದಿನ ಮೈಸೂರಲ್ಲೆ ಇದ್ದರು. ಮಕ್ಕಳಿಗೆ ಶಾಲೆ ತಪ್ಪುತ್ತದೆಂದು ಅವರನ್ನು ಜಯನಗರಕ್ಕೆ ಕರೆದುಕೊಂಡು ಹೋಗಿಬಿಟ್ಟೆವು. ಅವರನ್ನು ನೋಡಿಕೊಳ್ಳುವ ವ್ಯವಸ್ಥೆ ಮಾಡಲಾಯಿತು.

ಅನುಪಮಾ ನಿರಂಜನರನ್ನು ಕರೆದುಕೊಂಡು ೧೫ ದಿನಗಳ ನಂತರ ಬೆಂಗಳೂರಿಗೆ ಬಂದರು. ಅವರನ್ನು ನೋಡಿದಾಗ ಅವರಿಗೆ ಬಂದ ವಿಪತ್ತು ಎಷ್ಟು ದೊಡ್ಡದು ಎಂದು ತಿಳಿಯಿತು. ನಿರಂಜನರು ಮೈಸೂರಿಗೆ ಹೋಗುವ ಹಿಂದಿನ ದಿನ ನಮ್ಮನೆಗೆ ಬಂದಿದ್ದರು. ಸ್ವಲ್ಪ ಹೊತ್ತು ವಿನೋದವಾಗಿ ಮಾತನಾಡಿಕೊಂಡಿದ್ದು ಟೀ ಕುಡಿದು ಹೊರಟುಹೋದರು. ಬಹಳ ಚಟುವಟಿಕೆಯ ಮನುಷ್ಯ. ಅವರಿಗೆ ಹೀಗಾಗಿದೆಯೆಂದರೆ ಯಾರಿಗೂ ನಂಬಿಕೆ ಬರುತ್ತಿರಲಿಲ್ಲ. ಕಣ್ಣಿಂದ ನೋಡಿದ ಮೇಲೆ ನಮಗೆ ತುಂಬಾ ದುಃಖವಾಯಿತು.

ನಿರಂಜನರಿಗೆ ಮುಂದೆ ಕೆಲವು ತಿಂಗಳು ಔಷಧಿ-ಉಪಚಾರ-ಫಿಸಿಯೋಥೆರಪಿ ನಡೆದವು. ಅವರಿಗೆ ಮಾತನಾಡಲು ಸಾಧ್ಯವಾಯಿತು. ಸ್ವಲ್ಪ ಹಿಡಿದುಕೊಂಡು ನಡೆಯಲು ಸುರುಮಾಡಿದರು.

ಈ ಸಂದರ್ಭದಲ್ಲಿ ನಾನು ಅನುಪಮಾರನ್ನು ಒಂದು ಹೊಸ ಬೆಳಕಿನಲ್ಲಿ ಕಂಡೆ. ಅವರಿಗೆ ಬಂದ ಗಂಡಾಂತರ ಸಾಮಾನ್ಯದ್ದಾಗಿರಲಿಲ್ಲ. ಆಕೆಯ ಸಮಾಧಾನ-ಧೈರ್ಯ ನೋಡಿದಾಗ ಈಕೆ ಒಬ್ಬ ಅಸಾಮಾನ್ಯ ಹೆಂಗಸು ಎನ್ನಿಸಿತು. ನನಗೆ ಅವರಲ್ಲಿರುವ ಪ್ರೀತಿ-ವಿಶ್ವಾಸ ಮತ್ತು ಗೌರವ ಇನ್ನಷ್ಟು ಹೆಚ್ಚಿತು. ಅವರು ತಮ್ಮ ಆತ್ಮಕಥೆ "ನೆನಪು-ಸಿಹಿಕಹಿ"ಯಲ್ಲಿ ತಮಗೆ ಬಂದ ಕಷ್ಟ-ಸಂಕಟಗಳ ವಿಷಯ ಬರೆದಿದ್ದಾರೆ. ಅವರೆ ಬರೆದಿರುವುದು ಬಹಳ ಸ್ವಲ್ಪ ಮಾತ್ರ! ಅವರ ಕಷ್ಟ ಸಂಕಟಗಳನ್ನು ನಾನು ಕಣ್ಣಾರೆ ಕಂಡಿದ್ದೇನೆ! ಜೀವನದಲ್ಲಿ ಅವರು ಕಷ್ಟ ಸಂಕಟಗಳನ್ನು ಧೈರ್ಯದಿಂದ ಎದುರಿಸಿದ್ದು ನೋಡಿ ಆಶ್ಚರ್ಯಪಟ್ಟಿದ್ದೇನೆ.

೧೯೭೮ರಲ್ಲಿ ಅನುಪಮಾಗೆ ಮೊದಲನೆಯ ಕ್ಯಾನ್ಸರ್ ಅಪರೇಶನ್ ಆಯಿತು. ತನ್ನ ಪ್ರೀತಿಯಿಂದ ಹಾಗೂ ವೈದ್ಯಕೀಯ ಅನುಭವಗಳಿಂದ ಅವರು ನಿರಂಜನರನ್ನು ಮೃತ್ಯುದವಡೆಯಿಂದ ಪಾರು ಮಾಡಿದ್ದರು. ಈಗ ಒಂದು ಮಹಾಸಂಕಟ ಅನುಪಮಾಗೆ ಬಂದಿತ್ತು. ಯಥಾಪ್ರಕಾರ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸಿದರು. ಸ್ವತಃ ಡಾಕ್ಟರ್ ಆಗಿದ್ದರಿಂದ ಇನ್ನೂ ಕಾಯಿಲೆಯನ್ನು ಸುರುವಿನಲ್ಲೇ ಗುರುತಿಸಿ-ಸರ್ಜನರ ಹತ್ತಿರ ಹೋಗಿದ್ದರು. ಆಪರೇಶನ್ ಮಾಡಿಸಿಕೊಂಡು ನಂತರ ಬೊಂಬಾಯಿಗೆ ಹೋಗಿ ಮುಂದೆ ಆಗಬೇಕಾದ "ರೇಡಿಯೇಶನ್‌ಥೆರಪಿ"ಯನ್ನು ಮಾಡಿಸಿಕೊಂಡು ಬಂದರು. ತಮ್ಮ ಆರೋಗ್ಯ ಸುಧಾರಿಸಿದ ತಕ್ಷಣ ತಮ್ಮ ವೈದ್ಯಕೀಯ ವೃತ್ತಿಗೆ ಹಿಂತಿರುಗಿದರು. ಇದರ ನಂತರ ಸರಾಸರಿ ಮೂರು ವರ್ಷಕ್ಕೊಂದು ಬಾರಿ ಅನುಪಮಾ ಕ್ಯಾನ್ಸರ್ ಅಪರೇಶನ್‌ಗಳನ್ನು ಮಾಡಿಸಿಕೊಳ್ಳಬೇಕಾಯಿತು. ಮೂರನೆಯ ಬಾರಿ ಅಪರೇಶನ್ ಆದ ಮೇಲೆ ವೈದ್ಯಕೀಯ ವೃತ್ತಿಯನ್ನು ಬಿಟ್ಟುಬಿಟ್ಟರು. ಅವರು ಬರವಣಿಗೆಯನ್ನೇ ತಮ್ಮ ಮುಖ್ಯ ವೃತ್ತಿ ಮಾಡಿಕೊಂಡು ಬಂದರು.

ನಿರಂಜನ ಹಾಗೂ ಅನುಪಮಾ ಎಷ್ಟೋ ಸಂದಿಗ್ಧ ಪರಿಸ್ಥಿತಿಯಲ್ಲಿ ನಮಗೆ ಸಹಾಯ ಮಾಡಿದ್ದಾರೆ. ಅವರದು ಧಾರಾಳ ಸ್ವಭಾವ. ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದು ಒಂದು ದೊಡ್ಡ ಗುಣ. ಅದು ಅವರಿಬ್ಬರಲ್ಲೂ ಇದೆ.

ಈ ಸಂದರ್ಭದಲ್ಲಿ ನಡೆದ ಒಂದು ಘಟನೆ ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿ ನಿಂತಿದೆ. ಇದು ಕೆಲವು ವರ್ಷಗಳ ಹಿಂದಿನ ಮಾತು. ಅನುಪಮಾ ಆಗ ತಾನೆ ಆಪರೇಶನ್ ಒಂದರಿಂದ ಸುಧಾರಿಸಿಕೊಂಡು ತಮ್ಮ ಕೆಲಸಕ್ಕೆ ಹಿಂತಿರುಗಿದ್ದರು. ಅವರ ಕ್ಲಿನಿಕ್ ಎದುರಲ್ಲಿ ಒಂದು ಸಂಸಾರ ಕೆಲವು ತಿಂಡಿಗಳನ್ನು ಮಾಡಿ ಮಾರುತ್ತಿದ್ದರು. ಒಂದು ದಿನ ತಿಂಡಿ ಮಾಡುವಾಗ ಬಾಣಲಿ ಉರುಳಿ ಸ್ಟವ್ ಮೇಲೆ ಬಿದ್ದು ಮನೆ ಯಾಕೆಗೆ ಬೆಂಕಿ ಹತ್ತಿಕೊಂಡಿತು. ಹಾ-ಹಾಕಾರ ಕೇಳಿದ ತಕ್ಷಣ ಅನುಪಮಾ ಕೈಯಲ್ಲಿರುವ ಕೆಲಸ ಬಿಟ್ಟು ಆಕೆಯತ್ತ ಧಾವಿಸಿದರು. ಆ ಹೆಂಗಸಿನದು ಸ್ಥೂಲಕಾಯ. ಬೆಂಕಿ ಆರಿಸಿ ಆಕೆಯನ್ನು ಪಕ್ಕಕ್ಕೆ ಸರಿಸಲು ಹೋದಾಗ ತಾವೇ ಕೆಳಗೆ ಚೆಲ್ಲಿದ ಎಣ್ಣೆಯಲ್ಲಿ ಕಾಲು ಜಾರಿ ಬಿದ್ದು ದಿನಗಟ್ಟಲೆ ಒದ್ದಾಡಿದರು.

ಸುಖ ಕಷ್ಟ ಪ್ರಪಂಚದಲ್ಲಿ ಎಲ್ಲರಿಗೂ ತಪ್ಪಿದ್ದಲ್ಲ. ಆದರೆ ಅನುಪಮಾರ ಜೀವನದಲ್ಲಿ ನಾನು ನೋಡಿದ್ದು ಮುಕ್ಕಾಲು ಭಾಗ ಕಷ್ಟಗಳ ಜೊತೆಗೆ ಸೆಣಸಾಟ. ಜೀವನದುದ್ದಕ್ಕೂ ಕಷ್ಟಗಳ ರಾಶಿಯನ್ನೇ ಎದುರಿಸುತ್ತಾ ನಡೆದಿದ್ದಾರೆ. ಅವರನ್ನು ನೋಡಿದಾಗ ಡಿ. ವಿ. ಜಿ.ಯವರ ಮಂಕುತಿಮ್ಮನ ಕಗ್ಗದ ಒಂದು ಪದ್ಯ ಜ್ಞಾಪಕಕ್ಕೆ ಬರುತ್ತದೆ. "ಹುಲ್ಲಾಗು ಬೆಟ್ಟದಡಿ - ಮನೆಗೆ ಮಲ್ಲಿಗೆಯಾಗು. ಕಲ್ಲಾಗು ಕಷ್ಟಗಳ ವಿಧಿಯೆ ಮಳೆಸುರಿಯೆ. ಬೆಲ್ಲಸಕ್ಕರೆಯಾಗು ದೀನ ದುರ್ಬಲರಿಂಗೆ-ಎಲ್ಲರೊಳಗೊಂದಾಗು ಮಂಕುತಿಮ್ಮ".

ಸಂಪ್ರದಾಯದ ಕಟ್ಟುಕಟ್ಟಳೆಗಳಿಂದ ಈಚೆ ಬಂದು ಸಮಾಜವನ್ನು ಧೈರ್ಯ ದಿಂದ ಎದುರಿಸಿದ್ದಾರೆ. ಒಂದಾದ ಮೇಲೊಂದು ಬಂದ ಕಷ್ಟ ಪರಂಪರೆಗಳನ್ನು ತುಳಿದು ಮುಂದೆ ಹೋಗಿದ್ದಾರೆ. ಅನುಪಮಾ ಅಂತಹ ಹೆಂಗಸರು ಪ್ರಪಂಚದಲ್ಲಿ ಬಹಳ ವಿರಳ! ಆಕೆ ನನ್ನ ಸ್ನೇಹಿತೆ ಮಾತ್ರವಲ್ಲ, ನನಗೆ ಬೇಕಾದ ಆತ್ಮೀಯ ವ್ಯಕ್ತಿ. ನಾನು ಇದನ್ನು ಬರೆಯುವಾಗ ಅವರಿಗೆ ಐದನೆಯ ಆಪರೇಶನ್ ಆಗಿದೆ. ಯಥಾಪ್ರಕಾರ ದೇಹ-ಮನಸ್ಸಿನಿಂದ ಹೋರಾಟ ನಡೆಸಿದ್ದಾರೆ. ದೇವರ ಕೃಪೆಯಿಂದ ಬೇಗ ಚೇತರಿಸಿ ಕೊಳ್ಳಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಹೃದಯಕ್ಕೆ ಹತ್ತಿರವಾಗುವ ವ್ಯಕ್ತಿತ್ವ

- ಹೇಮಲತಾ ಮಹಿಷಿ

ಬೆಂಗಳೂರಿಗೆ ನಾನು ೧೯೭೧ರಲ್ಲಿ ಬಂದ ಮೇಲೆಯೇ ನನಗೆ ಅನುಪಮಾರವರ ವ್ಯಕ್ತಿಗತ ಪರಿಚಯವಾದದ್ದು. ಆಗ ತಾನೇ ನನ್ನ ಬರವಣಿಗೆಯ ಕಾರ್ಯ ಆರಂಭವಾಗಿತ್ತು. ಹೇಳಿಕೊಳ್ಳುವಂತಹ ಸಾಧನೆ ಏನೂ ಇರಲಿಲ್ಲ. ಆದರೆ, ಆದಾಗಲೇ ಸಾಹಿತಿಯಾಗಿ ಕನ್ನಡ ನಾಡಿನಲ್ಲಿ ಹೆಸರು ಮಾಡಿದ್ದ ಅನುಪಮಾರವರು ನನ್ನನ್ನು ವಿಶ್ವಾಸದಿಂದ ಮಾತನಾಡಿಸಿ, ಸ್ನೇಹಭಾವದಿಂದ ಕಂಡರು. ಆಗ ಅವರಿನ್ನೂ ವೈದ್ಯಕೀಯ ವೃತ್ತಿಯಲ್ಲಿ ನಿರತರಾಗಿದ್ದ ದಿನಗಳಾಗಿದ್ದವು. ಅವರ ಕತೆ-ಕಾದಂಬರಿಗಳಲ್ಲಿ ಕಂಡು ಬರುವ ಮಾನವೀಯ ಅನುಕಂಪವನ್ನು ಅವರು ತಮ್ಮ ಕ್ಲಿನಿಕ್ಕಿನಲ್ಲಿ ತಮ್ಮ ಬಳಿ ಬರುವ ರೋಗಿಗಳ ಬಗ್ಗೆ ತೋರಿಸುವುದನ್ನು ನಾನು ಕಂಡಿದ್ದೇನೆ. ಆಗಿನ ತಮ್ಮ ಬಿಡುವಿಲ್ಲದ ಕಾರ್ಯಚಟುವಟಿಕೆಗಳ ಮಧ್ಯೆಯೂ ಅವರು ನಮಗಾಗಿ ಸಮಯವನ್ನು ತೆಗೆದಿಟ್ಟು, ಸ್ವತಃ ಅಡಿಗೆಮಾಡಿ ಉತ್ತಮ ಆತಿಥೇಯಳಾಗಿ ರುಚಿಯಾದ ಊಟವನ್ನು ಬಡಿಸಿದ್ದಾರೆ ಎಂದರೆ ಆಶ್ಚರ್ಯವಾಗಬಹುದು. ಒಬ್ಬ ವೈದ್ಯಳಾಗಿದ್ದು, ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಸಾಹಿತಿಯಾಗಿದ್ದು, ಉತ್ತಮ ಗೃಹಿಣಿ-ಆತಿಥೇಯಳೂ ಆಗಿ, ಆತ್ಮೀಯತೆಯಿಂದ ಕಂಡ ಕೆಲವು ಗಳಿಗೆಗಳಲ್ಲೇ ಹೃದಯಕ್ಕೆ ಹತ್ತಿರವಾಗುವ ವ್ಯಕ್ತಿತ್ವ ಅನುಪಮಾರವರದು. ನನ್ನಂತೆ ಅವರ ಬಳಿ ಬಂದು, ಬಂದ ಕೆಲವೇ ಹೊತ್ತಿನಲ್ಲಿ ಅವರ ಆತ್ಮೀಯರೇ ಆಗಿಬಿಡುವ ವ್ಯಕ್ತಿಗಳು ಎಷ್ಟು ಜನರೋ. ಬಹುಶಃ ಅವರಿಗೂ ಲೆಕ್ಕ ಸಿಕ್ಕಲಿಕ್ಕಿಲ್ಲ.

ಇಂದು ಜೀವನದ ಕಹಿ-ಸಿಹಿಯನ್ನುಂಡು ಪ್ರಬುದ್ಧರಾಗಿರುವ ಅನುಪಮಾರವರನ್ನು ಕಾಣುತ್ತಿದ್ದೇನೆ. ಇಂದಿನ ಸಮಾಜದ ಆಗುಹೋಗುಗಳು, ಜೀವನದ ಅನುಭವ ಅವರ ಮೇಲೆ ಉಂಟುಮಾಡಿರುವ ಪರಿಣಾಮವನ್ನು ವೈಯಕ್ತಿಕವಾಗಿ ಅಲ್ಲದೆ ಅವರ ಕತೆ-ಕಾದಂಬರಿಗಳಲ್ಲೂ ಕಾಣುತ್ತಿದ್ದೇನೆ. ಮಾಧವಿ, ಕೊಳಚೆ ಕೊಂಪೆಯ ದಾನಿಗಳು, ಉತ್ಖನನದಂತಹ ಕೃತಿಗಳು ವ್ಯಕ್ತಿಯಾಗಿ, ಸಾಹಿತಿಯಾಗಿ ಅನುಪಮಾರವರ ಬೆಳವಣಿಗೆಯನ್ನು ಗುರುತಿಸಲು ಸಹಾಯಕವಾಗುತ್ತವೆ.

ಆರೋಗ್ಯ ಅಷ್ಟಾಗಿ ಸರಿಯಿಲ್ಲದ ಈ ಇತ್ತೀಚಿನ ದಿನಗಳಲ್ಲೂ ಅನುಪಮಾ ಅತ್ಯಂತ ನಿಷ್ಠೆಯಿಂದ ತಮ್ಮನ್ನು ತಾವು ಸಾಹಿತ್ಯಕ್ಕೆ ಅರ್ಪಿಸಿಕೊಂಡು ಬಿಟ್ಟಿದ್ದಾರೆ. ತಮ್ಮನ್ನು ಕನ್ನಡಿಗರ ಹೃದಯದಲ್ಲಿ ಚಿರಸ್ಥಾಯಿಯಾಗಿಸುವುದು ತಮ್ಮ ಸಾಹಿತ್ಯ ಕೃತಿಗಳೇ ಎನ್ನುವುದನ್ನು ಅವರು ಗಟ್ಟಿಯಾಗಿ ನಂಬಿ, ಮುನ್ನಡೆಯುತ್ತಿದ್ದಾರೆ.

ಸಂಕಷ್ಟದ ದಿನಗಳಲ್ಲಿ. ಅದರಲ್ಲೂ ದೈಹಿಕವಾಗಿ ಯಾತನೆಯನ್ನು ಅನುಭವಿಸು ವಾಗ ಸಾಮಾನ್ಯವಾಗಿ ವ್ಯಕ್ತಿಗಳು ಕುಸಿದು ಹೋಗುತ್ತಾರೆ. ಜೀವನದ ಬಗ್ಗೆ ನಿರಾಶೆಯ, ನಕಾರಾತ್ಮಕ ಭಾವನೆಯನ್ನು ತಳೆಯುತ್ತಾರೆ. ಆದರೆ, ಅನುಪಮಾರವರು ಅದಕ್ಕೆ ಒಂದು ಅಪವಾದ. ಸಂಕಷ್ಟಗಳು ಎದುರಾದಷ್ಟೂ ಅವರ ಸಂಕಲ್ಪ ಬಲ ವಾಗುತ್ತಾ ಹೋಗುತ್ತಿದೆ. ಸಾಹಿತ್ಯ ಸಾಧನೆ ಅರ್ಥಪೂರ್ಣವಾಗುತ್ತಿದೆ. ಅವರಿಗೆ ಧೈರ್ಯ ಹೇಳಲು ಹೋದವರೇ ಅವರಿಂದ ಧೈರ್ಯದ ಪಾಠವನ್ನು ಕಲಿತು ಹಿಂತಿರುಗ ಬೇಕಾಗುತ್ತದೆ. ಬಹುಶಃ ಇದು ಅನುಪಮಾರವರಲ್ಲಿ ನಾನು ಗುರುತಿಸಿದ, ಬಹುಶಃ ಎಲ್ಲರೂ ಗುರುತಿಸಿದ ಒಂದು ಅದ್ಭುತ ಮನೋಗುಣ.

ಅನುಪಮಾರವರು ಎಂದೂ ತಾವಾಯಿತು, ತಮ್ಮ ಸಾಹಿತ್ಯ ಕೃಷಿಯಾಯಿತು ಎಂದು ಸಮಾಜದಿಂದ ದೂರವಾಗಿ ಉಳಿದವರಲ್ಲ. ಹಿರಿಯರು ಕಿರಿಯರೆನ್ನದೇ ಎಲ್ಲರೊಡನೆ ಸಮಾನವಾಗಿ, ಸರಳವಾಗಿ ಬೆರೆತು ನನ್ನಂತಹ ಅನೇಕ ಲೇಖಕಿಯರಿಗೆ ಲೇಖನ ಕಾರ್ಯದಲ್ಲಿ ಸ್ಫೂರ್ತಿ ನೀಡಿದ್ದಾರೆ. ಯಾವುದೇ ಲೇಖಕಿ ತಮ್ಮ ಪುಸ್ತಕ ವನ್ನು ಅವರಿಗೆ ಕೊಡಲಿ, ಒಂದೆರಡು ದಿನಗಳಲ್ಲೇ ಅದನ್ನು ಓದಿ, ಅದರಲ್ಲಿರುವ ಗುಣಾಂಶವನ್ನು ತೋರಿಸಿ, ಮೆಚ್ಚಿಗೆಯ ನಾಲ್ಕುಮಾತುಗಳನ್ನು ಪತ್ರಮುಖೇನ ಬರೆದು ಪ್ರೋತ್ಸಾಹಿಸುವ ದೊಡ್ಡಗುಣ ಅನುಪಮಾರವರಲ್ಲಿದೆ. ಆರೋಗ್ಯ ಸರಿ ಇದ್ದಾಗ ಬೆಂಗಳೂರಿನಲ್ಲಿ ನಡೆಯುವ ಸಾಹಿತ್ಯಕ ಕಾರ್ಯಕ್ರಮಗಳಿಗೆ ಬಂದು, ಒಂದೆರಡು ಗಳಿಗೆ ಎಲ್ಲರೊಡನೆ ಕಳೆದು ಸಂತೋಷಪಡುವ ಪ್ರವೃತ್ತಿ ಅವರಿಗಿದೆ.

ಮಹಿಳೆಯರ ಬಗ್ಗೆ ಸಮಾಜ ತೋರಿಸುತ್ತಿರುವ ಅನ್ಯಾಯದ-ತಾರತಮ್ಯದ ಧೋರಣೆಯ ಬಗ್ಗೆ ಅನುಪಮಾರವರು ಅನೇಕ ವೇದಿಕೆಗಳಿಂದ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಹಳೆಯ ಪೀಳಿಗೆಯ ಲೇಖಕಿಯಾಗಿದ್ದರೂ, ತಮ್ಮ ಪ್ರಗತಿಪರ ಧೋರಣೆಗಳಿಂದಾಗಿ ಇಂದಿಗೂ **Relevant** ಆಗಿ ಉಳಿದಿದ್ದಾರೆ. ಹಾಗೆಂದೇ ಮಹಿಳಾ ವಿಮೋಚನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಅನೇಕ ಮಹಿಳಾ ಸಂಘ ಸಂಸ್ಥೆಗಳು ಅನುಪಮಾರವರ ಮಾರ್ಗದರ್ಶನವನ್ನು ಬಯಸುತ್ತವೆ.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷಳಾಗಿ ಹಲವಾರು ಬಾರಿ ಅನುಪಮಾ ರವರನ್ನು ಸಂಘದ ಚಟುವಟಿಕೆಯಲ್ಲಿ ಭಾಗವಹಿಸಲು ಕೋರಿದಾಗ ಅವರು ಸಂತೋಷ ವಾಗಿಯೇ ಭಾಗವಹಿಸಿದ್ದಾರೆ. ಲೇಖಕಿಯರು-ಮಹಿಳೆಯರು ಸಂಘಟಿತರಾಗಿ ಮಾಡ ಬೇಕಾದ ಕೆಲಸ ಬಹಳವಿದೆ ಎಂದು ಅನುಪಮಾ ದೃಢವಾಗಿ ನಂಬಿದ್ದಾರೆ. ಪರಸ್ಪರ ಅಸೂಯೆ, ಗುಂಪುಗಾರಿಕೆ ಲೇಖಕಿಯರಲ್ಲಿ ಉಂಟಾಗದಿರುವುದಕ್ಕೆ ಅನುಪಮಾರ ವರಂತಹ ಹಿರಿಯ ಸಾಹಿತಿಗಳು ಲೇಖಕಿಯರ ಸಂಘಟನೆ ಬಗ್ಗೆ ಆರೋಗ್ಯಕರ

ನಿಲುವನ್ನು ತಾಳಿರುವುದೇ ಕಾರಣವಾಗಿದೆ. ಎಲ್ಲ ಲೇಖಕಿಯರು-ಮಹಿಳೆಯರು ಪರಸ್ಪರ ಪೂರಕವಾಗಿ ಕೆಲಸ ಮಾಡಿದರೆ ಪ್ರಗತಿಯ ಹಾದಿ ಸುಗಮವಾಗುತ್ತದೆ ಎನ್ನುವುದನ್ನು ಅನುಪಮಾ ತಮ್ಮ ನಡತೆ ಹಾಗೂ ಲೇಖನಿಯ ಮೂಲಕ ತೋರಿಸಿದ್ದಾರೆ.

ಕ್ರಿಯಾಶೀಲ ಮಹಿಳೆ ೩೩

-ಡಾ। ಸರೋಜಿನಿ ಶಿಂತ್ರಿ

ಕೆಲವೇ ಕೆಲವು ಮಹಿಳೆಯರಿದ್ದಾರೆ. ಅವರನ್ನು ನೆನಪಿಸಿಕೊಳ್ಳುವದೆಂದರೇ ಒಂದು ಅಪೂರ್ವ ಅನುಭವ. ಅಂತಹವರಲ್ಲಿ ಅನುಪಮಾ ನಿರಂಜನ ಅವರು ಒಬ್ಬರು. ಈ ಹೊತ್ತು ನೆನಪಿನ ಸುರುಳಿಯನ್ನು ಬಿಚ್ಚುತ್ತಾ ಹೋದೆ. ಸುಮಾರು ಮೂವತ್ತು ವರುಷಗಳ ಹಿಂದಿನ ಮಾತು. ಅದೇ ಆಗ ಅವರು ತಮ್ಮ ವೈದ್ಯಕೀಯ ಅಭ್ಯಾಸವನ್ನು ಮುಗಿಸಿ ವೃತ್ತಿಯನ್ನು ಪ್ರಾರಂಭಿಸಿದ್ದರು. ಅವರ ದವಾಖಾನೆ ನಮ್ಮ ಮನೆಯಿಂದ ಐದು ನಿಮಿಷಗಳ ಹಾದಿ. ಧಾರವಾಡದಲ್ಲಿ ಆಗ ಮಹಿಳಾ ವೈದ್ಯರು ಇರಲಿಲ್ಲವೆಂದೇ ಹೇಳಬೇಕು. ಇದ್ದರೂ ಸಹ ಅವರು ಸ್ವತಂತ್ರ ವೃತ್ತಿಯನ್ನು ಕೈಕೊಂಡಿರಲಿಲ್ಲ. ಆದ್ದರಿಂದ ನಮ್ಮ ಮನೆಯ ಸುತ್ತಮುತ್ತ - ಅಷ್ಟೇ ಏಕೆ - ಇಡೀ ಧಾರವಾಡದಲ್ಲಿಯೇ ಅವರು ಕುತೂಹಲವನ್ನು ಕೆರಳಿಸಿದ್ದರು. ಅವರನ್ನು ಭೇಟಿಯಾದ ತಕ್ಷಣ ಕಂಡು ಬರುತ್ತಿದ್ದುದು ಯಾರನ್ನೂ ಆಕರ್ಷಿಸುವಂತಹ ಅವರ ಮುಖಲಕ್ಷಣ. ದುಂಡು ಮುಖ, ಸಾಮಾನ್ಯ ಎತ್ತರ, ಹೊಳೆಯುವ ಕಣ್ಣುಗಳು. ಅವರು ಮಾತಿಗೆ ಪ್ರಾರಂಭಿಸಿದರೆ ಆಕರ್ಷಣೆ ಇನ್ನೂ ಹೆಚ್ಚುತ್ತಿತ್ತು. ಅವರ ನಿರರ್ಗಳ ಅಭಿವ್ಯಕ್ತಿಯನ್ನು ಕಂಡ ನಾನು, ಅವರನ್ನು ನಾನು ಕ್ಷೇಮಪಾಲಕಳಾಗಿ ಕೆಲಸ ಮಾಡುತ್ತಿದ್ದ ಕರ್ನಾಟಕ ಕಾಲೇಜ್ ಮಹಿಳಾ ವಸತಿಗೃಹಕ್ಕೆ ಮುಖ್ಯ ಅತಿಥಿಯಾಗಿ ಬರಬೇಕೆಂದು ಆಹ್ವಾನಿಸಿದೆ. ಅವರು ಉತ್ಸಾಹದಿಂದ ಬರಲೂ ಒಪ್ಪಿದ್ದರು. ಆದರೆ ಕೊನೆಯ ಘಳಿಗೆಯಲ್ಲಿ ಅವರಿಗೆ ಒಂದು ಹೆರಿಗೆಯ ಕೇಸು ಬಂತು. ಆ ಹೆಣ್ಣು ಮಗಳ ಪರಿಸ್ಥಿತಿಯೂ ಸ್ವಲ್ಪ ಸೂಕ್ಷ್ಮವಾಗಿತ್ತು. ತಕ್ಷಣ ಅನುಪಮಾ ಅವರು ಒಂದು ಚೀಟಿಯನ್ನು ಕಳಿಸಿ ಬರಲು ಆಗದ್ದಕ್ಕೆ ವಿಷಾದಿಸಿದ್ದರು. ನನ್ನ ವಿದ್ಯಾರ್ಥಿನಿಯರಿಗೆ ತುಂಬಾ ಬೇಜಾರು. ಅವರ ಕೆಲಸವನ್ನು ನಾನೇ ಮಾಡಬೇಕಾಯಿತು. ಆದರೆ ನಾನು ಇನ್ನೊಬ್ಬ ಅನುಪಮಾ ಆಗಲು ಸಾಧ್ಯವೆ?

ಅವರು ಧಾರವಾಡದಲ್ಲಿ ಇದ್ದದ್ದು ಕೆಲವೇ ಕೆಲವು ತಿಂಗಳು. ಹೆಣ್ಣುಮಕ್ಕಳಲ್ಲಿ ಅವರು ವಿಶ್ವಾಸವನ್ನು ಮೂಡಿಸಿದ್ದರು. ಅವರೊಂದಿಗೆ ಆತ್ಮೀಯರಾಗಿದ್ದರು. ಅವರ ಅಭಿವ್ಯಕ್ತಿ ಮತ್ತು ಅಭಿರುಚಿಯನ್ನು ಗುರುತಿಸಿದ್ದ ನಾನು ಅವರಿಗೆ ಆಗಲೇ ಡಾಕ್ಟರರ

ಸ್ಟೆಥೋದೊಂದಿಗೆ ಲೆಕ್ಕಣಿಕೆಯನ್ನೂ ಹಿಡಿಯಲು ಸೂಚಿಸಿದ್ದೆ. ಅದನ್ನು ಅವರು ಸ್ವತಃ ಕಂಡುಕೊಂಡಿರಲೂ ಸಾಕು. ಅವರು ಬೆಂಗಳೂರಿಗೆ ಹೋದ ನಂತರ ನಿರಂಜನ ಅವರ ಪ್ರಭಾವದಿಂದಲೋ ಅಥವಾ ಸ್ವಂತ ಅನಿಸಿಕೆಯಿಂದಲೋ ಬರವಣಿಗೆಯನ್ನು ಪ್ರಾರಂಭಿಸಿದರು. ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳ ಸಲುವಾಗಿ ಅವರು ಬರೆದ ಪುಸ್ತಕಗಳು ಕನ್ನಡಸಾಹಿತ್ಯಕ್ಕೆ ಅಪೂರ್ವ ಕೊಡುಗೆಯೆಂದೇ ಹೇಳಬೇಕು. ಜೊತೆಗೆ ಅವರು ಕತೆ-ಕಾದಂಬರಿಗಳನ್ನೂ ಬರೆದಿದ್ದಾರೆ.

ಅವರು ಬೆಂಗಳೂರಿಗೆ ಹೋದ ನಂತರ ಅವರನ್ನು ಕಂಡದ್ದು ಆಗೊಮ್ಮೆ. ಈಗೊಮ್ಮೆ. ಲೇಖಕಿಯರ ಸಮಾವೇಶದಲ್ಲಿಯೇ ನಾನು ಅವರನ್ನು ಕಂಡದ್ದು. ನಂತರ ಅವರ ಆರೋಗ್ಯ ಸರಿ ಇಲ್ಲದ್ದನ್ನು ಕೇಳಿ ಅವರ ಮನೆಗೂ ಕಾಣಲು ಹೋಗಿದ್ದೆ. ಅವರು ತೋರಿದ ಆ ಪ್ರಫುಲ್ಲತೆ, ಮನಸ್ಸಿನ ಧೈರ್ಯ ಯಾರೂ ಬೆರಳು ಕಚ್ಚುವಂತಹದು. 'ನಾನು ಈ ರೋಗವನ್ನು ಜಯಿಸಲೇಬೇಕು. ಬದುಕಲೇಬೇಕು. ಮಾಡುವ ಕೆಲಸ ಇನ್ನೂ ಸಾಕಷ್ಟಿದೆ' ಎಂಬ ಅವರ ವಿಶ್ವಾಸವನ್ನು ಕಂಡು ನಾನು ಅವರಿಗೆ ಮನಸ್ಸಿನಲ್ಲೇ ವಂದಿಸಿದೆ. ಅವರನ್ನು ಕಂಡು ರಾಬರ್ಟ್ ಫ್ರಾಸ್ಟನು ಬರೆದ ಎರಡು ಸಾಲುಗಳು ನನ್ನ ನೆನಪಿಗೆ ಬಂದವು. ಮಲಗುವ ಪೂರ್ವದಲ್ಲಿ ನಾನು ಇನ್ನೂ ಅನೇಕ ಮೈಲುಗಳನ್ನು ಕ್ರಮಿಸಬೇಕಾಗಿದೆ.

ಜೀವನ ಶ್ರದ್ಧೆಯ ಮನೋಬಲ

- ಭಾರತಿ ಹಾವನೂರ

ಶಾಲೆಯ ಜೀವನದ ಕೊನೆಯ ಹಂತದಲ್ಲಿರುವಾಗಲೇ ನಾನು ರಾಷ್ಟ್ರೀಯ ಸೇವಾದಳದಲ್ಲಿ ಮತ್ತು ಮುಂಬೈ ಕನ್ನಡದ ಬಾನುಲಿ ವಿಭಾಗದಲ್ಲಿ ನಿಯತ ಕಲಾಕಾರಳೂ ಆಗಿದ್ದೆ. ಪ್ರಸಿದ್ಧ ಮಾನವತಾವಾದಿ ಹಾಗೂ ರಾಷ್ಟ್ರೀಯವಾದಿ ಸಾನೇ ಗುರೂಜಿ ಯವರ ಮೆಚ್ಚಿನ ಶಿಷ್ಯಳಾಗಿ, ಅವರ ಎಲ್ಲ ಕೃತಿಗಳನ್ನೂ ಮನನ ಮಾಡುವಂತೆ ಓದಿದ್ದೆ. ಇದೇ ಸುಮಾರಿಗೆ ನಾನು ಮತ್ತು ನಮ್ಮವರು ಪರಸ್ಪರ ಮೆಚ್ಚಿ ಮದುವೆಯಾದೆವು. ಮುಂಬೈಯಲ್ಲಿ ಕೆಲವು ಉತ್ಸಾಹಿ ಯುವಕರ ಕಾಯಾ, ವಾಚಾ, ಮನಸಾ ಪ್ರಯತ್ನ ದಿಂದ 'ನುಡಿ' ಪತ್ರಿಕೆ ಜನ್ಮತಾಳಿತ್ತು. ಈ ಉತ್ಸಾಹಿ ಸಾಹಿತ್ಯೋಪಾಸಕರಲ್ಲಿ ನಮ್ಮವರು, ವ್ಯಾಸರಾಯ ಬಲ್ಲಾಳರು, ರಾಮಚಂದ್ರ ಉಚ್ಚಿಲರು, ನಾಯಕರು ಮತ್ತು ಇನ್ನೂ ಅನೇಕರು 'ನುಡಿ'ಯ ಜೀವನಾಡಿಯಾಗಿ ಕೆಲಸ ಮಾಡುತ್ತಿದ್ದರು.

ಕುಳಕುಂದ ಶಿವರಾಯರು ತಮ್ಮ ಬರಹಗಳಿಂದ, ಸ್ನೇಹಪೂರ್ಣ ವ್ಯಕ್ತಿತ್ವ ದಿಂದ ಆದಾಗಲೇ ಜನಜನಿತರಾಗಿದ್ದರು. ಮುಂಬೈ ಕನ್ನಡಿಗರಾದ ನಮಗೆಲ್ಲರಿಗೂ ಶಿವರಾಯರ ಪರಿಚಯ ಕೇಳಿ ತಿಳಿದು ಗೊತ್ತಿತ್ತು. ಅವರು ಮುಂಬೈಗೆ ಬಂದಾಗ

ಮುಖತಃ ಕಾಣುವ ಸುಯೋಗ ಬಂತು. ಅವರು **'ಲಾಲ್ ಬಾವುಟಾ'** ಎಂದು ನಮ್ಮವರು ಪರಿಚಯಿಸಿದಾಗ ಅವರೆದುರೇ ಮುಖ ಸಿಂಡರಿಸಿದ್ದೆ. ಕಮ್ಯೂನಿಸ್ಟರಿಗೆ ನಮಗೆ ಆಗ ೩೬ ಅಂಕಿಯ ಸಖ್ಯವಿತ್ತು. ನಾನಾಗ ಸೋಷಿಯಲಿಸ್ಟ್ ಪಾರ್ಟಿ 'ಸಾಧನಾ'ದಲ್ಲಿದ್ದೆ. ಆದರೆ ಶಿವರಾಯರು ಇದಾವುದನ್ನೂ ಗಮನಿಸದೆ ತಮ್ಮ ಸ್ನೇಹ ಪೂರ್ಣ ವ್ಯಕ್ತಿತ್ವದಿಂದ ಮಾತನಾಡಿದ್ದರು. ನನ್ನ ಮನಸ್ಸಿನಿಂದ 'ಲಾಲ್ ಬಾವುಟಾ' ಹಾರಿಹೋಗಿತ್ತು. ಇಂಥ ಮೋಡಿಕಾರನಿಗೂ ಒಂದು Super magnet ಇದೆ ಎಂದು ತಿಳಿದಾಗ ನನಗೆ ಅದನ್ನು ತಿಳಿಯುವ,ನೋಡುವ ಕುತೂಹಲ ಮೇರೆ ಮೀರಿತ್ತು. ರೆಕ್ಕೆ ಇದ್ದರೆ ಮೈಸೂರಿಗೇ ಹಾರಿಬಿಡುತ್ತಿದ್ದೆನೋ ಏನೋ ! ಆಗ ಅನುಪಮಾ ಮೈಸೂರಿನಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯಾಗಿದ್ದರು. ಇಷ್ಟೇ ಗುಟ್ಟು ನನಗೆ ಸಾಕಾಗಿತ್ತು. "ನಿಮ್ಮ ಆ Super magnetನ ನಾವು ಯಾವಾಗ ನೋಡೋದು ? ನಿಮ್ಮ ಆ ಅನುಪಮ ಆಸ್ತಿ ನಿಮ್ಮ ಹೆಸರಿಗೆ ಯಾವಾಗ ರಿಜಿಸ್ಟರ್ ಆಗೋದು ?" ಎಂದು ಶಿವರಾಯರನ್ನು ಕಂಡಾಗಲೆಲ್ಲಾ ನಾನು ಮಾತಿಗೆ ಪ್ರಾರಂಭಿಸುತ್ತಿದ್ದೆ. 'ಅನುಪಮಾ'ರ ಹೆಸರಿನ ಪ್ರಸ್ತಾಪದೊಡನೆಯೇ ಶಿವರಾಯರ ಮುಖ ಹುಣ್ಣಿಮೆ ಚಂದ್ರನಂತೆ, ಸೂರ್ಯನ ಕಂಡ ಕಮಲದಂತೆ ಅರಳುತ್ತಿತ್ತು.

ಡಾ। ಅನುಪಮಾರನ್ನು ಸಮಕ್ಷಮ ಕಂಡಾಗ ಈ ಮೋಡಿಕಾರಳನ್ನು ಮೆಚ್ಚಿದೆ. ಶಿವರಾಯರ ಆಯ್ಕೆ ಸಮಂಜಸವೇ ಎನಿಸಿತು. ಮೃದುಭಾಷಿಣಿ, ಸೌಮ್ಯಚಂದ್ರ ಮುಖಿ ಅನುಪಮಾ ನನಗೆ ಬಾಲ್ಯಕಾಲದ ಹಳೆ ಗೆಳತಿ ಎಂಬಷ್ಟು ಆತ್ಮೀಯರಾಗಿ ಬಿಚ್ಚು ಮನಸ್ಸಿನಿಂದ ಮಾತನಾಡಿದ್ದರು. ಇನ್ನೊಬ್ಬರ ಸದ್‌ಭಾವನೆಯೊಡನೆ ಸ್ಪಂದಿಸುವ ಅವರ ಸ್ನೇಹಶೀಲತೆಯಿಂದ ನಮ್ಮಲ್ಲಿ ಬಹುಬೇಗ ಗಾಢವಾದ ಮೈತ್ರಿ ಬೆಳೆಯಿತು.

ಅನುಪಮಾರ ಹೆರಿಗೆ ಆಸ್ಪತ್ರೆ ಮತ್ತು ಕ್ಲಿನಿಕ್ ಧಾರವಾಡದಲ್ಲೇ ಪ್ರಾರಂಭವಾಗಿತ್ತು. ನಮ್ಮ ಅವರ ಗಾಢ ಸ್ನೇಹಕ್ಕೆ ಇದು ನಾಂದಿಯಾಯಿತು. ನಾವು ಆಗ ಕರ್ನಾಟಕ ಕಲೋದ್ಧಾರಕ ಸಂಘದಲ್ಲಿ ನಾಟಕದಲ್ಲಿನ ಪ್ರಮುಖ ಘಟಕಗಳಾಗಿ ಅನೇಕ ಉತ್ತಮ ನಾಟಕಗಳನ್ನು ಪ್ರದರ್ಶಿಸಿದ್ದು ಮತ್ತು ಅದರಲ್ಲೇ ಮುಂದುವರಿದು ಧಾರವಾಡ-ಹುಬ್ಬಳ್ಳಿಗಳಲ್ಲಿ ಸಾಕಷ್ಟು ಪ್ರಸಿದ್ಧರಾಗಿದ್ದ ಕಾಲ. ಆಕಾಶವಾಣಿ ಧಾರವಾಡದ ನಾಟಕ ವಿಭಾಗದಲ್ಲೂ, ನ್ಯಾಷನಲ್ ಪ್ರೋಗ್ರಾಂಗಳಲ್ಲಿಯೂ ನಾನು ಜನಜನಿತಳಾಗಿದ್ದೆ. ನಮ್ಮವರು ಕರ್ನಾಟಕ ಯೂನಿವರ್ಸಿಟಿ ಲೈಬ್ರರಿಯಲ್ಲಿ ಅಸಿಸ್ಟೆಂಟ್ ಲೈಬ್ರೆರಿಯನ್ ಆಗಿದ್ದಲ್ಲದೆ, ಸಾಹಿತ್ಯಾಸಕ್ತರಾಗಿದ್ದರಿಂದ ನಿರಂಜನರ ಸ್ನೇಹ ಗಾಢವಾಗುತ್ತಾ ಬಂತು. ನಮ್ಮ ಧಾರವಾಡದ, ಮನೆಯ ಕಲಸವಲಕ್ಕಿ ಅನುಪಮಾ ನಿರಂಜನರಿಗೆ ತುಂಬಾ ಇಷ್ಟವಾದ ತಿಂಡಿ. ಗೇರುಸೊಪ್ಪೆಯ ಜಲಪಾತದಂತೆ ಭೋರ್ಗರೆಯುವ ನಮ್ಮ ಧಾರವಾಡದ ಭಾಷೆ ಗಂಡುಗಲಿ ಭಾಷೆಯಾದರೆ ಅನುಪಮಾರವರದು ಸೌಮ್ಯನುಡಿ.

"ಪಳದ್ಯಾದಂಥಾ ಭಾಷಾ ನಿಮ್ಮದು" ಎಂದು ನಾನು ಅವರಿಗೆ ತಮಾಷೆ ಮಾಡ್ತಿದ್ದೆ. ಅವರು ನಮ್ಮಂತೆ ಮಾತನಾಡಲು ಪ್ರಯತ್ನಿಸಿದರೂ ಬರ್ತಿರಲಿಲ್ಲ. "ಅಯ್ಯೋ ನಿಮಗೀ ಜನ್ಮದಾಗ ನಮ್ಮ ಗಂಡು ಭಾಷಾ ಬರೂದಿಲ್ಲ. ಅದಕ್ಕೂ ಪುಣ್ಯಬೇಕು. ಹೋಗ್ಲಿಬಿಡಿ" ಎಂದು ತಮಾಷೆಮಾಡಿ ಇಬ್ಬರೂ ನಗ್ತಿದ್ದೆವು. ವೈದ್ಯರನ್ನು ಸ್ನೇಹಿತರೆಂದು ಯಾರೂ ತಿಳಿಯಬಾರದು ಎಂದು ನಾನು ಹೋಮಿಯೋಪಥಿ ಪ್ರಾಕ್ಟೀಸು ಆರಂಭಿಸಿದಂದಿನಿಂದ ನನಗೆ ಖಾತ್ರಿಯಾಗಿದೆ. ಕ್ಲಿನಿಕ್‌ನ ವೇಳೆಯಲ್ಲಿ ಅವರನ್ನು ಕಾಣುವುದು ಎಂಬ ಕಟ್ಟುನಿಟ್ಟು ನಾನೆಂದೂ ಪಾಲಿಸುತ್ತಿರಲಿಲ್ಲ. ಸ್ನೇಹಿತೆಯಲ್ಲ! ಮನೆಗೇ ಹೋಗುತ್ತಿದ್ದೆ. ನಾನು ಸದಾ ಹೋಗುತ್ತಿದ್ದುದೇ ಹೊಟ್ಟೆಯ ತಕರಾರಿಗೆ. "ಭಾರತಿ, ಅವಲಕ್ಕಿ ಒಂದು ವಾರ ಬಿಟ್ಟರೆ ಔಷಧಿ ಕೊಡ್ತೇನಿ" ಎಂದು ತಮಾಷೆ ಮಾಡೋರು. "ಅವಲಕ್ಕಿ ಬಿಡೂದಾದ್ರ ನಿಮ್ಮ ಔಷಧಿ ಯಾಕ್ರಿ ಬೇಕು?" ಇದು ನನ್ನ ಉತ್ತರವಾಗಿರ್ತಿತ್ತು. ಇದು ಔಷಧಿಯ ಕೆಲಸದಂತೆ ಐದು ನಿಮಿಷಕ್ಕೇ ಮುಗೀತಿತ್ತು. ಆದರೆ ಉಳಿದ ಪಟ್ಟಾಂಗ ಮುಗಿಸಿ, ಅಲ್ಲೇ ಏನಾದರೂ ತಿಂದು ಮನೆಗೆ ಬರುವಾಗ ವೈದ್ಯರಿಗೂ ತಮ್ಮದೇ ಆದ ವೇಳೆ ಬೇರೆ ಕೆಲಸಕ್ಕೆ ಬೇಕಾಗುತ್ತದೆ ಎಂಬುದರ ಅರಿವು ನನಗೆ ಇರುತ್ತಲೇ ಇರಲಿಲ್ಲ. ಈಗ ಅದರ ನಿಷ್ಠುರ ಸತ್ಯ ತಿಳಿದಿದೆ.

ನಮ್ಮ ಮಗಳು ನಿವೇದಿತಾಳ ಹೆರಿಗೆ ಅನುಪಮಾರ ಆಸ್ಪತ್ರೆಯಲ್ಲಿಯೇ ಎಂದು ಸಹಜವಾಗಿಯೇ ನಿರ್ಧರಿಸಿದ್ದೆವು. ಅಖಿಲ ಕರ್ನಾಟಕ ನಾಟಕ ಸ್ಪರ್ಧೆಗೆ ಧಾರವಾಡದಿಂದ ಕೃಷ್ಣಕುಮಾರ ಕಲ್ಲೂರರ ನಾಟಕ "ಜಾಗೃತ ರಾಷ್ಟ್ರ" ಆಯ್ಕೆಯಾಗಿತ್ತು. ನಾನಾಗ ಗರ್ಭಿಣಿ. ಏಳು ತಿಂಗಳಾಗಿತ್ತು. ನಾಟಕದ ನಾಯಕಿಯೂ ಗರ್ಭಿಣಿಯೇ. ಹಾಗಾಗಿ ನಾನೇ ಆ ಪಾತ್ರಕ್ಕೆ ಆಯ್ಕೆಯಾಗಿದ್ದೆ. ನನ್ನ ಇನ್ನೊಬ್ಬ ಸ್ನೇಹಿತೆ ಮಾಲತಿ ಕಟ್ಟಿ ನನ್ನ ಅತ್ತೆಯ ಪಾತ್ರಕ್ಕೆ ಮತ್ತು ಸುರೇಶ್ ರಾಜಪುರೋಹಿತರು ನಾಯಕನ ಪಾತ್ರಕ್ಕೆ ಆಯ್ಕೆಯಾಗಿದ್ದರು.

ನನ್ನ ಹಿರಿಯ ಮಗ ಐದು ವರುಷದವ, ಸಂಜಯ ಮೂರು ವರುಷದವ. ಯಜಮಾನರೂ ಸಹ ಕಲೋದ್ಧಾರಕ ಸಂಘದ ಕಾರ್ಯಕರ್ತರು. ಮಕ್ಕಳ ಹಾಸಿಗೆ ದುಪ್ಪಟಿಯೊಡನೆ ಬಾಸೆಲ್ ಮಿಶನ್ ಹೈಸ್ಕೂಲ್‌ನಲ್ಲಿ ನಾಟಕದ ರಿಹರ್ಸಲ್‌ಗೆ ಹೋಗುತ್ತಿದ್ದೆವು. ಸದಾ ಹೊಟ್ಟೆಯ ಕಿರಿಕಿರಿ. ಇನ್ನೊಬ್ಬರು ಸಹಾಯಕರಿಲ್ಲದೆ. ಮನೆಯ ಸಮಸ್ತ ಜವಾಬುದಾರಿ. ಇದಲ್ಲದೆ ನಾಟಕದ ನಿತ್ಯದ ತಾಲೀಮಿನೊಡನೆ ಆ ಪಾತ್ರಕ್ಕಾಗಿ ಮಾನಸಿಕ, ದೈಹಿಕ ಸಮತೋಲನ ಕಾಯ್ದುಕೊಂಡು ಹೋಗಬೇಕಾದ ಸ್ಥಿತಿ. ತಿಳಿದವರೆಲ್ಲಾ ನನ್ನ ಆ ಸ್ಥಿತಿಯಲ್ಲಿನ ನಾಟಕದ ಹುಚ್ಚಿಗೆ ಗೇಲಿ ಮಾಡಿದ್ದರು. ಹಿತಚಿಂತಕರು ಬಿಟ್ಟುಬಿಡಲು ಹೇಳುತ್ತಿದ್ದರು. ಹಿರಿಯರು "ಹೆರಿಗೆ ಆಗೋ ತನಕ ನಾಟಕ ಎಲ್ಲೂ ನಿನ್ನ ಬಿಟ್ಟು ಓಡಿ ಹೋಗೂದಿಲ್ಲ. ಈಗ ತಣ್ಣಗ ಇರಬಾರ್ದ"? ಎಂದೂ ಗದರಿಸಿದ್ದರು.

ಆದರೆ ನಾಟಕ ನನ್ನ ಜೀವಾಳ. ಅದನ್ನು ತನ್ನ ಪ್ರತಿಭೆಯ ಕನ್ನಡಿಯಲ್ಲಿ ನೋಡಿದ್ದ ಡಾ। ಅನುಪಮಾ ನನ್ನ ದೈಹಿಕ, ಮಾನಸಿಕ ಪೋಷಣೆಯ ಹೊಣೆ ಹೊತ್ತು ನನ್ನನ್ನು ಹುರಿದುಂಬಿಸಿದ್ದರು. ಕಾಲಕಾಲಕ್ಕೆ ನನಗೆ ಬೇಕಾದ ಔಷಧೋಪಚಾರ, ಸ್ನೇಹಭರಿತ ಸಾಧು ನುಡಿಗಳೊಡನೆ, ನನಗೆ ತಗೊಳ್ಳಬೇಕಾದ ಎಚ್ಚರಿಕೆಯ ಬಗ್ಗೆಯೂ ಹೇಳಿದ್ದರು. ಹಾಸನದಲ್ಲಿ 'ಜಾಗೃತ ರಾಷ್ಟ್ರ' ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿತ್ತು. ನಾನು ಉತ್ತಮ ನಟಿಯಾಗಿ ಪುರಸ್ಕೃತಳಾಗಿದ್ದೆ. ಹೃದಯಸ್ಪರ್ಶಿ ಅಭಿನಯಕ್ಕೆ ತಲೆದೂಗದವರೇ ಇರಲಿಲ್ಲವೆಂಬಷ್ಟು ಅಭಿನಂದನೆಗಳ ಸುರಿಮಳೆ. ನಂತರ ಧಾರವಾಡದಲ್ಲೂ ಅದು ಜಯಭೇರಿ ಹೊಡೆದ ನೆನಪು. ಆದರೆ ಈ ಸಲ ನನ್ನಲ್ಲಿನ 'ಜಾಗೃತ ರಾಷ್ಟ್ರ'ದ ನಾಯಕಿಗೆ ಚೈತನ್ಯ ನೀಡಿದ ಶ್ರೇಯೋಭಾಗ ಅನುಪಮಾಗೆ ಸಂದಿತ್ತು. ನನಗಿಂತ ಅವರಿಗೇ ನನ್ನ ಬಗ್ಗೆ ಹೆಮ್ಮೆ ಎನಿಸಿತ್ತು.

"ಅನುಪಮಾ, ನನ್ನ ಮಗಳು ರಾತ್ರಿಯೆಲ್ಲಾ ನಿಮ್ಮನ್ನ ದಣಿಸಿ ನಿದ್ದೆ ಹಾಳ ಮಾಡೇ ಹುಟ್ಟುತಾಳೆ ನೋಡತಿರ್ರಿ ಬೇಕಾದ್ರೆ" ಎಂದು ನಾನವರಿಗೆ ವಿನೋದದಿಂದ ಹೇಳುತ್ತಿದ್ದ ಮಾತೇ ಸತ್ಯವಾಗಬೇಕೇ? ಅಂದು ತುಂಬಾ ಸಮಯ ಪ್ರಜ್ಞೆಯಿಂದ ಕೂಡಿದ ದಕ್ಷ ಆರೈಕೆ ಇರದಿದ್ದರೆ ನಾನು ಬೆಳಗು ಕಾಣುತ್ತಿರಲಿಲ್ಲವೇನೋ. ಡಾ। ಅನುಪಮಾ ವೈದ್ಯಕೀಯದಲ್ಲೂ ಎಂಥಾ ಸಮರ್ಥರು ಎಂಬುದಕ್ಕೆ, ನಾನು ಮತ್ತು ನಿವೇದಿತಾ ಇಬ್ಬರೂ ಅಂದು ಹೊಸಬೆಳಗು ಕಂಡದ್ದೇ ಸಾಕ್ಷಿ. ರಾತ್ರಿ ಇಡೀ ದಣಿವರೂ ಬೆಳಗ್ಗೆ ಪುನಃ ಪ್ರತಿ ದಿನದಂತೆ ಹಸನ್ಮುಖಿಯಾಗಿ ಆಸ್ಪತ್ರೆಗೆ ಬಂದಿದ್ದರು. "ಭಾರತಿ, ತುಂಬಾ ಮುದ್ದಾದ ಚೂಟಿಯಾದ ಮಗಳು ಹುಟ್ಟಿದ್ದಾಳೆ. ನಿಜವಾಗಿ ನೀವು ಹೆಮ್ಮೆ ಪಡುವಂತೆ ಆಗ್ತಾಳೆ. ನೀವು ತುಂಬಾ ಲಕ್ಕಿ ಇದ್ದೀರಾ. ರಾತ್ರಿಗಿಂತ ಎಷ್ಟು ಬೇಗ ಚೇತರಿಸಿಕೊಂಡಿದ್ದೀರಾ. ಚೆನ್ನಾಗಿ ಊಟ ಮಾಡಿ ನಿದ್ರೆ ಮಾಡ್ರಿ. ಈಗ ನತಿಂಗ್ ಟು ವರಿ" ಎಂದು ಮಾತಾಡುತ್ತಲೇ ತಮ್ಮ ಸೂಕ್ಷ್ಮ ಪರೀಕ್ಷೆಗಳನ್ನು ಮಾಡಿ ಇಂಜೆಕ್ಷನ್ ಕೊಟ್ಟಾಗಿತ್ತು.

ಇಂಥ ಸ್ನೇಹಮಯಿ ವ್ಯಕ್ತಿತ್ವದ ದಕ್ಷ ವೈದ್ಯೆಗೆ ಸಂಪತ್ತು ಕೀರ್ತಿಗಳು ಇದ್ದಲ್ಲಿಗೇ ಹುಡುಕಿಕೊಂಡು ಬಂದವು. ಕಾರ್ಯವ್ಯಾಪ್ತಿಗೆ ಬೆಂಗಳೂರು ಸಾಲದೆ, ದಿನ ರಾತ್ರಿಗಳೂ ಸಾಲದಂತಾಗಿತ್ತು.

ಚಿನ್ನಕ್ಕೆ ವಜ್ರ ಕೂಡಿಸಿ ಕಿರೀಟಾದಿ ದೇವ, ರಾಜಾಭರಣಗಳನ್ನು ಮಾಡ್ತಾರೆ. ಚಿನ್ನ ಪುಟಕ್ಕಿಡದಿದ್ದರೆ ವಜ್ರದ ಮೆರುಗು ಅದರಲ್ಲಿ ಕೂಡಿಸಲಾಗದು. ಅನುಪಮಾರ ವ್ಯಕ್ತಿತ್ವದಲ್ಲಿ ನಿರಂಜನರ ಪಾರ್ಶ್ವವಾಯುವಿನ ಆಘಾತ ಮತ್ತು ಅವರ ಸ್ವಂತ ಏಡಿಗಂತಿಯ ಅನುಭವಿಕೆ ಇವೆರಡೂ ಪುಟಕ್ಕಿಟ್ಟ ಚಿನ್ನದ ಕಿರೀಟದಂತೆ ವಜ್ರರೇಖೆಯಿಂದ ಹೊಳೆಯುತ್ತಿವೆ. ನೆಲಕ್ಕೆ ರಭಸದಿಂದ ಪುಟಿದಷ್ಟೂ ಮೇಲಕ್ಕೇರುವ ಚೆಂಡಿನಂತೆ ಅನುಪಮಾ ಈ ಆಘಾತಗಳನ್ನು ಎದುರಿಸಿದ್ದಾರೆ.

ಅನುಪಮಾರ ಜೀವನಶ್ರದ್ಧೆಯ ಮನೋಬಲದ ಮುಂದೆ ಅವರನ್ನು ಕಾಡಲು ಬಂದ ದೈಹಿಕ ಪೀಡೆಗಳು ಸೋತು ಶರಣಾಗಿವೆ. ಈಚೆಗೆ ಚಿಕಿತ್ಸೆಗೆಂದು ಮುಂಬೈಗೆ ಬಂದಿದ್ದಾಗ ನಾವೇ ನಾವಾಗಿ ಅವರ ಜೊತೆ ಕಳೆಯುವ ಆತ್ಮೀಯ ದಿನಗಳಿಗಾಗಿ ನಾನು ಹಾತೊರೆದು, ನನ್ನ ಮನೆಯಲ್ಲಿ ಅವರ ಸ್ವಾಗತಕ್ಕೆಂದು ಧಾರವಾಡದ ಅವಲಕ್ಕಿ ಮಾಡಿದ್ದೆ. ಹಿಂದೆ ನಾವು ಕಳೆದ ಸ್ನೇಹದ ಆ ದಿನಗಳ ರಸನಿಸಿಪಿನೊಡನೆ ಅವಲಕ್ಕಿ ಹಂಚಿಕೊಂಡು........ಇತ್ಯಾದಿ ಸ್ನೇಹಸಿಂಚನದ ಅಮೃತಘಳಿಗೆಗಾಗಿ ಕಾದಿದ್ದೆ. ಆದರೆ ಅವು ನನಗೆ ದಕ್ಕಲಿಲ್ಲ. ಶುಷ್ಕ ಭೇಟಿಯಾಯ್ತು. ಕಾಲಾಯ ತಸ್ಮೈ ನಮಃ ಎಂದು ನುಂಗಿಕೊಂಡಿರಬೇಕಾಯಿತು. ಆದರೆ ಆ ರಸ ಘಳಿಗೆ, ತಪ್ಪಿಹೋದ ಸುಯೋಗ ನನಗೆ ತುಂಬಾ ವಿಷಾದ ಉಂಟುಮಾಡಿದೆ. ಅದೊಂದು ಮಾಸದ ವಿಷಣ್ಣನೆನಪಾಗಿ ಉಳಿದು ಹೋಗಿದೆ.

ಬೆಂಗಳೂರಿಗೆ ಬಂದ ಮೇಲೆ ಕೂಡ ಆ ವಿಷಾದ ಹಿಂಗಿಲ್ಲ. ಇಲ್ಲಿಗೆ ಬಂದ ಬಹಳ ದಿನಗಳ ನಂತರ ಸ್ನೇಹದಾಹ ತಡೆಯದೆ ಅವರ ಮನೆಗೆ ಸೆಳೆದೊಯ್ದಿತ್ತು. ಇಬ್ಬರಲ್ಲೂ ಸ್ನೇಹದ ಅದೇ ಆವೇಗವಿತ್ತೆಂದು ತೋರುತ್ತದೆ. "ಹೇಗಿದ್ದೀರಾ" ಎಂದು ನಿರಂಜನರನ್ನು ಕೇಳಿದೆ.

"ಇನ್ನೂ ಇದ್ದೇನೆ ಸದ್ಯ. ಬನ್ನಿ. ಬಂದಿರಲ್ಲ". ಈ ಸ್ನೇಹದ ಆತ್ಮೀಯ ಆವೇಗ ನೋಡಿಯೇ ನನಗೆ ನಿರಂಜನರು ಸ್ವಸ್ಥವಾಗಿಯೇ ಇದ್ದಾರೆ ಎಂದು ಖಾತ್ರಿಯಾಯಿತು. ನಿರಂಜನರ ಮುಖಕಾಂತಿ ಹಿಂದೆ ಇದ್ದಂತೆಯೇ ಕಳಾಪೂರ್ಣವಾಗಿ ಇದ್ದಿತು.ಕಾಯಿಲೆಯ ಯಾವ ಚಿಹ್ನೆಯೂ ಅವರಲ್ಲಿ, ಅವರ ಪರಿಸರದಲ್ಲಿ ಇರಲಿಲ್ಲ. ಮನೆ. ನಾನು ಧಾರವಾಡದಲ್ಲಿ ನೋಡಿದ್ದಂತೆಯೇ ಓರಣವಾಗಿ, ಕುಟುಂಬದ ಸದಭಿರುಚಿಗೆ ತಕ್ಕಂತೆ ಕಲಾತ್ಮಕವಾಗಿ ಎಲ್ಲ ವಸ್ತುಗಳ ಜೋಡಣೆ ಇತ್ತು. ಅನುಪಮಾ ಎಲ್ಲಿಯೋ ಒಪ್ಪಿಕೊಂಡ ಸಮಾರಂಭಕ್ಕೆ ಹೊರಡುವ ಗಡಿಬಿಡಿಯಲ್ಲಿದ್ದರೂ ಇದ್ದ ವೇಳೆಯಲ್ಲಿಯೇ ಮನಬಿಚ್ಚಿ ಮಾತಾಡಿದರು. ಕಾಫಿ ಇತ್ಯಾದಿಯಾಯಿತು. ನನ್ನ ಮಗ ನಿರಂಜನರೊಡನೆ ಸಾಕಷ್ಟು ಮಾತಾಡಿದ ಅನಂತರ ಬಂದೆವು.

ಮತ್ತೊಮ್ಮೆ ಹಿಂದಿನ ತಿಂಗಳು ಶಸ್ತ್ರಚಿಕಿತ್ಸೆ ಆಗಿ ನಂತರ ಖೀಮೋಥೆರಪಿ ಚಿಕಿತ್ಸೆ ಮುಗಿದು ಅದೇ ಚೇತರಿಸಿಕೊಳ್ಳುತ್ತಿದ್ದರು. ಮಧ್ಯಾಹ್ನ ಸುಮಾರು ಹನ್ನೊಂದೂವರೆ ಸುಮಾರಿಗೆ ನಾನವರ ಮನೆಗೆ ಹೋಗಿದ್ದೆ. ಎರಡೆರಡು ಪಲ್ಯ, ಸಾರು, ಚಟ್ನಿ ಇತ್ಯಾದಿ ಅಡಿಗೆ ಸಿದ್ಧವಾಗಿತ್ತು. ಅನುಪಮಾ ನನ್ನನ್ನೂ ಅಡಿಗೆ ಮನೆಗೆ ಕರೆದು ಚಪಾತಿಗೆ ಅಣಿ ಮಾಡಿಕೊಳ್ಳುತ್ತಿದ್ದರು. "ಈ ಅಡಿಗೆ ಸೀಮಾಳ ಕೈಚಳಕವೇ?" ಎಂದು ಕೇಳಿದಾಗ "ಅವಳ್ಯಾಕೆ ಮಾಡಬೇಕು? ನನಗೆ ಮಾಡಲು ಸಾಧ್ಯವಿದ್ದಾಗ?" ಎಂದು ಬಿಟ್ಟರು.ಮೊದಲ ಶಸ್ತ್ರಚಿಕಿತ್ಸೆ ಆದಾಗ ವರ್ಷಾನುಗಟ್ಟಲೆ ಅಡಿಗೆಮನೆ ಕಡೆ ತಲೆಹಾಕದೇ

ಗರಬಡಿದವರಂತೆ ಮುಖ ಹೊತ್ತು ಹೊರಗೇ ಇದ್ದವರನ್ನು ನಾನು ನೋಡಿದ್ದೇನೆ. "ನಾನು ನಿನ್ನನ್ನು ಮುಟ್ಟೋಲ್ಲ ತಾಯಿ ಇಷ್ಟು ಬೇಗ" ಎಂದು ಸಾಕ್ಷಾತ್ ಯಮ ದೂತರೆ ಬಂದು ಹೇಳಿದರೂ ಮೃತ್ಯುಭಯ ಹೋಗಲಾರದಷ್ಟು ಆಘಾತ ರೋಗಿಗಳ ಮನದಲ್ಲಿ ಬೇರೂರಿರುತ್ತದೆ. ಅಂಥದರಲ್ಲಿ ಮೂರು ಬಾರಿ ಶಸ್ತ್ರಚಿಕಿತ್ಸೆಗೆ ಗುರಿಯಾಗಿ, ನರಕಸದೃಶ ಎಲ್ಲಾ ಥೆರಪಿಗಳನ್ನು ಮುಗಿಸಿಯೂ ಅನುಪಮಾ ತನ್ನ 'ಭೋಜ್ಯೇಷು ಮಾತಾ' ಎಂಬ ಕರ್ತವ್ಯದಲ್ಲಿ ಇಷ್ಟೊಂದು ಶ್ರದ್ಧೆ ಇಟ್ಟಿದ್ದಾರಲ್ಲ ಎಂದು ನಾನು ಬೆಕ್ಕಸಬೆರಗಾಗಿ ಅವರ ಕೆಲಸವನ್ನೇ ನೋಡುತ್ತಾ ನಿಂತಿದ್ದೆ. ಬಿಸಿ ಚಪಾತಿ, ಅಡಿಗೆಯೆಲ್ಲವನ್ನೂ ತಟ್ಟೆಗೆ ಅಣಿಮಾಡಿ ಗಂಡ ಮಗಳನ್ನು ಊಟಕ್ಕೆಬ್ಬಿಸಿದ್ದರು ಅನುಪಮಾ. ಅಂದು ನಾನು ಅಲ್ಲಿಯೇ ಹತ್ತಿರವಿದ್ದ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಪ್ರಸಾದಕ್ಕೆ ಹೋಗು-ವವಳಿದ್ದೆ. ಆದ್ದರಿಂದ ನಾನು ಊಟ ಮಾಡಲಿಲ್ಲ. ಅನುಪಮಾ ಕೊಟ್ಟ ಪಾನಕ ಸ್ನೇಹರುಚಿಯೇನೂ ಕಮ್ಮಿ ಇರಲಿಲ್ಲ. ಬೆಲ್ಲದ ರುಚಿ ಬೆಲ್ಲಕ್ಕೇನೆ! ಬೇರೆ ಉಪಮೆ ಇಲ್ಲ ಎಂಬಂತೆ ಸ್ನೇಹದ ರುಚಿ!

"ಗೃಹಿಣೀ ಗೃಹಮುಚ್ಯತೇ....". ಈ ಸೂತ್ರವನ್ನು ಆದ್ಯವಾಗಿರಿಸಿಕೊಂಡೇ ಅನುಪಮಾ ತಮ್ಮ ದೀಕ್ಷೆಯನ್ನು ವಿಸ್ತರಿಸಿಕೊಂಡಿದ್ದಾರೆ. ನಿರಂತರವಾದ ಹುರುಪು. ಪಕ್ಷದ ಅಹಂ ಪ್ರತಿಪಾದನೆಯಿಂದ ವಿಕೃತಗೊಂಡ ಧರ್ಮದ ಸಂಬಂಧ ಸ್ವರೂಪ ತೊಲಗಲಿ. ಪರಸ್ಪರ ಸುಖದುಃಖಗಳಿಗೆ ಸ್ಪಂದಿಸಿ ಬಾಳುವ ಮಾನವೀಯ ತತ್ವದ ಕುಟುಂಬ ಜೀವನದ ನಿಜವಾದ ಧರ್ಮದ ಸ್ವರೂಪ ನಮ್ಮಲ್ಲಿ ಜಾಗೃತವಾಗಲಿ ಎಂಬ ತತ್ವದ ದೀಕ್ಷಾಬದ್ಧರಾಗಿದ್ದಾರೆ ಅನುಪಮಾ. ಈ ಶ್ರದ್ಧೆಯಿಂದ ಅವರು ಜೀವನವನ್ನು ಯಜ್ಞವನ್ನಾಗಿಸಿ ತಮ್ಮ ಪ್ರತಿ ಕ್ಷಣವನ್ನೂ ಅದಕ್ಕೆ. ಅದರ ಚಿಂತನದಲ್ಲಿ ಆಹುತಿ ಮಾಡುತ್ತಿದ್ದಾರೆ. ಅವರ ಈ ಜೀವನಶ್ರದ್ಧೆಯು ಮನೋಬಲದ ರಾಜಯೋಗ ಅವರನ್ನು ಎಲ್ಲಾ ವಿಪತ್ತುಗಳಲ್ಲಿಯೂ ಜಯಶೀಲರನ್ನಾಗಿಸಿದೆ.

ದುರ್ಬಲ ಸಮಾಜ ವ್ಯವಸ್ಥೆ ಮತ್ತು ಬಾಲ್ಯದಿಂದಲೇ ಬೇಕಾಬಿಟ್ಟಿಯಾಗಿ ಬೆಳೆದ ಇಂದಿನ ಯುವ ಜನಾಂಗದ ಕುಟುಂಬಗಳಲ್ಲಿ ಸ್ವಯಂಕೃತ ಅಪರಾಧ ಮತ್ತು ವಿಧಿ ತಂದ ವಿಪತ್ತು ಇವೆರಡರಿಂದಲೂ ಜರ್ಜರಿತರಾಗಿ ನೈರಾಶ್ಯದಿಂದ ಮನೋವಿಕಲ್ಪಕ್ಕೆ ದಾಡಿ ಮಾಡಿಕೊಳ್ಳುವುದು ಸಾಮಾನ್ಯವಾಗಿದೆ. ಇಂಥವರಿಗೆ ಮಾರ್ಗದರ್ಶಿಯಾಗಿ, ಜೀವನದಲ್ಲಿನ ಮನೋಬಲಕ್ಕೆ, ಆತ್ಮಸ್ಥೈರ್ಯಕ್ಕೆ, ಹುರುಪು ಉತ್ಸಾಹಗಳ ಚಿಲುಮೆಯಾಗಿ, ಸ್ಫೂರ್ತಿಯ ಸೆಲೆಯಾಗಿ, ಆದರ್ಶಗಳ, ಪ್ರೇಮ, ಸೌಮನ್ಯದ ಪ್ರತಿಮೆಯಾಗಿ ಅನುಪಮಾರವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯಲ್ಲಿ ನಡೆದರೆ ಜೀವನದಲ್ಲಿ ಬಂದ, ಬರುವ ಎಲ್ಲಾ ಕಷ್ಟಸುಖಗಳನ್ನು ಸಮಸ್ಥಿತಿಯಲ್ಲಿ ಸ್ವೀಕರಿಸಿ, ಅನುಭವಿಸುವ ಆತ್ಮಬಲ ಖಂಡಿತ ಒದಗಿ ಬರುವುದು.

ವ್ಯಕ್ತಿಯಲ್ಲ; ಆಕೆ ಒಂದು ಶಕ್ತಿ

- 'ಗಂಗಾ' ಪಾದೇಕಲ್

೧೯೮೪ನೇ ಇಸವಿಯ ಆರಂಭದಲ್ಲಿ ನಾನು ಮಾನಸಿಕವಾಗಿ ತುಂಬಾ ಬಳಲಿದ್ದೆ. ಉಣ್ಣಲು ಕೊರತೆ ಇರಲಿಲ್ಲ ನಿಜ. ಆದರೆ ಬದುಕಿನ ಆಧಾರ ಸ್ತಂಭವನ್ನೇ ಕಳೆದುಕೊಂಡಿದ್ದೆ. ನನ್ನ ಪತಿ ಗತಿಸಿ ಆಗ್ಗೆ ಆರು ತಿಂಗಳಾಗುತ್ತ ಬರುತ್ತಿತ್ತು. ಒಂದು ದಿನ ಬೇಸರ ಕಳೆಯಲು ಹಳೇ ಕಡತ ಮಗುಚುತ್ತಿದ್ದಾಗ ಸಿಕ್ಕಿತು ಆ ವಿಳಾಸ. ಅದು 'ತರಂಗ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಹರಿದು ಬಂದು, ಎಲ್ಲರ ಮನಗೆದ್ದ ಸಿಹಿ-ಕಹಿಯ ಕರ್ತೃ ಅನುಪಮಾ ನಿರಂಜನ ಅವರದು. ಆಗ ಅವರಿಗೆ ನನ್ನ ಮೆಚ್ಚುಗೆ ತಿಳಿಸಲೆಂದು 'ತರಂಗ'ದಲ್ಲಿದ್ದ ಅವರ ವಿಳಾಸವನ್ನು ಬರೆದುಕೊಂಡಿದ್ದೆ. ನಾನಾ ಕಾರಣಾಂತರಗಳಿಂದ ಅವರಿಗೆ ಪತ್ರ ಬರೆದೇ ಇರಲಿಲ್ಲ. ಆ ವಿಳಾಸ ಕಾಣುತ್ತಲೂ ಮತ್ತೆ ಅದೆಲ್ಲ ನೆನಪಾಯ್ತು. ಯಾಕೆ ಅವರಿಗೆ ಈಗ ಬರೆಯಬಾರದೆನ್ನಿಸಿ, ಆ ಘಳಿಗೆಯಲ್ಲಿಯೇ ಬರೆದೂ ಬಿಟ್ಟೆ. ಆದರೆ, ವಾಸ್ತವಕ್ಕೂ ಅವರು ಆ ಪತ್ರಕ್ಕೆ ಉತ್ತರಿಸಿಯಾರೆಂದು ನಾನು ನಂಬಿರಲಿಲ್ಲ. ಆದ್ದರಿಂದಲೇ ಆ ನಿರೀಕ್ಷೆಯಲ್ಲಿ ನಾನಿರಲಿಲ್ಲ. ಆದರೆ ನನ್ನ ಯೋಚನೆಗೆ ವಿರುದ್ಧವಾಗಿ ಮರುಟಪ್ಪಾಲಿಗೇ ಬಂತು ಅವರ ಉತ್ತರ. ಅಂದಿನಿಂದ ಇಂದಿನವರೆಗೂ ನನ್ನ ಅವರ ಮಧ್ಯೆ ಪತ್ರ ವ್ಯವಹಾರ ನಡೆದೇ ಇದೆ. ಸಾಹಿತ್ಯಲೋಕದಲ್ಲಿ ಅವರಿರುವ ಎತ್ತರಕ್ಕೂ, ನಾನಿರುವ ತಗ್ಗಿಗೂ ಇರುವ ಅಂತರವನ್ನು ಗಮನಿಸಿದಲ್ಲಿ ಈ ಘಟನೆ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಆಗುವುದರಲ್ಲಿ ಯಾವುದೇ ಸಂದೇಹ ಇಲ್ಲವೆಂದು ನನ್ನ ನಂಬಿಕೆ. ಹಾಗೆ ನೋಡಿದರೆ ನನಗೆ ಅವರ ಪರಿಚಯ, ಅವರ ಸಾಹಿತ್ಯಕೃತಿಗಳ ಮೂಲಕ ಮೊದಲೇ ಆಗಿತ್ತು. ಅವರ ಮೊದಲ ಕಥಾಸಂಕಲನ 'ಕಲ್ಯಾಣಿ' ನಮ್ಮ ಮನೆಗೆ ಬಂದಾಗ ನಾನಿನ್ನೂ ಎಳೆಯ ಹುಡುಗಿ. ಚಂದಮಾಮ, ಬಾಲಮಿತ್ರಗಳ ಜತೆಯಲ್ಲಿ ಆಗ ಅದನ್ನೂ ಓದಿದ ನೆನಪಿದೆ. ಆಗ ಅದೆಷ್ಟು ಅರ್ಥ ಆಗಿತ್ತೋ? ಅಂತೂ ಆಗಲ್ಲವಾದರೂ, ಆಮೇಲಾಮೇಲೆ ಅವರ ಸಾಹಿತ್ಯಿಕ ಧೋರಣೆಯನ್ನು, ಜೀವನ ದೃಷ್ಟಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ.

ಅನುಪಮಾ ಅವರು ಸ್ತ್ರೀ ಪಕ್ಷಪಾತಿ. ಅವರ ಬಗ್ಗೆ ಸ್ವಲ್ಪ 'ಅತಿ' ಎನ್ನಿಸುವಂತೇ ಅವರು ಬರೆಯುತ್ತಾರೆಂಬ ಟೀಕೆಯೂ ಅಲ್ಲಲ್ಲಿ ಕೇಳಿದ್ದುಂಟು. ಆದರೆ ನನ್ನ ಅಭಿಪ್ರಾಯದಂತೆ, ಆಕೆ ಸ್ತ್ರೀ ಪಕ್ಷಪಾತಿ ನಿಜ. ಆದರೆ ಎಲ್ಲಿ? ನಿಜವಾದ ಅರ್ಹತೆ ಇದ್ದೂ ಎಲ್ಲಿ ಅವಳಿಗೆ ಗೌರವ ಇಲ್ಲವೋ, ನ್ಯಾಯವಾಗಿ ಸಲ್ಲಬೇಕಾದ ಸಮ್ಮಾನ ಸಲ್ಲುವುದಿಲ್ಲವೋ ಅಲ್ಲಿ ಮಾತ್ರವೇ ಆಕೆ ಸ್ತ್ರೀ ಪಕ್ಷಪಾತಿ. ಹೆಚ್ಚಿನ ಆಕೆಯ ಕೃತಿಗಳಲ್ಲೂ ಅವರ ಈ ಪ್ರತಿಭಟನೆಯ ದನಿಯನ್ನು ನಾವು ಕಾಣಬಹುದು. ಪುರಾಣಕಾಲದಲ್ಲೂ ಸ್ತ್ರೀಯರ

ಶೋಷಣೆ ನಡೆಯುತ್ತಿತ್ತು ಎಂಬುದಕ್ಕೆ ನಿದರ್ಶನವಾಗಿ ಆಕೆ ಬರೆದ 'ಮಾಧವಿ' ಒಂದು ಶ್ರೇಷ್ಠ ಕೃತಿ. ಹೆಣ್ಣು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೆಯಾಗಿದ್ದಾಗಲೂ ಅವಳನ್ನು ವ್ಯವಸ್ಥಿತವಾಗಿ ಹೇಗೆ ಶೋಷಣೆಗೆ ಒಳಪಡಿಸಲಾಯಿತೆಂಬುದನ್ನು ಈ ಕೃತಿ ಸಮರ್ಥವಾಗಿ ನಿರೂಪಿಸುತ್ತದೆ. ಮಾಧವಿಯಲ್ಲದೇ, ಅವರ ಇನ್ನಿತರ ಎಲ್ಲ ಸಾಹಿತ್ಯ ಕೃತಿಗಳಲ್ಲಿಯೂ ವ್ಯಕ್ತವಾಗುವುದು ಭಾರತೀಯ ಸ್ತ್ರೀಯರ ಸ್ಥಿತಿ, ಗತಿಗಳ ಬಗ್ಗೆ ಆಕೆಗಿರುವ ಪ್ರಾಮಾಣಿಕ ಕಳಕಳಿ, ನೈಜ ಕಾಳಜಿ.

ಅನುಪಮಾರ ಬಗ್ಗೆ ಬರೆಯುವಾಗ ಬಿಡಲು ಬಾರದಂಥ ಒಂದು ವಿಚಾರ ಇದೆ. ಅದು ಅವರ ವೈದ್ಯಕೀಯ ಲೇಖನಮಾಲೆ. ನನಗೆ ತಿಳಿದಂತೆ ಲೇಖಕಿಯರಲ್ಲಿ ವೈದ್ಯಕೀಯ ಲೇಖನಗಳನ್ನು ಬರೆದವರಲ್ಲಿ ಅವರೇ ಮೊದಲಿಗರು. ಕಲಿತ ವಿದ್ಯೆಯನ್ನು ಬರೀ ಹಣಗಳಿಕೆಗಲ್ಲದೇ, ಜನಹಿತಕ್ಕಾಗಿಯೂ ಬಳಸಿದ ಆಕೆಯ ಹಾದಿ, ಇದೀಗ ಹೆಚ್ಚಿನ ವೈದ್ಯರುಗಳಿಗೆ ಮೇಲ್ಪಂಕ್ತಿಯಾಗಿದೆ ಎಂಬುದನ್ನು ನೆನೆದಾಗ ಆಕೆಯ ಬಗ್ಗೆ 'ಹೆಮ್ಮೆ' ಎನಿಸುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ, ಅನುಪಮಾ ಒಬ್ಬ ವ್ಯಕ್ತಿಯಲ್ಲ, ಶಕ್ತಿ. ಸಾಹಿತ್ಯಲೋಕದಲ್ಲಿ ಆಕೆ ಏರಿದ ಎತ್ತರ, ಬರೇ ಸಾಹಿತ್ಯಕೃತಿಗಳಿಂದಾಗಿದ್ದಲ್ಲ. ಕರ್ನಾಟಕದ ಜನತೆ ಅವರನ್ನು ಅಲ್ಲಿಗೆ ಏರಿಸಿದುದು ಅವರ ಸನ್ನಡತೆಯಿಂದ, ಹೃದಯ ವೈಶಾಲ್ಯದಿಂದ, ಹಿರಿಯ ಕಿರಿಯರೆನ್ನದೇ, ಬಡವ ಬಲ್ಲಿದರೆನ್ನದೇ ಎಲ್ಲರನ್ನೂ ಸಮನಾಗಿ ನೋಡುವ ದೃಷ್ಟಿಯಿಂದ, ಮಾನವರಲ್ಲಿ, ಮಾನವತೆಯಲ್ಲಿ ಆಕೆಗಿರುವ ಪ್ರಾಮಾಣಿಕ ನಂಬಿಕೆಯಿಂದ. ಆದ್ದರಿಂದಲೇ ಆಕೆ ನಮ್ಮಂತಹ ಕಿರಿಯ ಬರಹಗಾರ್ತಿಯರಿಗೆ ಆತ್ಮೀಯ ಅಕ್ಕನಾಗಿದ್ದಾರೆ.

ಪ್ರಸನ್ನ ವ್ಯಕ್ತಿತ್ವ ೩

-ವಿ. ಪಾಂ. ದೇವುಳಗಾಂವಕರ

ಪ್ರತ್ಯಕ್ಷ ಪರಿಚಯಕ್ಕಿಂತ ಮೊದಲು ಡಾ। ಅನುಪಮಾ ಅವರು ತಮ್ಮ ಕಥೆಗಳ ಮೂಲಕ ನನಗೆ ಪರಿಚಿತರಾಗಿದ್ದರು. ಕನ್ನಡದ ಲೇಖಕ ಲೇಖಕಿಯರ ಪರಿಚಯ ನಮ್ಮ ಮರಾಠಿ ಓದುಗರಿಗೂ ಆಗಲೆಂಬ ಇಚ್ಛೆಯಿಂದ, ಕನ್ನಡದ ಸಣ್ಣ ಕಥೆಗಳನ್ನು ನಾನು ಮರಾಠಿಗೆ ಅನುವಾದಿಸುವ ಹವ್ಯಾಸವನ್ನಿಟ್ಟುಕೊಂಡಿದ್ದೇನೆ. ಇಂಥದೇ ಒಂದು ಸಮಯದಲ್ಲಿ ಡಾ। ಅನುಪಮಾ ನಿರಂಜನರ "ಪಾಲಹಳ್ಳಿ ಮತ್ತೂ ಪ್ಯಾರಿಸ್" ಎಂಬ ಕಥೆ ನನ್ನ ಕಣ್ಣಿಗೆ ಬಿದ್ದಿತು. ತುಂಬ ಸುಂದರ ಶೈಲಿಯ ಆ ಕಥೆ ಯಾರನ್ನಾದರೂ ವಿಚಾರ ಮಾಡಲು ಪ್ರೇರೇಪಿಸುವಂಥದಾಗಿತ್ತು. ಈ ಕಥೆಯನ್ನು ಮರಾಠಿಗೆ ಅನುವಾದ

ಮಾಡುವುದರ ಸಲುವಾಗಿ ಶ್ರೀಮತಿ ನಿರಂಜನರ ಅನುಮತಿಯನ್ನು ಕೋರಿ ಪತ್ರ ಬರೆದೆ. ಅದಕ್ಕೆ ಅವರ ಆತ್ಮೀಯ ಉತ್ತರ ಸಿಕ್ಕಿತು. ಹಾಗೆಯೇ ಮರಾಠಿಯ "ಕಥಾಂಶು" ಎಂಬ ಮಾಸಪತ್ರಿಕೆಯಲ್ಲಿ ಆ ಕತೆ ಪ್ರಕಟವಾಯಿತು. ಈ ಅನುವಾದ ವನ್ನು ನೋಡಿ ತಮ್ಮ ಮೆಚ್ಚುಗೆಯ ಪತ್ರವನ್ನೂ ಕಳುಹಿಸಿದರು. ಇದರಿಂದ ನನಗೆ ಬಹಳ ಸಮಾಧಾನವಾಯಿತು. ಏಕೆಂದರೆ, ಮೂಲಕೃತಿಯಲ್ಲಿರುವ ಭಾವ ಮತ್ತು ಪ್ರಭಾವ ಅನುವಾದದ ಕೃತಿಯಲ್ಲಿ ಮೂಡಿ ಬರುವುದು ಅತ್ಯಾವಶ್ಯಕವೆಂದು ನಾನು ಭಾವಿಸುತ್ತೇನೆ.

ಈ ಪತ್ರವ್ಯವಹಾರದಿಂದ ನನ್ನ ಮತ್ತು ಅವರ ಪರಿಚಯ ದೃಢವಾಯಿತು. ಇದಾದ ಕೆಲವೇ ದಿನಗಳಲ್ಲಿ ಅವರ ಪ್ರತ್ಯಕ್ಷ ಪರಿಚಯವಾಗುವ ಸದವಕಾಶವೂ ಸಿಕ್ಕಿತು. ತಮ್ಮ ವೈಶಿಷ್ಟ್ಯಪೂರ್ಣ ಬರಹದಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆಯು ತ್ತಿರುವ ಶ್ರೀಮತಿ ಸರಿತಾ ಕುಸುಮಾಕರ್ ದೇಸಾಯಿಯವರು ಒಂದು ಕಾರ್ಯಕ್ರಮ ವನ್ನೇರ್ಪಡಿಸಿದರು. ಕಾರ್ಯಕ್ರಮದ ಅಂಗವಾಗಿ ಶ್ರೀಮತಿ ಅನುಪಮಾ ನಿರಂಜನರ ಸಾಹಿತ್ಯವನ್ನು ಕುರಿತು ವಿಚಾರಗೋಷ್ಠಿಗಳನ್ನೇರ್ಪಡಿಸಿದ್ದರು. ಇದೇ ಕಾರಣಕ್ಕಾಗಿ ಶ್ರೀಮತಿ ನಿರಂಜನರನ್ನು ಇಲ್ಲಿ ಬರಮಾಡಿಕೊಂಡು, ಅವರ ಸತ್ಕಾರ ಸಮಾರಂಭ ವನ್ನೂ ಯೋಜಿಸಿದ್ದರು. ಶ್ರೀಮತಿಯವರ ಸಾಹಿತ್ಯದ ಮೇಲೆ ನಡೆಸಿದ ವಿಚಾರ ಗೋಷ್ಠಿಯನ್ನು ಸ್ವತಃ ಲೇಖಕಿಯೇ ಶ್ರೋತೃವಾಗಿ ಕೇಳುತ್ತಿದ್ದುದು ಈ ಕಾರ್ಯಕ್ರಮದ ವೈಶಿಷ್ಟ್ಯವೆಂದೇ ಹೇಳಬೇಕು. ಈ ವಿಚಾರ ಸಂಕಿರಣ ಕಾರ್ಯಕ್ರಮದಿಂದ ಶ್ರೀಮತಿಯವರ ಪೂರ್ಣ ಪರಿಚಯ ನನಗಾಯಿತು. ಗುಲಬರ್ಗಾದ ವಿವಿಧ ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ವತಿಯಿಂದ ಶ್ರೀಮತಿ ಅನುಪಮಾರವರ ಸತ್ಕಾರವೂ ಆಯಿತು. ಇದಕ್ಕುತ್ತರವಾಗಿ ಅವರು ಸಮಯೋಚಿತ ಮತ್ತು ವಿನಯಪೂರ್ಣ ಕೃತಜ್ಞತೆಗಳನ್ನು ಅರ್ಪಿಸಿದರು. ಜೊತೆಗೆ ತಮ್ಮ ಸಾಹಿತ್ಯಿಕ ಕಾರ್ಯದ ಪ್ರಯಾಸ ಹಾಗೂ ಪ್ರಮಾಣ ವನ್ನು ನಮ್ಮೆಲ್ಲರೆದುರು ಮಂಡಿಸಿದರು. ಇದರಿಂದ ನನ್ನಂಥ ಇತ್ತೀಚಿನ ಕನ್ನಡ ಸಾಹಿತ್ಯವನ್ನು ಪರಿಚಯ ಮಾಡಿಕೊಳ್ಳುವವರಿಗೆ ಅವರ ಯಶಸ್ಸಿನ ಗುಟ್ಟು ತಿಳಿಯಿತು. ಜೀವನದ ವಿವಿಧ ಪ್ರಕಾರಗಳಲ್ಲಿ ಪಡೆದಿರುವ ಸೂಕ್ಷ್ಮ ಅನುಭವ, ದಲಿತರ ಬಗೆಗಿರುವ ಅಪಾರ ಕರುಣೆ, ದಲಿತರ ಮೇಲೆ ನಡೆದಿರುವ ಅತ್ಯಾಚಾರ ,ಅನ್ಯಾಯಗಳ ವಿರುದ್ಧ ಉಂಟಾಗಿರುವ ಸಾತ್ವಿಕ ಕ್ರೋಧವನ್ನು ಸಮಾಜದೆದುರು ಪ್ರಕಟಿಸಲು ಅವರು ಆರಿಸಿರುವ ಈ ಸಾಹಿತ್ಯಕ್ಷೇತ್ರವು ಧನ್ಯವೇ ಸರಿ. ಈ ಘಟನೆಯ ನಂತರ ಅವರ ಬಗೆಗಿನ ನನ್ನ ಆದರ ಇನ್ನೂ ಹೆಚ್ಚಿತು.

ಈ ಕಾರ್ಯಕ್ರಮದ ನಂತರ ಶ್ರೀಮತಿ ಸರಿತಾರವರ ಮುಖಾಂತರ ನನ್ನ ಮತ್ತು ಶ್ರೀಮತಿ ನಿರಂಜನರ ಮುಖತಃ ಭೇಟಿಯಾಯಿತು, ಈ ಭೇಟಿಯಲ್ಲಿ ಅವರು ತಪ್ಪದೇ ನನ್ನ ಅನುವಾದ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನನ್ನ

ಆಹ್ವಾನದ ಮೇರೆಗೆ ಮರುದಿನ ಗುಲಬರ್ಗಾದ "ಮರಾಠಿ ಸಾಹಿತ್ಯ ಮಂಡಳಿ"ಕ್ಕೆ ಸಂದರ್ಶನವನ್ನು ನೀಡಿದರು. ಕಳೆದ ೪೫ ವರ್ಷಗಳಿಂದ ನಮ್ಮ ಮಂಡಳವು ನಡೆಸುತ್ತಿರುವ ಭಾಷಾಭಗಿನಿಯರ ಸದೃಢ ಬಾಂಧವ್ಯದ ಕಾರ್ಯಕಲಾಪಗಳನ್ನು ಕೇಳಿ ಸಂತೋಷಿಸಿದರು. ನಮ್ಮ ಸತ್ಕಾರಕ್ಕೆ ಆನಂದಿಸುತ್ತ ಒಂದು ಚಿಕ್ಕ ಚೊಕ್ಕವಾದ ಮಾರ್ಗದರ್ಶಕ ಭಾಷಣವನ್ನು ನೀಡಿದರು.

ಈ ರೀತಿಯಾದ ಅವರ ಭೇಟಿಯಿಂದ ಅವರ ವ್ಯಕ್ತಿತ್ವದ ಇನ್ನಷ್ಟು ಪರಿಚಯಕ್ಕೆ ನನ್ನ ಮನಸ್ಸು ಹಾತೊರೆಯತೊಡಗಿತು. ಇದೇ ಸಮಯದಲ್ಲಿ ನನಗೆ ಸಿಕ್ಕಿದ್ದು ಅವರ ಆತ್ಮಕಥೆ "ಸೆನಪು: ಸಿಹಿ - ಕಹಿ". ಇದರಲ್ಲಿ ಆತ್ಮಸ್ತುತಿಗೇ ಆಗಲಿ ಅಥವಾ ಆತ್ಮನಿಂದನೆಗಾಗಲಿ ಅವಕಾಶವನ್ನೀಯದೇ ವಾಸ್ತವಿಕ ಜೀವನದ ಏಳುಬೀಳುಗಳ ಪ್ರಾಮಾಣಿಕ ಘಟನೆಗಳಿವೆ. ಒಂದು ಒಳ್ಳೆಯ ಕಲಾಕೃತಿಯ ಯಶಸ್ಸಿನ ಮಾನದಂಡವೆಂದರೆ, ಓದುಗರ ಮನಸ್ಸಿನಲ್ಲಿ ಕಥಾವಸ್ತುವಿನ ಬಗ್ಗೆ ಜಿಜ್ಞಾಸೆ, ಉತ್ಕಂಠತೆ ಹಾಗೂ ವಿಸ್ಮಯಗಳನ್ನು ಜಾಗೃತಗೊಳಿಸುತ್ತ ಕೊನೆಯ ವರೆಗೂ ಉಳಿಸಿಕೊಂಡು ಹೋಗುವದು. ಇಂಥ ಒರೆಗಲ್ಲಿಗೆ ತಿಕ್ಕಿ ಪ್ರಜ್ವಲಿಸುವ ಆತ್ಮಕಥೆ ಇವರದು.

ಈ ಪುಸ್ತಕ ಓದಿದುದರಿಂದ ನಿರಂಜನ ಕುಟುಂಬದವರೆಲ್ಲರ ಸೂಕ್ಷ್ಮ ಪರಿಚಯ ನನಗಾಯಿತು. ಈ ಕಥೆಯ ನಾಯಕ ಶ್ರೀ ನಿರಂಜನ ಮತ್ತು ನಾಯಿಕೆ ಶ್ರೀಮತಿ ಅನುಪಮಾ ಇರ್ವರೂ ಧೀರೋದಾತ್ತ, ಅನುರೂಪರಾದ ಅಪರೂಪದ ದಂಪತಿಗಳು. ನಿರಂಜನ ದಂಪತಿಗಳು ಪ್ರಪಂಚದ ಯಾವುದೇ ಧರ್ಮದ ಕಟ್ಟುಪಾಡಿಗೆ ಒಳಗಾಗದಿದ್ದರೂ ಸಹ ಮಾನವಧರ್ಮದ ಉಚ್ಚ ಮೌಲ್ಯಗಳ ಕಟ್ಟಿಗೆ ನಿಶ್ಚಯವಾಗಿಯೂ ಒಳಗಾಗಿದ್ದಾರೆ. ಇವರಿಬ್ಬರೂ ಶಾರೀರಿಕವಾಗಿ ಜರ್ಝರಿತರಾಗಿದ್ದರೂ ಸಹ ಮಾನಸಿಕವಾಗಿ ಹಿಮಾಲಯದಷ್ಟು ಅಚಲರು ಹಾಗೂ ಉತ್ಸಾಹಿಗಳು. ಜೀವನದ ಕಷ್ಟನಷ್ಟಗಳಿಗೆ ಎದೆಗುಂದಿ ಜೀವನವನ್ನು ಜಿಗುಪ್ಸೆಯಿಂದ ನೋಡದೇ, ಜೀವನವನ್ನು ಹೇಗೆ ಗೌರವಯುತವಾಗಿ ಪ್ರೀತಿಸಬೇಕೆಂಬುದನ್ನು ಕಲಿತುಕೊಂಡವರಿವರು. ಇದಕ್ಕೆ ಪೂರಕವಾಗಿ ಶ್ರೀಮತಿಯವರ ಮಾತಿನಲ್ಲಿ ಹೇಳಬೇಕೆಂದರೆ - "ನನಗಾಗಿ ಬಾಳುವದೆಂದರ್ಥವಲ್ಲ. ನಾಲ್ಕು ಜನರಿಗೆ ಉಪಯುಕ್ತವಾಗುವ ಹಾಗೆ ಬಾಳಬೇಕು. ಈ ಕೆಲಸವನ್ನು ನನ್ನ ವೈದ್ಯಕೀಯ ಸೇವೆಯಿಂದ ಮಾಡಬಹುದು. ಹಾಗೂ ನನ್ನ ಬರಹದಿಂದ ಸಾಧಿಸಬಹುದು". ತತ್ವನಿಷ್ಠೆಯ ದಾರಿಯಲ್ಲಿ ಜೀವನದ ಗುರಿಯನ್ನು ಸಾಧಿಸ ಹೊರಟಿರುವ ಈ ಜೋಡಿ ಯಾತ್ರಿಕರು ಎಲ್ಲರಿಗೂ ಮಾರ್ಗದರ್ಶಕಪ್ರಾಯರು.

ಸಾಹಿತ್ಯ ಹಾಗೂ ವೈದ್ಯಕೀಯ ಈ ಎರಡು ಕ್ಷೇತ್ರಗಳಲ್ಲಿ ಅವರು ಮಾಡಿದ ಸೇವೆ ಅಪಾರ. ಒಬ್ಬ ಮಹಿಳೆ ತನ್ನ ಕಷ್ಟಮಯ ಜೀವನದಲ್ಲಿಯೂ ಸಹ ಏನನ್ನೆಲ್ಲ ಸಾಧಿಸಬಹುದೆಂದು ಶ್ರೀಮತಿಯವರು ತೋರಿಸಿಕೊಟ್ಟಿದ್ದಾರೆ. ಜಗತ್ತೆಂಬ

ರಂಗಮಂಚದ ಮೇಲೆ ಶ್ರೀಮತಿಯವರು ತಮ್ಮೆಲ್ಲ ಭೂಮಿಕೆಗಳನ್ನು ಜತನದಿಂದ ನಿಭಾಯಿಸಿರುವುದನ್ನು ನೋಡಿ ನಾನು ಸಂಭ್ರಮಿತನಾಗಿದ್ದೇನೆ. ಒಂದು ಸಾಮಾನ್ಯಮನೆತನದ ಹುಡುಗಿಯೋರ್ವಳು ತನ್ನ ಬುದ್ಧಿಬಲದಿಂದ ಹಾಗೂ ದೃಢ ನಿಶ್ಚಯಗಳಿಂದ ಎಲ್ಲ ಕಷ್ಟಗಳನ್ನು ಹಿಮ್ಮೆಟ್ಟಿ ತಾನಾರಿಸಿದ ಎಲ್ಲ ಕ್ಷೇತ್ರಗಳಲ್ಲಿ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ನಿರ್ಮಿಸಿಕೊಂಡುದುದಲ್ಲದೇ, ಎಲ್ಲರ ಪ್ರೀತಿ ಮತ್ತು ಗೌರವಕ್ಕೆ ಪಾತ್ರಳಾಗಿ, ಸಂತೃಪ್ತಿಯಿಂದ ತನ್ನ ಬಾಳಿನ ಸಿಂಹಾವಲೋಕನ ಮಾಡುತ್ತ, ಮುಂದಿನ ಕಾರ್ಯದ ರೂಪರೇಖೆಯನ್ನು ಯೋಚಿಸಿದ್ದನ್ನು ನೋಡಿ ಆ ವ್ಯಕ್ತಿತ್ವಕ್ಕೆ ನನ್ನ ಕೈಗಳು ತಮ್ಮಷ್ಟಕ್ಕೇ ತಾವು ಮುಗಿದುವು.

ಸುಶೀಲ, ಸುಸಂಸ್ಕೃತ ನೇಕಾರ ಕುಟುಂಬದ ವೆಂಕಟಲಕ್ಷ್ಮಿ, ಸ್ವಲ್ಪ ಬಂಡಾಯ ಹೂಡಿ ಕುಳಕುಂದ ಶಿವರಾಯ[ನಿರಂಜನರ]ರ ಜೊತೆಗೆ ವಿವಾಹಬದ್ಧಳಾಗಿ ಅನುಪಮಾ ನಿರಂಜನರಾಗಿ ಬಾಳಿದ ಜೀವನ ತುಂಬಾ ಅದ್ಭುತವಾಗಿದೆ. ಪತಿಸೇವಾ ಪರಾಯಣ ಪತ್ನಿ, ಆತಿಥ್ಯಶೀಲ ಕುಶಲ ಗೃಹಿಣಿ, ಆದರ್ಶ ತಾಯಿ, ರೋಗಿಗಳ ಸೇವೆಗಾಗಿ ಸದಾ ತತ್ಪರ ವೈದ್ಯೆ, ಪ್ರತಿಭಾವಂತ ಲೇಖಿಕೆ, ವಿಶಾಲ ದೃಷ್ಟಿಯಿರುವ ಸತ್ಯ, ಸೌಹಾರ್ದ, ಸಮಾನತೆ, ಸಹಕಾರ್ಯ ಮುಂತಾದ ಮಾನವೀ ಜೀವನ ಮೌಲ್ಯದ ತಳಹದಿಯ ಮೇಲೆ ಶೋಷಣ ರಹಿತ ಹೊಸ ಸಮಾಜ ಕಟ್ಟಲು ಕಟಿಬದ್ಧರಾಗಿ ಹಗಲಿರುಳು ಹಸನ್ಮುಖದಿಂದ ದುಡಿಯುವ ಒಬ್ಬ ಸ್ವಯಂಸೇವಿಕೆ - ಹೀಗೆ ಅನುಪಮಾರವರ ಬಹುಮುಖ ವ್ಯಕ್ತಿತ್ವವು ನಿಜವಾಗಿಯೂ ಅನುಪಮವಾಗಿದೆ.

2 ಸ್ನೇಹಶೀಲೆ

-ಎಚ್. ಎಸ್. ಪಾರ್ವತಿ

ನನಗೆ ಅನುಪಮಾ ಪರಿಚಯವಾದದ್ದು ಅವರು ವೆಂಕಟಲಕ್ಷ್ಮಿಯಿಂದ ಅನುಪಮಾ ಆಗಿ ನಾಮಾಂತರ-ಅಥವಾ ಸ್ಥಿತ್ಯಂತರ ಎಂದರೆ ಹೆಚ್ಚು ಸೂಕ್ತವೇನೋ-ಗೊಳ್ಳುತ್ತಿದ್ದ ಸಮಯದಲ್ಲಿ. ಅಷ್ಟರಲ್ಲಾಗಲೇ ಅವರು ಬೆಂಗಳೂರನ್ನು ಬಿಟ್ಟು ಮೈಸೂರಿಗೆ ಹೋಗಿ ವೈದ್ಯಕೀಯ ಕಾಲೇಜಿಗೆ ಸೇರಿದ್ದರು. ಒಮ್ಮೆ ಅವರು ಬೆಂಗಳೂರಿಗೆ ಬಂದಿದ್ದಾಗ ನಿರಂಜನ ಅವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ಅಷ್ಟರಲ್ಲಾಗಲೇ ಅವರು ಕತೆಗಳನ್ನು ಬರೆದು ಪ್ರಕಟಿಸಿದ್ದರು. ನನಗೆ ನೆನಪಿರುವ ಮಟ್ಟಿಗೆ ಅವರ ಮೊದಲ ಕಥಾಸಂಕಲನ 'ಕಣ್ಮಣಿ' ಪ್ರಕಟವಾಗಿತ್ತು. ವೈದ್ಯಕೀಯ ತರಗತಿಯಲ್ಲಿ ಓದುತ್ತಿರುವವರು, ಜೊತೆಗೆ ಲೇಖಿಕಿ ಎಂದಾಗ ಅವರ ಬಗ್ಗೆ ಸಹಜವಾಗಿಯೇ ಆಸಕ್ತಿ, ಆದರ ಮೂಡಿದವು. ಅಷ್ಟೇ ಆಗಿದ್ದರೆ ನಮ್ಮ ಪರಿಚಯ

ಹೆಚ್ಚುತ್ತಿರಲಿಲ್ಲವೇನೋ! ಆದರೆ ಕ್ರಮಬದ್ಧವಾಗಿ ಓಡಾಡುತ್ತಿದ್ದ ಕಾಗದಗಳು ನಮ್ಮಿಬ್ಬರ ಸಾಮೀಪ್ಯವನ್ನು ಹೆಚ್ಚಿಸಿದವು. 'ಕಣ್ಮಣಿ' ಪ್ರಕಟವಾದಾಗ ಆ ಕತೆಗಳ ಬಗ್ಗೆ ನನ್ನ ಅಭಿಪ್ರಾಯ ಬರೆದಿದ್ದೆ. ಅದಕ್ಕುತ್ತರವಾಗಿ ಅನುಪಮಾ ಬರೆದ ಕಾಗದದ ಕೆಲವಂಶ (ಕಾಗದ ಬರೆದ ತಾರೀಖು. ೧೬–೫–೫೩):

"ಪಾರ್ವತೀ, ನಡೆದ ಘಟನೆಯೊಂದರ ಬಗ್ಗೆ ಬರೆದಿದ್ದೀರಿ-'ಮೂಲಾ ನಕ್ಷತ್ರದ ಹುಡುಗಿ'ಯ ಹಾಗಿರುವ ಒಂದು ಘಟನೆಯನ್ನು. ಅಂತಹುದು ಹಲವಾರು ಕಣ್ಣಾರೆ ಕಂಡಿದ್ದೇನೆ ನಾನು. ಇಪ್ಪತ್ತನೆಯ ಶತಮಾನದಲ್ಲೂ ಇಂತಹ ದೃಶ್ಯ ಕಣ್ಣಿಗೆ ಬೀಳುತ್ತದೆಂದರೆ ಯಾರೂ ನಂಬಲಾರರು. ಅಂತಹ ನಿರೂಪಣೆ ಕತೆಗಳಲ್ಲಿ ಬಂದರೆ ಅವು ಕೃತಕ ಎಂದು ಮೂಗು ಮುರಿಯುತ್ತಾರೆ ಹಲವರು. ಆದರೆ ಸಮಾಜದ ಒಂದು ಅರ್ಥವಿಲ್ಲದ ಧರ್ಮನೀತಿಗಾಗಿ ನರಳುತ್ತಿರುವ ಆ ಹೆಣ್ಣುಮಕ್ಕಳ ಕಣ್ಣೀರು ಇವರೆಂದಿಗೂ ನೋಡಿಲ್ಲ....ನೋಡಿದ್ದರೆ ಹಾಗೆ ಹೇಳುವ ಎದೆಗಾರಿಕೆ ಇವರಿಗೆ ಬರುತ್ತಿರಲಿಲ್ಲ".

ನಾವಿಬ್ಬರೂ ಸಮಾನ ವಯಸ್ಕರಾದರೂ ನಾನು ಬರೆಯಲಾರಂಭಿಸಿದ್ದು ಅನುಪಮಾಗಿಂತ ಸ್ವಲ್ಪ ತಡವಾಗಿಯೇ. ಅಂದಿನ ಜನಪ್ರಿಯ ವಾರಪತ್ರಿಕೆಯಾಗಿದ್ದ 'ಜನಪ್ರಗತಿ'ಯಲ್ಲಿ ನನ್ನ ಲೇಖನಮಾಲೆ ಪ್ರಕಟವಾದಾಗ ಅವರು ಬರೆದರು :

"ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಮೊದಲು ಬರೆದಿದ್ದೀರಿ. ನಿಮ್ಮ ಅಭಿಪ್ರಾಯಗಳು ಪ್ರಗತಿಶೀಲವಾಗಿರುತ್ತವೆಂದು ಯಾಕೋ ನನಗೆ ಅನ್ನಿಸಿರಲಿಲ್ಲ. ಆದರೆ ಅದು ತಿಳಿದಾಗ ನನಗೆ ತುಂಬಾ ನೆಮ್ಮದಿಯಾಯಿತು. ನಿಮಗೆ ಒಳ್ಳೆಯ ಶೈಲಿಯಿದೆ· ಹೇಳಲು ಅನೇಕ ವಿಷಯಗಳು ನಿಮ್ಮ ಮನಸ್ಸಿನಲ್ಲಿವೆ....ನಿಮ್ಮದೇ ಆದ ಅಭಿಪ್ರಾಯಗಳ ಒಂದು ಹಿನ್ನೆಲೆ ನಿಮ್ಮ ಬರವಣಿಗೆಯನ್ನು ಹೆಚ್ಚು ತೀಕ್ಷ್ಣವಾಗಿ ಮಾಡಬಲ್ಲವು. ನನಗೆ ತುಂಬಾ ಆಸೆಯಿದೆ-ನೀವು ಒಂದಲ್ಲ ಒಂದು ದಿನ ಸ್ವತಂತ್ರವಾಗಿ ಕತೆ ಕಾದಂಬರಿ ಬರೆಯುತ್ತೀರೆಂದು. ಆದರೆ ಎಂದು?"

ಇಷ್ಟು ಹಳೆಯ ನೆನಪನ್ನು ಕೆದಕಿ ತೆಗೆಯುತ್ತಿರುವುದಕ್ಕೆ ಕಾರಣ ಅನುಪಮಾ ಮೊದಲಿನಿಂದಲೂ ಸ್ನೇಹಜೀವಿ. ಹಾಗೆಯೇ ಹೆಣ್ಣುಮಕ್ಕಳು ಹೆಚ್ಚು ಹೆಚ್ಚಾಗಿ ಬರೆಯಬೇಕು, ವಿಚಾರವಂತಿಕೆಯಿಂದ ಸತ್ವಶಾಲಿ ಬರವಣಿಗೆಯನ್ನು ನೀಡಬೇಕು ಎನ್ನುವ ಇಚ್ಛೆಯುಳ್ಳವರಾಗಿದ್ದರು. ಜೊತೆಗೇ ಹಾಗೆ ಬರೆಯುವವರನ್ನು ಮನಃಪೂರ್ವಕವಾಗಿ ಪ್ರೋತ್ಸಾಹಿಸುವವರಾಗಿದ್ದರು.

ಜೀವನ ಎತ್ತೆತ್ತಲೋ ಹಾರಾಡಿತು,ಯಾವ ಯಾವ ದಿಕ್ಕಿಗೋ ಕರೆದೊಯ್ದಿತು. ಅನುಪಮಾ ಲೇಖಕಿಯಂತೂ ಮೊದಲೇ ಆಗಿದ್ದರು, ಈಗ ಡಾಕ್ಟರೂ ಆದರು.ಮೈಸೂರು, ಧಾರವಾಡಗಳನ್ನು ಸುತ್ತಿಕೊಂಡು ಬೆಂಗಳೂರಿಗೆ, ಅದರಲ್ಲೂ ನಾವಿದ್ದ ಜಯನಗರಕ್ಕೇ

ಬಂದರು. ಮೊದಲಿನಿಂದ ಪರಿಚಯವಿದ್ದ ಅವರು ಸಹಜವಾಗಿಯೇ ನಮ್ಮ 'Family Doctor' ಆದರು. ನಮ್ಮ ಮನೆಯವರಿಗೆಲ್ಲ ಅವರ ಹತ್ತಿರ ಚಿಕಿತ್ಸೆ ಮಾಡಿಸಿಕೊಳ್ಳುವುದೇ ಹಿತವಾಗಿತ್ತು.

ಬೆಂಗಳೂರಿಗೆ ಬಂದ ಕೆಲವೇ ದಿನಗಳಲ್ಲಿ ಅನುಪಮಾ ವೈದ್ಯೆಯಾಗಿಯೂ ತುಂಬಾ ಪ್ರಸಿದ್ಧರಾದರು. ಅದಕ್ಕೆ, ಅವರು ದಕ್ಷ ವೈದ್ಯೆಯಾಗಿದ್ದಂತೆ ಒಳ್ಳೆಯ ಕತೆಗಾರ್ತಿಯಾಗಿದ್ದರು, ಕಾದಂಬರಿಗಾರ್ತಿಯಾಗಿದ್ದರು ಎನ್ನುವುದೂ ಒಂದು ಕಾರಣ ಎಂದು ನನಗನ್ನಿಸುತ್ತದೆ. ವೈದ್ಯಕೀಯಕ್ಕೆ ಸಂಬಂಧಿಸಿದ ಹಾಗೆ ಅವರು ಬರೆದ ಲೇಖನಗಳೂ, ಪುಸ್ತಕಗಳೂ ಅವರ ಕಾದಂಬರಿಗಳಷ್ಟೇ ಪ್ರಸಿದ್ಧವಾದುವು. ಅವರ 'ತಾಯಿ-ಮಗು' ಪುಸ್ತಕ ಕಂಡಷ್ಟು ಆವೃತ್ತಿಯನ್ನು ನಮ್ಮ ಯಾವ ಪ್ರಸಿದ್ಧ ಕಾದಂಬರಿಗಾರರ ಪ್ರಸಿದ್ಧ ಕಾದಂಬರಿಗಳೂ ಕಂಡಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಆ ಸಮಯದಲ್ಲಿ ಒಮ್ಮೆ ರಸ್ತೆಯಲ್ಲಿ ಸಿಕ್ಕಾಗ ನಿರಂಜನ ತಮಾಷೆಯಾಗಿ ಹೇಳಿದ್ದರು:

"ಅನುಪಮಾ ಎಲೆಕ್ಷನ್‌ಗೆ ನಿಂತರೆ ಖಂಡಿತ ಗೆಲ್ತಾರೆ ಅಲ್ವಾ?" ಅಂಥ ಆಸಕ್ತಿ ಅನುಪಮಾಗೆ ಇದ್ದಿದ್ದರೆ ಅವರು ಗೆಲ್ಲುತ್ತಿದ್ದುದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಜಯನಗರದಲ್ಲಂತೂ ಅವರನ್ನು ತಿಳಿಯದವರೇ ಇರಲಿಲ್ಲ.

ಬೆಂಗಳೂರಿಗೆ ಬಂದು ನೆಲಸಿದ ಮೇಲೆ ಅನುಪಮಾ ಇಲ್ಲಿನ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ಸಕ್ರಿಯವಾಗಿ ಭಾಗವಹಿಸಿದರು. ನಮ್ಮ ಸಾಹಿತ್ಯ ರಂಗದಲ್ಲಿ ಲೇಖಕಿಯರಿಗೆ ಸಿಗಬೇಕಾದಷ್ಟು ಪ್ರಾಮುಖ್ಯತೆ ಸಿಗುತ್ತಿಲ್ಲ ಎನ್ನುವ ಕೊರತೆಯೊಂದಿಗೆ ನಮ್ಮ ಲೇಖಕಿಯರ ಬರವಣಿಗೆಯಲ್ಲಿದ್ದ ಮಿತಿಯನ್ನೂ ಗುರುತಿಸಿದರು. ಆ ಮಿತಿಯನ್ನು ಮೀರಿ ಬೆಳೆಯಬೇಕೆಂದು ಕರೆಯಿತ್ತರು. ಈಗಂತೂ ವೈದ್ಯೆ ಅನುಪಮಾ, ವೈದ್ಯವೃತ್ತಿಗೆ ವಿದಾಯ ಹೇಳಿ ಕೇವಲ ಲೇಖಕಿ ಅನುಪಮಾ ಆಗಿ ತಮ್ಮ ಸಮಯವನ್ನೆಲ್ಲ ಸಾಹಿತ್ಯಕ್ಕೇ ಮೀಸಲಾಗಿರಿಸಿದ್ದಾರೆ.

ಅನುಪಮಾ ಅವರಲ್ಲಿ ನನಗೆ ತುಂಬಾ ಮೆಚ್ಚಿಗೆಯಾದ ಒಂದು ಅಂಶವೆಂದರೆ ಯಾರೇ ಲೇಖಕರು ಓದಲೆಂದು ಅವರಿಗೆ ಪುಸ್ತಕ ಕೊಡಲಿ, ಅದನ್ನು ಓದಿದ ನಂತರ ಅವರು ತಪ್ಪದೆ ಆ ಪುಸ್ತಕದ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ಬರೆದು ತಿಳಿಸುತ್ತಾರೆ. ಇದಿರಿಗೆ ಸಿಕ್ಕಾಗ ಅಥವಾ ಫೋನಿನಲ್ಲಿ ಹೇಳಿ ಮುಗಿಸುವುದಿಲ್ಲ. ಹೆಚ್ಚು ಕಡಿಮೆ ನನ್ನ ಎಲ್ಲ ಪ್ರಕಟಿತ ಪುಸ್ತಕಗಳನ್ನೂ (ಸುಮಾರು ೩೦), ಕೆಲವೊಮ್ಮೆ ಪತ್ರಿಕೆಗಳಲ್ಲೋ, ಮತ್ತೆಲ್ಲೋ ಪ್ರಕಟವಾದ ಲೇಖನಗಳನ್ನೂ ವಿಮರ್ಶಿಸಿ ಅವರು ನನಗೆ ಬರೆದ ಪತ್ರಗಳು ನನ್ನಲ್ಲಿವೆ. ಪ್ರತಿ ಬಾರಿಯೂ ಕೊನೆಯಲ್ಲಿ ಒಂದು ಸಾಲು ಸೇರಿಸುವುದನ್ನು ಮರೆಯುವುದಿಲ್ಲ.

"ಇಂಥ ಕೃತಿಗಳು ನಿಮ್ಮಿಂದ ವರ್ಷಕ್ಕೆ ಒಂದಾದರೂ ಬರಲಿ".

ಅನುಪಮಾ ಅವರ ಆತ್ಮೀಯರಾದವರಿಗೆಲ್ಲ ಒಂದು ವಿಚಾರದಲ್ಲಿ ತುಂಬಾ ವಿಷಾದವಿದೆ. ಅನುಕೂಲಕರ ಸಾಹಿತ್ಯ ದಾಂಪತ್ಯ, ಬುದ್ಧಿವಂತ ಮಕ್ಕಳು. ಉತ್ತಮ ಆರ್ಥಿಕ ಸ್ಥಿತಿ, ಯಶಸ್ಸು, ಕೀರ್ತಿ ಎಲ್ಲ ಇದ್ದೂ ಅನುಪಮಾ-ನಿರಂಜನ ದಂಪತಿಗಳನ್ನು ಈ ಅನಾರೋಗ್ಯವೊಂದು ಹೀಗೆ ಕಾಡುತ್ತಿದೆಯಲ್ಲಾ! ಈ ಬಗ್ಗೆ ಯೋಚನೆ ಬಂದಾಗೆಲ್ಲ ನನ್ನ ಮನಸ್ಸು ಎತ್ತೆತ್ತಲೋ ಹರಿಯುತ್ತದೆ. ಮನುಷ್ಯರ ಜೀವನದಲ್ಲಿ ಮುಳ್ಳನ್ನು ಹರಡಲೇ ಬೇಕೆಂಬುದು ಆ 'ಕಾಣದ ಕೈ'ಯ ಸಂಕಲ್ಪವೇ? ಯಾರೂ ನೆಮ್ಮದಿಯಿಂದಿರುವುದನ್ನು ವಿಧಿ ಸಹಿಸದೇ?....ಈ ಪ್ರಶ್ನೆಗಳಿಗೆ ಉತ್ತರ ಎಲ್ಲಿ?....

ಈ ಸಂದರ್ಭದಲ್ಲಿ ಅನುಪಮಾ ಅವರ ಹಿತೈಷಿಗಳೆಲ್ಲರ ಹಾರೈಕೆ ಒಂದೇ: ಅನಾರೋಗ್ಯದ ಚಿಂತೆ ದೂರವಾಗಿ ಅವರು ಇನ್ನೂ ಹೆಚ್ಚು ಹೆಚ್ಚು ಉತ್ತಮ ಕೃತಿಗಳನ್ನು ಸಾರಸ್ವತ ಲೋಕಕ್ಕೆ ನೀಡಿ ಭಾಷೆಗೂ, ನಾಡಿಗೂ ಕೀರ್ತಿ ತರುವಂತಾಗಲಿ!

ಸಾರ್ಥಕ ಬದುಕು

-ಸರೋಜ ನಾರಾಯಣ ರಾವ್

ಬಹಳ ಹಿಂದೆ, ಸುಮಾರು ೧೯೫೨ರಲ್ಲಿ 'ಕತೆಗಾರ' ಪತ್ರಿಕೆಯಲ್ಲಿ, 'ಕಣ್ಮಣಿ' ಕಥಾಸಂಕಲನ ಪ್ರಕಟವಾದ ವಿಚಾರ ಓದಿದೆ. ಲೇಖಕಿಯ ಹೆಸರು ಅನುಪಮಾ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಬರಹಗಾರ್ತಿಯೊಬ್ಬರ ಉದಯವಾಯಿತು ಎಂದುಕೊಂಡೆ. ಆಗ ಮಹಿಳೆಯರಲ್ಲಿ ಬರೆಯುತ್ತಿದ್ದವರ ಸಂಖ್ಯೆ ಕಡಿಮೆ. ಅವರಲ್ಲೂ ಕಥಾಸಂಕಲನವನ್ನು ಪ್ರಕಟಿಸಿದ್ದವರ ಸಂಖ್ಯೆ ಮತ್ತೂ ಕಡಿಮೆ. ಅಲ್ಲಿಂದ ಮುಂದೆ ಅನುಪಮಾ ಅವರು ಕಥೆ, ಕಾದಂಬರಿ, ವೈದ್ಯಕೀಯ ಬರಹಗಳು ಅವನ್ನೆಲ್ಲ ಬರೆದರು. ಆಗ ನನಗೆ ಅವರ ಪರಿಚಯ ಅವರ ಬರಹಗಳ ಮೂಲಕ ಮಾತ್ರ.

ಅದೊಂದು ದಿನ ಲೇಖಕಿಯರ ಸಂಘದ ಸಮಾರಂಭವೊಂದರಲ್ಲಿ ಒಂದೇ ವೇದಿಕೆಯಿಂದ ನಮ್ಮಿಬ್ಬರ ಭಾಷಣವಿತ್ತು. ಅಂದು ಸಂಘದ ಕಾರ್ಯದರ್ಶಿ ಹೆಚ್. ಆರ್. ಇಂದಿರಾ ನಮ್ಮಿಬ್ಬರನ್ನೂ ಪರಸ್ಪರರಿಗೆ ಪರಿಚಯ ಮಾಡಿಕೊಟ್ಟರು. ಮೊದಲ ಪರಿಚಯದಲ್ಲೇ ಅವರ ಆತ್ಮೀಯ ಹಾಗೂ ಸ್ನೇಹಪೂರ್ಣ ನಡವಳಿಕೆ ನನ್ನ ಮನಸ್ಸಿಗೆ ತುಂಬ ಸಂತೋಷವನ್ನು ನೀಡಿತು. ಹತ್ತು ನಿಮಿಷ ಕಳೆಯುವುದರಲ್ಲಿ ನಾವು ಬಹುದಿನಗಳ ಪರಿಚಿತರಂತೆ ಆಗಿಬಿಟ್ಟೆವು.

ಆ ದಿನಗಳಲ್ಲಿ ನನಗೆ ಸಾಹಿತ್ಯ ವಿಚಾರಗಳು, ಪುಸ್ತಕಗಳು, ಬರಹಗಳನ್ನು ಕುರಿತು ವಿಚಾರ ವಿನಿಮಯ ನಡೆಸಬಹುದಾದಂತಹ ಗೆಳತಿಯರ ತೀವ್ರ ಅಗತ್ಯವಿದ್ದಿತೆಂದು ತೋರುತ್ತದೆ. ನಾನು ಸಾಹಿತ್ಯಾಸಕ್ತರನ್ನು ಒಂದೆಡೆ ಸೇರಿಸಿ ಸಮಾನ ಆಸಕ್ತಿ, ಅಭಿರುಚಿಗಳುಳ್ಳವರ ಒಂದು ಸ್ನೇಹ ಕೂಟವನ್ನು ಏರ್ಪಡಿಸುವ ಆಲೋಚನೆಯಲ್ಲಿದ್ದೆ. ದೊಡ್ಡ ಸಂಘವೆಂದಲ್ಲ, ಸೀಮಿತ ಸಂಖ್ಯೆಯುಳ್ಳ ಆತ್ಮೀಯ ಕೂಟ. ಆ ಸಮಯಕ್ಕೇ ಅನುಪಮಾ ಅವರ ಪರಿಚಯವಾದದ್ದು ನನ್ನಲ್ಲಿ ಹೆಚ್ಚಿನ ಉತ್ಸಾಹ ಮೂಡಲು ಕಾರಣವಾಯಿತು. ಒಂದು ಸಂಜೆ, ನನಗೆ ಪರಿಚಯವಿದ್ದ ನಾಲ್ಕಾರು ಮಂದಿ ಸಾಹಿತಿ ಗೆಳತಿಯರನ್ನು ನಮ್ಮ ಮನೆಗೆ ಆಹ್ವಾನಿಸಿದೆ. ಅಲ್ಪ ಉಪಾಹಾರದ ನಂತರ ಮಾತುಕತೆಯೆಲ್ಲ ಆಗ ತಾನೆ ಪ್ರಕಟವಾಗಿದ್ದ ಪುಸ್ತಕಗಳು, ಲೇಖನಗಳು, ವಿಮರ್ಶೆಗಳನ್ನು ಕುರಿತದ್ದೇ ಆಗಿದ್ದು, ಆ ಸಂಜೆ ಬಹಳ ತೃಪ್ತಿಕರವಾಗಿ ಕಳೆಯಿತು. ಆಗಾಗ ಹೀಗೆ ಸೇರುತ್ತಿರಬೇಕು ಎಂಬ ನನ್ನ ಉದ್ದೇಶವನ್ನು ಎಲ್ಲರಿಗೂ ತಿಳಿಸಿದೆ. ಸರ್ವಾನುಮತದ ಒಪ್ಪಿಗೆ ನಿರೀಕ್ಷಿತ ಪ್ರತಿಕ್ರಿಯೆಯೇ ಆಗಿತ್ತು.

ಕನ್ನಡ ಸಾಹಿತ್ಯ ಪರಿಷತ್ತಿನ ರಜತ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಆಗಮಿಸಿದ್ದ ಬರಹಗಾರ್ತಿಯರಲ್ಲಿ ಕೆಲವರನ್ನು ಆಹ್ವಾನಿಸಿ, ಪರಸ್ಪರ ಪರಿಚಯ ಮಾಡಿಕೊಳ್ಳುವ ಒಂದು ಸ್ನೇಹ ಕೂಟವನ್ನು ಅನುಪಮಾ ಅವರು ತಮ್ಮ ಮನೆಯಲ್ಲಿ ಏರ್ಪಡಿಸಿದರು. ಶ್ರೀಮತಿಯರಾದ ಸವಿತಾ ಕುಸುಮಾಕರ ದೇಸಾಯಿ,ಆರ್ಯಾಂಬ ಪಟ್ಟಾಭಿ, ದಿ. ವಾಣಿ ಹಾಗೂ ಗೀತಾ ಕುಲಕರ್ಣಿ ಮುಂತಾದವರೆಲ್ಲ ಬಂದಿದ್ದರು. ಇಂತಹ ಸ್ನೇಹ ಕೂಟಗಳು ನಮಗೆಲ್ಲ ತುಂಬ ತೃಪ್ತಿಯನ್ನು ನೀಡುತ್ತಿದ್ದುವು. ಮುಂದೆ ನಾವು ಪ್ರತಿತಿಂಗಳು ಒಬ್ಬೊಬ್ಬರ ಮನೆಯಲ್ಲಿ ಸೇರಲು ಪ್ರಾರಂಭಿಸಿದೆವು. ಸಾಹಿತ್ಯಕ್ಕೆ ಸಂಬಂಧಿಸಿದಂತಹ ವಿಷಯಗಳನ್ನು ಕುರಿತು ಚರ್ಚಿಸುವುದೇ ಮುಖ್ಯ ಉದ್ದೇಶವಾಗಿತ್ತು. ವಿಷಯಗಳ ಒಂದು ಪಟ್ಟಿಯೇ ಸಿದ್ಧವಾಯಿತು. ಸಭೆ ಚಿಕ್ಕದಾದರೂ ಪ್ರಬಂಧ ಮಂಡಿಸುವವರು ಸಾಕಷ್ಟು ಶ್ರಮ ವಹಿಸುತ್ತಿದ್ದರು. ಅಲ್ಲದೆ ನಂತರ ಅದು ಪತ್ರಿಕೆಗಳಲ್ಲಿ, ಪುಸ್ತಕರೂಪದಲ್ಲಿ, ಸಂಕಲನಗಳಲ್ಲಿ ಪ್ರಕಟವೂ ಆಗುತ್ತಿತ್ತು. ನಮ್ಮ ಸ್ನೇಹ ಕೂಟದ ಬಗ್ಗೆ ಅನುಪಮಾ ಹೀಗೆ ಹೇಳಿದ್ದಾರೆ: "ಈ ಬಗೆಯ ಸ್ನೇಹ ಸಮ್ಮಿಲನ, ವೈದ್ಯಕೀಯ ಕೆಲಸದ ಹೊರೆಯಿಂದ ಜಗ್ಗಿಹೋಗಿದ್ದ ನನಗೆ, ರಸಬುಗ್ಗೆಯಾಗಿ ಕಂಡಿತು". 'ಹಾಗೂ', "ಇದು ಒಂದು ರೀತಿಯಲ್ಲಿ ನಮ್ಮನ್ನು ಆಳವಾದ ಅಭ್ಯಾಸಕ್ಕೆ ಅನುಗೊಳಿಸಿತು ಎಂದು ಹೇಳಬೇಕು".

* * *

ಸಮಾನ ಮನೋಧರ್ಮ, ಸಮಾನ ಆಸಕ್ತಿಗಳು ಮಾತ್ರವೇ ನಮ್ಮ ಸ್ನೇಹವನ್ನು ಬೆಸೆಯುವ ಸಾಧನಗಳಾದುವೆಂದು ಹೇಳಲಾಗದಿದ್ದರೂ, ಅವುಗಳ ಪಾತ್ರ ಹಿರಿದಾದುದೆಂದು ಖಂಡಿತ ಹೇಳಬಹುದು. ಏಕೆಂದರೆ ನಮ್ಮ ಸಂಭಾಷಣೆಗಳಲ್ಲಿ ಅದು

ಏದ್ದು ಕಾಣುತ್ತಿತ್ತು. ಎರಡು ಮೂರು ದಿನಗಳಿಗೊಮ್ಮೆಯಾದರೂ ದೂರವಾಣಿಯ ಮೂಲಕ ಮಾತಾಡಿಕೊಳ್ಳುವುದು ನಾವು ಮಾಡಿಕೊಂಡಿರುವ ಅಭ್ಯಾಸ. ಯಾವುದೇ ಹೊಸ ಕೃತಿ ಹೊರಬೀಳಲಿ, ಅದರ ಬಗ್ಗೆ ವಿಮರ್ಶೆ, ಚರ್ಚೆ, ಸಾಹಿತ್ಯ ಸಮಾರಂಭ ಗಳನ್ನು ಕುರಿತ ಅಭಿಪ್ರಾಯಗಳು ನಮ್ಮ ಸಂಭಾಷಣೆಗೆ ಸಾಮಗ್ರಿ. ಸಮಕಾಲೀನ ಸಮಸ್ಯೆಗಳು ಹಾಗೂ ಇತರ ವಿಷಯಗಳೂ ಆಗಾಗ ಸೇರಿಕೊಳ್ಳುತ್ತವೆ. ವೈಯಕ್ತಿಕ ಟೀಕೆ, ಪೂರ್ವಗ್ರಹ ಪೀಡಿತ ಅಭಿಪ್ರಾಯಗಳು ಇರದಂತಹ ಮುಕ್ತ ಚರ್ಚೆಗಳು ನಮಗೆ ಬಹಳ ಸಮಾಧಾನವನ್ನು ನೀಡುತ್ತವೆ. ಒಮ್ಮೆ ದೀರ್ಘಕಾಲ ನಮ್ಮ ಟೆಲಿಫೋನ್ ಕೆಟ್ಟಿದ್ದಾಗ ಅವರಿಂದ ಒಂದು ಪತ್ರ ಬಂದಿತು. "....ಒಂದೇ ಊರಿನಲ್ಲಿದ್ದು ಪತ್ರ ಬರೆಯುವ ಪ್ರಸಂಗವೇನು ಎನಿಸಬಹುದಲ್ಲವೇ? ಕಳೆದ ಒಂದು ವಾರದಿಂದ ಪ್ರತಿ ದಿನ ಬೆಳಿಗ್ಗೆ ನಿಮಗೆ ಫೋನ್ ಮಾಡುತ್ತಿದ್ದೇನೆ. ನಿಮ್ಮ ಫೋನ್ ಕೆಟ್ಟಿರ ಬೇಕೆಂದು ಊಹಿಸಿದ್ದೇನೆ. ದಯವಿಟ್ಟು ಬೇರೆ ಎಲ್ಲಿಂದಲಾದರೂ ಫೋನ್ ಮಾಡಿ. ನಿಮ್ಮ ಧ್ವನಿ ಕೇಳದೆ ತುಂಬಾ ದಿನಗಳಾದವು!" ಅನುಪಮಾ ಹೀಗೆ ಪತ್ರ ಬರೆದುದನ್ನು ಹೇಗೆ ಮರೆಯಲಿ? ನಿಷ್ಕಲ್ಮಷ ಸ್ನೇಹ ನೀಡುವ ಆನಂದ ಅದನ್ನು ಅನುಭವಿಸಿದವರಿಗೆ ಮಾತ್ರ ತಿಳಿಯುವಂತಹುದು.

* * *

ಸದಾ ಚಟುವಟಿಕೆಯಿಂದಿರುವವರಿಗೆ ಆರಾಮವೆನ್ನುವುದು ಒಂದು ಶಾಪ ವಾಗಬಲ್ಲುದು. ಸಂಸಾರದ ಕೆಲಸಗಳೊಂದಿಗೆ ವೈದ್ಯಕೀಯ ವೃತ್ತಿ, ಸಾಹಿತ್ಯ ರಚನೆ ಹೀಗೆ ಒಂದು ನಿಮಿಷವೂ ಬಿಡುವಿಲ್ಲದಂತೆ ಜೀವನವನ್ನು ರೂಪಿಸಿಕೊಂಡಿದ್ದರು ಅನುಪಮಾ. ಅನಿವಾರ್ಯ ಕಾರಣಗಳಿಂದ ವೈದ್ಯಕೀಯ ವೃತ್ತಿಗೆ ವಿದಾಯ ಹೇಳಬೇಕಾಗಿ ಬಂದಾಗ ಒಂದು ರೀತಿಯ ಕಳವಳ ಉಂಟಾದದ್ದು ತೀರ ಸಹಜ. ಆಗ ಅಯಾಚಿತವಾಗಿ ಅವರಿಗೆ ಹೆಚ್ಚು ಬಿಡುವಿನ ಸಮಯ ದೊರೆತಿತ್ತು. ಆ ಸಮಯದಲ್ಲಿ ನಾನು ಒಂದು ಸಲಹೆ ಯನ್ನು ಅವರ ಮುಂದೆ ಇಟ್ಟೆ.

"ಅನುಪಮಾ, ನೀವು ನಿಮ್ಮ ಆತ್ಮ ಚರಿತ್ರೆಯನ್ನು ಬರೆಯಿರಿ. ನೀವು ಒಂದು ಅಧ್ಯಾಯ, ನಿರಂಜನರು ಒಂದು ಅಧ್ಯಾಯ ಹೀಗೆ ಬರೆಯಿರಿ. ಅದು ಒಂದು ಅಪೂರ್ವವಾದ ಕೃತಿಯಾಗುತ್ತದೆ". ಒಂದು ಕೃತಿಯಲ್ಲಿ ದಾಖಲಿಸಬೇಕಾದಂತಹ ಅನೇಕ ಸಂಗತಿಗಳು ಅವರ ಜೀವನದಲ್ಲಿ ನಡೆದಿವೆ ಎನ್ನುವುದು ನನ್ನ ಅಭಿಪ್ರಾಯ ವಾಗಿತ್ತು. ಆದರೆ ಅನುಪಮಾ ಹೇಳಿದರು, "ಅದು ಸಾಧ್ಯವಾಗಲಾರದು. ಅಮೂ ಅಲ್ಲದೆ ನಾನು ಡೈರಿ ಬರೆಯುವ ಅಭ್ಯಾಸ ಇಟ್ಟುಕೊಂಡಿಲ್ಲ. ಎಷ್ಟೋ ವಿಷಯಗಳು ಮರೆತೇ ಹೋಗಿರುತ್ತವೆ ಅಲ್ಲವೇ?"

“ಒಮ್ಮೆ ಬರೆಯಲು ಪ್ರಾರಂಭಿಸಿ ನೋಡಿ. ನೆನಪುಗಳು ತಾವಾಗಿ ನುಗ್ಗಿ ಬರುತ್ತವೆ”. ನಿಜವಾಗಿಯೂ ನೆನಪುಗಳು ಭೋರ್ಗರೆದು ಬಂದುವು. ‘ನೆನಪು: ಸಿಹಿ-ಕಹಿ’ ರಚಿತವಾಯಿತು. (ನಾನು ಸೂಚಿಸದಿದ್ದರೂ ಅವರು ಖಂಡಿತವಾಗಿ ಅದನ್ನು ಬರೆಯುತ್ತಿದ್ದರು.) ಧಾರಾವಾಹಿಯಾಗಿ, ನಂತರ ಪುಸ್ತಕವಾಗಿ ಪ್ರಕಟವಾಯಿತು. ಓದುಗರ ಮನವನ್ನು ಸೂರೆಗೊಂಡಿತು. ‘ಶಾಶ್ವತಿ’ ಪ್ರಶಸ್ತಿಯೂ ದೊರೆಯಿತು. ಅದೆಲ್ಲ ಈಗ ಚರಿತ್ರೆಯಾಗಿದೆ. ಮುಂದೆ ಅವರು ಉಪಯುಕ್ತವಾಗಿ ಕಾಲವನ್ನು ವಿನಿಯೋಗಿಸಲು ಹಲವು ಯೋಜನೆಗಳನ್ನು ಹಾಕಿಕೊಂಡರು. ಬಹು ಬೇಗ ಯಶಸ್ವಿಯೂ ಆದರು. ಓದುವುದು ಹೆಚ್ಚಾಯಿತು. ಬರಹಕ್ಕೆ ಹೆಚ್ಚು ಆಳ ಬಂದಿತು. ಮಹಿಳೆಯರ ಸಮಸ್ಯೆಗಳನ್ನು ಕುರಿತಂತೆ ಬರಹ, ಭಾಷಣಗಳು ಹೆಚ್ಚಾದುವು.

ತುಂಬಾ ಹತ್ತಿರದಿಂದ ಬಲ್ಲವರ ಬಗ್ಗೆ ಬರೆಯುವುದು ಸ್ವಲ್ಪ ಕಷ್ಟವೆಂದೇ ಹೇಳಬೇಕು. ಚೆನ್ನಾಗಿ ತಿಳಿದಿರುವ ವಿಷಯಗಳನ್ನೇ ಬರೆದರೂ ಅರಿಯದವರಿಗೆ ಅದು ಅಸಹಜ ಅಥವಾ ಉತ್ಪ್ರೇಕ್ಷೆ ಎಂದೆನಿಸಬಹುದು. ಹಾಗೆಂದು ಇರುವ ವಿಷಯ ವನ್ನು ಕುರಿತು ಬರೆಯದೆ ಇರುವುದೂ ಸರಿಯಾಗಲಾರದು. ಅನುಪಮಾ ಅವರಿಂದ ಹಲವು ಬಗೆಯಲ್ಲಿ ಉಪಕೃತರಾದವರು ಅನೇಕ ಮಂದಿ. ಬಲಗೈ ಕೊಟ್ಟದ್ದು ಎಡಗೈಗೆ ತಿಳಿಯಬಾರದು ಎಂಬ ನೀತಿಯನ್ನು ಪಾಲಿಸುವ ಅವರು ಎಂದೂ ಈ ಬಗ್ಗೆ ಹೇಳಿಕೊಳ್ಳುವುದಿಲ್ಲ. ಪ್ರತಿಭಾವಂತ ಲೇಖಕಿಯರೆಂದರೆ ಅವರಿಗೆ ಬಹಳ ಅಭಿಮಾನ. ಹಲವರ ಲೇಖನಗಳು, ಕೃತಿಗಳು ಪ್ರಕಟವಾಗುವಲ್ಲಿ ಇವರು ನೆರವು ನೀಡಿದ್ದಾರೆ. ಅಲ್ಲದೆ ಯಾವುದೇ ಕೃತಿ ‘ಉತ್ತಮವಾಗಿದೆ’ ಎನಿಸಿದರೆ ಅದರ ಬಗ್ಗೆ ಮನಃಪೂರ್ವಕವಾಗಿ ಮೆಚ್ಚುಗೆಯ ನುಡಿಗಳನ್ನಾಡುವರು. ಇತರರಿಗೆ ತಾವು ನೀಡಿದ ಸಹಾಯಗಳನ್ನು ಕುರಿತು ಮಾತಾಡದಿದ್ದರೂ, ಇತರರಿಂದ ತಮಗೆ ದೊರೆಯುವ ಸಣ್ಣಪುಟ್ಟ ಸಹಾಯಗಳನ್ನೂ ಅತಿಶಯವೆನ್ನುವಂತೆ ಹೇಳುವುದು ಅವರ ಸೌಜನ್ಯಕ್ಕೆ ಸಾಕ್ಷಿ.

‘ನೆನಪು-ಸಿಹಿ-ಕಹಿ’ ಓದಿದವರಲ್ಲಿ ಕೆಲವರಾದರೂ ನನ್ನೊಡನೆ ಹೀಗೆ ಹೇಳಿದ್ದಾರೆ, “ನಾನು ಆ ಪುಸ್ತಕವನ್ನಿಟ್ಟುಕೊಂಡಿದ್ದೇನೆ. ಆಗಾಗ ಓದುತ್ತಿರುತ್ತೇನೆ. ಸಣ್ಣಪುಟ್ಟ ಕಷ್ಟಗಳಿಗೆಲ್ಲಾ ತಲೆಯ ಮೇಲೆ ಕೈಹೊತ್ತು ಕುಳಿತುಕೊಳ್ಳುತ್ತೇವಲ್ಲಾ! ಪಾಪ, ಇವರ ಮುಂದೆ ನಮ್ಮದೇನು ಮಹಾ ಎನಿಸುತ್ತದೆ”, ಎಂದು. ಇಂತಹ ಮಾತು ಗಳನ್ನು ಕೇಳಿದಾಗ ನನಗೆ ಮಹಾಭಾರತದ ಒಂದು ಸಂದರ್ಭ ನೆನಪಿಗೆ ಬರುತ್ತದೆ. ಪಾಂಡವರು ವನವಾಸವನ್ನು ಅನುಭವಿಸುತ್ತಿದ್ದ ಕಾಲದಲ್ಲಿ, ಒಂದು ದಿನ ಮಹರ್ಷಿ ಗಳಾದ ಬೃಹದಶ್ವರು ಯುಧಿಷ್ಠಿರನ ಆಶ್ರಮಕ್ಕೆ ಆಗಮಿಸಿದರು. ಅವರನ್ನು

ಸ್ವಾಗತಿಸಿ ಸತ್ಕರಿಸಿದ ನಂತರ ಯುಧಿಷ್ಠಿರನು ಅವರನ್ನು ಕೇಳುತ್ತಾನೆ, "....ಮಹರ್ಷಿಗಳೇ, ನಿಜವಾಗಿ ಹೇಳಿರಿ. ತಾವು ತ್ರಿಕಾಲಜ್ಞರಾಗಿರುವಿರಿ. ಈ ವಿಶ್ವದಲ್ಲಿ ನನ್ನಂತಹ ಮಂದಭಾಗ್ಯಶಾಲಿಯಾದ ರಾಜನು ಬೇರೆ ಇರುವನೇ? ನನ್ನಷ್ಟು ದುಃಖಿತನಾದ ಮನುಷ್ಯ ಬೇರೊಬ್ಬನಿಲ್ಲವೆಂದೇ ತಿಳಿದಿದ್ದೇನೆ". ಆಗ ಬೃಹದಶ್ವರು, "ನಿನಗಿಂತಲೂ ಹೆಚ್ಚು ಸಂಕಟಕ್ಕೊಳಗಾಗಿರುವ ಮನುಷ್ಯರೇ ಇಲ್ಲವೆಂದು ಹೇಳಬೇಡ. ನಿನಗಿಂತ ಹೆಚ್ಚು ಕಷ್ಟಗಳನ್ನನುಭವಿಸಿದ ರಾಜನೊಬ್ಬನ ಇತಿಹಾಸವನ್ನು ನಿನಗೆ ಹೇಳುತ್ತೇನೆ". ಎಂದು ಹೇಳಿ, ನಳೋಪಾಖ್ಯಾನವನ್ನು ಹೇಳಲು ಪ್ರಾರಂಭಿಸಿದರು.

* * *

ಜೀವನದಲ್ಲಿ ಬರುವ ಕಷ್ಟ, ನೋವುಗಳು ಕೆಲವರನ್ನು ಕಠಿಣ ಸ್ವಭಾವದವರನ್ನಾಗಿ ಮಾಡಿಬಿಡುತ್ತವೆ. ಅನುಪಮಾ, ಅಂತಹ ಅಪಾಯಕ್ಕೆ ಒಳಗಾಗಲಿಲ್ಲ. 'ಒಂದು ಜೀವ ಕಷ್ಟಪಡುವುದಕ್ಕೆ ಮಿತಿಯೇ ಇಲ್ಲವೇ' ಎನ್ನುವಂತಹ ಪರಿಸ್ಥಿತಿಯನ್ನೆದುರಿಸಿಯೂ ಶಾಂತರಾಗಿಯೇ ಉಳಿದರು. ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ಕಳೆದುಕೊಳ್ಳಲಿಲ್ಲ. ಜೀವನದ ಪ್ರತಿಯೊಂದು ನಿಮಿಷವನ್ನೂ ಉಪಯುಕ್ತವಾಗಿ ಕಳೆಯಬೇಕು ಎಂಬ ಧೋರಣೆ ಅವರದು. ಅದರಂತೆಯೇ ಹಲವರಿಗೆ ಮಾದರಿಯಾಗಬಲ್ಲಂತಹ, ಧೈರ್ಯತುಂಬಬಲ್ಲಂತಹ ಸಾರ್ಥಕ ಬದುಕನ್ನು ಅವರು ಬಾಳಿದ್ದಾರೆ.

ಸ್ಫೂರ್ತಿಯ ಚಿಲುಮೆ ಶ

-ಶಶಿಕಲಾ ವೀರಯ್ಯಸ್ವಾಮಿ

೧೯೭೫-'೭೬ರಲ್ಲಿ ಮೈಸೂರಲ್ಲಿ ಪ್ರಥಮ ಲೇಖಕಿಯರ ಸಮ್ಮೇಳನ. ದೂರದ ಬೀದರದಲ್ಲಿ ಉಪನ್ಯಾಸಕಿಯಾಗಿದ್ದ ನನ್ನನ್ನು ಕವಿಗೋಷ್ಠಿಗೆ ಆಹ್ವಾನಿಸಲಾಗಿತ್ತು. ನನ್ನ ಕವಿತಾವಾಚನದ ಪ್ರಪ್ರಥಮ ವೇದಿಕೆಯಾಗಿತ್ತು ಅದು - ಸ್ವಲ್ಪ ಭಯ-ಆತಂಕಗಳಿಂದಲೇ ಇದ್ದೆ. ತೀರಾ ಹಳ್ಳಿಯ ಸಂಕೋಚಗಳಿಂದ ಇನ್ನೂ ಮುಕ್ತಳಾಗಿರಲಿಲ್ಲ. ಆರುನೂರು ಕಿ.ಮೀ. ಪ್ರಯಾಣ ಮಾಡಿ ಹಿಂದಿನ ದಿನ ವಿ.ವಿ.ದ ಅತಿಥಿ ಗೃಹದಲ್ಲಿ ತಂಗಿದ್ದಾಯಿತು. ಆದರೆ ವಾತಾವರಣದ ವ್ಯತ್ಯಾಸದಿಂದಾಗಿ ಜೋರಾಗಿ ನೆಗಡಿ ಬಂದು ಗಂಟಲು ಕಟ್ಟಿಕೊಂಡು ಬಿಟ್ಟಿತು. ಇದ್ದದ್ದೂ ಭಯ ಹೆಚ್ಚಾಯಿತು. ಲೇಖಕಿ ಸೋದರಿಯೊಬ್ಬರು "ಇಲ್ಲೇ ಡಾ। ಅನುಪಮಾ ನಿರಂಜನ ಇದ್ದಾರೆ. ಕೇಳೋಣ ಬನ್ನಿ" ಅಂದು ಕರೆದೊಯ್ದರು. ಪ್ರಾಥಮಿಕ ಶಾಲೆಯ ನಾಲ್ಕೋ ಐದನೆಯದೋ ಕ್ಲಾಸಿನಲ್ಲಿ ಓದುತ್ತಿರುವಾಗ ಅವರ "ಸಂಕೋಲೆಯೊಳಗಿಂದ" ಕಾದಂಬರಿ ಓದಿ ಅದರ ನಾಯಕಿಯ ದುರಂತಕ್ಕಾಗಿ ದುಃಖಿಸಿದ್ದೆ. "ನೂಲು ನೆಯ್ದ ಚಿತ್ರ"," ಶ್ವೇತಾಂಬರಿ", "ಹಿಮದ ಹೂ"

ಮುಂತಾದ ಕೆಲವು ಕಾದಂಬರಿಗಳನ್ನು ತಂದೆ-ತಾಯಿ ಲೈಬ್ರರಿಯಿಂದ ತಂದಾಗ ಕದ್ದು-ಮುಚ್ಚಿ ಓದಿದ್ದೆ. (ಆಗ ವಿದ್ಯಾರ್ಥಿಗಳು ಪಠ್ಯ ಬಿಟ್ಟು ಕಾದಂಬರಿ ಓದುವುದು ಮಹಾಪರಾಧವಾಗಿತ್ತು!) ಅವುಗಳ ಜೀವಂತ, ವಾಸ್ತವ ಚಿತ್ರಣಕ್ಕಾಗಿ ಕಾದಂಬರಿಗಾರ್ತಿಯ ಬಗ್ಗೆ ಅಭಿಮಾನ ಬೆಳೆದಿತ್ತು. ಈಗ ಅವರನ್ನೇ ಪ್ರತ್ಯಕ್ಷವಾಗಿ ನೋಡಲಿರುವೆನೆಂಬ ಭಾವನೆಯಿಂದ ಮನಸ್ಸು ಹಿಗ್ಗಿ ಹೀರೇಕಾಯಿ ಆಯಿತು. ಕಾವ್ಯಕ್ಷೇತ್ರದಲ್ಲಿ ನೆನಪಿಡುವಂಥ 'ಹೆಸರೇ'ನೂ ನನಗಾಗ ಇರಲಿಲ್ಲ. ಆದರೂ ನಗು ನಗುತ್ತ ವಿಚಾರಿಸಿದರು. ಗೊಗ್ಗರು ದನಿಯಲ್ಲೇ ವಿವರಿಸಿದೆ. ತಮ್ಮ ಬಳಿಯೇ ಇದ್ದ ಕೆಲವು ಮಾತ್ರೆಗಳನ್ನು ಕೊಟ್ಟರು. ಅವರು ಅಪ್ಯಾಯತೆಯಿಂದ ನನ್ನನ್ನಾಗ ಮುಟ್ಟಿದರಲ್ಲ ಎನ್ನುವದೇ ಒಂದು ದೊಡ್ಡ ಸಂತೋಷದ ವಿಷಯವಾಗಿತ್ತು.

ಕವಿ ಗೋಷ್ಠಿಯಲ್ಲಿ ನನ್ನ "ಅಪ್ಪನಿಗೊಂದು ಪತ್ರ" ತುಂಬ ಜನರಿಗೆ ಮೆಚ್ಚಿಕೆಯಾಯಿತು. ಅಂದೇ ರಾತ್ರಿ ಊಟಕ್ಕೆ ಕುಳಿತಾಗ ಹತ್ತಿರ ಬಂದು ಅನುಪಮಾ ನನ್ನ ಉತ್ತರ ಕರ್ನಾಟಕದ ಭಾಷೆಯಲ್ಲೇ. "ಭ್ಯಾಳ ಛಂದ ಇತ್ರೀ ನಿಮ್ಮ ಪದ್ಯಾ, ಹಿಂಗೇ ಬರಕೊಂತ ಇರಬೇಕ ನೋಡ್ರಿ" ಎಂದು ಆತ್ಮೀಯವಾಗಿ ಕೈ ಹಿಡಿದುಕೊಂಡರು. ಅಂದಿನ ಆತ್ಮೀಯತೆ ಇಂದಿನ ವರೆಗೂ ಅವ್ಯಾಹತವಾಗಿ ಹರಿಯುತ್ತ ನನ್ನ ಬದುಕನ್ನು ಸಹನೀಯಗೊಳಿಸಿದ ವಾತ್ಸಲ್ಯಮಯಿಗಳಲ್ಲಿ ಅವರೂ ಒಬ್ಬರಾಗಿದ್ದಾರೆ.

ಅನುಪಮಾ ಅಕ್ಕ ಅವರು ಒಬ್ಬ ಸಮರ್ಥ ಬರಹಗಾರರೂ ಹೌದು. ಆದರೆ ಅದಕ್ಕಿಂತ ಹೆಚ್ಚಾಗಿ ಬದುಕನ್ನು ಅದಮ್ಯವಾಗಿ ಪ್ರೀತಿಸುವ ಪ್ರಕೃತಿಯ ವಿರುದ್ಧ ಹೋರಾಡುತ್ತಲೇ ಅಪಾರ ಜೀವನೋತ್ಸಾಹವನ್ನು ಉಳಿಸಿಕೊಂಡು ಬಂದಿರುವ ಅವರ ಚೈತನ್ಯಶೀಲ ವ್ಯಕ್ತಿತ್ವದಿಂದಾಗಿ ನನಗೆ ತುಂಬ ಇಷ್ಟವಾಗಿದ್ದಾರೆ. ದೇಹ ಪ್ರಕೃತಿಯ ಅಸ್ತವ್ಯಸ್ತತೆಯ ಜೊತೆಗೇ ಅವರು ಮಾಡಿಕೊಂಡ ಶಿಸ್ತಿನ ಹೊಂದಾಣಿಕೆಗೆ ವಿಸ್ಮಯ ಪಡುವಂತಾಗುತ್ತದೆ. ಅವರ ಅಂತಃಕರಣದಲ್ಲಿ ತೊಯ್ದು ಯಾರೂ ಅವರನ್ನು ಸುಲಭವಾಗಿ ಮರೆಯಲಾರರು. ೧೯೮೨-'೮೩ರಲ್ಲಿ ಮೈಸೂರಲ್ಲಿ ದಸರಾ ಕವಿ ಗೋಷ್ಠಿಯಲ್ಲಿ ಓದಿದ ನನ್ನ ಪದ್ಯದ ಬಗ್ಗೆ "ಕನ್ನಡ ಪ್ರಭ"ದಲ್ಲಿ ಒಳ್ಳೆಯ ವಿಮರ್ಶೆ ಬಂದಿತ್ತು. ನಾನು ಊರಿಗೆ ಮರಳುವಾಗ ಅವರನ್ನು ಕಂಡು ಹೋಗೋಣವೆಂದು ಮನೆಗೆ ಹೋದರೆ, ದಂಪತಿಗಳಿಬ್ಬರೂ ನನ್ನ ಕವಿತೆಯ ಬಗ್ಗೆ ಆಸಕ್ತಿ ತೋರಿಸಿ "ಈಗದನ್ನು ಓದಿ ತೋರಿಸಿ" ಎಂದು ಪ್ರೀತಿಯ ಒತ್ತಾಯದಿಂದ ಓದಿಸಿ, ಕೇಳಿ ಮೆಚ್ಚಿಕೊಂಡರು. ಅನುಪಮಾ ಅಕ್ಕ ಅಂದು ನನ್ನನ್ನು ಊಟಕ್ಕೆ ಅಲ್ಲೇ ಉಳಿಸಿಕೊಂಡು ಹಿರಿಯಕ್ಕನಂತೆ ಕಕ್ಕುಲಾತಿಯಿಂದ ಉಣಬಡಿಸಿದ ಸವಿ ಇಂದೂ ನೆನಪಿನಲ್ಲಿದೆ.

ವೇದಕಾಲದಿಂದಲೂ ಹೆಣ್ಣನ್ನು ವ್ಯಾಪಾರೀ ವಸ್ತುವನ್ನಾಗಿ ಶೋಷಿಸಿದ ವಸ್ತುನಿರೂಪಣೆಯುಳ್ಳ ಅವರ "ಮಾಧವಿ" ನನಗೆ ತುಂಬ ಹಿಡಿಸಿತ್ತು. 'ಮುಕ್ತಿಚಿತ್ರ' ಮತ್ತು 'ಅಳ' ಕಾದಂಬರಿಗಳ ನಾಯಕಿಯರ ದಿಟ್ಟತನ. 'ಘೋಷ'ದ ನವೀನ ವಸ್ತು.

ಹೀಗೆ ಅವರ ವೈವಿಧ್ಯಮಯ ಆಸಕ್ತಿ-ಅಭಿರುಚಿ-ಮಾನವೀಯ ಕಾಳಜಿಗಳಿಂದಾಗಿ ಸಾಹಿತ್ಯ ವಲ್ಲಿ ಒಂದು ಸ್ಥಾನವನ್ನು ಪಡೆದುಕೊಂಡಿವೆ. ಮೂಲಭೂತವಾಗಿ ಹೆಣ್ಣು ತನ್ನ ಶೋಷಣೆಯಿಂದ ಮುಕ್ತಳಾಗಲು ತಾನೇ ಶಕ್ತಳಾಗಬೇಕು ಎಂಬ ಅವರ ಅನೇಕ ಕಾದಂಬರಿಗಳ ನಿಲುವನ್ನು ನಾನು ಮೆಚ್ಚಿಕೊಂಡು ಮನಸಾರೆ ಅಭಿನಂದಿಸಿದ್ದೇನೆ. ಅನುಪಮಾ ಅಕ್ಕ ಅವರ ನಾಯಕಿಯರು ಬದುಕನ್ನು ಸವಾಲಾಗಿ ಸ್ವೀಕರಿಸುವ ಮನೋಬಲದ ಛಲವಂತರು. ಸ್ತ್ರೀಲೋಕಕ್ಕೆ ಸಾಹಿತ್ಯದ ಮೂಲಕ ಆತ್ಮವಿಶ್ವಾಸವನ್ನು, ಅದಕ್ಕೂ ಹೆಚ್ಚಾಗಿ ಆತ್ಮಗೌರವವನ್ನು ಕಲಿಸಿಕೊಟ್ಟವರಲ್ಲಿ ಅವರದು ಹೆಚ್ಚಿನ ಪಾತ್ರವಿದೆ. ಮಹಿಳೆಯರ ಆರೋಗ್ಯದ ವಿಷಯವನ್ನು ಸರಳವಾಗಿ, ರೋಚಕವಾಗಿ, ಪ್ರಯೋಜನ ಕಾರಿಯಾಗಿ ಬರವಣಿಗೆಯಲ್ಲಿ ತಂದು ಸಾಹಿತ್ಯೇತರರನ್ನೂ ಗೆದ್ದ ಪ್ರತಿಭಾವಂತರು ಅವರು. ಹೀಗೆ ಅವರ ರಚನೆಗಳು ಸಾಹಿತ್ಯ ಲೋಕದಲ್ಲೂ, ಜನಸಾಮಾನ್ಯರಲ್ಲೂ ತಮ್ಮದೇ ಆದ ಸ್ಥಾನವನ್ನು ಪಡೆದಿವೆ.

ಇದಲ್ಲದೆ ಅನೇಕ ಸಭೆ-ಸಮಾರಂಭಗಳಲ್ಲಿ ಅವರ ನಿರ್ಭೀತ ವಿಚಾರಧಾರೆ ಗಳನ್ನು ನಾನು ಮೆಚ್ಚಿಕೊಂಡಿದ್ದೇನೆ. ವಿಶೇಷವಾಗಿ ಸ್ತ್ರೀ ಶೋಷಣೆಯ ಕುರಿತು ಹೇಳುವಾಗಲೆಲ್ಲ ಸೂಕ್ಷ್ಮವಾದ ಭಾವಾವೇಶಕ್ಕೆ ಒಳಗಾದುದನ್ನು ಕಂಡು ಅವರ ಮಾನವೀಯ ಅಂತಃಕರಣ ಎಷ್ಟು ಆಳವಾದುದು ಅನಿಸಿ ಹೆಮ್ಮೆ ಪಟ್ಟುಕೊಂಡಿದ್ದೇನೆ. ಎಳೆಯರ ಪ್ರತಿಭೆಯನ್ನು ಕಂಡಾಗ ಹಾರ್ದಿಕವಾಗಿ ಪ್ರೋತ್ಸಾಹಿಸುವ ಅವರ ಅನಸೂಯ ಸ್ವಭಾವಕ್ಕೆ ಮಾರು ಹೋಗಿದ್ದೇನೆ. ನೇರವೂ ಖಚಿತವೂ ಆದ ಅವರ ಅಭಿಪ್ರಾಯ ಗಳು ಸಭೆಯನ್ನೇ ಗೆದ್ದುಕೊಂಡಾಗ ಅಭಿಮಾನದಿಂದ ಚಪ್ಪಾಳೆ ತಟ್ಟಿದ್ದೇನೆ.

ಯಾವುದೇ ವಿಷಯದ ಕುರಿತು ಪತ್ರ ಬರೆದರೂ ತಕ್ಷಣ ಉತ್ತರಿಸುವುದು ಅವರ ಜಾಯಮಾನ. ಪ್ರಕೃತಿ ಅವರಿಂದ ಆರೋಗ್ಯಭಾಗ್ಯ ಕಸಿದುಕೊಂಡಿದ್ದರೂ ಸಣ್ಣ ವಿಷಯವನ್ನೂ ನಿರ್ಲಕ್ಷಿಸದ ಶಿಸ್ತನ್ನು ಬದುಕಿನಲ್ಲಿ ಅಳವಡಿಸಿಕೊಂಡವರು. ಅನೇಕ ಊರುಗಳಲ್ಲಿಯ ಸಮ್ಮೇಳನಗಳಲ್ಲಿ ಅವರ ಜೊತೆ ಹೆಚ್ಚಿಗೆ ಇರುವಂಥ ಅವಕಾಶ ಗಳಿದ್ದಾಗಲೆಲ್ಲ ಸದಾ ನಗುನಗುತ್ತ ವಾತಾವರಣವನ್ನು ಉತ್ತೇಜಿಸುವ ಅವರ ಉಲ್ಲಾಸ ಪ್ರಿಯತೆ ನನಗೆ ತುಂಬ ಸೇರಿದೆ.

ಅನುಪಮಾ ಅಕ್ಕ ಅವರ ಅಹರ್ನಿಶಿ ಬರವಣಿಗೆಗೆ, ಆ ಹಸನ್ಮುಖಕ್ಕೆ ಮೂಲಸೆಲೆ ಯಾದ ಅವರ ಬದುಕಿನ ಪ್ರೀತಿ ನನ್ನನ್ನು ಅವರ ಬಗ್ಗೆ ಗೌರವಿಸುವಂತೆ ಮಾಡಿದೆ. ಅವರ ಸಾಹಿತ್ಯ ಕನ್ನಡದ ಸಾಹಿತ್ಯ ಸಮೃದ್ಧಿಗೆ ಎಷ್ಟು ಕಾರಣವಾಗಿದೆಯೋ ಅಷ್ಟೇ ಅವರ ವ್ಯಕ್ತಿತ್ವ ನನ್ನಂಥ ಅನೇಕರಿಗೆ ಸ್ಫೂರ್ತಿದಾಯಕವಾಗಿದೆ. ಬರವಣಿಗೆಯಲ್ಲೂ-ಬದುಕಿನಲ್ಲೂ ಅವರು ಅರಳಿದಂತೆ ಆ ಸುಗಂಧ ನನ್ನಂಥ ತಂಗಿಯರಿಗೆ ಹೃದಯಸ್ಪರ್ಶಿ ಯಾಗಲಿ. ಅವರು ಉಪಮಾತೀತರು. ಅವರಿಗೆ ಅವರೇ ಉಪಮೆ.

೦ ಸಾರ್ಥಕವಾದ ಹೆಸರು

-ನೀಳಾದೇವಿ

ಅನುಪಮಾ ಅವರ ಸಾಹಿತ್ಯಸೇವೆ ಕನ್ನಡದ ನಾಡಲ್ಲಿ ಚಿರಪರಿಚಿತವಾಗಿ ಹೋಗಿದೆ. ಅವರು ಅತ್ಯುತ್ತಮ ಲೇಖಕಿಯರಲ್ಲೊಬ್ಬರು, ಸಂದೇಹವಿಲ್ಲ. ಆದರೆ ಹತ್ತಿರದಿಂದ ಅವರನ್ನು ಬಲ್ಲವರೇ ಬಲ್ಲರು-ಅವರ ಬರಹಕ್ಕಿಂತ ಪ್ರಭಾವಶಾಲಿಯಾಗಿರುವುದೆಂದರೆ ಅವರ ಜೀವನ ರೀತಿ.

ನಗು ಮುಖದ, ಪಾದರಸದಂತೆ ನಡೆದಾಡುವ, ತೀಕ್ಷ್ಣಮತಿಯ, ಆರೋಗ್ಯವಂತ, ಉತ್ಸಾಹದ ಚಿಲುಮೆಯೇ ನಮ್ಮ ಅನುಪಮಾ. ಸಾಕೆ ? !! ಇವಿಷ್ಟೂ ಗುಣಗಳು ಮೇಲ್ನೋಟಕ್ಕೇ ಕಂಡುಬರುವಂತಹದ್ದು. ಸ್ವಲ್ಪ ಅವರನ್ನು ಸಮೀಪಿಸಿ ಒಡನಾಡಿದರೆ ಮತ್ತೊಂದು ವಿಶಿಷ್ಟ ಗುಣ ನಮ್ಮ ಜೀವನವನ್ನೇ ಪ್ರಕಾಶಪಡಿಸಿಬಿಡುವುದು. ನಾವು ಅವರೊಂದಿಗೆ ಒಡನಾಡಿಬಿಟ್ಟರೆ ಇನ್ನು ಜೀವನದಲ್ಲಿ ಅಂಜುವುದಕ್ಕೆ ಅಂಜಲೊಲ್ಲೆವು. ಹೆದರಿಕೆಯನ್ನೇ ಹೆದರಿಸಬಲ್ಲೆವು. ಆತಂಕ ಇನ್ನಿಲ್ಲ! ನಮಗೆ ಅವರೊಂದು ಸ್ಪರ್ಶ ಮಣಿಯಾಗುವರು. ಇದಕ್ಕೆ ಕಾರಣ ಅವರ ಜೀವನ ದೃಷ್ಟಿ, ಜೀವನದಲ್ಲಿ ಏನು ಕಷ್ಟ ಬಂದರೂ ಹೆದರದೆ ಜೀವನವನ್ನೇ ಅಶೋತ್ತರಗಳ ಗುರಿಯತ್ತ ಸೆಳೆದು ಸಾಧಿಸಬಲ್ಲ ಅವರ ಶಕ್ತಿ ! ಇಷ್ಟು ಮನೋಬಲ ಇರುವ ಮತ್ತೊಬ್ಬರನ್ನು ನಾನು ಕಂಡಿಲ್ಲ.

ಹಿಂದೆ ಆ ಒಂದು ದಿನ ಟಿ. ಸುನಂದಮ್ಮನವರು ಮತ್ತು ನಾನು ಬಸವನಗುಡಿಯ 'ನರ್ಸಿಂಗ್ ಹೋಂ' ಒಂದಕ್ಕೆ ಡಾ। ಅನುಪಮಾ ಅವರನ್ನು ನೋಡಲು ಹೋದೆವು. ಆಗ ಈ 'ಡಾಕ್ಟರ್' ಅವರು ಡಾಕ್ಟರಾಗಿರಲಿಲ್ಲ. ಕ್ಯಾನ್ಸರ್ ಆಪರೇಶನ್ ಮಾಡಿಸಿಕೊಂಡ ರೋಗಿಯಾಗಿಬಿಟ್ಟಿದ್ದರು. ಈಗಾಗಲೇ ಎರಡು ಬಾರಿ ಆಪರೇಶನ್ ಆಗಿದ್ದರೂ ಲವಲವಿಕೆ, ಚಟುವಟಿಕೆಯಿಂದ ಕೂಡಿಯೇ ಇದ್ದ ಅವರ ಒಡಲು ಈಗ ಮೂರನೇ ಬಾರಿಯೂ ಆಪರೇಶನಿಗೆ ತುತ್ತಾದಾಗ ಹೇಗೆ ಅನುಭವಿಸುತ್ತಿದ್ದಾರೆ ಎಂದು ನೊಂದುಕೊಂಡೇ ನಡೆದೆವು. ಶಸ್ತ್ರಚಿಕಿತ್ಸೆ ಹೊಟ್ಟೆಗಾಗಿ ಒಂದೆರಡು ದಿನಗಳಾಗಿದ್ದವು. ವಾರ್ಡಿನ ಹೊರಗೆ ಬಾಲ್ಕನಿ ಕುರ್ಚಿಯೊಂದರಲ್ಲಿ ಗಂಭೀರ ಮುದ್ರೆಯಲ್ಲಿ ಕುಳಿತಿದ್ದರು ಅವರ ಪತಿ ನಿರಂಜನರು. ಅವರಿಗೆ ವಂದಿಸಿದಾಗ "ಹೋಗಿ, ಒಳಗೆ ಹೋಗಿ...." ಎಂದು ವಾರ್ಡಿನ ಕಡೆ ತೋರಿದರು. ಆದರೆ ಅಲ್ಲಿ ಕಂಡ ಅಚ್ಚರಿ ಏನು !.... ನರಳುವ, ದುಗುಡ ಹೇಳಿಕೊಳ್ಳುವ ರೋಗಿ ಅಲ್ಲಿರಲಿಲ್ಲ. ನೈಟಿಯಲ್ಲಿ ವಿಶ್ರಮಿಸಿಕೊಳ್ಳುತ್ತಾ, ನಗು ಮುಖದಿಂದ ನಮ್ಮನ್ನು ಸ್ವಾಗತಿಸಿದ ಎಂದಿನದ್ದೇ ಚಟುವಟಿಕೆ ಪುಟಿಯುತ್ತಿದ್ದ 'ಅನುಪಮಾ' ! 'ಆ ಕ್ಷಣಕ್ಕೆ ಕಾಯಿಲೆ ಬಂದಿರುವುದು ಅವರ ದೇಹಕ್ಕಲ್ಲ, ನಮ್ಮ ಮಿದುಳಿಗೆ ಎನ್ನುವ ಭಾವನೆ ಸುಳಿದುಹೋಯಿತು" ಅವರಿಗಿಂತ ಮುಖ ಸಪ್ಪಗಾದದ್ದು ನನಗೇ!

ಅವರಿಗೆ ಕ್ಯಾನ್ಸರ್ ಕಾಣಿಸಿಕೊಂಡು ಈಗ ಹತ್ತುವರ್ಷಗಳಾಗಿವೆ. ಇದೀಗ ನಾಲ್ಕನೇ ಅಂಗಕ್ಕೆ ಕಾಯಿಲೆ ಹರಡಿ ಅದಕ್ಕೂ ಮೊನ್ನೆ ಮೊನ್ನೆ ಅಪರೇಶನ್ ಆಗಿದೆ. ಈ ಹತ್ತು ವರ್ಷಗಳಿಂದ ಒಂದೇ ಸಮ ರಾಕ್ಷಸ ರೋಗದ ಧಾಳಿ ಅವರ ಮೈಮೇಲೆ ನಡೆದಿದೆ. ಒಮ್ಮೆಯಂತೂ ಔಷಧಗಳ ಪ್ರಭಾವದಿಂದ ತಲೆಗೂದಲೆಲ್ಲಾ ಪೂರ್ತಿ ಉದುರಿಹೋಗಿತ್ತು. ಟೋಫನ್ ಹಾಕಿಕೊಂಡೇ ನಗುನಗುತ್ತಾ ಕಾಯಿಲೆಗೆ ಪ್ರತೀಕಾರ ತೆಗೆದುಕೊಂಡಿದ್ದರು! ಈ ಹತ್ತು ವರ್ಷಗಳಲ್ಲಿ ಅವರ ಸಾಹಿತ್ಯಸೇವೆ ಹಿಂದೆ ಇದ್ದದ್ದ ಕ್ಕಿಂತ ಹತ್ತುಪಟ್ಟು ಹೆಚ್ಚು ಆಗಿದೆ. "ಕೊಳಚೆ ಕೊಂಪೆಯ ದಾನಿಗಳು", "ಘೋಷ", "ಆಳ", "ನೆನಪು-ಸಿಹಿ-ಕಹಿ", "ಅಂಗೈಯಲ್ಲಿ ಯೂರೋ-ಅಮೇರಿಕ" ಇಂತಹ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ದೇಹಕ್ಕೆ ಕಾಯಿಲೆ ಹಿಡಿದರೆ, ಅವರ ವಿದ್ವತ್ತಿಗೆ ಪ್ರಶಸ್ತಿ ಗಳ ಸರಮಾಲೆಯೇ ಬಂದಿದೆ ಈ ಹತ್ತುವರ್ಷಗಳಲ್ಲಿ. ೧೯೭೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸೋವಿಯಟ್ ನೆಹ್ರೂ ಪ್ರಶಸ್ತಿ, ೧೯೮೧ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೮೫ರಲ್ಲಿ "ಅಂಗೈಯಲ್ಲಿ ಯೂರೋ-ಅಮೆರಿಕಾ"ಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಈ ಪ್ರವಾಸ, ಅವರು ಕಾಯಿಲೆ ಶುರುವಾದ ಮೇಲೆ ಒಬ್ಬಂಟಿಗರಾಗಿಯೇ ಯೂರೋಪು ಅಮೆರಿಕಾವನ್ನೆಲ್ಲ ನೋಡಿದ ಪ್ರವಾಸವಾಗಿದೆ. ನಂತರ ೧೯೮೭ರಲ್ಲಿ ಅವರ ಆತ್ಮಕತೆ "ನೆನಪು : ಸಿಹಿ-ಕಹಿ"ಗೆ ತಿರುಮಲಾಂಬಾ ಪ್ರಶಸ್ತಿ ಬಂದಿತು. ಈ ಪ್ರಶಸ್ತಿಯನ್ನು ಇಡೀ ಭಾರತದಲ್ಲಿ, ಯಾವ ಭಾಷೆಯಲ್ಲಾದರೂ ಸರಿ, ಮಹಿಳೆಯ ರಿಂದ ರಚಿಸಲ್ಪಟ್ಟ ಅತ್ಯುತ್ತಮ ಕೃತಿಗೆ ಕೊಡುವರು. ಇಷ್ಟೆಲ್ಲ ಸಾಧನೆಯೊಂದಿಗೆ ಅವರು ನಿರಂಜನರ ಆರೋಗ್ಯಕ್ಕೂ ಒಂದು ಊರುಗೋಲಾಗಿದ್ದಾರೆ. ಪಾರ್ಶ್ವ ವಾಯುವಿನಿಂದ ಪೀಡಿತರಾಗಿ ಓಡಾಡಲು ಸಾಧ್ಯವಾಗದಿರುವ ನಿರಂಜನರಿಗೆ ಧೈರ್ಯ ಕೊಡುವುದರ ಜೊತೆಗೆ ಸಭೆ, ಸಮಾರಂಭಗಳಲ್ಲಿ ಅವರನ್ನು ವೇದಿಕೆಗೆ ಕರೆತರುವುದರಿಂದ ಮೊದಲ್ಗೊಂಡು ಮನೆಯಲ್ಲಿ ಅವರ ಉಪಚಾರವನ್ನೆಲ್ಲಾ ಮಾಡುವ ಪತ್ನಿ ಈಕೆ. ಇವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ದೊಡ್ಡವಳು ತೇಜಸ್ವಿನಿ. ಕನ್ನಡದ ಸುಪ್ರಸಿದ್ಧ ಕವಯಿತ್ರಿ. ಈಗ ತಾನೆ ಅಮೇರಿಕಾದಿಂದ ಹೆಚ್ಚಿನ ವಿದ್ಯಾಭ್ಯಾಸ ಮುಗಿಸಿ ಹೈದ್ರಾಬಾದಿ ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿದ್ದಾಳೆ. ಎರಡನೆಯವಳು ಸೀಮಂತಿನಿ. ತಂದೆಯ ಸಾಹಿತ್ಯಕ ವ್ಯವಸಾಯಕ್ಕೆ ಬಲ ಭುಜದಂತೆ ನೆರವು ಕೊಡುತ್ತಾಳೆ. ತಾಯಿಯ ದಿಟ್ಟತನ ಮಕ್ಕಳನ್ನೂ ಗಟ್ಟಿಮಾಡಿದೆ. ಕ್ರಿಯಾಶೀಲರನ್ನಾಗಿ ಮಾಡಿದೆ.

ಯಾರಾದರೂ ಸ್ವಲ್ಪ ಅನಾರೋಗ್ಯ ಕಂಡರೂ ಹೆದರಿ ಜೀವ ಸಣ್ಣದು ಮಾಡಿಕೊಳ್ಳುವವರು ಈ ಕುಟುಂಬವನ್ನು ನೋಡಬೇಕು; ಕಲಿಯಬೇಕು. ಬಂದದ್ದ ನ್ನೆಲ್ಲಾ ಎದುರಿಸಿ, ಬೆಳಕು ಹರಡಿ ಕೊಡುವ ಸ್ವಭಾವ ಅವರದ್ದು.

ನಾನು ಅನುಪಮಾ ನಿರಂಜನರನ್ನು ಮೊದಲ ಬಾರಿ ಭೇಟಿಯಾದದ್ದು ಮುಂಬಯಿಯಲ್ಲಿ ನಾಡಹಬ್ಬದ ಸಮಾರಂಭದ ವೇದಿಕೆ ಮೇಲೆ. ಅಂದಿನಿಂದ ಮಾನಸಿಕ ವಾಗಿ ಅವರನ್ನು ಸೋದರಿಯಂತೆಯೇ ಸ್ವೀಕರಿಸಿದ್ದೇನೆ. ನಾನು ಬೆಂಗಳೂರಿಗೆ ಬಂದ

ಮೇಲೆ ನಾವು ಹದಿನಾಲ್ಕು ಲೇಖಕಿಯರು ಪ್ರತಿ ತಿಂಗಳೂ ಒಬ್ಬೊಬ್ಬರ ಮನೆಯಲ್ಲಿ ಸರದಿಯಂತೆ ಸೇರಿ ಸಾಹಿತ್ಯಕ ವಿಷಯಗಳನ್ನು ಚರ್ಚಿಸುತ್ತಿದ್ದೆವು. ಈಚೀಚೆಗಷ್ಟೇ ಅದು ನಿಂತುಹೋಯಿತು. ಆ ದಿನಗಳಲ್ಲಿ ಅನುಪಮಾ ಅವರು ತಪ್ಪದೆ ವೇಳೆಗೆ ಕ್ಲಪ್ತ ವಾಗಿ ಹಾಜರಿರುತ್ತಿದ್ದರು. ಹಾಗೆ ಸೇರಿದಾಗ ನಾವುಗಳು ಎಂದರೆ ಅವರನ್ನು ಹೊರತು ಮಿಕ್ಕವರೆಲ್ಲಾ ಸಾಹಿತ್ಯಕ ವಿಚಾರದ ಜೊತೆಗೆ ಅಡಿಗೆ ಸಾಹಿತ್ಯವನ್ನೂ ಮೇಜಿನ ತುಂಬಾ ಹರಡಿಬಿಟ್ಟು, ಅಡಿಗೆ ತಿಂಡಿ ಇಂತಹ ವಿಚಾರವನ್ನು ಮಾತಿಗೆ ತೆಗೆದುಕೊಂಡು ಸಾಹಿತ್ಯದ ವೇಳೆಯನ್ನು ಕೆಲವು ಸಲ ದಂಡಮಾಡಿ ಬಿಡುತ್ತಿದ್ದದ್ದು ಉಂಟು. ಅದು ಅವರಿಗೆ ರುಚಿಸುತ್ತಿರಲಿಲ್ಲ. ನಮ್ಮ ಮೀಟಿಂಗ್‌ನಲ್ಲಿ ಈಟಿಂಗ್‌ದೇ ಪ್ರಾಬಲ್ಯವಾದರೆ ನಾವು ಲೇಖಕಿಯರು ಒಟ್ಟಾಗಿ ಸೇರುವ ಶ್ರಮ ಸುಮ್ಮನೇ ಏಕೆ ಎಂದು ನಮ್ಮನ್ನು ಅಡ್ಡ ದಾರಿಯಿಂದ ನೇರ ದಾರಿಗೆ ತರುತ್ತಿದ್ದರು. ನಂತರ ಅವರಿಗೆ ಅನಾರೋಗ್ಯ ನಿಮಿತ್ತ ಬರುವುದು ಕಷ್ಟವಾಗಿ ಬರುವುದನ್ನು ನಿಲ್ಲಿಸಿದರು. ಆದರೆ ಸುಮಾರು ಹತ್ತು, ಹನ್ನೆರಡು ವರ್ಷ ನಾವು ಸೇರುತ್ತಿದ್ದಾಗಿನ ಆ ಆನಂದವನ್ನು ಈಗಲೂ ಮೆಲಕು ಹಾಕಿ ಚಪ್ಪರಿಸುತ್ತೇವೆ.

ಅನುಪಮಾ ಒಂದು ಚೇತನ ತುಂಬಿದ ರಥ. ಮೂಢ ನಂಬಿಕೆಗಳ ವಿರುದ್ಧ ಅವರು ಮಾಡುವ ಯುದ್ಧವೇನು, ಉದಯೋನ್ಮುಖಿ ಲೇಖಕರಿಗೆ ಅವರು ಕೊಡುವ ಪ್ರೋತ್ಸಾಹವೇನು, ಗುರಿ ಸಾಧಿಸಲು ಅವರು ಇಡುವ ದಿಟ್ಟ ಹೆಜ್ಜೆಗಳೇನು....ಒಂದೊಂದು ನೆನೆದರೂ 'ಅನುಪಮಾ' ಅನುಪಮರೇ.... ಸಾರ್ಥಕವಾದ ಹೆಸರನ್ನು ಅವರು ಕಾವ್ಯ ನಾಮವಾಗಿ ಇರಿಸಿಕೊಂಡಿದ್ದಾರೆ.

೧ ಉದ್ದಾಮ ಸಾಹಿತಿ

-ಟಿ. ಸುನಂದಮ್ಮ

ಎಂದಿನಂತೆ ಅದೊಂದು ದಿನ. ಗೃಹಕೃತ್ಯದ ಬೆಳಗಿನ ಕರ್ತವ್ಯ ಮುಗಿಸಿ ದಿನ ಪತ್ರಿಕೆಯ ಪುಟ ಬಿಡಿಸಿದೆ.

"ಶ್ರೀ ನಿರಂಜನ (ಕುಳಕುಂದ ಶಿವರಾಯ) ಮತ್ತು ಶ್ರೀಮತಿ ಅನುಪಮಾ (ವೆಂಕಟಲಕ್ಷ್ಮಿ) ಇವರ ವಿವಾಹ ತಿರುಪತಿಯಲ್ಲಿ ನೆರವೇರಿತು".

-ಸುದ್ದಿ, ನನ್ನನ್ನು ಪುಳಕಿತಳನ್ನಾಗಿ ಮಾಡಿತು; ಅದಕ್ಕೆ ಆಧಾರವಾದ ಕಾರಣವೂ ಇತ್ತು!

ಆಗ ನಾನು ಬಸವನಗುಡಿ ಶ್ರೀ ಸಂಘದ ಪುಸ್ತಕ ಭಂಡಾರದ ಸಂಚಾಲಕಿಯಾಗಿದ್ದೆ. ಚಿಕ್ಕಂದಿನಿಂದ ಸಾಹಿತ್ಯಾಭಿರುಚಿ ಬೆಳೆಸಿಕೊಂಡಿದ್ದ ನನಗೆ ಆ ಕೆಲಸ ಅತಿ ಪ್ರಿಯವಾಗಿತ್ತು. ಪ್ರಕಟವಾದ ಕಾದಂಬರಿಗಳನ್ನು ಲೈಬ್ರರಿಗೆ ಕೊಂಡುತರುವುದು (ಆ ರಾತ್ರಿಯೇ ಓದಿ ಮುಗಿಸಿ ಬಿಡುವುದು) ನನ್ನ ಪರಿಪಾಠವಾಗಿತ್ತು. ಆವರೆಗೆ ನಿರಂಜನರು ಬರೆದ ಕಾದಂಬರಿಗಳನ್ನೆಲ್ಲ ಓದಿದ್ದೆ. ಅನುಪಮಾರವರ 'ಕಣ್ಮಣಿ' ಕಥಾಸಂಕಲನ, ಶ್ವೇತಾಂಬರಿ, ಸ್ನೇಹಪಲ್ಲವಿ ಇತ್ಯಾದಿ ಕೃತಿಗಳನ್ನೂ ಓದಿ ಆನಂದಿಸಿದ್ದೆ. ಇಬ್ಬರು ಪ್ರತಿಭಾವಂತ ಸಾಹಿತಿಗಳ ಬಾಳಬಂಧನ ನನಗೆ ತುಂಬ ಖುಷಿಕೊಟ್ಟಿತ್ತು !

ಪುಸ್ತಕಗಳ ಮೂಲಕ ಪರಿಚಯ ಮುಂದುವರಿದಿದ್ದರೂ ಅನುಪಮಾರವರ ಭೇಟಿ ನನಗಾದದ್ದು ಹತ್ತು ವರ್ಷಗಳ ನಂತರ, "ಲೇಖಕಿಯರ ಸಂಘ"ದ ಪ್ರಾರಂಭೋತ್ಸವದಂದು. ನನಗಿಂತ ಕಿರಿಯವರಾದರೂ-ಕಾದಂಬರಿಗಾರ್ತಿ ಹಾಗೂ ವೈದ್ಯೆ ಎನ್ನುವ ಗೌರವದಿಂದಲೋ ಏನೋ ಅವರನ್ನು ಮತ್ತೆರಡು ಮೂರು ಕಾರ್ಯಕ್ರಮಗಳಲ್ಲಿ ಕಂಡರೂ ಮಾತನಾಡಿಸುವ ಧೈರ್ಯ ಬರಲಿಲ್ಲ!

ಇಷ್ಟರಲ್ಲಿ, ಸರೋಜಾ ನಾರಾಯಣ ರಾವ್ ನನ್ನೊಂದಿಗೆ ಮತ್ತಿಬ್ಬರು ಲೇಖಕಿಯರನ್ನು ಅವರ ಮನೆಗೆ ಆಹ್ವಾನಿಸಿದರು. ಸಾಹಿತ್ಯಕ ವಾತಾವರಣ. ರುಚಿಕರ ಉಪಾಹಾರ, ಉಪಸ್ಥಿತರಿದ್ದ ಅನುಪಮಾರವರೊಂದಿಗೆ ಭಳಿ ಬಿಟ್ಟು ಮಾತುಕತೆ!

ಈ 'ಸಾಹಿತ್ಯಕೂಟ' ಕ್ರಮೇಣ ದೊಡ್ಡದಾಯ್ತು. ಹತ್ತಾರು ಹೆಸರಾಂತ ಲೇಖಕಿಯರು ಸೇರಿದರು. ತಿಂಗಳಿಗೊಮ್ಮೆ ಒಬ್ಬೊಬ್ಬರ ಮನೆಯಲ್ಲಿ ಸೇರುತ್ತಿದ್ದೆವು. ಸಾಹಿತ್ಯಕ್ಕೆ ಸಂಬಂಧಿಸಿದ ವೈವಿಧ್ಯಮಯ ಲೇಖನಗಳು, ವೈಚಾರಿಕ ಚರ್ಚೆಗಳು, ಹೊಸ ಪುಸ್ತಕಗಳ ವಿಶ್ಲೇಷಣೆ-ಹೀಗೆ ಇದೊಂದು ಸಾಹಿತ್ಯ ಕಾರ್ಯಾಗಾರವೇ ಆಯಿತು.

ಈ 'ಕೂಟ'ಗಳ ಜೀವನಾಡಿಯಾಗಿದ್ದವರು ಅನುಪಮಾ. ಲೇಖನಿಗೆ, ಚರ್ಚೆಗೆ, ವಿಚಾರ ವಿನಿಮಯಕ್ಕೆ, ವಸ್ತು ಒದಗಿಸುವುದೇ ಅಲ್ಲದೆ ತಾವೂ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಆದರೆ ೧೯೭೫ರಲ್ಲಿ ಅನುಪಮಾರವರಿಗೆ ಶಸ್ತ್ರಚಿಕಿತ್ಸೆ ನಡೆದ ನಂತರ 'ಸಾಹಿತ್ಯಕೂಟ'ದಿಂದ ನಿವೃತ್ತಿ ಘೋಷಿಸಿದಾಗ, ನಮಗೆಲ್ಲ ದೊಡ್ಡ ನಷ್ಟವಾಯಿತು!

ಈ ಅವಧಿಯಲ್ಲಿ ಅನುಪಮಾ ನನಗೆ ತುಂಬ ಆತ್ಮೀಯರಾಗಿಬಿಟ್ಟಿದ್ದರು. ಪ್ರಕಟವಾದ ಪ್ರತಿಯೊಂದು ಪುಸ್ತಕವೂ ನನಗೆ ಉಡುಗೊರೆಯಾಗಿ ಬರುತ್ತದೆ. 'ದಿನಕ್ಕೊಂದು ಕತೆ' ಸಂಪುಟಗಳು ನನ್ನ ಮೊಮ್ಮಗನಿಗೆ ಬಳುವಳಿಯಾಗಿ ಬಂದಿವೆ. ಅವರ ಸರಳತೆ, ಜೀವನವನ್ನು ಎದುರಿಸುವ ಸ್ಥೈರ್ಯ, ತಾವು ಅಂತಹ ಶ್ರೇಷ್ಠ ಮಟ್ಟದ ಸಾಹಿತಿಯಾಗಿದ್ದೂ ನನ್ನ ಬಗ್ಗೆ ತೋರಿಸುವ ಅಭಿಮಾನ, ಮೆಚ್ಚುಗೆ ನನ್ನ

ಹೃದಯವನ್ನು ಪೂರಾ ಗೆದ್ದುಕೊಂಡಿವೆ. ಅವರ ಆತ್ಮಕಥನದಲ್ಲಿ ನನ್ನನ್ನು 'ತುಂಬ ತಿಳುವಳಿಕಸ್ಥರು, ವಿನಯ ಸಂಪನ್ನರು, ಕುಶಾಗ್ರಮತಿಗಳು' ಎಂದು ವರ್ಣಿಸಿ ನನ್ನ ವ್ಯಕ್ತಿತ್ವಕ್ಕೇ ಗೌರವ ಕೊಟ್ಟುಬಿಟ್ಟಿದ್ದಾರೆ!

೧೯೭೮ರಲ್ಲಿ ಅನುಪಮಾರವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತಾಗ, ನಮ್ಮ ಕೂಟದಲ್ಲೊಂದು ಸರಳ ಸತ್ಕಾರ ಸಮಾರಂಭ ಏರ್ಪಡಿಸಿದ್ದೆವು. ಅವರನ್ನು ಅಭಿನಂದಿಸಿ ನಾನು ನಾಲ್ಕು ಮಾತನಾಡಿದೆ. ಕಣ್ಣು ತುಂಬಿ ಬಂದ ಆ ನಿಃಸ್ವಾರ್ಥ ಜೀವಿ ಅಂದದ್ದು-"ನನಗಿಂತ ಹಿರಿಯರಾದ ಲೇಖಕಿಯರಿದ್ದರು; ಅವರಿಗೆ ಮೊದಲು ಕೊಡಬಹುದಾಗಿತ್ತು!"

ಅನುಪಮಾರವರದು ಶಿಸ್ತಿನ ಹಾಗೂ ಹೃದಯವೈಶಾಲ್ಯದ ಜೀವನ. ಕಾರ್ಯಕ್ರಮಗಳಿಗೆ ಒಪ್ಪಿಕೊಂಡಾಗ ಸಕಾಲಕ್ಕೆ ಹಾಜರಿ-ಅಂದಿನ ವಿಷಯದ ಅಧ್ಯಯನ ನಡೆಸಿ ಟಿಪ್ಪಣಿ ಮಾಡಿಕೊಂಡು ಮಾಡುವ ಪಾಂಡಿತ್ಯಪೂರ್ಣ ಭಾಷಣ. ತಮ್ಮ ಹೊಸ ಕೃತಿಗಳನ್ನು ಇತರ ಲೇಖಕಿಯರು ಕೊಟ್ಟಾಗ ಓದಿ, ಅವರಿಗೆ ಬರೆಯುವ ನಾಲ್ಕು ಮೆಚ್ಚುಗೆಯ ಬೆನ್ನು ತಟ್ಟುವ ಮಾತುಗಳು! ನನಗಂತೂ, ನನ್ನ ಪ್ರತಿ ಲೇಖನಕ್ಕೂ ಪ್ರತಿಯೊಂದು ಆಕಾಶವಾಣಿ ಕಾರ್ಯಕ್ರಮಕ್ಕೂ ಅವರ ಅಭಿನಂದನೆ ಬಾರದ ನೆನಪೇ ಇಲ್ಲ!

ಸಾಮಾನ್ಯವಾಗಿ ಹೆಣ್ಣು ಮಕ್ಕಳ ಬರಹವೆಂದರೆ ಕತೆ, ಕಾದಂಬರಿ. ವೈವಿಧ್ಯಮಯ ವಸ್ತುವನ್ನಾಧರಿಸಿ ಬರೆದಿರುವ ಏಕೈಕ ಮಹಿಳೆ ಎಂದರೆ ಅನುಪಮಾ ಒಬ್ಬರೇ! 'ಮಾಧವಿ'ಯಂತಹ ಪೌರಾಣಿಕ ಕಾದಂಬರಿ, 'ಘೋಷ'ದಂತಹ ರಾಜಕೀಯ ಕಾದಂಬರಿ, 'ಕೊಳಚೆ ಕೊಂಪೆಯ ದಾನಿಗಳು' ಸ್ಲಮ್ ವಾಸಿಗಳ ಬಗ್ಗೆ ಕೃತಿ ಹಾಗೂ ಇತ್ತೀಚೆಗೆ ಧಾರಾವಾಹಿಯಾಗಿ ಮುಕ್ತಾಯವಾದ 'ಉತ್ಖನನ'ದ ವಸ್ತುಕೇಂದ್ರವಾದ ರಚನೆ 'ಆಳ' ಯಾವ ಭಾಷೆಯ ಯಾವ ಕೃತಿಗೂ ಸಮಾನವಾಗಿ ನಿಲ್ಲಬಲ್ಲದು!

ಅನುಪಮಾರವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ಆದರೆ ಕೇಂದ್ರ ಮಟ್ಟದಲ್ಲಿ, ಜ್ಞಾನಪೀಠದ ದೃಷ್ಟಿಯಲ್ಲಿ, ಇಂತಹ ಉದ್ದಾಮ ಸಾಹಿತಿಯನ್ನು ಗುರುತಿಸದಿರುವುದು ವಿಷಾದನೀಯ. ಅನುಪಮಾ ಈ ಕೊರತೆಯನ್ನು ಗಮನಿಸುವ ಹಂತ ಮೀರಿದ ಎತ್ತರಕ್ಕೆ ಬೆಳೆದಿದ್ದಾರೆ. ಆದರೆ ಈ ಕೊರತೆ ಕನ್ನಡಿಗರ ದೌರ್ಭಾಗ್ಯ ಎಂದು ನನ್ನ ಅನಿಸಿಕೆ.

ಅನುಪಮಾ-ನಿರಂಜನರಂತಹ ಪ್ರತಿಭಾವಂತ ಸಾಹಿತಿಗಳನ್ನು ಪಡೆದ ಕರ್ನಾಟಕ ಅದೃಷ್ಟವಂತ ನಾಡು. ಆದರೆ ವಿಧಿ ಈ ದಂಪತಿಗಳಿಗೆ ಒಡ್ಡುತ್ತಿರುವ ಅಗ್ನಿ ಪರೀಕ್ಷೆ ವಿಪರ್ಯಾಸ. "ನೆನಪು ಸಿಹಿ-ಕಹಿ"ಯಲ್ಲಿ ಅನುಪಮಾ ಅಂದಿರುವಂತೆ, "ಈ

ಸಮಯದಲ್ಲಿ ನಾನು ಅತ್ಯಂತ ಸುಖಿ ಎಂದುಕೊಂಡಿದ್ದೆ. ಅನನ್ಯವಾಗಿ ಪ್ರೀತಿಸುವ ಗಂಡ, ಮೇಧಾವಿ ಮಕ್ಕಳು, ಒಳ್ಳೆಯ ವೈದ್ಯಕೀಯ ಪ್ರಾಕ್ಟೀಸ್, ಜೊತೆ ಜೊತೆಗೆ ಸಾಹಿತ್ಯದಲ್ಲೂ ಸಾಕಷ್ಟು ಹೆಸರು. ಆದರೆ, ಆ ಸ್ವರ್ಗಕ್ಕೂ ಇದ್ದಕ್ಕಿದ್ದ ಹಾಗೆ ಕಿಚ್ಚು ಹತ್ತಿತು!"

ಅನುಪಮಾ ಎಂದೆಂದಿಗೂ ಧೃತಿಗೆಡದ ಹೆಣ್ಣುಮಗಳು; ಎರಡನೇ ಬಾರಿ ಶಸ್ತ್ರಚಿಕಿತ್ಸೆಗಾಗಿ ನರ್ಸಿಂಗ್ ಹೋಂ ಸೇರುವ ಕೆಲವೇ ಗಂಟೆಗಳ ಮುನ್ನ, ಗೆಳತಿಯ ಮಗನ ಮದುವೆಗೆ ಬಂದು ಉಪಾಹಾರ, ತಾಂಬೂಲ ಸ್ವೀಕರಿಸಿ ನಗುನಗುತ್ತ ಹೋದ ಧೀಮಂತೆ!

ನನ್ನ ಕಿರಿಯ ಸೋದರಿ, ಆತ್ಮೀಯ ಗೆಳತಿ ಅನುಪಮಾ ಕನ್ನಡತಾಯ ಸೇವೆ ಮುಂದುವರಿಸಲಿ: ಅವರಿಗೆ ದೀರ್ಘಾಯುರಾರೋಗ್ಯ ಭಾಗ್ಯ ಕರುಣಿಸೆಂದು ಸೃಷ್ಟಿ ಕರ್ತನಲ್ಲಿ ನನ್ನ ಮನತುಂಬಿದ ಪ್ರಾರ್ಥನೆ.

'ವೀರವನಿತೆ' ಅ

- ನಿರಂಜನ

ನನ್ನ ಬರೆವಣಿಗೆ ಕರುಣರಸ ಪ್ರಧಾನವಾದದ್ದು ಎನ್ನುತ್ತಾರೆ ಕೆಲವರು. "ಇರಲಿ ಬಿಡಿ," ಎಂದು ಉದ್ಗರಿಸುತ್ತೇನೆ.

"ನಿರಂಜನ, ನಿಮ್ಮದು ಹೆಂಗರುಳು" ಎಂಬ ಮೃದು ಮಾತು ಆಡುತ್ತಾರೆ, ಬೇರೆ ಕೆಲವರು. "ವೀರ" ಎನ್ನುವವರಿಲ್ಲ-ಎಂದು ತಣ್ಣಗಾಗುತ್ತೇನೆ.

ಅನುಪಮಾ ನಿರಂಜನ ಅಭಿನಂದನ ಗ್ರಂಥಕ್ಕೆ ನನ್ನ ಲೇಖನ ಅಗತ್ಯವೆನಿಸದು ಎಂದಿದ್ದೆ. ಆದರೆ ಸಂಪಾದಕ ಈಶ್ವರ ಭಟ್ಟರು ಆದರದಿಂದ ಆಹ್ವಾನವಿತ್ತರು. ನಾನು ಸಿಲುಕಿಕೊಂಡೆನೆಂದು ಅವರು ನಕ್ಕಿರಬೇಕು. ನಿರಂಜನ ಅಭಿನಂದನ ಸಂಪುಟವನ್ನು ಈಶ್ವರಭಟ್ಟರು ಸಂಪಾದಿಸಿದಾಗ ಅನುಪಮಾ ಧಾರಾಳವಾಗಿ ಬರೆದಿದ್ದರು ತನ್ನ ಜೀವನ ಸಂಗಾತಿಯ ಬಗೆಗೆ. ಈಗ ನಾನು ಅಷ್ಟೇ ಔದಾರ್ಯ ತೋರಿಸುವುದು ಬೇಡವೆ ?

ವೆಂಕಟಲಕ್ಷ್ಮಿ ಚಿಕ್ಕವಳಿದ್ದಾಗ (ವಯಸ್ಸು ಹನ್ನೊಂದು) ಮನೆಯ ಸುತ್ತು ಮುತ್ತಲ ಕಿರಿಯರನ್ನು ಜಮಾಯಿಸಿ 'ಧ್ರುವ' ನಾಟಕ ಆಡಿದ್ದರಂತೆ. ಇವರದೂ ಒಂದು ಪಾತ್ರ. ಅದು ತುಮಕೂರು. ವಿದ್ಯಾ ಇಲಾಖೆಯ ಶಾಲಾ ಇನ್‌ಸ್ಪೆಕ್ಟರ್ ತಂದೆಗೆ

ಅಲ್ಲಿಂದ ಬೇಲೂರಿಗೆ ವರ್ಗ. ಬೇಲೂರಿನಿಂದ ಹೊಸಕೋಟೆಗೆ. ಹದಿನಾಲ್ಕರ ಹರೆಯ ಆಗ. ಕಥೆ ಬರೆಯಲು ಆ ಅವಧಿಯಲ್ಲಿ ಆರಂಭ. ಪಳಗಿದ ಕೈ ಮುಂದೆ ಕಾದಂಬರಿಯನ್ನೂ ಬರೆಯಿತು. ಸಾಹಿತ್ಯದ ಚಟಕ್ಕೆ ಅಂಟಿಕೊಂಡು ಆ ದಾರಿಯಲ್ಲೇ ಸಾಗಿದ್ದರೆ ಸ್ವಯಂ ಪ್ರತಿಭೆಯಿಂದಲೇ ಇಪ್ಪತ್ತಕ್ಕೋ ಮೂವತ್ತಕ್ಕೋ ವೆಂಕಟಲಕ್ಷ್ಮಿ ಕರ್ನಾಟಕದ ಹೆಸರಾಂತ ಲೇಖಿಕೆಯಾಗುತ್ತಿದ್ದರು.

ಆಕೆ ಬೆಂಗಳೂರಿನಲ್ಲಿ ಮನೆಯ ಹೊಸ್ತಿಲು ದಾಟಿದ್ದು ಅನಿರೀಕ್ಷಿತವಾಗಿ. ಅಲ್ಲಿ ಇದಿರಾದವನು ಇಪ್ಪತ್ತಾರರ ಕತೆಗಾರ ನಿರಂಜನ. ಅದು ಹೊಸದಾಗಿ ಇಟ್ಟುಕೊಂಡ ಹೆಸರು. ವೆಂಕಟಲಕ್ಷ್ಮಿ ಮೈಸೂರಿಗೆ ಹೋಗಿ ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿನಿಯಾದರು. ಬರೆಯುವವರಿಗೆ ಬೇಡವೆ ಆಧುನಿಕ ನಾಮಧೇಯ ? ಅಂದಿನಿಂದ ಅಂಕಿತ, ಅನುಪಮಾ.

ಸಾಹಿತ್ಯ ಬಯಲಿನಲ್ಲಿ ಮದುವೆ ಅವರಿಬ್ಬರದು - ಜಾತಿಯ ತೊಡಕು; ಮಡಿವಂತಿಕೆಯ ಆತಂಕ. ನಿರಂಜನನ ತಾಯಿ ದೀರ್ಘ ವೈಧವ್ಯದ ಬಳಿಕ ತಲೆ ಬೋಳಿಸಿಕೊಂಡವಳು. ಮಗ ಬರಿಯ ಮನುಷ್ಯ. ಜಾತಿ ಕೆಟ್ಟಿದ್ದರೂ ಬ್ರಾಹ್ಮಣ್ಯದ (ಸುಬ್ರಹ್ಮಣ್ಯದ ?) ಹುಚ್ಚು ವೃದ್ಧೆಗೆ. ಮೊಮ್ಮಕ್ಕಳ ತಾಯಿಯಾಗಲಿದ್ದ ಸೊಸೆಯ ಮೇಲೆ ಮಮತೆ.

ಮದುವೆಗೆಂದು ವರ ಮಾಡಿದ್ದ ಸಾಲ ೨೫೦೦ ರೂ. ಧಾರವಾಡ ತಲಪಿದಾಗ ಚಿಕಿತ್ಸಾಲಯ ಆರಂಭಿಸಲು ಹಣ ಬೇಕು. ಸಾಹಿತ್ಯಾವಲಂಬಿ ನಿರಂಜನನ ಕಾದಂಬರಿ 'ಕಲ್ಯಾಣಸ್ವಾಮಿ' ಮೈಸೂರು ವಿಶ್ವವಿದ್ಯಾನಿಲಯದ ಉಪಪಠ್ಯವಾಗಿ ರೂ. ೭೦೦೦ ಬಂತು. ಡಾ। ಅನುಪಮಾ ನಿರಂಜನ ಪಾರಾದರು. ಮಗಳು ತೇಜಸ್ವಿನಿ ಬಂದಳು. ಇರುಳಿನಲ್ಲಿ ಇವಳ ಆರೈಕೆಯ ಹೊಣೆ ಅಪ್ಪನದು. ಎರಡೂವರೆ ವರ್ಷ ಕಳೆದ ಮೇಲೆ ಬೆಂಗಳೂರಿಗೆ ಮರು ಪ್ರಯಾಣ. ಮತ್ತೆ ಎರಡೂವರೆ ವರ್ಷಗಳಾದ ಬಳಿಕ ಕಿರಿಯ ಮಗಳು ಸೀಮಂತಿನಿಗೆ ಸ್ವಾಗತ. ಅಜ್ಜಿ ಇವಳ ಅವಯವಗಳಿಗೂ ಎಣ್ಣೆ ತೀಡಿ, "ಕಳ್ಳನ ಕಟ್ಟುವಾ" ಎಂದು ರಾಗವೆಳೆದಳು.

ಹೊಸ ಡಾಕ್ಟರ ಚಿಕಿತ್ಸಾಲಯ ಜೀವ ತಳೆಯುತ್ತಿದ್ದಂತೆ, ಸಾಹಿತ್ಯ ದಂಪತಿಯ ಲೇಖನ ವ್ಯವಸಾಯ ಕುದುರಿತು. ಪುಸ್ತಕಗಳಿಗೆ ಪಠ್ಯಲೋಕ ಹತ್ತಿರವಾಯಿತು. ಲಾ.ತಿ. ಸಾಲ ಕೊಟ್ಟರು. ಕೆನರಾ ಬ್ಯಾಂಕ್, "ಎಷ್ಟು ಬೇಕು ? ಯಾಕೆ ಬೇಕು ?" ಎಂದಿತು. ದಂಪತಿ ತಾವು ಗಳಿಸಿದ ದುಡ್ಡು ಎಣಿಸಿದರು. ಸಾಲ ಸಂದಾಯವಾಯಿತು. ಡಾಕ್ಟರಿಗೊಂದು ಕಾರು. ಸಂಸಾರದ ವಾಸಕ್ಕೊಂದು ಮನೆ. ಗೊತ್ತಾದ ದಿನಕ್ಕೆ ಮುಂಚೆಯೇ ಋಣಮುಕ್ತರು, ಪ್ರತಿಸಲವೂ.

ಇಬ್ಬರೇ ಮಕ್ಕಳು ಎಂದು ನಿರ್ಧರಿಸಿದ್ದೆವು. ಗರ್ಭಾಶಯದ ತೋಂದರೆ ಪಲ್ಲವಿ ನುಡಿಯಿತು. 'ಜ್ಞಾನ ಗಂಗೋತ್ರಿ' ಕಿರಿಯರ ವಿಶ್ವಕೋಶದ ಹೊಣೆ ಹೊತ್ತ ವಸು ಕೈಹಿಡಿದವಳನ್ನೂ ನೋಡಿಕೊಂಡೆ. "ಮಕ್ಕಳಿಗೆ ಕಥೆ ಹೇಳುತ್ತೀರಲ್ಲ ? ಬರೆದು ಬಿಡಿ. ದೊಡ್ಡ ಪುಸ್ತಕ. ದಿನಕ್ಕೊಂದು ಕಥೆ" ಎಂದೆ. ಆ ಕೆಲಸಮಾಡಿ ಅನುಪಮಾ ಗೆದ್ದರು. ಬಳಿಕ ನನ್ನ ಸರದಿ. ಎಡ ಭಾಗಕ್ಕೆ ಲಕ್ವಾ ಹೊಡೆಯಿತು. ಬಲಗಾಲು-ಬಲ ಗೈ ಉಳಿದಿದ್ದುವು. ಬರೆಯಲು ಅಷ್ಟು ಸಾಲದೆ ? ಕಥೆಯಲ್ಲ, ಕಾದಂಬರಿಯಲ್ಲ. ಉಳಿದ ಐದು ಸಂಪುಟ. ಇಡಿಯ ಸಂಪಾದಕ ವರ್ಗ ಬೆಟ್ಟವೇರಿತು. ಐದು ವರ್ಷಗಳಿಗೂ ಕಡಮೆ ಅವಧಿಯಲ್ಲಿ ಒಟ್ಟು ಏಳು ಸಂಪುಟಗಳು ಸಿದ್ಧವಾದವು. ಕುಂಟ ಮನೆ ಸೇರಿ 'ಮೃತ್ಯುಂಜಯ' ಬರೆದ. ಆ ಮೇಲೂ ದುಡಿದ, ಇಪ್ಪತ್ತೈದು ಸಂಪುಟಗಳ ವಿಶ್ವ ಕಥಾಕೋಶ. ಇನ್ನೂ ದುಡಿಯಬಲ್ಲೆನೆ ? ಗೊತ್ತಿಲ್ಲ. ಲಕ್ವಾಧಿಪನಾಗಿ ಹದಿನೆಂಟು ವರ್ಷಗಳು ಸಂದಿವೆ. ಇನ್ನೂ ಒಂದೆರಡು ವರ್ಷ ?

ನಿರಂಜನನಿಗೆ ಸರಿಸಮನಾದದ್ದು ಅಥವಾ ಅವನನ್ನು ಮೀರಿಸುವಂಥದ್ದು ಅನುಪಮಾದೇವಿಯ ಸಾಧನೆ. ಕೃತಿಗಳು ಕಣ್ಣು ಕೋರೈಸಿದಾಗ ಕ್ಯಾನ್ಸರ್ ಕಾಡಿತು. ಹತ್ತು ವರ್ಷಗಳ ಕಾಲಾವಧಿಯಲ್ಲಿ ನಾಲ್ಕು ಶಸ್ತ್ರಕ್ರಿಯೆಗಳು. ನಾಲ್ಕನೆಯದು ನಡೆದದ್ದು ಮೊನ್ನೆ. ಕಿಮೋಥಿರೆಪಿ ಈಗ ಆಗುತ್ತಿದೆ. ಈ ವರೆಗಿನ ದಿಟ್ಟತನ ಇನ್ನೂ ಯಾಕೆ ಸಾಧ್ಯವಾಗಬಾರದು ? ವಯಸ್ಸಿನಲ್ಲಿ ನನಗಿಂತ ಹತ್ತುವರ್ಷ ಚಿಕ್ಕವರು. ನಿಸ್ಸಂಕೋಚ ವಾಗಿ ಆ ಒಂದು ದಶಕ ಇನ್ನೂ ಇರಲಿ. ಅದಕ್ಕಿಂತಲೂ ಒಂದೆರಡು ದಶಕ ದೀರ್ಘ ವಾದ ಬಾಳ್ವೆಯೂ ಅವರದಾಗಲಿ. ಇದು ನನ್ನ ಹೃತ್ಪೂರ್ವಕ ಆಶಯ.

"ಗಂಡ ಹೆಂಡತಿ ಇಬ್ಬರಿಗೂ ಪ್ರಶಸ್ತಿಗಳು ಬರುವುದಿಲ್ಲ" ಎನ್ನುತ್ತಿದ್ದರು ಅನುಪಮಾ. ಆ ಶಂಕೆ ಸುಳ್ಳಾಯಿತು. ಅವರಿಗೆ ವಿವಿಧ ಪ್ರಶಸ್ತಿಗಳು ಬಂದುವು. "ಬೇಡ" ಎನ್ನುತ್ತಿದ್ದಂತೆಯೇ ಗಂಡನನ್ನೂ ಕೆಲವು ಕಾಡಿದುವು.

ಇನ್ನೂ ಉನ್ನತ ಪ್ರಶಸ್ತಿಗಳು ಅನುಪಮಾಗೆ ದೊರೆಯಲಿ, ಅವರು ಅನೇಕ ಶ್ರೇಷ್ಠ ಕೃತಿಗಳ ಕರ್ತೃವಾಗಲಿ ಎಂಬುದು ನನ್ನ ಹಾರೈಕೆ.

ಅನುಕಂಪ ನನಗಿಷ್ಟ. ಕರುಣಾಮಯಿಯಾದ ಬುದ್ಧ ನನ್ನ ಪ್ರೀತಿಪಾತ್ರ. ಈ ಗುಣಗಳು ನನ್ನ ಜೊತೆಗಾತಿಯಲ್ಲೂ ಮಕ್ಕಳಲ್ಲೂ ಇರಲಿ ಎಂಬುದು ನನ್ನ ಹಂಬಲ.

ಈ ಲೇಖನದ ಆರಂಭದಲ್ಲಿ ಹೆಂಗರುಳು ಎಂಬ ಪದವನ್ನು ಬಳಸಿದ್ದೆ. "ವೀರ ವನಿತೆ" ಎಂದು ಅನುಪಮಾ ಅವರನ್ನು ಇಲ್ಲಿ ಸಂಬೋಧಿಸಿದರೆ, ಅವರಿಗೆ ಸಂತೋಷ ವಾಗಬಹುದು. ಆ ಸಂತೋಷದಲ್ಲಿ ನಾನೂ ಪಾಲುದಾರನೇ.

ಅನುಪಮಾ ಅಭಿನಂದನ

೨

೧ ಹೋರಾಟಗಾರ್ತಿ-ಪ್ರೋತ್ಸಾಹಕಿ

- ಸಾರಾ ಅಬೂಬಕ್ಕರ್

ನನ್ನ ಪ್ರಥಮ ಕಾದಂಬರಿಯನ್ನೋದಿ ನನಗೆ ಪತ್ರ ಬರೆದವರು ಅನುಪಮಾ. "ಮುಂದಿನ ಬಾರಿ ಬೆಂಗಳೂರಿಗೆ ಬಂದಾಗ ಖಂಡಿತ ಮನೆಗೆ ಬನ್ನಿ" ಎಂದು. ಅಳುಕುತ್ತಲೇ ಅವರ ಮನೆಗೆ ಕಾಲಿಟ್ಟ ನನಗೆ ದೊರೆತದ್ದು ಆತ್ಮೀಯ ಸ್ವಾಗತ. ಎಷ್ಟೋ ವರ್ಷಗಳ ಪರಿಚಯವಿರುವಂತೆ ನಮ್ಮನ್ನು ಬರಮಾಡಿಕೊಂಡಿದ್ದರು ಈ ಸಾಹಿತಿ ದಂಪತಿಗಳು. ಅಂದು ಈ ದಂಪತಿಗಳೊಡನೆ ಕಳೆದ ಅರ್ಧ ಗಂಟೆ ನನ್ನ ಬದುಕಿನಲ್ಲಿ ಎಂದೂ ಮರೆಯಲಾರದ ಅನುಭವ.

ಮುಂದೆ ರಾಜ್ಯ ಮಟ್ಟದ ಲೇಖಕಿಯರ ಸಮ್ಮೇಳನದಲ್ಲಿ ನಾನು ಭಾಗವಹಿಸಿ ವಿಚಾರ ಗೋಷ್ಠಿಯೊಂದರಲ್ಲಿ ಮೂಢ ನಂಬಿಕೆಯ ಕುರಿತು ಪ್ರಬಂಧ ಮಂಡಿಸಬೇಕೆಂದು ಸ್ವತಃ ಅನುಪಮಾ ಅವರೇ ನನಗೆ ಪತ್ರ ಬರೆದರು. ಇಂತಹ ಯಾವುದೇ ಸಭೆ ಸಮಾರಂಭಗಳಲ್ಲಾಗಲಿ, ವಿಚಾರಗೋಷ್ಠಿಗಳಲ್ಲಾಗಲಿ ಒಮ್ಮೆಯೂ ಭಾಗವಹಿಸಿರದ ನನ್ನನ್ನು ಇಂತಹ ಗೋಷ್ಠಿಯಲ್ಲಿ ಭಾಗವಹಿಸಬೇಕೆಂದು ಕರೆದಾಗ ನನಗಾದ ಮುಜುಗರ

ಅಷ್ಟಿಷ್ಟಲ್ಲ. ಆದರೂ ನನ್ನ ಹಿರಿಯ ಸೋದರಿಯಂತೆ ನನ್ನನ್ನು ನಡೆಸಿಕೊಂಡ ಅನುಪಮಾ ಅವರ ಕೋರಿಕೆಯನ್ನು ತಿರಸ್ಕರಿಸಲು ಸಾಧ್ಯವಾಗದೆ ಒಂದೆರಡು ದಿನ ಒದ್ದಾಡಿ ಬಳಿಕ ಅವರಿಗೆ ಉತ್ತರ ಬರೆದೆ.

“ನಾನು ಈ ವರೆಗೆ ಇಂತಹ ಗೋಷ್ಠಿಗಳಲ್ಲಿ ಭಾಗವಹಿಸಿರಲಿಲ್ಲ. ಆದುದರಿಂದ ಈ ವಿಷಯದಲ್ಲಿ ತಾವು ನನಗೆ ಕೆಲವು ಸಲಹೆ, ಸೂಚನೆಗಳನ್ನು ನೀಡಿ ಸಹಕರಿಸಿದರೆ ನಾನು ಈ ಗೋಷ್ಠಿಯಲ್ಲಿ ಭಾಗವಹಿಸುವೆ” ಎಂದು ಬರೆದೆ. ಅವರು ಕೂಡಲೇ ತಮ್ಮ ಸಲಹೆಯನ್ನಿತ್ತು ಈ ವಿಷಯದಲ್ಲಿ ನಾನು ಓದಬೇಕಾದ ಕೆಲವು ಪುಸ್ತಕಗಳ ಪಟ್ಟಿ ಕಳುಹಿಸಿದರು.

ನಾನೇನೊ ಅವರು ಸೂಚಿಸಿದ ಪುಸ್ತಕಗಳನ್ನೋದಿ ಪ್ರಬಂಧ ಸಿದ್ಧಪಡಿಸಿದೆ. ಆದರೆ ಅದರಲ್ಲಿ ನನಗೆ ಸಂಪೂರ್ಣ ತೃಪ್ತಿ ಇರಲಿಲ್ಲ. ಈ ಪ್ರಬಂಧವನ್ನು ಗೋಷ್ಠಿಯಲ್ಲಿ ಮಂಡಿಸುವ ಮೊದಲು ಅನುಪಮಾರವರಿಗೆ ಅದನ್ನು ತೋರಿಸಿ ಅವರ ಅಭಿಪ್ರಾಯ ಪಡೆಯಲು ಉದ್ದೇಶಿಸಿ ಸಮ್ಮೇಳನದ ಒಂದೆರಡು ದಿನಗಳ ಮೊದಲೇ ಬೆಂಗಳೂರಿಗೆ ಧಾವಿಸಿದೆ. ಅದೇ ದಿನ ಅನುಪಮಾರವರ ಮನೆಗೆ ಹೋದಾಗ ಅವರು ಕೂಡಲೇ ನನ್ನನ್ನು ಕರೆದೊಯ್ದು ಅವರ ಬರವಣಿಗೆಯ ಕೊಠಡಿಯಲ್ಲಿ ನನ್ನಿಂದ ಪ್ರಬಂಧ ಓದಿಸಿದರು. ನಾನೇನೊ ಮೂಢನಂಬಿಕೆಯ ಕುರಿತು ಪ್ರಬಂಧ ಸಿದ್ಧಪಡಿಸಿದ್ದೆ. ಆದರೆ ಸಾಹಿತ್ಯ ಮತ್ತು ಮೂಢನಂಬಿಕೆಗೆ ಗಂಟು ಹಾಕಿರಲಿಲ್ಲ! ಸಾಹಿತ್ಯಗೋಷ್ಠಿಯಲ್ಲಿ ಸಾಹಿತ್ಯದಲ್ಲಿ ಮೂಢನಂಬಿಕೆ ಯಾವ ರೀತಿ ಬಿಂಬಿತವಾಗಿದೆಯೆಂದು ಬರೆಯಬೇಕಾಗಿತ್ತೇ ಹೊರತು ಬರೀ ಮೂಢನಂಬಿಕೆಯನ್ನಲ್ಲ ಎಂದು ಅವರು ತಿಳಿಸಿದರು. ತಮ್ಮಲ್ಲಿದ್ದ ಒಂದೆರಡು ಪುಸ್ತಕಗಳನ್ನು ಓದಲು ಕೊಟ್ಟು, ಇನ್ನೂ ಕೆಲವು ಪುಸ್ತಕಗಳ ಹೆಸರು ತಿಳಿಸಿ ಕೆಲವು ಸಲಹೆ, ಸೂಚನೆಗಳನ್ನಿತ್ತು ನನ್ನನ್ನು ಬೀಳ್ಕೊಟ್ಟರು. ಉಳಿದ ಎರಡೇ ದಿನಗಳಲ್ಲಿ ನಾನಾ ಪುಸ್ತಕಗಳನ್ನೋದಿ ಈ ಹೊಸ ಪ್ರಬಂಧವನ್ನು ಸಿದ್ಧಪಡಿಸಬೇಕಾಗಿತ್ತು. ನನ್ನನ್ನು ಇಷ್ಟೊಂದು ವಿಶ್ವಾಸದಿಂದ ಬರಮಾಡಿಕೊಂಡ ಅನುಪಮಾರವರಿಗೆ ನಿರಾಶೆಯಾಗಬಾರದು, ನಾನು ಸೋಲಬಾರದು ಎಂಬ ದೃಢ ವಿಶ್ವಾಸದಿಂದ ನಾನು ಹಗಲಿರುಳೂ ಕುಳಿತು ಈ ಪ್ರಬಂಧ ಸಿದ್ಧಪಡಿಸಿದೆ. ಇನ್ನೊಮ್ಮೆ ಅವರಿಗೆ ಅದನ್ನು ತೋರಿಸಿ ಅವರಿಂದ ಸೈ ಅನ್ನಿಸಿಕೊಳ್ಳಲು ಅವಕಾಶವಾಗಲೇ ಇಲ್ಲ. ತುಂಬ ಅಳುಕಿನಿಂದಲೇ ಈ ಪ್ರಬಂಧವನ್ನು ಓದಿ, ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಅನುಪಮಾರ ಪಕ್ಕದಲ್ಲಿ ಕುಳಿತುಕೊಂಡೆ. ಪಕ್ಕದಿಂದ ಅವರು, “ಫಸ್ಟ್ ಕ್ಲಾಸ್ ಆಯಿತು!” ಎಂದು ನನ್ನ ಕಿವಿಯಲ್ಲುಸುರಿದಾಗ ರೆಕ್ಕೆ ಬಂದ ಮನ ಅವರಿಗೆ ಕೃತಜ್ಞತೆ ಹೇಳುವುದನ್ನೂ ಮರೆತು ಹಾರಾಡತೊಡಗಿತು!

ಮುಂದೆ ಅನುಪಮಾ ತಾವೇ ಸಲಹೆ ನೀಡಿದರು. "ನೀವು ಮೊದಲು ಕಳುಹಿಸಿದ ಪ್ರಬಂಧವನ್ನು ಹಿಂದೆ ಪಡೆದು ಇದನ್ನು ಅಧ್ಯಕ್ಷಿಣಿಯವರ ಕೈಯಲ್ಲಿಡಿ. ಇಲ್ಲವಾದರೆ ಸ್ಮರಣ ಸಂಚಿಕೆಯಲ್ಲಿ ನಿಮ್ಮ ಆ ಹಳೆಯ ಪ್ರಬಂಧವೇ ಅಚ್ಚಾಗಿಬಿಡಬಹುದು" ಎಂದು. ನಾನು ಈ ಹೊಸ ಪ್ರಬಂಧವನ್ನು ಅಧ್ಯಕ್ಷಿಣಿಯವರ ಕೈಯಲ್ಲಿಟ್ಟರೂ ಹಳೆಯದು ನನ್ನ ಕೈಗೆ ಬರಲಿಲ್ಲ. ಕೊನೆಗೆ ಅನುಪಮಾರವರ ಭವಿಷ್ಯವಾಣಿಯಂತೆ ನನ್ನ ಹೊಸ ಪ್ರಬಂಧ ಮಾಯವಾಗಿ ಹಳೆಯ ಪ್ರಬಂಧವೇ ಸ್ಮರಣ ಸಂಚಿಕೆಯಲ್ಲಿ ಕಾಣಿಸಿಕೊಂಡಿತು. ನನ್ನೊಡನೆ ಬೇರೆ ಪ್ರತಿಯೂ ಇಲ್ಲದೆ ಅನುಪಮಾರಿಂದ ಹೊಗಳಿಸಿಕೊಂಡ ಆ ಪ್ರಬಂಧ ಕಳೆದೇ ಹೋದರೂ ಅನುಪಮಾರಂದ ಆ ಮೆಚ್ಚುಗೆಯ ನುಡಿ ಮಾತ್ರ ನನ್ನ ಕಿವಿಗಳಲ್ಲಿ ಆಗಾಗ ಧ್ವನಿಸುತ್ತಲೇ ಇರುತ್ತದೆ.

ಅನುಪಮಾರವರು ಉತ್ತಮ ವೈದ್ಯೆ, ಉತ್ತಮ ಲೇಖಕಿ ಮಾತ್ರವಲ್ಲ ಉತ್ತಮ ಆತಿಥೇಯರೂ ಹೌದು. ಇವರ ಮನೆ ಹುಡುಕುತ್ತಾ ಒಮ್ಮೆ ಇವರ ಮನೆಗೆ ಮಧ್ಯಾಹ್ನ ಒಂದು ಗಂಟೆಗೆ ತಲುಪಿದಾಗ ದಂಪತಿಗಳಿಬ್ಬರೂ ಊಟ ಮಾಡಲು ಒತ್ತಾಯಿಸಿದರು. ಇಂತಹ ಹೊತ್ತಿನಲ್ಲಿ ಬಂದು ಇವರಿಗೆ ತೊಂದರೆ ಕೊಡುವಂತಾಯಿತಲ್ಲ ಎಂದು ಮುಜುಗರಪಟ್ಟುಕೊಂಡು 'ಊಟ ಬೇಡ' ಎಂದು ಎಷ್ಟು ಹೇಳಿದರೂ ದಂಪತಿಗಳು ಬಿಡಲೇ ಇಲ್ಲ. ಆ ದಿನ ಅನುಪಮಾರವರು ಸ್ವತಃ ತಾವೇ ಅಡಿಗೆ ಮಾಡಿ ಬಡಿಸಿದ್ದು ನನ್ನ ಪಾಲಿಗೆ ಎಂದೆಂದೂ ಹಸುರಾದ ನೆನಪು.

ಮಹಿಳಾ ವಿಮೋಚನೆಯಲ್ಲಿ, ಮಹಿಳಾ ಹೋರಾಟಗಳಲ್ಲಿ ಅನುಪಮಾರವರು ಇಂದಿಗೂ ಸಕ್ರಿಯ ಪಾತ್ರ ವಹಿಸುತ್ತಾರೆ. ಗಂಡನ ಹೆಂಡತಿಯೆನ್ನಿಸಿಕೊಂಡು ಗಂಡನ ಬರೇ ನೆರಳಾಗಿ ಮಾತ್ರ ಬದುಕುವುದು ಮತ್ತು ಮಕ್ಕಳ ತಾಯಾಗುವುದು ಮಾತ್ರ ಹೆಣ್ಣಿನ ಗುರಿಯಾಗಬಾರದು; ಆಕೆಗೆ ಸ್ವಂತ ವ್ಯಕ್ತಿತ್ವವಿರಬೇಕು. ಆಕೆಯಲ್ಲಿರುವ ಪ್ರತಿಭೆಯೂ ಹೊರ ಹೊಮ್ಮಬೇಕು. ಮತ್ತು ಇಂತಹ ಅವಕಾಶಗಳಿದ್ದರೆ ಗಂಡಿನ ಸ್ವಾರ್ಥಕ್ಕಾಗಿ ಅವುಗಳನ್ನು ಬಲಿಗೊಡಬಾರದು, ಎಂಬ ತತ್ವವನ್ನು ಅನುಪಮಾರವರ ಇತ್ತೀಚಿನ ಕಾದಂಬರಿ 'ಆಳ' ಪ್ರತಿಪಾದಿಸುತ್ತದೆ. ಗಂಡನಿಂದ ವಂಚಿತಳಾದಾಗ, ಆತನೊಡನೆ ಬಾಳಲು ಇಚ್ಛೆ ಇಲ್ಲದಾಗ ಆ ವಿವಾಹ ಬಂಧನದಿಂದ ಹೊರಬಂದು ಪ್ರತ್ಯೇಕವಾಗಿ ಬಾಳಲು ಆಕೆ ಸ್ವತಂತ್ರಳು: ಗಂಡನ ಎಲ್ಲ ರೀತಿಯ ಕ್ರೌರ್ಯವನ್ನೂ ಸಹಿಸಿಕೊಂಡು ಹೆಣ್ಣೋರ್ವಳು ಆತನ ನೆರಳಾಗಿ ಬಾಳಬೇಕಾಗಿಲ್ಲ ಎಂಬ ಸಿದ್ಧಾಂತವನ್ನು ಇವರ 'ಮುಕ್ತಿ' ಕಾದಂಬರಿ ಧ್ವನಿಸುತ್ತದೆ. ಹಾಗೆಂದು ಇವರು ಬರೇ ಸ್ತ್ರೀ ಪಕ್ಷಪಾತಿಯೂ ಅಲ್ಲ. ಹೆಣ್ಣೊಬ್ಬಳು ಪ್ರೇಮಕ್ಕಾಗಿ ಎಷ್ಟೊಂದು ಕುರುಡಾಗಬಲ್ಲಳು. ಪುರುಷನೊಬ್ಬ ತಾನು ಪ್ರೀತಿಸಿದ ಪತ್ನಿ ಕಾಲು ಜಾರಿದಾಗಲೂ ಎಷ್ಟೊಂದು ತಾಳ್ಮೆಯಿಂದ ವರ್ತಿಸಿ ಆಕೆಯನ್ನು ಕ್ಷಮಿಸುವಂತಹ ವಿಶಾಲ ಹೃದಯಿಯಾಗಿ

ದೈವತ್ವಕ್ಕೇರಬಲ್ಲನು ಎಂಬುದನ್ನು ಇವರ ಕಾದಂಬರಿ 'ಪರೀಕ್ಷೆ' ಪ್ರತಿಬಿಂಬಿಸುತ್ತದೆ. ಹೆಣ್ಣು ಕೆಲವೊಮ್ಮೆ ಎಷ್ಟೊಂದು ಕಠಿಣ ಹೃದಯಿಯಾಗಬಲ್ಲಳು ಎಂಬುದರ ಕುರಿತು ಇವರು ಅಂಧರಾಗಿಲ್ಲ ಎಂಬುದು ಈ ಕಾದಂಬರಿಯಿಂದ ವ್ಯಕ್ತವಾಗುತ್ತದೆ.

ವೈದ್ಯೆಯಾಗಿ, ಕಾದಂಬರಿಗಾರ್ತಿಯಾಗಿ ಮಾತ್ರ ಇವರು ಮಿಂಚಲಿಲ್ಲ. ತಮ್ಮ ವೈದ್ಯಕೀಯ ಅನುಭವವನ್ನು ಸಾಹಿತ್ಯದ ಮುಖಾಂತರ ಸ್ತ್ರೀಸಮುದಾಯದ ಮುಂದಿಟ್ಟು ಆ ಮೂಲಕ ಸ್ತ್ರೀಯರಲ್ಲಿ ತಿಳಿವು ಮೂಡಿಸಲು ಪ್ರಯತ್ನಿಸಿ ಎಲ್ಲರ ಶ್ಲಾಘನೆಗೆ ಪಾತ್ರರಾಗಿದ್ದಾರೆ. ದಾಂಪತ್ಯ ಜೀವನದ ಕುರಿತು, ಗರ್ಭಿಣಿಯರಿಗಾಗಿ ಮತ್ತು ಮಕ್ಕಳ ಪಾಲನೆ, ಪೋಷಣೆಯ ಕುರಿತು ಮತ್ತು ಇಂತಹ ಇನ್ನೂ ಅನೇಕ, ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಇವರು ಬರೆದು ಪ್ರಕಟಿಸಿದ ಪುಸ್ತಕಗಳು ಮತ್ತೆ ಮತ್ತೆ ಮುದ್ರಣವಾಗುತ್ತಿರುವುದು ಈ ಕೃತಿಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಕನ್ನಡ ಸಾಹಿತ್ಯಕ್ಕೆ ಮತ್ತು ಮಹಿಳಾ ಸಮುದಾಯಕ್ಕೆ ಇವರು ನೀಡಿದ ಅತ್ಯುತ್ತಮ ಕೊಡುಗೆ ಇದಾಗಿದೆ. ಈ ಬರಹಗಳು ಎಂದಿಗೂ ಅಪ್ರಸ್ತುತವೆನಿಸಲಾರವು.

ಸ್ತ್ರೀಯರಿಗಾಗಿ ಇವರ ಮನ ಹೇಗೆ ತುಡಿಯುತ್ತಿದೆ ಎಂಬುದಕ್ಕೆ ಇವರು ಇತ್ತೀಚೆಗೆ ಬರೆದ 'ಸೀತೆಯೊಡನೆ ಸಲ್ಲಾಪ' ಎಂಬ ಕವನ ಸಾಕ್ಷಿಯಾಗಿದೆ. "ಭೂಮಿ ಬಿರುಕು ಬಿಟ್ಟರೂ ನೀ ತುಟಿ ತೆರೆಯಲಿಲ್ಲ. ನಿನ್ನ ಬಾಯಿಗೆ ಬೀಗ ಜಡಿದವರು ಯಾರು ಹೇಳೆ?' 'ರಾಮ, ಬಾ ಅಗ್ನಿ ಪರೀಕ್ಷೆಗೆ ಅಂದನಲ್ಲ? ಆಗ ನೀನ್ಯಾಕೆ ಸಿಡಿದೇಳಲಿಲ್ಲ? ಪ್ರೀತಿ ಸಾಬೀತು ಪಡಿಸುವಂತಹುದೇ ಎಂದು ಕೇಳಲಿಲ್ಲ?' ಇಂತಹ ಕೆಲವು ಸಾಲುಗಳು, ಇಂದಿಗೂ ಭಾರತೀಯ ಮಹಿಳೆಯ ದುರವಸ್ಥೆಗೆ ಹಿಡಿದ ಕನ್ನಡಿಯಾಗಿದೆ. 'ಸಿಂಹಾಸನದಲ್ಲಿ ಕುಳಿತು ಒಂದೊಳ್ಳೆಯ ಪೋಸ್ ಕೊಡುವ ಮೊದಲೇ ಕೆಳಗೆಳೆದನಲ್ಲ ಅಗಸ? ನಮ್ಮೂರ ಸಂದಿಗೊಂದಿಗಳಲ್ಲೆಲ್ಲ ಇಂಥ ಅಗಸರೂ ರಾಮರೂ ತುಂಬಿರುವಾಗ ಜನಾರಣ್ಯಕ್ಕಿಂತ ನಿಜಾರಣ್ಯ ಮೇಲು ಅನಿಸದೇ, ಹೇಳು?' ಎಂಬ ಈ ಸಾಲುಗಳು ಪುರುಷಪ್ರಧಾನ ಸಮಾಜದಲ್ಲಿ ಹಲವು ವಿಧಗಳಲ್ಲಿ ಶೋಷಣೆಗೊಳಗಾಗುತ್ತಲೇ ಇರುವ ಭಾರತೀಯ ನಾರಿಯ ಚಿತ್ರವನ್ನು ನೀಡುತ್ತವೆ.

ರೋಗಿಗಳಾದ ಈ ದಂಪತಿಗಳು ಬದುಕನ್ನು ಎದುರಿಸುತ್ತಿರುವ ರೀತಿ ನಮ್ಮೆಲ್ಲರಿಗೂ ದಾರಿದೀಪವಾಗಿದೆ. ಈ ದಂಪತಿಗಳು ಇನ್ನೂ ಹಲವಾರು ವರ್ಷ ಬದುಕಿ ಸಾಹಿತ್ಯ ಸೇವೆ ಮಾಡುವಂತಾಗಲೆಂದು ಹಾರೈಸುತ್ತಾ ಕನ್ನಡ ಸಾಹಿತ್ಯಕ್ಕೆ ಇವರು ನೀಡಿದ ಕೊಡುಗೆಗಾಗಿ ಇವರನ್ನು ಅಭಿನಂದಿಸುತ್ತೇನೆ.

೨ ಅದ್ಭುತ ಮಾನಸಿಕ ಚೌಕಟ್ಟು

- ''ಚಿರಂಜೀವಿ''

ಡಾ। ಅನುಪಮಾ ನಿರಂಜನ: ಹೌದು, ಮೊನ್ನೆ ಮೊನ್ನೆವರೆಗೆ ಅವರು ಡಾಕ್ಟರ್ ಆಗಿದ್ದರು. ಈಗ ಪೂರ್ತಿ ಸಾಹಿತಿ. ಅನಾರೋಗ್ಯ ಆವರಿಸಿಕೊಂಡ ಮೇಲೆ ಅವರು ಮಾಡಿದ ಮೊದಲ ಕೆಲಸ: ಬೇರೆಯವರ ಆರೋಗ್ಯ ನೋಡುವುದನ್ನು ಬಿಟ್ಟದ್ದು; ಮತ್ತು ಇಡೀ ಸಮಯವನ್ನು ಕನ್ನಡ ಸಾಹಿತ್ಯ ಸೃಷ್ಟಿಗಾಗಿ ಮೀಸಲಿಟ್ಟದ್ದು. ವೈದ್ಯಲೋಕಕ್ಕೇನೂ ಅಂಥ ನಷ್ಟವಾಗಲಿಲ್ಲ. ಆದರೆ, ಕನ್ನಡ ಸಾಹಿತ್ಯಕ್ಕಂತೂ ದೊಡ್ಡ ಲಾಭವಾಯಿತು. "ಬರವಣಿಗೆ ತುಂಬಾ ಆಳವಾಗಿರಬೇಕು, ಅರ್ಥವತ್ತಾಗಿರಬೇಕು, ಚಿಂತನೆಗೆ ವಸ್ತುವಾಗಬೇಕು' ಎಂದು ಯಾವಾಗಲೂ ಕಾಡುತ್ತಿದ್ದದ್ದು ಅವರ ಅನಾರೋಗ್ಯದೊಂದಿಗೆ ಮೈಕೈ ತುಂಬಿಕೊಂಡಿತು.

ನಿರಂಜನರಂಥ ಕಟ್ಟುನಿಟ್ಟು ಆದರ್ಶವಾದಿಯ ಸಾಹಿತ್ಯ ಪ್ರಭಾವಕ್ಕೆ ಒಳಗಾದವರ ಬರವಣಿಗೆಯ ದಾರಿ ಸಾಮಾನ್ಯವಾಗುವುದು ಎಂದಿಗೂ ಸಾಧ್ಯವಿಲ್ಲ. ಪ್ರತಿಘಟ್ಟದಲ್ಲೂ ಬೆಳವಣಿಗೆಯತ್ತ-ಉಪಯುಕ್ತತೆಯತ್ತ ಸಾಗಬೇಕಾಗುತ್ತದೆ. ಮೈಸೂರಿನಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯಾಗಿ ಆಗಲೇ ಒಂದಿಷ್ಟು ಕತೆಗಳು, ಎರಡು ಕಾದಂಬರಿ (ಅನಂತ ಗೀತ, ಸಂಕೋಲೆಯೊಳಗಿಂದ) ಬರೆದು ಪ್ರಕಟಿಸಿದ ಅನುಪಮಾ, ನಿರಂಜನರ 'ಸಾಧನಾ' ಆಗಿ ಹೃದಯಕ್ಕೆ ಹತ್ತಿರವಾದಂತೆ, ಸಾಹಿತ್ಯಸೃಷ್ಟಿಯ ಕೆಲಸವೂ ಅವರಿಗೆ ಹತ್ತಿರವಾಗುವಂತೆ ಆಗುವುದೂ ಆಯಿತು. ಡಾ। ಅನುಪಮಾ ನಿರಂಜನ ಸಾಹಿತ್ಯ ದಶಕದಿಂದ ದಶಕಕ್ಕೆ ಉತ್ತಮತೆಯ ಮೆಟ್ಟಲು ಹತ್ತುತ್ತ ಹೋಯಿತು. ಅನಂತರ ಅವರು ರಚಿಸಿದ ಕೃತಿಗಳಲ್ಲಿ ಸಾಹಿತ್ಯ ಕೃತಿಯಾಗಿಸುವ ತೀವ್ರ ಪ್ರಯತ್ನಗಳು ಕಂಡುಬರುತ್ತವೆ. ಬದುಕಿನ ವಿವಿಧ ಮುಖಗಳನ್ನು-ಕೆಳವರ್ಗಗಳ ನೋವು-ಶೋಷಣೆಗಳನ್ನು ಕಾಣುವ ಮತ್ತು ಗಂಭೀರ-ಸಂಕೀರ್ಣ ವಸ್ತುಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನ (ನಟಿ. ಮಾಧವಿ, ಎಳೆ, ಸೇವೆ, ಕೊಳಚೆ ಕೊಂಪೆಯ ದಾನಿಗಳು, ಘೋಷ, ಮುಕ್ತಿಚಿತ್ರ) ಡಾ। ಅನುಪಮಾ ನಿರಂಜನ ಅವರ ಸಾಹಿತ್ಯ ಬೆಳವಣಿಗೆಯ ಕೆಲವು ಸೋಪಾನಗಳಾದವು. 'ಜನಪ್ರಿಯ ಧಾಟಿಯಿಂದ ತಪ್ಪಿಸಿಕೊಂಡು ಅತ್ಯುತ್ತಮ ಸಾಹಿತ್ಯ ಕೃತಿಗಳ ರಚನೆಯನ್ನು ಮಾತ್ರ ಮುಂದುವರಿಸಲು ನಿರ್ಧರಿಸಿದ್ದೇನೆ', ಎಂದವರು ಹೇಳುವಾಗ ಅವರ ಈಚಿನ ಬರೆವಣಿಗೆ ಪ್ರಯತ್ನಗಳನ್ನು ಗಮನಿಸಿದಾಗ, ಅವರ ಮನಸ್ಸಿನ ಕಾಳಜಿ ಕಂಡುಬರುತ್ತದೆ.

ತ್ರಿವೇಣಿ, ಎಂ. ಕೆ. ಇಂದಿರಾ, ಎಂ. ಕೆ. ಜಯಲಕ್ಷ್ಮಿ ಮೊದಲಾದ ಕೆಲವು ಪ್ರಾರಂಭದ ಮಹಿಳಾ ಕಾದಂಬರಿಕಾರರನ್ನು ಬಿಟ್ಟರೆ ಲೇಖಕಿಯರು ಗಂಭೀರ ಸಾಹಿತ್ಯದ ಮೆಟ್ಟಿಲುಗಳನ್ನು ಹತ್ತಿರುವುದು ತುಂಬ ಕಡಿಮೆ. ಜನಪ್ರಿಯ-ತುರ್ತು ಬರೆವಣಿಗೆ

ಮಾಮುತ್ತಿನಂಥವರ ಸಂಖ್ಯೆಯೇ ಜಾಸ್ತಿ. ಅದರಲ್ಲೂ ವಿಪುಲವಾಗಿ ಬರೆಯುತ್ತಿರುವ ಲೇಖಕಿಯರು ಯಾವ ಸಾಹಿತ್ಯ ಮಾನದಂಡಕ್ಕೂ ಒಳಪಡಲು ಸಾಧ್ಯವಾಗಿಲ್ಲ. ಕನ್ನಡ ಬರಹಗಾರ್ತಿಯರ ಗುಂಪಿನಲ್ಲೇ ಈ ಕಾರಣಕ್ಕಾಗಿ ಡಾ। ಅನುಪಮಾ ನಿರಂಜನ ಭಿನ್ನರಾಗಿ ನಿಲ್ಲುತ್ತಾರೆ. ಅವರ ಪ್ರಾರಂಭದ ಕಥೆ-ಕಾದಂಬರಿಗಳಲ್ಲಿ ಅತ್ಯಂತ ಆಕರ್ಷಕ ಶೈಲಿ, ವೇಗವಾಗಿ ಓದಿಸಿಕೊಂಡು ಹೋಗುವ ಗುಣಗಳು ಕಂಡು ಬಂದಿದ್ದರೂ, ಇವೆಲ್ಲ ಸಾರ್ವಜನಿಕ ಮೆಚ್ಚುಗೆ ಗಳಿಸಿ ಉತ್ತಮ ಬರವಣಿಗೆಯ ಸಾಲಿನಲ್ಲಿ ಸೇರಿವೆ. ತಮ್ಮ ಬರವಣಿಗೆಯನ್ನು ಎಂದೂ ಸಾಮಾನ್ಯವಾಗಿಸಲು, ಕೆಳದರ್ಜೆಯದಾಗಲು ಅವರು ಬಿಟ್ಟಿಲ್ಲ. ನಿರಂಜನರ ಪ್ರಭಾವಕ್ಕೊಳಗಾದ ಮೇಲಂತೂ ಅವರ ಸಾಹಿತ್ಯ ಕೃತಿಗೊಂದು ಹೊಸ ಅರ್ಥ ಬಂದದ್ದೂ ಅಲ್ಲದೆ, ಜವಾಬ್ದಾರಿಯ ಸೃಷ್ಟಿಯೂ ಆಯಿತು. ಮತ್ತೆ ಸ್ವತಃ ಸತ್ವ ತುಂಬಿಕೊಳ್ಳುತ್ತ, ಬದುಕಿನ ಏರಿಳಿತಗಳಲ್ಲಿ, ವಿವಿಧ ನೋವು-ನಲಿವುಗಳಲ್ಲಿ ಪಕ್ವವಾಗುತ್ತ ಬಂದಾಗ ಅವರ ಪ್ರಭಾವ ಸಾಹಿತ್ಯಸೃಷ್ಟಿಯ ಮೇಲೂ ಆಗಿ ಅವರ ಬರವಣಿಗೆಗೆ ಒಂದು ಅತ್ಯುತ್ತಮ ತಿರುವೂ ಬಂದಿತು. ಹತ್ತುವರ್ಷಗಳ ಹಿಂದೆ ತೀವ್ರ ಅನಾರೋಗ್ಯ ಕಾಡಿದಾಗ ಅವರ ಬದುಕು-ಸಾಹಿತ್ಯರಚನೆಯ ಉದ್ದೇಶ ಒಂದೇ ಆಯಿತು: 'ಬರೆಯಬೇಕು-ಬದುಕಬೇಕು'.

ಹದಿನೆಂಟು ವರ್ಷಗಳಿಗೂ ಹಿಂದೆ ಸುಖ-ಸಂಭ್ರಮ-ಸಾಧನೆಗಳ ಉಚ್ಛ್ರಾಯ ಸ್ಥಿತಿಯಲ್ಲಿದ್ದ ನಿರಂಜನ ಕುಟುಂಬ, ನಿರಂಜನರ ದಿಢೀರ್ ಅನಾರೋಗ್ಯದಿಂದ ರಾಹುಗ್ರಸ್ತವಾದದ್ದಂತೂ ನಿಜ. ಕನ್ನಡದಲ್ಲೇ ಅತ್ಯಂತ ಸದಭಿರುಚಿಯ-ಮೇಲ್ಮಟ್ಟದ-ಚಿಂತನಶೀಲ-ಸಾಧನಶೀಲ ನಿರಂಜನ ಅವರು ಚಟುವಟಿಕೆಯನ್ನೇ ಕಳೆದುಕೊಂಡಾಗ, 'ಈ ಕುಟುಂಬದ ಗತಿ ಇನ್ನು ಆಯಿತು', ಎಂದವರುಂಟು. 'ಈ ಕುಟುಂಬದ ಮೇಲೆ ಎಲ್ಲರದೂ ಕಣ್ಣುಬಿದ್ದು ಹೀಗಾಯಿತು'. ಎಂದವರುಂಟು. 'ಜ್ಞಾನ ಗಂಗೋತ್ರಿ' ಕಿರಿಯರ ವಿಶ್ವಕೋಶದಂಥ ಅಗಾಧ ಕೆಲಸದ ನೇತಾರರಾಗಿದ್ದ ನಿರಂಜನ ಮನೋಬಲದಿಂದ ಮತ್ತೆ ಚೇತರಿಸಿಕೊಂಡರು. 'ಜ್ಞಾನ ಗಂಗೋತ್ರಿ' ಸಂಪುಟಗಳನ್ನು ಯೋಜಿಸಿದ್ದ ಸಮಯಕ್ಕೆ ಮೊದಲೇ ಮುಗಿಸಿಕೊಟ್ಟರು. 'ನಾನು ಬರವಣಿಗೆ ನಿಲ್ಲಿಸಿದಾಗ ಮೃತ್ಯುವನ್ನು ಆಹ್ವಾನಿಸಿದಂತೇ' ಎನ್ನುವದೊಂದು ಛಲ-ನಿರ್ಧಾರಗಳಿಂದ 'ಮೃತ್ಯುಂಜಯ'ದಂಥ ಬೃಹತ್ ಕಾದಂಬರಿ ರಚನೆ ಕೆಲಸವನ್ನು ಕೈಗೆ ತೆಗೆದುಕೊಂಡರು. ನಾನ್ನೂರು ಪುಟ ಕಾದಂಬರಿ ಬರೆಯಲು ಏಳುನೂರ ಪುಟ 'ನೋಟ್ಸ್' ಮಾಡಿಕೊಂಡರು. ಈ ಚಟುವಟಿಕೆ ಅವರನ್ನು ಮತ್ತೆ ಹಿಂದಿನ ವ್ಯಕ್ತಿಯನ್ನಾಗಿಸಿ, ಬಹುಶಃ ಅವರು ತಮ್ಮ ಅನಾರೋಗ್ಯವನ್ನು ಬದಿಗಿರಿಸಿ, ಹೊಸಹೊಸ ಬೃಹತ್ ಯೋಜನೆಗಳನ್ನು ಕೈಗೆ ತೆಗೆದುಕೊಳ್ಳಲು ಸಾಧ್ಯವಾಯಿತು. ಪ್ರಪಂಚದ ಅತ್ಯುತ್ತಮ ಕಥಾ ಸಂಕಲನಗಳು, ಬೃಹತ್ ಕಾದಂಬರಿಯೊಂದರ ರಚನೆ, ಸಮಗ್ರ ಸಾಹಿತ್ಯ ಪ್ರಕಟಣೆ-ಹೀಗೆ ನಿರಂಜನ ಕೈತುಂಬಾ ಕೆಲಸವನ್ನಿಟ್ಟುಕೊಂಡು ದುಡಿದರು, ದುಡಿಯುತ್ತಿದ್ದಾರೆ.

ಪತಿಯ ಅನಾರೋಗ್ಯದ ಆಘಾತ ಅವರನ್ನು ಮತ್ತೆ ಚಟುವಟಿಕೆಯ ವ್ಯಕ್ತಿಯಾಗಿಸುವ ಧಾವಂತಗಳ ನಡುವೆ ಡಾ| ಅನುಪಮಾ ನಿರಂಜನ ಸ್ವತಃ ತಾವೇ ಅನಾರೋಗ್ಯದ ಶಿಶುವಾದಾಗ, ನಿರಂಜನ ಕುಟುಂಬದ ಇನ್ನೊಂದು ನೋವಿನ ಅಧ್ಯಾಯ ಪ್ರಾರಂಭವಾಗಿತ್ತು. ವ್ಯಕ್ತಿಯಾಗಿ ಆಕೆ ಅಸಾಧ್ಯ ನೋವು-ಸಂಕಟ-ಚಿಂತೆ ಅನಿಶ್ಚಿತ ಕ್ಷಣಗಳನ್ನು ಅನುಭವಿಸಿದ್ದಿರಬಹುದು. ಆದರೆ ಕೊನೆಗೂ ವಿಜಯಪತಾಕೆ ಹಾರಿಸಿದ್ದು. ಆಕೆಯೊಳಗಿದ್ದ ಸಾಹಿತಿ. 'ನೋವು ಅನುಭವಿಸಬೇಕೆ, ಇಕೋ ಅನುಭವಿಸಿ ಬಿಡುತ್ತೇನೆ. ಆದರೆ ನಾನೊಂದಿಷ್ಟು ಕೆಲಸ ಮಾಡಬೇಕೆಂದು ಬಯಸಿದ್ದೇನೆ. ಅಲ್ಲಿಯ ವರೆಗೆ ದೂರ ಇರು. ನನ್ನ ತಂಟೆಗೆ ಬರಬೇಡ', ಎಂದು ಮನೆಯ ವರೆಗೂ ಬಂದ ಮೃತ್ಯುದೇವತೆಯನ್ನು ಹೊಸಲಿನ ಆಚೆಯೇ ಕಾವಲಾಗಿ ನಿಲ್ಲಿಸಿ, ಬರೆಹಗಾರರಾಗಿ ಹೊಸ ಆಯಾಮಗಳನ್ನು ಕಾಣುತ್ತಿರುವ, ಡಾ| ಅನುಪಮಾ ನಿರಂಜನ ಅವರ ಮಾನಸಿಕ ಚೌಕಟ್ಟು ತುಂಬ ಮೆಚ್ಚುವಂಥದ್ದು-ಅಪರೂಪವಾದದ್ದು.

ಅವರ ಐವತ್ತು ವರ್ಷಗಳ ಬದುಕು ಕಾಣಿಸುವ ಆತ್ಮವೃತ್ತ. 'ನೆನಪು: ಸಿಹಿ-ಕಹಿ' ಅವರು ಕಂಡ ಎಲ್ಲ ಸುಖ-ದುಃಖಗಳ ಸ್ವಾರಸ್ಯ ಕಥೆ. ಈ ಬರೆವಣಿಗೆಯಲ್ಲಿ ಅವರು ತಮ್ಮ ನೋವು-ನಲಿವು ಕಂಡ ಹೃದಯವನ್ನು ಸಂಪೂರ್ಣವಾಗಿ ಬರಿದು ಮಾಡಿಬಿಟ್ಟಿದ್ದಾರೆ. ಅವರ ಬದುಕಿನ ಒಂದೊಂದು ಘಟ್ಟವೂ ಸಾರ್ವಜನಿಕವಾಗಿ ಕಂಡ ಘಟನೆಗಳು ಅತ್ಯಂತ ಆತ್ಮೀಯವಾಗಿ ಹೋಗುತ್ತವೆ. ಬಹುಶಃ ಅವರ ಶೈಲಿಯಲ್ಲಿ ಇಷ್ಟು ಸ್ಪಷ್ಟತೆ-ತೀವ್ರತೆ ಈ ಕೃತಿಯಲ್ಲಿ ಅದ್ಭುತವಾಗಿ ಮೂಡಿದಂತೆ ಕಾಣಿಸುತ್ತದೆ.

ಈ ಹತ್ತು ವರ್ಷಗಳ ಸ್ಮರಣೀಯ ದಶಕದಲ್ಲಿ ಡಾ| ಅನುಪಮಾ ಬರೆವಣಿಗೆ ಕೆಲಸವನ್ನು ನಿರಂತರವಾಗಿ ಜಾರಿಯಲ್ಲಿಟ್ಟಿದ್ದಾರೆ. 'ಅತ್ಯುತ್ತಮ ಎನಿಸಬಹುದಾದ್ದನ್ನು ಮಾತ್ರ ಬರೆಯಬೇಕು. ಬರೆದದ್ದು ಸಾರ್ಥಕವೆನಿಸಿಕೊಳ್ಳಬೇಕು. ಅಧ್ಯಯನಪೂರ್ವಕವಾಗಿರಬೇಕು' ಎಂದೆ ನಿರ್ಧರಿಸಿ ಅವರು ಬರೆವಣಿಗೆ ಮುಂದುವರಿಸಿದ್ದಾರೆ. ಎಪ್ಪತ್ತರ ದಶಕದಲ್ಲೇ ಪ್ರವಹಿಸಿದ ಅವರ ಈ ನಿರ್ಧಾರದ ಆಲೋಚನೆ ಎಂಬತ್ತರ ದಶಕದಲ್ಲಿ ಖಚಿತ ದಾರಿಯಲ್ಲಿ ಸಾಗಿದೆ.

ಕಥೆ-ಕಾದಂಬರಿ ರಚನೆ ಡಾ| ಅನುಪಮಾ ನಿರಂಜನ ಅವರ ಪ್ರಮುಖ ಕ್ಷೇತ್ರವಾದರೂ ವೈದ್ಯೆಯಾಗಿ ಅವರು ಕನ್ನಡ ವೈದ್ಯವಿಜ್ಞಾನ ಸಾಹಿತ್ಯಕ್ಕೆ ದೊಡ್ಡ ಕೊಡುಗೆಯನ್ನೇ ಕೊಟ್ಟಿದ್ದಾರೆ. ಅವರ ದಾಂಪತ್ಯ-ವೈದ್ಯಕೀಯದ ಹತ್ತು ಕೃತಿಗಳು ಒಟ್ಟು ಐವತ್ತಮೂರು ಮುದ್ರಣಗಳನ್ನು ಕಂಡಿರುವುದು ಅಪೂರ್ವವಾದ ದಾಖಲೆ. 'ವಧುವಿಗೆ ಕಿವಿಮಾತು', 'ದಾಂಪತ್ಯ ದೀಪಿಕೆ' ಮತ್ತು 'ತಾಯಿ ಮಗು' ಕೃತಿಗಳು ಹತ್ತು-ಹನ್ನೆರಡು ಮುದ್ರಣಗಳನ್ನು ಕಂಡಿವೆ. ಹೀಗೆಯೇ ಅವರ ಶಿಶುಸಾಹಿತ್ಯದ

ಕೊಡುಗೆ 'ದಿನಕ್ಕೊಂದು ಕಥೆ' ಒಂದು ಸಂಪುಟವಾಗಿ ಪ್ರಕಟವಾಗಿರುವುದಲ್ಲದೆ, ಹನ್ನೆರಡು ಕಿರುಭಾಗಗಳಾಗಿಯೂ ಪ್ರಕಟವಾಗಿವೆ. ಪ್ರತಿಭಾಗವೂ ಎರಡರಿಂದ ಐದು ಆವೃತ್ತಿಗಳನ್ನು ಕಂಡಿವೆ.

ಪ್ರಶಸ್ತಿಗಳು ಅವರಿಗೆ ಹೊಸದಲ್ಲದಿದ್ದರೂ ಈಚೆಗೆ ಎರಡು ಮೂರು ವರ್ಷಗಳ ಹಿಂದೆ ಅವರು ಪಡೆದುಕೊಂಡ 'ಶಾಶ್ವತೀ-ರಾಷ್ಟ್ರಪ್ರಶಸ್ತಿ' ಅವರ ಸಮಗ್ರ ಸಾಹಿತ್ಯ ಬದುಕಿಗೊಂದು ದೊಡ್ಡ ಸನ್ಮಾನ.

'ಬದುಕನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುವ' ನಿರಂಜನ ದಂಪತಿಗಳು, ಉಳಿದದ್ದನ್ನು (ಕೈಗೆಟಕುವಷ್ಟನ್ನು) ರೂಢಿಸಿಕೊಳ್ಳುವ ಸಾಧನೆಯತ್ತಲೇ ದುಡಿಯುತ್ತಿದ್ದಾರೆ. ಪರಸ್ಪರ ಪೂರಕವಾಗಿ, ಕನ್ನಡನಾಡಿನ ಅಪೂರ್ವ ಸಾಹಿತ್ಯ ದಂಪತಿಗಳಾಗಿ ಬದುಕುತ್ತಿದ್ದಾರೆ. ಬೆಂಗಳೂರು ಜಯನಗರದ ಅವರ ಸ್ವಂತ ಮನೆ 'ಕಥೆ' ಅವರಿಗೀಗ ಸಮಸ್ತ ಪ್ರಪಂಚ. ಈ ಪ್ರಪಂಚದಲ್ಲಿ ಉಳಿದು ಹೊರಗಿನ ವಿಶಾಲ ಪ್ರಪಂಚದ ನಾಡಿ ಮಿಡಿಯುವ ಕೆಲಸವನ್ನು ಅವರಿಬ್ಬರು ಅದ್ಭುತವಾಗಿ ಮಾಡುತ್ತಿದ್ದಾರೆ. ಕನ್ನಡಿಗರು-ಕರ್ನಾಟಕ ತಮ್ಮನ್ನು ಮರೆತುಬಿಡಲು ಅವರು ಬಿಟ್ಟಿಲ್ಲ. ತಮ್ಮ ಸಾಹಿತ್ಯ ಸಾಧನೆಗಳ ಮೂಲಕ 'ನಾವಿನ್ನೂ ಇದ್ದೇವೆ' ಎಂದು ಸಾರುತ್ತಿದ್ದಾರೆ.

ಆತ್ಮವಿಶ್ವಾಸದ-ಶಕ್ತಿಯುತ ಸಿದ್ಧಾಂತರ ಬದುಕಿಗೆ ನಾವು ಕಾಣುವ ಮಾದರಿ ಈ ದಂಪತಿಗಳು. ಅವರಿಗೆ ಶಾಂತ ಬದುಕು ಉಳಿಯಲಿ ಎಂದೇ ಕನ್ನಡಿಗರೆಲ್ಲ ಹಾರೈಸಬಹುದಾಗಿದೆ.

ಇಟ್ಟ ಹೆಸರನ್ನು ಸಾರ್ಥಕಪಡಿಸಿದ ದಿಟ್ಟ ಮಹಿಳೆ ೩

- ಚದುರಂಗ

ಸುಮಾರು ಮೂವತ್ತಾರು ಮೂವತ್ತೇಳು ವರ್ಷಗಳ ಹಿಂದಿನ ಮಾತು. ಆಗ ನಾನು ನನ್ನ ಹುಟ್ಟೂರಾದ ಕಲ್ಲಹಳ್ಳಿಯಲ್ಲಿ ವಾಸಿಸುತ್ತಿದ್ದೆ. ಆಗೀಗ ಮೈಸೂರು ನಗರದ ಒಂಟಿಕೊಪ್ಪಲು ಬಡಾವಣೆಯಲ್ಲಿದ್ದ ನಮ್ಮ ಅಣ್ಣನ ಮನೆ ಚದುರಂಗ ಭವನಕ್ಕೆ ಬರುತ್ತಿದ್ದುದುಂಟು. ಅಂತಹ ಒಂದು ದಿನ ಒಬ್ಬಳು ಹೆಣ್ಣು ಮಗಳು ನನ್ನನ್ನು ಕಾಣಲು ಅಲ್ಲಿಗೆ ಬಂದಳು. ಸಾಧಾರಣ ಎತ್ತರದ ದುಂಡು ಮುಖದ ತೆಳ್ಳನೆಯ ವ್ಯಕ್ತಿ. ನನ್ನಲ್ಲಿ ಬಂದ ಕಾರಣವನ್ನು ಕೇಳಿದೆ. "ನನ್ನ ಹೆಸರು ಅನುಪಮಾ" ಎಂದು ಪರಿಚಯ ಮಾಡಿಕೊಡುತ್ತಾ "ನಾನು ಮೆಡಿಕಲ್ ಕಾಲೇಜು ವಿದ್ಯಾರ್ಥಿನಿ. ನನ್ನ ಮೊದಲ ಕಥಾಸಂಕಲನ ಪ್ರಕಟವಾಗಲಿದೆ. ಅದಕ್ಕೆ ನೀವು ಮುನ್ನುಡಿ ಬರೆದು

ಕೊಡಬೇಕು. ಇದು ನಿರಂಜನರ ಅಪೇಕ್ಷೆಯೂ ಆಗಿದೆ. ಅವರೇ ನನ್ನನ್ನು ನಿಮ್ಮಲ್ಲಿಗೆ ಕಳುಹಿಸಿದವರು" ಎಂದಾಗ, ಈಗಾಗಲೇ ಇದೇ ವಿಷಯವಾಗಿ ನನ್ನ ಆತ್ಮೀಯ ನಿರಂಜನರಿಂದ ಬಂದಿದ್ದ ಪತ್ರದ ನೆನಪಾಯಿತು. ಕೃತ್ರಿಮತೆಯ ಲವಲೇಶವೂ ಇಲ್ಲದ ಆಕೆಯ ಪಾರದರ್ಶಕ ನಡೆನುಡಿಯೂ ಇಷ್ಟವಾಯಿತು. ಬರೆದು ಕೊಡಲು ಒಪ್ಪಿದೆ.

'ಕಣ್ಮಣಿ' ಕಥಾಸಂಕಲನವನ್ನು ಓದಿದಂತೆ, ರೋಗಗ್ರಸ್ತ ಸಮಾಜಕ್ಕೆ ಕನ್ನಡಿ ಹಿಡಿಯುವ ಚಿತ್ತಸ್ಥೈರ್ಯದ ಸತ್ವಶಾಲಿ ಲೇಖಕಿಯೊಬ್ಬಳ ಉದಯವನ್ನೂ ಗಮನಿಸಿದೆ. ಈ ಅನಿಸಿಕೆಯನ್ನು ನನ್ನ ಮುನ್ನುಡಿಯಲ್ಲು ವ್ಯಕ್ತಪಡಿಸಿದೆ. ಮುಂದೆ ಈ ಲೇಖಿಕಿ ದಾಪುಗಾಲು ಹಾಕುತ್ತ 'ಕಣ್ಮಣಿ'ಯಿಂದ ಆರಂಭವಾಗಿ 'ಒಂದು ಗಿಣಿಯ ಕತೆ'ಯವರೆಗೆ ಎಂಟು ಕಥಾಸಂಕಲನಗಳು, "ಅನಂತ ಗೀತ"ದಿಂದ ಆರಂಭವಾಗಿ "ಕೊಳಚೆ ಕೊಂಪೆಯ ದಾನಿಗಳು"ವರೆಗೆ ಹತ್ತೊಂಬತ್ತು ಕಾದಂಬರಿಗಳನ್ನು ಇವರ ಲೇಖನಿ ರಚಿಸಿದ್ದನ್ನು ಕಂಡು ನನ್ನ ಮುನ್ನುಡಿಯ ಹಾರೈಕೆ ಸುಳ್ಳಾಗಲಿಲ್ಲ ಎಂದು ಸಂತೋಷಪಟ್ಟೆ.

ಮಕ್ಕಳಿಗೆ ಕಥೆ ಹೇಳುವುದು ಎಲ್ಲ ತಾಯಂದಿರಿಗೂ ಸ್ವಾಭಾವಿಕವಾದರೂ ಕನ್ನಡದ ಯಾವ ಲೇಖಕಿಯೂ ಮಕ್ಕಳಿಗಾಗಿಯೇ ಕತೆಗಳನ್ನು ರಚಿಸುವುದರಲ್ಲಿ ಅಷ್ಟಾಗಿ ಆಸಕ್ತಿ ವಹಿಸಿದಂತೆ ಕಂಡು ಬಂದಿಲ್ಲ. ಆದರೆ ಅನುಪಮಾ ತಮ್ಮ ಮಗಳು ಸೀಮಂತಿನಿಗೆ ಕತೆ ಹೇಳಲು ಆರಂಭ ಮಾಡಿದಾಗ ಅದನ್ನೇ ವರ್ಷದ ೩೬೫ ದಿನ ಗಳನ್ನು ಸೂಚಿಸುವ ಸಂಕೇತವಾಗಿ ೩೬೫ ಪುಟ್ಟ ಕತೆಗಳ ಗುಚ್ಛವನ್ನು "ದಿನಕ್ಕೊಂದು ಕಥೆ" ಎಂಬ ಹೆಸರಿನಲ್ಲಿ ಹೊರತಂದಿದ್ದಾರೆ. ತಮ್ಮ ವೈದ್ಯಕೀಯ ವೃತ್ತಿಯ ಅನುಭವ ವನ್ನು ಉಪಯೋಗಿಸಿಕೊಂಡು "ಆರೋಗ್ಯದರ್ಶನ", "ತಾಯಿ-ಮಗು", "ಸ್ತ್ರೀಸ್ವಾಸ್ಥ್ಯ ಸಂಹಿತೆ" ಇತ್ಯಾದಿ ಉಪಯುಕ್ತ ಕೃತಿಗಳನ್ನು ರಚಿಸಿ ತಾಯಂದಿರಿಗೆ ಮಾರ್ಗದರ್ಶನ ನೀಡಿದ್ದಾರೆ. "ಸ್ನೇಹಯಾತ್ರೆ", "ಅಂಗೈಯಲ್ಲಿ ಯುರೋ ಅಮೇರಿಕ" ಕೃತಿಗಳನ್ನು ರಚಿಸಿ ಪ್ರವಾಸ ಸಾಹಿತ್ಯಕ್ಕೂ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ. ದಾಂಪತ್ಯವೂ ಒಂದು ಕಲೆ ಎನ್ನುವುದನ್ನು ಮನಗಾಣಿಸುವುದಕ್ಕಾಗಿ "ದಾಂಪತ್ಯ ದೀಪಿಕೆ" ಮತ್ತು "ವಧುವಿಗೆ ಕಿವಿಮಾತು" ಕೃತಿಗಳನ್ನು ರಚಿಸಿದ್ದಾರೆ. ಹೀಗೆ ಇವರ ಸಾಹಿತ್ಯ ಪ್ರತಿಭೆ ಬಹುಮುಖವಾಗಿ ವಿಜೃಂಭಿಸಿದೆ.

ಆದರೆ ಅನುಪಮಾ ತಮ್ಮ ಬದುಕಿನಲ್ಲಿ ನಡೆದು ಬಂದದ್ದು ಕಲ್ಲುಮುಳ್ಳಿನ ಹಾದಿ. ಮದುವೆಯಿಂದಲೆ ಹೊಯ್ದಾಟದ ಹೋರಾಟದ ಆರಂಭ. ತಿರುಪತಿಯ ಯಾವುದೋ ಬಡ ಛತ್ರದಲ್ಲಿ ಸಾಂಪ್ರದಾಯಿಕ ಸಂಕೋಲೆಗಳನ್ನು ಮುರಿದು ಸರಳ ವಿವಾಹ. ತಂದೆ ತಾಯಿ, ಒಡಹುಟ್ಟಿದವರು, ಬಂಧುಬಾಂಧವರು ಎಲ್ಲರಿಂದಲೂ ದೂರ. ಆದರೂ ಧೃತಿಗೆಡದ ಚೇತನ. ಮುಂದೆ ವೈದ್ಯಕೀಯ ವೃತ್ತಿಯ ಜೊತೆಗೆ

ಸಾಹಿತ್ಯ ಕೃಷಿಯನ್ನು ನಡೆಸುವ ಸಾಹಸ. ರೋಗಿಗಳ ಶುಶ್ರೂಷೆಯ ಎಂಥ ಪರಿಪಾಟಲಿನಲ್ಲೂ ಅವರ ಬರವಣಿಗೆ ನಿಂತಿದ್ದಿಲ್ಲ. ಮನೆಯಲ್ಲಿ ಸಾಹಿತ್ಯದ ವಾತಾವರಣ. ಪ್ರತಿಭೆಯ ಜೊತೆಗೆ ಕ್ರಿಯಾಶೀಲರೂ ಆದ ಬಾಳಸಂಗಾತಿ ಸಾಹಿತಿ ನಿರಂಜನರ ಪ್ರೀತಿ ತುಂಬಿದ ಉತ್ತೇಜನ ಇವರನ್ನು ಸಾಹಿತ್ಯ ಕ್ಷೇತ್ರದಲ್ಲಿ ಮುನ್ನಡೆಸಿತು. ಕೃತಿರಚನೆಯ ಜೊತೆಗೆ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುತ್ತ ನಾಡಿನ ಉದ್ದಗಲಕ್ಕೆ ಸಂಚರಿಸಿ ಅನುಭವವನ್ನು ಶ್ರೀಮಂತಗೊಳಿಸಿಕೊಂಡರು. ಕನ್ನಡದಲ್ಲಿ ಉದ್ದಾಮ ಸಾಹಿತಿಯೆಂದು ಹೆಸರು ಪಡೆದ ಪತಿ ನಿರಂಜನ, ಇಂಗ್ಲೀಷ್‌ನಲ್ಲಿ ಪದ್ಯ ರಚನೆ ಮಾಡಿ ಖ್ಯಾತಿ ಪಡೆದ ಮಗಳು ತೇಜಸ್ವಿನಿ, ದಿನಕ್ಕೊಂದು ಕಥೆಗೆ ಕಾರಣಳಾದ ಇನ್ನೊಬ್ಬ ಮಗಳು ಸೀಮಂತಿನಿ, ತಮ್ಮ ಸೇವೆಗೆ ಕರ್ನಾಟಕ ರಾಜ್ಯ ಸಾಹಿತ್ಯ ಪ್ರಶಸ್ತಿ ಪಡೆದ ಅನುಪಮಾ. ಇದು ಒಟ್ಟಾರೆ ಸುಖಿ ಸಂತೃಪ್ತಿಗಳ ಸಂಸಾರ. ಇವರ ಬಾಳ್ವೆಯಲ್ಲಿ ಮೊದಲು ಕಹಿ, ತರುವಾಯ ಸಿಹಿ. ಆದರೆ ಈ ಸಿಹಿಯೆ ಉದ್ದಕ್ಕೂ ಇರಲಿಲ್ಲ. ಮತ್ತೆ ಕಹಿಯ ಪರ್ವ ಆರಂಭ. ಯಾವ ಕೆಲಸವನ್ನೂ ಕಷ್ಟವೆಂದು ಭಾವಿಸದ ನಿರಂಜನ ಏಳು ಸಂಪುಟಗಳ ಕಿರಿಯರ ವಿಶ್ವಕೋಶಕ್ಕಾಗಿ ಬಿಡುವಿಲ್ಲದ ದುಡಿಮೆಯ ಪರಿಣಾಮವಾಗಿ ಮೈಸೂರಿನ ಸೆನೆಟ್ ಸಭೆಯಲ್ಲಿ ಅಸ್ವಸ್ಥರಾಗಿ ಕೆ. ಆರ್. ಆಸ್ಪತ್ರೆಗೆ ಸೇರಿಸಲಾದ ಸುದ್ದಿ ಕೇಳಿ ದಿಗ್ಭ್ರಾಂತಿ. ನಿರಂಜನರ ಎಡಗಾಲು, ಎಡ ಕೈ ಪೂರ್ಣ ನಿಶ್ಚೇತನಗೊಂಡಿದ್ದವು. ಆದರೆ ನಿಧಾನವಾಗಿ ಕ್ರಮಕ್ರಮೇಣ ನಿರಂಜನರು ಚೇತರಿಸಿಕೊಂಡರು. ಕೋಲೂರಿಕೊಂಡು ಮೆಲ್ಲಮೆಲ್ಲನೆ ನಡೆಯುವಂತಾದರು. ಮತ್ತೆ "ಜ್ಞಾನಗಂಗೋತ್ರಿ" ಕೆಲಸವನ್ನು ಮನೆಯಲ್ಲೇ ಮತ್ತೆ ಆರಂಭಿಸಿ ಆ ಸ್ಥಿತಿಯಲ್ಲೇ ಆ ಸಂಪುಟಗಳನ್ನು ಕರಾರುವಾಕ್ಕಾಗಿ ಹೊರತಂದರು. ಐದು ವರ್ಷದಲ್ಲಿ ಏಳು ಬೃಹತ್ ಸಂಪುಟಗಳ ಬಿಡುಗಡೆ ಸಾಮಾನ್ಯ ಸಾಧನೆಯೇನೂ ಅಲ್ಲ. ಅದರ ಬೆನ್ನಿಗೆ ಇನ್ನೊಂದು ಸಂತಸದ ಸುದ್ದಿ. ನಿರಂಜನರ "ಚಿರಸ್ಮರಣೆ" ಕಾದಂಬರಿಗೆ "ಸೋವಿಯತ್ ಲ್ಯಾಂಡ್ ನೆಹರು" ಪ್ರಶಸ್ತಿ ಸಿಕ್ಕಿತು. ಫಲವಾಗಿ ಎಂಟು ಸಾವಿರ ರೂಪಾಯಿ ನಗದು, ಹದಿನೈದು ದಿನಗಳ ಪುಕ್ಕಟೆ ರಷ್ಯ ಪ್ರವಾಸ ಮನೆಮಂದಿಗೆಲ್ಲ. ಈ ಪ್ರವಾಸ ತಂದ ಹಿಗ್ಗಿನ ಜೊತೆಗೆ ಇನ್ನೊಂದು ಸಂತಸವಾರ್ತೆ. ಅನುಪಮಾ ಅವರು, ಮಹಿಳಾ ಸಂಘಟನೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಪರಿಣಾಮವಾಗಿ ಬರ್ಲಿನ್‌ನಲ್ಲಿ ನಡೆಯಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಪ್ರತಿನಿಧಿಯಾಗಿ ಭಾಗವಹಿಸುವ ಅವಕಾಶ ದೊರಕಿದುದು. "ಪ್ರೀತಿಸುವ ಗಂಡ, ಮೇಧಾವಿ ಮಕ್ಕಳು. ಒಳ್ಳೆಯ ವೈದ್ಯಕೀಯ ಪ್ರಾಕ್ಟೀಸ್! ಜೊತೆಜೊತೆಗೆ ಸಾಹಿತ್ಯದಲ್ಲೂ ಸಾಕಷ್ಟು ಹೆಸರು"-ಎಂದು ಅಂದುಕೊಳ್ಳುತ್ತಿದ್ದ ಹಾಗೆಯೇ ಅನುಪಮಾಗೆ ಸ್ತನದ ಕ್ಯಾನ್ಸರ್ ಕಾಣಿಸಿಕೊಂಡಿತು. ಶಸ್ತ್ರಚಿಕಿತ್ಸೆಯಾದ ಮೇಲೆ ದೈಹಿಕವಾಗಿ ಬಳಲಿದರೂ ಅವರ ಉತ್ಸಾಹಕ್ಕೇನೂ ಕೊರತೆಯುಂಟಾಗಲಿಲ್ಲ. ಬರವಣಿಗೆ ನಡೆದೇ ಇತ್ತು. ಸಾಹಿತ್ಯ ಸಮ್ಮೇಳನಗಳಿಗೆ, ಚರ್ಚಾ ಕೂಟಗಳಿಗೆ ಹಿಂದಿನಂತೆ ತಿರುಗಾಟ ನಡೆದೇ ಇತ್ತು. ಬೊಂಬಾಯಿ ಸಾಹಿತ್ಯ ಸಮ್ಮೇಳನ,

ಬೆಂಗಳೂರಿನಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನ, ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಚಿಕ್ಕಮಗಳೂರಿನಲ್ಲಿ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯದ ಗೋಷ್ಠಿಯ ಅಧ್ಯಕ್ಷತೆ ವಹಿಸಿದರು. ಕ್ಯಾನ್ಸರ್ ರೋಗವನ್ನು ಮನಸ್ಸಿನಿಂದ ಕ್ಯಾನ್ಸಲ್ ಮಾಡಿಕೊಂಡು ಯೂರೋ-ಅಮೇರಿಕ ಪ್ರವಾಸವನ್ನು ಮುಗಿಸಿಬಂದರು. ಬಂದ ಬಳಿಕವೂ ತಮ್ಮ ಕ್ಲಿನಿಕ್‌ನಲ್ಲಿ ರೋಗಿಗಳ ಶುಶ್ರೂಷೆ ನಡೆದೇ ಇತ್ತು.

ಹೀಗೆ ತಮ್ಮ ಬದುಕಿನಲ್ಲಿ ಒದಗಿಬಂದ ಸುಖದುಃಖಗಳನ್ನೆಲ್ಲ, ಸಿಹಿಕಹಿಗಳನ್ನೆಲ್ಲ ಧೈರ್ಯದಿಂದ, ಸಮಚಿತ್ತದಿಂದ ಸ್ವೀಕರಿಸಿ, ವೈದ್ಯೆಯಾಗಿ ಸಾಹಿತಿಯಾಗಿ, ಗೃಹಿಣಿಯಾಗಿ ತಮ್ಮ ಕರ್ತವ್ಯವನ್ನು ಅತ್ಯಂತ ಸಮರ್ಥವಾಗಿ, ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ನನಗೆ ಪರಿಚಯವಾದ ಮಹಿಳೆಯರಲ್ಲಿ ಅಪರೂಪದ ಚೇತನ, ಈ ಅನುಪಮಾ. ನಿರಂಜನ ಇಟ್ಟ ಹೆಸರನ್ನು ಸಾರ್ಥಕಗೊಳಿಸಿದ ಧೀಮಂತೆ.

ವಿವೇಚನಾಶೀಲ ಸಾಹಿತಿ

- ಶರ್ವಾಣಿ

ನಾನು ಮೊಟ್ಟಮೊದಲ ಬಾರಿಗೆ ಅನುಪಮಾರವರನ್ನು ಕಂಡ ದಿನ ನನ್ನ ಮನದಲ್ಲಿ ಅಚ್ಚಳಿಯದ ನೆನಪಾಗಿ ಉಳಿದಿದೆ. ಆಗ ಆಂಧ್ರದಲ್ಲಿದ್ದ ನಾವು ಬೆಂಗಳೂರಿಗೆ ಬಂದಿದ್ದೆವು. ನಿರಂಜನರ ಕಾದಂಬರಿಯೊಂದನ್ನು ಅನುವಾದಿಸುವ ಸಲುವಾಗಿ ಅವರನ್ನು ಕಾಣಬೇಕಾಗಿತ್ತು. ಮನೆ ಹುಡುಕುವುದು ಕಷ್ಟವಾದಾಗ ಸುಲಭವಾಗಿ ಸಿಕ್ಕ ಜಯನಗರ III ಬ್ಲಾಕ್‌ನಲ್ಲಿದ್ದ ಅವರ ಅನುಪಮಾ ಕ್ಲಿನಿಕ್‌ಗೆ ನಾನೂ ನಮ್ಮವರೂ ಹೋದೆವು. ಎಲ್ಲರಂತೆ ಚೀಟಿ ಬರೆಸಿ ಸರದಿ ಬಂದಾಗ ಒಳಹೋದೆ. ಕುಳಿತೊಡನೆ ಏನು? ಎಂಬಂತೆ ನೋಡಿದರು. "ನಾನು, ಶರ್ವಾಣಿ" ಎಂದೆ. ಪತ್ರ ಮುಖೇನ ಪರಿಚಯವಾಗಿದ್ದ ವ್ಯಕ್ತಿ ಕಣ್ಣೆದುರು ಬಂದಾಗ ಅವರ ಮುಖ ಅರಳಿತು. 'ವಿಳಾಸ ಕೊಡುತ್ತೇನೆ. ಮನೆಗೆ ಬನ್ನಿ' ಎಂದು ಮನೆಗೆ ಬರಬೇಕಾದ ಗುರುತುಗಳನ್ನು ಹೇಳಿದರು. ಉಳಿದ ರೋಗಿಗಳನ್ನು ನೋಡುವ ಕರ್ತವ್ಯ ಪ್ರಜ್ಞೆ, ಸಮಯಪ್ರಜ್ಞೆ, ಹಾಗೂ ಸ್ನೇಹಜೀವಿ ಎಂದು ಆ ಗಳಿಗೆಯಲ್ಲಿಯೇ ಅರಿತೆ. 'ನಾನು ಅದಕ್ಕಾಗಿಯೇ ಬಂದದ್ದು' ಎಂದು ವಂದಿಸಿ ಹೊರಬಂದೆ.

ಅನಂತರ ಮನೆಗೆ ಹೋದಾಗ ಆತ್ಮೀಯತೆಯಿಂದ ಬರಮಾಡಿಕೊಂಡರು ನಿರಂಜನ ದಂಪತಿಗಳು. ನಾನು ಬಂದ ಕೆಲಸದ ಕುರಿತು ಹೇಳಿದಾಗ ನಿರಂಜನರು ಸೌಜನ್ಯದಿಂದ ತಮ್ಮ ಕಾದಂಬರಿಯನ್ನು ತೆಲುಗಿಗೆ ಅನುವಾದಿಸಲು ಒಪ್ಪಿಗೆ ಸೂಚಿಸಿ

ಪ್ರೋತ್ಸಾಹಿಸಿದರು. ಅಲ್ಲಿದ್ದ ಸ್ವಲ್ಪ ಸಮಯದಲ್ಲಿಯೇ, ಆ ಸ್ನೇಹಮಯ ವಾತಾವರಣ ದಲ್ಲಿ ನನ್ನಲ್ಲಿದ್ದ ಸಂಕೋಚ ಮಾಯವಾಗಿ ಆತ್ಮೀಯತೆಯ ಬೆಸುಗೆಯುಂಟಾಯಿತು. ಎಲ್ಲಕ್ಕಿಂತ ಮನಸ್ಸಿಗೆ ಆನಂದವನ್ನುಂಟು ಮಾಡಿದ ಅಂಶವೆಂದರೆ ಆ ದಂಪತಿಗಳು ಪರಸ್ಪರ ಬಹುವಚನದಲ್ಲಿ ಸಂಬೋಧಿಸಿಕೊಳ್ಳುತ್ತಿದ್ದುದು. ಪತ್ನಿಯನ್ನು ಕೇವಲ ಪತ್ನಿಯಾಗಿ ಮಾತ್ರವಲ್ಲದೆ ಗೆಳತಿಯಾಗಿ, ಗೌರವಾನ್ವಿತ ವ್ಯಕ್ತಿಯಾಗಿ ಕಾಣುವ ನಿರಂಜನರ (ಪಾವಿತ್ರ್ಯತೆಯ ಸಾಕಾರ ಮೂರ್ತಿ) ಹೃದಯ ವೈಶಾಲ್ಯವನ್ನೂ ಉಪಮಾತೀತರೆನಿಸುವಂತಿರುವ ಅನ್ವರ್ಥನಾಮದಂತಿರುವ ಅನುಪಮಾ ಅವರ ಸೌಜನ್ಯತೆಯನ್ನೂ ಕಂಡು ನಾನು ಮಾರುಹೋದೆ. ಅಂದು ಆ ರೀತಿ ಪರಿಚಯ ವಾದ ನಮ್ಮ ಸ್ನೇಹಪಲ್ಲವಿ ಪತ್ರಮುಖೇನ ಹಾಗೂ ಆಗೊಮ್ಮೆ ಈಗೊಮ್ಮೆ ಭೇಟಿ ಯಾಗುತ್ತ ವಿಕಸಿಸುತ್ತಿದೆ.

ಮೊಟ್ಟಮೊದಲ ಕಥಾಸಂಕಲನ 'ಕಣ್ಮಣಿ'ಯನ್ನು ರಚಿಸಿದ ಅನುಪಮಾ ಇಂದು ಕನ್ನಡ ಸಾಹಿತ್ಯಲೋಕದ 'ಕಣ್ಮಣಿ'ಯಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಕತೆ-ಕಾದಂಬರಿಗಳ ಮೂಲಕ ತಮ್ಮದೇ ಆದ ಪ್ರತ್ಯೇಕ ಸ್ಥಾನವನ್ನು ಸಾಹಿತ್ಯಕ್ಷೇತ್ರ ದಲ್ಲಿ ಪಡೆದುಕೊಂಡವರು. ಇಂದು ಕಾದಂಬರಿ ಕ್ಷೇತ್ರದಲ್ಲಿ ಅವರಷ್ಟು ಸಾಧನೆ ನಡೆಸಿದ ಲೇಖಕಿ ಮತ್ತೊಬ್ಬರಿಲ್ಲವೆನ್ನಬಹುದು. ಕೇವಲ ಲೇಖಕಿಯಾಗಿ ಮಾತ್ರವಲ್ಲವೆ ವ್ಯಕ್ತಿ ಜೀವನದಲ್ಲೂ ವೈದ್ಯೆಯಾಗಿ ಗಣನೀಯ ಸೇವೆ ಸಲ್ಲಿಸಿದವರು. "ಎರಡು ದೋಣಿಯಲ್ಲಿ ಕಾಲಿಟ್ಟಂತೆ ನಮ್ಮ ಬದುಕು" ಎಂದು ದುಡಿಯುವ ಮಹಿಳೆಯರು ಮನೆಯ ಒಳಗೂ ಹೊರಗೂ ದುಡಿಯುವುದರಿಂದ ತಾವು ತಮ್ಮ ಯಾವ ಕಾರ್ಯವನ್ನೂ ಪರಿಪೂರ್ಣ ವಾಗಿ,ಸಮರ್ಪಕವಾಗಿ ಮಾಡಲಾರೆವು ಎಂದು ಕೊರಗುವುದು ಎಲ್ಲರಿಗೂ ತಿಳಿದ ಮಾತೇ. ಆದರೆ ಅನುಪಮಾ ಅವರು ಗೃಹಿಣಿಯಾಗಿ, ವೈದ್ಯೆಯಾಗಿ, ಸಮಾಜಸೇವಾ ಧುರೀಣ ರಾಗಿ(ಶಾಶ್ವತಿಗಾಗಿ ಅವರು ಶ್ರಮಿಸಿದ ಕಾರ್ಯವನ್ನು ಇಲ್ಲಿ ಸ್ಮರಿಸಬಹುದು)ಸಾಲದೆಂಬಂತೆ ಮನೆಯಲ್ಲಿ ತಮ್ಮ ಹಾಗೂ ಪತಿಯ ಅನಾರೋಗ್ಯ, ಎಲ್ಲವನ್ನೂ ಸ್ಥಿತಪ್ರಜ್ಞರಂತೆ ಕಾಣುತ್ತಿರುವ ಅವರ ವ್ಯಕ್ತಿತ್ವದ ಬಗ್ಗೆ ಹೇಳಬೇಕೆಂದರೆ-ಅಂತಹವರು ಕಾಣಸಿಗುವುದು ಅಪರೂಪವೇ ಸರಿ.

ಬಾಳನ್ನು ಆಳವಾಗಿ ಕಂಡು ಅಭ್ಯಸಿಸಿ, ಅನುಭವಿಸಿರುವ ಪರಿಪಕ್ವತೆಯನ್ನು ಪದರ ಪದರವಾಗಿ ಎಳೆ ಎಳೆಯಾಗಿ ಬಿಡಿಸಿ ನೋಡುವ ಮನೋಭಾವವನ್ನು ಅವರ ಇತ್ತೀಚಿನ ಕೃತಿಗಳಲ್ಲಿ ಕಾಣುತ್ತಿದ್ದೇವೆ. ಯುವಜನಾಂಗದ ದೃಷ್ಟಿಕೋನ. ಬಾಳನ್ನು ಎದುರಿಸುವ ದಿಟ್ಟತನ ಅವರ 'ಆಳ' ಹಾಗೂ 'ಮುಕ್ತಿ' ಕಾದಂಬರಿಗಳಲ್ಲಿ ವ್ಯಕ್ತವಾಗಿವೆ.

ಅವರ 'ಸಿಹಿಕಹಿ' ಬಾಳಿನುದ್ದಕ್ಕೂ ಅನುಭವಿಸುವ ಬುತ್ತಿ. ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ದಾರಿದೀಪವಾಗಬಹುದಾದಂತಹ ಕೃತಿ.

ಅವರ 'ಬಿಡುಗಡೆ' ಎಂಬ ಕತೆಯೊಂದನ್ನು ನಾನು ತೆಲುಗಿಗೆ ಅನುವಾದಿಸಿದ್ದೇನೆ. ಅವರ ಕೆಲವು ಕೃತಿಗಳನ್ನು ತೆಲುಗು ಓದುಗರಿಗೆ ಪರಿಚಯಿಸಬೇಕೆಂಬ ಹಂಬಲ ನನಗಿದೆ.

ಬದುಕಿ ಬದುಕಿಸುವ ಸಾವಿತ್ರ್ಯ

- ಬಿ. ಎ. ಸನದಿ

'ಕಲಬುರ್ಗಿಯಲ್ಲಿ ಇತ್ತೀಚೆಗಷ್ಟೆ ರೂಪುಗೊಂಡಿರುವ ಲೇಖಕಿಯರ ಹಾಗೂ ಕಲಾವಿದರ ವೇದಿಕೆಯ ಪರವಾಗಿ ಇದೇ ನವೆಂಬರ ೨೯-೩೦ರಂದು ಡಾ। ಅನುಪಮಾ ಅವರ ಸನ್ಮಾನ, ಅವರ ಗ್ರಂಥ ಪ್ರದರ್ಶನ ಹಾಗೂ ಅವರ ಸಾಹಿತ್ಯದ ಬಗ್ಗೆ ವಿಚಾರ ಗೋಷ್ಠಿಗಳನ್ನು ಏರ್ಪಡಿಸುವ ನಿರ್ಣಯ ಕೈಕೊಂಡಿದ್ದೇವೆ. ಈ ಎರಡು ದಿನಗಳ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ನೀವು ಬರಬೇಕು...........ಬರಲೇಬೇಕು............'

ಕಲಬುರ್ಗಿಯ ನ್ಯಾಯವಾದಿ-ಲೇಖಕಿ ಸೋದರಿ ಸರಿತಾ ಕುಸುಮಾಕರ ದೇಸಾಯಿ ಅವರಿಂದ ಬಂದ ಕಾಗದವನ್ನು ಕಂಡು ನನಗೆ ಆನಂದ, ಆಶ್ಚರ್ಯ! ಮೊಟ್ಟ ಮೊದಲ ಬಾರಿಯಾಗಿ ಒಬ್ಬ ಲೇಖಕಿಯ ಗ್ರಂಥ ಪ್ರದರ್ಶನ, ವಿಚಾರಗೋಷ್ಠಿ ಹಾಗೂ ಸಾರ್ವಜನಿಕ ಸನ್ಮಾನ ಮಾಡುವುದರಲ್ಲಿ ಕಲಬುರ್ಗಿ ವಹಿಸಿಕೊಂಡ ಮುಂದಾಳ್ತನದ ಬಗ್ಗೆ ಆನಂದವಾದರೆ, ಒಂದೇ ಒಂದು ತಿಂಗಳ ಹಿಂದೆ ಅಖಿಲ ಭಾರತ ೫೯ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆದ ನಗರದಲ್ಲೇ, ಇಷ್ಟು ಬೇಗನೇ, ಡಾ। ಅನುಪಮಾ ಅವರ ಸಾಹಿತ್ಯಸೃಷ್ಟಿಯ ಕುರಿತಾದ ವಿಚಾರಗೋಷ್ಠಿಗಳನ್ನು ಹಮ್ಮಿಕೊಂಡ ಬಗ್ಗೆ ಆಶ್ಚರ್ಯ! ಡಾ।ಅನುಪಮಾ ಅವರಿಗೆ ಪ್ರ-ಪ್ರಥಮವಾಗಿ ಕಲಬುರ್ಗಿ ನಾಡಿನಲ್ಲಿ ಇಷ್ಟೊಂದು ಅರ್ಥಪೂರ್ಣವಾದ ಸನ್ಮಾನ ದೊರೆಯಲಿದ್ದ ಬಗ್ಗೆ ಅಭಿಮಾನ; ಆದರೆ ಅಕ್ಟೋಬರ್(೧೯೮೭) ೨೯ರಿಂದ ನವೆಂಬರ ೧ರ ವರೆಗೂ ಬರ್ಝರಿಯಾಗಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಿಹಿ-ಕಹಿ ನೆನಪುಗಳಿನ್ನೂ ಆರದಿರುವಾಗ, ತಮ್ಮ 'ನೆನಪು-ಸಿಹಿಕಹಿ' ಗ್ರಂಥಕ್ಕೆ ಶಾಶ್ವತಿ ಪ್ರಶಸ್ತಿ ಪಡೆದ ಡಾ। ಅನುಪಮಾ ಅವರ ಕಾರ್ಯಕ್ರಮಕ್ಕೆ ನಿರೀಕ್ಷಿಸಿದಷ್ಟು ಜನ ಸೇರಬಹುದೇ ಎಂಬುದೊಂದು ಅನುಮಾನ. ಈ ಆನಂದ, ಆಶ್ಚರ್ಯ, ಅಭಿಮಾನ, ಅನುಮಾನಗಳನ್ನೆಲ್ಲಾ ಹೊತ್ತುಕೊಂಡು ಕಲಬುರ್ಗಿಗೆ ಹೋದೆ. ಸರಿತಾ ಕುಸುಮಾಕರ ದೇಸಾಯಿ ಹಾಗೂ ಡಾ।ಪಿ.ಎಸ್. ಶಂಕರ ಅವರ ನೇತೃತ್ವದಲ್ಲಿ ನಡೆದ ಎರಡು ದಿನಗಳ

ಕಾರ್ಯಕ್ರಮಗಳಲ್ಲಿ ಕಲಬುರ್ಗಿಯ ರಸಿಕರು ತೋರಿಸಿದ ಜೀವಂತಿಕೆಯನ್ನು ಕಂಡು ದಂಗಾದೆ! ಅಲ್ಲಿಯ ಮ. ರಾ. ವೈದ್ಯಕೀಯ ಮಹಾವಿದ್ಯಾಲಯದ ಸಭಾಭವನದಲ್ಲಿ ನಡೆದ ಈ ಎರಡು ದಿನಗಳ ಸಡಗರದ ಕಾರ್ಯಕ್ರಮದಲ್ಲೊಂದು ಬಗೆಯ ಆತ್ಮೀಯತೆ, ಅಕ್ಕರೆ, ಅಭಿಮಾನಗಳು ತುಂಬಿ ತುಳುಕುತ್ತಿದ್ದವು. ಕಾರ್ಯಕ್ರಮದ ಮುಕ್ತಾಯದೊಡನೆ ನಡೆದ ತಮ್ಮ ಸನ್ಮಾನಕ್ಕೆ ಉತ್ತರ ನೀಡುತ್ತ ಡಾ। ಅನುಪಮಾ ಅವರು 'ಈ ಕಾರ್ಯಕ್ರಮಕ್ಕಾಗಿ ಮುಂಬಯಿಂದ ಬಂದ ಸನದಿಯವರು ನನ್ನ ಅಣ್ಣನಿದ್ದಂತೆ'-ಎಂದು ಗೌರವ ಸೂಚಿಸಿದಾಗ ನಾನಂತೂ ಮೂಕವಿಸ್ಮಿತನಾದೆ.

ಈ ನಮ್ಮ ಬಾಂಧವ್ಯ ೧೯೫೭ರಿಂದಲೂ ಬೆಳೆದು ಬಂದದ್ದು. ೧೯೫೭ರಲ್ಲಿ ಧಾರವಾಡದಲ್ಲಿ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ನಡೆದ ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಡಾ। ಅನುಪಮಾ ಅವರ ಸಮಕ್ಷಮ ಪರಿಚಯ ನನಗಾದದ್ದು. ಧಾರವಾಡದ ಕವಿಗಾಳಿಯಲ್ಲಿ ಆತ್ಮೀಯತೆಯ ಆಕಾರ ತಳೆದದ್ದು; ಇಂದಿಗೂ ಉಳಿದದ್ದು. ಆಗ ತಾನೆ 'ಸಾಧನ-ಸಂಚಯ'ದ ನಿರಂಜನರ ಜೀವನಸಂಗಾತಿಯಾಗಿ ಹೊರಗಾಳಿಗಿಳಿದ ಅನುಪಮಾ ಅವರು ನಿರಂಜನರೊಡನೆ ಧಾರವಾಡದ ಸಮ್ಮೇಳನಕ್ಕೆ ಆಗಮಿಸಿದ್ದರು. 'ಇವರು ನನ್ನ ಬಂಧು ಬಾಬಾಸಾಹೇಬ್ ಸನದಿ' ಎಂದು ನಿರಂಜನರು ನನ್ನ ಪರಿಚಯ ಮಾಡಿಕೊಟ್ಟಿದ್ದರು. ೧೯೬೯ರಿಂದೀಚೆ ನಾನು ಕರ್ನಾಟಕದ ಹೊರಗಿದ್ದರೂ ನಿರಂಜನ ದಂಪತಿಗಳ ಈ ಬಂಧುತ್ವ ಮಾತ್ರ ಕರಗಲಿಲ್ಲ;ಸೊರಗಲಿಲ್ಲ. ೧೯೮೭ರಲ್ಲಿ ಡಾ। ಅನುಪಮಾ ಅವರ 'ನೆನಪು ಸಿಹಿಕಹಿ' ಗ್ರಂಥಕ್ಕೆ ಶಾಶ್ವತಿ ಪ್ರಶಸ್ತಿ ಪ್ರಾಪ್ತವಾದಾಗ ನಾನು ಬರೆದ ಕಾಗದಕ್ಕೆ ಉತ್ತರ ರೂಪವಾಗಿ 'ನಿಮ್ಮ ಪತ್ರ ಕಂಡು ಸಂತೋಷವಾಯಿತು. ನಿನ್ನೆ ತಾನೇ ನಿಮ್ಮ ತಮ್ಮನ ಕಾಗದ ಬಂದಿತ್ತು. ನಿಮ್ಮೆಲ್ಲರ ಪ್ರೀತ್ಯಾದರಗಳನ್ನು ಕುರಿತು ನಿನ್ನೆಯೆಲ್ಲ ಮಾತಾಡುತ್ತಿದ್ದೆವು........ 'ನೆನಪು-ಸಿಹಿಕಹಿ' ಖಂಡಿತವಾಗಿ ನಿಮ್ಮೆಲ್ಲರಿಗೂ ಸೇರಿದ್ದು........' ಎಂದು ಬರೆದದ್ದು ನಮ್ಮ ಬಂಧುತ್ವದ ಸಿಹಿ ನೆನಪುಗಳ ಸಿಹಿ ಸಂಕೇತವೆಂದೇ ನನ್ನ ಭಾವನೆ.

ಮೂವತ್ತೆರಡು ವರ್ಷಗಳ ಈ ಸುದೀರ್ಘ ಬಂಧುತ್ವದ ಅವಧಿಯಲ್ಲಿ ಡಾ। ಅನುಪಮಾ ತಮ್ಮ ಗೃಹಜೀವನ, ವೈದ್ಯಕೀಯ ವೃತ್ತಿ ಹಾಗೂ ಸಾರ್ವಜನಿಕ ಸೇವೆಯೊಡನೆ ಸಮರ್ಥ ಸಾಹಿತಿಯಾಗಿ ಬೆಳೆದು ಬಂದ ಪರಿಯನ್ನು ನಾನು ಗಮನಿಸಿದ್ದೇನೆ. ೧೯೭೯ರಲ್ಲಿ ನಡೆದ ಮುಂಬಯಿ ಕನ್ನಡಿಗರ ೩ನೆಯ ಸಾಹಿತ್ಯಕ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಡಾ। ಅನುಪಮಾ ಅವರು ಮಾಡಿದ ಭಾಷಣ ಅವರ ಸಾಹಿತ್ಯಕ ನಿಲುವಿಗೆ ಹಿಡಿದ ಕನ್ನಡಿಯಂತಿತ್ತೆಂಬ ಸಂಗತಿಯೂ ಗಮನಾರ್ಹ. ಇಲ್ಲಿಯ ವರೆಗೆ ೨೧ ಕಾದಂಬರಿಗಳನ್ನೂ, ೮ ಕಥಾಸಂಕಲನಗಳನ್ನೂ, ೯ ವೈದ್ಯಕೀಯ ಹಾಗೂ ದಾಂಪತ್ಯ ವಿಜ್ಞಾನ ಗ್ರಂಥಗಳನ್ನೂ ಪ್ರಕಟಿಸಿ ಪ್ರಸಿದ್ಧರಾದ ಅನುಪಮಾ ಅವರ ಆತ್ಮಕಥನ 'ನೆನಪು-ಸಿಹಿಕಹಿ' ಒಂದು ಅಪೂರ್ವ ಕೃತಿ; ಅನುಪಮ ಕೃತಿ. ಮಕ್ಕಳಿಗಾಗಿ ಅವರು ನೀಡಿದ

ದಿನಕ್ಕೊಂದು ಕಥೆಯೂ ಇಂದಿನ ಹಾಗೂ ಮುಂದಿನ ಮಕ್ಕಳ ದಾರಿಯ ಬುತ್ತಿಯೇ ಹೌದು. ಅವರ ಪ್ರವಾಸ ಸಾಹಿತ್ಯದ ಎರಡು ಕೃತಿಗಳು ಅವರ ವಿಶಿಷ್ಟ ಲಲಿತ ಶೈಲಿಯಿಂದ ದೇಶ-ವಿದೇಶಗಳ ವಿವರಗಳಿಗೂ ಸಿಹಿಯಾದ ಲೇಪನವಿತ್ತು ವಾಚಕರ ಮನವನ್ನು ಮುದಗೊಳಿಸುತ್ತವೆ. ಅವರ ಸಾಹಿತ್ಯಕೃತಿಗಳಿಗೆ ಶಾಶ್ವತಿ ಪ್ರಶಸ್ತಿಯಲ್ಲದೆ ಇತರ ಪ್ರಶಸ್ತಿಗಳೂ ಬಂದಿವೆ. ಅಂತೂ ಅನುಪಮಾ ಅವರು ತಮ್ಮ ವೈವಿಧ್ಯಪೂರ್ಣ ವಸ್ತು-ವಿನ್ಯಾಸಗಳನ್ನೊಳಗೊಂಡ ಸಾಹಿತ್ಯಕೃತಿಗಳಿಂದಾಗಿ 'ಕನ್ನಡ ಮಹಿಳಾ ಸಾಹಿತಿಗಳ ಸಾಹಿತ್ಯವೆಂದರೆ ಅಡಿಗೆಮನೆಯ ಸಾಹಿತ್ಯ' ಎಂಬ ಲಘು- ಶೀರ್ಷಾನದ ಮಾತನ್ನು ಹುಸಿಗೊಳಿಸಿ ತೋರಿಸಿದ್ದಾರೆ. ಆಧುನಿಕ ಕನ್ನಡ ಸಾರಸ್ವತ ಪ್ರಪಂಚದಲ್ಲಿ ಮಹಿಳೆಯರು ಮಾಡಿದ ಅಥವಾ ಮಾಡುತ್ತಿರುವ ಸಾಹಿತ್ಯ ಸಾಧನೆಯನ್ನು ಗಮನಿಸಿದಾಗ ಅನುಪಮಾ ಅವರ ಹೆಸರಿನ ಅರ್ಥ ಸಾರ್ಥಕ್ಯ ಪಡೆದಿದೆಯೆಂದೇ ನನಗೆನಿಸುತ್ತದೆ. ಅವರ ಸಾಹಿತ್ಯ ಸಾಧನೆಯಲ್ಲಿ ಎದ್ದು ಕಾಣುವ ಅಂಶಗಳೆಂದರೆ ಮಾನವೀಯ ಮೌಲ್ಯಗಳ ಆರಾಧನೆ ಹಾಗೂ ಸಾಮಾಜಿಕ ಸಂದರ್ಭಗಳಲ್ಲಿ ಮಿಡಿಯುವ ವಸ್ತುನಿಷ್ಠ ಸಂವೇದನೆ. ಕೇವಲ ಕೈಗಾರಿಕೆಯಾಗಿ ಉಳಿಯದೆ ಕುಶಲ ಕಲೆಗಾರಿಕೆಯಾಗಿ ಬೆಳೆದಿದೆ ಅವರ ಸಾಹಿತ್ಯಕೃಷಿ.

ನಾನು ಮುಂಬಯಿಯಲ್ಲಿರುವ ಕಳೆದ ಹದಿನಾರು ವರ್ಷಗಳ ಅವಧಿಯಲ್ಲಿ ಡಾ| ಅನುಪಮಾ ಹಲವೊಂದು ಸಲ ಮುಂಬಯಿಗೆ ಬಂದುದುಂಟು. ಅವರಿಲ್ಲಿ ಬಂದಾಗ ಲೆಲ್ಲ ಅಂಧೇರಿಯ ಕವಿ ವಿ.ಜಿ.ಭಟ್ಟರ ಮನೆಯಲ್ಲಿ ವಾಸ್ತವ್ಯ. ಅಲ್ಲಿಂದ ಮುಂದೆಲ್ಲ ಆಪ್ತ ಬಂಧುಗಳ ಸಂಪರ್ಕ, ಸಹಚರ್ಯೆ. ನಾಲ್ಕನೆಯ ಮಾಳಿಗೆಯಲ್ಲಿರುವ ನಮ್ಮ ಮನೆಯ ಮೆಟ್ಟಿಲೇರಿದ್ದು ಒಂದೇ ಸಲವಾದರೂ ನಮ್ಮ ಪರಿವಾರಕ್ಕೆಲ್ಲ ಅನುಪಮಾ ಅವರದು ಆತ್ಮೀಯ ಹೆಸರು. ವಿ.ಜಿ.ಭಟ್ಟ, ವ್ಯಾಸರಾಯ ಬಲ್ಲಾಳ ಹಾಗೂ ಮೆಂಡನ್ ಬಂಧು ಗಳು ಭೇಟಿಯಾದ ಸಂದರ್ಭಗಳಲ್ಲಂತೂ ಅನುಪಮಾ-ನಿರಂಜನರ ಮಾತು ಸುಳಿಯಲೇ ಬೇಕು. ಅವರಿಬ್ಬರ ಇತ್ತೀಚಿನ ಶಾರೀರಿಕ ಬಳಲಿಕೆ ನಮ್ಮನ್ನೆಲ್ಲಾ ಬಾಧಿಸುವ ಅಂಶ. ಮುಂಬಯಿಯ ಟಾಟಾ ಸ್ಮಾರಕ ಆಸ್ಪತ್ರೆಯಲ್ಲಿ ಅನುಪಮಾ ಪಡೆದ ಚಿಕಿತ್ಸೆಯ ದಿನ ಗಳನ್ನು ನಾವಾರೂ ಮರೆಯುವಂತಿಲ್ಲ. ಅನುಪಮಾ-ನಿರಂಜನರ ಬದುಕು ಸೋಲರಿಯದ ನಿತ್ಯ ನಿರಂತರ ಹೋರಾಟವೆಂಬುದನ್ನು ಬಲ್ಲವರೇ ಬಲ್ಲರು. ಇವರಿಬ್ಬರ ನೆನಪು ಬಂದಾಗಲೆಲ್ಲಾ 'ಕಥೆ'ಯ ಬಾಗಿಲು ತಟ್ಟುವ ಯಮರಾಯನಿಗೂ ಮನುಷ್ಯ ಜೀವನದ ಮಾಹಿತಿಯ ಅರಿವು ಮಾಡಿಕೊಡುತ್ತ ಬದುಕಿ-ಬದುಕಿಸುವ 'ಸಾವಿತ್ರ್ಯ' ಅನುಪಮಾ ಅವರ ಬದುಕಿನ ಹೆಗ್ಗಳಿಕೆ.

ಜೀವನ ದೃಷ್ಟಿ

- ವಿಜಯಾ

ಈ ಲೋಕದಲ್ಲಿ ಹೆಣ್ಣಿಗೆ ಒಂದು ಸ್ವತಂತ್ರ ಅಸ್ತಿತ್ವವನ್ನು ಬಹಳ ಕಷ್ಟಪಟ್ಟೂ ತಂದುಕೊಡಲು ಅಸಾಧ್ಯ ಎಂಬ ಸಂದರ್ಭ ನಮ್ಮೆದುರು ಇರುವಾಗ ಅನುಪಮಾ ಅಂಥ ಗೆಳತಿಯ ಬದುಕು ಬರಹಗಳ ಹಿನ್ನೆಲೆಯಲ್ಲಿ ಒಂದು ಸೃಜನಶೀಲ ಮನಸ್ಸು-ಜೀವನ ದೃಷ್ಟಿಗಳ ಮೂಲ ಸೆಲೆಗಳನ್ನು ಹುಡುಕುವ ಪ್ರಯತ್ನ ತುಂಬ ಸುಲಭವೇನಲ್ಲ. ಸಂಪಾದಕರು ಕೊಟ್ಟಿರುವ ಪುಟ ಮಿತಿಯಲ್ಲಿ ಹೆಚ್ಚು ವಿವರಣಾತ್ಮಕವಾಗಿ ಬರೆಯಲೂ ಆಗದ ಅಸಹಾಯಕತೆ ಇದೆ, ಕ್ಷಮಿಸಿ.

ಒಂದು ನಂಬಿಕೆಯನ್ನು ಕಂಡು-ಬಾಳಿದ ಮನಸ್ಸು,ಆ ನಂಬಿಕೆಗಳಲ್ಲಿಯ ದೋಷವನ್ನು ಹುಡುಕುತ್ತಾ, ಪ್ರಶ್ನಿಸುತ್ತ ಅದರ ಜೊತೆಗೂ ಸೆಣಸುತ್ತಾ ಹೊಸತನದ ಅನ್ವೇಷಣೆಗಾಗಿ ತುಡಿಯುತ್ತಾ ಆಯ್ಕೆಯ ಪರದಾಟದಲ್ಲಿ ಬಹುದೂರವನ್ನು ಸವೆಸಿದೆ.

ಮತ್ತೊಬ್ಬರ ಹುಬ್ಬು ಮೇಲೇರುವಷ್ಟು ಉತ್ತಮ ಎನ್ನಬಹುದಾದಂಥ ಪರಿಸರ, ಸಂಗಾತಿ, ಸಮಯಗಳ ಆಶ್ರಯವಿದ್ದೂ ಈ ಅನ್ವೇಷಣೆಯ ಸಂದರ್ಭದಲ್ಲಿ ಸ್ವಂತಿಕೆಗಾಗಿ ಆರಿಸಿಕೊಂಡ ಏಕಾಕಿತನ ಬಹಳಷ್ಟನ್ನು ಕಟ್ಟಿಕೊಟ್ಟಿದೆ ಎಂದು ಹೇಳುವುದಕ್ಕಿಂತ ಬಿಟ್ಟುಕೊಡಬೇಕಾದ ಅಂಶಗಳು ಅನೇಕ ಆಗಿರುತ್ತವೆ ಎಂಬುದನ್ನು ಊಹಿಸಬಹುದು.

ವ್ಯಕ್ತಿತ್ವವೊಂದು, ತನ್ನೆದುರು ಇರುವ ಅನೇಕ ಪವಾಡ ವಿಧಿಗಳ ಸೆರಗಿನಾಚೆಗೆ 'ನೈಜವಾದ ಒಳ್ಪು' ದಕ್ಕಿಸಿಕೊಳ್ಳಲೆಂದು ಯಾವ ನೆರವನ್ನೂ ಆಶ್ರಯಿಸದೆ ತನ್ನ ಒಳಗನ್ನೇ ಸದಾ ನಿಕ್ಷೇಪವಾಗಿಡುವ ಸೃಜನಶೀಲ ಅನುಭವದ 'ಅನುಪಮ'ತೆಯ ಜೊತೆಗೆ ತಾನೇ ಕಥೆಯಾಗುವ ಬಗೆಯನ್ನು ಹುಡುಕುವುದು ಅದು ನಡೆದ ದಾರಿಯಲ್ಲಿ ಸಮಾಜ, ಕುಟುಂಬದ ನಡುವೆ ಆಲೋಚನೆಗಳ ಘರ್ಷಣೆಯನ್ನು ಗುರುತಿಸುವುದು ಕೂಡ ಒಂದು ರೋಚಕ ಅನುಭವ.

ಅನುಪಮಾ ಅವರ ಜೊತೆಯಲ್ಲಿ ಮಾತನಾಡಿದಾಗೆಲ್ಲ ಮನುಷ್ಯನ ನಂಬಿಕೆಗಳು-ಸಮಾಜ, ವೈಯಕ್ತಿಕ ಆಚರಣೆಗಳ ಹಂತದಲ್ಲಿ ಚರ್ಚೆ ಬಹುವಾಗಿ ಸಾಗಿದ್ದಿದೆ. ಈ ಚರ್ಚೆಯಲ್ಲಿ ನಮ್ಮೆದುರು ಹಲವು ಬಾರಿ ಪ್ರಶ್ನೆಯಾಗೇ ಉಳಿದದ್ದು ಸಾಮಾಜಿಕ ಮೌಲ್ಯವೆಂದು ನಾವು ಒಪ್ಪಿಕೊಂಡವು ಅಂತರಂಗದಲ್ಲಿ ಒಲ್ಲೆನೆಂದು ದೂಡಲ್ಪಡುತ್ತಿರುವುದೇಕೆ ಎಂಬುದು.

ನಂಬಿಕೆಗಳು ಸಮಾಜದ ಹಿತಕ್ಕೆ ಸರಿಯೆನಿಸಿದಾಗ ಮಾತ್ರ ಸಾಮಾಜಿಕ ಮೌಲ್ಯ ಎಂದುಕೊಳ್ಳುತ್ತೇವೆ. ಅದೂ ಒಂದು ಭಯದ ನೆಲೆಯಲ್ಲಿ ಮಾತ್ರ ವ್ಯಕ್ತಿ ಅದಕ್ಕೆ ಬದ್ಧನಾಗುತ್ತಾನೆ. ವ್ಯಕ್ತಿಯಿಂದ ವ್ಯಕ್ತಿಗೆ ಅಭಿಪ್ರಾಯಗಳು ಬೇರೆಯಾಗೇ ಇರುತ್ತವೆ. ಇವಕ್ಕೆ ಕಾರಣ ಕೂಡಾ ವೈಯಕ್ತಿಕ ಸಮಸ್ಯೆಗಳೇ ಆಗಿರುತ್ತದೆ. ಆದರೆ ತಾನು ಬದುಕಬೇಕಾದ ಸಮಾಜದಲ್ಲಿಯ ಮೌಲ್ಯಗಳನ್ನು ಆದರ್ಶವೆಂಬ ಭ್ರಮೆಯಲ್ಲಿ ಒಪ್ಪಿಕೊಳ್ಳುವುದು, (ಅದು ಬಹುತೇಕ ಒಂದು ಭಯದ ನೆರಳಲ್ಲಿ ಬರುವಂಥದು), ಇಂಥಲ್ಲಿ ತನ್ನ ಅನೇಕ ವರ್ತನೆಗಳಿಗೆ ಕಾರಣವನ್ನು ವ್ಯಕ್ತಿಯ ಅಂತರಂಗವೂ ಸಹ ಕೊಡ ಲಾರದು. ಇಂಥ ಸಂದಿಗ್ಧಸಂದರ್ಭದಲ್ಲೇ ಸಾಮಾಜಿಕ ಸಂಹಿತೆಗಳಿಗೆ, ಧರ್ಮಗ್ರಂಥಗಳಿಗೆ ಶರಣಾಗುವ, ಬಹುಪಾಲು 'ಪರ'ದ ಮಾತಾಡುವ ವ್ಯಕ್ತಿಗಳನ್ನು ಕಾಣುತ್ತೇವೆ. ಈ ಎಲ್ಲಾ ಆರೋಪ ಹೆಣ್ಣಿಗೇ ಅನ್ವಯ ಎಂದಲ್ಲ. ಒಂದೇ ಬಗೆಯ ಆಲೋಚನೆ, ಸ್ವಭಾವ ಇರುವ ಎಲ್ಲ ಹೆಣ್ಣು-ಗಂಡುಗಳೂ ಇದಕ್ಕೆ ಹೊರತಲ್ಲ. ಇವುಗಳ ಮಧ್ಯೆಯೂ ವ್ಯಕ್ತಿಗೆ ತನ್ನದೇ ಆದ ವೈಯಕ್ತಿಕ ಮೌಲ್ಯಗಳು ಇದ್ದೇ ಇರುತ್ತವೆ. ಅವು ಎಷ್ಟು ಸಂಭಾವ್ಯ, ಅಲ್ಲಿಯ ಪ್ರಾಮಾಣಿಕತೆಯ ಶೋಧನೆ ಮತ್ತು ಇಂಥ ವ್ಯಕ್ತಿ ಸಮಾಜಗಳ ಮೌಲ್ಯಗಳ ಸಂಘರ್ಷ ಯಾವುದು ಎಂಬುದನ್ನು ಅವನ್ನು ಮುಖಾ-ಮುಖಿಯಾಗಿಸಿ ಅನಂತರ ತಳೆಯುವ ನಿಲುವು ಮುಖ್ಯ. ಈ ದಿಕ್ಕಿನಲ್ಲಿ ಹರಿಯುವ ಚಿಂತನೆ, ಸೃಜನ ಶೀಲ ಮನಸ್ಸು, ತನ್ನ ಸಮಾಜದ ಪರಿಮಿತಿಗಳ ಒಳಗೇ ಕೆಲಸ ಮಾಡುತ್ತ ಜೀವನ ರಹಸ್ಯವನ್ನು ತಿಳಿಯುವ-ಅದಕ್ಕೆ ಬರವಣಿಗೆಯಲ್ಲಿ ಅರ್ಥ ಕೊಡುವ ಹಂಬಲದಿಂದಲೇ ಶ್ರಮಿಸುತ್ತಿರುತ್ತದೆ. ಈ ಎಲ್ಲಾ ತುಡಿತಗಳ ಹಿನ್ನೆಲೆಯಲ್ಲೇ ತನ್ನದೇ ಆದ ರೀತಿ ಯಲ್ಲಿ ಇದಕ್ಕಾಗಿಯೇ ದುಡಿಯುವ ಕ್ರಿಯಾಶೀಲ ಮನಸ್ಸು ಅನುಪಮಾ ಅವರ ಬರವಣಿಗೆಯಲ್ಲಿ ಇಣುಕಿವೆ. ಈ ಎಲ್ಲಾ ಚರ್ಚಿತ ಅಂಶಗಳು ಅವರ ಬರಹದಲ್ಲಿ ಧ್ವನಿಪೂರ್ಣವಾಗಿ ಸಂಚಯಗೊಂಡಿವೆಯೇ ಎಂದು ಬೀಜಗಣಿತ ಬಳಸಿ ಸಮೀಕರಿಸ ಬೇಕಿಲ್ಲ. ಹಾಗೆ ಯೋಚಿಸುವ ಮನಸ್ಸು ಒಮ್ಮೆಲೇ ಎಲ್ಲಿಂದಲೂ ಆಮದಾದ ಭಾಷೆ, ತಂತ್ರ, ಚಿಂತನೆಯನ್ನು ಯಥಾವತ್ ಇಳಿಸದೇ ಅನುಭವದ್ರವ್ಯವನ್ನೇ ಬಂಡವಾಳ ಮಾಡಿ ಕೊಂಡು ಹೇಳಹೊರಡುವ ಕ್ರಿಯೆಯ ಬೆಳವಣಿಗೆಯೇ ವಿಶೇಷ.

ಸಾಹಿತ್ಯ ಕೃತಿಯೊಂದರ ಪಾತ್ರಗಳು ಸಾಹಿತಿಯ ಅಭಿಪ್ರಾಯ ಮಂಡಿಸುವ ವೇದಿಕೆಯಾಗಬಾರದೆಂಬ ಔಚಿತ್ಯಪ್ರಜ್ಞೆ ಇದ್ದಾಗಲೇ ಹೇಳುವ ಅವಸರಕ್ಕಿಂತ ತನ್ನ ಕೃತಿ ಒಂದು 'ಕಲೆ'ಯಾಗಿ ಎಷ್ಟು ಸಾಧಿಸಬಲ್ಲದು ಎಂಬುದರತ್ತ ಎಚ್ಚರವಾಗಿರುವುದು ಮತ್ತು ವಸ್ತುವಿಗೆ ಬೇಕಾದ ರೂಪವನ್ನು ನಿರ್ಧರಿಸಲು ಹೆಣಗುವುದನ್ನು ಸಹಜವಾಗೇ ಆಕೆಯಲ್ಲಿ ಕಾಣುತ್ತೇವೆ. ಹೀಗಾದಾಗಲೇ ಮತ್ತೆ ಮತ್ತೆ ಹೊಸ ಹೊಸ ಆಲೋಚನೆ ಗಳನ್ನು ಧ್ವನಿಪೂರ್ಣವಾಗಿಸಲು ಪ್ರಯತ್ನಿಸುತ್ತ ಪುನಃ ನಿರ್ಮಾಣವಾದ ಉದಾಹರಣೆ ಗಳೂ ಇವೆ ('ನೂಲುನೆಯ್ದ ಚಿತ್ರ'ದಿಂದ 'ಎಳೆ'ಗೆ).

ಜೀವನ ದೃಷ್ಟಿ ಹಾಗೂ ಅಭಿವ್ಯಕ್ತಿ ಮಾರ್ಗಗಳು ಪರಸ್ಪರ ಅವಲಂಬಿತ ವಾಗಿರುತ್ತವೆ. ಹೀಗೆ ಹುಟ್ಟಿಕೊಂಡ ಸೂಕ್ಷ್ಮಗಳನ್ನು ಸಂಕೀರ್ಣತೆಯನ್ನು ಒಳಗೊಂಡು ವಿಕಸನಗೊಳ್ಳುವ ರೀತಿ ಈ ಎರಡೂ ಕೃತಿಗಳ ಪರಿಶೀಲನೆಯಿಂದ ವ್ಯಕ್ತವಾಗುತ್ತದೆ. ಬರವಣಿಗೆ ಹಾದು ಬಂದ ದಾರಿ, ಬದಲಾದ ಪರಿಸರ, ಪ್ರಾಯಶಃ ಆಲೋಚನೆಯ ವಿಧಾನದಲ್ಲೂ ಆದ ಮಾರ್ಪಾಟು ಜೀವನ ದೃಷ್ಟಿಗೆ ಹೊಸ ತಿರುವನ್ನೇ ಈ ವೈಚಿತ್ರ್ಯ ವನ್ನು ತಂದು ಕೊಟ್ಟಿದೆ. ಆದರೆ ಈ ಅಭಿವ್ಯಕ್ತಿಗಾಗಿ ಸಾಹಿತ್ಯ ಮಾರ್ಗ ಥಟ್ಟನೆ ಬೇರೆ ಆಗಲಿಲ್ಲ. ಅಥವಾ ಆಯಾ ಸಂದರ್ಭದ ಸಾಹಿತ್ಯಕ ಘಟ್ಟ ಚಳುವಳಿಗಳಲ್ಲಿ ಢಾಳಾಗಿ ತನ್ನನ್ನು ಒಡ್ಡಿಕೊಂಡು ಅಂತೇ ಆಗಿಬಿಡಲಿಲ್ಲ. ಅದರದೇ ದಾರಿ ನೇರ, ಸರಳ, ಸ್ಪಷ್ಟ-ಆರೋಪಿತ ತಂತ್ರಗಳನ್ನು ಉಪಯೋಗಿಸದೆ ಆಲೆಯಾದ ಪ್ರತಿಮೆಗಳ ಬಳಕೆ 'ಧ್ವನಿ'ಯ ಅನುರಣನ ಇಲ್ಲದೆಯೂ ಒಂದು ಸಾಹಿತ್ಯ ತನ್ನದೇ ಆದ ರೀತಿಯಲ್ಲಿ ಜೀವನದ ಅರ್ಥ, ತತ್ವಗಳನ್ನು, ತುಡಿತಗಳನ್ನು ಹೇಳುತ್ತದೆ. ಅಮೂರ್ತ ಸಂವೇದನೆಗಳಿಗೆ ರೂಪ ಕೊಡುವ, ಅನುಭವಗಳನ್ನು ಸ್ಪಷ್ಟಮಾಡುವ ಪ್ರವೃತ್ತಿಯನ್ನು ತೋರಿಸುತ್ತದೆ. ಇಲ್ಲಿ ಹೊಸ ಸಮಾಜಕ್ಕೆ ತನ್ನೊಳಗಿನ ವಿಚಾರಗಳನ್ನು ಒಡ್ಡುತ್ತ ಬದಲಾವಣೆಯ ರೀತಿ ಯಲ್ಲಿ ವಿಸ್ಮಯದಿಂದಲೇ ಜರೆಯುವ ಮತ್ತು ಯಥಾಸ್ಥಿತಿ ವಾದಗಳ ಬಗ್ಗೆ ಮುಜುಗರ ಪಡುವ ಮನಸ್ಸನ್ನು ಗುರುತಿಸುತ್ತೇವೆ.

ಗಂಡು-ಹೆಣ್ಣು ಎರಡೂ ಬೇರೆ ಬೇರೆ ರೂಪಗಳು. ಬುದ್ಧಿಯಲ್ಲಿ ಅವು ಬೇರೆ ಯಲ್ಲ. ಅದು ಒಂದು 'ಘನ'ದ ಎರಡು ಬೇರೆ-ಬೇರೆ ಸ್ವಭಾವಗಳ ಮೊತ್ತ ಮಾತ್ರ ಎಂದು ವೈದ್ಯೆಯಾಗಿ, ಚಿಂತಕಳಾಗಿ ನಂಬುವ ಆಕೆಯ ಅಂತಃಕರಣ ಇಲ್ಲಿ ವಿನಾಕಾರಣ ಮೂಡಿ ಬರುವ ಅಸಮತೆಯನ್ನು ಪ್ರತಿಭಟಿಸಲು ಬಯಸುತ್ತದೆ. ಆಕ್ರೋಶವಲ್ಲ, ಉದ್ವೇಗವಲ್ಲ, ಅದೊಂದು ಅರ್ಥ ಮಾಡಿಕೊಳ್ಳಬಲ್ಲ-ಆಲೋಚಿಸಬಲ್ಲ ಯಾವ ಮನಸ್ಸೂ ಒಪ್ಪುವ ಹಾಗೆ ನಡೆದು ಹೋಗುವ ಕ್ರಿಯೆ. ಆತ್ಮಾಭಿಮಾನಕ್ಕೆ ಇಲ್ಲಿ ಮೊದಲ ಮಣೆ.

ಖನನ, ಉತ್ಖನನಗಳ ಮೂಲಕ ಮನಸ್ಸನ್ನು ತೋಡುತ್ತಾ ಅಡಗಿ-ಅಣಗಿ ಹೋದ ವಿಚಾರಗಳನ್ನು ಒಂದೆಡೆ ಅಗೆದು ಮೇಲೆತ್ತಿದರೆ, 'ವಸ್ತು'ವನ್ನು 'ವಾಸ್ತು'ವಿನ ಮೂಲಕ ನಿರೂಪಿಸುತ್ತ ಕಟ್ಟುವ ಕೆಲಸವೂ ಮತ್ತೊಂದೆಡೆ ನಡೆದಿರುತ್ತದೆ. ಕಥೆ ಹೇಳು ತ್ತಲೇ ತಮ್ಮ ತಾತ್ವಿಕ ನಿಲುವು ಪರಿಭಾವನೆಗಳನ್ನು ಉದ್ದೀಪಿಸುವ ಪ್ರವೃತ್ತಿ, ಮಾನ ವೀಯ ಜೀವನ ಮೌಲ್ಯಗಳನ್ನು ನೀಡುವ ಪ್ರಯತ್ನವಾಗುತ್ತದೆ.

ಒಂದು ರೋಗ ಪೀಡಿತ ಸಮಾಜ, ಅದು ಹುಟ್ಟು ಹಾಕಿರುವ ಸಮಸ್ಯೆಗಳು ಇವುಗಳ ಮೂಲವನ್ನು ಪತ್ತೆ ಹಚ್ಚುವ ಕೆಲಸ - ಸಾಧ್ಯವಾದ ಮಟ್ಟಿಗೆ ತನಗೆ ಒಪ್ಪೆನಿಸಿದಂತೆ ಪರಿಹಾರವನ್ನು ಸೂಚಿಸಿ ಬಿಡುವುದೂ ಉಂಟು. ಆದರೆ ಇಲ್ಲೆಲ್ಲೂ

ಆವೇಶವಿಲ್ಲ-ಆರ್ಭಟವಿಲ್ಲ-ಕೋಪದ ಸೋಂಕಿಲ್ಲ, ಒಟ್ಟಾರೆ ಸ್ಥಿತಿಯನ್ನೇ ನಿಯಂತ್ರಿಸಬಲ್ಲ 'ಕರುಣೆ' ಇದೆ. ಅದರ ಸ್ವರೂಪ, ವ್ಯಾಪ್ತಿ ಬಹು ದೊಡ್ಡದು. ಅದೊಂದು ಸುಲಭ ಸಾಧ್ಯವಲ್ಲದ ರಸಗ್ರಾಹಿ ದೃಷ್ಟಿ, ಸಹೃದಯತೆಯಿಂದ ಬರುವಂಥದ್ದು - ಭವಭೂತಿ, ಗಾಲ್ಸ್‌ವರ್ದಿಯಂಥ ಮಹನೀಯರೂ ಈ ಕರುಣೆಯಸ್ವರೂಪ ಕುರಿತು ಮಾತಾಡುತ್ತಾರೆ. ಅಂಥ ಮಹತ್ತಾದ ಕರುಣೆಯನ್ನು ಆರೋಪಿಸಿಕೊಂಡದ್ದಲ್ಲ. ಒಳಗೇ ಉದ್ದೀಪ್ತವಾದದ್ದು. ತನ್ನ ವೃತ್ತಿ ಪರಿಸರ-ತನ್ನ ಬದುಕಿನ ಅನೇಕ ಘಟ್ಟಗಳಲ್ಲಿ ಸಾಗಿ ಬಂದಾಗಿನ ಮನದ ಮಥನದಿಂದ ಸಂಗ್ರಹಿತವಾದದ್ದು. ಅದು 'ಮಾಧವಿ'ಯಾಗಿರಲಿ, 'ಘೋಷ'ವಾಗಿರಲಿ ಇವತ್ತಿನ ಮಾರುಕಟ್ಟೆಗೆ, ಪೇಟೆಯ ಧಾರಣೆಗೆ ಸಿದ್ಧವಾಗುವುದಿದ್ದರೆ ಆ ಆಕೃತಿಯೇ ಮತ್ತೊಂದು ಬಗೆಯ ಕೆತ್ತನೆಯಾಗುತ್ತಿತ್ತು. ಆದರೆ ಅನುಭವಗಳು ಪ್ರಜ್ಞೆಯಾಗಿ ತಮ್ಮಲ್ಲಿನ ಸಮಾಜ, ಸಂಸ್ಕೃತಿಗಳ ಒಪ್ಪನ್ನು ಒಳಗೊಂಡು ಆಕೃತಿಯಾಗುತ್ತಿರುವ ಇಲ್ಲಿ ವ್ಯಕ್ತಿಯ ಸಮಸ್ಯೆ ಸಮೂಹದ ನಿರ್ಣಯಗಳಿಂದ ದೂರವಾಗುತ್ತಿದೆ, ಎಂದೋ ಸಮೂಹ ಸೇರಿ ಅಂದುಕೊಂಡಿದ್ದು ಇಂದಿಗೂ ಸಲ್ಲದು. ಬದಲಾವಣೆಗೆ ದಾರಿ ಮಾಡಿಕೊಡಬೇಕು ಎಂಬ ಮಾತು ತುಂಬ ಸೂಕ್ಷ್ಮವಾಗಿ ನವುರಾಗಿ ಬರುತ್ತದೆ. ಇಂಥ ನವಿರು ಒಪ್ಪಿತವಾಗುವ ಮಾತಿಗೆ ಪ್ರೇರಕ ಶಕ್ತಿ ಪ್ರೀತಿ. ಬದುಕಿನಲ್ಲಿ, ವ್ಯಕ್ತಿಯಲ್ಲಿ, ಸ್ನೇಹದಲ್ಲಿ, ತಿಳಿಯಾಗಿ ಎಳೆಯಾಗಿ ಹರಿದು ಬರುವ ಪ್ರೀತಿ, ಆ ಪ್ರೀತಿಯ ಹಿಂದಿರುವ ಅಂತಃಸ್ಸತ್ವವೇ, 'ಕರುಣೆ' ಶಬ್ದಕ್ಕೆ ಅತೀತವಾದ ಒಂದು ಭಾವವಾಗಿ,ಅದು ಎಲ್ಲ ಮಿತಿಯಾಚೆಗೆ ಒಂದು ಸಮಗ್ರ ಜೀವನದ ಸುಖದ ನಿರೀಕ್ಷೆಯಲ್ಲಿ ಹುಟ್ಟುವ ಸಾಹಿತ್ಯವಾಗಿರುತ್ತದೆ.

ನೆಹರೂಯುಗದ ಕೈಗಾರಿಕೀಕರಣದ ಮಹತ್ವಾಕಾಂಕ್ಷೆ ಹೇಗೆ ಗಾಂಧೀಜಿಯವರ ಗ್ರಾಮೋದ್ಧಾರದ ಕಲ್ಪನೆಯನ್ನು ಕುಗ್ಗಿಸಿತು ಎಂಬ ಮಹತ್ವದ ಮಾತನ್ನೂ ಸರಳವಾಗಿ ಒಂದು ಕುಟುಂಬದ ಸಮಸ್ಯೆಯನ್ನು ಬಿಡಿಸುತ್ತಲೇ ಹೇಳುವ ಮನಸ್ಸು ರಾಜಕಾರಣದ ಗೊಂದಲ, ಪೂರ್ವಾಗ್ರಹಗಳಿಂದ ಹೊರತಾಗಿ ಸಮಸ್ಯೆಯನ್ನು ಹೇಗೆ ಬಿಡಿಸಹೊರಡುತ್ತದೆಯೋ ಹಾಗೆ, ಜಾತಿ, ಧರ್ಮಗಳು ವ್ಯಕ್ತಿಯ ಸುಖವನ್ನು ಕಿತ್ತುಕೊಳ್ಳುತ್ತವೆ. ಹೊಸತು- ಹಳತಿನ ಸಂಘರ್ಷದಲ್ಲಿ ಎಷ್ಟು ಜೀವಗಳ ಸುಖದ ತ್ಯಾಗವೋ ಆಗಬೇಕಿದೆ ಎಂಬುದನ್ನು ಗುರುತಿಸುತ್ತಲೇ ನಮ್ಮ ಪರಂಪರಾಗತ ಮೌಲ್ಯಗಳನ್ನು ಅವು ಇರುವ ಚಲನಹೀನ ಸ್ಥಿತಿಯಲ್ಲೇ ವಿಚಿತ್ರ ನಂಬಿಕೆಯ ಆಧಾರದ ಮೇಲೆ ಘೋಷಿಸಲ್ಪಡುತ್ತಿರುತ್ತವೆ. ನಮಗೆ ಬಳಕೆಗೆ ಒಲ್ಲದ, ಬಾರದ ಅನೇಕ ಅಂಶಗಳು ಮೌಲ್ಯಗಳಾಗಿ, ನಂಬಿಕೆಗಳಾಗಿ ಘೋಷಿಸಲ್ಪಡುತ್ತವೆ; ಹೇರಲ್ಪಡುತ್ತವೆ. ಅವು ಇದ್ದಲ್ಲೇ ಎಲ್ಲರ ಮನಸ್ಸು-ಬದುಕನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ ಎಂಬುದನ್ನು ಅನುಪಮಾ ತಮ್ಮದೇ ಆದ ರೀತಿಯಲ್ಲಿ ಚಿತ್ರಿಸುತ್ತಾರೆ (ನೂಲು ನೆಯ್ದ ಚಿತ್ರ-ಎಳೆ ಹೋಲಿಸಿ ನೋಡಿ).

ವ್ಯಕ್ತಿ ಕೇಂದ್ರಿತ ಸಾಹಿತ್ಯವಾಗಿ ಕಂಡಾಗಲೂ ಅದರ ಹಿಂದೆ ಕಾರ್ಯ-ಕಾರಣ ಸಂಬಂಧಗಳನ್ನು ಹುಡುಕುವ, ಸರಿಪಡಿಸುವ ಮನಸ್ಸು ಇರುತ್ತದೆ. ಆ ಮನಸ್ಸು ಕಾಣ ಬಯಸುವುದು ಈ ವ್ಯಕ್ತಿ-ಕ್ರಿಯೆಗಳನ್ನು ನಿಯಂತ್ರಿಸುತ್ತಿರುವ ಮತ್ತಾವುದೇ ಪ್ರಬಲ ಚಾಲಕಶಕ್ತಿಯನ್ನು. ನಮ್ಮ ವಿಮರ್ಶೆಯ ನೆಲೆಯಲ್ಲಿ ಕೃತಿಗಳ ನಿಷ್ಪಾಕ್ಷಿಕ ತೌಲನ ನಡೆಸುವುದು ಅಪರೂಪ. ಪೂರ್ವನಿಶ್ಚಿತ ಸಿದ್ಧಾಂತದ ಬರವಣಿಗೆ ಎಂಬ ನೆಪದಲ್ಲಿ ಅನುಪಮಾ ಅವರ ಅನೇಕ ಬರಹಗಳಿಗೆ ವಿಮರ್ಶಕರ ಸಹಾನುಭೂತಿ ಸಿಕ್ಕಿಲ್ಲ. ಆಳವಾದ ಅಭ್ಯಾಸಕ್ಕೇ ಅವು ಯೋಗ್ಯ ಎಂದು ಭಾವಿಸಲ್ಪಡಲಿಲ್ಲ. ವಿಮರ್ಶಕರ ಮೇಜರ್, ಮೈನರ್ ಲೇಬಲ್‌ಗಳ ಮಧ್ಯೆ ಯಾವ ಸಾಲಿಗೂ ಸೇರಿಸಲಾಗದ ಕೆಲವು ಲೇಖಕರೂ ಇದ್ದಾರಷ್ಟೇ. ಹಾಗೆ ಅನುಪಮಾ ಅಂಥವರ ಬರಹ-ಚಿಂತನೆಗಳು ಒಂದು ರೀತಿಯ ಒತ್ತಾಯದಿಂದ ಪರಿಗಣನೆಗೆ ತೆಗೆದುಕೊಳ್ಳಬೇಕಾದ ಸ್ಥಿತಿ ಏರ್ಪಟ್ಟಿದ್ದರೆ ಅಚ್ಚರಿಯಿಲ್ಲ. ಅಂಥ ಒತ್ತಾಯದ ಮುಜುಗರದಿಂದಾಗಿ ಹಟವಾಗಿ ತಪ್ಪು ಹೆಕ್ಕಿ 'ಒಪ್ಪಲಾರೆ'ನೆಂದ ವಿಮರ್ಶಕರೂ ಉಂಟು. ಇವೆಲ್ಲದರ ಆಚೆಗೆ ನೈಜ ಕಾಳಜಿ ಇರುವ ಬದಲಾವಣೆಯ ಆಂತರಿಕ ಹೋರಾಟದ ಜೊತೆಗೇ ಬೆಳೆಯುತ್ತಾ ಹೋಗುವ ಇವರ ಸಾಹಿತ್ಯ ತನ್ನ ಕಾಲದ ಸಂಸ್ಕೃತಿ, ಆಚರಣೆ, ಜನಜೀವನ, ಭಯ, ನಂಬಿಕೆ, ದಮನಕಾರೀ ಶಕ್ತಿಗಳನ್ನೂ ಗಮನದಲ್ಲಿ ಇಟ್ಟುಕೊಂಡು, ತನ್ನ ಭೂತಕಾಲದ ಅನೇಕ ಬಿಟ್ಟುಕೊಡಲಾಗದ ನಂಬಿಕೆಗಳು, ಹಾಗೂ ವರ್ತಮಾನಕ್ಕೆ ಹೊಂದಿಕೊಳ್ಳಲಾಗದ ತೊಡಕುಗಳನ್ನೂ ಪರಿಹರಿಸಿಕೊಳ್ಳುತ್ತ ಜೀವ ತಳೆಯುತ್ತದೆ.

ಈ ಕಾರಣಕ್ಕಾಗೇ ನಮಗೆ ಅನುಪಮಾ ಅವರ ಸಾಹಿತ್ಯ-ಚಿಂತನೆಗಳು ಮುಖ್ಯವಾಗುತ್ತವೆ, ಮತ್ತು ಚಿಂತನಶೀಲ, ಸೃಜನಶೀಲ ಕುಟುಂಬದ ಪರಿಸರದಲ್ಲಿ ಯಾವ ಆರೋಪಿತ ಪ್ರಭಾವಕ್ಕೂ ಒಳಗಾಗದೆ ಅನುಭವಕ್ಕೆ ವಿವೇಚನೆಯ ಮೂಲಕ ಅರ್ಥ ಕೊಡುವ ಪ್ರಾಮಾಣಿಕತೆಗಾಗಿಯೇ ಇವರು ವಿಶಿಷ್ಟರೂ ಆಗುತ್ತಾರೆ.

- ವ್ಯಾಸರಾಯ ಬಲ್ಲಾಳ

ಸೋದರಿ ಡಾ। ಅನುಪಮಾ ಅವರ ಮೊದಲ ಕಥಾ ಸಂಗ್ರಹದ ಹೆಸರು 'ಕಣ್ಮಣಿ.' ಇಂದು ಕನ್ನಡ ಲೇಖಕಿಯರ ಕಣ್ಮಣಿಯಂತೆ ಮೆರೆಯುತ್ತಿರುವ ಅನುಪಮಾ ಅವರು ತಮ್ಮ ವೈಯಕ್ತಿಕ ಹಾಗೂ ಸಾಹಿತ್ಯಕ ಬದುಕಿನಲ್ಲಿ ತೋರಿಸಿರುವ ಧೈರ್ಯ, ಸಾಹಸ, ಸಾಧಿಸಿರುವ ಘನತೆ, ಗೌರವಗಳನ್ನು ನೆನೆಸಿಕೊಳ್ಳುವಾಗ ಅವರ ಮೊದಲ ಕೃತಿಯ ಹೆಸರೇ ಅವರ ಜೀವನದ ದಿಕ್ಸೂಚಿಯಾಗಿತ್ತಲ್ಲವೇ ಎಂದು ಹೇಳುವ ಮನಸ್ಸಾಗುತ್ತಿದೆ. ಕನ್ನಡ ಸಾಹಿತ್ಯ ಲೋಕದಲ್ಲಿ ಆದರ, ಗೌರವಗಳೆರಡಕ್ಕೂ ಪಾತ್ರವಾಗುವಂತಹ ಹೆಸರುಗಳನ್ನು ನೆನೆಸಿಕೊಳ್ಳುವಾಗ ನನಗೆ ತಕ್ಷಣ ನೆನಪಾಗುವುದು ಸೋದರಿ ಅನುಪಮಾ ಅವರು.

ನಿರಂಜನ ದಂಪತಿಗಳ ಆತ್ಮೀಯತೆಯ ಸವಿಯನ್ನು ಹೆಚ್ಚು ಕಡಿಮೆ ನಾಲ್ಕು ದಶಕಗಳ ಕಾಲ ಉಂಡಿರುವ ನಾನು ಅವರ ಸಾಹಿತ್ಯಕ ಸಾಧನೆಯ ಹಿಂದಿರುವ ಜೀವನ ನಿಷ್ಠೆಯನ್ನು ದೀರ್ಘಕಾಲದಿಂದ ಗಮನಿಸಿ ಗೌರವಿಸುತ್ತಲೇ ಬಂದವನು. ಎಲ್ಲ ರೀತಿಯ ಜೀವನ ಪ್ರೀತಿಯನ್ನು ಕಮರಿಸಬಹುದಾದಂತಹ ಸನ್ನಿವೇಶಗಳನ್ನು ಬದುಕಿನಲ್ಲಿ ಇದಿರಿಸಬೇಕಾಗಿ ಬಂದಾಗ ಅವರು ತೋರಿದ ಧೈರ್ಯ, "ಯಾವ ಆತಂಕವನ್ನೂ ಗೆದ್ದು ಬರುವ ಛಲ ನನ್ನಲ್ಲಿದೆ" ಎಂದು ಪ್ರಕಟಿಸಿದ ಆತ್ಮವಿಶ್ವಾಸ, ಜೀವನೋಲ್ಲಾಸಗಳನ್ನು ನಾವು ಸಾಮಾನ್ಯರಲ್ಲಿ ಕಾಣುವುದಿಲ್ಲ. ಅನುಪಮಾ ಅವರು ತಮ್ಮ ಬದುಕಿನ ಹೋರಾಟದ ಕತೆಯನ್ನು, ಅದರಲ್ಲಿ ಕಂಡ ನಗುವನ್ನು, ಉಂಡ ವ್ಯಥೆಯನ್ನು ತುಂಬ ಆತ್ಮೀಯವಾಗಿ ತಮ್ಮ 'ನೆನಪು ಸಿಹಿ-ಕಹಿ' ಗ್ರಂಥದಲ್ಲಿ ತೋಡಿಕೊಂಡಿದ್ದಾರೆ. ಈ ಪ್ರಾಮಾಣಿಕ ಆತ್ಮಕಥನ ದೊರಕಿಸಿಕೊಂಡ ಅಪಾರ ಜನಪ್ರಿಯತೆಗೆ ಮುಖ್ಯ ಕಾರಣ, ಅದರಲ್ಲಿ ಮೂಡಿ ಬಂದ, ಎಲ್ಲರ ಗೌರವಾದರಗಳಿಗೆ ಪಾತ್ರವಾದ ಅನುಪಮಾ ಅವರ ಸೌಮ್ಯ ಆದರೂ ದಿಟ್ಟ ವ್ಯಕ್ತಿತ್ವ.

ನಿರಂಜನರ ಮೂಲಕ ಅನುಪಮಾ ಅವರ ಪರಿಚಯ ಅವರು ದಂಪತಿಗಳಾಗುವುದಕ್ಕಿಂತಲೂ ಮೊದಲೇ ನನಗೆ ಇದ್ದಿತ್ತಾದರೂ, ಅವರನ್ನು ಮೊದಲ ಬಾರಿ ನಾನು ಕಂಡದ್ದು ಮುಂಬಯಿಯ ನನ್ನ ಮನೆಯಲ್ಲಿ - ಅವರು ಆಗಷ್ಟೆ ಮದುವೆಯಾಗಿ ಒಂದು ಸಾಹಿತ್ಯಕ ಸಮಾರಂಭದಲ್ಲಿ ಭಾಗವಹಿಸಲು ಮುಂಬಯಿಗೆ ಬಂದಾಗ. ಆ ಸಾಹಿತ್ಯಕ ಸಮಾರಂಭಕ್ಕೆಂದು ನಾವೆಲ್ಲ ಟ್ಯಾಕ್ಸಿಯಲ್ಲಿ ಹೋಗುತ್ತಿದ್ದಾಗ ಮುಂಬಯಿಯ ಕುರ್ಲಾ-ಬಾಂದ್ರಾ ಪರಿಸರದಲ್ಲಿ ಕಾಣುತ್ತಿದ್ದ ಸಮುದ್ರದ ಹಿನ್ನೀರನ್ನು ಕಂಡು 'ಇದೇ ಸಮುದ್ರವೇ' ಎಂದು ಅನುಪಮಾ ಅವರು ಕೇಳಿದ್ದ ಒಂದು ಮುಗ್ಧ ಪ್ರಶ್ನೆ ನೆನಪಾಗುತ್ತಿದೆ.

ಮೈಸೂರಿನ ಒಳನಾಡಿನ ಪರಿಸರದಲ್ಲಿ ಬೆಳೆದ ಅವರು ಪ್ರಾಯಶಃ ಆ ತನಕ ಭೋರ್ಗರೆಯುವ ಕಡಲನ್ನು ಕಂಡಿರಲಿಲ್ಲ. ಕಡಲನ್ನು ಕಾಣುವ ಆಸೆಯಲ್ಲಿ ಅವರ ನಿಸರ್ಗ ಪ್ರೀತಿಯನ್ನು ಅಂದು ನಾನು ಗುರುತಿಸಿದ್ದೆ. ಈ ಮಾತನ್ನು ನಾನು ಇತ್ತೀಚೆಗೆ ಮತ್ತೆ ನೆನಸಿಕೊಳ್ಳಲು ಕಾರಣ, ಕ್ಯಾನ್ಸರಿಗೆ ಸಂಬಂಧಿಸಿದ ನಾಲ್ಕನೆಯ ಶಸ್ತ್ರಕ್ರಿಯೆ ಮಾಡಿಸಿಕೊಂಡು ಚೇತರಿಸಿಕೊಳ್ಳುತ್ತಿದ್ದ ಅನುಪಮಾ ಅವರನ್ನು ಅವರ ಮನೆಯಲ್ಲಿ ಕಂಡಾಗ ಅವರು ಆಡಿದ ಒಂದು ಮಾತು. 'ಒಂದು ತಿಂಗಳ ಅನಾರೋಗ್ಯದ ಬಳಲಿಕೆಯ ಕಾಲದಲ್ಲಿ ಹೊರಗಿನ ಹಸಿರನ್ನು ಕಾಣುವ ಉತ್ಸಾಹವೂ ಇರಲಿಲ್ಲ' ಎಂದಿದ್ದರವರು. ಅವರನ್ನು ಮೊದಲು ಕಂಡಂದಿನಿಂದ ಯಾವಾಗಲೂ ಜೀವನೋತ್ಸಾಹದ ಚಿಲುಮೆಯಂತಿದ್ದ ಅವರ ನಿಸರ್ಗ ಪ್ರೀತಿಯನ್ನು ಮರೆಸುವಂತಹ ದೈಹಿಕ ಆಲಸ್ಯ ಅವರಿಗೆ ಬರುವಂತಾಯಿತಲ್ಲಾ ಎಂದು ಆಗ ನನಗೆ ಬೇಸರವಾಗಿತ್ತು. ಆದರೆ ತನ್ನ ನೋವಿನ ದೇಹಾಲಸ್ಯದ ಕಾಲದಲ್ಲಿ ಮಾತ್ರ ಹಾಗೆ ಎನ್ನುವಂತೆ, ಚೇತರಿಸಿಕೊಳ್ಳುತ್ತಿದ್ದ ಅನುಪಮಾ ಅವರು, ತನ್ನ ಮೊದಲಿನ ಮಾತನ್ನು ಮರೆತು ಬೇರೆಲ್ಲ ವಿಚಾರ ಮಾತು ಬೆಳೆಸಿದ್ದರು.

ನಿಸರ್ಗದ ಹಸಿರನ್ನು ಸದಾ ಕಾಣುತ್ತಲೇ ಇರಬೇಕು ಎನ್ನುವ ಅನುಪಮಾ ಅವರ ಮನೋಧರ್ಮ ಅವರ ಜೀವನ ದೃಷ್ಟಿಯನ್ನೇ ಕನ್ನಡಿಸುತ್ತಿದೆ. ಅವರು ಬಯಸುವುದು ಪ್ರಕೃತಿಯ, ಶೋಷಣೆಗೊಳಗಾಗದ ಸಹಜ, ಸುಂದರ ಸ್ಥಿತಿಯನ್ನು. ಸೃಷ್ಟಿ ಕ್ರಿಯೆಯ ಸಂಕೇತವೆನಿಸುವ ಹಸಿರಿನ ಕುರಿತ ಅವರ ಪ್ರೀತಿ, ಬದುಕಿನ ಕುರಿತ ಅವರ ಆರೋಗ್ಯಕರ ದೃಷ್ಟಿಯ ಪ್ರತೀಕ. ತನ್ನ ವೈದ್ಯಕೀಯ ವೃತ್ತಿಯಲ್ಲಿ, ಸಾಹಿತ್ಯಕ ವ್ಯವಸಾಯದಲ್ಲಿ ಜನಪ್ರಿಯತೆಯನ್ನೂ ಜನಗೌರವವನ್ನೂ ದೊಡ್ಡ ಪ್ರಮಾಣದಲ್ಲಿ ಗಳಿಸುತ್ತಿದ್ದ ಕಾಲದಲ್ಲಿ ಬಂದ ನಿರಂಜನರ ಅಸ್ವಸ್ಥತೆಯೇ ಕಂಗೆಡಿಸುವ ರೀತಿಯದಿದ್ದಾಗ ಮುಂದೆ ಕ್ಯಾನ್ಸರ್ ರೋಗದ ಭೀತಿಯನ್ನೂ ಎದುರಿಸಬೇಕಾಗಿ ಬಂದಾಗ ಅವರು ತೋರಿದ ಧೈರ್ಯ ಯಾವ ರೀತಿಯದೆಂಬುದನ್ನು ಅವರ ಆತ್ಮೀಯರೆಲ್ಲರೂ ಬಲ್ಲರು. ಎರಡು ಸಲ ಈ ಸಂಬಂಧ ಚಿಕಿತ್ಸೆಗೆಂದು ಅವರು ಮುಂಬಯಿಗೆ ಬಂದಿದ್ದಾಗಲೂ ನಾನು ಅವರನ್ನು ಹತ್ತಿರದಲ್ಲಿ ಕಂಡು ಅವರು ಬದುಕಿನ ಸಂಕಟಗಳನ್ನು ಸ್ವೀಕರಿಸುವ ರೀತಿಯನ್ನು ಗಮನಿಸಿ ಅವರ ಬಗೆಗಿನ ಗೌರವವನ್ನು ಹೆಚ್ಚಿಸಿಕೊಂಡವನು. ಕ್ಯಾನ್ಸರ್ ಕುರಿತ ಸಂದೇಹವೇ ಸಾಮಾನ್ಯರ ಜೀವನೋತ್ಸಾಹವನ್ನು ಕುಂದಿಸಲು ಸಾಕಾಗುವಾಗ, ನಾಲ್ಕು ಶಸ್ತ್ರಕ್ರಿಯೆಗಳನ್ನು ಮಾಡಿಸಿಕೊಂಡೂ ಬದುಕಿನ ಕುರಿತ ಪ್ರೀತಿಯನ್ನು ಕಳೆದುಕೊಳ್ಳದ ಅಸಾಮಾನ್ಯ ವ್ಯಕ್ತಿ ಅನುಪಮಾ ಅವರು.

ಅನುಪಮಾ ಅವರು ಆರಿಸಿಕೊಂಡದ್ದು ವೈದ್ಯಕೀಯ ವೃತ್ತಿ. ಆದರೆ ಅವರ ಸೃಜನಶೀಲ ಆಸಕ್ತಿಗಳೆಲ್ಲ ಕೇಂದ್ರೀಕೃತವಾಗಿದ್ದುದು ಸಾಹಿತ್ಯದಲ್ಲಿ. ಇವೆರಡನ್ನು ಅವರು ಹೊಂದಿಸಿಕೊಂಡ ರೀತಿ ಎಲ್ಲರ ವಿಸ್ಮಯ ಆನಂದಗಳಿಗೆ ಕಾರಣವಾಗುವಂತಹುದು. "ವೈದ್ಯಕೀಯ ವೃತ್ತಿಯಲ್ಲಿರುವ ನಮಗೆ 'ಮೆಡಿಕಲ್-

ಸಾಹಿತ್ಯವನ್ನೋದಲು ಸಾಕಷ್ಟು ಬಿಡುವು ಸಿಗುವುದಿಲ್ಲ. ಹೀಗೆ ಸಾಹಿತ್ಯವನ್ನು ಓದುವುದು ಹೇಗೆ ಸಾಧ್ಯ?" ಎಂಬ ಸೊಲ್ಲನ್ನೇ ನಾವು ವೈದ್ಯಕೀಯ ಪರಿಸರದಲ್ಲಿ ಸಾಮಾನ್ಯವಾಗಿ ಕೇಳುತ್ತಿರುವಾಗ, ಅನುಪಮಾ ಅವರು ತನ್ನ ವೃತ್ತಿಯ ಯಶಸ್ಸಿನ ಜತೆಜತೆಗೇ ಇಂದು ಕನ್ನಡದ ಅಗ್ರಗಣ್ಯ ಲೇಖಕಿಯಾಗಿ ಮೆರೆಯುತ್ತಿದ್ದಾರೆ. ಅಷ್ಟೆಯೇ, ತನ್ನ ವೃತ್ತಿ ಜೀವನದ ಅನುಭವದ ಹಿನ್ನೆಲೆಯಲ್ಲಿ ಆರೋಗ್ಯಕರ ಬದುಕಿಗೆ ಸಂಬಂಧಿಸಿದ ಹಲವಾರು ಗ್ರಂಥಗಳನ್ನು ಬರೆದು ಆ ದೆಸೆಯಲ್ಲೂ ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದಾರೆ. ತನ್ನ ಸೃಜನಶೀಲ ಕ್ರಿಯಾಶೀಲತೆಯೆಲ್ಲ ಆರೋಗ್ಯಕರ ಬದುಕಿಗೆ, ಆರೋಗ್ಯವಂತ ಸಮಾಜಕ್ಕೆ ಮೀಸಲು ಎನ್ನುವಂತೆ ಅವರು ಸಾಮಾನ್ಯರ ತಿಳಿವಳಿಕೆಯ ಕ್ಷಿತಿಜವನ್ನು ವಿಸ್ತರಿಸಲೆಂದೆ ಬರೆದ ವೈದ್ಯಕೀಯ ಸಾಹಿತ್ಯದ ಜತೆಗೇ ಮಕ್ಕಳ ಮುಗ್ಧ ಮನಸ್ಸು ಅರಳುವ ರೀತಿಯನ್ನು ಗಮನದಲ್ಲಿರಿಸಿಕೊಂಡೆ ಕಥಾ ಸಾಹಿತ್ಯವನ್ನೂ ರಚಿಸಿದ್ದಾರೆ. ತನ್ನದೇ ಆದ, ವಿಶಿಷ್ಟವೆನಿಸುವ ಶೈಲಿಯನ್ನು ಸಾಧಿಸಿಕೊಂಡ ವಿರಳ ಬರಹಗಾರ್ತಿಯಾಗಿ, ತನ್ನ ಆತ್ಮಕಥನ, ಪ್ರವಾಸ ಕಥನಗಳಿಂದ ಕನ್ನಡ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದಾರೆ. ಆರಂಭದಿಂದಲೆ ಸಾಮಾಜಿಕ ಎಚ್ಚರದಿಂದಲೇ ಕೃತಿ ರಚನೆಗೆ ತೊಡಗಿದ ಅವರು, ನಮ್ಮ ಸಾಮಾಜಿಕ ಅನಿಷ್ಟಗಳಾದ ಅಸಮತೆ, ಶೋಷಣೆ, ಅನ್ಯಾಯಗಳ ಕುರಿತು ತನ್ನ ಕೃತಿಗಳಲ್ಲಿ ತೀವ್ರವಾಗಿ ಸ್ಪಂದಿಸಿದವರು. ಅವರ ಕಾದಂಬರಿಗಳಾದ 'ಘೋಷ' 'ಕೊಳಚೆ ಕೊಂಪೆಯ ದಾನಿಗಳು' ಕೃತಿಗಳನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು.

ಕನ್ನಡ ಸಾಹಿತ್ಯ ಬಳಗದಲ್ಲಿ ಎಲ್ಲರ ಆದರಕ್ಕೆ ಪಾತ್ರರಾಗಿರುವ ಅನುಪಮಾ ಅವರು ಸಾಹಿತ್ಯಿಕ ದಂತಗೋಪುರದಲ್ಲಿ ಕುಳಿತವರಲ್ಲ ಎನ್ನುವುದಕ್ಕೆ ಅವರು ತನ್ನನ್ನು ತೊಡಗಿಸಿಕೊಂಡ ಸಾಮಾಜಿಕ ಚಟುವಟಿಕೆಗಳೆಲ್ಲ ಸಾಕ್ಷಿ ಹೇಳುತ್ತಿವೆ. ಸತ್ಯ ಶೋಧನೆಯ ಕುತೂಹಲ, ಸಂಘಟನೆಯ ಕುರಿತ ಆಸಕ್ತಿ, ಪ್ರಗತಿಪರ ವೈಚಾರಿಕ ವೇದಿಕೆಗಳಲ್ಲಿ ವಿಚಾರ ಮಂಡನೆಯ ಅವಕಾಶ, ಇವೆಲ್ಲ ಅವರಿಗೆ ಸಾಹಿತ್ಯ ಮತ್ತು ಸಾಹಿತ್ಯೇತರ ಕ್ಷೇತ್ರಗಳಲ್ಲಿ ತಂದ ಕೀರ್ತಿ, ಗೌರವಗಳು ಅಭಿಮಾನ ಪಡಬಹುದಾದಂಥವು. ನನ್ನ ಕಾದಂಬರಿ 'ಬಂಡಾಯ' ಪ್ರಕಟವಾದ ಸಂದರ್ಭದಲ್ಲಿ ಅವರು ಬೆಂಗಳೂರಿನಲ್ಲಿ ನನ್ನ ಎಲ್ಲ ಕೃತಿಗಳ ಚರ್ಚೆ ನಡೆಯಬೇಕು ಎಂದು ಇತರ ಲೇಖಕಿ ಸಾಹಿತಿ ಮಿತ್ರರ ಜತೆಗೆ ಏರ್ಪಡಿಸಿದ್ದ ಒಂದು ವಿಚಾರ ಸಂಕಿರಣ, ಸತ್ಕಾರ ಸಮಾರಂಭ, ನನ್ನ ಅತ್ಯಂತ ಮಧುರ ಸ್ಮೃತಿಗಳಲ್ಲೊಂದು.

ನಾನು ಆರಂಭದಲ್ಲಿ ಬರೆದಂತೆ, ಪ್ರಕೃತಿಯ ಸಹಜ, ಸುಂದರ ಸ್ಥಿತಿಯನ್ನು ಪ್ರೀತಿಸುವ, ಮನುಷ್ಯನ ಬದುಕು ಸುಂದರವಾಗಬೇಕು, ಯಾವ ರೀತಿಯ ಶೋಷಣೆ, ಅನ್ಯಾಯಗಳಿರದಂಥ ಸಹಜವೆನಿಸುವ ಸ್ಥಿತಿ ನಿರ್ಮಾಣವಾಗಬೇಕು ಎಂದು ಬಯಸಿ,

ತನ್ನ ಸಾಹಿತ್ಯ ರಚನೆಯಲ್ಲಿ, ಸಾಮಾಜಿಕ ಜೀವನದಲ್ಲಿ ಆರೋಗ್ಯವಂತ ಸಮಾಜದ ಕನಸನ್ನೇ ಕಾಣುತ್ತಿರುವ ಅವರು, ತನ್ನ ವೈಯಕ್ತಿಕ ಜೀವನದಲ್ಲಿ ತೀವ್ರ ಅನಾರೋಗ್ಯ ಕಾಡಿದಾಗಲೂ, ಜೀವನ ಪ್ರೀತಿಯನ್ನು ಕಳೆದುಕೊಳ್ಳದೆ, ವೈಯುಕ್ತಿಕ ಹಾಗೂ ಸಾಮಾಜಿಕ ಅನಾರೋಗ್ಯದ ವಿರುದ್ಧ ಹೋರಾಡುತ್ತಲೇ ಬಂದಿರುವ ದಿಟ್ಟ ಲೇಖಕಿ. ಅವರು ಸಾಹಿತ್ಯಕ, ಸಾಮಾಜಿಕ ಕ್ಷೇತ್ರಗಳಲ್ಲಿ ಮಾಡಿರುವ ಸಾಹಸ, ಸಾಧನೆಗಳಿಗೆ ಅಭಿನಂದನೆ ಸಲ್ಲಿಸುವುದೆಂದರೆ, ನಮ್ಮೆಲ್ಲರ ಅಂತಃಸಾಕ್ಷಿ ಗೌರವಿಸುವ, ಗೌರವಿಸಲೇ ಬೇಕಾದ ಮನುಷ್ಯನ ಶತಮಾನಗಳ ಧೈರ್ಯ, ಸಾಹಸ, ಸೃಜನಶೀಲ ಕ್ರಿಯಾಶೀಲತೆ ಗಳ ಇತಿಹಾಸಕ್ಕೆ ಅಭಿನಂದನೆ ಸಲ್ಲಿಸಿದಂತೆ.

ಮಾರ್ಗದರ್ಶಕ ವ್ಯಕ್ತಿತ್ವ ೮

- ಸರಿತಾ ಕುಸುಮಾಕರ ದೇಸಾಯಿ

ನಾನು ಅನುಪಮಾ ಹಾಗೂ ನಿರಂಜನರನ್ನು ಕಂಡದ್ದು ೧೯೭೦ರಲ್ಲಿ. ಅದಕ್ಕಿಂತ ಮೊದಲು ಅವರಿಬ್ಬರ ಕೃತಿಗಳನ್ನು ಓದಿ ಬಹುವಾಗಿ ಮೆಚ್ಚಿಕೊಂಡಿದ್ದ ನನಗೆ ಅವರಿಬ್ಬರನ್ನೂ ಕಾಣುವ, ಅವರೊಡನೆ ಚರ್ಚಿಸುವ ಹಂಬಲ ಬಲವಾಗಿತ್ತು. ಬೆಂಗಳೂರಿನ ಮಹಾರಾಣಿ ಕಾಲೇಜ್‌ನಲ್ಲಿ ಸೈನ್ಸ್ ವಿದ್ಯಾರ್ಥಿನಿಯಾಗಿದ್ದ ನಾನು ಆಗ ಬಯಸಿದ್ದರೆ ಅವರ ಭೇಟಿಯಾಗಬಹುದಿತ್ತು. ಆದರೆ ಆಗಲೇ ಕತೆಗಾರ್ತಿಯಾಗುವ ಗುರಿ ಇಟ್ಟುಕೊಂಡಿದ್ದ ನಾನೂ ಏನಾದರೂ ಬರೆದು ಅಚ್ಚಾದ ನಂತರವೇ ಅವರನ್ನು ಭೇಟಿಯಾಗಬೇಕೆನಿಸಿತ್ತು. ಅದಕ್ಕಾಗಿ ಅವಕಾಶ ಸಿಕ್ಕಿದ್ದು ೧೯೭೦ರ ಸಾಹಿತ್ಯ ಸಮ್ಮೇಳನದ ಸಂದರ್ಭ. ಶ್ರೀಮತಿ ನಿರುಪಮಾ (ನಿರುಪಮಾ ನಮ್ಮ ಮುಖ್ಯಾಧ್ಯಾಪಕರ ಮಗಳು) ನನ್ನನ್ನು ಅನುಪಮಾ ಅವರಿಗೆ ಪರಿಚಯಿಸುತ್ತಾ ಇವರು ಕಥೆ ಬರೀತಾರೆ ಎಂದಾಗ, ನನ್ನ ಮೆಚ್ಚಿನ ಅನುಪಮಾ ಅವರನ್ನು ಕಂಡಾಗ ನನಗೆ ಮಾತೇ ತೋಚಲಿಲ್ಲ. "ಓಹೊ ನಾನು ಇವರ ಕಥೆಗಳನ್ನು ಗಮನಿಸಿದೀನಿ" ಅನ್ನುತ್ತಾ ಅತ್ಯಂತ ಆತ್ಮೀಯ ವಲಯ ಸೃಷ್ಟಿಸುತ್ತ "ನಮ್ಮ ಮನೆಗೆ ಬನ್ನಿರಿ. ಸೀಮಂತಿನಿಯ ಹುಟ್ಟು ಹಬ್ಬವಿದೆ" ಎಂದು ಆಮಂತ್ರಿಸಿ ವಿಳಾಸಕೊಟ್ಟರು. ಅನಾನುಕೂಲತೆಯಿಂದಾಗಿ ನಾನು ಹುಟ್ಟುಹಬ್ಬದ ಸಂಜೆಯಲ್ಲಿ ಭಾಗವಹಿಸಲಾಗಲಿಲ್ಲ. ಮರುದಿವಸ ಅವರ ಮನೆಗೆ ಹೋದಾಗ ನನ್ನನ್ನು ಬರಮಾಡಿಕೊಂಡು ಆದರಿಸಿ ಬೀಳ್ಕೊಟ್ಟಿದ್ದು ನಿರಂಜನರು. ಅವರೊಡನೆ ೨-೩ ಗಂಟೆ ಹರಟೆ ಹೊಡೆದೆ. ಅಂದಿನ ಆ ಸಂಜೆಯ ಸ್ಮೃತಿ ಇನ್ನೂ ಹಸಿರಾಗಿದೆ. ನನ್ನಂತಹ ಅಪರಿಚಿತ ಬರಹಗಾರ್ತಿಯಲ್ಲಿ ಅದೆಷ್ಟು ಆತ್ಮವಿಶ್ವಾಸ ತುಂಬಿದರು. ನಿರಂಜನರ ಸ್ನೇಹಶೀಲತೆ, ಸುಸಂಸ್ಕೃತ ನಡವಳಿಕೆ, ಮೃದು

ಮಾತು, ಅವರ ಮಾನವೀಯತೆಗೆ ನಾನು ಮಾರುಹೋದೆ. ಗುಲ್ಬರ್ಗ ತಲುಪಿದ ನಂತರ ಅವರು ಉಡುಗೊರೆ ಕೊಟ್ಟಿದ್ದ ಪುಸ್ತಕಗಳನ್ನು ಓದಿ ನಿರಂಜನರಿಗೆ ಹಾಗೂ ಅನುಪಮಾ ಅವರಿಗೆ ಪತ್ರ ಬರೆದೆ. ಅಚ್ಚರಿ ಎಂದರೆ ಮರುತ್ತರ ಶೀಘ್ರವಾಗಿಯೇ ತಲುಪಿತು. ಹಿಂದಿ, ಉರ್ದು. ಮರಾಠಿ ಭಾಷೆಗಳ ಪರಿಚಯ ಪರಿಸರವಿರುವ ನನಗೆ ಇನ್ನೂ ಹೆಚ್ಚಿನ ಸಾಹಿತ್ಯಕೃಷಿ ಮಾಡಲು ಪ್ರೇರೇಪಿಸಿ ಬರೆದ ಅವರ ಪತ್ರಗಳನ್ನು ಇನ್ನೂ ನನ್ನಲ್ಲಿ ಭದ್ರವಾಗಿ ಇಟ್ಟುಕೊಂಡಿರುವೆ. ಪತ್ರದಲ್ಲಿರುವ ಅವರಿಬ್ಬರ ಸದ್ಭಾವನೆಗೆ ಬೆರಗಾದೆ. ಕನ್ನಡ ನಾಡಿನ ಜನರ ಹೃನ್ಮನದಲ್ಲಿ ಅಭಿಮಾನ ಮೂಡಿಸಿದ್ದ ಈ ದಂಪತಿಗಳು ಸಾಹಿತ್ಯ ಉತ್ತುಂಗ ಶಿಖರದಲ್ಲಿ ರಾರಾಜಿಸುತ್ತಿದ್ದವರು. ನನ್ನಂತಹ ಎಳೆಯ ಬರಹಗಾರ್ತಿಯಲ್ಲಿ ತೋರಿದ ಪ್ರೀತಿ ಆದರ ಗ್ರಹಿಸಿ ಅವರ ಹೃದಯವಂತಿಕೆಗೆ, ನಿಗರ್ವಿತನಕ್ಕೆ ತುಂಬಾ ಪ್ರಭಾವಿತಳಾಗಿಬಿಟ್ಟೆ. ಅಂದಿನಿಂದ ಇಂದಿನ ವರೆಗೂ ನಮ್ಮ ಸ್ನೇಹ ಅತ್ಯಂತ ಗಾಢವಾಗುತ್ತಾ ಹೋಯಿತು. ಶ್ರೀ ರಾಘವೇಂದ್ರ ಇಟಗಿಯವರ ಮಗಳು ವಸುಂಧರಾ ನನ್ನ ಹಾಗೂ ಅನುಪಮಾ ನಡುವೆ ಸ್ನೇಹ ಸೇತುವೆ ನಿರ್ಮಿಸಿ ಬಿಟ್ಟಳೆನ್ನಬಹುದು. ಅನುಪಮಾ ಅವರ ಬಳಿ ನನ್ನ ವಿಷಯ ಮತ್ತು ನನ್ನ ಬಳಿ ಅವರ ವಿಷಯ ಹೇಳುತ್ತಾ ನಮ್ಮಿಬ್ಬರಲ್ಲಿ ಪರಸ್ಪರ ಕುತೂಹಲ ಆದರ ಹುಟ್ಟಿಸಿದಳೆನ್ನಬಹುದು. ಪರಸ್ಪರ ಪತ್ರ ವಿನಿಮಯದಿಂದಾಗಿ ನಮ್ಮ ಸ್ನೇಹ ವರ್ಧಿಸತೊಡಗಿತು. ವ್ಯಾಕುಲತೆ ಮುತ್ತಿದಾಗಲೆಲ್ಲ ಅನುಪಮಾ ಅವರ ಪತ್ರಗಳ ಮೆಲುಕು ಹಾಕುತ್ತೇನೆ. ಅತ್ಯಂತ ಚೇತೋಹಾರಿ, ಮನ ಮುದಗೊಳಿಸುವ ಅವರ ಉಪದೇಶಪೂರಿತ ಅಂತಃಕರಣದ ಪತ್ರಗಳ - ಒಕ್ಕಣೆ ನೆನೆಸಿಕೊಂಡು ಉತ್ಸಾಹಿತಳಾಗುತ್ತೇನೆ. ಬೆಂಗಳೂರಿಗೆ ಹೋದಾಗಲೆಲ್ಲ ನಾವು ದಂಪತಿಗಳು ಅವರ ಅತಿಥಿಗಳಾಗುತ್ತೇವೆ. ರಾಜಕಾರಣ, ಸಾಮಾಜಿಕ, ಸಾಹಿತ್ಯಿಕ, ವೈಯಕ್ತಿಕ ವಿಷಯಗಳ ಚರ್ಚೆಯಲ್ಲಿ ಸಮಯದ ಅರಿವೇ ಹುಟ್ಟುವುದಿಲ್ಲ. ವೈವಿಧ್ಯಮಯ ಬದುಕಿನ ಆ ದಂಪತಿಗಳಿಗೆ ಗೊತ್ತಿರದ ವಿಷಯಗಳುಂಟೆ?ಗೊತ್ತಿರದಿದ್ದರೆ ತಿಳಿದುಕೊಳ್ಳುವಲ್ಲಿ ಅದೆಷ್ಟು ಆಸಕ್ತಿ! ಶ್ರೀ ದೇಸಾಯಿಯವರ ಉರ್ದು ಭಾಷೆ, ಗುಲಬರ್ಗ ನವಾಬೀ ಜನಜೀವನ, ನನ್ನ ವಕೀಲ ವೃತ್ತಿ ಬಗ್ಗೆ ತಿಳಿದುಕೊಳ್ಳುವಲ್ಲಿ ಅದೆಷ್ಟು ಆಸಕ್ತಿ! ಅತ್ಯಂತ ಉತ್ಸುಕತೆ ಅವರಲ್ಲಿರುವುದನ್ನು ಕಂಡುಕೊಂಡೆ.

ಇತ್ತೀಚಿನ ದಿನಗಳಲ್ಲಿ ಅನುಪಮಾ ನನಗೆ ಅತ್ಯಂತ ಆತ್ಮೀಯರಾಗಿಬಿಟ್ಟಿದ್ದಾರೆ. ನಮ್ಮಿಬ್ಬರಲ್ಲಿ ಯಾವ ತರಹದ ಮುಚ್ಚು ಮರೆಗಳಿಲ್ಲ. ಬಹಳ ಆತ್ಮೀಯರಾದವರ ಬಗ್ಗೆ ಒಂದು ತರಹದ ಸಂಕೋಚ ಮುಜುಗರ ಮುತ್ತುವುದು ಸಹಜ. ನಾನು ಅನುಪಮಾ ಅವರನ್ನು ಎಲ್ಲಿ ಹೇಗೆ ಕಂಡೆ ಎನ್ನುವದಕ್ಕಿಂತ ಅವರನ್ನು ಏಕೆ ಹೇಗೆ ಮೆಚ್ಚಿಕೊಂಡೆ, ಪ್ರಭಾವಿತಳಾದೆ ಎಂಬುದು ಮುಖ್ಯ ವಿಷಯ. ನನ್ನ ಸಂಕೋಚ ಬದಿಗೊತ್ತಿ ನಾನು ಅನುಪಮಾ ಅವರ ವ್ಯಕ್ತಿತ್ವ ಚಿತ್ರಣ ಪ್ರಾಮಾಣಿಕತನದಿಂದ

ತಿಳಿಸದಿದ್ದಲ್ಲಿ ದೊಡ್ಡ ಅಪರಾಧವೇ ಎಸಗಿದಂತೆ ಆಗುತ್ತದೆ. ಯಾಕೆಂದರೆ ಇತರರ ಜೀವನ ಪಥಕ್ಕೆ ದಾರಿ ದೀಪವಾಗುವಂತಹ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ಅನುಪಮಾ ಅವರ ಬಗ್ಗೆ ಬರೆದು ತಿಳಿಸುವುದು ನನ್ನ ಕರ್ತವ್ಯವೆಂದೇ ಭಾವಿಸುವೆ.

ಅನುಪಮಾ ಅವರನ್ನು ನಾನು ವಿಶೇಷವಾಗಿ ಮೆಚ್ಚಿಕೊಂಡದ್ದು ಯಾಕೆಂದರೆ ಅವರು ಅತ್ಯಂತ ಮೇಧಾವಿ ನುರಿತ ಅನುಭವಿ ಸಾಹಿತ್ಯದ ಖಣಿ ನಿರಂಜನರ ಪತ್ನಿಯಾಗಿರುವರಲ್ಲದೆ ಉಚ್ಚ ಮಟ್ಟದ ವಿದ್ಯಾಭ್ಯಾಸದಲ್ಲಿ ಉತ್ತಮ ಮಟ್ಟದಲ್ಲಿ ಮಿನುಗುತ್ತಿರುವ ತೇಜಸ್ವಿನಿ, ಸೀಮಂತಿನಿ ಎಂಬ ಪುತ್ರಿಯರ ತಾಯಿಯಾಗಿದ್ದಾರೆ; ಪತಿ-ಪುತ್ರಿಯರ ನಡುವೆ ತಮ್ಮತನವನ್ನು ಉಳಿಸಿಕೊಂಡು ತಮ್ಮದೇ ಆದ ವಲಯ ನಿರ್ಮಿಸಿಕೊಂಡಿರುವುದು. ಸ್ವಂತಿಕೆಯನ್ನು ಉಳಿಸಿಕೊಂಡಿದ್ದೇ ಅವರ ಜೀವನಕ್ಕೆ ಒಂದು ಮೆರುಗು ಕೊಟ್ಟಂತಾಗಿದೆ ಎಂದೇ ನಾನು ಅವರನ್ನು ಬಹುವಾಗಿ ಮೆಚ್ಚಿಕೊಂಡಿರುವುದು. ಅವರ ಸ್ಥಳದಲ್ಲಿ ಬೇರೆ ಯಾರೇ ಆಗಿದ್ದರೂ ಕೀಳರಿಮೆಯಲ್ಲಿ ಬೆಂದು ಹೋಗುವ ಸಂಭವವಿರುತ್ತಿತ್ತು. ಅಥವಾ ಪತಿ-ಮಕ್ಕಳ ಹಿರಿಮೆಯಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳುವ ಒಬ್ಬ ಸಾಮಾನ್ಯ ಗೃಹಿಣಿಯಾಗಿಬಿಡಬಹುದಿತ್ತು.

ವೃತ್ತಿಯಿಂದ ವೈದ್ಯೆಯಾಗಿ ಪ್ರವೃತ್ತಿಯಾದ ಬರವಣಿಗೆಯನ್ನು ಸಮತೋಲನದಿಂದ ಸಾಧಿಸಿದ್ದಾರೆ. ಸಾಹಿತ್ಯಕೃಷಿ ಅನುಪಮಾ ಹಾಗೂ ನಿರಂಜನರ ಸಮಾನ ಅಭಿರುಚಿ ಹಾಗೂ ಅವರಿಬ್ಬರ ಸಂಬಂಧದ ಶಾಶ್ವತ ಬೆಸುಗೆ ಎನ್ನಬಹುದು.

ಬರಹವನ್ನೇ ಬದುಕನ್ನಾಗಿಸಿಕೊಂಡ ನಿರಂಜನರ 'ಸಾಧನ-ಸಂಚಯ' ಅಂಕಣದ ಸಾಧನಾ ತಾವೇ ಎಂದು ತಿಳಿದಾಗ ಅನುಪಮಾ ಪ್ರೇಮಲೋಕದ ಬೆಳಕನ್ನು ಕಂಡುಕೊಂಡರಷ್ಟೇ ಅಲ್ಲ ಪ್ರೇಮದ ಸಾರ್ಥಕತೆಯನ್ನು ಮುಂದಿನ ಪೀಳಿಗೆಗೆ ಸಾರಿ ಹೇಳಿದರು. ಕನ್ನಡ ಸಾಹಿತ್ಯದಲ್ಲಿ ಚಿರಕಾಲ ಉಳಿಯುವಂತಹ ಶ್ರೇಷ್ಠ ಕೃತಿಗಳನ್ನು ರಚಿಸಿ ಮೃತ್ಯುವಿಗೂ "ತಡೆ. ಕೊಂಚ ಬರವಣಿಗೆ ಕೆಲಸ ಇದೆ" ಎಂದು ವಾಯಿದೆ ಹೇಳಿ ದೈಹಿಕ-ಮಾನಸಿಕ ವ್ಯಾಧಿಗಳಿಗೆ ಅಂಜದೆ ಅಳುಕದೆ ನಿರಂತರ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನೇ ತಾವು ತೊಡಗಿಸಿಕೊಂಡಿರುವ ಈ ಜೋಡಿ ನಿಜಕ್ಕೂ ಅಪೂರ್ವ ಅನುಪಮ ಜೋಡಿ. ನಿರಂಜನರನ್ನು ಮೃತ್ಯುಂಜಯನನ್ನಾಗಿಸಿದ ಈ ಯುಗದ ಸಾವಿತ್ರಿ ಅನುಪಮಾ. ಸಾವಿನ ಬಗ್ಗೆ ಎಳ್ಳಷ್ಟೂ ಹೆದರಿಕೆಯಿಲ್ಲ. ಕ್ಯಾನ್ಸರ್ ರೋಗಕ್ಕೆ ಅನುಪಮಾ ಬಲಿಯಾಗಿದ್ದರೆ ಪಾರ್ಶ್ವವಾಯುವಿಗೆ ನಿರಂಜನರು ತುತ್ತಾಗಿದ್ದಾರೆ, "ಅಯ್ಯೋ ಪಾಪ" ಎನ್ನುವ ಅನುಕಂಪ ಅವರಿಬ್ಬರಿಗೂ ಸೇರುವ ವಿಷಯವಲ್ಲ. ಸಂಘರ್ಷಮಯ ಬದುಕನ್ನು ಪ್ರೀತಿಸುವ ಈ ಜೋಡಿ ಇತರರ ಸಂಕಷ್ಟಮಯ ಜೀವನವನ್ನು ಹೇಗೆ ಧೈರ್ಯದಿಂದ ಎದುರಿಸಬೇಕೆಂಬ ಚೈತನ್ಯವನ್ನು ತುಂಬುತ್ತಾರೆ; ಮಾರ್ಗದರ್ಶಕರಾಗಿದ್ದಾರೆ.

ಡಾ। ಅನುಪಮಾ ವೈವಿಧ್ಯಮಯ ಸಾಹಿತ್ಯ ಸೃಷ್ಟಿಸಿದ್ದಾರೆ. ಪತಿ-ಪತ್ನಿಯ ಬರಹದ ಶೈಲಿ ಬರೆಯುವ ರೀತಿ ಸಿದ್ಧತೆ ಎಲ್ಲವೂ ಭಿನ್ನ. ಆದರೂ ಒಂದು ವಸ್ತುವಿನ ಆಯ್ಕೆ ವಿಷಯದಲ್ಲಿ ಆ ಬಗ್ಗೆ ಚಿಂತನೆಯ ಧೋರಣೆಗಳ ಬಗ್ಗೆ ಕೃತಿ ರಚಿಸುವ ಮುನ್ನ ವಹಿಸುವ ಸಿದ್ಧತೆ ಏಕಾಗ್ರತೆ ವಿಷಯದಲ್ಲಿ ಸಾಮ್ಯವಿದೆ ಎನಿಸಿದೆ.

ಅನುಪಮಾ ಅವರು ರಚಿಸಿದ ವೈದ್ಯಕೀಯ ಸಾಹಿತ್ಯ ಪಡೆದ ಮನ್ನಣೆ ಕನ್ನಡದಲ್ಲಿ ಬೇರೊಬ್ಬರಿಗೆ ಸಿಕ್ಕುವುದು ವಿರಳ. ಅವರ ಕೃತಿಗಳು ಇತರ ಭಾಷೆಗಳಿಗೂ ಅನುವಾದಗೊಂಡು ಕನ್ನಡದ ಕಸ್ತೂರಿಯ ಕಂಪನ್ನು ಪಸರಿಸಿದೆ.

ಮಹಿಳಾ ಸಾಹಿತ್ಯಕ್ಕೆ ಹೊಸ ಚಾಲನೆ ಸಿಗಬೇಕೆನ್ನುವ ಅನುಪಮಾ ಸ್ವಂತ ಪರಿಶ್ರಮದಿಂದ ಸಮಾನ ವೇದಿಕೆಯಲ್ಲಿ ಮಹಿಳೆ ಉತ್ತಮವಾಗಿ ಬೆಳೆಯಬೇಕೆನ್ನುತ್ತಾರೆ. ಪುರುಷ ಸಾಹಿತ್ಯ ಮಹಿಳಾ ಸಾಹಿತ್ಯವೆಂಬ ವಿಂಗಡನೆಯೇ ಸಲ್ಲದು ಎನ್ನುತ್ತಾರೆ.

ಗರ್ಭದಲ್ಲಿ ಹೆಣ್ಣು ಶಿಶುವೆಂದು ತಿಳಿದರೆ ಗರ್ಭಪಾತ ಮಾಡಿಸಿಕೊಳ್ಳುವ ಇಂದಿನ ಮಹಿಳೆಯರಿಗೆ ಅನುಪಮಾ ಸವಾಲಾಗಿದ್ದಾರೆ. ಹೆಣ್ಣು ಮಕ್ಕಳೇ ಹುಟ್ಟಲಿ ಅವರನ್ನು ಗಂಡು ಮಕ್ಕಳಿಗಿಂತ ಹೆಚ್ಚು ಮೇಧಾವಿಗಳಾಗಿ ಬೆಳೆಸುತ್ತೇನೆ ಎಂದು ಶಪಥ ಮಾಡಿದ್ದರಂತೆ, ನಿಜ. ಇಂದು ತೇಜಸ್ವಿನಿ ಮತ್ತು ಸೀಮಂತಿನಿಯಂತಹ ಸುಪುತ್ರಿಯುವ ರನ್ನು ಪಡೆದ ಅನುಪಮಾ ಧೀಮಂತಿನಿ ಎನಿಸಿದ್ದಾರೆ.

ಹೊಸ ಆತ್ಮವಿಶ್ವಾಸದಿಂದ ಬೆಳೆದ ಆ ಇಬ್ಬರೂ ಹೆಣ್ಣು ಮಕ್ಕಳು ಆಶ್ಚರ್ಯ ಕರವಾದ ರೀತಿಯಲ್ಲಿ ಸಾಹಿತ್ಯದ ಕೆಲಸದಲ್ಲಿ ಮುನ್ನುಗ್ಗಿದ್ದಾರೆ ಎಂಬ ವಿಷಯ ಎಂತ ಹವರಿಗೂ ಹೆಮ್ಮೆ ತರುವಂತಹದು.

ಡಾ।ಅನುಪಮಾ ಅವರ ಸಾಹಿತ್ಯ ಸೇವೆಗೆ ಸಾಹಿತ್ಯ ಅಕಾಡಮಿ ಪುರಸ್ಕರಿಸಿದೆ. ಸಮ್ಮೇಳನಗಳ ಅಧ್ಯಕ್ಷಗಿರಿ ಲಭಿಸಿದೆ, ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ೫೫ ವರ್ಷಕ್ಕೇ ಏನೆಲ್ಲ ಸಾಧನೆ! ಎಷ್ಟೆಲ್ಲ ಅನುಭವಿಸಿದ್ದು! ಅವರು ನಂಜುಂಡನಂತೆ ತಮ್ಮ ಬದುಕಿನ ಕಹಿ ನುಂಗಿ ಸಿಹಿ ಹಂಚಿದ್ದಾರೆ. ಬಂದ ಸಂಕಷ್ಟಗಳನ್ನು ಸವಾಲಾಗಿ ಸ್ವೀಕರಿಸಿ ಮೇರುಪರ್ವತದಂತಹ ಉನ್ನತ ವ್ಯಕ್ತಿತ್ವ ರೂಪಿಸಿಕೊಂಡಿರುವ ನಿರಂಜನ ದಂಪತಿಗಳ ಜೀವನ ಸಾರ್ಥಕತೆಯನ್ನು ಪಡೆದಿದೆ.

ನಂಜನಗೂಡು ತಿರುಮಲಾಂಬಾ ರಾಷ್ಟ್ರೀಯ ಪ್ರಶಸ್ತಿ ಅನುಪಮಾ ಅವರಿಗೆ ದೊರಕಿದ ಸಂದರ್ಭದಲ್ಲಿ ಭಾಗವಹಿಸಲು ನಾವು ದಂಪತಿಗಳು ನಂಜನಗೂಡಿಗೆ ಹೋಗಿದ್ದೆವು. ಆಗ ನನಗೆ ಕನ್ನಡದ ಲೇಖಕಿಯರಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಅನುಪಮಾ ಅವರ ಕೃತಿಗಳ ವಿಮರ್ಶೆ ಹಾಗೂ ಅವರಿಗೆ ಸತ್ಕಾರ ಸಮಾರಂಭವನ್ನು ಕಲ್ಬುರ್ಗಿಯಲ್ಲಿ ನೆರವೇರಿಸಬಾರದೇಕೆನಿಸಿತು. ತಕ್ಷಣ ಕಾರ್ಯಪ್ರವರ್ತಳಾಗಿ ನಿರಂಜನ ಹಾಗೂ ಅನುಪಮಾ ಅವರನ್ನು ಒಪ್ಪಿಸಿದೆ.

ಕಲ್ಬುರ್ಗಿಯ ಲೇಖಕಿಯರ.ಕಲಾವಿದರ ವೇದಿಕೆ ಹಾಗೂ ಭಾರತೀಯ ಸಾಮಾಜಿಕ ಸ್ವಾಸ್ಥ್ಯಸಂಸ್ಥೆ, ಕಲ್ಬುರ್ಗಿ ಎರಡಕ್ಕೂ ನಾನೇ ಅಧ್ಯಕ್ಷೆ. ಜೊತೆಗೆ ವಿಶ್ವವಿದ್ಯಾಲಯದ ಮಹಿಳಾ ಘಟಕ, ವೈದ್ಯಕೀಯ ಕಾಲೇಜ್ ಕನ್ನಡ ಸಂಘ ಇವುಗಳೆಲ್ಲದರ ಸಂಯುಕ್ತಾಶ್ರಯದಲ್ಲಿ ತಾರೀಖು ೨೮-೨೯ ನವೆಂಬರ್ ೮೭ರಂದು ಅನುಪಮಾ ಅವರ ಕೃತಿಗಳ ವಿಚಾರ ಸಂಕಿರಣ ಹಾಗೂ ಅವರಿಗೆ ಸನ್ಮಾನದ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. ಅನುಪಮಾ ಅವರನ್ನು ಎದುರಿಗೆ ಕುಳ್ಳಿರಿಸಿಕೊಂಡೇ ಅವರ ಸಮಗ್ರ ಕೃತಿಗಳ ಚಿಂತನೆ ಒಂದು ಅಪೂರ್ವ ಸನ್ನಿವೇಶ. ಅನುಪಮಾ ಅವರಷ್ಟೇ ತೂಕದ ವ್ಯಕ್ತಿ ಪತ್ರಿಕೋದ್ಯಮಿ ವಿಜಯಾ ಅಧ್ಯಕ್ಷತೆ ವಹಿಸಿದ್ದು ಇನ್ನಷ್ಟು ಕಳೆ ತಂದಿತ್ತು. ಶ್ರೀ ಎಸ್.ವಿ.ಪಾಟೀಲ್ (ಮಾಜಿ ಸಂಪಾದಕರು, ಕರ್ಮವೀರ) ಮುಂಬೈಯಿಂದ ಶ್ರೀ ಬಿ. ಎ. ಸನದಿ ಮತ್ತಿತರ ಗಣ್ಯರು ಭಾಗವಹಿಸಿದ್ದು, ಇಲ್ಲಿಯ ಪ್ರತಿಭೆಗಳನ್ನು ಕಂಡು ಸಂತಸಪಟ್ಟಿದ್ದು ನನ್ನ ಶ್ರಮ ಸಾರ್ಥಕವೆನಿಸಿತ್ತು. ಈ ಕಾರ್ಯಕ್ರಮಕ್ಕೆ ಅನೇಕರು ಸಹಕರಿಸಿದ್ದು ನನ್ನ ಸುದೈವ !

ಅನುಪಮಾ ಅವರ ಕಲ್ಬುರ್ಗಿ ಭೇಟಿ ಅವಿಸ್ಮರಣೀಯ. ಕಲ್ಬುರ್ಗಿಯ ಜನತೆಗೂ ಹಿಗ್ಗಿನ ಹೊಳೆ. ಎರಡು ದಿವಸ ಅನುಪಮಾ ಹಾಗೂ ವಿಜಯಾ ಕಲ್ಬುರ್ಗಿಯ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಲ್ಬುರ್ಗಿಯ ಉದ್ದಗಲಕ್ಕೂ ಸುಳಿದಾಡಿದರು. ವಿಚಾರ ಸಂಕಿರಣ, ಚರ್ಚೆ, ಮಧ್ಯಾಹ್ನ ಪ್ರೀತಿಭೋಜನ, ಸಂಜೆ ಸತ್ಕಾರ ಸಮಾರಂಭ, ಕಲ್ಬುರ್ಗಿಯ ಸುಮಾರು ೨೫ ಸಂಘ ಸಂಸ್ಥೆಗಳಿಂದ ಸತ್ಕಾರ. ಲೇಖಕಿಯರ, ಕಲಾವಿದರ ವೇದಿಕೆಯಿಂದ ಹಮ್ಮಿಣಿ ಒಪ್ಪಿಸಿದಾಗ ಅನುಪಮಾ "ಕೆರೆಯ ನೀರನು ಕೆರೆಗೆ ಚೆಲ್ಲಿ" ಎಂಬಂತೆ ಕಲ್ಬುರ್ಗಿ ವಿಶ್ವವಿದ್ಯಾಲಯದ ವೈದ್ಯಕೀಯ ಹಾಗೂ ಕನ್ನಡ ವಿಷಯಗಳ ಪ್ರಥಮ ಸ್ಥಾನಕ್ಕೆ ಚಿನ್ನದ ಪದಕ ಘೋಷಿಸಿ ತಮ್ಮ ಕೈಯಿಂದ ೫೦೦೦ರೂ. ಕೂಡಿಸಿ ೧೦,೦೦೦ರೂ. ಸಮರ್ಪಿಸಿದ್ದು ಎಂತಹ ಔದಾರ್ಯ! ಎಲ್ಲಿಯ ಕಲ್ಬುರ್ಗಿ, ಎಲ್ಲಿಯ ಅನುಪಮಾ, ಎಲ್ಲಿಯ ಬೆಸುಗೆ!

ಅನುಪಮಾ ನನ್ನ ಮನೆ 'ಸಂಜೀವನಿ'ಯಲ್ಲಿ ತಂಗಿದ್ದರು, ನನ್ನ ತೋಟದಲ್ಲೆಲ್ಲ ಸುಳಿದಾಡಿದರು. ನನ್ನ ಗೆಳತಿಯರಿಗೆ, ನನ್ನ ಮನೆಯ ಸದಸ್ಯರಿಗೂ ಅದೆಷ್ಟು ಆತ್ಮೀಯರಾಗಿಬಿಟ್ಟರೆಂದರೆ ಅವರನ್ನು ಎಂದೆಂದಿಗೂ ಮರೆಯಲು ಸಾಧ್ಯವೇ ಇಲ್ಲ.ಅವರ ಸರಳತನ, ಸಜ್ಜನಿಕೆ, ನಿಗರ್ವಿತನದಿಂದಾಗಿ ಕಲ್ಬುರ್ಗಿಯ ಸಾಹಿತಿಮಿತ್ರರಿಗೆಲ್ಲ ಅಚ್ಚುಮೆಚ್ಚಾದರು. ಇಲ್ಲಿಯ ಪ್ರಸಿದ್ಧ ಶರಣಬಸವೇಶ್ವರ ದೇವಸ್ಥಾನ, ಖಾಜ್ಜಾ ಬಂದೇ ನವಾಜ್ ದರ್ಗಾ ನೋಡಿದರು. ಪ್ರತಿಯೊಂದನ್ನೂ ತಿಳಿದುಕೊಳ್ಳುವ ಅವರ ಕುತೂಹಲ, ಆ ಉತ್ಸಾಹ ಕಣ್ಣೆದುರು ಕುಣಿಯುತ್ತಿವೆ. ಅವರು ಕ್ಯಾನ್ಸರ್‌ಪೀಡಿತರು, ರೋಗಿಗಳು ಎಂದು ಹೇಗೆ ನಂಬಲು ಸಾಧ್ಯ? ಪಾದರಸದಂತೆ ಚೈತನ್ಯಮೂರ್ತಿಯಾಗಿ ಸುಳಿದಾಡಿದ ಅನುಪಮಾರವರನ್ನು ಸುರಕ್ಷಿತವಾಗಿ ಬೆಂಗಳೂರಿಗೆ ತಲುಪಿಸಿದಾಗ ನನಗೆ ನಿಜಕ್ಕೂ ಧನ್ಯತೆಯ ಭಾವ

ಮುತ್ತಿತ್ತು. ಅನುಪಮಾ ಪತಿ ಮಕ್ಕಳಿಂದ ಆರುನೂರು ಕಿಲೋಮೀಟರ್ ದೂರ ಕರೆಸಿದ್ದ ನನಗೆ ಒಂದು ತರಹದ ಅಳುಕು, ಭಯ. ಅವರಿಗೆ ಏನಾದರೂ ಹೆಚ್ಚು ಕಮ್ಮಿ ಘಟನೆ ಜರುಗಿದರೆ ಜವಾಬ್ದಾರಿ ಹೊತ್ತಿದ್ದ ನನಗೆ ಅವರಿಗೆ ಆಯಾಸವಾಗದಂತೆ ನೋಡಿ ಕೊಳ್ಳುವ ಹೊಣೆಗಾರಿಕೆ ಇದ್ದರೂ ನಮ್ಮಲ್ಲಿಗೆ ಕರೆತನ್ನಿರಿ, "ನಮ್ಮಲ್ಲಿಗೆ ಬನ್ನಿರಿ "ಎಂದು ಆಹ್ವಾನಿಸಿದ ಅಭಿಮಾನಿಗಳಿಗೆ ನಿಷ್ಠುರಳಾಗಲೂ ಸಾಧ್ಯವಿರಲಿಲ್ಲ. ವಿಶ್ವವಿದ್ಯಾಲಯ, ಆಕಾಶವಾಣಿ, ಇಲ್ಲಿಯ ಮರಾಠಿ ಸಾಹಿತ್ಯಮಂಡಳ, ವಿವಿಧ ಕಾಲೇಜುಗಳೂ ಅವರನ್ನು ಬರಮಾಡಿಕೊಂಡು ಗೌರವಿಸಿದವು. ಇಲ್ಲಿಯ ಜನತೆಯ ಸಜ್ಜನಿಕೆ, ಔದಾರ್ಯ ಕಂಡು ಅನುಪಮಾ ಮೂಕವಿಸ್ಮಿತರಾಗಿದ್ದರು.

ಬೆಂಗಳೂರಿನ ವಿಜಯಳ ವಾಗ್ಝರಿ ಇಲ್ಲಿ ಮೊಳಗಿತ್ತು. ಕಾರ್ಯಕ್ರಮವು ಸಂಪೂರ್ಣವಾಗಿ ವಿಡಿಯೋ ಕ್ಯಾಸೆಟ್ ಮಾಡಿಟ್ಟುಕೊಂಡು ನಿರಂಜನರಿಗೂ ತೋರಿಸಿದಾಗ ನಿರಂಜನರೂ ಕಾರ್ಯಕ್ರಮದ ಬಗ್ಗೆ ಮೆಚ್ಚಿಗೆ ತೋರಿಸಿದರು. ಆದರೆ, ಬೆಂಗಳೂರು ತಲುಪಿದಾಗ ಒಂದು ವಾರದ ನಂತರ ಅನುಪಮಾ ಆಸ್ಪತ್ರೆ ಸೇರಿದ್ದು ತಿಳಿದಾಗ ನನ್ನ ಮನಸ್ಸು ಅತೀವ ವೇದನೆಗೊಳಗಾಗಿತ್ತು. ಕಲ್ಬುರ್ಗಿಯಲ್ಲಿಯ ಅತೀ ತಿರುಗಾಟದ ಆಯಾಸದ ಪರಿಣಾಮವೇ ಎಂಬ ತಪ್ಪು ಮನೋಭಾವದಿಂದ ಬೆಂದು ಹೋಗಿದ್ದೆ. ಸುದೈವ; ನನ್ನ ಮೂಕ ಪ್ರಾರ್ಥನೆ ಫಲಿಸಿದೆ. ಅನುಪಮಾ ಸುದೃಢ ರಾಗಿ ಪುನಃ ಲೆಕ್ಕಣಿಕೆ ಹಿಡಿದು ಬರೆಯತೊಡಗಿದ್ದಾರೆ.

ತೀರ ಇತ್ತೀಚಿನ ಘಟನೆ ಅವರ ಮಾನವೀಯ ಅನುಕಂಪಕ್ಕೆ ಹಿಡಿದ ಕನ್ನಡಿ. ಕಳೆದ ಬೇಸಿಗೆಯ ಒಂದು ಸಂಜೆ ಅನುಪಮಾ ಜ್ವರಪೀಡಿತ ನಿತ್ರಾಣದಲ್ಲಿದ್ದರೂ, ನಮ್ಮಿಬ್ಬರ ಸೊಂಪು ಹರಟೆ ಸಾಗಿದ್ದಂತೆ ಹೊರ ಗೇಟಿನಲ್ಲಿ 'ಅಮ್ಮ ಅಮ್ಮ' ಎಂಬ ಕೂಗು ಭಂಗ ತಂದಿತು. ಅನುಪಮಾ ಏನೆಂದು ತಿಳಿಯಲು ಅಸ್ವಸ್ಥತೆಯಲ್ಲೂ ಗೇಟ್ ವರೆಗೆ ಬಂದರು. ಬೇರೊಬ್ಬರ ಮನೆಯ ಕೆಲಸದವಳು ಇವರ ಮನೆ ಮುಂದೆ ಇದ್ದ ನುಗ್ಗೇ ಗಿಡ ತೋರಿಸಿ 'ಅಮ್ಮ, ಮನೆಯಲ್ಲಿ ಬಾಣಂತಿ ಇದ್ದಾಳೆ. ಸ್ವಲ್ಪ ನುಗ್ಗೇ ಸೊಪ್ಪು ಕೊಡ್ತೀರಾ' ಎಂದು ಕೇಳಿದಾಗ ತಕ್ಷಣ ಒಳಗಿನಿಂದ ಕೋಲು ತಂದು ಎತ್ತರದಲ್ಲಿದ್ದ ಟೊಂಗೆ ಹಿಡಿದು ನುಗ್ಗೇ ಸೊಪ್ಪು ಕೊಟ್ಟು ಬಂದು ಕುಳಿತು "ನೋಡಿ ಪಾಪ - ನುಗ್ಗೇ ಸೊಪ್ಪಿನಲ್ಲಿ ಕಬ್ಬಿಣದ ಅಂಶ ಇರುತ್ತದೆಯಲ್ಲಾ, ಅದಕ್ಕಾಗಿ ಬಾಣಂತಿಗೆ ಎಂದು ಕೇಳಿ ದಾಗ ಇಲ್ಲ, ತೆಗೆದುಕೊಡುವವರು ಯಾರೂ ಇಲ್ಲ ಎಂದು ಹೇಳಲಿಕ್ಕೆ ಆಗಲಿಲ್ಲ" ಎಂದಾಗ ಅವರು ಕ್ಲಿನಿಕ್ ಮುಚ್ಚಿದ್ದರೂ ಕರ್ತವ್ಯಪ್ರಜ್ಞೆ ಅನುಪಮಾ ಅವರ ವಿಶಿಷ್ಟ ಗುಣವೆಂದು ಅರಿತೆ.

ಹೊಸ ಬರಹಗಾರರಲ್ಲಿ ಆತ್ಮವಿಶ್ವಾಸ ಹುಟ್ಟಿಸುವುದು ಅವರ ಮತ್ತೊಂದು ವಿಶೇಷ. ಒಮ್ಮೆ ಗಂಗಾ ಪಾದೇಕಲ್ ಅವರನ್ನು ಪರಿಚಯಿಸಿ, ಇತ್ತೀಚಿನ

ಬರಹಗಾರ್ತಿಯರಲ್ಲಿ ಗಂಗಾ ಗಮನಾರ್ಹರು ಸರಿತಾ ಎಂದು ಪರಿಚಯಿಸಿದ್ದು ಕಿರಿಯರನ್ನು ಕಂಡು ಹಿಗ್ಗುವ, ಅವರಲ್ಲಿ ಧೈರ್ಯ, ಉತ್ಸಾಹ ಹುಟ್ಟಿಸುವ ಕೆಲಸ ಅನುಪಮಾ ಮಾಡುತ್ತಿರುವುದು ಶ್ಲಾಘನೀಯ.

"ಈ ಸಂಘ ಸಂಸ್ಥೆಗಳ ಕೆಲಸ ಬಿಟ್ಟುಬಿಡು ಸರಿತಾ, ಸಾಹಿತ್ಯಕೃಷಿಗೆ ಹೆಚ್ಚು ಸಮಯ ಮೀಸಲಿಡಬಾರದೇ?" ಎಂದು ನನ್ನ ಬಗ್ಗೆ ಬೇಸರಿಸುತ್ತಾರೆ, ಬುದ್ಧಿ ಹೇಳುತ್ತಾರೆ, ತಿದ್ದುತ್ತಾರೆ. ೧೯೭೯ರಲ್ಲಿ "ಮಕ್ಕಳ ಕಾನೂನು" ಪುಸ್ತಕ ಬರೆದು ಅಚ್ಚಿನ ಮನೆಗೆ ಕಳಿಸದ ನನ್ನ ಸೋಮಾರಿತನಕ್ಕಾಗಿ ನಿರಂಜನ ದಂಪತಿಗಳು ಮಿಡುಕುತ್ತಾರೆ. ಅವರಲ್ಲಿಗೆ ಹೋದಾಗ ಬರೆಯುವ ಪ್ರೇರಣೆ ಹೊತ್ತು, ಕಲ್ಬುರ್ಗಿ ತಲುಪಿದಾಗ ಪುನಃ ನಾಯಿ ಬಾಲ ಡೊಂಕೇ, ನನ್ನ ಪುಸ್ತಕಗಳು ಬೆಳಕು ಕಂಡಾಗ ನನಗಿಂತ ಅವರಿಗೇ ಹೆಚ್ಚು ಸಂತಸವಾಗಬಹುದು. ನಾನು ನಗೆಗಾರ ಬೀchi ತಂಗಿ ಎಂದು ತಿಳಿದಾಗ ನಿರಂಜನ ದಂಪತಿಗಳಿಗೆ ನನ್ನ ಬಗ್ಗೆ ಹೆಚ್ಚಿನ ಗೌರವವಿದೆ. ಅನಾರೋಗ್ಯದ ಈ ದಂಪತಿಗಳ ದೃಢತೆ, ಅಪರಿಮಿತ ಜೀವನೋತ್ಸಾಹ, ಸಾಹಿತ್ಯ ಕೃಷಿಯಲ್ಲಿ ಮಗ್ನರಾಗಿರುವುದನ್ನು ಕಂಡಾಗ ಸೋಮಾರಿತನ ಕಿತ್ತೊಗೆಯಲೇಬೇಕು, ಅವರಂತೆ ಬಾಳಬೇಕು ಎಂದು ಬಹು ಜನರಿಗೆ ಅನಿಸುತ್ತದೆ. ಇದಕ್ಕಿಂತ ಸಾರ್ಥಕತೆ ಬದುಕಿನಲ್ಲಿ ಬೇರೇನು ಬೇಕು?

ಸಾಹಿತ್ಯಕ್ಷೇತ್ರದ ಸವ್ಯಸಾಚಿ ೯

-ಎಂ. ಸರಸ್ವತಿ ಗೌಡ

ನಾನಿನ್ನೂ ಶಾಲೆಯ ವಿದ್ಯಾರ್ಥಿನಿಯಾಗಿರುವಾಗಲೇ ಅವರ ಹಿಮದ ಹೂ, ಶ್ವೇತಾಂಬರಿ, ನೂಲು ನೇಯ್ದ ಚಿತ್ರ, ಸಂಕೋಲೆಯೊಳಗಿಂದ, ಮಾಧವಿಯನ್ನು ಓದಿಕೊಂಡೆ. ನಾನು ವಿಜ್ಞಾನದ ವಿದ್ಯಾರ್ಥಿನಿಯಾದರೂ ಸಾಹಿತ್ಯವನ್ನು ಉಸಿರಾಡುತ್ತಿದ್ದೆ. ಮತ್ತೆ ಮತ್ತೆ ಅವರ ಕೃತಿಗಳು ಓದಿಸಿಕೊಳ್ಳುತ್ತಿದ್ದವು. ಅವರ ಮಾಧವಿ ಕೃತಿ ಬಹಳ ಇಷ್ಟವಾಯಿತು. ಅವರ ಅದುವರೆಗಿನ ಕೃತಿಗಳಿಗಿಂತ ಭಿನ್ನವಾದ ಕಲ್ಪನೆ. ದನಗಳನ್ನು ಜಾತ್ರೆಯಲ್ಲಿ ಮಾರುವಂತೆ ಮಹಿಳೆಯರನ್ನು ಮಾರಾಟ ಮಾಡುತ್ತಿದ್ದ ಕಾಲದ ಕಲ್ಪನೆ ನನ್ನ ಮೈನಡುಗಿಸಿತು. ನಾನು ಓಲ್ಗಾ ಗಂಗಾ ಓದಬೇಕಾದರೆ ಮಾಧವಿಯ ನೆನಪು ಬಂತು. ಪುರಾತನ ಭಾರತದಲ್ಲಿಯೂ ಹೆಣ್ಣಿನ ಶೋಷಣೆಯಿತ್ತು ಅನ್ನುವುದು ದೃಢವಾಯಿತು. ಮಾಧವಿಯು ಕೊನೆಯಲ್ಲಿ ಬಂಡಾಯವೇಳುತ್ತಾಳೆ. ಈ ದೇಶದಲ್ಲಿ ಮೊಟ್ಟ ಮೊದಲಿಗೆ ಮಹಿಳೆ ಸಿಡಿದೆದ್ದದ್ದು ಆಗಲೇ. ಇದು ಬಂಡಾಯದ ಮೊದಲ ಹೆಜ್ಜೆಯಾಗಿದೆ.

ನಾನು ಹತ್ತನೆ ತರಗತಿಯಲ್ಲಿರುವಾಗಲೇ ಆಕಾಶದ ಚಂದ್ರನ ಮೇಲೆ ಕವನ ಬರೆದೆ. ನಾನು ಪಿ. ಯು. ಸಿ. ಓದಲು ಮೈಸೂರಿನ ಮಹಾರಾಣಿಯವರ ಕಾಲೇಜು ಸೇರಿದೆ. ನನ್ನ ಆಕಾಶದೀಪ ಕವನ ಜನಪ್ರಗತಿಯಲ್ಲಿ ಅಚ್ಚಾಯಿತು. ಮೋಡ. ತಾರೆ, ನದಿ, ಹೂ ನನ್ನ ಕಾವ್ಯಕ್ಕೆ ವಸ್ತುವಾದವು (ಕಾವ್ಯ, ಕಥೆ ಬರೆವರೆ ಅಪರಾಧ ಅಂದು ಕೊಂಡ ಮನೆಯವಳು ನಾನು). ಕದ್ದು, ಮುಚ್ಚಿ ಬರೆದೆ. ಆ ವೇಳೆಗೆ ನನಗಿದ್ದ ಕೆಲವು ನಿರ್ಬಂಧಗಳು ಸಡಿಲಗೊಂಡಿದ್ದವು. ನಾನು ರೆಕ್ಕೆ ಇಲ್ಲದ ಕಿನ್ನರಿಯಾದೆ. ಸುಧಾದಲ್ಲಿ ಅವರ ಧಾರವಾಹಿಗಳನ್ನು ಓದತೊಡಗಿದೆ. ನನ್ನ ಭಾವುಕ ಮನಸ್ಸಲ್ಲಿ ಭಾವನೆಗಳು ಉದ್ದೀಪಿಸಿದವು. ಅನುಪಮಾರನ್ನು ನೋಡುವ ಹಂಬಲ ಹೆಚ್ಚಾಯಿತು. ಆ ವೇಳೆ ಗಾಗಲೇ ಮೈಸೂರಿನ ಬರಹಗಾರರೆಲ್ಲರೂ ಆತ್ಮೀಯರಾಗಿದ್ದರು. ಪದವಿ ತರಗತಿಗೆ ಪ್ರವೇಶ. ವಿಜ್ಞಾನದ ಬದಲು ಸಾಹಿತ್ಯ ಆಯ್ದುಕೊಂಡೆ. ಮಹಾರಾಣಿ ಕಾಲೇಜಿನ ಪುಸ್ತಕ ಭಂಡಾರ, ಮಾನಸಗಂಗೋತ್ರಿಯ ಪುಸ್ತಕ ಭಂಡಾರದಲ್ಲಿ ಅನುಪಮಾರ ಕೃತಿಗಳನ್ನು ಓದಲು ಸಾಧ್ಯವಾಯಿತು.

೭೫ರ ಮಾರ್ಚಿಯಲ್ಲಿ ಮಾನಸಗಂಗೋತ್ರಿಯಲ್ಲಿ ಲೇಖಕಿಯರ ಮೊದಲನೆಯ ಸಮ್ಮೇಳನ ನಡೆದಾಗ ಮೊಟ್ಟಮೊದಲ ಬಾರಿಗೆ ಅನುಪಮಾರ ಕಂಡೆ, ನಾನಾಗಿ ಹೋಗಿ ಮಾತನಾಡುವ ದಾಷ್ಟಿಕತೆ ನನಗಿರಲಿಲ್ಲ. ಅವರನ್ನು ಕಂಡಾಗಿನ ನನ್ನ ಭಾವನೆ ವರ್ಣಮಯ. ೭೯ರ ಮಾರ್ಚ್ ಬಂಡಾಯ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ಬಂಡಾಯ ಗೋಷ್ಠಿಯಲ್ಲಿ ಅನುಪಮಾರ ವಿದ್ವತ್‌ಪೂರ್ಣವಾದ ಭಾಷಣ ಕೇಳಿದೆ. ಅವರನ್ನು ಅಲ್ಲಿ ಕಾಣುವುದರ ಕಲ್ಪನೆಯು ಒಂದೆಳೆಯೂ ನನಗಿರಲಿಲ್ಲ.

ನಾನು ಮತ್ತು ಶಾಂತಾ ಬಸವರಾಜುರವರು ಹೋಗಿ ಅನುಪಮಾರನ್ನು ಮಾತನಾಡಿಸಿದೆವು. "ಸರಸ್ವತಿ. ನಿಮ್ಮ ಕವನ ಚೆನ್ನಾಗಿತ್ತು; ನೀವು ಕವನವನ್ನು ಚೆನ್ನಾಗಿ ಓದುವುದನ್ನು ಅಭ್ಯಾಸ ಮಾಡಿಕೊಳ್ಳಿ" ಎಂದರು. ಅವರ ಆತ್ಮೀಯ ನುಡಿಯು ನನಗೆ ಒಂದು ಶಿಕ್ಷಣವಾಗಿತ್ತು. ೮೦ರ ಮೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ ಭಾಷಾಬಾಂಧವ್ಯ ಗೋಷ್ಠಿಯ ಅಧ್ಯಕ್ಷರಾಗಿ ಸೊಗಸಾಗಿ ಮಾತನಾಡಿ ಭಾಷೆಯ ಬೆಳವಣಿಗೆ ಬಗ್ಗೆ ಮಾತಾಡಿದ್ದಷ್ಟೆ ಅಲ್ಲ, ಮಹಿಳೆ ಬರೆದದ್ದು ಎಂಬ ಉದ್ಗಾರ ಪೂರ್ವಾ ಗ್ರಹವಿಲ್ಲದೆ ಬಿಚ್ಚು ಮನಸ್ಸಿನಿಂದ ವಿಮರ್ಶೆ ಮಾಡಲು ಕರೆಕೊಟ್ಟರು.

ಮಾರ್ಚ್ ೮೧ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ೫೩ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯಗೋಷ್ಠಿಯ ಅಧ್ಯಕ್ಷರಾಗಿ ದಲಿತರ ಕುರಿತ ನೋವು ನಲಿವುಗಳನ್ನು ಸ್ಪಷ್ಟಪಡಿಸಿ ದಲಿತರ ಹೋರಾಟಕ್ಕೆ ಕರೆ ನೀಡಿದರು. ದಲಿತರ ಹೋರಾಟಕ್ಕೆ ಸ್ಪಂದಿಸುವ ಅವರ ಮನೋಭಾವ ಅವರ 'ಎಳೆ' ಕಾದಂಬರಿಯಲ್ಲಿ ಕಾಣಬಹುದು.

ಏಪ್ರಿಲ್ ೮೧ರಲ್ಲಿ ಬೆಂಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶವಾದ ಆನೇಕಲ್ಲಿನಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯಿತು. ತಿಮ್ಮಣ್ಣಕವಿ ಮಂಟಪದಲ್ಲಿ, ಖ್ಯಾತ ಸಾಹಿತಿ ಡಾ। ಅನುಪಮಾ ನಿರಂಜನರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಉದ್ಘಾಟನೆಗೊಂಡಿತು.

ನಾನು ಮಹಿಳೆ ಮತ್ತು ಬಂಡಾಯ ಸಾಹಿತ್ಯದ ಬಗ್ಗೆ ಲೇಖನ ಮಂಡಿಸಿದೆ. ಅನುಪಮಾ ಮೆಲುನಗೆ ತೋರಿ "ಮಹಿಳಾ ಸಂಘಟನೆ ಆಗಬೇಕೆ ಹೊರತು ಪ್ರಬಂಧ ಮಂಡನೆಯಿಂದಲ್ಲ. ಮಹಿಳೆಗೆ ವಿದ್ಯೆ, ಆರ್ಥಿಕ ಸ್ವಾವಲಂಬನೆ ಎಲ್ಲಿ ವರೆಗೂ ಸಿಕ್ಕಿಲ್ಲವೊ ಅಲ್ಲಿ ವರೆಗೂ ಮಹಿಳೆ ತುಳಿತಕ್ಕೆ ಒಳಗಾದವಳಲ್ಲವೆ ?" ಎಂದರು ಪ್ರಶ್ನಾರ್ಥಕವಾಗಿ.

ನಾನು ಕೆಲವು ಗಳಿಗೆ ಮೌನವಾದೆ. ಅಪಾರ ಜ್ಞಾನಸಂಪತ್ತನ್ನುಳ್ಳವರೆದುರು ನನ್ನ ಅನಿಸಿಕೆ ಹೇಳುವುದಾದರು ಹೇಗೆ! ಕೆಲವು ಗಳಿಗೆ ತುಯ್ದಾಡಿ ಕಡೆಗೆ ಬಾಯಿಬಿಟ್ಟೆ. "ಎಲ್ಲಾ ಕಾಲದಲ್ಲಿಯೂ ಭಾರತದ ಮಹಿಳೆ ಶೋಷಿತಳೆ. ಆದರಲ್ಲೂ ಮಧ್ಯಮ ಮನೆತನದ ಹೆಣ್ಣುಗಳ ಸ್ಥಿತಿ ಅಧೋಗತಿಗಿಳಿದಿದೆ. ಅವರೆಲ್ಲ ಮೈ ಚಳಿ ಬಿಟ್ಟು ಭ್ರಾಮಕ ಲೋಕದಿಂದ ಹೊರಬರಬೇಕು. ಮೂಲಭೂತವಾಗಿ ಸಂಘಟನೆ ಆಗಬೇಕು. ಕಡ್ಡಾಯ ಶಿಕ್ಷಣ. ವರದಕ್ಷಿಣೆ ನಿರ್ಮೂಲನ, ಕಾನೂನಿನಲ್ಲಿ ತಿದ್ದುಪಡಿ ಆಗಬೇಕು. ಅದು ಒತ್ತಿಗೆಯ ಬರಹ ಆಗಬಾರದಷ್ಟೆ. ಅದರ ಬಗ್ಗೆ ಹೋರಾಟ ನಡೆಸಬೇಕಲ್ಲವೆ" ಎಂದೆ.

ಅನುಪಮಾ ಗಂಭೀರವಾಗಿ ಹೇಳಿದರು "ನೀವು ಹೇಳಿದಷ್ಟು ಸುಲಭವಲ್ಲ. ಹಂತ ಹಂತವಾಗಿ ನಡೆಯಬೇಕು. ಹೆಣ್ಣುಗಳೆಲ್ಲರೂ ಸಂಘಟಿಸಿ ಸಾಮೂಹಿಕ ಚಳುವಳಿ ನಡೆಸಬೇಕು. ಆಗಲಾದರೂ ಸುಧಾರಣೆ ಸಾಧ್ಯವೇನೊ" ಎಂದು.

ನಾನು "ನಮ್ಮ ಸಮಾಜದ ವ್ಯವಸ್ಥೆ ಸರಿಯಿಲ್ಲ, ನಮ್ಮ ಹೆಣ್ಣು ಮಕ್ಕಳು ಯಾವಾಗಲು ಜಾಗೃತರಾಗಿರುತ್ತಾರೆ; ಆದರೂ ಸಿಡಿದೇಳರು; ಹೆಣ್ಣು ಇನ್ನೂ ನೋವು ಸಹಿಸಲಾಗದು ಎನ್ನುವಾಗ ಅವಳೊಳಗಿನ ಕ್ರಾಂತಿ ಅವಳ ಸಹನೆಯ ಮೈಕಟ್ಟಬಹುದು. ಉದಾಹರಣೆಗೆ ನಾನು. ನನ್ನ ಮನೆಯಿಂದಲೇ ಹೋರಾಟ ಮಾಡಬೇಕಾಯಿತು. ಮಹಿಳೆ ಸನಾತನ ಕಾಲದಿಂದಲೂ ಮುಗ್ಧಳಾಗಿ, ಸನಾತನಳಾಗಿ ಹುಟ್ಟಿರುವುದರಿಂದಾಗಿ ಅವಳಲ್ಲಿ ಕ್ರಾಂತಿಕಾರಕ ಯೋಚನೆ ಮೂಡುವ ಧೈರ್ಯ ಬಂದಿಲ್ಲ"ಎಂದೆ. "ಅದು ಒಂದು ಕಾರಣವಾದರೂ, ನಮ್ಮಲ್ಲಿ ಮಹಿಳೆಯರಿಗೆ ವಿದ್ಯಾಭ್ಯಾಸ ಇಲ್ಲದಿರುವುದೆ ಮೂಲ ಕಾರಣ" ಎಂದರು ಅನುಪಮಾ.

ತನ್ನ ಬಾಲ್ಯದಿಂದಲೇ ಹೆಣ್ಣು ಗಂಡೆಂಬ ತಾರತಮ್ಯ ಪ್ರತಿಭಟಿಸುತ್ತ ಬೆಳೆದು ಬಂಡಾಯವೆದ್ದ ಧೀಮಂತ ವ್ಯಕ್ತಿತ್ವ ಅವರದು. ಮೊದಲು ನೋಡಿದಾಗ ಅನುಪಮಾರೇನೂ ಗೂಢ ವ್ಯಕ್ತಿಯಂತೆ ಕಾಣುವುದಿಲ್ಲವಾದರೂ ಸಾಮಾನ್ಯ ಮಹಿಳೆಯರಿಗಿಂತ ಭಿನ್ನವ್ಯಕ್ತಿಯಾಗಿರುವ ಅನುಪಮಾ ಎಲೆಯ ಮರೆಯ ಮೊಗ್ಗು ಹೂವಾದಂತೆ. ಹೂ ಕಾಣದು, ಆದರೆ ಅದರ ಪರಿಮಳ ಎಲ್ಲೆಡೆ ಗಮಗಮಿಸುವುದು.

೮೦ರ ದಶಕದಲ್ಲಿ ನನ್ನ 'ಮುಂಗಾರು' ಕವನಸಂಕಲನ ಪ್ರಕಟವಾಯಿತು. ಮುಂಗಾರು ಅವರ ಕೈಯಲ್ಲಿಟ್ಟಾಗ ಕವನ ಚೆನ್ನಾಗಿ ಬರೆಯುತ್ತೀರಿ ಎಂಬ ನುಡಿ ನನಗೆ ಚುಂಬಕ ಶಕ್ತಿಯಾಯಿತು. ಅವರ ಅದಮ್ಯ ಪ್ರೀತಿ ನನ್ನ ಕವಿ ಮನಸ್ಸಿಗೆ ರೆಕ್ಕೆ ಹಚ್ಚಿತು. ಕಾವ್ಯಲೋಕದ ಬುನಾದಿಯಾದೆ. ೮೩ ಅಕ್ಟೋಬರಿನಲ್ಲಿ ನನ್ನ 'ದ್ರೌಪದಿಯ ಸ್ವಗತ' ಕವನ ಸಂಕಲನ ಅಚ್ಚಾಯಿತು. ಶ್ರೀಮತಿ ಫಿಲೋಮಿನಾರವರ ವೈಚಾರಿಕ ಲೇಖನಗಳನ್ನುಳ್ಳ ದೌರ್ಜನ್ಯದ ದಳ್ಳುರಿಯು ಅಚ್ಚಾಗಿತ್ತು. ಈ ಎರಡು ಕೃತಿಗಳನ್ನು ಒಟ್ಟಿಗೆ ಬಿಡುಗಡೆ ಮಾಡಲು ವಿಶ್ವಾಸ ಮುದ್ರಣದ ಸುಧಾ ಡಿ. ಟಿ. ಜಯಕುಮಾರರು ಮುಂದೆ ಬಂದರು. ನಾನು ಮತ್ತು ಆತ್ಮೀಯ ಫಿಲೋಮಿನಾ ಡಾ। ಅನುಪಮಾರ ಮನೆಗೆ ಹೋದೆವು. ಪುಸ್ತಕ ಬಿಡುಗಡೆಯ ಅಧ್ಯಕ್ಷತೆ ವಹಿಸಲು ಕೇಳಿಕೊಂಡಾಗ ಹೂನಗೆಯೊಡನೆ ಒಪ್ಪಿಗೆ ದೊರೆಯಿತು. ಅವರ ವ್ಯಕ್ತಿತ್ವವನ್ನು ಅಭಿವ್ಯಕ್ತಗೊಳಿಸಿತು, ಅವರ ಆತ್ಮೀಯತೆ. ಅನುಪಮಾರವರ ಕವನ ಪ್ರಜಾವಾಣಿಯಲ್ಲಿ ಓದಿದ ನೆನಪು (ಮೊಸು ಮಾರುವ ಹೆಣ್ಣಿನ ಚಿತ್ರ).ಓದಿದೆ ಎಂದೆ. 'ಹೇಗಿತ್ತೊ' ಎಂದರು ಅನುಪಮಾ. ನಾನು ಬರಹಗಾರಳಷ್ಟೆ. ವಿಮರ್ಶಕಳಲ್ಲವಾದರೂ ವಿಮರ್ಶನ ದೃಷ್ಟಿ ನನಗಿದ್ದರೂ ನಾನು ಆ ಮೇರು ವ್ಯಕ್ತಿಯ ಎದುರು ಏನೆಂದು ಹೇಳಲಿ! ಮೌನವಾದಾಗ, "ನನ್ನ ಮಗಳು ತೇಜಸ್ವಿನಿ ನೀವು ಕವನ ಬರಿಬೇಡಿ ಮಮ್ಮಿ. ಗದ್ಯ ಸಾಹಿತ್ಯ ಮಾತ್ರ ನಿಮಗೆ ಒಗ್ಗುವುದು ಎಂದಳು" ಎಂದರು ನಗೆಯ ನಡುವೆ.

ಹೌದು, ಅವರ ಗದ್ಯದ ಸೊಗಸು ಅವರ ಕಾವ್ಯಕ್ಕಿಲ್ಲವಾದರೂ ಕೃಷಿಯಿಂದ ಮುಂದೆ ದಕ್ಕಿಸಿಕೊಂಡಾರು ಅನಿಸಿತ್ತು. ಅವರ ವಿಮರ್ಶಕ ಮಗಳ ಕಣ್ಣಿಂದ ಅವರ ಕಾವ್ಯ ತಪ್ಪಿಸಿಕೊಳ್ಳಲಿಲ್ಲ. ತೇಜಸ್ವಿನಿ ದಿಟ್ಟ ವಿಮರ್ಶಕಳು ಅನ್ನಿಸಿತು. ಅನುಪಮಾ ಮಾತಿನ ನಡುವೆ ಕುಡಿಯಲು ಹಣ್ಣಿನ ರಸಕೊಟ್ಟರು. ದೂರವಾಣಿಯ ಕರೆಗೆ ಓಗೊಟ್ಟರು. ಅನುಪಮಾರವರು ಅನಾರೋಗ್ಯದವರೆಂದು ಹೇಳಲಾಗದು. ಅಷ್ಟು ಚುರುಕು. ಪಾದರಸ ಹಿಡಿಯಲ್ಲಿ ಹಿಡಿಯಲು ಸಾಧ್ಯವೇ? ಬದುಕಿನಲ್ಲಿ ಏರಿಳಿತಗಳನ್ನು ಕಂಡರೂ ಏರುವ ದಾರಿಯಲ್ಲಿ ಚೈತನ್ಯದ ಬುಗ್ಗೆಯಾಗಿ ಬೆಳೆದವರು. ಪ್ರತಿ ಮಜಲಿನಲ್ಲಿಯೂ ಯಶಗಳಿಸಿಕೊಂಡವರು. ಯೂರೋಪು ರಾಜ್ಯಗಳ ಪ್ರವಾಸ ಮಾಡಿ ಬಂದು. ಅಲ್ಲಿನ ಜನಜೀವನ, ಆಚಾರ, ವಿಚಾರ, ದೇವರು, ಅಲ್ಲಿನ ಮಹಿಳೆಯರ ಜೀವನದ ಸಾಮಾಜಿಕ ಸಮಸ್ಯೆಗಳನ್ನು ಒಂದು ಅಂಗುಲ ದಂತದ ಮೇಲೆ ಸಮಗ್ರ ಚಿತ್ರವನ್ನು ಕೆತ್ತಿದ ಕುಶಲ ಶಿಲ್ಪಿಯಂತೆ ಪ್ರವಾಸ ಸಾಹಿತ್ಯ ರಚಿಸಿದ್ದಾರೆ.

೮೫ರ ಮಾರ್ಚ್‌ನಲ್ಲಿ ನಡೆದ ಲೇಖಕಿಯರ ಸಭೆಯಲ್ಲಿ ಮಾತನಾಡಿದರು. ಮಾತು ಮೆಲುವಾದರೂ ರೇಷ್ಮೆ ಎಳೆಯಂತೆ ಶಕ್ತಿಯುತವಾಗಿತ್ತು. ಅವರ ಅಪಾರವಾದ ಪ್ರತಿಭೆಯನ್ನು ಗಮನಿಸಿದರೆ ಜಗತ್ತಿನ ಸಾಹಿತ್ಯವನ್ನೆಲ್ಲ ಅಭ್ಯಾಸ ಮಾಡಿರುವರೇನೊ ಅನ್ನುವ ಸಂಶಯ ನನ್ನನ್ನು ಕಾಡುತ್ತದೆ.

ಇತ್ತೀಚಿನ ೮೮ರ ಫೆಬ್ರವರಿಯಲ್ಲಿ ನಡೆದ ಲೇಖಕಿಯರ ಸಭೆಯಲ್ಲಿ ಅವರನ್ನು ಕಂಡೆ. ಮಾತನಾಡಿಸುವ ಅದಮ್ಯ ಬಯಕೆ ಕೈಗೂಡಲಿಲ್ಲ. ಮಾರನೆ ದಿನ ಕವಿಗೋಷ್ಠಿಗೆ ಬರುತ್ತಾರೆಂದುಕೊಂಡೆ. ಕವಿಗೋಷ್ಠಿಯಲ್ಲಿ ಭಾಗವಹಿಸಿದೆ. ನನ್ನ ಓದುಗರಿಗೂ ಪತ್ರಕರ್ತರ ಕುತೂಹಲಕ್ಕೆಂದೇ 'ನನ್ನ ಕನಸಿನ ಹುಡುಗ' ಪದ್ಯ ಓದಿದೆ. ಅನುಪಮಾರವರಿಗಾಗಿ ಶ್ರೋತೃಗಳ ನಡುವೆ ಕಣ್ಣು ಹರಿಯಬಿಟ್ಟೆ. ಅವರನ್ನು ಕಾಣದೆ ಮಿಡುಕಿದೆ, ಅನುಪಮಾ ನನ್ನ ಕವನ ಕೇಳಲಿಲ್ಲವಲ್ಲ ಎಂದು.

ಇವರಿಗೆ ವೇದಿಕೆಯ ಮೋಹವಿಲ್ಲ ಅನ್ನುವುದು ನಿಜ. ಅನುಪಮಾರವರು ಬಹಳ ಹರ್ಷ ಸಾಹಿತ್ಯ ಪರಿಷತ್ತಿನ ವೇದಿಕೆ ಏರಿದವರಲ್ಲ. ಅನುಪಮಾರ ವೈಜ್ಞಾನಿಕ ಕೃತಿಗಳು, ಆರೋಗ್ಯಕ್ಕೆ ಸಂಬಂಧಿಸಿದ ಕೃತಿಗಳು ಪ್ರಚಲಿತದಲ್ಲಿವೆ. ಅದರಲ್ಲೂ ವೈದ್ಯಕೀಯ ಕೃತಿಗಳು ಸಾಮಾನ್ಯರಿಗೆ ಆತ್ಮೀಯವಾಗಿವೆ. ಆರೋಗ್ಯಕ್ಕೆ ಸಂಬಂಧಿಸಿದ ಮಹತ್ವವಾದ ಉಪಯುಕ್ತ ಕೃತಿಗಳು ಗ್ರಾಮೀಣ ಜನರಿಗೂ ಪ್ರಿಯವಾಗಿವೆ.

ಮೇ ತರಂಗದಲ್ಲಿ ಅನುಪಮಾರ ಪಾತಾರಗಿತ್ತಿ ಕವನ ಅಚ್ಚಾಗಿದೆ. ಕಲ್ಪನೆಗೆ, ಕಾವ್ಯಕ್ಕೆ, ಯಾರ ಕರೆಯೂ ಬೇಕಿಲ್ಲ. ಬರೆಯುವ ಒತ್ತಡವಿದ್ದಾಗ ಬರೆದರೆ ಕಾವ್ಯ ಬಹುಕಾಲ ನಿಲ್ಲುವುದು ಸಾಧ್ಯ. ಕಾವ್ಯಕ್ಕೆ ಪ್ರೇರಣೆ ಇಂತಹದೆ ಎಂದು ಹೇಳಲಾಗದು. ಒಂದು ಹಣ್ಣಿನ ಮರದಲ್ಲಿ ನೂರು ತೆರನಾದ ಪಕ್ಷಿಗಳ ಸ್ವರ ಕೇಳಿ ಬಂದಾಗ ಒಂದೊಂದೂ ಮಧುರವಾದಂತೆ, ಅನುಪಮಾರವರಿಂದ ಸಾಹಿತ್ಯದ ಎಲ್ಲ ಮಾಧ್ಯಮಗಳು ಮೂಡಿ ಬರಲು ಸಾಧ್ಯ. ಎಲ್ಲ ಪ್ರಕಾರಗಳು ರಸಗಟ್ಟಿ ಇದ್ದಂತೆ.

ಹೆಂಗಸರಿಗೆ ಚಿಂತನೆ ಸಾಲದು; ಅಧ್ಯಯನ ಕಡಿಮೆಯಾಗಿರುವುದರಿಂದ ಅವರ ಶಿಲ್ಪ ಶಿಥಿಲವಾಗುತ್ತದೆ ಎನ್ನುವ ವಿಮರ್ಶಕರಿಗೆ ಕೊರತೆಯಿಲ್ಲ ನಮ್ಮಲ್ಲಿ. ವಿಮರ್ಶೆಗೆಂದು ಕೃತಿಯನ್ನು ಕೈಗೆತ್ತಿಕೊಂಡಾಗ ಮಹಿಳೆ ಬರೆದದ್ದು ಎಂಬ ತಾತ್ಸಾರ. ತಾರತಮ್ಯವಿಲ್ಲದೆ ಬಿಚ್ಚು ಮನಸ್ಸಿನಿಂದ ವಿಮರ್ಶಿಸಿದರೆ, ಮಹಿಳೆಯ ಬರಹದ ವೈವಿಧ್ಯ ಕಾಣಬಹುದು. ಮಹಿಳೆ ಬರೆದದ್ದೆಂದು ಸೌಜನ್ಯತೆ ಏನೂ ಬೇಕಿಲ್ಲ. ಮಹಿಳಾ ಸಾಹಿತ್ಯಕ್ಕೆ ಪ್ರತ್ಯೇಕತೆಯೂ ಬೇಕಿಲ್ಲ. ಮಹಿಳಾ ಸಾಹಿತ್ಯದಲ್ಲಿ ಪುರುಷ ಸಾಹಿತ್ಯದ

ಪ್ರಭಾವವೇನಿಲ್ಲ. ಹೆಣ್ಣು ಇಡೀ ಕುಟುಂಬದ ಜವಾಬ್ದಾರಿ ವಹಿಸಿಕೊಳ್ಳಬೇಕು. ಹಾಗಾಗಿ ಅವಳ ಚಿಂತನೆಗಳು ಆಳವಾಗಿ ಭಾವನೆಗಳು ಆ ನಿಟ್ಟಿನಲ್ಲಿ ಎತ್ತರಕ್ಕೆ ಏರಿವೆ. ಹೆಣ್ಣಿನ ಬರವಣಿಗೆ ಸತ್ವಪೂರ್ಣ ಎನ್ನುವುದು ಈಗಾಗಲೇ ಋಜುವಾತಾಗಿದೆ.

ಸ್ತ್ರೀಯರಿಗೆ ಸಾಹಿತ್ಯ ಕ್ಷೇತ್ರ ಬಂಜರು ಭೂಮಿಯಲ್ಲ. ಎಲ್ಲ ವರ್ಗ, ವರ್ಣದ ಚಿತ್ರಣ, ಅದರೊಳಗಿನ ಸಂಕೀರ್ಣ ಭಾವನೆಗಳು ಅವರ ಸಾಹಿತ್ಯದ ಸೆಲೆ ಪಲ್ಲಿರುವ ನೀರಿನ ಬುಗ್ಗೆಗಳು. ಅನುಪಮಾರ ಕೃತಿಗಳೇ ಇದಕ್ಕೆ ಸೂಕ್ತ ಉದಾಹರಣೆ.

೦ ದಿಟ್ಟ ನಿಲುವು-ಗಟ್ಟಿ ಹೆಜ್ಜೆ

-ಎಚ್. ಪಿ. ಫಿಲೋಮಿನ

೧೯೮೩. ಬೇಸಿಗೆಯ ಒಂದು ಸಂಜೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ತುಂಬಿದ ಸಭೆ. ನನ್ನ ಹಾಗೂ ನನ್ನ ಗೆಳತಿ ಸರಸ್ವತಿ ಗೌಡರ ಪುಸ್ತಕ ಬಿಡುಗಡೆಯ ಸಮಾರಂಭ. ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರು ಪುಸ್ತಕ ಪರಿಚಯ, ಪುಸ್ತಕ ವಿಮರ್ಶೆಯ ಬಗ್ಗೆ ಮಾತನಾಡಿ, ಮೆಚ್ಚುಗೆ ವ್ಯಕ್ತಪಡಿಸಿದರು. ಈ ಗಣ್ಯರ ಮಧ್ಯೆ ಕುಳಿತಿದ್ದ ಹೆಣ್ಣೊಬ್ಬಳ ಅಂತರಂಗದಲ್ಲಿದ್ದ ವಿಚಾರಗಳೇ ಬೇರೆಯಾಗಿದ್ದವು. ಹಿರಿಯ ಲೇಖಕಿಯಾದ ಆಕೆ, ತನ್ನಂತೆಯೇ ಗಂಭೀರ ವಾಗಿ ಲೇಖನ ವ್ಯವಸಾಯದಲ್ಲಿ ತೊಡಗಿರುವ, ಹೊಸ ತಲೆಮಾರಿನ ಲೇಖಕಿಯರ ಬಗೆಗೆ, ಹೆಚ್ಚಿನ ತವಕ, ಆಸಕ್ತಿ, ಕಳಕಳಿಯನ್ನು ಹೊಂದಿದ್ದರು. ತನ್ನ ಹಿಂದಿನ ತಲೆಮಾರಿನ ಲೇಖಕಿಯರು-ತ್ರಿವೇಣಿ, ಎಂ. ಕೆ. ಇಂದಿರಾರಂತಹ ಶ್ರೇಷ್ಠಮಟ್ಟದ ಬರಹಗಾರ್ತಿಯರು-ಕನ್ನಡದಲ್ಲಿ ಬರೆಯತೊಡಗಿ ಪಟ್ಟ ಅನುಭವ, ತೊಡಕು, ಎದುರಿಸಿದ ಪರಿಸ್ಥಿತಿಗಳು ಅವರ ತಲೆಯಲ್ಲಿದ್ದವು. ಮಾತನಾಡಲು ಎದ್ದುನಿಂತ ಈ ಬರಹಗಾರ್ತಿಯ ಬಾಯಿಂದ, ಲೇಖಕಿ ಪಟ್ಟ ಹಾಗೂ ಪಡಬೇಕಾದ ತೊಂದರೆಗಳ ಅಂತಃಕರಣ ನಿವೇದನೆಯಿತ್ತು. ಅದೇ ವೇದಿಕೆ ಮೇಲೆ ಮಂಡಿಸಿದ್ದ ಸರ್ಕಾರದ ಪ್ರತಿ ನಿಧಿಯನ್ನು ಕುರಿತು, "ಹೆಣ್ಣಿನ ಬಗೆಗೆ ಬಾಯಿ ಉಪಚಾರಗಳು ಇನ್ನು ಸಾಕು. ಬರಹಗಾರ್ತಿಯೊಬ್ಬಳು ತನ್ನ ಸ್ವತಂತ್ರ ವ್ಯಕ್ತಿತ್ವವನ್ನು ಉಳಿಸಿಕೊಂಡು, ತನ್ನದೇ ಅನುಭವ ಸಂಪತ್ತನ್ನು ಬೆಳೆಸಿಕೊಂಡು, ಶ್ರೇಷ್ಠ ಕೃತಿ ನಿರ್ಮಾಣದಲ್ಲಿ ತೊಡಗಲು ಸನ್ನಿವೇಶಗಳು ರಚಿತವಾಗಬೇಕು. ಲೇಖಕಿಯರ ಪುಸ್ತಕಗಳನ್ನು ಕೊಳ್ಳಲು ಸರ್ಕಾರ ಇನ್ನೂ ಹೆಚ್ಚಿನ ಔದಾರ್ಯದಿಂದ ಮುಂದೆ ಬರಬೇಕು" ಎಂದು ಹೇಳುತ್ತಾ ಈ ನಮ್ಮಿಬ್ಬರ ಕೃತಿಗಳನ್ನು ಖರೀದಿಸಿ ಪ್ರೋತ್ಸಾಹಿಸಬೇಕೆಂದು ಪಟ್ಟು ಹಿಡಿದು, ಒಪ್ಪಿಸಿಯೇ ಬಿಟ್ಟರು.

ಆ ವಿಶಾಲ ಹೃದಯದ ಹಿರಿಯ ಲೇಖಕಿಯೇ "ನಾನು ಕಂಡ ಡಾ। ಅನುಪಮಾ ನಿರಂಜನ." ಈ ಸೌಮ್ಯಮುಖ ಹಾಗೂ ಮನೋಭಾವದ ಲೇಖಕಿಯ ಹಿಂದೆ, ಒಂದು ಕಠಿಣ ಹೋರಾಟದ, ಒಂದು ಅಖಂಡ ಶಿಸ್ತಿನ, ಒಂದು ಬೃಹತ್ ನಂಬಿಕೆಯ ಬಾಳ್ವೆಯೇ ನೆಲೆಸಿದೆ. ಆ ಜೀವನ ಎಂಥವರನ್ನೂ ಸ್ಫೂರ್ತಿಗೊಳಿಸಬಲ್ಲದು.

ಮೂರು ದಶಕಗಳಿಗೂ ಹೆಚ್ಚು ಸಾಹಿತ್ಯಕೃಷಿಯಲ್ಲಿ ತೊಡಗಿ, ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿ, ಎಷ್ಟೇ ಎತ್ತರಕ್ಕೆ ಬೆಳೆದಿದ್ದರೂ, ಕಿರಿಯ ಲೇಖಕಿಯರ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ, ಹುರಿದುಂಬಿಸುವುದನ್ನು ಈ ಲೇಖಕಿ ಮರೆಯಲಿಲ್ಲ. ಕಿರಿಯ ಪ್ರತಿಭೆಗಳು ತಮ್ಮ ಜೊತೆಯಲ್ಲೇ ಬೆಳೆಯಬೇಕು ಎನ್ನುವ ಇವರ ಕಳಕಳಿ, ಹೃದಯವಂತಿಕೆಗಳು ನನ್ನನ್ನು ಅವರತ್ತ ಸೆಳೆದು ಸದಾ ನನ್ನ ಅಂತರಂಗದಲ್ಲಿ ಒಬ್ಬ ಉನ್ನತ ವ್ಯಕ್ತಿಯಾಗಿ ನಿಲ್ಲಲು ಮುಖ್ಯ ಕಾರಣವಾಯಿತು.

ಹೀಗೆ ಅವರೊಡನೆ ಒಂದಾದ ನನ್ನ ಮನಸ್ಸು, ಮುಂದೆ ಆರು ವರ್ಷಗಳ ಕಾಲ ಅವರ 'ಬದುಕು-ಬರಹ'ದ ವಿವಿಧ ಮಗ್ಗಲುಗಳನ್ನು ಅವಲೋಕಿಸಿ, ತಿಳಿದುಕೊಳ್ಳಲು ಹಲವಾರು ಅವಕಾಶಗಳು ನನಗೆ ದೊರೆತವು. ವೈಯಕ್ತಿಕ ಭೇಟಿಗಳು, ಸಂದರ್ಶನ, ವಿಚಾರಸಂಕಿರಣ, ಲೇಖಕಿಯರ ಸಮ್ಮೇಳನ, ನಿರಂಜನರ ಪುಸ್ತಕ ಬಿಡುಗಡೆಯ ಕಾರ್ಯಕ್ರಮಗಳು ಹೀಗೆ ಹತ್ತು ಹಲವಾರು ಅವಕಾಶಗಳ ಬಾಗಿಲು ತೆರೆದದ್ದರಿಂದ, ಅವರ ವ್ಯಕ್ತಿತ್ವದ ಹಲವು ಮುಖಗಳ ಬಗ್ಗೆ ಹಾಗೂ ಅವರ ಸಾಹಿತ್ಯ ಕೃಷಿ ಯಾವ ದಿಕ್ಕಿನಲ್ಲಿ ಹರಿಯುತ್ತಿದೆ ಎಂಬುದರ ಬಗ್ಗೆ ಹೆಚ್ಚು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

ಬದುಕಿನ ಪ್ರತಿ ಕ್ಷಣಕ್ಷಣವನ್ನೂ ಸದುಪಯೋಗಗೊಳಿಸಿ. ಯಾವುದೇ ಗುಂಪಿಗೆ ಒಳಪಡದೆ, ಬದುಕನ್ನು ಸಾರ್ಥಕಗೊಳಿಸಿಕೊಂಡ ಸೃಜನಶೀಲ ಲೇಖಕಿ ಡಾ। ಅನುಪಮಾ ನಿರಂಜನ. ಇವರ ಬರಹದ ಮೊದಲು, ಬದುಕಿನ ಬಗ್ಗೆ ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ, ಜೀವನವನ್ನು ಒಂದು ಸವಾಲಾಗಿ ಸ್ವೀಕರಿಸಿರುವಂತಹ ದಿಟ್ಟ ಲೇಖಕಿ ಎಂಬುದನ್ನು ಒಪ್ಪಿಕೊಳ್ಳಲೇ ಬೇಕು. ಹಲವಾರು ಕಠಿಣ ಹಂತಗಳನ್ನು ದಾಟಿ. ನಿರಂತರ ಹೋರಾಟ ನಡೆಸುತ್ತಿರುವ ಡಾ। ಅನುಪಮಾರ ವಿವಿಧ ಮುಖಗಳನ್ನು 'ತರಂಗ'ದಲ್ಲಿ ಹರಿದು ಬಂದ 'ಸಿಹಿ-ಕಹಿ' ಲೇಖನಮಾಲೆಯಿಂದ ತಿಳಿದುಕೊಳ್ಳಲು ನೆರವಾಯಿತು. ಎದೆಗುಂದದ ಇವರ ದಿಟ್ಟತನ, ಛಲಗಳು ಲವಲವಿಕೆಯಿಂದ ಬದುಕಲು ಇವರಿಗೆ ನೆರವಾಗಿವೆ. ಏನೇ ದುಃಖ ದುಮ್ಮಾನಗಳು ಎದುರಾದರೂ. ಅವುಗಳನ್ನು ಹಸನ್ಮುಖದಿಂದಲೇ ಆಹ್ವಾನಿಸಿ ಜೀವನವನ್ನು ಗಾಢವಾಗಿ ಪ್ರೀತಿಸುವವರು ಎಂಬುದು ಅವರನ್ನು ನಾನು ಅರ್ಥಮಾಡಿಕೊಂಡಿರುವ ರೀತಿ. ನಮ್ಮೆಲ್ಲ ಲೇಖಕಿಯರ ಬಳಗಕ್ಕೆ ಇವರು ದಿಟ್ಟತನದ ಜೀವಂತ ಸಂಕೇತ.

ಇವರ ಮತ್ತೊಂದು ಮುಖವಾದ ಸಾಹಿತ್ಯ ಸಾಧನೆಗಳ ಬಗ್ಗೆ ತಿಳಿದು ಕೊಳ್ಳಲು ಅವರ ಶ್ರೇಷ್ಠ ಕೃತಿಗಳಾದ ಎಳೆ, ಘೋಷ, ಋಣ, ಮಾಧವಿ, ಕೊಳಚೆ ಕೊಂಪೆಯ ದಾನಿಗಳು ಮುಂತಾದ ಹಲವು ಕೃತಿಗಳನ್ನು ಓದಿದಾಗ, ತಮ್ಮ ಸಾಹಿತ್ಯ ಕೃಷಿಗೆ ಇವರು ಆಯ್ದುಕೊಳ್ಳುವ ವಸ್ತುಗಳೇ ಭಿನ್ನವಾದವು, ಎಂಬುದರ ಮನವರಿಕೆ ಯಾಗುತ್ತದೆ.

ಜನಸಾಮಾನ್ಯರ ಅಂತರಂಗದ ನೋವು, ಬಡತನ, ಶೋಷಣೆ, ತುಳಿತ ಕ್ಕೊಳಗಾದವರ ಸೋತ ಧ್ವನಿಗಳು, ದಲಿತ ಜನಾಂಗದ ಬದುಕಿನ ಏರಿಳಿತ ಇವೇ ಮುಂತಾದ ಸಂಕೀರ್ಣ ಸಂಬಂಧಗಳನ್ನು, ವೈಜ್ಞಾನಿಕ ಹಾಗೂ ವೈಚಾರಿಕವಾಗಿ ಆಲೋಚಿಸಿ ಅದನ್ನು ಬರವಣಿಗೆಯ ಮೂಲಕ ಪ್ರತಿಬಿಂಬಿಸುವುದು ಇವರ ವಿಶೇಷ. ತನ್ನ ಸುತ್ತಮುತ್ತಲೂ ಕಂಡದ್ದನ್ನು, ಅನುಭವಿಸಿ ವಾಸ್ತವ ನೆಲಗಟ್ಟುಗಳ ಮೇಲೆ ನೋಡುವ ದಿಟ್ಟತನ ಈ ಕ್ರಿಯಾಶೀಲ ಲೇಖಕಿಯದು. ಈ ಹಿನ್ನಲೆಯಿಂದಲೇ ಸಾಹಿತ್ಯ ಕ್ಷೇತ್ರದಲ್ಲಿ ಅವರು ಒಂದು ಪ್ರತ್ಯೇಕತೆಯನ್ನು ಸಾಧಿಸಲು ಮುಖ್ಯ ಕಾರಣ. ಅವರ ಕೃತಿಗಳು ಗಟ್ಟಿಯಾದ ಕೃತಿಗಳಾಗಿ, ಶಾಶ್ವತವಾಗಿ ಸಾಹಿತ್ಯ ಕ್ಷೇತ್ರದಲ್ಲಿ ನಿಲ್ಲ ಬಲ್ಲವು ಎಂಬುದಕ್ಕೆ ಇವೇ ಹಲವು ಕಾರಣಗಳು. ಚಲನಚಿತ್ರವಾಗಿ ತೆರೆ ಕಂಡ ಅವರ 'ಋಣ' ಚಲನಚಿತ್ರವನ್ನು ವೀಕ್ಷಿಸಿದ ನಂತರ ಅವರ ಸಾಹಿತ್ಯಕ್ಷೇತ್ರದ ಆಯಾಮಗಳ ಬಗ್ಗೆ ಮತ್ತಷ್ಟು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಯಿತು.

ನಾನು ಅವರೊಡನೆ ಭಾಗಿಯಾಗಿದ್ದ ಹಾಗೂ ಅವರು ವೇದಿಕೆಗಳಲ್ಲಿ ಭಾಗವಹಿಸಿದ ಸಂದರ್ಭಗಳಲ್ಲಿ ಸಾಹಿತ್ಯಕ್ಷೇತ್ರದಲ್ಲಿ ಎದ್ದು ಕಾಣುವ ಅಸಮಾನತೆ, ತಾರತಮ್ಯಗಳ ಬಗ್ಗೆ ಅವರು ನೀಡಿದ ವಿಶ್ಲೇಷಣೆ, ಎಚ್ಚರಿಕೆ ಹಾಗೂ ಲೇಖಕಿಯರಿಗೆ ನೀಡಿದ ಸಂದೇಶಗಳು ಹಲವಾರು.

ಮಹಿಳೆ ಹಾಗೂ ಮಹಿಳಾ ಸಾಹಿತ್ಯದ ಬಗ್ಗೆ ಹಲವಾರು ವೇದಿಕೆಗಳಲ್ಲಿ ಚರ್ಚೆಯಾಗಿರುವ ಬಗ್ಗೆ, ಡಾ। ಅನುಪಮಾರ ನಿಲುವೇ ಬೇರೆ. ಪುರುಷ ಸಾಹಿತ್ಯ, ಮಹಿಳಾ ಸಾಹಿತ್ಯ ಮುಂತಾದ ವರ್ಗೀಕರಣದ ಚರ್ಚೆ ಮಾಡುವವರು, ಯಾವ ಲಿಂಗಭೇದವಿಲ್ಲದೆ, ಕೃತಿಯ ಮೌಲ್ಯವನ್ನು ಮಾತ್ರ ಪರಿಗಣಿಸಬೇಕೇ ವಿನಾ, ಆ ಕೃತಿ ಯನ್ನು ಯಾರು ರಚಿಸಿದ್ದಾರೆ, ಎಂಬುದು ಮುಖ್ಯವಲ್ಲವೆಂಬುದನ್ನು ಸ್ಪಷ್ಟ ಪಡಿಸಿದ್ದಾರೆ.

ಹಲವು ಮಹಿಳೆಯರು ಸಾಹಿತ್ಯವನ್ನು ಗೃಹ ಕೈಗಾರಿಕೆ ಮಾಡಿಕೊಂಡ ಮಾತ್ರಕ್ಕೆ, ಮಹಿಳೆಯರು ಉತ್ತಮ ಕೃತಿಗಳನ್ನು ರಚಿಸುತ್ತಿಲ್ಲವೆಂದು, ಅಲ್ಲಗಳೆಯುವ

ಪುರುಷ ಪ್ರಧಾನ ಸಮಾಜದ ಟೀಕೆಯನ್ನು ತಳ್ಳಿಹಾಕುವ ಡಾ। ಅನುಪಮಾ ಮಹಿಳೆಗೆ ಉತ್ತಮ ಪರಿಸರವಿದ್ದರೆ ಅತ್ಯುತ್ತಮ ಕೃತಿಯನ್ನು ರಚಿಸಲು ಸಾಧ್ಯವಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಪುರುಷ ಪ್ರಧಾನ ಸಮಾಜ ಶತಮಾನಗಳಿಂದ ಹೆಣ್ಣಿಗೆ ಅವಕಾಶಗಳನ್ನು ನೀಡದೆ ವಂಚಿಸಿದೆ. ಎಂಬುದನ್ನು ಮರೆತೇಬಿಟ್ಟಿದೆ. ಅವಳಿಗೆ ವಿಚಾರಶಕ್ತಿ ಬೆಳೆಸಿಕೊಳ್ಳಲು ಪ್ರೋತ್ಸಾಹ ನೀಡದೆ, ಅವಳನ್ನು ಯಾವುದಾದರೂ ರೀತಿಯಲ್ಲಿ ತುಳಿಯಲು ಸಾಧ್ಯವೇ ಎಂದು ಸಮಾಜ ಕಾಯುತ್ತಿರುತ್ತದೆ. ಈ ಎಲ್ಲ ಹಿನ್ನಲೆಯಲ್ಲೂ, ಕಠಿಣ ಹಂತಗಳಲ್ಲೂ ಮಹಿಳೆ ವಿಚಾರಪೂರ್ಣ ಕೃತಿಗಳನ್ನು ರಚಿಸುತ್ತಿದ್ದಾಳೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕು ಎಂಬುದು, ಲೇಖಕಿ ಅನುಪಮಾರ ನಿರ್ದಿಷ್ಟ ನಿಲುವು.

ಸಾಹಿತ್ಯದ ಆಳ, ವಿಸ್ತಾರಗಳನ್ನು ಚೆನ್ನಾಗಿ ಅಭ್ಯಸಿಸಿರುವ ಡಾ। ಅನುಪಮಾ, ಮಹಿಳೆಯರ ಸಮಸ್ಯೆಗಳನ್ನು ಕುರಿತಾದಂತಹ, ಬದುಕಿಗೆ ಒಂದು ಹೊಸ ತಿರುವು ಕೊಡುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಪೂರಕವಾದಂತಹ ಕೃತಿಗಳ ಕೊರತೆಯಿರುವ ಬಗ್ಗೆ ಒಪ್ಪಿಕೊಂಡರೂ, ಅದಕ್ಕೆ ಕಾರಣಗಳನ್ನು ತಿಳಿಸುತ್ತಾರೆ. ಇವರ 'ಎಳೆ' ಹಾಗೂ 'ಘೋಷ' ಈ ದಿಸೆಯಲ್ಲಿ ಮನನೀಯ ಕೃತಿಗಳು.

ಡಾ। ಅನುಪಮಾ ಅವರನ್ನು ಅವರ ಮನೆಯಲ್ಲಿ ನಾನು ಒಮ್ಮೆ ಭೇಟಿಯಾದಾಗ. ಮಹಿಳೆಯರಿಗೇ ಪ್ರತ್ಯೇಕ ಸಾಹಿತ್ಯ ಸಮ್ಮೇಳನಗಳ ಆವಶ್ಯಕತೆಯನ್ನು ಕುರಿತು ಪ್ರಸ್ತಾಪ ಬಂದಿತು. ಸದ್ಯದ ಪರಿಸ್ಥಿತಿಯಲ್ಲಿ ಮಹಿಳಾ ಸಮ್ಮೇಳನ ಆವಶ್ಯಕ ಎಂಬುದು ಇವರ ಅಭಿಪ್ರಾಯ. ಸಾಹಿತ್ಯ ಸಮ್ಮೇಳನದಲ್ಲಿ, ಮಹಿಳೆಯರಿಗೆ ಸಮಾನ ಅವಕಾಶ ದೊರಕುತ್ತಿಲ್ಲ ಹಾಗೂ ನಮ್ಮ ಮಹಿಳೆಯರಿಗೆ ಧೈರ್ಯ ಹಾಗೂ ಆತ್ಮವಿಶ್ವಾಸಗಳು ಹೆಚ್ಚಾಗುವ ವರೆಗೆ ನಮಗೆ ಮಹಿಳಾ ಸಮ್ಮೇಳನಗಳ ಆವಶ್ಯಕತೆಯುಂಟು ಎಂಬುದು ಈ ಲೇಖಕಿ ವ್ಯಕ್ತ ಪಡಿಸಿದ ಅಭಿಪ್ರಾಯ.

ನನ್ನಂತಹ ಕಿರಿಯ ಲೇಖಕಿಯರನ್ನು ಹಾಗೂ ಯುವ ದಂಪತಿಗಳನ್ನು ಭೇಟಿಯಾದ ಸಂದರ್ಭಗಳಲ್ಲಿ, ಹೆಣ್ಣು ಹಾಗೂ ಗಂಡು ಸಮಾನತೆ ಪಡೆಯಬೇಕಾದರೆ, ಈ ಎರಡು ಲಿಂಗಗಳ ನಡುವಿನ ಅಂತರ ಕಡಿಮೆಯಾಗಬೇಕು ಎಂದು, ಎಳೆ ಮನಸ್ಸುಗಳ ಪರಿವರ್ತನೆಗೆ ಇವರು ಸಲಹೆಗಳನ್ನು ನೀಡುತ್ತಲೆ ಇರುವುದು ಡಾ। ಅನುಪಮಾರ ಪ್ರಜ್ಞಾವಂತ ಮನಸ್ಸಿನ ಆಕಾಂಕ್ಷೆ. ಮನೆಯ ಕೆಲಸವನ್ನು ಹಾಗೂ ಜವಾಬ್ದಾರಿಯನ್ನು ಇಬ್ಬರೂ ಸಮನಾಗಿ ಹಂಚಿಕೊಂಡರೆ, ಆರ್ಥಿಕವಾಗಿ ಸ್ವತಂತ್ರವಾಗಿ, ಸಮಾನತೆಯನ್ನು ಸಾಧಿಸಬಹುದು ಎನ್ನುವ ಇವರು, ತಮ್ಮ ಜೀವನದಲ್ಲಿ ಸಮಾನ ಮನಸ್ಸುಳ್ಳ, ಸಮಾನ ಅಭಿರುಚಿಯುಳ್ಳ, ಹೆಸರಾಂತ ಸಾಹಿತಿ, 'ನಿರಂಜನರ' ಕೈ ಹಿಡಿದು, ಬದುಕು-ಬರಹದ ಹಾದಿಯಲ್ಲಿ ಮುನ್ನಡೆಯುತ್ತಿರುವುದು, ಒಂದು ಆದರ್ಶ ಉದಾಹರಣೆ.

ದಿನ ದಿನಕ್ಕೂ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯದ ಬಗ್ಗೆ ಡಾ। ಅನುಪಮಾರ ಹೃದಯಕ್ಕೆ ನೋವು ತಂದಿದೆ. ಈ ದಿಸೆಯಲ್ಲಿ, ಮಹಿಳೆಯರ ಪಾತ್ರವೇನು?' ಎಂದು ಸನ್ನೊಡನೆ ಚರ್ಚಿಸಿದ್ದಾರೆ. 'ಮಹಿಳಾ ಜಾಗೃತಿ' ವಿಚಾರ ಸಂಕಿರಣಗಳಲ್ಲಿ ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಭಾಗವಹಿಸುವುದುಂಟು. ಬಂಡವಾಳಶಾಹಿ ವ್ಯವಸ್ಥೆ ನಾಶವಾಗಿ, ಸಮಾಜವಾದಿ ವ್ಯವಸ್ಥೆ ಬಂದಾಗ ಮಾತ್ರ ನಮಗೆ ಸಮಾನತೆ ದೊರಕುತ್ತದೆ. ಈ ದಿಸೆಯಲ್ಲಿ ನಮ್ಮ ಹೋರಾಟ ಮುಂದುವರೆಯ ಬೇಕು ಎನ್ನುವ ಇವರ ವಿಚಾರಧಾರೆ ನನ್ನಂತಹ ಕಿರಿಯ ಲೇಖಕಿಯರನ್ನು ಹುರಿದುಂಬಿ ಸಲು ಒಂದು ಕಾರಣ.

ಪುಸ್ತಕ ವಿಮರ್ಶೆಯನ್ನು ಕುರಿತಾದಂತೆ ಇವರು ನೀಡಿರುವ ಸಲಹೆಗಳು ಮಾನನೀಯ. ಮಹಿಳೆಯರ ಕೃತಿಗಳೆಂದು ಪೂರ್ವಾಗ್ರಹಪೀಡಿತರಾಗಿ ವಿಮರ್ಶೆ ಮಾಡುವುದನ್ನು ಬಿಟ್ಟು, ಕೃತಿಯ ಮೌಲಿಕತೆಯನ್ನು ಪರಿಗಣಿಸಬೇಕು. ಆರೋಗ್ಯ ಕರವಾದ ಟೀಕೆಗಳನ್ನು ಸ್ವೀಕರಿಸಲು ನಾವು ಸದಾ ಸಿದ್ಧ ಎನ್ನುತ್ತಾರೆ ಡಾ। ಅನುಪಮಾ. ಲೇಖಕಿಯರ ಸಮ್ಮೇಳನಗಳಲ್ಲಿ ಭಾಗವಹಿಸಿದ ಸಂದರ್ಭಗಳಲ್ಲೆಲ್ಲಾ, ಹಿರಿಯ, ಕಿರಿಯ ಲೇಖಕಿಯರನ್ನು ಎಚ್ಚರಿಸದೆ ಬಿಟ್ಟಿಲ್ಲ. ಕಿರಿಯ ಲೇಖಕಿಯರ ಪುಸ್ತಕ ಪ್ರಕಟಣೆ, ಬರವಣಿಗೆ, ಹೀಗೆ ಹತ್ತು ಹಲವಾರು ವಿಧದಲ್ಲಿ ಸಹಾಯ ಹಸ್ತ ನೀಡಿರುವ ಇವರು ಈ ಎರಡು ವರ್ಗಗಳ ನಡುವೆ ಅಂತರವಿಲ್ಲದೆ ಹಿರಿಯರು ಕಿರಿಯರಿಗೆ ಮಾರ್ಗದರ್ಶಕ ರಾಗಿರಬೇಕೆಂದು ಲೇಖಕಿಯರಿಗೆ ಇವರು ನೀಡಿರುವ ಕರೆ ಹಾಗೂ ಕಿವಿಮಾತು.

ಮಹಿಳೆಯರು ಕೇವಲ 'ಕಾದಂಬರಿ' ಪ್ರಕಾರವನ್ನು ಮಾತ್ರ ಆಯ್ಕೆ ಮಾಡಿ ಕೊಂಡಿದ್ದಾರೆ ಎಂಬ ವಾದಕ್ಕೆ ಒಪ್ಪದ ಡಾ। ಅನುಪಮಾ, ಲೇಖಕಿಯರು ವಿವಿಧ ಪ್ರಕಾರಗಳಲ್ಲಿ ಕೃತಿ ರಚನೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಹಲವಾರು ವೇದಿಕೆ ಗಳಲ್ಲಿ ಹಲವಾರು ಉದಾಹರಣೆ ನೀಡಿದ್ದಾರೆ. ಡಾ। ಅನುಪಮಾ ಅವರ ಕೃತಿಗಳೇ ಈ ಅಪವಾದಕ್ಕೆ ಸವಾಲಾಗಿ ನಿಲ್ಲುತ್ತವೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ೪೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ, ಗಂಭೀರ ಕೃಷಿ ಮಾಡಿರುವ ಡಾ। ಅನುಪಮಾ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಮರ್ಥ ಅಭಿಯುಕ್ತಿಯುಳ್ಳ ಲೇಖಕಿ.

ಸರ್ವತೋಮುಖ ಪ್ರಜ್ಞೆಯುಳ್ಳ ಡಾ। ಅನುಪಮಾರವರನ್ನು ನಾನು ಒಬ್ಬ ವ್ಯಕ್ತಿಯಾಗಿ, ಮಹಿಳೆಯಾಗಿ, ಸಮರ್ಥ ಲೇಖಕಿಯಾಗಿ, ಮಾನವೀಯತೆಯನ್ನು ಮೈ ಮನದ ತುಂಬ ಹೊದ್ದ ಒಬ್ಬ ಶ್ರೇಷ್ಠ ಸುಸಂಸ್ಕೃತ ಮಹಿಳೆಯಾಗಿ ಕಂಡಿದ್ದೇನೆ.

ವೈದ್ಯೆಯಾಗಿ, ತಾಯಿಯಾಗಿ, ಗೃಹಿಣಿಯಾಗಿ ಬದುಕು ಬರಹದ ಎರಡು ನೊಗಗಳನ್ನು ಹೊತ್ತು, ದಿಟ್ಟ ಧೀರ ಹೆಜ್ಜೆಗಳನ್ನು ಹಾಕಿದ್ದಾರೆ. ನುಡಿದಂತೆ ನಡೆದು ಕೊಂಡಿದ್ದಾರೆ. ಯುವ ಪೀಳಿಗೆಗೆ ದಾರಿದೀವಿಗೆಯಾಗಿ, ಚೈತನ್ಯ ಚಿಲುಮೆಯಾಗಿ, ನಮಗೆ ಮಾರ್ಗದರ್ಶಕರಾಗಿ ಬೆಳಕು ನೀಡಿದ್ದಾರೆ.

ಡಾ। ಅನುಪಮಾರವರ ಬಗ್ಗೆ ಬರೆಯುವಾಗ, ಅವರ ಪತಿ 'ನಿರಂಜನ'ರನ್ನು ನೆನೆಯದಿರುವುದು ಅಕ್ಷಮ್ಯ ಅಪರಾಧವಾದೀತು. ಗಂಭೀರ ಬದುಕು, ಗಾಢವಾದ ಶಿಸ್ತು, ಜೀವನ ಪ್ರೇಮ, ಎಂತಹ ಪರಿಸ್ಥಿತಿಯಲ್ಲೂ ಧೃತಿಗೆಡದಂತಹ ನಿಲುವು-ಇವು ಡಾ। ಅನುಪಮಾರವರಿಗೆ ದೊರಕಿದ್ದು ಅವರ ಪತಿ 'ನಿರಂಜನ'ರಿಂದಲೇ ಎಂದು ಹೇಳ ಬೇಕು. ಸೃಜನಶೀಲವಾದ ಸಾಹಿತ್ಯಕೃತಿಗಳಲ್ಲಿ ಮಾತ್ರವೇ ಅಲ್ಲದೆ, ತಾವು ಪ್ರೀತಿಯಿಂದ ಆರಿಸಿಕೊಂಡ ನಿಜ ಜೀವನದಲ್ಲೂ ಕ್ರಿಯಾಶೀಲರಾಗಿ, ಕ್ರಿಯಾವಂತರಾಗಿ ಬದುಕು ತ್ತಿರುವ ಈ ಸಾಹಿತ್ಯಿಕ ದಂಪತಿಗಳು ಯಾರನ್ನು ಆಕರ್ಷಿಸುವುದಿಲ್ಲ? ಪತಿ-"ನಿರಂಜನ" ಪತ್ನಿ "ಅನುಪಮಾ"; ಅರ್ಥವತ್ತಾದ ಕಾವ್ಯನಾಮಾಂಕಿತಗಳಾಗಿವೆ - ಇವು.

ಅನುಪಮಾ ಮತ್ತು ಮಹಿಳಾಪರ ಚಳುವಳಿ ೧೮

-ಎನ್. ಗಾಯತ್ರಿ

೧೯೮೧ರ ಜೂನ್ ೩ರಂದು ಸಂಜೆ ಬೆಂಗಳೂರಿನಲ್ಲಿ ಮಹಿಳೆಯರ ಬೃಹತ್ ಮೆರವಣಿಗೆಯೊಂದು ಹೊರಟಿತ್ತು. ಸಂದರ್ಭ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕರ್ನಾಟಕ ಘಟಕದ ಸ್ಥಾಪನಾ ಸಮಾವೇಶ. ಮೆರವಣಿಗೆಯ ಮುಂಚೂಣಿಯಲ್ಲಿ ರಾಷ್ಟ್ರಮಟ್ಟದ ಮಹಿಳಾ ನಾಯಕಿಯರಾದ ಕಾಂ। ಸುಶೀಲಾ ಗೋಪಾಲನ್, ಕಾಂ। ವಿಮಲಾ ರಣದಿವೆ ಹಾಗೂ ಕಾಂ। ದೇವಕಿ ವಾರಿಯರ್ ಅವರು ಗಳು ಇದ್ದರು. ಮೆರವಣಿಗೆಯು ಬಹಿರಂಗ ಸಭೆಯನ್ನು ಏರ್ಪಡಿಸಿದ್ದ ಚಿಕ್ಕ ಲಾಲ್‌ಬಾಗ್‌ನ್ನು ಇನ್ನೇನು ಪ್ರವೇಶಿಸಬೇಕು, ಅಷ್ಟರಲ್ಲಿ ಮಹಿಳೆಯರಿಗೆ ಸ್ವಾಗತವೋ ಎನ್ನುವಂತೆ ರಭಸದಿಂದ ಮಳೆ ಸುರಿಯಲು ಆರಂಭವಾಯಿತು. ಆ ಮೆರವಣಿಗೆ ಯಲ್ಲಿದ್ದ ನಾನು ಪ್ರವೇಶ ದ್ವಾರದಲ್ಲಿದ್ದ ಡಾ। ಅನುಪಮಾರನ್ನು ಕಂಡು ದಂಗಾದೆ. ಅನುಪಮಾರು ಜೊತೆಯಲ್ಲಿ ತಮ್ಮ ಮಗಳೊಂದಿಗೆ (ಸೀಮಂತಿನಿಯೋ,ತೇಜಸ್ವಿನಿಯೋ ನೆನಪಿಲ್ಲ; ಮರೆತಿರುವೆ.) ಕೊಡೆ ಹಿಡಿದು ನಿಂತಿದ್ದರು. ಆಗ ಅವರ ಆರೋಗ್ಯ ಅಷ್ಟೊಂದು ಚೆನ್ನಾಗಿರಲಿಲ್ಲ. ಅವರ ಅನಾರೋಗ್ಯದ ನಡುವೆಯೂ ಆ ಸುರಿಯುವ ಮಳೆಯಲ್ಲಿ ಬಹಿರಂಗ ಸಭೆಗೆ ಬಂದದ್ದು ಮತ್ತು ಕಾರ್ಯಕ್ರಮ ಪೂರ್ತಿಯಾಗುವ ವರೆಗೂ ಇದ್ದು ಹೋದದ್ದು, ಆ ಚಿತ್ರ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಡಾ। ಅನುಪಮಾ ನಿರಂಜನರನ್ನು ಕನ್ನಡದ ಜನಪ್ರಿಯ ಲೇಖಕಿ ಹಾಗೂ ಕನ್ನಡದಲ್ಲಿ ವೈದ್ಯಕೀಯ ಲೇಖನಗಳನ್ನು ಬರೆದಿರುವ ಸಾಹಿತಿಯಾಗಿ ಸಾಮಾನ್ಯವಾಗಿ ಗುರುತಿಸುವುದು ರೂಢಿ. ಆದರೆ ಮಹಿಳಾ ಚಳುವಳಿಯೊಂದಿಗೆ ಅವರು ಹೊಂದಿರುವ ಸಂಪರ್ಕವನ್ನು ಕುರಿತಂತೆ ಅವರ ಅಪರೂಪದ ಮುಖದ ಪರಿಚಯ ಎಷ್ಟು

ಜನರಿಗಿದೆಯೋ ನಾ ಕಾಣೆ. ಆದರೆ ನಾ ಕಂಡಂತೆ ಮಹಿಳಾ ಚಳುವಳಿಯೊಂದಿಗೆ ಸಂಪರ್ಕವಿರಿಸಿಕೊಂಡು ಚಳುವಳಿಯ ಬಗ್ಗೆ ಗೌರವದ ಭಾವನೆಯನ್ನು ಹೊಂದಿರುವ ಅನುಪಮಾರು ನಮ್ಮ ಹಿರಿಯ ಲೇಖಕಿಯರಲ್ಲಿ ಈ ಕಾರಣಕ್ಕಾಗಿಯೇ ವಿಶಿಷ್ಟವಾಗಿ ನಿಲ್ಲುತ್ತಾರೆ.

ಕಾಲೇಜಿನ ವಿದ್ಯಾರ್ಥಿ ಜೀವನದಲ್ಲಿ ಸ್ಟೂಡೆಂಟ್ಸ್ ಫೆಡರೇಷನ್‌ನೊಂದಿಗೆ ಸಂಪರ್ಕವಿರಿಸಿಕೊಂಡಿದ್ದ ಅನುಪಮಾ ಚಳುವಳಿಯ ಮೊದಲ ಅಕ್ಷರಾಭ್ಯಾಸ ಅಲ್ಲಿಂದಲೇ ಆರಂಭಿಸಿರಬೇಕು. ಅವರ ಜೀವನದ ಘಟನೆಗಳಲ್ಲಿ ಅವರು ತೆಗೆದುಕೊಂಡ ನಿರ್ಧಾರ ಅವರ ವ್ಯಕ್ತಿತ್ವದ ಸ್ವರೂಪವನ್ನು ಪರಿಚಯಿಸುತ್ತದೆ. ಕಮ್ಯೂನಿಸ್ಟ್ ಚಳುವಳಿಯಲ್ಲಿದ್ದು, ಭೂಗತವಾಗುವಂತಹ ಕ್ರಾಂತಿಕಾರಿ ಚಟುವಟಿಕೆಯ ಬರಹಗಾರನನ್ನು ಬಾಳ ಸಂಗಾತಿಯಾಗಿ ಆಯ್ಕೆ ಮಾಡಿಕೊಂಡ ಅವರ ನಿಲುವು ಅವರ ಆಸಕ್ತಿಯನ್ನು ತೋರಿಸುತ್ತದೆ. ಅಂದಿನ ಸಂಪ್ರದಾಯಶರಣ ಸಮಾಜದಲ್ಲಿ ಹೆತ್ತವರ ಇಚ್ಛೆಗೆ ವಿರುದ್ಧವಾಗಿ ಬೇರೆ ಜಾತಿಯವನಾದರೂ ತಾನೊಲಿದವನನ್ನು ಮದುವೆಯಾಗುವ ನಿರ್ಧಾರ ತೆಗೆದುಕೊಂಡು ಯಶಸ್ವಿಯಾದದ್ದು ಬಾಳಿನಲ್ಲಿ ತನ್ನತನವನ್ನು ಸ್ಥಾಪಿಸಿಕೊಳ್ಳುವ ದಿಟ್ಟತನವನ್ನು ಹಾಗೂ ಅವರ ಆತ್ಮಗೌರವ, ಸ್ವಾಭಿಮಾನವನ್ನು ಸೂಚಿಸುತ್ತದೆ.

ಅನುಪಮಾ ನನಗೆ ಮೊದಲು ಪರಿಚಯವಾದದ್ದು ಡಾಕ್ಟರರಾಗಿ. ನನ್ನ ಗೆಳತಿ ಗಾಯತ್ರಿ ಅನುಪಮಾರನ್ನು ನನಗೆ ವೈದ್ಯೆಯಾಗಿ ಭೇಟಿ ಮಾಡಿಸಿದ್ದಳು. ಅವರ ಬಳಿ ನಾನು ರೋಗಿಯಾಗಿ ಒಂದೆರಡು ಬಾರಿ ಹೋಗಿರಬಹುದು. ಆಗೊಮ್ಮೆ ಅವರು ತಮ್ಮ ಸ್ನೇಹಿತರೊಬ್ಬರಿಗೆ ನನ್ನನ್ನು 'ಬರಹಗಾರ ಸ್ನೇಹಿತೆ'ಯೆಂದು ಪರಿಚಯಿಸಿದ ನೆನಪು. ಆದರೆ ನಾನು ಅದೆಂತಹ ಬರಹಗಾರಳೋ ನನಗೇ ಗೊತ್ತಿಲ್ಲ. ಹಾಗೆಯೇ ನನ್ನ ಮತ್ತು ಅನುಪಮಾರ ಸಂಬಂಧ ಕೂಡ ಸಾಹಿತ್ಯಿಕ ವಲಯದಲ್ಲಾಗಲೀ, ಸಾಹಿತ್ಯಿಕ ಕಾರಣಗಳಿಗಾಗಲೀ ಆದದ್ದು ತೀರ ಅತ್ಯಲ್ಪ. ನಮ್ಮ ಸಂಬಂಧ ಹೆಚ್ಚು ಗಾಢವಾದದ್ದು ಮತ್ತು ಅರ್ಥಪೂರ್ಣವಾದದ್ದು ಮಹಿಳಾ ಚಳುವಳಿಯ ಸಂಪರ್ಕದಿಂದಾಗಿಯೇ ಎಂದು ನನ್ನ ಭಾವನೆ.

೧೯೭೫, ಅಂತರರಾಷ್ಟ್ರೀಯ ಮಹಿಳಾ ವರ್ಷ. ಆಗ ಕರ್ನಾಟಕದಲ್ಲಿ ಮೊದಲ ಬಾರಿಗೆ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್‌ನ ಕರ್ನಾಟಕ ಶಾಖೆಯನ್ನು ಸ್ಥಾಪಿಸಲು ಪ್ರಯತ್ನ ನಡೆಯಿತು. ಅದೇ ಕರ್ನಾಟಕ ರಾಜ್ಯ ಮಹಿಳಾ ಸಂಘ. ಈ ಕರ್ನಾಟಕ ರಾಜ್ಯ ಮಹಿಳಾ ಸಂಘದ ಮೊದಲ ಅಧ್ಯಕ್ಷೆಯಾಗಿ ಅನುಪಮಾ ಆಯ್ಕೆಯಾದರು. ಈ ಮಹಿಳಾ ಸಂಘಟನೆಯ ವತಿಯಿಂದ ಅದೇ ವರ್ಷ ಮೇ ತಿಂಗಳಲ್ಲಿ ನಡೆಸಿದ ದುಡಿಯುವ ಮಹಿಳೆಯರ ಸಮ್ಮೇಳನದಲ್ಲೂ ಅನುಪಮಾರದು ಸಕ್ರಿಯ ಪಾತ್ರ. ಮುಂದೆ ಇದೇ ಸಂಘಟನೆಯನ್ನು ಪ್ರತಿನಿಧಿಸಿ ಬರ್ಲಿನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ನಲ್ಲೂ ಭಾಗವಹಿಸಿದರು.

೧೯೮೧ರ ಜೂನ್‌ನಲ್ಲಿ ಬೆಂಗಳೂರಿನಲ್ಲಿ ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕರ್ನಾಟಕ ಘಟಕವನ್ನು ಸ್ಥಾಪಿಸುವ ಸ್ಥಾಪನಾ ಸಮಾವೇಶ ನಡೆಯಿತು. ಅದರ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿದ್ದ ನಾನು ಆ ಸಂದರ್ಭದಲ್ಲಿ ಅನುಪಮಾರನ್ನು ಹಲವಾರು ಬಾರಿ ಸಂಪರ್ಕಿಸಿದೆ. ಆ ಸಮಾವೇಶವನ್ನು ಕಾ॥ ಸುಶೀಲಾ ಗೋಪಾಲನ್ ಉದ್ಘಾಟಿಸಿದರೆ, ಅನುಪಮಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರ ಅಧ್ಯಕ್ಷ ಭಾಷಣದಲ್ಲಿ ಸೈದ್ಧಾಂತಿಕ ಸ್ಪಷ್ಟತೆಯಿಂದ ಅವರು ಹೇಳಿದ ಕೆಲವು ಮಾತುಗಳು ಈಗಲೂ ನನ್ನ ನೆನಪಿನಲ್ಲಿವೆ. ಮಹಿಳಾ ಹೋರಾಟದ ಬಗ್ಗೆ ಸ್ಪಷ್ಟ ಚಿಂತನೆಯನ್ನು ಅವರ ಅಧ್ಯಕ್ಷ ಭಾಷಣದಲ್ಲಿ ಗುರುತಿಸಬಹುದಾಗಿದೆ:

“ಕೃಷಿ ಮತ್ತು ಕೈಗಾರಿಕಾ ಕಾರ್ಮಿಕರು, ಕೂಲಿಗಾರರು, ಸಣ್ಣಪುಟ್ಟ ಕಾರ್ಖಾನೆಗಳಲ್ಲಿ ದುಡಿಯುವವರು ಅಲ್ಲದೆ ಜೀವನದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ತಮ್ಮ ತಮ್ಮ ವಲಯಗಳಲ್ಲಿ ಸಂಘಟಿತರಾಗಬೇಕು. ಇದರಿಂದ ಅವರಿಗೆ ಆತ್ಮವಿಶ್ವಾಸ ಮತ್ತು ಧೈರ್ಯ ಹುಟ್ಟುತ್ತವೆ. ಆಗ ತಮಗಾಗುತ್ತಿರುವ ಶೋಷಣೆಯನ್ನು ಖಂಡಿಸಿ, ಸಮಾನ ಹಕ್ಕುಗಳಿಗಾಗಿ ಅವರು ಹೋರಾಡಲು ಸಾಧ್ಯವಾಗುತ್ತದೆ.ಈ ಸಂಘಟನಾ ಹೋರಾಟಗಳಿಂದ ಸಣ್ಣಪುಟ್ಟ ಗೆಲುವು ಸಿಗಬಹುದು. ಆದರೆ ಇಷ್ಟಕ್ಕೆ ಅವರು ತೃಪ್ತರಾಗಬಾರದು. ಅಂತಿಮವಾದ ಗುರಿ ಅಸಮತೆಯ ಸಮಾಜದ ಬದಲಾವಣೆ ಎಂಬುದನ್ನು ನೆನಪಿನಲ್ಲಿಡಬೇಕು. ಪ್ರತಿಯೊಂದು ಹೋರಾಟವೂ ಆ ದಿಸೆಯಲ್ಲಿ ಇಡತಕ್ಕ ಒಂದು ಹೆಜ್ಜೆ ಎಂಬುದು ಜನರಿಗೆ ಸ್ಪಷ್ಟವಾಗಬೇಕು.”

ಮಹಿಳಾ ಚಳುವಳಿಯ ಬಗ್ಗೆ ಸ್ಪಷ್ಟ ಕಲ್ಪನೆಯಿರುವ ಅನುಪಮಾರಿಗೆ ಸಂಘಟನೆಯ ಕಷ್ಟ-ಸುಖಗಳು, ಸೋಲು-ಗೆಲುವುಗಳು ಎಲ್ಲದರ ಪರಿಚಯವೂ ಉಂಟು. ಚಳುವಳಿಯ ಮೌಲ್ಯ ತಿಳಿದಿರುವ ಅವರು ಅವರ ಅನಾರೋಗ್ಯದ ನಡುವೆಯೂ ತಮ್ಮೆಲ್ಲ ಸ್ನೇಹ ಹಸ್ತ ನೀಡಿ ಚಳುವಳಿಯನ್ನು ಬಲಪಡಿಸುವುದಕ್ಕೆ ಕಾರಣವಾಗಿದ್ದಾರೆ. ನಾವು ಕೆಲವೊಂದು ಸ್ನೇಹಿತೆಯರು ಕರ್ನಾಟಕದಲ್ಲಿ ಮಹಿಳಾ ಚಳುವಳಿಗೆ ನೆರವಾಗುವಂತಹ ಮಹಿಳಾ ಪತ್ರಿಕೆಯೊಂದನ್ನು ತರಬೇಕೆಂದು ನಿರ್ಧರಿಸಿ ಅವರ ಸಲಹೆ, ಸೂಚನೆ ಕೇಳ-ಹೋದಾಗ ನಮ್ಮ ಕಾರ್ಯಕ್ರಮಕ್ಕೆ ಪ್ರೋತ್ಸಾಹಿಸಿ ಯಶಸ್ಸು ಕೋರಿದರು. ಹಾಗೆಯೇ ನಮ್ಮ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ಮಹಿಳಾ ಪತ್ರಿಕೆ ‘ಅಚಲ’ ಎಂಬ ನೂತನ ನಾಮಧೇಯದಿಂದ ಹೊರಬಂದಾಗ ಅದನ್ನು ಬಿಡುಗಡೆ ಮಾಡಿದ ಅನುಪಮಾರು ಪತ್ರಿಕೆಗಿರುವ ಆರ್ಥಿಕ ಮುಗ್ಗಟ್ಟನ್ನು ತಾವೇ ವಿವರಿಸಿ, ಅಂದಿನ ಸಭೆಯ ಮುಖ್ಯ ಅತಿಥಿಯಾಗಿದ್ದ ಎಂ. ಪಿ. ಪ್ರಕಾಶ್‌ರವರಿಗೆ ಪತ್ರಿಕೆಗೆ ಸರ್ಕಾರ ಧನಸಹಾಯ ನೀಡಬೇಕೆಂದು ಪತ್ರಿಕೆಯ ಪರವಾಗಿ

ಕೇಳಿಕೊಂಡರು. ಸ್ವತಃ ಪತ್ರಿಕೆಯ ಆಜೀವ ಚಂದಾದಾರರಾಗಿರುವ ಅನುಪಮಾರು ಸಾಹಿತ್ಯವಲಯದ ಸ್ನೇಹಿತರಿಗೆ ಪತ್ರಿಕೆಗೆ ಚಂದಾದಾರರಾಗುವಂತೆ ಒತ್ತಾಯಿಸಿ ಪತ್ರಿಕೆಯನ್ನು ಪ್ರೋತ್ಸಾಹಿಸಿದ್ದಾರೆ.

ಅನಾರೋಗ್ಯದ ನಡುವೆಯೂ ಬರೆಯುವ, ಕೆಲಸ ಮಾಡುವ ಅನುಪಮಾರವರು ಜೀವನದ ಕಾರ್ಯಕ್ರಮಗಳನ್ನು ಆಯ್ಕೆ ಮಾಡಿಕೊಳ್ಳಬೇಕಾದುದು ಅನಿವಾರ್ಯ. ಹಾಗೆಯೇ ಅವರನ್ನು ಯಾವುದೇ ಸಭೆ, ಸಮಾರಂಭಗಳಿಗೆ ಆಹ್ವಾನಿಸಲಿ ಮಹಿಳಾ ಸಂಘಟನೆಗೆ ಸಂಬಂಧಿಸಿದ ಕಾರ್ಯಕ್ರಮಕ್ಕೆ ಅವರದು ಮೊದಲ ಆದ್ಯತೆ. ವೈಯಕ್ತಿಕವಾಗಿ ನನ್ನ ಅನುಭವದಿಂದ ಹೇಳುವುದಾದರೆ ನಮ್ಮ ಸಂಘಟನೆಯು ಬಹಳಷ್ಟು ಕಾರ್ಯಕ್ರಮಗಳಿಗೆ ಅನುಪಮಾ ಮುಖ್ಯ ಅತಿಥಿಯಾಗಿ ಬಂದಿದ್ದಾರೆ. ಅದು ಸಮ್ಮೇಳನದ ಅಧ್ಯಕ್ಷತೆ, ಪತ್ರಿಕೆಯ ಉದ್ಘಾಟನೆಯಂತಹ ಮಹತ್ವದ ಕಾರ್ಯಕ್ರಮವಿರಲಿ, ಅಧ್ಯಯನ ಕೂಟದ ತಿಂಗಳ ಭಾಷಣವಿರಲಿ-ಎಲ್ಲದಕ್ಕೂ ಸಮಾನವಾದ ಪ್ರಾಮುಖ್ಯ ಕೊಟ್ಟು ಸಹಜವಾಗಿ ಭಾಗವಹಿಸಿದ್ದಾರೆ.

ಯಾವುದೇ ಚಳುವಳಿಯೊಂದರ ಹುಟ್ಟು ಮತ್ತು ಬೆಳವಣಿಗೆಗೆ ಸಹಸ್ರಾರು ಕೈಗಳ ಕಾರ್ಯ ಕಾರಣವಾಗಿರುತ್ತದೆ. ಹಲವು ರೀತಿಯ, ಹಲವು ಮುಖದ, ಹಲವು ಸ್ವರೂಪದ ಕಾರ್ಯ ವೈಖರಿಯ ಅಗತ್ಯವಿರುತ್ತದೆ. ಚಳುವಳಿಯ ಸಕ್ರಿಯ ಕಾರ್ಯಕರ್ತರಿಷ್ಟರಿಂದಲೇ ಚಳುವಳಿಯು ಬೆಳೆಯುತ್ತದೆಂಬುದು ತಪ್ಪಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಜಾಗೃತವಾದ ಸ್ತ್ರೀ ಪ್ರಜ್ಞೆಯನ್ನು ತಮ್ಮ ಜೀವನ ಹಾಗೂ ಕೃತಿಗಳಲ್ಲಿ, ಕಾರ್ಯಚಟುವಟಿಕೆಗಳಲ್ಲಿ ಮೆರೆದು ಅನುಪಮಾರವರು ಮಹಿಳಾ ಚಳುವಳಿಗೆ ತಮ್ಮದೇ ಆದ ವಿಶಿಷ್ಟ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಅನುಪಮ ಸ್ನೇಹ ೧.

-ಚಿ. ನ. ಮಂಗಳಾ

ಭಿನ್ನ ಭಿನ್ನ ವಾತಾವರಣದಲ್ಲಿ ಬೆಳೆದ, ತೀರ ವ್ಯತಿರಿಕ್ತವೆನಿಸಿದ ನಂಬಿಕೆಗಳನ್ನುಳ್ಳ ಇಬ್ಬರು ವ್ಯಕ್ತಿಗಳು ಇಪ್ಪತ್ತೈದು ವರುಷ ಅತ್ಯಂತ ಆತ್ಮೀಯರಾಗಿರಲು ಸಾಧ್ಯವೆ? ಸಾಧ್ಯ ಎನ್ನುವುದಕ್ಕೆ ನನ್ನ ಮತ್ತು ಅನುಪಮಾ ಅವರ ಸ್ನೇಹವೇ ಅತ್ಯುತ್ತಮ ನಿದರ್ಶನ. ಅನೇಕರು ನನ್ನನ್ನು ಕೇಳುವ ಪ್ರಶ್ನೆಯನ್ನೇ ನಾನು ಅವರನ್ನು ಕೇಳಿದೆ-ಅವರ ಪರಿಚಯವಾದ ೨೫ ವರುಷದ ಮೇಲೆ.

ಪ್ರಶ್ನೆ: "ಅನುಪಮಾ ಅವರೇ, ನಮ್ಮ ನಿಮ್ಮ ನಂಬಿಕೆಗಳು, ಬಾಳ ಹಾದಿಗಳು ಬೇರೆ ಬೇರೆ. ತೀರ ಭಿನ್ನವೆಂದೇ ಹೇಳಬೇಕು. ದೇವರನ್ನೇ ನಂಬಿದವಳು ನಾನು. ದೇವರ ಅಸ್ತಿತ್ವವನ್ನೇ ಪ್ರಶ್ನಿಸುವವರು ನೀವು. ಹೀಗಿದ್ದರೂ ಕಳೆದ ಇಪ್ಪತ್ತೈದು ವರುಷದಿಂದ (ನಾನು ಅವರನ್ನು ಮೊದಲು ನೋಡಿದ್ದು ೧೯೬೫ರಲ್ಲಿ) ನಾವು ಆತ್ಮೀಯರಾಗಿದ್ದೇವೆ. ನಮ್ಮ ಪ್ರೀತಿ ವಿಶ್ವಾಸ ಕುಂದಿಲ್ಲ. ಅಕ್ಕ ತಂಗಿ ಎಂದೇ ಅನೇಕರ ಅನಿಸಿಕೆ. ಇದಕ್ಕೆ ಕಾರಣ ಹೇಳಬಲ್ಲಿರಾ?"

ಉತ್ತರ: "ನಿರ್ಮಲವಾದ ಸ್ನೇಹಕ್ಕೆ ಯಾವ ಅಡೆತಡೆಗಳಿಲ್ಲ. ಸೋದರಿಯರ ಹಾಗೆ ನಾವು ಕಷ್ಟ ಸುಖಗಳ ಬಗ್ಗೆ ಮಾತಾಡಿದ್ದೇವೆ. ನಮ್ಮ ಸಾಧನೆಗಳ ಬಗ್ಗೆ ಮಾತ್ರವಲ್ಲದೆ ಸೋಲುಗಳ ಬಗ್ಗೆಯೂ ಚರ್ಚಿಸಿದ್ದೇವೆ. ಬಾಹ್ಯ ಲೋಕದ ನಂಬಿಕೆಗಳಿಗಿಂತ ಹೆಚ್ಚಾಗಿ ಪರಸ್ಪರ ಇರುವ ಗೌರವ, ವಿಶ್ವಾಸ ಮುಖ್ಯವಾಗುತ್ತದೆ. ನಮ್ಮಲ್ಲಿ ಕೆಲವು ಸಮಾನ ರೀತಿಯ ಗುಣಗಳೂ ಇವೆ. ಉದಾಹರಣೆಗೆ ದುಡಿಯುವುದರಲ್ಲೇ ಆನಂದ ಪಡುವುದು, ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಯಾವುದಾದರೂ ಕೆಲಸದಲ್ಲಿ ತೊಡಗುವುದು, ಬದುಕಿದ್ದಕ್ಕೆ ನಾಲ್ಕು ಜನರಿಗೆ ಯಾವ ರೀತಿಯಿಂದಾದರೂ ನೆರವಾಗಬೇಕು ಎನ್ನುವ ಮನೋಧರ್ಮ ಇತ್ಯಾದಿ. ಆದ್ದರಿಂದ ಇದು ನಿಷ್ಕಲಂಕವಾದ, ಶುದ್ಧ ಸ್ನೇಹ".

ಇದು ಶುದ್ಧ ಸ್ನೇಹವಷ್ಟೇ ಅಲ್ಲ ಅನುಪಮ ಸ್ನೇಹ.

ಎಂತಹ ಕಷ್ಟದಲ್ಲೂ ನಗುನಗುತ್ತಲೇ ಬದುಕನ್ನು ಸ್ವೀಕರಿಸಿರುವ ಅನುಪಮಾ ಅವರು ಇಂದಿನ ಸಾಹಿತ್ಯಕ್ಷೇತ್ರದಲ್ಲಿರುವ ಚಿಂತನಶೀಲ ಬರಹಗಾರ್ತಿ. ಬದುಕಿನ ಆಳಕ್ಕೆ ಇಳಿದವರು. ವಿವಿಧ ಅನುಭವಗಳನ್ನು ತಮ್ಮದಾಗಿಸಿಕೊಂಡವರು. ಈ ಅನುಭವಗಳ ಅಭಿವ್ಯಕ್ತಿಗಾಗಿ, ಭಾಷೆ ಭಾವಗಳ ಸಮನ್ವಯಕ್ಕಾಗಿ ಪ್ರಾಮಾಣಿಕ

ಪ್ರಯತ್ನಗಳನ್ನು ಮಾಡುತ್ತಿರುವವರು. ಜೊತೆಗೆ ವಿಶ್ವದ ಇತರ ಸಾಹಿತ್ಯ ಪ್ರಕಾರಗಳ ಪರಿಚಯ ಮಾಡಿಕೊಂಡಿರುವವರು. 'ತೋಚಿದ್ದನ್ನು ಗೀಚುವ' ಜಾಯಮಾನದವರಾಗದೆ 'ಸಾಹಿತ್ಯ' ಮತ್ತು 'ಸಾಹಿತಿ'ಯ ಬೆಳವಣಿಗೆಯಲ್ಲಿ ನಂಬಿಕೆಯುಳ್ಳವರು. ಸಾಹಿತ್ಯದ ಇಂದಿನ ಆಗುಹೋಗುಗಳನ್ನು ಗಮನಿಸುತ್ತಿರುವವರು. ಅಷ್ಟೇ ಅಲ್ಲ. ಅವುಗಳಿಗೆ ಪ್ರತಿಕ್ರಿಯಿಸುತ್ತಿರುವವರು. ಅವರನ್ನು ಕೇಳಲೇಬೇಕಾದ ಒಂದು ಪ್ರಶ್ನೆ ಕೇಳಿದೆ.

ಪ್ರಶ್ನೆ: "ದಲಿತ/ಬಂಡಾಯ ಸಾಹಿತ್ಯದ ಅನಂತರದ ಚಿತ್ರವನ್ನು ಚಿತ್ರಿಸಬಲ್ಲಿರಾ?"

ಉತ್ತರ: "ಇತ್ತೀಚಿನ ನಾಲ್ಕೈದು ವರ್ಷಗಳ ಸಾಹಿತ್ಯವನ್ನು ಗಮನಿಸಿದಾಗ ತುಸು ನಿರಾಸೆಯೇ ಆಗುತ್ತದೆ. ಕಾವ್ಯದಲ್ಲಿ ಕೆಲವು ಹೊಸ ಪ್ರಯೋಗಗಳಾಗಿರುವುದು ನಿಜ. ಆದರೆ ಗದ್ಯದಲ್ಲಿ ಈ ಅವಧಿಯಲ್ಲಿ ಶ್ರೇಷ್ಠ ಎನಿಸಿಕೊಳ್ಳುವ ಕೃತಿಗಳು ಬಗಲಿಲ್ಲ. ಒಂದು ರೀತಿಯಲ್ಲಿ ಇದು ಸ್ಥಿತ್ಯಂತರದ ಕಾಲ. ಹೆಪ್ಪುಗಟ್ಟಿದ ಮೌನದಾಚೆ ಹೊಸ ಚಿಗುರು ಇದ್ದೇ ಇರುತ್ತದೆ."

ಮತ್ತೆ ನನ್ನದೊಂದು ಪ್ರಶ್ನೆ. ಸಾಹಿತ್ಯವನ್ನು ಬಿಟ್ಟರೆ ಬೇರೆ ಯಾವ ಕಲಾಪ್ರಕಾರದಲ್ಲೂ ಹೆಣ್ಣು ಗಂಡು ಎಂಬ 'ಲೇಬಲ್'ಗಳಿಲ್ಲ. ಸಂಗೀತದಲ್ಲಾಗಲಿ, ನಾಟ್ಯದಲ್ಲಾಗಲಿ, ಚಿತ್ರಕಲೆಯಲ್ಲಾಗಲಿ, ಶಿಲ್ಪದಲ್ಲಾಗಲಿ, ಮಹಿಳೆ ಮಹಸೀಯ ಎಂಬ ಭೇದವಿಲ್ಲ. ಆದರೆ ಸಾಹಿತ್ಯದಲ್ಲಿ ಮಾತ್ರ ಅದೇಕೋ ಏನೋ 'ಮಹಿಳಾ ಸಾಹಿತ್ಯ' ಎಂಬ 'ಲೇಬಲ್' ಬಹಳ ಮಟ್ಟಿಗೆ ಬರಹಗಾರ್ತಿಯರನ್ನು ಕಾಡುತ್ತದೆ. ಅನುಪಮಾ ಮಹಿಳೆಯಾಗಿ, ಬರಹಗಾರ್ತಿಯಾಗಿ ಮಹಿಳೆಯರ ಕೃತಿಗಳ ಬಗ್ಗೆ ಏನನ್ನುಹೇಳಲಿಚ್ಛಿಸುತ್ತಾರೆ?

ಪ್ರಶ್ನೆ: "ಇಂದು ಬರೆಯುತ್ತಿರುವ ಮಹಿಳೆಯರ ಬಗ್ಗೆ ನಿಮ್ಮ ಅನಿಸಿಕೆ ಏನು?"

ಉತ್ತರ: ಶೇಕಡಾ ಎಂಬತ್ತರಷ್ಟು ಕೃತಿಗಳು 'ಜೊಳ್ಳು' ಎಂದೇ ಹೇಳಬೇಕು. ಆದರೆ ಉಳಿದ ಇಪ್ಪತ್ತರಷ್ಟು ಲೇಖಕಿಯರು ಗಂಭೀರ ಬರಹದ ಬರಹಗಾರ್ತಿಯರಾದುದರಿಂದ ಸ್ವಲ್ಪ ಮಟ್ಟಿಗಿನ ಆಸೆ ಇಟ್ಟುಕೊಳ್ಳಬಹುದು. ಈ ಲೇಖಕಿಯರು ವಿದ್ಯಾವತಿಯರೂ, ಹೊಸ ಆಲೋಚನೆಯಿರುವವರೂ, ಉದ್ಯೋಗಸ್ಥರೂ ಆಗಿರುವುದರಿಂದ ಸಹಜವಾಗಿ ಅವರ ಅನುಭವದ ಪರಿಧಿ ವಿಸ್ತಾರವಾಗಿದೆ. ಈ ಅನುಭವವನ್ನು ಕಲೆಯಾಗಿ ಮಾರ್ಪಡಿಸುವ ಜಾಣ್ಮೆಯನ್ನು ಇವರು ಇನ್ನೂ ಹೆಚ್ಚು ಕರಗತ ಮಾಡಿಕೊಳ್ಳಬೇಕು. ಈಗಾಗಲೇ ಇವರ ಬರವಣಿಗೆಯಲ್ಲಿ ವಸ್ತು ವೈವಿಧ್ಯ, ನಿರೂಪಣಾ ವೈವಿಧ್ಯ, ಕಲಾತ್ಮಕ ಶಿಸ್ತು ಇವನ್ನು ಕಾಣಬಹುದು. ಇವು ಇನ್ನಷ್ಟು ಗಟ್ಟಿಯಾದಾಗ ಅವರಿಂದ ಖಂಡಿತವಾಗಿ ಶ್ರೇಷ್ಠ ಕೃತಿಗಳು ಬರುತ್ತವೆ.

ನಾನು ಕೇಳಿದ ಮುಂದಿನ

ಪ್ರಶ್ನೆ; "ಸಾಹಿತ್ಯ ಬರೀ ಓದುಗರಿಗೆ 'ಸಾಹಿತ್ಯ'ವಾಗಿದ್ದರೆ ಸಾಕೋ ಅಥವಾ ಸಾಮಾಜಿಕ ಪರಿಸ್ಥಿತಿಯಲ್ಲಿ, ರಾಜಕೀಯ ಪರಿಸರದಲ್ಲಿ ಸಾಹಿತಿಯ ಹೊಣೆಗಾರಿಕೆಯೂ ಇದೆಯೊ?"

ಉತ್ತರ: "ಸಾಹಿತ್ಯ ಹೊರ ನೋಟಕ್ಕೆ ಸರಳವಾಗಿ ಕಂಡರೂ ಅದು ಸಂಕೀರ್ಣ ಸ್ವರೂಪದ್ದು. ನಿಜವಾದ ಸಾಹಿತ್ಯ ಆಯಾ ಕಾಲದ ಸಾಮಾಜಿಕ, ರಾಜಕೀಯ, ಧಾರ್ಮಿಕ ಆಗುಹೋಗುಗಳನ್ನು ದಾಖಲೆ ಮಾಡುತ್ತದೆ. ಸಮಾಜದ ತಳಮಳ ಚಿತ್ರಿಸುವುದರೊಂದಿಗೆ ಅದರ ಸ್ಥಿತಿಗತಿಯ ಬದಲಾವಣೆಗೆ ಪರೋಕ್ಷವಾಗಿ ಸಹಾಯ ಮಾಡುತ್ತದೆ. ಫ್ರೆಂಚ್ ಕ್ರಾಂತಿಯ ಕಾಲಕ್ಕೆ ಖ್ಯಾತ ದಾರ್ಶನಿಕರಾದ ವಾಲ್ಟೇರ್ ಮತ್ತು ರೂಸೊ ಅವರ ಬರಹಗಳು ಪ್ರಚೋದನೆಯನ್ನು ಒದಗಿಸಿದ್ದವು. ರಷ್ಯದ ಮ್ಯಾಕ್ಸಿಂ ಗೋರ್ಕಿಯ ಬರಹಗಳು ಇದೇ ಪಾತ್ರ ವಹಿಸಿದ್ದವು ಎಂಬುದನ್ನು ಮರೆಯುವ ಹಾಗಿಲ್ಲ. ಒಳ್ಳೆಯ ಲೇಖಕ/ಲೇಖಕಿ ಬರೀ ಓದುಗನನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಬರೆಯುವುದಿಲ್ಲ. ಇಡೀ ಜನಕೋಟಿಯ ಒಳಿತೇ ಅವರ ಕಣ್ಣು ಮುಂದಿರುತ್ತದೆ. ಹೀಗಾಗಿ ಸಾಹಿತ್ಯ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಬದಲಾವಣೆಗಳಿಗೆ ಯಾವಾಗಲೂ ನೆರವಾಗಿದೆ."

ನನ್ನ ಮುಂದಿನ ಪ್ರಶ್ನೆ ಮತ್ತೆ ಲೇಖಕಿಯರನ್ನೇ ಕುರಿತಾಗಿತ್ತು.

ಪ್ರಶ್ನೆ: "ಮಹಿಳಾ ಬರಹಗಾರರಿಗೆ ಇರುವ ಇತಿಮಿತಿಗಳೇನು? ಅವನ್ನು ಹೋಗಲಾಡಿಸುವ ಬಗೆ ಹೇಗೆ?"

ಉತ್ತರ: "ಮಹಿಳೆಯರ ಅನುಭವ ಸಾಧಾರಣವಾಗಿ ಸೀಮಿತ. ಮನೆ, ಮಕ್ಕಳು, ಗಂಡ ಇವರ ಪಾಲನೆ ಪೋಷಣೆಯಲ್ಲೇ ಇಡೀ ದಿನ ಕಳೆಯುವುದರಿಂದ ಅವಳಿಗೆ ತನ್ನದೇ ಆದ ಸಮಯ ಸಿಗುವುದಿಲ್ಲ. ಏಕಾಂತ ಬರವಣಿಗೆಯಂತೂ ಕನಸಿನ ಗಂಟು. ಹೀಗಾಗಿ ಬರವಣಿಗೆಯಲ್ಲಿ Continuity ಇರುವುದಿಲ್ಲ. ಕಥೆ ಕಾದಂಬರಿಗಳ ವಸ್ತುವಿಗೆ ಪೂರಕವಾದ ಪರಿಸರ ಅಭ್ಯಾಸಕ್ಕೆಂದು ಮನೆ ಬಿಟ್ಟು ಒಬ್ಬಳೇ ಹೊರಡುವ ಸ್ವಾತಂತ್ರ್ಯವು ಅವಳಿಗಿಲ್ಲ. ಅಭಿವ್ಯಕ್ತಿಯ ಬಗ್ಗೆ ಅನೇಕ ಲೇಖಕಿಯರು ಗಮನಹರಿಸುವುದಿಲ್ಲ. ಅವರ ಬರವಣಿಗೆ ಭಾವುಕವಾಗಿರುತ್ತದೆಯೇ ಹೊರತು ವಿಚಾರಪೂರ್ಣವಾಗಿರುವುದಿಲ್ಲ. ಕೃತಿ ರಚನೆಯ ಮುನ್ನ ಸಾಕಷ್ಟು ಸಿದ್ಧತೆ ಮಾಡಿಕೊಳ್ಳುವುದಿಲ್ಲ. ಅಗ್ಗದ ಜನಪ್ರಿಯತೆಗೆ ಮಾರುಹೋಗಿ ತಾವು ಬರೆದ ಮೂರನೆ ದರ್ಜೆ ಕೃತಿಯನ್ನೇ ಶ್ರೇಷ್ಠ ಕೃತಿಯೆಂದು ನಂಬುತ್ತಾರೆ. ಲೇಖಕಿಯರು ಬರವಣಿಗೆಯನ್ನು ಗಂಭೀರವಾಗಿ ಪರಿಗಣಿಸಬೇಕು."

ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಮಹಿಳೆಯ ಸ್ಥಾನಮಾನ ಒಮ್ಮೆಗೇ ಬದಲಾಗುವುದು ಸಾಧ್ಯವಿಲ್ಲವಾದುದರಿಂದ ಅವಳು ತನ್ನ ಸೀಮಿತ ಅನುಭವಕ್ಕೆ ತೀವ್ರವಾಗಿ ಸ್ಪಂದಿಸುವುದನ್ನು ಕಲಿಯಬೇಕು. ಪ್ರಪಂಚದ ಖ್ಯಾತ ಕಾದಂಬರಿ 'ವುದರಿಂಗ್ ಹೈಟ್ಸ್' ಬರೆದ ಎಮಿಲಿ ಬ್ರಾಂಟ್ ತನ್ನ ಹಳ್ಳಿ ಬಿಟ್ಟು ಹೊರಗೆಲ್ಲೂ ಹೋಗಲೇ ಇಲ್ಲ. ಲೇಖಕಿ ಮನೆಗೆಲಸ ಮುಂತಾದವುಗಳಿಂದ ಬಿಡುವು ಮಾಡಿಕೊಂಡು ತನ್ನದೇ ಆದ ಸಮಯ ಪಡೆಯಬೇಕು. ಆಗ ಏಕಾಂತವೂ ಸಾಧ್ಯ. ಬರವಣಿಗೆಯ ಗುಣಮಟ್ಟವೂ ಸುಧಾರಿಸುತ್ತದೆ. ಭಾಷೆ ಸಂವಹನಕ್ಕೆ ಬಲು ಮುಖ್ಯ ಮಾಧ್ಯಮ. ಅದರಲ್ಲಿ ತಪ್ಪುಗಳಿಲ್ಲದಂತೆ ಜಾಗ್ರತೆ ವಹಿಸಬೇಕು. ಭಾಷೆಯನ್ನು ಅದರೆಲ್ಲ ಸಾಧ್ಯತೆಗಳೊಂದಿಗೆ ದುಡಿಸಿಕೊಳ್ಳಲು ಕಲಿಯಬೇಕು. ಸಾಮಾನ್ಯವಾಗಿ ಮಹಿಳೆ ಭಾವುಕಳಾದರೂ ಆ ದೌರ್ಬಲ್ಯವನ್ನು ಮೆಟ್ಟಿ ವಿಚಾರವಂತಳಾಗುವುದು ಸಾಧ್ಯ. ಇದು ಅಧ್ಯಯನ, ಆಲೋಚನೆಗಳಿಂದ ಬರುವಂಥದು. ಕೃತಿ ರಚನೆಗೆ ಮುನ್ನ ಸಾಕಷ್ಟು ಸಿದ್ಧತೆ ಮಾಡಿಕೊಂಡರೆ ಸಹಜವಾಗಿ ಕೃತಿಗೆ ಆಳ ವಿಸ್ತಾರಗಳು ಬರುತ್ತವೆ.

ಇಷ್ಟೆಲ್ಲ ಪ್ರಬುದ್ಧ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು 'ನುಡಿದಂತೆ ನಡೆಯಲು' ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾ ಸಾಹಿತ್ಯದಲ್ಲಿ ಸಂಶೋಧನೆ, ವ್ಯಕ್ತಿತ್ವದಲ್ಲಿ ಆತ್ಮಶೋಧನೆ ಇವುಗಳಲ್ಲಿ ಸದಾ ತಲ್ಲೀನರಾಗಿರುವ ಅನುಪಮಾ ಅವರ ಅನುಪಮ ಸೇವೆ ನಾಡಿಗೆ ಚಿರಕಾಲ ಸಲ್ಲಲಿ ಎಂದು ಶ್ರೀಮಾತೆ ಭಗವತಿಯನ್ನು ಪ್ರಾರ್ಥಿಸುತ್ತೇನೆ.

ಪ್ರಜ್ಞೆ, ಪ್ರತಿಭೆ, ಪರಿಶ್ರಮಗಳ ಸಂಗಮ

- ಸರಸ್ವತೀ ಗಜಾನನ ರಿಸಬೂಡ

ಪ್ರಜ್ಞೆ, ಪ್ರತಿಭೆ, ಪರಿಶ್ರಮ ಇವುಗಳ ಸಂಗಮವೆಂದರೆ ಅನುಪಮಾ. ಕನ್ನಡ ಸಾಹಿತ್ಯ ಪ್ರೇಮಿ ಓದುಗರಿಗೆ, ವಿಶೇಷವಾಗಿ ಸ್ತ್ರೀಯರಿಗಾಗಿ ಡಾ। ಅನುಪಮಾ ಹೇರಳವಾಗಿ, ವಿಪುಲವಾಗಿ ಬರೆದಿದ್ದಾರೆ; ಬರೆಯುತ್ತಲೂ ಇದ್ದಾರೆ. ಇವರು ಅನೇಕ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿಯ ಗೌರವ ಸ್ಥಾನಗಳಲ್ಲಿ ಕಂಗೊಳಿಸಿದ್ದಾರೆ. ಸಾಹಿತ್ಯಾನ್ವೇಷಣೆಯ ನಿಮಿತ್ತವಾಗಿ ಕರ್ನಾಟಕದ ಯಾತ್ರೆಯನ್ನು ಪೂರೈಸಿದ್ದಾರೆ. ೧೯೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪಾರಿತೋಷಕವು ಇವರಿಗೆ ಲಭಿಸಿದೆ. ೧೯೮೭ರಲ್ಲಿ ಇವರ ಸಾಹಿತ್ಯ ಸೇವೆಯ ಫಲವಾಗಿ 'ಶಾಶ್ವತಿ'ಯ ತಿರುಮಲಾಂಬಾ ಪಾರಿತೋಷಕವನ್ನು ತಮ್ಮ 'ಸಿಹಿ-ಕಹಿ' ಎಂಬ ಆತ್ಮಕಥನದಿಂದ ಪಡೆದಿದ್ದಾರೆ.

ಸುಮಾರು ಇಪ್ಪತ್ತು ಕಾದಂಬರಿಗಳು, ಮೂರು ಕಥಾಸಂಕಲನಗಳು, ವೈದ್ಯಕೀಯ ಸಾಹಿತ್ಯ, ವಿಜ್ಞಾನ-ವಿಚಾರ ಸಾಹಿತ್ಯ, ಪ್ರವಾಸ ಕಥನ, ಆತ್ಮಕಥನಗಳನ್ನು ಕನ್ನಡಿಗರಿಗೆ ಕಾಣಿಕೆಯಾಗಿ ಸಲ್ಲಿಸಿದ್ದಾರೆ.

ಇವರ ಸಾಹಿತ್ಯವನ್ನು ಕಥೆ, ಕಾದಂಬರಿ, ವಿಜ್ಞಾನ ಸಾಹಿತ್ಯ, ವಿಚಾರ ಸಾಹಿತ್ಯ ಈ ನಾಲ್ಕು ಭಾಗಗಳಲ್ಲಿ ಕಂಡುಕೊಳ್ಳಬಹುದು.

ಬೇಲೂರಿನ ಜಗತ್‌ಪ್ರಸಿದ್ಧ ಚೆನ್ನಕೇಶವ ದೇವಾಲಯದ ಪರಿಸರದಲ್ಲಿ ಹತ್ತು ಹನ್ನೆರಡು ವರ್ಷ ಪ್ರಾಯದ ಸಂವೇದನಾಶೀಲ ಕಲಾಸಕ್ತ ಈ ಬಾಲಿಕೆಯು ಸ್ಫೂರ್ತಿ ಪಡೆದು, ಕಥೆಗಳನ್ನು ಬರೆಯಲಾರಂಭಿಸಿದಳು. ಆಗ ಕೇವಲ ಹನ್ನೆರಡು ವರ್ಷದ ಪ್ರಾಯ! ಇದೇ ಸಮಯಕ್ಕೆ ಒಂದು ಕಥಾ ಸ್ಪರ್ಧೆಯಲ್ಲಿ ಒಂದು ಬಹುಮಾನವು ದೊರೆಯಿತು. ಇವಳ 'ಕಣ್ಮಣಿ' ಎಂಬ ಕಥಾ ಸಂಗ್ರಹವು ಇವಳು ಹದಿನೆಂಟು ವರ್ಷ ಪ್ರಾಯದವಳಿದ್ದಾಗ ಪ್ರಕಟವಾಯಿತು. ಈ ಸಂಗ್ರಹದ ಮುನ್ನುಡಿಯಲ್ಲಿ ಖ್ಯಾತ ಕನ್ನಡ ಸಾಹಿತಿಗಳಾದ ಶ್ರೀ 'ಚದುರಂಗ'ರು ಈ ರೀತಿ ಬರೆದಿದ್ದಾರೆ: "ಪಾಳೇಗಾರ ಪದ್ಧತಿಯ ಶೃಂಖಲೆಗಳಲ್ಲಿ ಸಿಕ್ಕಿ ತೊಳಲುತ್ತಿರುವ ಸಮಾಜ ಇದು; ಈ ಪದ್ಧತಿಯನ್ನು ನಾಶ ಪಡಿಸಿದ ಹೊರತು ಹೆಣ್ಣಿಗೆ ಮುಕ್ತಿಯಿಲ್ಲವೆಂಬುದನ್ನು ಲೇಖಕಿಯು ಮನಗಂಡಿದ್ದಾಳೆ. ಬಾಳನ್ನು ನೋಡುವ ನೋಟದಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದಾಳೆ".

ಸ್ವತಃ ಅನುಪಮಾ ಇವರಿಗೆ ಇಂದು, ಆ ಕಥೆಗಳಲ್ಲಿಯ ಕೊರತೆ, ಭಾಷೆಯಲ್ಲಿಯ ದೋಷ ಇವುಗಳ ಬಗ್ಗೆ ಅತೃಪ್ತಿ ಎನಿಸುವುದು. ಅನುಭವ, ವಿಚಾರ, ಓದು ಇವುಗಳ ಕೊರತೆ ಅಂದು ಇರುವುದು ಸಹಜವೇ! 'ಕಣ್ಮಣಿ' ಎಂಬುದರ ಕಥಾವಸ್ತು ಸತ್ಯ ಘಟನೆಯನ್ನಾಧರಿಸಿದೆ. ಸಮಾಜಸೇವೆಗಾಗಿ ತನ್ನ ಜೀವನವನ್ನು ಮುಡುಪಾಗಿಡುವ ತರುಣನ ಕಥೆ ಇದಾಗಿದೆ. 'ಮೂಲಾ ನಕ್ಷತ್ರದ ಹುಡುಗಿ' ಈ ಕಥೆಯಲ್ಲಿ ವಿಚಾರಹೀನ ಸಮಾಜದಲ್ಲಿ ಸ್ತ್ರೀಯರು ಅನುಭವಿಸುತ್ತಿದ್ದ ಯಾತನೆಗಳನ್ನು ಉತ್ಕಟವಾಗಿ ಚಿತ್ರಿಸಲಾಗಿದೆ. 'ಸಾವಿನ ಮುಖ' ಇದೊಂದು ಸ್ವಾರಸ್ಯಪೂರ್ಣವಾದ ಉತ್ತಮ ಕಥೆ. ಇದರಲ್ಲಿ ಬದುಕಿನ ತೀವ್ರ ಆಶಾವಾದವನ್ನು ಎತ್ತಿ ತೋರಿಸಿದ್ದಾರೆ. ಬಡವರು, ಸಿರಿವಂತರ ಕೈಗೊಂಬೆಗಳಾಗಿರುವ ಹೃದಯದ್ರಾವಕ ಚಿತ್ರಣವನ್ನು 'ಮಣ್ಣಿ ದಿಬ್ಬದ ಮೇಲೆ' ಈ ಕಥೆಯಲ್ಲಿ ಬಿಂಬಿಸಲಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರೇ ಬೇರೆ, ಅದರ ಫಲಗಳನ್ನು ಪಡೆಯುತ್ತಿರುವವರೇ ಬೇರೆ ಎಂಬ ಕಿಟಿರ ಸತ್ಯವನ್ನು 'ಪ್ರತಿಫಲ' ಎಂಬ ಕಥೆಯಲ್ಲಿ ಸಾರಿದ್ದಾರೆ. ಈ ಎಲ್ಲ ಕಥೆಗಳಲ್ಲಿ ನವಜೀವನಕ್ಕಾಗಿ ನಡೆದ ಹೋರಾಟವು ರೂಪಿತವಾಗಿದೆ.

ಕೌಟುಂಬಿಕ ಹಿನ್ನೆಲೆಯಲ್ಲಿಯ ಇವರ ಕಥೆಗಳು ಮನೋರಂಜಕವಾಗಿವೆ.

ಡಾ। ಅನುಪಮಾ ಅವರು ಈ ವರೆಗೆ ನವ್ಯೋದಯ ಶೈಲಿಯಲ್ಲಿಯೇ ಬರೆಯುತ್ತಿದ್ದರೂ ಈಚೀಚಿನ ಅವರ ಕಥೆಗಳು ಜಾಗೃತ ಲೇಖಕಿಯ ಹೊಸ ಮನೋಭಾವವನ್ನು ತೋರಿಸುತ್ತವೆ. ಸಾಹಿತ್ಯ ರಚನೆಯನ್ನು ಗಂಭೀರವಾಗಿ ವಿಶ್ಲೇಷಿಸುವ ಶುಭ ಲಕ್ಷಣಗಳು ತೋರುತ್ತಿವೆ. ಇವರ ಸಾಹಿತ್ಯವು ಲೇಖಕಿಯ ಬೆಳವಣಿಗೆಗೆ ಹಿಡಿದಿರುವ ಕನ್ನಡಿಯಾಗಿದೆ ಎಂಬುದು ಕೆಲವರ ಅಭಿಪ್ರಾಯ.

ಕಾದಂಬರಿ ಅತ್ಯಂತ ಲೋಕಪ್ರಿಯ ಸಾಹಿತ್ಯ ಪ್ರಕಾರ. ಜನಸಾಮಾನ್ಯರ ಆಶೋತ್ತರಗಳ, ಅಭಿರುಚಿಗಳ, ಸಂಸ್ಕೃತಿಗಳ ಪಾತಳಿಯ ಪ್ರತಿಬಿಂಬವೆಂದರೆ ಕಾದಂಬರಿ.

ಹಿಂದಿನ ಪೀಳಿಗೆಯ ಲೇಖಕಿಯರು ತಮ್ಮ ಕಾದಂಬರಿಗಳ ಮೂಲಕ ಸ್ತ್ರೀಯರ ಮೇಲೆ ನಡೆಯುತ್ತಿದ್ದ ಅನ್ಯಾಯಗಳನ್ನು ಬೆಳಕಿಗೆ ತಂದಿದ್ದರೂ, ಆ ಅನ್ಯಾಯಗಳ ಮೂಲವನ್ನು ಕಾಣಲಿಲ್ಲ; ಅನ್ಯಾಯಗಳಿಗೆ ಪರಿಹಾರ ಸಿಗದೇ ಹೋಯಿತು. ಅನುಪಮಾ ಇವರು ಆರ್ಥಿಕ ವಿಷಮತೆಯೇ ಈ ಅನ್ಯಾಯಕ್ಕೆ ಮಹತ್ವದ ಕಾರಣವೆಂದು ಕಂಡುಹಿಡಿದು ಅದನ್ನು ತಮ್ಮ ಕಾದಂಬರಿಗಳ ಮೂಲಕ ಹೊರ ತಂದರು. ಕಾದಂಬರಿಗೆ ಬೇಕಿರುವುದು ಸುಲಲಿತ ಶೈಲಿ, ಸರಳತೆ, ಸ್ಪಷ್ಟತೆ, ಕುಶಲ ಸಂಭಾಷಣೆ, ಕಥೆಯ ಜ. ಫು. ಇವೆಲ್ಲವನ್ನೂ ಅನುಪಮಾ ಅವರ ಕಾದಂಬರಿಗಳಲ್ಲಿ ಕಾಣಬಹುದು.

'ಅನಂತಗೀತ' ಮತ್ತು 'ಸಂಕೋಲೆಯೊಳಗಿಂದ' ಈ ಕಾದಂಬರಿಗಳು ಕಲಾತ್ಮಕವಾಗಿದ್ದರೂ ಅವುಗಳಲ್ಲಿ ಅತಿಯಾದ ಆಕ್ರೋಶ, ಭಾವುಕತೆ ಗೋಚರವಾಗುತ್ತದೆ. ವಯಸ್ಸು ಬೆಳೆದಂತೆ ಮನುಷ್ಯನ ದೃಷ್ಟಿಯು ವಿಶಾಲಗೊಳ್ಳುತ್ತದೆ. 'ಶ್ವೇತಾಂಬರಿ' ಎಂಬ ಇವರ ಕಾದಂಬರಿಯಲ್ಲಿ ಇದನ್ನು ಕಾಣಬಹುದು. 'ನರ್ಸ್' ಒಬ್ಬಳ ಜೀವನವನ್ನು ಆಧಾರಿಸಿ ಬರೆದ ಕಾದಂಬರಿ ಇದು. ಕಾದಂಬರಿಗಳಲ್ಲಿ ಬರುವ ಪಾತ್ರಗಳು ಹೆಚ್ಚಾದಷ್ಟು ಪಾತ್ರ ಪೋಷಣೆ ಸುಲಭವಿರುವುದಿಲ್ಲ. ಹೀಗಿದ್ದರೂ ಶ್ವೇತಾಂಬರಿಯಲ್ಲಿ ಒಂದೇ ವೃತ್ತಿಯ ಅನೇಕ ಪಾತ್ರಗಳು ಸ್ವತಂತ್ರವಾಗಿ, ಸೂಕ್ಷ್ಮವಾಗಿ, ಸುಸ್ಪಷ್ಟವಾಗಿ ಎದ್ದು ಕಾಣುತ್ತವೆ. ಈ ಕಲ್ಪನಾ ಸಾಹಿತ್ಯವು ವಾಸ್ತವಕ್ಕೆ ತುಂಬಾ ಹತ್ತಿರದ್ದು ಎಂದೆನ್ನಬಹುದು.

ಕೊಳಚೆ ಪ್ರದೇಶಗಳಲ್ಲಿ ವಾಸವಿದ್ದವರನ್ನು ಭೇಟಿಯಾಗಿ ಅವರೊಡನೆ ವಾಸಿಸಿ ಅವರ ಸುಖದುಃಖಗಳನ್ನು, ತೊಂದರೆ ತಾಪತ್ರಯಗಳನ್ನು, ಮಾನಸಿಕ ಏರಿಳಿತಗಳನ್ನು ಅಭ್ಯಸಿಸಿ 'ಕೊಳಚೆ ಕೊಂಪೆಯ ದಾನಿಗಳು' ಕಾದಂಬರಿಯು ಸೃಜಿತವಾಗಿದೆ. ಅನುಭವದ ಗಟ್ಟಿತನದಿಂದ ಇದು ಪ್ರಭಾವಿಯಾಗಿದೆ.

ಅನುಪಮಾ ಇವರು ಜನಿಸಿದ್ದು ದೇವಾಂಗ ಸಮಾಜದಲ್ಲಿ. ಎಳೆತನದಿಂದ ಎಳೆಯೊಡನೆ ಅವರ ಪರಿಚಯ. ಇವರ 'ಎಳೆ' ಎಂಬ ಕಾದಂಬರಿಯು ನೇಕಾರರ

ಜೀವನವನ್ನು, ಕಾಲಾನುಸಾರವಾಗಿ ಅವರಲ್ಲಿ ನಡೆದ ರಾಜಕೀಯ, ಸಾಂಸ್ಕೃತಿಕ ಮಾರ್ಪಾಟುಗಳನ್ನು ಬಹು ಸುಂದರವಾಗಿ ಎತ್ತಿ ತೋರಿಸುತ್ತದೆ. ಎಳೆಯಂತೆ ಈ ಕಾದಂಬರಿಯು ಸರಾಗವಾಗಿ ಬಂದಿದೆ.

'ಘೋಷ'ವೆಂಬ ಇವರ ಕಾದಂಬರಿಯು ಕಥಾವಸ್ತು ವೈಶಿಷ್ಟ್ಯಪೂರ್ಣವಿದೆ. ಮುಕಂಶಾಹೀಯಲ್ಲಿ ವಿಪರೀತ ಶೋಷಣೆಗೆ ಒಳಪಟ್ಟ ಪ್ರಜೆಗಳು ಬಂಡಾಯ ಮಾಡಲು ಹೇಗೆ ಸಿದ್ಧರಾಗುವರು ಎಂಬುದನ್ನು ಇದರಲ್ಲಿ ಸಾರ್ಥಕವಾಗಿ ಸಾಕಾರಗೊಳಿಸಲಾಗಿದೆ.

ಮಹಾಭಾರತದ ಕಾಲದಿಂದ 'ಸ್ತ್ರೀ'ಯ ಶೋಷಣೆಗೆ ಪ್ರಾರಂಭವಾಯಿತು. ದನ ಕರುಗಳ ಲೇವಾದೇವಿ, ಮಾರಾಟ ನಡೆಯುವಂತೆ ಸ್ತ್ರೀಯರ ವ್ಯಾಪಾರ ನಡೆಯುತ್ತಿತ್ತು. ಪುರಾಣ ಕಾಲದ ವ್ಯಕ್ತಿ ಹಾಗೂ ಸಮಾಜ ಇವುಗಳ ವಿಶ್ಲೇಷಣೆಯನ್ನು ವೈಜ್ಞಾನಿಕ ರೀತಿಯಲ್ಲಿ ಮಾಡಬಹುದೆಂದೆನಿಸಿ ಹೊಸ ಮಾದರಿಯ 'ಮಾಧವಿ' ಎಂಬ ಕಾದಂಬರಿಯನ್ನು ಹೊರತಂದರು. ಈ ಕಾದಂಬರಿಯ ಹಿನ್ನೆಲೆ ಪೌರಾಣಿಕ ಕಾಲದ್ದಾಗಿದೆ. ಭಾಷೆಯ ಸೊಬಗು ಆ ಕಾಲಕ್ಕೆ ತಕ್ಕಂತೆ ಇದೆ. ಅನ್ಯಾಯ. ಶೋಷಣೆ, ಬಲಾತ್ಕಾರ ಇವೆಲ್ಲವುಗಳ ಬಗ್ಗೆ ಜಿಗುಪ್ಸೆ, ತಿರಸ್ಕಾರ ಉಂಟಾಗಿ, ಎಲ್ಲವನ್ನೂ ತೊರೆದು ಬಂಡೆದ್ದು 'ಮಾಧವಿ' ಹೊರಟು ಹೋಗುತ್ತಾಳೆ. ಸ್ತ್ರೀಯ ಶೋಷಣೆಯ ಚಿತ್ರಣವು ತಳಮಳವನ್ನೂ ರೋಷವನ್ನೂ ಉಂಟು ಮಾಡುವಂತಹದಾಗಿದೆ. ಮಾಧವಿಯು ಮೊದಲೇ ಬಂಡೆದ್ದಿದ್ದರೆ ಚೆನ್ನಾಗಿರುತ್ತಿತ್ತೇನೊ ?

ಡಾ। ಅನುಪಮಾ ಅವರು ಕೇವಲ ಕಥೆ ಕಾದಂಬರಿಗಳನ್ನು ಬರೆಯುವವರಲ್ಲ. ಇವರ ದೃಷ್ಟಿಯು ಮೊದಲಿನಿಂದಲೂ ಅವರ ಪ್ರಿಯ ವಿಷಯವಾದ ಆರೋಗ್ಯ ವಿಜ್ಞಾನದತ್ತಿತ್ತು. ಆರೋಗ್ಯದ ಬಗ್ಗೆ ಜನರಲ್ಲಿದ್ದ ಅಜ್ಞಾನ, ಮೂಢನಂಬಿಕೆ, ತಪ್ಪು ಚಿಕಿತ್ಸೆಗಳು ಇವನ್ನೆಲ್ಲ ಕಂಡು ಇವರ ಮನಸ್ಸು ಸುಮ್ಮನೆ ಹೇಗೆ ಇದ್ದೀತು ? ಡಾ। ಅನುಪಮಾ ಇವರು ೧೯೬೩ರಲ್ಲಿ ಪ್ರಜಾವಾಣಿ ಸಾಪ್ತಾಹಿಕ ಪುರವಣಿಯ ಮಹಿಳಾವಾಣಿ ವಿಭಾಗದಲ್ಲಿ ಪ್ರತಿವಾರ ವೈವಿಧ್ಯಮಯ ವಿಷಯಗಳ ನಾಲ್ವತ್ತು ಲೇಖನಗಳನ್ನು ಬರೆದರು. ಈ ಲೇಖನಗಳ ಸಂಗ್ರಹವೆಂದರೆ ಇವರ 'ಶುಭಕಾಮನೆ' ಇದಾಗಿದೆ. ಇವುಗಳಲ್ಲಿಯ ಬರಹದ ಮುಖ್ಯವಸ್ತು 'ಸ್ತ್ರೀ'. ಅವಳ ಬದುಕಿನ ವಿವಿಧ ಮುಖಗಳನ್ನು ಕುರಿತು ಬರೆಯಲಾಗಿದೆ.

ವೈದ್ಯಕೀಯ ಲೇಖನ ಅನುಪಮಾ ಅವರ ಅಮೌಲ್ಯ ಲೇಖನ. ಕೆಂಪಮ್ಮನ ಮಗು, ತಾಯಿ-ಮಗು, ಶಿಶುವೈದ್ಯ-ದೀಪಿಕೆ ಮೊದಲಾದ ಪುಸ್ತಕಗಳನ್ನು ಬರೆದು ಸ್ತ್ರೀಯರನ್ನು ಒಂದು ರೀತಿಯಲ್ಲಿ ಎಚ್ಚರಿಸಿ ಆರೋಗ್ಯದ ಬಗ್ಗೆ ಜ್ಞಾನದಾನವನ್ನೇ ಮಾಡಿದವರೆಂದೆನ್ನಬಹುದು. ಈ ಪುಸ್ತಕಗಳ ಜನಪ್ರಿಯತೆ ವಿಶೇಷವಾಗಿದೆ.

ಈ ಚಿಕ್ಕಲೇಖನದಲ್ಲಿ ಅನುಪಮಾ ಅವರ ಸಮಗ್ರ ಸಾಹಿತ್ಯವನ್ನು ಕುರಿತು ಬರೆಯುವುದು ಕೇವಲ ದುಸ್ತರ - ಅಸಾಧ್ಯದ ಕೆಲಸ.

ಓರ್ವ ಸ್ತ್ರೀಯು ಒಂದೇ ಕಾಲಕ್ಕೆ ಗೃಹಿಣಿ ಎಂದು, ದುಡಿಯುವ ಹೆಂಗಸೆಂದು ಯಶಸ್ವಿಯಾಗಿ ಬಾಳುವುದೇ ಕಠಿಣ ಕೆಲಸ. ಅಂತಹವರಲ್ಲಿ ಡಾ। ಅನುಪಮಾ ಅವರು ವೃತ್ತಿಯಿಂದ ಡಾಕ್ಟರರು. ಈ ವೃತ್ತಿಯೆಂದರೆ ಇಪ್ಪತ್ನಾಲ್ಕು ಗಂಟೆಯ ಜವಾಬ್ದಾರಿ. ಹೀಗಿದ್ದುಕೊಂಡು ಇವರು ಇಷ್ಟೊಂದು ವಿಪುಲ, ಮನೋಜ್ಞವಾದ, ಮನ ಸೆಳೆಯುವ ಸಾಹಿತ್ಯವನ್ನು ಹೇಗೆ ಸೃಷ್ಟಿಸಿದರು? ಈ ಪರಿಯ ತ್ರಿವಿಧ ಭೂಮಿಕೆಯನ್ನು ಯಶಸ್ವಿಯಾಗಿ ಹೇಗೆ ಎದುರಿಸಿದರು? ಎಂಬುದು ಬೆರಗುಗೊಳಿಸುವ ಸಂಗತಿ.

ಮಾನವೀಯ ಸಾಹಿತ್ಯ ಸಿದ್ಧಿಗೆ ಸಾರ್ಥಕ ಹೆಸರು

-ಡಾ। ಯಶೋದಾ ಭಟ್ಟ

ಕೆಲವೇ ದಿನಗಳ ಹಿಂದಿನ ಮಾತು. ದಿಲ್ಲಿಯಲ್ಲಿದ್ದ ಇಂದಿರಾ ಗಾಂಧಿ ರಾಷ್ಟ್ರೀಯ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಉದಯೋನ್ಮುಖ ಬರಹಗಾರರಿಗಾಗಿ ಏರ್ಪಡಿಸಿದ್ದ ಒಂದು ತರಬೇತಿ ವರ್ಗದಲ್ಲಿ ಒಂದು ಸ್ವಾರಸ್ಯವಾದ ಚರ್ಚೆ ನಡೆದಿತ್ತು. ಬದುಕಿನ ಬೇರೆ ಬೇರೆ ವೃತ್ತಿಯಲ್ಲಿದ್ದುಕೊಂಡೂ ಸೃಜನಶೀಲತೆಯನ್ನು ಹೇಗೆ ಸಕ್ರಿಯವಾಗಿ ಬೆಳೆಸಿಕೊಳ್ಳಬಹುದು ಎಂಬುದೇ ಚರ್ಚೆಯ ವಿಷಯವಾಗಿತ್ತು. ಆ ತರಬೇತಿ ವರ್ಗದಲ್ಲಿ ವಿವಿಧ ವೃತ್ತಿಗಳನ್ನು ಅನುಸರಿಸಿದ ಭಾರತದ ಬೇರೆ ಬೇರೆ ಪ್ರದೇಶಗಳಿಂದ ಬಂದು ದಿಲ್ಲಿಯಲ್ಲಿ ವಾಸಿಸುತ್ತಿದ್ದ ಪ್ರಾತಿನಿಧಿಕ ಗುಂಪು ಇದ್ದಿತ್ತು. ನಾನೂ- ನನ್ನವರೂ ("ರಂಜನ" ಭಟ್ಟ) ಆ ತರಬೇತಿ ವರ್ಗಕ್ಕೆ ಇಂದಿರಾ ಗಾಂಧಿ ರಾಷ್ಟ್ರೀಯ ವಿಶ್ವವಿದ್ಯಾಲಯದಿಂದ ಸಲಹೆಗಾರರಾಗಿ ನೇಮಕಗೊಂಡಿದ್ದೆವು. "ನಮ್ಮ ನಮ್ಮ ವ್ಯವಸಾಯ - ವೃತ್ತಿಯ ನಡುವೆಯೂ ಸೃಜನಶೀಲತೆಯನ್ನು ಹೇಗೆ ಶ್ರೀಮಂತವಾಗಿ, ಜೀವಂತವಾಗಿ ಇಟ್ಟುಕೊಳ್ಳಬಹುದು ಎಂಬುದಕ್ಕೆ ಒಳ್ಳೆಯ ನಿದರ್ಶನವನ್ನು ಕನ್ನಡದಲ್ಲಿ ಡಾ। ಅನುಪಮಾ ನಿರಂಜನರಲ್ಲಿ ನಾವು ಕಾಣುತ್ತೇವೆ........" ಎಂದು ಅತ್ಯಂತ ಹೆಮ್ಮೆಯಿಂದ, ಅಭಿಮಾನದಿಂದ, ಆನಂದದಿಂದ ನಾವಿಬ್ಬರೂ ಡಾ। ಅನುಪಮಾ ನಿರಂಜನರನ್ನು ನೆನೆದೆವು. ಕನ್ನಡದಲ್ಲಿಯೇ ಏಕೆ, ಭಾರತದಲ್ಲಿಯೇ ಇಂಥ ಉದಾಹರಣೆಗಳು ತೀರ ವಿರಳವೆಂದು ಹೇಳಿದರೆ ಅತಿಶಯೋಕ್ತಿ ಅಲ್ಲವೇನೋ!

ಕಳೆದ ನಲವತ್ತು ವರ್ಷಗಳಿಂದಲೂ ಅವ್ಯಾಹತವಾಗಿ ಕನ್ನಡ ಸರಸ್ವತಿಯ ಸೇವೆಯನ್ನು ಮಾಡುತ್ತ ಬಂದಿರುವ ಡಾ। ಅನುಪಮಾ ನಿರಂಜನರು ಅದಾಗಲೇ

ಸುಮಾರು ೫೦ ಕೃತಿಗಳನ್ನು ರಚಿಸಿ ಅಪೂರ್ವ ಸಿದ್ಧಿಯನ್ನು ಪಡೆದಿದ್ದಾರೆ. ಕಥೆ, ಕಾದಂಬರಿ, ಪ್ರವಾಸಸಾಹಿತ್ಯ, ಆತ್ಮಚರಿತ್ರೆ, ವೈದ್ಯಕೀಯಶಾಸ್ತ್ರ, ಆರೋಗ್ಯ ಹೀಗೆ ವಿಷಯ ವೈವಿಧ್ಯ ಹಾಗೂ ಸಾಹಿತ್ಯ ಪ್ರಕಾರಗಳ ವೈವಿಧ್ಯವನ್ನೂ ಇವರ ಸಾಹಿತ್ಯ-ಸೃಷ್ಟಿಯಲ್ಲಿ ನಾವು ಕಾಣಬಹುದು. ವೈದ್ಯಕೀಯ ಜೀವನದಲ್ಲೂ ನಿಷ್ಣಾತರಾದ ವೈದ್ಯೆ ಎಂದು ಇವರು ಹೆಸರನ್ನು ಗಳಿಸಿದ್ದಾರೆ. ಇಷ್ಟೂ ಸಾಲದ್ದೋ ಎಂಬಂತೆ, ಡಾ। ಅನುಪಮಾ ನಿರಂಜನ ದಕ್ಷ ಗೃಹಿಣಿಯಾಗಿ, ಮಡದಿಯಾಗಿ, ಮಮತೆಯ ತಾಯಿಯಾಗಿ, ಜೀವನದಲ್ಲಿ ಸಫಲತೆಯನ್ನು ಗಳಿಸಿದ್ದಾರೆ. ಕಳೆದ ಮೂವತ್ತು, ಮೂವತ್ತೈದು ವರ್ಷಗಳಿಂದಲೂ ಅನುಪಮಾರವರನ್ನು ಹತ್ತಿರದಿಂದ ಬಲ್ಲ ನಾನು ಅವರ ಸಾಧನೆ, ಸಿದ್ಧಿ, ಸಫಲತೆಗಳನ್ನು ಮೆಚ್ಚಿದ್ದೇನೆ.

ಅನೇಕ ಕಾರಣಗಳಿಂದಾಗಿ, ಅನುಪಮಾರು ನಮಗೆಲ್ಲ ತೀರ ಹತ್ತಿರದವರು. ನನ್ನವರಾದ "ರಂಜನ" ಭಟ್ಟರಿಗೂ, ನಿರಂಜನರಿಗೂ ಬಹುಕಾಲದ ಆತ್ಮೀಯ ಸ್ನೇಹ! "ರಂಜನ" ಭಟ್ಟರ ಹಿರಿಯ ಅಕ್ಕನ ಗಂಡ, ಕನ್ನಡದ ಹಿರಿಯ ಕವಿ ವ್ಹಿ. ಜಿ. ಭಟ್ಟರಿಗೂ ನಿರಂಜನರಿಗೂ ಬಹುಕಾಲದ ಅನ್ಯೋನ್ಯವಾದ ಸ್ನೇಹ-ಬಾಂಧವ್ಯವಿದೆ. ಈ ಎಲ್ಲ ಕಾರಣಗಳಿಂದಲೂ ನಮಗೆಲ್ಲರಿಗೂ ಡಾ। ಅನುಪಮಾ ನಿರಂಜನರು ಆತ್ಮೀಯರು!

ನಾನು ಡಾ। ಅನುಪಮಾರನ್ನು ಮೊದಲ ಬಾರಿ ಕಂಡದ್ದು ಧಾರವಾಡದಲ್ಲಿ. ಅದೇ ಆಗ ಡಾ। ಅನುಪಮಾ ಧಾರವಾಡದಲ್ಲಿ ತಮ್ಮ ಕ್ಲಿನಿಕ್ ಹಾಗೂ ಮೆಟರ್ನಿಟಿ ಹೋಂ ತೆರೆದಿದ್ದರು. ಆವಾಗಲೇ ಅವರು ಉಜ್ವಲ ಭವಿಷ್ಯವಿದ್ದ ಲೇಖಕಿ ಎನ್ನಿಸಿ ಕೊಂಡಿದ್ದರು. ಪ್ರಾಯಶಃ ಅವರ "ಸಂಕೋಲೆಯೊಳಗಿಂದ" ಹಾಗೂ "ಅನಂತ ಗೀತ" ಆಗ ಹೊರಬಂದಿದ್ದವು. ಆಗ ಅವರ ಹಿರಿಯ ಮಗಳು ಚಿ. ತೇಜಸ್ವಿನಿ ಇನ್ನೂ ಕೈಗೂಸು. ಮನೆಯಲ್ಲಿ ಶ್ರೀಯುತ ನಿರಂಜನರ ತಾಯಿಯಿದ್ದರು. ಅವರನ್ನು ನೋಡಿಕೊಳ್ಳುವುದೂ ಅನುಪಮಾರ ಕೆಲಸವಾಗಿತ್ತು.

ಅಂದು ಸಂಜೆ ನಾವೆಲ್ಲರೂ (ಶ್ರೀ. ವ್ಹಿ. ಜಿ. ಭಟ್ಟರ ಮನೆಯವರು ಹಾಗೂ ನಾವಿಬ್ಬರು) ಡಾ। ಅನುಪಮಾರ ಮನೆಗೆ ಹೋದಾಗ, ಅವರು ತಮ್ಮ ದವಾಖಾನೆಗೆ ನಿತ್ಯದಂತೆ ಹೋಗಬೇಕಿತ್ತು. ಅಂಥ ಅವಸರದಲ್ಲಿಯೂ ಅನುಪಮಾರು ನಮ್ಮನ್ನು ಪ್ರೀತಿಯಿಂದಲೇ ಸ್ವಾಗತಿಸಿದ್ದರು. ಚಹ-ತಿಂಡಿ-ಉಪಚಾರ, ಮಾತುಕತೆ ಎಲ್ಲವೂ ಯಥಾವತ್ತಾಗಿ ಸಾಗಿತ್ತು.

ಅವರ ಜೀವನದಲ್ಲೆಲ್ಲ ಇಂಥ ಸನ್ನಿವೇಶಗಳು ಅದೆಷ್ಟೋ ಸುಸುಳಿ ಹೋಗಿರ ಬೇಕು. ಆ ಎಲ್ಲ ಸನ್ನಿವೇಶಗಳಲ್ಲಿಯೂ ನಾನು ಅದೆಷ್ಟೋ ವರುಷಗಳ ಹಿಂದೆ ಕಂಡ ಅನುಪಮ ವ್ಯಕ್ತಿ ಡಾ। ಅನುಪಮಾ ಶಾಂತರಾಗಿ, ಧೀರ-ಗಂಭೀರರಾಗಿ, ದೃಢ

ನಿಶ್ಚಯದಿಂದಲೇ ತಮ್ಮ ಹೆಜ್ಜೆಗಳನ್ನು ಇಡುತ್ತಾ ಇಂದಿನ ಸಿದ್ಧಿಯನ್ನು ಪಡೆದಿದ್ದಾರೆ. ಅನುಪಮಾರ ಕಾರ್ಯಕ್ಷೇತ್ರಕ್ಕೆ ಮೂರು ಮುಖಗಳು-ಗೃಹಲಕ್ಷ್ಮಿಯ ಹೊಣೆಗಾರಿಕೆ. ವೈದ್ಯಕೀಯ ವೃತ್ತಿ-ವ್ಯವಸಾಯ ಹಾಗೂ ಸಾಹಿತ್ಯದ ಹವ್ಯಾಸ. ಈ ವಿಲಕ್ಷಣ ತ್ರಿವೇಣೀ ಸಂಗಮದಲ್ಲಿ ಮಿಂದು ಮುಳುಗಿ ಪುನೀತರಾದವರು ಡಾ। ಅನುಪಮಾ. ಈ ಮೂರು ರಂಗಗಳಲ್ಲಿಯೂ ಹೊಂದಾಣಿಕೆಯನ್ನು ಇಟ್ಟುಕೊಂಡು ಅವ್ಯಾಹತವಾಗಿ ದುಡಿಯುವುದು ಸುಲಭವಾದ ಮಾತೇನೂ ಅಲ್ಲ.

ಕೆಲವು ತಿಂಗಳ ಹಿಂದಿನ 'ವನಿತಾ' ಮಾಸಪತ್ರಿಕೆಯ ಸಂಚಿಕೆಯೊಂದರಲ್ಲಿ ಅನುಪಮಾರು ಓದುಗರ ಪ್ರಶ್ನೆಗಳನ್ನು ಉತ್ತರಿಸುತ್ತಿದ್ದರು. ಸಾಹಿತ್ಯದಲ್ಲಿಯ ಅವರ ಸಿದ್ಧಿಯ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಅನುಪಮಾ ಹೇಳಿದ್ದರು, ನಿರಂತರ 'ಹೋರಾಟ' ಹಾಗೂ ಬಿಟ್ಟೂ ಬಿಡದ ಅವರ 'ಕ್ರಿಯಾಶೀಲತೆ' ಇವುಗಳ ಮೂಲಕ ಅದು ಸಾಧ್ಯವಾಯಿತೆಂದು. ಹಾಗೂ ತಮ್ಮ ಸಾಧನೆಗಾಗಿ ಅವರು ಕಷ್ಟಪಟ್ಟಿದ್ದಾರೆಂದೂ ಅವರು ಹೇಳಿದ್ದಾರೆ. ಆದರೆ ಹೆಂಗಸಿಗೆ ಅನುಪಮಾರು ಹೇಳಿದ ಎರಡು ಪ್ರವೃತ್ತಿಗಳೊಡನೆ ಅಪಾರವಾದ, ಅನಂತವಾದ ತಾಳ್ಮೆಯೂ ಬೇಕು. ತಾಳ್ಮೆಯನ್ನು ಕಳೆದುಕೊಳ್ಳುವ ಸಂದರ್ಭಗಳು ಹೆಜ್ಜೆ ಹೆಜ್ಜೆಗೂ ಬರುತ್ತವೆ. ಹಾಗೆ ತಾಳ್ಮೆಗೆಟ್ಟರೆ ಹೆಣ್ಣಿನ ಕನಸಿನ ಗೋಪುರ, ಹೋರಾಟ ಎಲ್ಲವೂ ಕುಸಿದು ಬೀಳುತ್ತವೆ. ಅದಲ್ಲದೆ ಸುತ್ತಮುತ್ತಲಿನವರಿಗೆ ಹೆಣ್ಣಿನ ಪ್ರಯತ್ನವನ್ನು ಹೀಯಾಳಿಸಲು ಒಂದು ಸುಸಂಧಿ ಸಿಗುತ್ತದೆ. ಅಂತೆಯೆ "ಭೂತಾಯಿಯಂತೆ ತಾಳ್ಮೆಯೇ ಬಾಳ್ವೆ" ಎಂಬುದನ್ನು ಸಾಹಸಕ್ಕೆ ಇಳಿದ ಹೆಂಗಸು ಮರೆಯುವಂತಿಲ್ಲ. ಆದ್ದರಿಂದಲೇ ವೃತ್ತಿ, ಸಾಹಿತ್ಯ ಹಾಗೂ ಮನೆ-ಈ ಮೂರೂ ಕ್ಷೇತ್ರಗಳಲ್ಲಿ ಸುಂದರವಾದ ಹೊಂದಾಣಿಕೆಯನ್ನು ಇಟ್ಟು ಕೊಂಡು ಪ್ರಗತಿಪಥದಲ್ಲಿ ಸಾಗಲು ಅನುಪಮಾರು ಹೇಳಿದಂತೆ 'ಹೋರಾಟ', 'ಕ್ರಿಯಾಶೀಲತೆ' ಹಾಗೂ ಮೂರನೆಯ ಗುಣವೋ, ತತ್ವವೋ ಆದ 'ತಾಳ್ಮೆ'-ಇವುಗಳ ಸಮುಚ್ಚಯ ಅಥವಾ ಸಮಾಗಮವೂ ಅಷ್ಟೇ ಅಗತ್ಯ. ಡಾ। ಅನುಪಮಾರವರು ಇವೆಲ್ಲವನ್ನೂ ಪಡೆದಿದ್ದಾರೆ, ಇಟ್ಟುಕೊಂಡಿದ್ದಾರೆ. ಬೆಳೆಸಿಕೊಂಡಿದ್ದಾರೆ. ಆದ್ದರಿಂದಲೇ ಇಂದು ಸಿದ್ಧಿಯನ್ನೂ ಪಡೆದಿದ್ದಾರೆ.

ಈ ಬಗೆಯ ಕಷ್ಟದ ಜೀವನ ಸಾಲದೋ ಎಂಬಂತೆ ಭಯಂಕರವಾದ ಕಾಯಿಲೆಯೊಂದು ಅವರಿಗೆ ಗಂಟುಬೀಳಬೇಕೆ? ಆದರೆ ಹಾಗಾದರೂ ತಮ್ಮ ದಾರಿಯನ್ನು ಅವರು ಕಂಡುಕೊಂಡರು. ವೈದ್ಯಕೀಯ ವೃತ್ತಿಯನ್ನು ಬಿಟ್ಟುಕೊಟ್ಟು ಸಾಹಿತ್ಯವನ್ನೇ ಮುಂದೆ ಸಾಗಿಸಿದರು. ಅನುಪಮಾರವರು ಬರೆದ ಒಂದು ಕಥೆಯ ಶೀರ್ಷಿಕೆ "ದೇವರೇ ಬರಲಿಲ್ಲ". ಆದರೆ ಮಾನವ ಗುಣವನ್ನು ಮೀರಿದ ದೈವೀಗುಣವನ್ನು ಹೋಲುವ ಗುಣ ಅವರಲ್ಲಿ ಇರಲೇ ಬೇಕೆಂದು ಇಂದು ಕಾಯಿಲೆಯೊಡನೆ ನಡೆಸಿದ ಅವರ ಹೋರಾಟವನ್ನು

ನೋಡಿದಾಗ ಅನ್ನಿಸುತ್ತದೆ. ಕಷ್ಟ-ಕಾರ್ಪಣ್ಯ, ನೋವುಗಳ ಸಂಕೋಲೆ-ಇವುಗಳಿಂದೆಲ್ಲ ಅಳುಕಲಿಲ್ಲ ಅವರ ಶಾಂತವಾದ, ಗಂಭೀರವಾದ ವ್ಯಕ್ತಿತ್ವ! ಮನೆಗೆ ಬಂದವರನ್ನೆಲ್ಲ ಸ್ವಾಗತಿಸಿದಂತೆ 'ಅತಿಥಿ'ಯಾಗಿ ಹಠಾತ್ತನೆ ಅವರ ಬಾಗಿಲಿಗೆ ಬಂದ ಕಾಯಿಲೆಯನ್ನು ಶಾಂತವಾಗಿಯೇ ಸ್ವೀಕರಿಸಿದ ಅನುಪಮಾರು ಅನುಪಮ ವ್ಯಕ್ತಿಯಲ್ಲವೇ?

ನನ್ನ ಮನೆಯವರ ವೃತ್ತಿಯಿಂದಾಗಿ ನನ್ನ ಜೀವನವು ಹೆಚ್ಚಾಗಿ ಊರಿಂದೂರಿನ ಅಲೆದಾಟದಲ್ಲಿಯೇ ಕಳೆಯಿತು. ನಾಗಪುರ, ಮದ್ರಾಸು, ಸೂರತ್, ಇಂದೂರು, ಇದೀಗ ದಿಲ್ಲಿ! ಇದರಿಂದಾಗಿ ಅನುಪಮಾರ ನಿಕಟ ಸಂಪರ್ಕ - ಸಂಬಂಧ ನನಗೆ ಹೆಚ್ಚಾಗಿ ಬರಲಿಲ್ಲ ಎಂಬುದೇ ನನ್ನ ವ್ಯಥೆ. ಆದರೂ ರಜೆಯಲ್ಲಿ ಧಾರವಾಡ-ಬೆಂಗಳೂರಿಗೆ ಹೋದಾಗ ತಪ್ಪದೆ ಅವರನ್ನೂ, ನಿರಂಜನರನ್ನೂ ನಾವು ಕಾಣುತ್ತಿದ್ದೆವು, ಡಾ। ಅನುಪಮಾರ ಮನೆಯಲ್ಲಿ ಸರಸ್ವತಿ-ಲಕ್ಷ್ಮಿ ಇಬ್ಬರೂ ಸ್ನೇಹದಿಂದಲೇ ವಾಸಿಸುತ್ತಿದ್ದರೂ, ಲಕ್ಷ್ಮಿಯ ಉಪಾಸನೆಗಿಂತ ಅಲ್ಲಿ ಸರಸ್ವತಿಯ ಉಪಾಸನೆಯೇ ಹೆಚ್ಚಾಗಿ ನಡೆದಂತೆ ಕಂಡಿತ್ತು. ಮನೆಯ ತುಂಬೆಲ್ಲ ಪುಸ್ತಕಗಳ ಕಪಾಟುಗಳು! ಆ ಪುಸ್ತಕಗಳ ರಾಶಿಯ ಮಧ್ಯೆ ಕುಳಿತು ನಮ್ಮ ಮಾತುಕತೆ ಸಾಗುತ್ತಿತ್ತು. 'ಕಥೆ' ಎಂಬ ಅವರ ಮನೆಯ ಹೆಸರೂ ಅರ್ಥಪೂರ್ಣವಾಗಿದೆ. ಹೀಗಿದ್ದರೂ ಅವರ ನೆರೆಹೊರೆಯವರೆಲ್ಲ ಅವರನ್ನು ಒಬ್ಬ ಡಾಕ್ಟರ್ ಎಂದೇ ಗುರುತಿಸುತ್ತಾರೆ - ಲೇಖಕಿ ಎಂದಲ್ಲ! ಹೀಗೆಂದು ನಗುತ್ತಲೇ ನಿರಂಜನರು ಒಂದು ಸಲ ಹೇಳಿದ್ದರು. ಇದೊಂದು ಆಶ್ಚರ್ಯದ ಸಂಗತಿ! ಬಹುಶಃ ಹಿತ್ತಲಗಿಡ ಮದ್ದಲ್ಲವೇನೋ!

ಮತ್ತೊಂದು ಸಲ ನಾವು ರಜೆಯಲ್ಲಿ ಬೆಂಗಳೂರಿಗೆ ಹೋದಾಗ ನನ್ನ ತಂದೆಯವರು ಆಗ ವಾಸಿಸುತ್ತಿದ್ದ ಮನೆಯ ಆವಾರದಲ್ಲಿ ದೊಡ್ಡದೊಂದು ಬಕುಳ ವೃಕ್ಷವಿತ್ತು. ನಾವು ಹೋದಾಗ ಆ ಮರದ ತುಂಬ ಬಕುಳ ಹೂಗಳ ಸುಗ್ಗಿ! ಆ ಸುಗ್ಗಿಯ ಸಿರಿಯು ಮರದಡಿ ನೆಲದ ಮೇಲೆಲ್ಲ ಹಾಸಿರುತ್ತಿತ್ತು! ಮರದ ಹತ್ತಿರ ಹೋದರೆ ಹೂವಿನ ಸುಗಂಧ ಮೈ-ಮನಗಳನ್ನು ತುಂಬಿರುತ್ತಿತ್ತು. ಈ ಸುಮಾರಿಗೆ ಡಾ। ಅನುಪಮಾ ತಮ್ಮ "ಹೃದಯವಲ್ಲಭ" ಕಾದಂಬರಿಯ ಸೃಷ್ಟಿಯಲ್ಲಿ ನಿರತರಾದಂತಿತ್ತು.

ಆ ಕಾದಂಬರಿಯಲ್ಲಿ ಬರುವ 'ಬಕುಳ' ಎಂಬವಳ ಪಾತ್ರನಿರೂಪಣೆಗೆ, 'ಬಕುಳ' ಹೂವಿನ ಸಂಶೋಧನೆ ಅವರಿಗೆ ಅಗತ್ಯವೆನಿಸಿತ್ತೇನೋ! ಆದ್ದರಿಂದ ಅವರನ್ನು ನಾವು ಕಂಡಾಗ ನಾವೆಲ್ಲ ಬಕುಳ ವೃಕ್ಷದೆಡೆ ಹೋಗಿ ಅದರ ಸುಗಂಧದ ಆನಂದವನ್ನು ಅನುಭವಿಸಿದ್ದೆವು. ಅದರ ನೆನಪು ಇನ್ನೂ ಹಸಿರಾಗಿ ನನ್ನ ಮನಸ್ಸಿನ ಆಳದಲ್ಲಿ ಉಳಿದಿದೆ.

ಮತ್ತೊಂದು ಸಲ ನಾವು ಬೆಂಗಳೂರಿಗೆ ಹೋದಾಗ ಅವರ ಮನೆಗೆ ಹೋಗಿದ್ದ ನೆನಪು ನನಗೆ. ಆಗ ಅನುಪಮಾರಿಗೆ ಅದೇ ಶಸ್ತ್ರಚಿಕಿತ್ಸೆ ಆಗಿತ್ತು. ಆಸ್ಪತ್ರೆಯಿಂದ ಮನೆಗೆ ಮರಳಿ ಇನ್ನೂ ಹಾಸಿಗೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದರು. ಅವರ ಅಂದು

ಅವರಾಗಲೀ, ನಿರಂಜನರಾಗಲೀ ಅವರ ಅನಾರೋಗ್ಯದ ಕುರಿತು ಪಿಟ್ಟೆಂದು ಮಾತನ್ನಾಡಲಿಲ್ಲ! ಎಂದಿನಂತೆ ಮಾತು-ಕತೆ! ಮಗಳು ತೇಜಸ್ವಿನಿ ತಾನು ಬರೆದಿದ್ದ ಒಂದು ಇಂಗ್ಲೀಷ್ ಕವನವನ್ನು ಓದಿದಳು. ಹಾಲಾಹಲವನ್ನು ನುಂಗಿ ದೇವರು 'ನೀಲಕಂಠ'ನಾದನೆಂಬುದನ್ನು ನಾನೆಲ್ಲಿಯೋ ಓದಿ ಮರೆತಿದ್ದೆ. ಅಂದು ಅವರನ್ನು ಕಂಡು ಇಂಥ ಗುಣ ಇವರಲ್ಲಿಯೂ ಇದೆಯೆಂದು ಅನಿಸದೇ ಇರಲಿಲ್ಲ.

ಸುಮಾರು ೧೯೫೦ರಲ್ಲಿಂದ ಆರಂಭವಾದ ಇವರ ಬರವಣಿಗೆಯಲ್ಲಿ ಇದುವರೆಗೂ ಹೆಣ್ಣಿನ ಜೀವನದ ಅನೇಕ ಮುಖಗಳು, ವಿವಿಧ ಸಮಸ್ಯೆಗಳು ನಿರೂಪಿತವಾಗಿವೆ. ಗೃಹದೇವಿಯಾಗಿ, ಪತಿಯ ನೆರಳಾಗಿ, ಮಮತೆಯ ತಾಯಿಯಾಗಿ, ಆದರ್ಶಳಾಗಿರುವ ಒಂದು ಪಾರಂಪರಿಕ ಹೆಣ್ಣಿನ ಚಿತ್ರವಷ್ಟೇ ಇವರ ಬರಹದಲ್ಲಿ ಕಾಣುವುದಿಲ್ಲ. ಇವರ ಕಾದಂಬರಿಗಳಲ್ಲಿ ಹೆಣ್ಣು ಬರೀ 'ಅಪ್ ಟು ಡೇಟ್ ಅಮ್ಮಯ್ಯ' ಆಗಿಲ್ಲ. ಅವಳು 'ಶ್ವೇತಾಂಬರಿ'ಯಾಗಿ, ನರ್ಸ್ ಆಗಿ ಹೋರಾಟ ಸಾಗಿಸುತ್ತಾಳೆ. ಅವಳು ಅನುಪಮಾ ರಂತೆ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಿಯಾಶೀಲಳು. ಹೆಣ್ಣಿನ ವ್ಯಕ್ತಿತ್ವ, ಅವಳ ಮಾನಸಿಕ ಹೊಯ್ದಾಟ, ಹೊಸ ಆಕಾಂಕ್ಷೆಗಳು ಎಲ್ಲವೂ ಚಿತ್ರಿತವಾಗಿವೆ. ಅಂತೆಯೇ ಹೆಣ್ಣಿನ ಸಂವೇದನೆಗಳನ್ನು ಅಭಿವ್ಯಕ್ತಗೊಳಿಸುವ ಕನ್ನಡ ಸಾಹಿತ್ಯದಲ್ಲಿ ಇವರಿಗೆ ಮಹತ್ವದ ಸ್ಥಾನವಿದ್ದರೆ ಅದು ಆಶ್ಚರ್ಯವಲ್ಲ. ಅದಲ್ಲದೆ ಇಂದಿನ ಸಮಾಜದಲ್ಲಿ ಹೆಣ್ಣಿನ ಸ್ಥಾನ, ಸಮಸ್ಯೆಗಳು, ಪ್ರಚಲಿತವಾದ ವಿಚಾರಗಳು-ಇವುಗಳ ಬಗ್ಗೆ ಜಾಗೃತ ವಾಗಿ ವಿಚಾರಮಾಡಿ ತಮ್ಮ ಮಾತಿನಲ್ಲಿ, ಬರವಣಿಗೆಯಲ್ಲಿ ಮುಕ್ತಕಂಠದಿಂದ, ಕಲಾತ್ಮಕ ವಾಗಿ ಹೇಳುವ, ಬರೆಯುವ, ಹಿಡಿದಿಡುವ ಶ್ರೇಯಸ್ಸು ಅವರದ್ದು.

ಆದಾಗಲೇ ಹಲವಾರು ಕೃತಿಗಳನ್ನು ರಚಿಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಆದಾಗಲೇ ಪಡೆದು, ತಿರುಮಲಾಂಬಾ ಪ್ರಶಸ್ತಿಯನ್ನು ಇದೀಗ ಪಡೆದು, ಡಾ। ಅನುಪಮಾರು ಕನ್ನಡ ಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಮಾಡಿ ಕೊಂಡಿದ್ದಾರೆ. ಸಾಹಿತಿಯ ಜೀವನದಲ್ಲಿ ಹಾಗೂ ಅವರ ಸಾಹಿತ್ಯದಲ್ಲಿ ಅನೇಕ ಸಾಹಿತ್ಯಕ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು ಕಾಣುತ್ತಾರೆ, ಪಡೆಯುತ್ತಾರೆ. ಸಾಹಿತ್ಯದ ನಿರ್ಮಿತಿ ಹಾಗೂ ವೈದ್ಯಕೀಯ ವೃತ್ತಿ ಇವುಗಳ ಸಮಂಜಸ ಹಾಗೂ ಸಂತುಲನವಿದ್ದ ಹೊಂದಾಣಿಕೆಯೇ ಅನುಪಮಾರ ಜೀವನದ ತಿರುಳು; ಇದರ ಫಲಶ್ರುತಿಯೇ ಅವರ ಸಿದ್ಧಿ ಎಂಬುದನ್ನು ಮತ್ತೆ ಹೇಳಲೇಬೇಕು. ಇದರ ಬಗ್ಗೆ ಒಬ್ಬ ಓದುಗಳು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡುತ್ತ 'ವನಿತಾ'ದಲ್ಲಿ ಡಾ। ಅನುಪಮಾರವರು ಬರೆದಿದ್ದಾರೆ:

"ನನ್ನ ಪಾಲಿಗೆ ಸಾಹಿತ್ಯ ಮತ್ತು ವೈದ್ಯಕೀಯ ವೃತ್ತಿ ಪರಸ್ಪರ ಪೂರಕ ವಾಗಿದ್ದವು. ವೃತ್ತಿ ನನಗೆ ವ್ಯಾಪಕವಾದ ಅನುಭವ ಮತ್ತು ನಾನಾ ಬಗೆಯ ಜನರ ಸಂಪರ್ಕ ನೀಡಿತು. ಇದು ನನ್ನ ಬರವಣಿಗೆಗೆ ಮೂಲ ಸಾಮಗ್ರಿಯಾಯಿತು. ಸಾಹಿತ್ಯ

ನನಗೆ ನಮ್ರತೆಯನ್ನೂ ಅನುಕಂಪವನ್ನೂ ದಯಾರ್ದ್ರ ಗುಣವನ್ನೂ ಕಲ್ಪಿಸಿಕೊಟ್ಟಿದ್ದರಿಂದ ನಾನು ಒಳ್ಳೆಯ ವೈದ್ಯಳಾಗುವುದು ಸಾಧ್ಯವಾಯಿತು". ಇವೆರಡು ವೃತ್ತಿಗಳನ್ನು ಹೋಲಿಸಿದಾಗ ಅವರಿಗೆ 'ಆತ್ಮಸಂತೋಷ' ಸಿಕ್ಕಿದ್ದು ಸಾಹಿತ್ಯದಿಂದಲೇ ಎಂದೂ ಅವರು ಹೇಳಿದ್ದಾರೆ. ವೈದ್ಯಕೀಯ ವೃತ್ತಿಯನ್ನು ಅನುಭವ-ವಿಸ್ತಾರಕ್ಕೆಂದು ಬಳಸುವುದು ಸಹ ಒಂದು ಕಲೆ. ಸಾಹಿತ್ಯದಿಂದ ಅನುಕಂಪವನ್ನು ಪಡೆದು ಅದರಿಂದ ಮಾನವೀಯತೆಯನ್ನು ಕಾಯ್ದುಕೊಳ್ಳುವುದು ಒಂದು ಸಾಧನೆ. ಜೀವನದ ಮೌಲ್ಯಗಳೇ ಬದಲಾಗುತ್ತಿರುವ ಕಾಲವಿದು. ವೈದ್ಯಕೀಯ ವೃತ್ತಿಯೆಂದರೆ ಬರೀ ಧನಸಂಪಾದನೆಗಾಗಿ ಎಂದೇ ಹೆಚ್ಚಿನ ಜನ ಬಗೆಯುತ್ತಾರೆ.

ಮಾನವೀಯತೆಯನ್ನೂ, ಅನುಕಂಪವನ್ನೂ ಭಗೀರಥ ಪ್ರಯತ್ನವನ್ನು ಮಾಡಿ ತಮ್ಮ ತಮ್ಮ ಜೀವನದಲ್ಲಿ ಉಳಿಸಬೇಕಾದ ಈ ಕಾಲದಲ್ಲಿ ಅನುಪಮಾರ ಜೀವನ ಹಾಗೂ ಸಾಹಿತ್ಯಕ ಸಿದ್ಧಿ ಒಳ್ಳೆಯ ನಿದರ್ಶನಗಳಾಗಿವೆ.

ಕಾಸರಗೋಡು ಕನ್ನಡ ಮಹಿಳಾ ಸಮ್ಮೇಳನದ ಅಧ್ಯಕ್ಷೆಯಾಗಿ ೧೯

- ಡಾ। ಲಲಿತಾ ಭಟ್

ಸಪ್ಟೆಂಬರ್ ೨೫, ೧೯೭೭! ಹಕ್ಕು, ನ್ಯಾಯ ಮತ್ತು ಉಳಿವಿಗಾಗಿ ಹೋರಾಡುತ್ತಿರುವ ಕಾಸರಗೋಡಿನ ದುರ್ದೈವೀ ಕನ್ನಡಿಗರ ಹೋರಾಟ ನಿರಾಶೆಯ ಮಜಲನ್ನು ಮುಟ್ಟುತ್ತಿರುವಾಗ, ಕಾಸರಗೋಡಿನ ಕನ್ನಡ ಮಹಿಳೆಯರು ಸಂಘಟಿತರಾಗಿ ನವಭಾವ, ನವಜೀವ, ನವಶಕ್ತಿ ತುಂಬಿಸಿ, ಪುನರ್ನವೀಕರಣಗೊಳಿಸುವ ಉದ್ದೇಶದಿಂದ ಮಹಿಳಾ ಸಮ್ಮೇಳನವನ್ನು ಕರೆದರು. ಕಾಸರಗೋಡಿನಲ್ಲಿ ಮತ್ತೊಮ್ಮೆ ಯುದ್ಧದ ಹೊಸ ಕಹಳೆಯೂದಿ, ಕನ್ನಡಿಗರ ತೋಳ್ಬಲಕ್ಕೆ ಹೊಸ ಶಕ್ತಿ ತುಂಬಿ, ಕನ್ನಡ ಚೈತನ್ಯಕ್ಕೆ ಹೊಸ ಮೆರುಗು ನೀಡಿದ ಈ ಅಭೂತಪೂರ್ವ ಸಮ್ಮೇಳನದ ಅಧ್ಯಕ್ಷಪೀಠವನ್ನು ಅಲಂಕರಿಸಿದವರು ಅನುಪಮಾ ನಿರಂಜನ. ಕೇವಲ ವೈದ್ಯೆ, ವಿಜ್ಞಾನಿ, ಖ್ಯಾತ ಮಹಿಳಾ ಸಾಹಿತಿಯಾಗಿಯಲ್ಲ ಅವರು ಈ ಗದ್ದುಗೆಯೇರಿದ್ದು, ಶ್ರೀಮಂತ ಸಾಹಿತ್ಯ, ಕಲೆ, ಸಂಪನ್ನ ಸಂಸ್ಕೃತಿ, ಸಜ್ಜನಿಕೆ, ಸರಳತೆಗಳಿಂದ ಸಮೃದ್ಧರಾದ ಕನ್ನಡತಿಯರ ಪ್ರತಿನಿಧಿಯಾಗಿ, ಕಾಸರಗೋಡಿನ ಸಹೋದರಿಯರ ಬೆಂದ

ಹೃದಯಗಳಿಗೆ ಹೊಸ ನಿರೀಕ್ಷೆಗಳ ತಂಪನ್ನೆರಚಿ. ಹೊಸ ಹುರುಪುಗಳ ಸಂಚಲನ ಮಾಡುವ ಸಾಮರ್ಥ್ಯವುಳ್ಳ ನಾಯಕಿ ಎಂಬ ಭರವಸೆಯಿಂದ ಸಮ್ಮೇಳನಾಧ್ಯಕ್ಷೆಯಾಗಿ ಅನುಪಮಾ ಆಯ್ಕೆಯಾದರು. ಆ ಭರವಸೆ ಹುಸಿಯಾಗಲಿಲ್ಲ.

ಹಿಂದಿನ ದಿನವೇ, ಕಾಸರಗೋಡಿನ ಕೇಂದ್ರೀಯ ಕೃಷಿ ಮತ್ತು ತೆಂಗು ಸಂಶೋಧನಾ ಕೇಂದ್ರದ ಪ್ರವಾಸೀ ನಿಲಯಕ್ಕೆ ಟಿ. ಸುನಂದಮ್ಮ, ಯಚ್. ಯಸ್. ಪಾರ್ವತಿ ಮೊದಲಾದ ಸಾಹಿತಿಗಳೊಂದಿಗೆ ಅನುಪಮಾ ಕಾಸರಗೋಡಿಗೆ ಬಂದು ತಲಪಿದರು. ಗಗನದೆತ್ತರ ಬೆಳೆದು, ತಲೆದೂಗುತ್ತಾ ಸ್ವಾಗತ ಬಯಸಿದ ತೆಂಗಿನ ಮರಗಳು, ಕಣ್ಣಳತೆಯ ದೂರದಲ್ಲಿಯೇ ಭೋರ್ಗರೆವ ಅರಬೀ ಸಮುದ್ರದ ತೆರೆಗಳು ಕ್ಷಣಾರ್ಧದಲ್ಲಿ ಅವರ ದಣಿವನ್ನು ನೀಗಿದುವು. ನೈಸರ್ಗಿಕ ಸೌಂದರ್ಯವನ್ನು ತುಂಬಿಕೊಂಡು, ಸಸ್ಯಶ್ಯಾಮಲೆಯಾಗಿ ಶೋಭಿಸುತ್ತಿದ್ದ ಕಾಸರಗೋಡು ಅವರ ಮನಸ್ಸನ್ನು ಸೂರೆಗೊಂಡಿತು.

ಮರುದಿನ ಮುಂಜಾನೆ, ಅನುಪಮಾ ಹಾಗೂ ಇತರ ಅತಿಥಿಗಳನ್ನು ಕಾಸರಗೋಡಿನ ಮಹಿಳೆಯರು, ಮಂಗಳ ದ್ರವ್ಯಗಳೊಂದಿಗೆ ಸ್ವಾಗತಿಸಿ, ಅಲಂಕೃತ ವಾಹನದಲ್ಲಿ ಕುಳ್ಳಿರಿಸಿ, "ನಮ್ಮ ನುಡಿ ಕನ್ನಡಾ........ನಡೆ ಕನ್ನಡಾ....ತನು ಕನ್ನಡಾ.... ಮನ ಕನ್ನಡಾ...." ಎಂದು ಘೋಷಿಸುತ್ತಾ, ಮೆರವಣಿಗೆಯಲ್ಲಿ, ಸುಸಜ್ಜಿತ "ತ್ರಿವೇಣೀಮಂಟಪ"ಕ್ಕೆ ಕರೆತಂದರು. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು (ಕಾಸರಗೋಡಿನವರು ಇದುವರೆಗೆ ಉದಯವಾಯಿತು ಎಂದು ಹಾಡಿಲ್ಲ!) ಎಂದು ಹಾಡುತ್ತಾ, ಕನ್ನಡ ಬಾವುಟದೊಂದಿಗೆ, ಹೊಸ ಯುದ್ಧ ಪತಾಕೆಯನ್ನು ಹಾರಿಸಿದರು. "ತಾಯಿ ಬಾರ, ಮೊಗವತೋರ. ಕನ್ನಡಿಗರ ಮಾತೆಯೇ" ಎಂದು ಪ್ರಾರ್ಥಿಸಿ, ಸಮ್ಮೇಳನವನ್ನು ಆರಂಭಿಸಿದರು. ವೈದೇಹಿ, ಎ. ಪಿ. ಮಾಲತಿ, ಟಿ. ಸುನಂದಮ್ಮ, ಯಚ್. ಯಸ್. ಪಾರ್ವತಿ ಮೊದಲಾದ ಖ್ಯಾತ ಸಾಹಿತಿಗಳ ನಡುವೆ, ಸರೋಜಿನಿ ಮಹಿಷಿ, ಯಸ್. ಪ್ರಮಿಳಾ ಮೊದಲಾದ ರಾಜಕಾರಣಿಗಳ ನಡುವೆ, "ಮಿನುಗುತಾರೆ" ದಿ। ಕಲ್ಪನಾ ಅವರ ಜೊತೆಗೆ ನಗುನಗುತ್ತಾ, ಸಭಾಕಲಾಪಗಳನ್ನು ನಿಯಂತ್ರಿಸುತ್ತ ಅನುಪಮಾ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿ ಕೊಟ್ಟರು.

ಸಂಜೆ ನಡೆದ ಬಹಿರಂಗ ಅಧಿವೇಶನದಲ್ಲಿ, ಅನುಪಮಾ ಕಳಕಳಿಯಿಂದ ಹೀಗೆ ನುಡಿದರು:

"ಕನ್ನಡ ಮತ್ತು ಮಲೆಯಾಳ ಕೈಕುಲುಕುವ ಕಾಸರಗೋಡಿನಲ್ಲಿ, ಪರಭಾಷಾ ಸಹಿಷ್ಣುತೆ ಕನ್ನಡದ ಹಿರಿಯ ಸಂಸ್ಕೃತಿ........ಕಥಕ್ಕಳಿ ನಮಗೆ ಇಷ್ಟ. ಮಲೆಯಾಳದ ಚೆಮ್ಮೀನು, ಚಟ್ಟಕ್ಕಾರಿ ನಾವೂ ನೋಡಿದ್ದೇವೆ. ಕೇರಳದ ವಲ್ಲತ್ತೋಳ್. ಕುಮಾರ-ನಾಶಾನ್ ಇವರನ್ನೆಲ್ಲಾ ಓದಿದ್ದೇವೆ. ಸಂತೋಷ ಪಟ್ಟಿದ್ದೇವೆ. ಹಾಗೆಯೇ ಕನ್ನಡದ

ಕೃತಿಗಳು ಮಲೆಯಾಳಕ್ಕೆ, ಮಲೆಯಾಳದಿಂದ ಕನ್ನಡಕ್ಕೆ ಬಂದಿವೆ, ಬರುತ್ತಿವೆ. ಇದರಿಂದ ಭಾಷೆ, ಭಾಷಾ ಸೌಹಾರ್ದ ಅಭಿವೃದ್ಧಿಯಾಗಬಹುದಾದರೂ, ತಾಯ್ನುಡಿಯಲ್ಲಿ ಮಾತನಾಡುವುದು ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕು. ಇದನ್ನು ಯಾರೂ ಇಲ್ಲ ಎನ್ನಲಾಗದು".

ಮರುದಿನ, ಅನುಪಮಾ ಸ್ನೇಹ ತುಂಬಿದ ಹೃದಯದೊಂದಿಗೆ, ಕನ್ನಡದ ಕಿರೀಟವೆನಿಸಿದ ಕಾಸರಗೋಡಿಗೆ ವಿದಾಯ ಹೇಳಿದರು. ಅವರ ಆತ್ಮಕಥನ, "ಸಿಹಿ-ಕಹಿ" ಯಲ್ಲಿ ಈ ಸಮ್ಮೇಳನವನ್ನು ಅವರು ಚೆನ್ನಾಗಿ ನೆನಪಿಸಿಕೊಂಡಿದ್ದಾರೆ. ಅವರು ಹೇಳಿದ ಆ "ಜನ್ಮಸಿದ್ಧ ಹಕ್ಕ"ನ್ನು ಕೇರಳದ ಜನ ಹೇಗೆ ಬಲವಂತವಾಗಿ, ಕ್ಷಣ ಕ್ಷಣಕ್ಕೂ ಕಸಿಯುತ್ತಿದ್ದಾರೆ; ಅವರ ನೇತೃತ್ವದಲ್ಲಿ, ಭಾಷಾವಾರು ಅನ್ಯಾಯದ ವಿರುದ್ಧ ಯುದ್ಧ ಕಹಳೆಯೂದಿ, ಇತಿಹಾಸ ಸೃಷ್ಟಿಸಿದ ಸ್ತ್ರೀಯರು, ಪರಿಸ್ಥಿತಿಯ ಒತ್ತಡದಿಂದ, ನಿಧಾನವಾಗಿ ಹೇಗೆ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದಾರೆಂದು ತಿಳಿದರೆ, ಅನುಪಮಾರಿಗೆಷ್ಟು ನೋವಾಗಬಹುದು!

ನೆನಪುಗಳಿಗೆ ಬಹುಮಾನ* ೧೬

- ಡಾ| ಹಾ. ಮಾ. ನಾಯಕ

"ಮುಂದೆ ಓದಬೇಕಾಗಿರಲಿಲ್ಲ. ಎಲ್ಲವೂ ಸ್ಪಷ್ಟವಾಗಿತ್ತು. ನಿರಂಜನರ ಸಾಧನ ನಾನೇ ಎಂದು ತಿಳಿದಾಗ ಆದ ಹರ್ಷ, ಸಂಭ್ರಮ ವರ್ಣಿಸಲಾಗದ್ದು. ನಾನಂತೂ ಆಗ ಮುಗಿಲಲ್ಲೇ ತೇಲಿದೆ. ಪ್ರೀತಿಸುವುದೊಂದೇ ನನಗೆ ಪ್ರಿಯವಾಗಿದ್ದ ಅಂಶ. ಅದರಿಂದಾಗಿ ಮುಂದೆ ಬರಬಹುದಾದ ಕಷ್ಟ ಪರಂಪರೆಗಳ ಅರಿವೂ ನನಗಿರಲಿಲ್ಲ.

"ಇಂಟರ್ ಮೀಡಿಯೆಟ್ ಪರೀಕ್ಷೆ ಮುಗಿಯಿತು. ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದ್ದೆ. ರಜೆ ಆರಂಭವಾದೊಡನೆ ನಿರಂಜನರ ಧ್ಯಾನ ಶುರುವಾಯಿತು. ಅವರ ಸಂಪರ್ಕ ಬಳಸುವುದು ಹೇಗೆ? ಅವರು ಚಾಮರಾಜಪೇಟೆಯ ವಿಳಾಸಕೊಟ್ಟಿದ್ದರಲ್ಲ? ನನ್ನ ತಮ್ಮ ರಾಮುವನ್ನು 'ಅವರ ರೂಮು ನೋಡಿಕೊಂಡು ಬಾ' ಎಂದು ಕಳಿಸಿದೆ.

"ರಾಮುವಿಗೆ ಅಲ್ಲಿ ರಾಜೋಪಚಾರ. ನಿರಂಜನ ಅವನನ್ನು ಹೋಟೇಲಿಗೆ ಕರೆದುಕೊಂಡು ಹೋಗಿ ತಿಂಡಿಕಾಫಿ ಕೊಡಿಸಿ, 'ನಿಮ್ಮಕ್ಕನಿಗೆ ಒಂದು ಪುಸ್ತಕ ಕೊಡ್ತೀನಿ. ದಯವಿಟ್ಟು ತಲುಪಿಸಬೇಕು' ಎಂದರು.

"ಪುಸ್ತಕ ಯಾವುದೋ ನೆನಪಿಲ್ಲ. ಆದರೆ ಅದರ ಹೊದಿಕೆಯೊಳಗಡೆ ನನಗೊಂದು ಕಾಗದವಿತ್ತು. 'ನಿಮ್ಮ ಹತ್ತಿರ ತುಂಬಾ ಮಾತನಾಡಬೇಕು. ಶುಕ್ರವಾರ ಸಂಜೆ ಐದು ಘಂಟೆಗೆ ಮಲ್ಲೇಶ್ವರಂ ರೈಲ್ವೆ ಕ್ರಾಸಿಂಗ್ ಹತ್ತಿರ ಕಾದಿರುತ್ತೇನೆ. ಬನ್ನಿ - ನಿರಂಜನ.'

"ಹೀಗೆ ಹೋಗುವುದು ಸರಿಯೆ? ಎಂಬ ಯೋಚನೆ ನನ್ನನ್ನು ಬಾಧಿಸಿತು. ನಿರಂಜನರಾದರೋ ನನಗೆ ಅದುವರೆಗೆ ಅಪರಿಚಿತರಾಗಿದ್ದವರು. ಅವರೊಂದಿಗೆ ಒಬ್ಬಳೇ ಹೋಗುವುದರಲ್ಲಿ ನನಗೆ ಭಯವೇನೂ ಇರಲಿಲ್ಲ. ಆದರೆ ತಮಾಷೆಯೆಂದರೆ ಅವರು ಬರೆದಿದ್ದ ಮೂರು ನಾಲ್ಕು 'ಸಾಧನ ಸಂಚಯ' ಕಾಲಂಗಳನ್ನು ಓದಿದ್ದ ನನಗೆ ಅವರು ತುಂಬ ಆತ್ಮೀಯರಾಗಿ ಬಿಟ್ಟಿದ್ದರು. ಅಲ್ಲದೆ ಅವರನ್ನು ನಮ್ಮ ಮನೆಗೆ ಆಹ್ವಾನಿಸುವುದೂ ಸಾಧ್ಯವಿರಲಿಲ್ಲ. ಅಥವಾ ಬೇರೆ ಯಾವ ರೀತಿಯಲ್ಲೂ ನಾವಿಬ್ಬರೂ ಮನಬಿಚ್ಚಿ ಪರಸ್ಪರ ಮಾತಾಡುವ ಹಾಗಿರಲಿಲ್ಲ.

"ಮಲ್ಲೇಶ್ವರಂ ರೈಲ್ವೆ ಕ್ರಾಸಿಂಗ್ ಬಳಿ ನಾವಿಬ್ಬರೂ ಭೇಟಿಯಾದೆವು. ಅಲ್ಲಿಂದ ಮುಂದೆ ಹೊಲಗಳಿದ್ದವು. ಅವುಗಳಾಚೆ ಕಿರ್ಲೋಸ್ಕರ್ ಕಾರ್ಖಾನೆ ಇತ್ತು. ಅದನ್ನೂ ದಾಟಿದಾಗ ಈಗಿನ ರಾಜಾಜಿನಗರ ಇರುವೆಡೆಯಲ್ಲಿ ದೊಡ್ಡ ಗುಡ್ಡವೊಂದಿತ್ತು. ಈ ಪ್ರದೇಶಕ್ಕೆ ಅಭಿಮುಖವಾಗಿ ನಡೆದೆವು. ಆಗ ವಸಂತಕಾಲ. ಎಲ್ಲೆಲ್ಲೂ ಗಿಡಮರಗಳು ಚಿಗುರಿ ಹೂ ಬಿಟ್ಟಿದ್ದುವು. ನನ್ನ ಬಾಳಿನಲ್ಲೂ ವಸಂತ ಆರಂಭವಾಗಿತ್ತು. ನಿರಂಜನರ ಜೊತೆ ಒಬ್ಬಳೇ ನಡೆಯುವುದು, ಕೊನೆಯಿಲ್ಲದಂತೆ ಮಾತಾಡುವುದು ಎಲ್ಲ ಎಷ್ಟು ಚೆನ್ನ!"

ಇದೇನೂ, ಯಾವುದೋ ಕತೆಯ ಅಥವಾ ಕಾದಂಬರಿಯ ಭಾಗವಲ್ಲ. ಈಗ ಸುದ್ದಿಯಲ್ಲಿರುವ 'ನೆನಪು : ಸಿಹಿ-ಕಹಿ' ಎಂಬ ಅನುಪಮಾ ನಿರಂಜನರ ಆತ್ಮಕಥೆಯಿಂದ ಆಯ್ದ ಕೆಲವು ಸಾಲುಗಳು. ಇಂದಿನ ಕನ್ನಡ ಸಾಹಿತ್ಯದಲ್ಲಿ "ಅನುಪಮ ಜೋಡಿ" ಯಾಗಿರುವ ನಿರಂಜನ ಮತ್ತು ಅನುಪಮಾ ಅವರ ಪ್ರೇಮಾಂಕುರ ದಿನಗಳ ಆರಂಭದ ಒಂದು ಭೇಟಿಯ ಚಿತ್ರ. ಅನುಪಮಾ ಅವರ ಬರವಣಿಗೆಯ ಮಾದರಿಯನ್ನು ತೋರಿಸುವ ಉದ್ದೇಶದಿಂದ ಇದನ್ನು ಉದ್ಧರಿಸಲಾಗಿದೆ. ಸರಳವಾದ ಬರವಣಿಗೆ, ಕಥನಾತ್ಮಕ ಶೈಲಿ. ವಾಸ್ತವವಾಗಿ ಅನುಪಮಾ ಮತ್ತು ನಿರಂಜನರ ಬದುಕು ಒಂದು ಕಾದಂಬರಿಯ ವಸ್ತು.

ಅನುಪಮಾ ಅವರಿಗೆ ಅವರ ಗೆಳತಿಯೊಬ್ಬರು ಒಂದು ಸಲ ಹೇಳಿದ್ದರಂತೆ: "ಅನುಪಮಾ, ನಿಮ್ಮ ಆತ್ಮಕಥನ ಬರೀಬೇಕು - ಅದರಲ್ಲಿ ನೀವೊಂದು ಅಧ್ಯಾಯ. ನಿರಂಜನರು ಒಂದು ಅಧ್ಯಾಯ ಬರೆದ್ರೆ ತುಂಬಾ ರಸವತ್ತಾಗಿರುತ್ತೆ!" ಆದರೆ

ಆತ್ಮಕಥೆ ಹಾಗೆ ಸಿದ್ಧಗೊಳ್ಳಲಿಲ್ಲ. ಅನುಪಮಾ ಅವರೇ ಬರೆದರು. ಇದರಲ್ಲಿ ಗಂಡ ಹೆಂಡತಿ ಇಬ್ಬರೂ ಹಾಸು ಹೊಕ್ಕಾಗಿದ್ದಾರೆ. ಈ ನೇಯ್ಗೆಯಲ್ಲಿ ಇಬ್ಬರನ್ನೂ ಬೇರ್ಪಡಿಸುವುದು ಸಾಧ್ಯವಿಲ್ಲ. ಆ ಗೆಳತಿ ನಿರೀಕ್ಷಿಸಿದ ರಸವತ್ತತೆಗೆ ಭಂಗ ಬಾರದ ಹಾಗೆ ಆತ್ಮಕಥೆ ರೂಪುಗೊಂಡಿದೆ.

ಅನುಪಮಾ ನಿರಂಜನ ಹಲವಾರು ಕಾದಂಬರಿಗಳನ್ನೂ, ಕಥಾ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಶಿಶು ಸಾಹಿತ್ಯ, ಪ್ರವಾಸಕಥನಗಳಲ್ಲದೆ ದಾಂಪತ್ಯ ಕಲೆ, ವಿಜ್ಞಾನ, ವೈದ್ಯಕೀಯಗಳಿಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನೂ ರಚಿಸಿದ್ದಾರೆ. ಅವರ ಆತ್ಮಕಥೆ ಕನ್ನಡ ಲೇಖಕಿಯರಲ್ಲಿಯೇ ಮೊದಲನೆಯದು. ಇದು 'ತರಂಗ' ವಾರಪತ್ರಿಕೆಯಲ್ಲಿ ಮೊದಲು ಧಾರಾವಾಹಿಯಾಗಿ ಮೂವತ್ತೇಳು ವಾರ ಪ್ರಕಟವಾಯಿತು. ಓದುಗರಿಂದ ಅದ್ಭುತವಾದ ಸ್ವಾಗತ ಪಡೆಯಿತು. ಕುತೂಹಲಕಾರಿ ನಿರೂಪಣೆಯೇ ಅದಕ್ಕೆ ಒಂದು ಕಾರಣ.

ಪ್ರಸ್ತುತ ಬರವಣಿಗೆಯ ಹಿನ್ನೆಲೆಯನ್ನು ಅನುಪಮಾ ಅವರೇ ಹೀಗೆ ಹೇಳಿಕೊಂಡಿದ್ದಾರೆ:

"೧೯೮೨ರಲ್ಲಿ ಎರಡನೆಯ ಬಾರಿಗೆ ಕ್ಯಾನ್ಸರ್‌ಗೆಂದು ನನಗೆ ಶಸ್ತ್ರಕ್ರಿಯೆಯಾದಾಗ ನೋವು, ದುಗುಡಗಳಿಂದ ನಾನು ಬಸವಳಿದಿದ್ದೆ. ಹೆಚ್ಚು ದಿನ ಬದುಕುವುದಿಲ್ಲ ಎಂಬ ಗ್ರಹಿಕೆಯಿತ್ತು. ಜೀವನದುದ್ದಕ್ಕೂ ಹೆಜ್ಜೆ ಹೆಜ್ಜೆಗೂ ಹೋರಾಟವೇ ನನಗಿದಿರಾಗಿತ್ತು. ವೈದ್ಯೆಯಾಗಿ, ಸಾಹಿತಿಯಾಗಿ, ಪತ್ನಿಯಾಗಿ, ಮಾತೆಯಾಗಿ ನಾನು ಉಂಡ ಸಿಹಿಕಹಿಗಳನ್ನು ನಾಲ್ಕು ಜನರ ಜೊತೆ ಹಂಚಿಕೊಂಡರೆ ನನ್ನ ಉಳಿದ ಬಾಳು ಸಹ್ಯವಾಗಬಹುದೇನೋ ಎಂದು ತೋರಿತು. ಹಾಗೇ ಬರೆಯತೊಡಗಿದ್ದು ನೆನಪು: ಸಿಹಿ - ಕಹಿ.

ಧಾರಾವಾಹಿಯಾಗಿ ಪ್ರಕಟಗೊಂಡಿದ್ದ ಕೃತಿ ಪುಸ್ತಕ ರೂಪದಲ್ಲಿ ಬರಲು ಎರಡು ವರ್ಷಗಳೇ ಹಿಡಿದವು (ಡಿ. ವಿ. ಕೆ. ಮೂರ್ತಿ. ಪ್ರಕಾಶಕರು, ಕೃಷ್ಣಮೂರ್ತಿಪುರಂ, ಮೈಸೂರು; ೧೯೮೫ : ಕಿರೀಟ ಆಕಾರದ ೩೦೭ ಪುಟಗಳು : ಬೆಲೆ ಹದಿನೆಂಟು ರೂಪಾಯಿ). ಈ ಎರಡು ವರ್ಷಗಳ ಅವಧಿಯಲ್ಲಿ ಲೇಖಕಿಯ ಬದುಕಿನಲ್ಲಿ ನಡೆದ ಮಹತ್ವದ ಘಟನೆಗಳು ಹಲವು, ಅವನ್ನು 'ಉಪಸಂಹಾರ' ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿ ಸೇರಿಸಲಾಗಿದೆ.

ನೇರ ನಿರೂಪಣೆಯಲ್ಲಿ ಅನುಪಮಾ ತಮ್ಮ ಬದುಕಿನ ನೋವು, ನಲಿವುಗಳನ್ನೂ ಕಷ್ಟಸುಖಗಳನ್ನೂ ಕಡಿಸಿದ್ದಾರೆ. ಅಲ್ಲೊಮ್ಮೆ ಇಲ್ಲೊಮ್ಮೆ ವರ್ಷಗಳು ಉಲ್ಲೇಖಗೊಂಡಿರಬಹುದು. ಆದರೆ ಪ್ರಧಾನವಾಗಿ ಇದು ನೆನಪುಗಳ ಮಾಲೆ. ಅನುಪಮಾ

ಮತ್ತು ನಿರಂಜನ ಕಥೆಗಾರರು (ಕಾದಂಬರಿಕಾರರೂ ಕಥೆಗಾರರೇ). ಅವರ ಮನೆಯ ಹೆಸರು 'ಕಥೆ'. ಅವರಿಬ್ಬರ ಬದುಕೂ ಕಥೆ. ಸಹಜವಾಗಿಯೇ 'ನೆನಪು : ಸಿಹಿ-ಕಹಿ' ಕೂಡ ಕಥೆಯೆ! ಆತ್ಮಕಥೆಗಳಲ್ಲಿ ನಾನಾ ಬಗೆಯುಂಟು. ಆದರೆ ಸಾರ್ಥಕವಾದ ಆತ್ಮಕಥೆ ಚಿಂತನಶೀಲವಾಗಿರುತ್ತದೆ. ತನ್ನ ಬದುಕಿನ ಒಂದೊಂದೂ ಪ್ರಸಂಗದ ಮೂಲಕ ಆತ್ಮಕಥನಕಾರ ಬದುಕಿನ ಬಗೆಗೆ ತನ್ನ ದೃಷ್ಟಿಯನ್ನು ಚೆಲ್ಲುತ್ತಾನೆ. ಆತ್ಮಕಥೆ ಆತ್ಮಾರ್ಥಕ ಪ್ರತಿಫಲನವಾದಾಗ ಅದಕ್ಕೆ ಮಹತ್ವ ಬರುತ್ತದೆ. ಈ ದೃಷ್ಟಿಯಿಂದ ನೋಡಿದಾಗ 'ನೆನಪು : ಸಿಹಿ-ಕಹಿ' ನಮ್ಮನ್ನು ನಿರಾಶೆಗೊಳಿಸುತ್ತದೆ. ಆದರೆ ಇದರಿಂದ ಅದರ ಸ್ವಾರಸ್ಯಕ್ಕೆ ಕುಂದಿಲ್ಲವೆಂಬುದನ್ನೂ ನಾನು ಹೇಳಬೇಕು. ನಿರಂಜನ ಕಳೆದ ಅನೇಕ ವರ್ಷಗಳಿಂದ ಪಾರ್ಶ್ವವಾಯು ಪೀಡಿತರು. ಅನುಪಮಾ ಕ್ಯಾನ್ಸರಿಗಾಗಿ ಎರಡನೇ ಸಲ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡೇ ಮೂರು ನಾಲ್ಕು ವರ್ಷಗಳು ಕಳೆದವು. ಇಷ್ಟಿದ್ದರೂ ಅವರಿಬ್ಬರ ಸೃಜನಶೀಲ ಸೃಜನೇತರ ಬರವಣಿಗೆಗೇನೂ ಕುಂದುಂಟಾಗಲಿಲ್ಲ. ಸಾವನ್ನು ಎದುರಿಗೆ ಕೂರಿಸಿಕೊಂಡು ತಮ್ಮ ಪಾಲಿಗೆ ಕೆಲಸ ತಾವು ಮಾಡಿಕೊಂಡು ಹೋಗುವುದು ಸಾಮಾನ್ಯವಾದ ಸಾಹಸವಲ್ಲ. ಇಂಥ ಮುಖಾಮುಖಿ ಎಲ್ಲರಿಗೂ ಸಾಧ್ಯವೆನಿಸುವುದಿಲ್ಲ. ಈ ಎಲ್ಲ ಬವಣೆಗಳನ್ನೂ ಅನುಪಮಾ ತಾಳಿಕೊಂಡಿದ್ದಾರೆ. ನಿರೂಪಿಸಿದ್ದಾರೆ. ಆದರೆ ಅನುಭವಗಳು ಹರಳುಗೊಳ್ಳದಿರುವುದೇ ಈ ಆತ್ಮಕಥೆಯ ಕೊರತೆಯಾಗಿದೆ.

ಅನುಪಮಾ ನಮ್ಮ ಪ್ರಮುಖ ಲೇಖಕಿಯರಲ್ಲಿ ಒಬ್ಬರು. ಲೇಖಕಿಯರ ಸಮಸ್ಯೆಗಳು ಚರ್ಚಾಸ್ಪದವೆನ್ನಿಸಿರುವ ಈ ದಿನಗಳಲ್ಲಿ ಅನುಪಮಾ ಆ ಕುರಿತೂ ಇಲ್ಲಿ ವಿಶೇಷವಾಗಿ ವಿಶ್ಲೇಷಿಸುವುದಿಲ್ಲ. ಆ ಬಗೆಗೆ ಅವರು ಪ್ರತ್ಯೇಕವಾದೊಂದು ಪುಸ್ತಕ ವನ್ನೇ ಬರೆಯಬಹುದು. ಅದಕ್ಕೆ ಇಲ್ಲೇನು ಕೆಲಸ ಎಂದು ಯಾರಾದರೂ ಕೇಳಬಹುದು. ಆದರೆ ಲೇಖಕಿಯೊಬ್ಬರು ಆತ್ಮಕಥೆ ಬರೆಯುವಾಗ ಈ ಸಮಸ್ಯೆ ಪ್ರತ್ಯೇಕಗೊಳ್ಳಲಾರದು ಎಂಬುದು ನನ್ನ ಅಭಿಪ್ರಾಯ. 'ತಮಿಳು ಸಾಹಿತ್ಯದಲ್ಲಿ ಮಹಿಳೆ' ಎಂಬ ಸಂಶೋಧನಾತ್ಮಕ ಪುಸ್ತಕವನ್ನು ಬರೆದಿರುವ ಲೇಖಕಿ ಶ್ರೀಮತಿ ಲಕ್ಷ್ಮಿ ತಮ್ಮ ಮುನ್ನುಡಿಯಲ್ಲಿ ತಮಗೆ ಎದುರಾದ ಕೆಲಸಮಸ್ಯೆಗಳನ್ನು ವಿವರಿಸಿದ್ದಾರೆ. ಒಬ್ಬರು ಪ್ರಸಿದ್ಧ ಲೇಖಕರು ಆಕೆಗೆ ಹೇಳಿದರಂತೆ-"ಮಹಿಳಾ ಲೇಖಕಿ (ಉಮನ್ ರೈಟರ್) ಎಂದಾದರೂ ಸಾಧ್ಯವೇ! ಆ ಮಾತಿನಲ್ಲೇ ವಿರೋಧಾಭಾಸವಿದೆಯಲ್ಲ". ಇದು ನಮ್ಮ ಸ್ಥಿತಿ! ಲೇಖಕಿಯೊಬ್ಬರ ಬದುಕು ಈ ಸ್ಥಿತಿಯಿಂದ ದ್ವೀಪಗೊಂಡಿರಲು ಸಾಧ್ಯ ವಿಲ್ಲ. ಅನುಪಮಾರಂಥ ಲೇಖಕಿಯರ ಬದುಕಿನ ಕಥೆಯಲ್ಲಿ ಇಂಥ ಸಮಸ್ಯೆಗಳ ಚರ್ಚೆ ಯನ್ನು ನಿರೀಕ್ಷಿಸಿದರೆ ತಪ್ಪಲ್ಲ.

'ನೆನಪು : ಸಿಹಿ-ಕಹಿ'ಗೆ ಹತ್ತು ಸಾವಿರ ರೂಪಾಯಿ ಮೊತ್ತದ ನಂಜನಗೂಡು ತಿರುಮಲಾಂಬಾ ಪ್ರಶಸ್ತಿ ಬಂದಿದೆ. ಬೆಂಗಳೂರಿನ 'ಶಾಶ್ವತೀ' ಸಂಸ್ಥೆ ಸ್ಥಾಪಿಸಿರುವ ಈ ಪ್ರಶಸ್ತಿ ಕಳೆದ ವರ್ಷ ಮರಾಠೀ ಲೇಖಕಿಯೊಬ್ಬರಿಗೆ ದೊರೆತಿತ್ತು. ಇಷ್ಟು ದೊಡ್ಡ

ಪ್ರೊತ್ಸಾದ ಪ್ರಶಸ್ತಿ ಪಡೆದ ಕನ್ನಡ ಲೇಖಕಿಯರಲ್ಲಿ ಅನುಪಮಾ ಅವರೇ ಮೊದಲಿಗರೆಂದು ತೋರುತ್ತದೆ. ಅವರಿಗೆ ಅಭಿನಂದನೆಗಳು ಸಲ್ಲುತ್ತವೆ. ಇದೊಂದು ಚಾರಿತ್ರಿಕ ಮಹತ್ವದ ಸಂಗತಿಯೆಂದು ನನಗನ್ನಿಸುತ್ತದೆ. ಆದರೆ ನಮ್ಮ ಮಾಧ್ಯಮಗಳಲ್ಲಿ ಇದಕ್ಕೆ ಸಿಕ್ಕಬೇಕಾದ ಪ್ರಚಾರ ಸಿಕ್ಕಲಿಲ್ಲ. ಪತ್ರಿಕೆಗಳು ಯಾವುದೋ ಮೂಲೆಯಲ್ಲಿ ಎರಡು ಸಾಲಿನ ವರದಿ ಪ್ರಕಟಿಸಿ ಸುಮ್ಮನಾದವು! ಇದು ನಮ್ಮಲ್ಲಿ ಇನ್ನೂ ಬೆಳೆಯ ಬೇಕಾಗಿರುವ ಔಚಿತ್ಯಪ್ರಜ್ಞೆಯನ್ನು ತೋರಿಸುತ್ತದೆ.

ತಮ್ಮ ಆತ್ಮಕಥೆ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದಾಗ "ಅದು ಪ್ರಕಟವಾಗುವ ಹೊತ್ತಿಗೆ ನಾನಿರುವುದಿಲ್ಲ ಎಂದು ತಿಳಿದುಕೊಂಡಿದ್ದೆ. ಆದರೆ ನನ್ನ ಮಕ್ಕಳ ಪುಣ್ಯದಿಂದ ನಾನಿನ್ನೂ ಬದುಕಿದ್ದೇನೆ" ಎಂದುಕೊಳ್ಳುವ ಅನುಪಮಾ ಬದುಕಿನಲ್ಲಿ ಒಂದು ಬಗೆಯ ಧನ್ಯತೆಯನ್ನು ಅನುಭವಿಸುತ್ತಾರೆ. ಅವರಿಗೆ ಇಬ್ಬರು ಮಕ್ಕಳು. ಮೊದಲಿನವಳು ತೇಜಸ್ವಿನಿ-ಅಸಾಧಾರಣ ಪ್ರತಿಭಾವಂತೆ. ಉನ್ನತ ಅಧ್ಯಯನಕ್ಕೆ ಅಮೇರಿಕೆಗೆ ಹೋದಳು. ಎರಡನೆಯವಳು ಸೀಮಂತಿನಿ- ಎಂ. ಎ. ಪದವೀಧರೆಯಾಗಿ ಅಪ್ಪ ಅಮ್ಮನನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತಳು. ಸ್ಪಂದನ ಪ್ರಕಾಶನ ಎಂಬ ಹೆಸರಿನಲ್ಲಿ ಅಪ್ಪನ ಪುಸ್ತಕಗಳನ್ನು ತಾನೇ ಸಂಪಾದಿಸಿ ಪ್ರಕಟಿಸುವ ಕೆಲಸಕ್ಕೂ ತೊಡಗಿದಳು. ತಾಯಿ ಹೇಳುತ್ತಾರೆ: "ತೇಜಸ್ವಿನಿ ಮನೆ ಬಿಟ್ಟು ದೂರ ಹೋಗಿ ಓದುವುದಕ್ಕೆ ಸಾಧ್ಯವಾದದ್ದು ಸೀಮಂತಿನಿ ನಮ್ಮ ಜೊತೆಗಿರುವ ಳೆಂಬ ಕಾರಣದಿಂದ. ಅಕ್ಕನಿಗಾಗಿ ಸೀಮಾ ಮಾಡಿದ ತ್ಯಾಗ ಬಲುದೊಡ್ಡದು ಎಂದು ನನಗನ್ನಿಸುತ್ತದೆ. ನಮ್ಮ ಮನಸ್ಸಿನ ನೆಮ್ಮದಿಗಂತೂ ಈ ಕಿರಿಮಗಳ ನಿರ್ಮಲ ಪ್ರೀತಿಯ ಹೊನಲೇ ಆಧಾರ". ಮುಂದುವರಿದು ಅನುಪಮಾ ಮತ್ತೂ ಹೇಳುತ್ತಾರೆ: "ನಿಜ, ಮುಂದೆ ಸೀಮಂತಿನಿಯ ಸ್ವಯಂವರವೂ ಆಗುತ್ತದೆ. ನಾನು ಮತ್ತು ನಿರಂಜನ ಇಬ್ಬರೇ ಇರುತ್ತೇವೆಯೋ ಕೊನೆಗೆ? ಇದ್ದರೂ ಎಷ್ಟು ಕಾಲ? ಕಷ್ಟ ಸುಖ ಎರಡಕ್ಕೂ ಇದೇ ಕಡೆಯ ಪರದೆ".

ತಮ್ಮ ಆತ್ಮಕಥೆಯನ್ನು ಮುಗಿಸುತ್ತಾ ಅನುಪಮಾ ಹೇಳುತ್ತಾರೆ : "ನಾನೀಗ ನನ್ನ ಬರೆಯುವ ಮೇಜಿಗೆ ಹಿಂದಿರುಗಿದ್ದೇನೆ. ತಲೆಯ ತುಂಬಾ ಹೊಸ ವಿಚಾರಗಳಿವೆ. ಓದಬೇಕಾದ ಹಲವಾರು ಹೊತ್ತಗೆಗಳಿವೆ. ಬರವಣಿಗೆಗೆ ಮುನ್ನ ಸಿದ್ಧ ಪಡಿಸ ಬೇಕಾದ ಟಿಪ್ಪಣಿ ಹೇರಳವಾಗಿದೆ. ಇವೆಲ್ಲದರ ಸಂಯೋಜನೆಯೊಂದಿಗೆ ನನ್ನ ಹೊಸ ಬರಹ ಆರಂಭವಾಗಬೇಕು".

"ಪ್ರಜಾವಾಣಿ"ಯ ಮೇ ೩, ೧೯೮೭ರ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ ಲೇಖನ.

7 Enlightened Kannada Writer

- Kalyani N.

Anupama Niranjana is one of the enlightened Kannada Writers. She stands apart from many writers who seem to have only a superficial acquaintance with the variegated facets of life. Anupama as a Woman, Doctor and Person has come into contact with life at various levels and depths. What is more important, she is capable of depicting life as she has perceived it with a wise mixture of detachment and compassion. This lends to her novels and stories a distinct tone.

Anupama has successfully established for herself a place in the comtemporary Kannada Literature as a writer who can represent the view point of women without ever sounding like a militant feminist. I consider it my privilege to have translated "MADHAVI" into Telugu. It has won the acclaim of many critics and readers. Many have appreciated her manner of rendering this small story in Mahabharatha which probably is one of the earliest declarations of protest against the exploitation of women by men. The novel succeeds in arousing in the reader a feeling of sympathy for Madhavi and her sisters all around us. One does wonder, "what significant change has come in the status of women in all these centuries of progress?"

In Search Of Identity 1

- Shashi Deshpande

Many years ago, when I was in Mysore with my parents, there was some sort of a gathering in a house - whose, or for what reason I cannot remember. But this memory is vivid - that of a young woman, dresses in a bright blue sari, with an eager, vivid face, who immediately asked me the meaning of a sentence from a popular Marathi song. I was taken aback at this unusual first communication from a total stranger. A little later I was told that she was the wife of the writer Niranjan. The next day Niranjan took us to his home and I learnt more about her - that she was a medical student and also a warm and very enthusiastic hostess. But my first knowledge of her was just Niranjan's wife. And, undoubtedly for her too I was only Shriranga's rather sulky - looking daughter. I little thought then, that when we met years, no, decades later in Bangalore, our common meeting point would be the thing this fact - that women are identified by their relationship to me - symbolised. By then she had successfully shaped her own independent identity and I was struggling to do so, but both of us were troubled by this question: what is a woman's real identity, real place in this man - dominated world ?

To write about Anupama is not very easy. Which Anupama does one write about ? The family woman ? The doctor ? The writer ? For me, there is an added perspective. Ellen Moers an American critic - writer, says that one of the problems of women writers, specially the earlier ones, was that of having to work in isolation. Men cama to know others of their kind in Universities, during their working lives, when travelling. This kind of a companionship of thinking men was a stimulant that women, who were confined to their homes, were deprived of. Some of them tried to over-come this handicap (and handicap it certainly is) by reading the works of other women, by writing to them, exchanging views and opinions (like Emily

Dickinson, Elizabeth Barrett Browning); others built up a kind of fragile Personal relationship based on an affinity that began with reading each others works (like Charlotte Bronte and Elizabeth Gaskell) and some wrote to older more successful writers like George Eliot, getting from them both encouragement and role - models. Most women writers however, have had to do without this kind of stimulus/encouragement, and have been deprived of something that makes a difference to a writer and his/her work.

For me, ever since I came to Bangalore, at a stage when I was just finding myself as a writer, Anupama has in some way provided such stimulus and encouragement. She was almost the first person I could relate to professionally, perhaps the first person, apart from my family, to take me seriously as a writer. In her I found a writer who took herself and her work seriously, a writer who was continuously critical of her work, while moving on to something better. Here was a writer whose philosophy, I could glimpse, was faintly similar to mine, a person with whom I could exchange books, ideas, opinions. We discussed books, specially those written by women. Simone de Beauvoir, I realised had been as much of a revelation to her as she had been to me. She introduced me to the black women writers-Alice walker, Toni Morrison and we rejoiced in the strength and vigour of this writing. When, she said, will we be able to write like this? We argued about women writers in our own country. Why, I said, should women separate themselves into a different class? This Kind of 'ghetto' isation would never make for progress. Anupama defended this as being necessary for some more years. It will take some time, she said, for women to become part of the mainstream.

To call oneself a feminist is easy. It is almost the fashion today. But feminism is a double-edged sword. If it means getting something, it also means doing without many

others - special status, protection, lack of responsibility. If to declare oneself a feminist in public adds to ones image, in private it invites ridicule. But, without giving her thinking any kind of a label, I could see it was based on a simple credo: It is the right of each human being, man or woman, to shape his or her own life. (A simple enough demand, but for it to come true, we need a revolution greater than all the revolutions until now put together.) I have not read Anupama's writing and cannot judge how far her feminism has permeated her writing. But it seems impossible that the anger I see in her is not carried over into her writing. I have seen this anger often in her. Why should women's lives, experiences, works be trivialised, marginalised? Why should there be a patronising, condescending attitude towards this work, irrespective of its merit? Why should women have to spend so much time and energy in struggling aggainst man-made bonds and restrictions? There has been anger directed inwards too. Why do women get themselves bogged down into the trivia's of daily life, bogged down by futile emotions, by guilt above all guilt? I have seen anger and pain combined at times. Why do our women writers stick to the safe sterootyped characters, themes, techniques? Why are they satisfied with the second-rate, the third-rate? I have seen the confusion in her-the egoism of a creative artist battling against the yielding, submissiveness that is so inevitably a part of female conditioning.

There is one short story of Anupama's that she regards as significant in her writing. She gave it to me to read. It is about a young woman who goes in search of a lost woman writer of an earlier generation. This woman's discovery of this lost writer is almost a process of self discovery. In a way it symbolises women in search of their own identity, trying to find not only their own voices but the voices of earlier lost generations, which alone can provide a tradition. Either way, this young woman in search of her identity seems to me to be Anupama herself.

ಡಾ। ಅನುಪಮಾ ನಿರಂಜನ ಅವರ ಕಾದಂಬರಿಗಳು

-ವಿಜಯಶ್ರೀ ಸಬರದ

ಡಾ। ಅನುಪಮಾ ನಿರಂಜನ ಅವರು ಕನ್ನಡದ ಪ್ರಮುಖ ಲೇಖಕಿ. ಅವರಿಗೆ ಮಹಿಳೆಯೆಂಬ ರಿಯಾಯಿತಿಯ ಅಗತ್ಯವಿಲ್ಲ, ಪುರುಷನಷ್ಟೇ ಸಮರ್ಥವಾಗಿ, ಗಟ್ಟಿಯಾಗಿ ಬರೆಯಬಲ್ಲಳೆಂಬುದನ್ನು ಡಾ। ಅನುಪಮಾ ಅವರು ತಮ್ಮ ಕೃತಿಗಳ ಮುಖಾಂತರ ತೋರಿಸಿಕೊಟ್ಟಿದ್ದಾರೆ. ವೈಚಾರಿಕ ಲೇಖಕ-ಲೇಖಕಿಯರ ಸಾಲಿನಲ್ಲಂತೂ ಅನುಪಮಾ ಅವನದು ದೊಡ್ಡ ಹೆಸರು.

ಕನ್ನಡ ಕಾದಂಬರಿ ಕ್ಷೇತ್ರ ತನ್ನ ಆಳ-ಅಗಲಗಳನ್ನು ವಿಸ್ತರಿಸಿಕೊಂಡು ಮುನ್ನಡೆಯುತ್ತಿರುವ ಸಂದರ್ಭದಲ್ಲಿ ಈ ಲೇಖಕಿ ಕಾದಂಬರಿ ಕ್ಷೇತ್ರಕ್ಕೆ ಕಾಲಿಟ್ಟರು. ಒಬ್ಬ ಒಳ್ಳೆಯ ವೈದ್ಯೆಯಾಗುತ್ತಲೇ ಗಟ್ಟಿ ಸಾಹಿತಿಯಾಗಿ ಬೆಳೆದು ನಿಂತರು. ಸಾಹಿತ್ಯಕ ವಾತಾವರಣದ ಮನೆತನದಲ್ಲೇ ಹುಟ್ಟಿ ಬೆಳೆದ ಇವರಿಗೆ ವೃತ್ತಿ ವೈದ್ಯಕೀಯ ಕ್ಷೇತ್ರವಾದರೂ, ಪ್ರವೃತ್ತಿ ಸಾಹಿತ್ಯವಾಯಿತು. ಕುಳಕುಂದ ಶಿವರಾಯರೆಂದೇ ಚಿರಪರಿಚಿತರಾಗಿದ್ದ ನಿರಂಜನ ಅವರೊಂದಿಗೆ ನಡೆದ ಇವರ ವಿವಾಹ ಲೇಖಕಿಯ ಗುರಿಯನ್ನು

ಸಾಧಿಸುವಲ್ಲಿ ಯಶಸ್ವಿಯಾಯಿತು. ಕುವೆಂಪು-ಕಾರಂತ-ಮಾಸ್ತಿಯವರ ಪ್ರಭಾವ, ನಿರಂಜನರ ಒತ್ತಾಸೆಗಳಿಗೆ ಒಳಗಾದ ಸೃಜನಶೀಲ ಮನಸ್ಸೊಂದು ಗರಿಗೆದರಿ ಬೆಳೆದದ್ದನ್ನು ಇವರ ಕಾದಂಬರಿಗಳ ತುಂಬಾ ಕಾಣಬಹುದಾಗಿದೆ.

ಡಾ। ಅನುಪಮಾ ಅವರು ಬರವಣಿಗೆ ಪ್ರಾರಂಭಿಸಿದ ಸಂದರ್ಭ ಒಂದು ರೀತಿಯಲ್ಲಿ ತೃಪ್ತಿಕರವಾಗಿತ್ತು. ೧೯೫೪ರಲ್ಲಿ ಇವರ ಪ್ರಥಮ ಕಾದಂಬರಿ 'ಅನಂತ ಗೀತ' ಹೊರಬಂತು. ಸ್ವಾತಂತ್ರ್ಯ ದೊರೆತು ಏಳೆಂಟು ವರುಷಗಳು ಗತಿಸಿದ ಆ ಸಂದರ್ಭ ದಲ್ಲಿ ಪ್ರಗತಿಶೀಲರ ಚಳುವಳಿ ಹಿಂದೆ ಸರಿದು, ನವ್ಯರ ಆತ್ಮಶೋಧನೆ ಮುಂದಾಗಿತ್ತು. ಪ್ರಗತಿಶೀಲ ಚಳುವಳಿಯನ್ನು ಹುಟ್ಟು ಹಾಕಿದ ಪ್ರಮುಖರಲ್ಲೊಬ್ಬರಾದ ನಿರಂಜನ ಅವರ ಪತ್ನಿಯಾದರೂ ಡಾ। ಅನುಪಮಾ ಅವರು ಪ್ರಗತಿಶೀಲರ ಸಾಲಿನಲ್ಲಿ ಸೇರಲಿಲ್ಲ. ತಾವು ಬರೆಯುವಾಗ ಇದ್ದ ನವ್ಯ ಪಂಥಕ್ಕೂ ಅವರು ಒಳಗಾಗಲಿಲ್ಲ. ಯಾವ ಪಂಥಕ್ಕೂ ಸೇರದೆ ತಮ್ಮ ಬದುಕಿನ ಅನುಭವಗಳನ್ನು ಸರಳವಾಗಿ-ಸ್ಪಷ್ಟವಾಗಿ, ವೈಚಾರಿಕವಾಗಿ-ವಸ್ತುನಿಷ್ಠವಾಗಿ ಅಭಿವ್ಯಕ್ತಿಸಿ, ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಒಂದು ಹೊಸ ಆಯಾಮ ಕಲ್ಪಿಸಿಕೊಟ್ಟವರು ಡಾ। ಅನುಪಮಾ ಅವರು. ಹಿರಿಯ ಸಾಹಿತಿಗಳ ಪ್ರಭಾವವನ್ನು ಅರಗಿಸಿಕೊಂಡು ಬೆಳೆದ ಈ ಲೇಖಕಿ ಒಬ್ಬ ವೈದ್ಯಳಾಗಿದ್ದುಕೊಂಡೇ ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಹೊಸ ಅನುಭವಗಳನ್ನು ಕಟ್ಟಿಕೊಟ್ಟರು. ಇವರ ಕಾದಂಬರಿಗಳಲ್ಲಿ ಕಾಣುವ ವಸ್ತುನಿಷ್ಠತೆ, ಮನೋವೈಜ್ಞಾನಿಕ ವಿಶ್ಲೇಷಣೆ, ವೈಚಾರಿಕತೆ ಬಂಡಾಯ ಪ್ರವೃತ್ತಿ, ಮಾನವೀಯ ಸಂಬಂಧಗಳ ನಿರೂಪಣೆ-ಇವೆಲ್ಲಾ ಕಾದಂಬರಿ ಕ್ಷೇತ್ರಕ್ಕೆ ಹೊಸ ಮಜಲು ಗಳನ್ನು ಜೋಡಿಸಿಕೊಟ್ಟಿವೆ. ಆದ್ದರಿಂದ ಡಾ। ಅನುಪಮಾ ಅವರು ಕನ್ನಡದಲ್ಲಿ ವಿಶಿಷ್ಟ ಲೇಖಕಿಯಾಗಿ ನಿಲ್ಲುತ್ತಾರೆ.

ಪ್ರಗತಿಶೀಲರ ಪ್ರಗತಿಪರ ಧೋರಣೆ ಮತ್ತು ಬಂಡಾಯ ಮನೋಭಾವ ಹಾಗೂ ನವ್ಯರ ಆತ್ಮಶೋಧನೆ ಮತ್ತು ಕಲಾತ್ಮಕತೆ ಈ ಎರಡೂ ಗುಣಗಳು ಡಾ। ಅನುಪಮಾ ಅವರ ಕಾದಂಬರಿಗಳಲ್ಲಿ ಮೇಳೈಸಿವೆ. ಪ್ರಗತಿಶೀಲ-ನವ್ಯ-ನವ್ಯೋತ್ತರಕ್ಕೆ ಪರಿಚಯವಿಲ್ಲದ ವೈದ್ಯಕೀಯ ಕ್ಷೇತ್ರದ ಅನುಭವಗಳು, ಮನೋವೈಜ್ಞಾನಿಕ ವಿಶ್ಲೇಷಣೆಗಳು ಈ ಲೇಖಕಿಯ ಕಾದಂಬರಿಗಳಲ್ಲಿ ವಿಜೃಂಭಿಸುವುದರಿಂದ ಡಾ। ಅನುಪಮಾ ಇಂದಿನ ಪ್ರಸ್ತುತ ಲೇಖಕಿಯರಲ್ಲೂ ಪ್ರಮುಖರಾಗಿ ಗಮನ ಸೆಳೆಯುತ್ತಾರೆ.

ಕನ್ನಡದ ಸಣ್ಣಕಥೆ ಮತ್ತು ಕಾದಂಬರಿಗಳಲ್ಲಿ ತಮ್ಮನ್ನು ಗುರುತಿಸಿಕೊಂಡು ಮೊದಲ ಬಾರಿಗೆ ಸಾಹಿತ್ಯಕ್ಷೇತ್ರ ಪ್ರವೇಶಿಸಿದವರಲ್ಲಿ ವಾಣಿ ಮತ್ತು ತ್ರಿವೇಣಿ ಪ್ರಮುಖರು. ಇದು ಕನ್ನಡ ಮಹಿಳಾ ಲೇಖಕಿಯರ ಮೊದಲ ಹಂತ. ಡಾ। ಅನುಪಮಾ

ನಿರಂಜನ ಮತ್ತು ಎಂ. ಕೆ. ಇಂದಿರಾ ಇವರ ಸಾಹಿತ್ಯಕ ಪ್ರವೇಶ ಎರಡನೆಯ ಹಂತ. ನಂತರ ಬಂದ ವೀಣಾ ಶಾಂತೇಶ್ವರ, ಬಿ. ಟಿ. ಲಲಿತಾ ನಾಯಕ್, ಗೀತಾ ನಾಗಭೂಷಣ, ಸಾರಾ ಅಬೂಬಕರ್, ವೈದೇಹಿ ಇವರದು ಮೂರನೆಯ ಹಂತ. ಕನ್ನಡ ಗದ್ಯ ಸಾಹಿತ್ಯದಲ್ಲಿ ಬೆಳೆದು ನಿಂತ ಮಹಿಳೆಯ ಈ ಮೂರೂ ಹಂತಗಳು ಅಧ್ಯಯನ ದೃಷ್ಟಿಯಿಂದ ತೀರಾ ಅಗತ್ಯವಾಗಿವೆ.

ಬಡತನದ ಮನೆತನದಲ್ಲಿ ಬೆಳೆದ ಅನುಪಮಾ ಅವರು ಬಡತನದಲ್ಲಿಯೇ ಬೆಳೆದು ಬಂದ ನಿರಂಜನ ಅವರನ್ನು ಮದುವೆಯಾಗಿ ಅಂತರ್ಜಾತಿ ವಿವಾಹವನ್ನು ಬದುಕಿನಲ್ಲಿ ಪ್ರಾರಂಭಿಸಿ-ಬರಹದಲ್ಲಿ ತೋರಿಸಿಕೊಟ್ಟವರು. ಹೀಗಾಗಿ ಈ ಲೇಖಕಿಯ ಬದುಕು-ಬರಹಗಳಲ್ಲಿ ಸಾವಯವ ಸಂಬಂಧವಿದೆ. ಸಂಪ್ರದಾಯಸ್ಥ ಮನೆತನದಲ್ಲಿ ಬೆಳೆದ ಈ ಲೇಖಕಿ ಅಂದಿನ ಸಂದರ್ಭದಲ್ಲಿ ಎಲ್ಲ ಸಂಪ್ರದಾಯಗಳನ್ನೂ ಹರಿದೊಗೆದು ಮನೆಯವರೊಂದಿಗೆ ವಿರೋಧ ಕಟ್ಟಿಕೊಂಡು ಅಂತರ್ಜಾತೀಯ ವಿವಾಹವಾಗುವುದರ ಮೂಲಕ ತನ್ನ ಆತ್ಮಗೌರವಕ್ಕೆ ಸ್ವಾಭಿಮಾನಕ್ಕೆ ಬೆಲೆ ಕೊಡುತ್ತಾಳೆ. ತಾನು ನಂಬಿದ ತತ್ವಗಳಿಗೆ ತಕ್ಕಂತೆ ಬದುಕನ್ನೂ ರೂಪಿಸುತ್ತಾಳೆ. ಶತಮಾನದ ಸ್ತ್ರೀ ಶೋಷಣೆಯನ್ನು ಕಿತ್ತೊಗೆದು ಹೆಣ್ಣಿನ ಬದುಕಿಗೆ ಹೊಸ ಆಶಯವಾಗಿ ನಿಲ್ಲುತ್ತಾಳೆ. ಒಬ್ಬ ವೈದ್ಯಳಾಗಿದ್ದುಕೊಂಡೇ ಸಾಹಿತ್ಯದಲ್ಲಿ ಹೊಸ ಜಗತ್ತನ್ನೇ ಸೃಷ್ಟಿಸುತ್ತಾಳೆ. ಈ ಎಲ್ಲಾ ಕಾರಣಗಳಿಂದ ಡಾ। ಅನುಪಮಾ ನಮಗಿಂದು ಪ್ರಮುಖ ಲೇಖಕಿಯಾಗುತ್ತಾರೆ. ತಣ್ಣನೆಯ ಕ್ರಾಂತಿ, ಅಬ್ಬರವಿಲ್ಲದ ಬದಲಾವಣೆ, ಸೃಜನಶೀಲ ಮನಸ್ಸು ಇವರ ಕಾದಂಬರಿಗಳಲ್ಲಿ ಕಾಣುವುದರಿಂದ, ಇವರ ನಡೆ-ನುಡಿಗಳಲ್ಲಿ ಅದು ಮೇಳೈಸಿರುವುದರಿಂದ ಇವರು ನಮಗೆ ವಿಶಿಷ್ಟ ಲೇಖಕಿಯಾಗಿ ಕಾಣುತ್ತಾರೆ.

ಡಾ। ಅನುಪಮಾ ಅವರು ಇದುವರೆಗೆ ಇಪ್ಪತ್ತೆರಡು ಕಾದಂಬರಿಗಳನ್ನು ರಚಿಸಿದ್ದಾರೆ. ೧೯೫೪ರಲ್ಲಿ ಪ್ರಕಟವಾದ ಅವರ ಮೊದಲ ಕಾದಂಬರಿ 'ಅನಂತಗೀತ'ದಿಂದ ೧೯೮೭ರಲ್ಲಿ 'ಸುಧಾ'ದಲ್ಲಿ ಧಾರವಾಹಿಯಾಗಿ ಪ್ರಕಟವಾಗುತ್ತಿರುವ 'ಆಳ' ಕಾದಂಬರಿಯ ವರೆಗೆ ಅವರ ಬೆಳವಣಿಗೆಯ ಹಂತವಿದೆ. ಇಪ್ಪತ್ತೆರಡು ಕಾದಂಬರಿಗಳಲ್ಲಿ 'ಮಾಧವಿ'ಯಂತಹ ಪೌರಾಣಿಕ ಕಾದಂಬರಿಯನ್ನು ಹೊರತುಪಡಿಸಿದರೆ ಉಳಿದ ಇಪ್ಪತ್ತೊಂದು ಕಾದಂಬರಿಗಳಲ್ಲಿ ಸಾಮಾಜಿಕ ವಸ್ತುವೇ ಪ್ರಧಾನವಾಗಿದೆ. ಸಾಮಾಜಿಕ ಹರವನ್ನು ಅಭಿವ್ಯಕ್ತಿಸುವ ಇಪ್ಪತ್ತೊಂದು ಕಾದಂಬರಿಗಳೂ ವಸ್ತು-ಪಾತ್ರ-ನಿರೂಪಣೆಯ ದೃಷ್ಟಿಯಿಂದ ತುಂಬಾ ವೈವಿಧ್ಯಮಯವಾಗಿವೆ. ಈ ಎಲ್ಲ ಕಾದಂಬರಿಗಳು ಮೂರು-ನಾಲ್ಕನೆಯ ಆವೃತ್ತಿಯನ್ನು ಕಂಡು ಇದರಲ್ಲಿ ಕೆಲವು ಮಲೆಯಾಳಂ ಮತ್ತು ತೆಲುಗು ಭಾಷೆಗಳಿಗೆ ಅನುವಾದವಾಗಿವೆ. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿವೆ. 'ಋಣ'ದಂತಹ ಸಾಮಾಜಿಕ ಕಾದಂಬರಿ 'ಋಣಮುಕ್ತಳು' ಹೆಸರಿನಲ್ಲಿ ಚಲನಚಿತ್ರವಾಗಿದೆ.

ಪ್ರಗತಿಪರ ವಿಚಾರಧಾರೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಒಬ್ಬ ಲೇಖಕಿಯ ಕೃತಿಗಳು ಇಷ್ಟು ಜನಪ್ರಿಯವಾಗಿರುವುದು ಕನ್ನಡದಲ್ಲಿ ಅಭಿಮಾನ ಪಡುವ ಸಂಗತಿಯಾಗಿದೆ.

ಸಾಮಾಜಿಕ ಪ್ರಜ್ಞೆ

ಕೊಳಚೆ ಕೊಂಪೆಯ ದಾನಿಗಳು, ಕಣಿವೆಗೆ ಬಂತು ಬೇಸಿಗೆ, ಘೋಷ, ನೂಲು ನೇಯ್ದ ಚಿತ್ರ ಮತ್ತು ಎಳೆ - ಈ ಕಾದಂಬರಿಗಳಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿದೆ. ಈ ಎಲ್ಲ ಕಾದಂಬರಿಗಳಲ್ಲಿ ಸಾಮಾಜಿಕ ಮೌಲ್ಯಗಳ ಹುಡುಕಾಟವಿದೆ. ಶ್ರೇಣೀಕೃತ ಸಮಾಜದ ಚೌಕಟ್ಟುಗಳನ್ನು ಮುರಿದು ಮುಂದೆ ಸಾಗಬಲ್ಲ ಹೊಸ ಆಶಯಗಳ ಸೃಷ್ಟಿ ಇದೆ.

ಕೊಳಚೆ ಕೊಂಪೆಯ ಜನರ ದಾರುಣ ಚಿತ್ರಣವನ್ನು 'ಕೊಳಚೆ ಕೊಂಪೆಯ ದಾನಿಗಳು' ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಕೊಳಚೆ ಪ್ರದೇಶದ ಜನತೆಯ ಬದುಕು ಮತ್ತು ಹೋರಾಟಗಳನ್ನು ಕುರಿತು ಹೇಳುವ ಈ ಕಾದಂಬರಿ ಶತಮಾನಗಳಿಂದ ಶೋಷಿತರಾದ ದಲಿತರ-ಬಡವರ ಜೀವನ ಚಿತ್ರಣದ ದಾಖಲೆಯೂ ಆಗಿದೆ. ಕೊಳಚೆ ಕೊಂಪೆಯಲ್ಲಿ ನೆಲೆಸಿರುವ ಕನ್ನಮ್ಮ-ಬಾಬು-ಅರ್ಜುನ-ನಂಜ-ಪಳನಿ-ಮುತ್ತ್ಯಾಲ - ರಾಮಕ್ಕ - ಆಂಥೋಣಿ-ಮೇರಿ-ಸಿಲ್ವಿ-ಸಂಕಪ್ಪ ಇವರೆಲ್ಲರ ಬದುಕಿನ ನೋವು-ಹಸಿವುಗಳನ್ನು ಮನಮುಟ್ಟುವಂತೆ ಚಿತ್ರಿಸಲಾಗಿದೆ. ಈ ಅಮಾಯಕ ಜನರ ಮೌಢ್ಯತೆ-ಸಿಟ್ಟು-ಕಾಮ-ಬಡತನ-ರೋಷ-ಹೋರಾಟ ಇವೆಲ್ಲವೂ ಈ ಕಾದಂಬರಿಯ ಬೆಳಕಿನಲ್ಲಿ ಸ್ಫೋಟಗೊಂಡಿವೆ. ಹನುಮಂತ ಸ್ಲಮ್‌ದಲ್ಲಿ ವಾಸಿಸುವ ಈ ಕೊಳಗೇರಿ ಜನರನ್ನು ಬೇರೆ ಕಡೆ ಕಳಿಸಲು ಸರಕಾರ ಇವರ ಜಾಗವನ್ನು ಕಬಳಿಸುತ್ತದೆಯೆಂದಾಗ, ಸಿಂಗೇ ಗೌಡನಂತಹ ನರಿಬುದ್ಧಿ ಮನುಷ್ಯ ಆ ಜಾಗದಲ್ಲಿ ಮುರುಕು ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದ ಈ ಬಡಜನರ ಹತ್ತಿರವೇ ಬಾಡಿಗೆ ವಸೂಲು ಮಾಡುತ್ತಾ ತನ್ನ ನೀಚ ರಾಜಕೀಯ ಜೀವನ ನಡೆಸುತ್ತಿದ್ದ ಚಿತ್ರಣವನ್ನು, ತಾನೊಬ್ಬ ದೊಡ್ಡ ದಾನಿಯೆಂದು ಹೇಳುವ ಈತನ ಸೋಗಲಾಡಿತನವನ್ನು ಕಾದಂಬರಿ ಪರಿಣಾಮಕಾರಿಯಾಗಿ ಹೇಳುತ್ತದೆ.

ಪುಢಾರಿಗಳಾದ ದೇವಪ್ಪ ಮತ್ತು ಸಿಂಗೇಗೌಡರು, ಕನ್ನಮ್ಮನ ಮಗಳಾದ ಭಾಗ್ಯಳ ಶೀಲ ಅಪಹರಿಸಿ ಅವಳ ಹೆಣವನ್ನು ಸ್ಲಮ್‌ದ ಕಸದ ತೊಟ್ಟಿಯಲ್ಲಿ ಒಗೆಯುವ ಹೇಯ ಕೃತ್ಯವನ್ನು ಪ್ರತಿಭಟಿಸಿದ ಸ್ಲಮ್‌ದ ಜನರಲ್ಲಿ ಲೇಖಕಿ ಹೋರಾಟವನ್ನು ಗುರುತಿಸಿದ್ದಾರೆ. ಸ್ಲಮ್‌ದ ನಿವಾಸಿ ಸಂಜೀವ ಕೊನೆಗೆ ಗೌಡರನ್ನು ಚಾಕುವಿನಿಂದ ಇರಿದು ಸಾಯಿಸುವ ಚಿತ್ರಣ ಒಂದು ರೀತಿಯ ಸೇಡಾಗದೆ, ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ನಡೆದ ಪ್ರತಿಭಟನೆಯಾಗಿದೆ. ಪೋಲಿಸರ ಹಿಂಸೆ, ಬಡವರ ಗೋಳು,

ಶ್ರೀಮಂತರ ದರ್ಪ ಇವೆಲ್ಲಾ ಯಥಾವತ್ತಾಗಿ ಮೂಡಿ ಬಂದಿವೆ. ಕೊನೆಗೆ ಸ್ಲಮ್‌ದ ಜನರ ಮೆರವಣಿಗೆಯೊಂದಿಗೆ ಕಾದಂಬರಿ ಮುಕ್ತಾಯವಾಗುವುದು ಜಾಗೃತಿಯ ಸಂಕೇತ ವಾಗುತ್ತದೆ. ಶತಮಾನಗಳಿಂದ ನೋವಿನಲ್ಲೇ ಕೈತೊಳೆದ ದಲಿತರ-ಬಡವರ ಬದುಕಿಗೆ ಹೊಸ ದಿಕ್ಕು ಸೂಚಿಸುವ ಅನೇಕ ಸಂಗತಿಗಳು ಈ ಕಾದಂಬರಿಯಲ್ಲಿ ಅರಳಿ ನಿಂತಿವೆ.

'ಕಣಿವೆಗೆ ಬಂತು ಬೇಸಗೆ' ಕಾದಂಬರಿಯೂ ಕೂಡ ಸಮಾಜದ ಬಡಜನತೆಯ ಚಿತ್ರಣವನ್ನು ಪರಿಣಾಮಕಾರಿಯಾಗಿ ಹೇಳುತ್ತದೆ. ಬಡ ರೈತನಾದ ಸಿದ್ದಪ್ಪ ಹೆಂಡತಿ ಯನ್ನು ಕಳೆದುಕೊಂಡು ಇಬ್ಬರು ಹರೆಯದ ಹೆಣ್ಣು ಮಕ್ಕಳಾದ ಸರಸ-ಜಯಾರನ್ನು ಮುಂದಿಟ್ಟುಕೊಂಡು ಪ್ರಾಮಾಣಿಕ-ಬದುಕು ಸಾಗಿಸುತ್ತಾನೆ. ಆ ಊರಿನ ಮಿಲ್ಲಿನ ಮಾಲಕ-ರಂಗಸ್ವಾಮಪ್ಪೋರ ಸಾಕುಮಗ ಗಂಗಾಧರ ಮೋಸದಿಂದ ಸರಸಳನ್ನು ವಂಚಿಸಿ ಅವಳು ಗರ್ಭಿಣಿಯಾದಾಗ ಪರಾರಿಯಾಗುವುದು, ಗಿಡ ಮೂಲಿಕೆ ಔಷಧ ತೆಗೆದುಕೊಂಡ ಸರಸ ಅಸುನೀಗುವುದು, ಜಯಾಳ ಮದುವೆಯ ಸಾಲಕ್ಕೆಂದು ಸಿದ್ದಪ್ಪ ಇದ್ದ ಜಮೀನನ್ನು ಜಮೀನ್ದಾರನ ಬಳಿ ಅಡವಿಡುವದು, ಜಮೀನ್ದಾರ ಗೋಪಾಲ ಕೃಷ್ಣಯ್ಯ ಎಳ್ಳಷ್ಟು ದಯೆ ತೋರದೆ ಬಡ್ಡಿ-ಚಕ್ರ ಬಡ್ಡಿ ಸೇರಿಸಿ ಸಿದ್ದಪ್ಪನ ಜಮೀನನ್ನು ನುಂಗಿ ಹಾಕುವದು-ಈ ಮುಂತಾದ ಶೋಷಣೆಯ ಮುಖಗಳು ಇಲ್ಲಿ ನಿಚ್ಚಳವಾಗಿ ಬಯಲಾಗಿವೆ. ಮಿಲ್ಲಿನ ಮಾಲಕರ ಸಾಕುಮಗ ಗಂಗಾಧರ ಜಯಾಳ ಮೇಲೂ ಅತ್ಯಾಚಾರವೆಸಗಲು ಪ್ರಯತ್ನಿಸುವದು ಈ ಸಮಾಜದ ಉಳ್ಳವರ ಸ್ವಾರ್ಥ-ಧೂರ್ತ ತನಗಳನ್ನು ಪ್ರಕಟಿಸುತ್ತದೆ.

ನರಹರಿಯೆನ್ನುವ ಯುವಕ ಮೊದಲು ನಿರುದ್ಯೋಗಿಯಾಗಿ ಕಷ್ಟ ಅನುಭವಿಸಿ, ಕೊನೆಗೆ ಮಿಲ್ಲಿನಲ್ಲಿ ಕೆಲಸ ಮಾಡುತ್ತಲೇ ಅಲ್ಲಿಯ ಕಾರ್ಮಿಕರನ್ನು ಸಂಘಟಿಸಿ ಹೋರಾಟ ಕ್ಕಣಿಗೊಳಿಸುವ ಕ್ರಿಯೆ ತುಂಬಾ ಮುಖ್ಯವಾಗುತ್ತದೆ. ಸಂಪ್ರದಾಯಸ್ಥ ಅರ್ಚಕನಾದ ನಾರಾಯಣ ಶರ್ಮನ ಮಗನಾದ ನರಹರಿ ವೈದಿಕ ಮನೆತನದಲ್ಲಿ ಹುಟ್ಟಿ ಬಂಡಾಯ ಗಾರನಾಗಿ ಬೆಳೆಯುವದು ಗಮನ ಸೆಳೆಯುವ ಅಂಶವಾದರೂ ಕೂಡ ಲೇಖಿಕಿ ಈತನ ಹೋರಾಟವನ್ನು ಮತ್ತು ಸಂಘಟನೆಯನ್ನು ತುಂಬಾ ಮೊಟಕುಗೊಳಿಸಿದ್ದಾರೆ. ನರಹರಿ ಜೈಲಿಗೆ ಹೋಗುವದು, ಆತನ ಪತ್ನಿ ಸಾಯುವದು, ಇವೆಲ್ಲಾ ಹೋರಾಟಗಾರರಿಗೆ ಎದುರಾಗುವ ಸಮಸ್ಯೆಗಳೆಂದು ಕಾದಂಬರಿ ಹೇಳುತ್ತದೆ. ಸಿದ್ದಪ್ಪ ಮತ್ತು ಆತನ ಮಗಳು ಜಯಾ ಆ ಹಳ್ಳಿಬಿಟ್ಟು ಹೊರಟು ಹೋಗುವದರೊಂದಿಗೆ ಈ ಕಾದಂಬರಿ ಮುಕ್ತಾಯವಾಗುತ್ತದೆ.

'ಕೊಳಚೆ ಕೊಂಪೆಯ ದಾನಿಗಳು' ಕಾದಂಬರಿಯಲ್ಲಿ ಕಾಣುವ ಸಾಮಾಜಿಕ ಕಳಕಳಿ, ಹೋರಾಟ ಮನೋಭಾವ, ಈ ಕಾದಂಬರಿಯಲ್ಲಿ ಕಾಣುವದಿಲ್ಲವಾದರೂ ಕೂಡ ನರಹರಿಯಂತಹ ಸಂಪ್ರದಾಯ ಮನೆತನದ ಯುವಕನೊಬ್ಬ ಕಾರ್ಮಿಕರನ್ನು ಸಂಘಟಿಸಿ

ಹೋರಾಡುವುದು ಮುಖ್ಯವಾಗುತ್ತದೆ. ಬಡತನದಲ್ಲಿ ನರಳುತ್ತಿದ್ದರೂ ಸ್ವಾಭಿಮಾನ ದಿಂದ ಬಾಳುತ್ತಿರುವ ಜಯಾ ಈ ಸಮಾಜದ ದುಡಿವ ವರ್ಗದ ಮಹಿಳೆಯರ ಸಂಕೇತ ವಾಗಿದ್ದಾಳೆ.

'ಕಣಿವೆಗೆ ಬಂತು ಬೇಸಗೆ' ಕಾದಂಬರಿಯಲ್ಲಿ ಸಮಾಜದ ಪಟ್ಟಭದ್ರ ಹಿತಾ ಸಕ್ತಿಗಳ ವಿರುದ್ಧ ಸಿಡಿದೇಳಲಾರದೆ ಅಂತಹ ಕ್ರೂರ ವ್ಯವಸ್ಥೆಯಿಂದಲೇ ದೂರ ಸೊರಟು ಹೋಗುವ ಬಡವರ ಗೋಳಿನ ಚಿತ್ರಣವಿದ್ದರೆ 'ಕೊಳಚೆ ಕೊಂಪೆಯ ದಾನಿಗಳು' ಕಾದಂಬರಿಯಲ್ಲಿ ಸ್ಲಮ್‌ದಲ್ಲಿದ್ದ ದಲಿತರೆಲ್ಲಾ ಒಂದಾಗಿ ಸಂಘಟನೆಗೊಂಡು ಶೋಷಣೆಯ ಕೇಂದ್ರವಾದ ಗೌಡನನ್ನೇ ಮುಗಿಸಿ ಬಿಡುವ ತೀವ್ರತರವಾದ ಪ್ರತಿಭಟನೆಯಿದೆ. ಪ್ರತಿ ಭಟನೆಯ ಎರಡೂ ಮುಖಗಳನ್ನೂ ಲೇಖಕಿ ಈ ಕಾದಂಬರಿಗಳ ಮುಖಾಂತರ ಸ್ಪಷ್ಟಗೊಳಿಸಿದ್ದಾರೆ.

'ನೂಲು ನೇಯ್ದ ಚಿತ್ರ' ಮತ್ತು 'ಎಳೆ' ಕಾದಂಬರಿಗಳು ಇದುವರೆಗೂ ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಹೊಸ ಲೋಕವನ್ನೇ ತೆರೆದು ತೋರಿಸುತ್ತವೆ, ದಿನನಿತ್ಯವೂ ಮಗ್ಗಗಳ ಸಂಗಾತಿಗಳಾಗಿ ಬದುಕಿನ ನೂಲು ನೇಯ್ದು, ಬಾಳಿನ ಎಳೆಗಳನ್ನೇ ಜೋಡಿಸಿ ಬಟ್ಟೆ ಮಾಡಿಕೊಡುವ ನೇಕಾರರ ಜೀವನದ ನೋವು-ನಲಿವುಗಳನ್ನು ಈ ಎರಡೂ ಕಾದಂಬರಿಗಳು ಸವಿಸ್ತಾರವಾಗಿ ಚಿತ್ರಿಸಿವೆ. ಸಮಾಜದ ದುಡಿವ ವರ್ಗವೊಂದರ ಸಮಗ್ರ ಪರಿಚಯ, ಆ ಜನತೆಯ ಬದುಕಿನ ಏರಿಳಿತಗಳು ಈ ಕಾದಂಬರಿಗಳಲ್ಲಿ ಕಥೆಯಾಗಿ ಹರಿದಿವೆ. ನೇಕಾರರ ಬದುಕಿನ ಚಿತ್ರಣವನ್ನು ಎಳೆ-ಎಳೆಯಾಗಿ ಬಿಡಿಸಿ ತೋರಿಸುವದರ ಜತೆಗೆ ವರ್ಗ ಹೋರಾಟದ ಆಶಯವನ್ನೂ ಸ್ಫೋಟಿಸುವದರಿಂದ 'ಎಳೆ' ಗಮನ ಸೆಳೆಯುವ ಕಾದಂಬರಿಯಾಗುತ್ತದೆ.

ಚೌಡಪ್ಪ-ಉಗ್ರಪ್ಪ-ಮುದ್ದುಸ್ವಾಮಿ ಈ ಮೂವರೂ ನೇಕಾರರೇ ಆದರೂ ಈ ಮೂವರ ಬದುಕು ಭಿನ್ನ-ಭಿನ್ನವಾಗಿದೆ. ಈ ಮೂವರ ನಡುವೆ ಅಂತಸ್ತಿನ ಗೋಡೆಗಳೆದ್ದಿವೆ. ಚೌಡಪ್ಪ ಬಡ ನೇಕಾರನಾದರೆ, ಉಗ್ರಪ್ಪ ಶ್ರೀಮಂತ ನೇಕಾರ, ಇದೇ ಜಾತಿಯಲ್ಲಿ ಹುಟ್ಟಿದ ಮುದ್ದುಸ್ವಾಮಿ ಭ್ರಷ್ಟ ರಾಜಕಾರಣಿ. ಒಂದೇ ಜಾತಿ ಯಲ್ಲಿ ಹುಟ್ಟಿದ ಈ ಮೂವರ ಬದುಕಿನ ಚಿತ್ರಣವನ್ನು ಕಟ್ಟಿಕೊಡುವದರ ಮೂಲಕ ಲೇಖಕಿ ವರ್ಗ ಹೋರಾಟದ ಆಶಯಗಳನ್ನು ಪರಿಚಯಿಸುತ್ತಾಳೆ. ಆದ್ದರಿಂದ ಅನುಪಮಾ ನಮಗಿಂದು ದೊಡ್ಡ ಲೇಖಕಿಯಾಗಿ ಕಾಣುತ್ತಾರೆ. ಪ್ರಾರಂಭದ ಕಾದಂಬರಿಗಳಲ್ಲಿ ಜಾತಿ ಯಿಂದಾಗುವ ಶೋಷಣೆ ಚಿತ್ರಿತವಾಗಿದ್ದರೆ, ನಂತರದ ಅವರ ಕಾದಂಬರಿಗಳು ಆ ಹಂತವನ್ನೂ ಮೀರಿ ವರ್ಗ ಹೋರಾಟಕ್ಕೆ, ಸಮಾಜದ ಬದಲಾವಣೆಗೆ ಕರೆಕೊಡುತ್ತವೆ. ಹೀಗಾಗಿ ಇವರ ನಂತರದ ಕಾದಂಬರಿಗಳು ತುಂಬಾ ಅಧ್ಯಯನ ಯೋಗ್ಯವಾಗುತ್ತವೆ.

ಬಡ ನೇಕಾರ ಚೌಡಪ್ಪನ ಮಗನಾದ ರಂಗದಾಸ ಊರಿನ ತಿಮ್ಮಪ್ಪನ ನೇತೃತ್ವದಲ್ಲಿ ಕಾರ್ಮಿಕರ ಸಂಘವನ್ನು ಹುಟ್ಟುಹಾಕಿ ಉಗ್ರಪ್ಪನ ಮಿಲ್‌ನಲ್ಲಿ ಅರಸಪ್ಪನ ಕೈಮುರಿದಾಗ ಪರಿಹಾರ ಕೊಡಿಸುವದು, ಹೆಚ್ಚಿನ ಅಧ್ಯಯನ ಮಾಡಿ ಬಂದು ತಾನು ಕಲಿತ ಕಾಲೇಜಿನಲ್ಲೇ ಉಪನ್ಯಾಸಕನಾಗಿ ಆ ಊರಿನ ಬಡಜನತೆಯ ಆಶಾಕಿರಣ ವಾಗುವದು, ಚಿಕ್ಕಂದಿನಲ್ಲಿಯೇ ವಿಧವೆಯಾದ ಗಿರಿಜೆಯನ್ನು ಪ್ರೀತಿಸಿ ಮದುವೆಯಾಗು ವದರ ಮುಖಾಂತರ ವಿಧವೆಗೆ ಹೊಸ ಬದುಕು ನೀಡುವುದು-ಇವೆಲ್ಲಾ ವರ್ಗ ಹೋರಾಟದ ಫಲಗಳಾಗಿ ಬಂದಿವೆ. ಹಣ-ಅಂತಸ್ತು-ಅಧಿಕಾರ ಹೇಗೆ ಜನತೆಯ ನಡುವೆ ಗೋಡೆಗಳನ್ನು ಸೃಷ್ಟಿಸುತ್ತದೆಯೆಂಬುದನ್ನೂ ಕಾದಂಬರಿ ನಿಚ್ಚಳವಾಗಿ ಹೇಳು ತ್ತದೆ. ಇಂತಹ ಗೋಡೆಗಳೆಲ್ಲಾ ಉರುಳಿ ಸಮಾನತೆಯ ಬದುಕು ಬರಬೇಕಾದರೆ ಸಮಾಜ ವ್ಯವಸ್ಥೆಯಲ್ಲಿ ವರ್ಗಹೋರಾಟವೊಂದೇ ಉತ್ತರ ಎಂಬ ಅಂಶವನ್ನು ಲೇಖಕಿ ಸ್ಪಷ್ಟ ಪಡಿಸಿದ್ದಾರೆ.

'ಘೋಷ' ಕಾದಂಬರಿಯ ವಸ್ತು ತುಂಬಾ ವಿಶಿಷ್ಟವಾದುದು. ಸಮಾಜ ವ್ಯವಸ್ಥೆಯ ಹಿನ್ನಲೆಯಲ್ಲಿ ಅದರ ಆಮೂಲಾಗ್ರ ಬದಲಾವಣೆಯ ನಿಟ್ಟಿನಲ್ಲಿ ಈ ಕಾದಂಬರಿ ಅವರ ಎಲ್ಲ ಕೃತಿಗಳಿಗಿಂತ ಅರ್ಥಪೂರ್ಣವೆನಿಸುತ್ತದೆ. ತಾವು ತಪ್ಪು ಮಾಡದೆಯೇ ಜೈಲು ಸೇರಿ ನರಕಯಾತನೆ ಅನುಭವಿಸುವ ಸಾಮಾನ್ಯ ಜನತೆಯ ಗೋಳಿನ ಚಿತ್ರಣವನ್ನು ಕಾದಂಬರಿ ತುಂಬಾ ವಾಸ್ತವವಾದ ರೀತಿಯಲ್ಲಿ ಕಟ್ಟಿಕೊಡುತ್ತದೆ. ಅಧಿಕಾರಶಾಹಿ ಕಪಿಮುಷ್ಟಿಯಲ್ಲಿ ಸಿಕ್ಕ ವ್ಯವಸ್ಥೆ ಎಷ್ಟು ಕ್ರೂರವಾಗಿರುತ್ತದೆಂಬು ದನ್ನು ಹೇಳುತ್ತಲೇ ಜೈಲಿನಲ್ಲಿನ ಕ್ರೌರ್ಯ - ದಬ್ಬಾಳಿಕೆ - ಅಮಾನವೀಯತೆಗಳನ್ನು ಪರಿಚಯಿಸುತ್ತಾ ಕಾದಂಬರಿ ನಮ್ಮ ಬದುಕಿನ ಭಾಗವಾಗಿ ಬಿಡುತ್ತದೆ.

ಇಲ್ಲಿನ ಕಥೆ ಎಲ್ಲ ಸಂದರ್ಭಕ್ಕೂ ಅನ್ವಯವಾಗುವಂತಹದು. ಹಣ-ಅಧಿಕಾರ ದಾಹದಿಂದ ಮದವೇರಿದ ಜನ ಹೇಗೆ ಪಶುಗಳಂತೆ ವರ್ತಿಸುತ್ತಾರೆಂಬುದನ್ನು ಇಲ್ಲಿ ಹೇಳಲಾಗಿದೆ. ಪ್ರಪಂಚದ ಯಾವುದೇ ಭಾಗದಲ್ಲಿ ನಡೆಯಬಹುದಾದ ಈ ಕಾದಂಬರಿಯ ಕಥಾವಸ್ತು ಸಾರ್ವತ್ರಿಕವೆನಿಸುತ್ತದೆ. ಸರ್ವಾಧಿಕಾರಿ ಕಲಮಂತನ ಕ್ರೂರತನ ನೀಲದ್ವೀಪದ ದಾರುಣಸ್ಥಿತಿಗೆ ಕಾರಣವಾದದ್ದನ್ನು ವಿವರಿಸುವ ಕಾದಂಬರಿ, ಕೊನೆಗೆ ಹೋರಾಟದ ಪ್ರಾಮುಖ್ಯತೆಯೊಂದಿಗೆ ಮುಕ್ತಾಯವಾಗುತ್ತದೆ. ಕಲಮಂತನ ದೌರ್ಜನ್ಯವಳಿದು ನೀಲದ್ವೀಪದ ಜನ ಸ್ವಾತಂತ್ರ್ಯ ಪಡೆಯುವುದು ಬದಲಾವಣೆಯ ಹಂತವನ್ನು ಸೂಚಿಸುತ್ತದೆ. ಸರ್ವಾಧಿಕಾರದ ವಿರುದ್ಧ ದ್ವೀಪದ ಜನತೆಯಲ್ಲಿ ಕಿಡಿಗೊಳ್ಳುವ ಬಂಡಾಯ ಅರ್ಥಪೂರ್ಣವೆನಿಸುತ್ತದೆ. ಹಿಂದಿನ ಅಧಿಕಾರಶಾಹಿಯ ವಿರುದ್ಧ-ಸಾಮಾನ್ಯ ಜನತೆ ನಡೆಸಿರುವ ಇಲ್ಲಿನ ಹೋರಾಟ, ಇಂದಿನ ಸಮಾಜ ವ್ಯವಸ್ಥೆಗೂ ಪ್ರಸ್ತುತವಾಗುತ್ತದೆ. ಅದ್ದರಿಂದ ಘೋಷ ಸಾರ್ವಕಾಲಿಕ ಸತ್ಯಗಳೊಂದಿಗೆ ಬೆಳಗುತ್ತದೆ.

ಹೀಗೆ ಅನುಪಮಾ ಅವರ ಇನ್ನೂ ಅನೇಕ ಕಾದಂಬರಿಗಳಲ್ಲಿ ಸಾಮಾಜಿಕ ಕಳಕಳಿ-ಅಲ್ಲಿಯ ಬಡಜನತೆಯ ದಾರುಣ ಬದುಕು-ಅದಕ್ಕೆ ಅನಿವಾರ್ಯವಾದ ಸಂಘಟನೆಯ ಮಹತ್ವ ತುಂಬಾ ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ.

ಬಂಡಾಯ ಮನೋಭಾವ

ಅನುಪಮಾ ಅವರ ಕಾದಂಬರಿಗಳ ಪ್ರಮುಖ ಆಶಯಗಳಲ್ಲಿ ಬಂಡಾಯವೂ ಒಂದು. ಸಾಹಿತ್ಯದಲ್ಲಿ ಬಂಡಾಯ ಚಳುವಳಿ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಅವರು ತಮ್ಮ ಕಾದಂಬರಿಗಳಲ್ಲಿ ಬಂಡಾಯದ ಆಶಯಗಳನ್ನು ದಾಖಲಿಸಿದ್ದಾರೆ. 'ಆಳ', 'ಮುಕ್ತಿಚಿತ್ರ',' ಘೋಷ', 'ಕೊಳಚೆ ಕೊಂಪೆಯ ದಾನಿಗಳು', 'ಎಳೆ', 'ಚಿತ್ತ ಮೋಹನ'-ಈ ಮುಂತಾದ ಕಾದಂಬರಿಗಳಲ್ಲಿ ಬಂಡಾಯದ ಧ್ವನಿಯಿದೆ. ಆಳ, ಮುಕ್ತಿಚಿತ್ರ, ಚಿತ್ತಮೋಹನ, ಈ ಕಾದಂಬರಿಗಳಲ್ಲಿ ಯಜಮಾನ ಸಂಸ್ಕೃತಿಯ ವಿರುದ್ಧ ಮತ್ತು ಅದರ ಅಂಗವಾಗಿ ಬೆಳೆದುಬಂದ ಗಂಡಿನ ದಾರ್ಷ್ಟ್ಯ ಅಹಂಭಾವಗಳ ವಿರುದ್ಧ ಬಂಡಾಯವಿದ್ದರೆ, 'ಘೋಷ' 'ಎಳೆ' ಮತ್ತು 'ಕೊಳಚೆ ಕೊಂಪೆಯ ದಾನಿಗಳು' ಕಾದಂಬರಿಗಳಲ್ಲಿ ಸಾಮಾಜಿಕ ಬಂಡಾಯವಿದೆ.

'ಆಳ' ಕಾದಂಬರಿಯ ಕಥಾನಾಯಕಿ 'ಮಾಲಿನಿ' ಬೌದ್ಧಿಕ-ಸೌಖ್ಯವನ್ನು ಬಯಸಿ ರವೀಂದ್ರನನ್ನು ಮದುವೆಯಾದರೆ, ರವೀಂದ್ರ ಅವಳಿಂದ ಬಯಸುವುದು ಕೇವಲ ದೈಹಿಕ-ಸೌಖ್ಯ ಮತ್ತು ವಿಧೇಯತೆ. ಗಂಡ-ಹೆಂಡತಿಯರ ಬದುಕಿನಲ್ಲಿ ವೈಮನಸ್ಸುಂಟಾಗಿ ಮನಸ್ಸುಗಳು ಕೆಟ್ಟರೆ ಗಂಡ-ಹೆಂಡತಿಯನ್ನು ದೂರವಿರಿಸಿ ಮತ್ತೊಂದು ಮದುವೆಯಾಗಬಹುದು. ಆದರೆ ಈ ಕಾದಂಬರಿಯಲ್ಲಿ ಹೆಂಡತಿಯಾದ 'ಮಾಲಿನಿ' ತನ್ನ ಗಂಡನ ದಾರ್ಷ್ಟ್ಯಮನೋಭಾವದ ವಿರುದ್ಧ ಬಂಡೆದ್ದು ಸ್ವಾಭಿಮಾನಕ್ಕೆ ಬೆಲೆಕೊಟ್ಟು ಅತನಿಂದ ದೂರವಾಗಿ ಬಿಡುತ್ತಾಳೆ. ಈ ಕಾದಂಬರಿಯ ನಾಯಕಿ 'ಮಾಲಿನಿ' ವಚನಕಾರ್ತಿ ಅಕ್ಕಮಹಾದೇವಿಯನ್ನು ನೆನಪಿಗೆ ತರುತ್ತಾಳೆ. ಕೇವಲ ಕಾಮುಕನಾಗಿ ಕಂಡ ಕೌಶಿಕ ಕೊನೆಗೂ ಅಕ್ಕಮಹಾದೇವಿಯನ್ನು ಮನಃಪೂರ್ವಕ ಪಡೆಯಲು ವಿಫಲನಾಗುತ್ತಾನೆ. ಪ್ರಭುವೂ-ಪತಿಯೂ ಎರಡೂ ಆಗಿದ್ದ ಕೌಶಿಕ ರಾಜನನ್ನೂ ತಿರಸ್ಕರಿಸುವುದರ ಮೂಲಕ ಅಕ್ಕಮಹಾದೇವಿ ತನ್ನ ಆತ್ಮಗೌರವಕ್ಕೆ ಬೆಲೆಕೊಡುತ್ತಾಳೆ. ಕೇವಲ ಕಾಮುಕ ಭಾವನೆಯಿಂದ ಕೂಡಿದ ಅಹಂಕಾರಿಯೊಂದಿಗೆ ಬಾಳುವುದಕ್ಕಿಂತ ಕಾಣದ ಮಲ್ಲಿಕಾರ್ಜುನನಲ್ಲಿ ಪತಿಸುಖವನ್ನರಸುತ್ತಾಳೆ. ಇಲ್ಲಿಯೂ ಕೂಡ 'ಮಾಲಿನಿ' ಈ ಪುರುಷಪ್ರಧಾನ ವ್ಯವಸ್ಥೆಯ ನಾಡಿನಲ್ಲಿ ಹೊಸ ತೀರ್ಮಾನ ತೆಗೆದುಕೊಳ್ಳುವುದರ ಮೂಲಕ ವಿಧೇಯತೆಗಿಂತ ವಿನಯ ದೊಡ್ಡದು; ಶರಣಾಗತಿಗಿಂತ ಸ್ವಾಭಿಮಾನ ಹೆಚ್ಚಿನದು ಎಂದು ಸಿದ್ಧಪಡಿಸಿದ್ದಾಳೆ. ಆದುದರಿಂದ ಅವರ ಇತ್ತೀಚಿನ ಕಾದಂಬರಿ 'ಆಳ' ತುಂಬಾ ವಿಶಿಷ್ಟವಾಗಿ ಕಾಣುತ್ತದೆ.

'ಮುಕ್ತಿಚಿತ್ರ'ದಲ್ಲೂ ಕೂಡ ಇದೇ ವಿಷಯವಿದ್ದರೂ ಕಥೆ ಬೇರೆಯಾಗುತ್ತವೆ. 'ಅಳ' ಕಾದಂಬರಿಯ ಮಾಲಿನಿ ನೇರವಾಗಿ ಬಂಡಾಯದ ನಿರ್ಧಾರ ತೆಗೆದುಕೊಂಡರೆ, 'ಮುಕ್ತಿಚಿತ್ರ'ದ ಜಾನಕಿ ತನ್ನ ಮಗಳು ಅಲಕಾ ಉಂಟುಮಾಡುವ ಜಾಗೃತಿಯಿಂದ ಎಚ್ಚೆತ್ತು ಶಾಸಕನಾದ ಸ್ವಾರ್ಥಿ ಗಂಡನಿಗೆ ಡೈವೋರ್ಸ್ ಕೊಡುತ್ತಾಳೆ.

ಈ ಎರಡೂ ಕಾದಂಬರಿಗಳಲ್ಲಿ ಹೆಂಡತಿ ಗಂಡನಿಗೆ ಡೈವೋರ್ಸ್ ಕೊಡುವುದೊಂದೇ ಬಂಡಾಯವಾಗದೆ ಲೇಖಕಿ ಗಂಡು-ಹೆಣ್ಣಿನ ಸಮಸ್ಯೆಗಳನ್ನು ಮಾನವೀಯತೆಯ ದೃಷ್ಟಿಕೋನದಿಂದ ವಿಶ್ಲೇಷಿಸುವದರಿಂದ ಮಾಲಿನಿ ಮತ್ತು ಜಾನಕಿ ಕೊಡುವ ಡೈವೋರ್ಸ್‌ಗಳು ಕೇವಲ ತಮ್ಮ ಗಂಡರಿಗಷ್ಟೇ ಆಗಿರದೆ ಅಂತಹ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಪುರುಷ ಪ್ರಧಾನ ವ್ಯವಸ್ಥೆಗೇಯೆಂಬ ಅಂಶ ಸ್ಪಷ್ಟವಾದಾಗ ಅಲ್ಲಿ ನಿಜವಾದ ಬಂಡಾಯದ ಆಶಯಗಳು ಗರಿಗೆದರುತ್ತವೆ. ಬಿಜ್ಜೋಲಿ ಗೌರಮ್ಮನಂತಿದ್ದು, ಪತಿಯೇ ದೈವವೆಂದು ತಿಳಿದು ಪತಿ ಚಿದಾನಂದನ ಶೋಷಣೆಯಲ್ಲೇ ಬದುಕು ಸಾಗಿಸಿದ 'ಮುಕ್ತಿ ಚಿತ್ರ'ದ ಜಾನಕಿಯಲ್ಲಿ ಜಾಗೃತೆಯನ್ನುಂಟು ಮಾಡಿದವರಲ್ಲಿ ಮಗಳು ಅಲಕಾ ಹಾಗೂ ಅಪ್ಪ- ಯಮುನಾ ತಾಯಿ ಕಾರಣವಾಗುತ್ತಾರೆ. ಸಂಪ್ರದಾಯದ ವಾತಾವರಣದಲ್ಲಿ ಬೆಳೆದ ವ್ಯಕ್ತಿ ತನ್ನ ಮೇಲಿನ ಶೋಷಣೆಯ ವಿರುದ್ಧ ದನಿ ಎತ್ತಬೇಕಾದರೆ ಅದಕ್ಕೆ ಸುತ್ತು-ಮುತ್ತಲಿನ ಪರಿಸರವೂ ಕೂಡ ಸಹಕಾರಿಯಾಗಿರಬೇಕೆಂಬ ಅಂಶ ಇಲ್ಲಿ ಸ್ಪಷ್ಟವಾಗುತ್ತದೆ.

'ಚಿತ್ತಮೋಹನ' ಕಾದಂಬರಿಯ ನಾಯಕಿ 'ಜಾನಕಿ' ವಿಧವೆಯಾದ ನಂತರ ತಾನು ಕೆಲಸ ಮಾಡುತ್ತಿರುವ ಕಚೇರಿಯ ಮಾಲಕನಾದ ಕಾಮತ್‌ನಲ್ಲಿ ಸಲಿಗೆ ಬೆಳೆಸುತ್ತಾಳೆ. ಸಂಪ್ರದಾಯಸ್ಥರಾದ ಅತ್ತೆ-ಮಾವಂದಿರನ್ನು ಎದುರು ಹಾಕಿಕೊಂಡು, ಇಬ್ಬರು ಮಕ್ಕಳನ್ನು ಬಿಟ್ಟುಕೊಟ್ಟು ಕಾಮತ್‌ನನ್ನು ಮರು ಮದುವೆಯಾಗಲು ಸಿದ್ಧಳಾಗುತ್ತಾಳೆ, ಆದರೆ ಕಾರು ಅಪಘಾತದಲ್ಲಿ ಕಾಮತ್ ಮಡಿದಾಗ ಗರಿಗೆದರಿದ ಜಾನಕಿಯ ರೆಕ್ಕೆಗಳು ಕತ್ತರಿಸಿ ಬೀಳುತ್ತವೆ. ಸಂಪ್ರದಾಯ ಮನೆತನದ ಹೆಣ್ಣೊಬ್ಬಳು ವಿಧವೆಯಾದ ನಂತರ ಹೀಗೆ ಆಲೋಚಿಸುವದೇ ಮಹಾಪಾಪವೆಂದು ತಿಳಿದಿರುವ ಈ ದೇಶದ ಭವ್ಯ ಸಂಸ್ಕೃತಿಯಲ್ಲಿ 'ಜಾನಕಿ'ಯಂಥವಳು ಈ ಎಲ್ಲ ಗೆರೆಗಳನ್ನು ದಾಟಲು ಹಾತೊರೆಯುತ್ತಿರುವದು ಮಾನವ ಸಹಜ ಬದುಕಿಗೆ ದೊರೆತ ಮನ್ನಣೆಯಾಗುತ್ತದೆ. ಆದರೆ ಲೇಖಕಿ ಜಾನಕಿ ಮತ್ತು ಕಾಮತ್‌ರ ಮದುವೆಯನ್ನು ಮಾಡಿಸಲಾರದೆ ಮತ್ತೆ ಸಂಪ್ರದಾಯದ ಸೆಳೆತಕ್ಕೆ ಮಾಲುತ್ತಾರೆ. ಆಗ ಬಂಡಾಯದ ಬದಲು 'ಕರುಣೆ' ಮುಖ್ಯವಾಗುತ್ತದೆ. ಹೀಗೆ ಗಂಡು-ಹೆಣ್ಣುಗಳ ನಡುವೆ ಇರುವ ತಾರತಮ್ಯದ ಬಗೆಗೆ, ಶತಮಾನಗಳ ಗಂಡಿನ ಶೋಷಣೆಯ ಬಗೆಗೆ ಈ ಮೂರು ಕಾದಂಬರಿಗಳಲ್ಲಿ ಹೆಂಡತಿಯಾದವಳು ಬಂಡಾಯವೆದ್ದಿದ್ದಾಳೆ. ಈ ಬಂಡಾಯಕ್ಕೆ ಹೊರನೋಟದಲ್ಲಿ ಅಂತಹ ಪ್ರಾಮುಖ್ಯತೆ

ಹಿಗದಿದ್ದರೂ, ಬದುಕಿನ ಒಳನೋಟಗಳನ್ನು ಪರಿಚಯಿಸಿಕೊಂಡಾಗ ಈ ದೇಶದ ಸಂಸ್ಕೃತಿಯ ಕಪಿಮುಷ್ಟಿಯಲ್ಲಿ ಹೆಣ್ಣು ಎಲ್ಲಿಯ ವರೆಗೆ ವಿಧೇಯಳಾಗಿರಬೇಕೆಂಬ ಪ್ರಶ್ನೆ ಕಾಡಿದಾಗ ನಿಜಕ್ಕೂ ಈ ಮೂರು ಕಾದಂಬರಿಗಳ ನಾಯಕಿಯರ ನಿರ್ಣಯ ಮಹತ್ವದ್ದೆನಿಸುತ್ತದೆ.

ಘೋಷ-ಕೊಳಚೆ ಕೊಂಪೆಯ ದಾನಿಗಳು - ಎಳೆ ಈ ಕಾದಂಬರಿಗಳಲ್ಲಿ ಬರುವ ಸಾಮಾಜಿಕ ಬಂಡಾಯವನ್ನು ಲೇಖಕಿ ತುಂಬಾ ಪರಿಣಾಮಕಾರಿಯಾಗಿ ಹೇಳಿದ್ದಾರೆ. ಸರ್ವಾಧಿಕಾರಿ ಕಲಮಂತನ ಕ್ರೂರತನ ನೀಲದ್ವೀಪದ ಬದುಕನ್ನು ದಾರುಣಸ್ಥಿತಿಗೆ ತಂದಾಗ ಜಯತಿಲಕನ ಬಂಡಾಯ ಮೊನಚಾಗಿ ಝಳಪಿಸಿದರೆ, ಭೂದೇವಿಯ ತಳಮಳ - ಜೀವನ ಪ್ರೀತಿಗಳು ತಣ್ಣಗಿನ ಹೋರಾಟ ಕಿಡಿಕೊಳ್ಳಲಿಕ್ಕೆ ಕಾರಣವಾಗುತ್ತವೆ. ಸರ್ವಾಧಿಕಾರದ ವಿರುದ್ಧ ನೀಲದ್ವೀಪದಲ್ಲಿ ಜನತೆಯಿಂದ ಬಂಡಾಯ ಪ್ರಾರಂಭವಾಗುತ್ತದೆ. ಕೊನೆಗೆ ಅಧಿಕಾರಶಾಹಿ ವ್ಯವಸ್ಥೆ ಕಳಚಿ ಬಿದ್ದು, ಹೊಸ ವ್ಯವಸ್ಥೆ ಬರುತ್ತದೆ.

ಕೊಳಚೆ ಕೊಂಪೆಯ ದಾನಿಗಳಲ್ಲಿ ಸ್ಲಮ್‌ದ ದಲಿತರು-ಬಡವರು ಸಿಂಗೇಗೌಡನಂತಹ ಸ್ವಾರ್ಥಿಗಳ ವಿರುದ್ಧ ಬಂಡಾಯವೆದ್ದರೆ, ಎಳೆ ಕಾದಂಬರಿಯಲ್ಲಿ ಬಡ ನೇಕಾರ ಚೌಡಪ್ಪನ ಮಗ ರಂಗದಾಸ್‌ನ ನೇತೃತ್ವದಲ್ಲಿ ಶ್ರೀಮಂತ ನೇಕಾರ ಉಗ್ರಪ್ಪನ ವಿರುದ್ಧ ಬಡ ನೇಕಾರರೆಲ್ಲಾ ಬಂಡಾಯವೇಳುತ್ತಾರೆ. 'ಘೋಷ'ದ ಬಂಡಾಯ ಸ್ವಾತಂತ್ರ್ಯದ ಪ್ರಾಮುಖ್ಯತೆಯನ್ನು ಹೇಳಿದರೆ, 'ಕೊಳಚೆ ಕೊಂಪೆಯ ದಾನಿಗಳು' ಮತ್ತು 'ಎಳೆ' ಕಾದಂಬರಿಗಳಲ್ಲಿಯ ಬಂಡಾಯ ಸಮಾನತೆಯನ್ನು ಬಯಸುತ್ತದೆ. ಈ ಎರಡೂ ಕಾದಂಬರಿಗಳ ಬಂಡಾಯದ ಆಶಯ ವರ್ಗಹೋರಾಟ ಕಿಡಿಗೊಳ್ಳುವಲ್ಲಿ ಯಶಸ್ವಿಯಾಗುತ್ತದೆ. ದಲಿತರ ಬಗೆಗೂ ಲೇಖಕಿ ತೆರೆದ ಮನಸ್ಸಿನವರಾಗಿದ್ದಾರೆ. ಕೊಳಚೆ ಕೊಂಪೆಯ ದಾನಿಗಳು' ಕಾದಂಬರಿಯಲ್ಲಿ ದಲಿತರ ಜೀವಂತ ಚಿತ್ರಣವಿದೆ. ಸ್ಲಮ್‌ದ ದಲಿತರಲ್ಲಿ ಜಾಗೃತಿಯನ್ನುಂಟು ಮಾಡಿ ಕೊನೆಗೆ ಸ್ಲಮ್‌ದ ಒಡೆಯನಾದ ಸಿಂಗೇ ಗೌಡನನ್ನು ಸಂಜೀವ ಚಾಕುವಿನಿಂದ ಇರಿದು ಪ್ರತಿಭಟಿಸುವ ರೀತಿ ಹಿಂಸಾತ್ಮಕವೆನಿಸಿದರೂ ಗೋಸುಂಬೆ ಸಂಸ್ಕೃತಿಯ ನಾಡಿನಲ್ಲಿ ಇಂತಹ ಸಂದರ್ಭ ಆಗಾಗ ಅನಿವಾರ್ಯವೆನಿಸುತ್ತದೆ. 'ಸೇವೆ' ಕಾದಂಬರಿಯಲ್ಲಿನ ದಲಿತ ವೈದ್ಯ ಡಾ। ರಾಮದಾಸ ಇಡೀ ಈ ವ್ಯವಸ್ಥೆಗೆ ಆದರ್ಶವಾಗುತ್ತಾನೆ. ದಲಿತರ ಬಗೆಗಿನ ಗೌರವಭಾವವನ್ನು ಹೆಚ್ಚಿಸುವಲ್ಲಿ ಕಾದಂಬರಿ ಯಶಸ್ವಿಯಾಗುತ್ತದೆ.

ಮಾನವೀಯ ಸಂಬಂಧಗಳು

ಮನುಷ್ಯ-ಮನುಷ್ಯರ ಸುಮಧುರ ಸಂಬಂಧಕ್ಕೆ ಸ್ನೇಹ-ಪ್ರೀತಿ-ತ್ಯಾಗ ಹೇಗೆ ಅಡಿಗಲ್ಲುಗಳಾಗುತ್ತವೆಂಬುದನ್ನು ಲೇಖಕಿ ಅನೇಕ ಕಾದಂಬರಿಗಳಲ್ಲಿ ಪ್ರತಿಪಾದಿಸಿದ್ದಾರೆ. ಮಾನವೀಯತೆ-ನಿಸ್ವಾರ್ಥ-ಆತ್ಮೀಯತೆ ಇವೆಲ್ಲಾ ಮನುಷ್ಯ-ಮನುಷ್ಯರ ನಡುವಿನ

ಸಂಬಂಧಗಳನ್ನು ಗಟ್ಟಿಗೊಳಿಸುತ್ತವೆ. ಈ ಅಂಶವನ್ನು ಅನುಪಮಾ ಅವರ ಅನೇಕ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಸತಿ-ಪತಿಗಳ ಬದುಕಿನಲ್ಲಿ ಪ್ರೀತಿ-ಪ್ರೇಮವೇ ಅಮರವಾದುದೆಂದು 'ಮೂಡಣ ಪಡುವಣ' ಕಾದಂಬರಿ ಹೇಳಿದರೆ, ಒಳ್ಳೆಯ ಸ್ನೇಹ ಬದುಕನ್ನೇ ಬೆಳಗಬಲ್ಲದೆಂಬುದನ್ನು 'ಸ್ನೇಹ ಪಲ್ಲವಿ' ಕಾದಂಬರಿ ತಿಳಿಸುತ್ತದೆ. ಹಡೆದ ತಾಯಿ, ಒಡಹುಟ್ಟಿದ ಅಕ್ಕ ಈ ರಕ್ತಸಂಬಂಧದವರೇ ತನಗೆ ಆಗದಾದಾಗ 'ಸ್ನೇಹಪಲ್ಲವಿ'ಯ ನಾಯಕಿ ಸರಳಾ ತನ್ನ ಸ್ನೇಹಿತೆ ವೇದವಲ್ಲಿಯ ಸಹಾಯ ಸಹಕಾರದಿಂದ ಹೊಸ ಬದುಕನ್ನೇ ಬಾಳಿ ಎಲ್ಲರಿಗೂ ಆದರ್ಶವಾಗುತ್ತಾಳೆ. ರಕ್ತಸಂಬಂಧಕ್ಕಿಂತ ಸ್ನೇಹ ಹೇಗೆ ಮುಖ್ಯವಾದದ್ದೆಂಬುದನ್ನು ಕಾದಂಬರಿ ಸುಂದರವಾಗಿ ವಿಶ್ಲೇಷಿಸುತ್ತದೆ.

ಶ್ರೀಮಂತಿಕೆಯ ಸುಪ್ಪತ್ತಿಗೆಯಲ್ಲಿದ್ದರೂ ಗಂಡನ ಪ್ರೀತಿಯಿಂದ ವಂಚಿತಳಾದ ವಿಜಯಾಳ ಚಿತ್ರಣ "ಸಂಕೋಲೆಯೊಳಗಿಂದ" ಕಾದಂಬರಿಯಲ್ಲಿ ಸ್ಪಷ್ಟವಾಗಿ ಮೂಡಿದೆ.

ಬದುಕನ್ನು ಪ್ರೀತಿಸಬೇಕೆಂದು 'ಹಿಮದ ಹೂ' ಕಾದಂಬರಿ ಹೇಳಿದರೆ, ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು, ಒಬ್ಬರಿಗೊಬ್ಬರು ಪೂರಕವಾಗಿ ಬದುಕುವದೇ ನಿಜವಾದ ಪ್ರೇಮವೆಂಬ ಸಂಗತಿಯನ್ನು 'ಹೃದಯವಲ್ಲಭ' ಕಾದಂಬರಿ ವಿವರಿಸುತ್ತದೆ. ವ್ಯಕ್ತಿ ಒಳ್ಳೆಯವನಾಗಲಿಕ್ಕೆ ಮತ್ತು ಕೆಟ್ಟವನಾಗಲಿಕ್ಕೆ ಆತನ ಸಂದರ್ಭ-ಪರಿಸರಗಳೇ ಕಾರಣವೆಂದು 'ಪರೀಕ್ಷೆ' ಕಾದಂಬರಿ ವಿಶ್ಲೇಷಿಸಿದರೆ, ಬದುಕಿನಲ್ಲಿ ಬರುವ 'ಪ್ರೀತಿ' ಸ್ಪಷ್ಟವಾಗದಿದ್ದಾಗ ಹೇಗೆ ಬದುಕು ದುರಂತವಾಗುತ್ತದೆಂಬುದನ್ನು 'ಅನಂತಗೀತ' ಕಾದಂಬರಿ ವಿವರಿಸುತ್ತದೆ. ಮಾನವೀಯ ಸಂಬಂಧಗಳಲ್ಲಿ ಪ್ರೀತಿಯ ಮುಖಗಳು ಸ್ಪಷ್ಟವಾಗಿರಬೇಕೆಂಬುದು ಈ ಕಾದಂಬರಿಯ ಮುಖ್ಯ ಉದ್ದೇಶ. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೇ ತನಗೆ ಆಗದೇ ಹೋದಾಗ ಆಳುಮಗ ತನ್ನ ಬದುಕಿಗೆ ಊರುಗೋಲಾಗುವದು 'ಋಣ' ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಇಬ್ಬರು ಗಂಡು ಮಕ್ಕಳಿದ್ದೂ ಅವರಿಂದ ದೂರವಾದ ಗೋದಾವರಿ ಮಲ್ಲಿಯ ಮಗ 'ಶಾಮ'ನ ಋಣದಲ್ಲಿ ಬಿದ್ದು ಕೊನೆಗೆ ತನ್ನ ಆಸ್ತಿಯನ್ನೂ ಅವನಿಗೆ ಬಿಟ್ಟುಗೊಡುವದರ ಮೂಲಕ ಋಣಮುಕ್ತಳಾಗುತ್ತಾಳೆ. ಋಣಾನುಬಂಧದ ಬದುಕು ಹೇಗೆ ವಿಚಿತ್ರವಾಗಿರುತ್ತದೆಂಬುದನ್ನು ಈ ಕಾದಂಬರಿಯಲ್ಲಿ ಹೇಳಲಾಗಿದೆ. ಹೀಗೆ ಮಾನವೀಯ ಸಂಬಂಧದ ಮಜಲುಗಳು ಅನೇಕ ಕಾದಂಬರಿಗಳಲ್ಲಿ ವಿಜೃಂಭಿಸಿವೆ. ಇಂತಹ ಕಥೆಗಳಲ್ಲೆಲ್ಲಾ ಲೇಖಕಿ ಬದುಕಿನ ಅನುಭವಗಳನ್ನು ಎಳೆ-ಎಳೆಯಾಗಿ ಬಿಡಿಸಿದ್ದಾರೆ. ಎಲ್ಲವನ್ನೂ ಬರೀ ವ್ಯಾವಹಾರಿಕ ದೃಷ್ಟಿಯಿಂದ, ಅಥವಾ ಸ್ವಾರ್ಥತನದಿಂದ ನೋಡುವ ಇವತ್ತಿನ ಸಂದರ್ಭದಲ್ಲಿ ಈ ಎಲ್ಲ ಕಾದಂಬರಿಗಳಲ್ಲಿ ನಳನಳಿಸುವ ಜೀವನ ಪ್ರೀತಿ ಸ್ನೇಹ-ತ್ಯಾಗಗಳು ಜಡಗೊಂಡ ಬದುಕಿಗೆ ಹೊಸ ಚೇತನವಾಗುತ್ತವೆ.

ಇದೇ ರೀತಿ 'ನಟಿ' ಕಾದಂಬರಿಯಲ್ಲಿ ನಟಿಯೊಬ್ಬಳ ನೋವಿನ ಜೀವನ ಚಿತ್ರಿತವಾಗಿದೆ. ಬೆಳ್ಳಿಪರದೆಯ ಮೇಲೆ ಸುಂದರವಾಗಿ ನಟಿಸುವ ನಟ ನಟಿಯರು ತಮ್ಮ ವೈಯಕ್ತಿಕ ಜೀವನದಲ್ಲಿ ಹೇಗೆ ಯಾತನೆಯನ್ನನುಭವಿಸುತ್ತಾರೆ, ಸ್ವಾರ್ಥಿಗಳು ಕಲೆಯ ಹೆಸರಿನಲ್ಲಿ ಹೇಗೆ ಕ್ರೌರ್ಯ ಪ್ರದರ್ಶಿಸುತ್ತಾರೆಂಬುದನ್ನು 'ನಟಿ' ಸುಂದರವಾಗಿ ಹೇಳಿದರೆ, 'ಆಕಾಶಗಂಗೆ' ಪ್ರಾಮಾಣಿಕ ಸಾಹಿತಿಯೊಬ್ಬನ ನೋವು-ನಲಿವಿನ ಚಿತ್ರಣ ವಾಗಿದೆ. ಅಧಿಕಾರ ಅಂತಸ್ತುಗಳಿಗಿಂತ, ಪ್ರಾಮಾಣಿಕತೆ-ಹೋರಾಟ ಈ ಕಾದಂಬರಿ ಯಲ್ಲಿ ಮುಖ್ಯವಾಗುತ್ತವೆ. ಆಸ್ಪತ್ರೆಗಳಲ್ಲಿನ ನರ್ಸ್‌ಗಳ ವೈವಿಧ್ಯಮಯ ಕಥೆಯನ್ನು 'ಶ್ವೇತಾಂಬರಿ'ಯಲ್ಲಿ ವಿವರಿಸಲಾಗಿದೆ. ಬಿಳಿಯ ವಸ್ತ್ರ ಧರಿಸಿ ರೋಗಿಗಳ ಆರೈಕೆ ಮಾಡುವ ನರ್ಸ್ ವೃತ್ತಿ ತುಂಬಾ ಪವಿತ್ರವಾದುದೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಅನುಪಮಾ ಅವರ ಮತ್ತೊಂದು ವಿಶಿಷ್ಟ ಅಂಶವಾದ ಮನೋವೈಜ್ಞಾನಿಕ ವಿಶ್ಲೇಷಣೆ 'ಸೇವೆ', 'ಚಿತ್ತಮೋಹನ', 'ಮುಕ್ತಿಚಿತ್ರ', 'ಸಸ್ಯಶ್ಯಾಮಲಾ' ಕಾದಂಬರಿ ಗಳಲ್ಲಿ ತುಂಬಾ ಹೃದಯಂಗಮವಾಗಿ ಮೂಡಿಬಂದಿದೆ.

ಪೌರಾಣಿಕ ಕಾದಂಬರಿ

ಅನುಪಮಾ ಅವರ ಏಕೈಕ ಪೌರಾಣಿಕ ಕಾದಂಬರಿ 'ಮಾಧವಿ'. ಕನ್ನಡ ಪೌರಾಣಿಕ ಕಾದಂಬರಿಗಳಲ್ಲಿ ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳುವ ಕಾದಂಬರಿ 'ಮಾಧವಿ'. ಪುರಾಣವನ್ನೂ ಕೂಡ ಬದುಕಿನ ವಾಸ್ತವತೆಯಿಂದ ಕಾಣುವ ಹೊಸ ಆಲೋಚನಾಕ್ರಮ ಈ ಕಾದಂಬರಿಯಲ್ಲಿದೆ. ಪುರಾಣ ಸುಳ್ಳು-ಅರೆಸುಳ್ಳುಗಳನ್ನು ಹೇಳಿದರೆ, ಇತಿಹಾಸ ಸತ್ಯವನ್ನು ಸತ್ಯಕ್ಕೆ ಸಮೀಪಿಸಿದ ಸಂಗತಿಗಳನ್ನು ಹೇಳುತ್ತದೆ. ಆದರೆ ಅನುಪಮಾ ಅವರು ಇಲ್ಲಿ ಪುರಾಣ ವಸ್ತುವಿನ ಮುಖಾಂತರ ಸತ್ಯವನ್ನು ಹೇಳಿದ್ದಾರೆ. ಆದ್ದರಿಂದ ಉಳಿದ ಪೌರಾಣಿಕ ಕಾದಂಬರಿಗಳಿಗಿಂತ 'ಮಾಧವಿ' ಪ್ರಮುಖ ಕೃತಿಯಾಗುತ್ತದೆ. ಈ ಪೌರಾಣಿಕ ಕಾದಂಬರಿಯಲ್ಲಿಯೇ ಪ್ರತಿಭಟನೆಯ ಶಕ್ತಿಯನ್ನು ತುಂಬಿದ್ದು ಅನುಪಮಾ ಅವರ ಕೊಡುಗೆಯಾಗುತ್ತದೆ.

ಖ್ಯಾತ ಸಮಾಜ ವಿಜ್ಞಾನಿ ಶ್ರೀಮತಿ ಇರಾವತಿ ಕರ್ವೆಯವರ ಕೃತಿ 'ಯುಗಾಂತ' ಹಾಗೂ ಶ್ರೀಪಾದ ಅಮೃತ ಡಾಂಗೆಯವರ "India From Primitive Communism to Slavery"ಎಂಬ ಕೃತಿಗಳು ಈ ಕಾದಂಬರಿ ರಚನೆಗೆ ಪ್ರೇರಣೆ ಯಾಗಿವೆ. ಮಹಾಭಾರತದ ಉದ್ಯೋಗಪರ್ವದ ಶ್ಲೋಕಗಳಲ್ಲಿ ಉಲ್ಲೇಖಿಸಲ್ಪಟ್ಟ ಮಾಧವಿಯ ಬದುಕಿನ ಚಿತ್ರಣವೇ ಈ ಕಾದಂಬರಿಯ ವಸ್ತು.

ಪುರಾಣ ಪ್ರಸಿದ್ಧಿ ಪಡೆದ 'ಯಯಾತಿ' ದೊರೆಯ ಮಗಳು ಮಾಧವಿ. ಯಯಾತಿ ಕುರುವಂಶದ ಮೂಲಪುರುಷ. ಭೀಷ್ಮನಿಗೂ ಈತನಿಗೂ ಆರು ತಲೆಮಾರುಗಳ ಅಂತರವಿದ್ದುದರಿಂದ 'ಮಾಧವಿ' ಕಥೆ ಮಹಾಭಾರತದ ಘಟನೆಗಿಂತ ಮೂರು ಶತಮಾನ ಗಳ ಹಿಂದೆ ನಡೆದದ್ದು. 'ಮಾಧವಿ' ಮಹಾಭಾರತದಲ್ಲಿ ನಡೆದ ಒಂದು ಉಪಕಥೆ.

ಈ ಕಥೆಯನ್ನಾಧರಿಸಿ ಬಿಚ್ಚಿಕೊಳ್ಳುವ ಈ ಕಾದಂಬರಿಯಲ್ಲಿ ಅಂದಿನ ಸಮಾಜ ವ್ಯವಸ್ಥೆಯಲ್ಲಿನ ಯಜಮಾನ ಸಂಸ್ಕೃತಿಯ ದರ್ಪವಿದೆ. ಆದಿಮಾನವರಲ್ಲಿ ಮೊದಲಿಗೆ ಸಂಸಾರ ಮಾತೃಪ್ರಧಾನವಾಗಿತ್ತು. ಆದರೆ ಬರು-ಬರುತ್ತಾ ಪುರುಷ ತನ್ನ ಉತ್ಪಾದನಾ ಸಾಮಗ್ರಿ ಹೆಚ್ಚಿಸಿಕೊಂಡಂತೆ ಯಯಾತಿಯ ಕಾಲಕ್ಕೆ ಅದು ಪಿತೃಪ್ರಧಾನವಾಯಿತು. ಈ ಮಾತುಗಳನ್ನು ಲೇಖಕಿ ಕಾದಂಬರಿಯ ಪ್ರಾರಂಭದಲ್ಲೇ ಸ್ಪಷ್ಟಗೊಳಿಸಿದ್ದಾರೆ. ರಾಜಶಾಹಿ ಸಮಾಜ ವ್ಯವಸ್ಥೆಯಲ್ಲಿದ್ದ ಹೆಂಗಸನ್ನು ಕೊಳ್ಳುವದು, ಮಾರುವದು, ದಾನಮಾಡುವದು, ನಿಯೋಗ ಮಾಡುವದು ಈ ಎಲ್ಲ ಪದ್ಧತಿಗಳ ಮೂಲಕ ನಡೆಯುವ ಹೆಣ್ಣಿನ ನಿರಂತರ ಶೋಷಣೆಯನ್ನು ಈ ಕಾದಂಬರಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಈ ಕಾದಂಬರಿಯನ್ನು ಓದಿದಾಗ ಹೆಣ್ಣು ಹಿಂದೆ ಎಷ್ಟು ಯಮಯಾತನೆ ಪಟ್ಟಿರಬೇಕೆಂಬ ಕಲ್ಪನೆಯೇ ಭಯ ಹುಟ್ಟಿಸುತ್ತದೆ.

ಮಾಧವಿ ರಾಜಕುಮಾರಿಯಾಗಿ ಹುಟ್ಟಿಯೂ ಅನುಭವಿಸುವ ಕಷ್ಟ ಯಾತನೆಗಳು ಅಂದಿನ ಸಮಾಜದ ದಬ್ಬಾಳಿಕೆಗೆ, ಕ್ರೌರ್ಯಕ್ಕೆ ಹಿಡಿದ ಕೈಗನ್ನಡಿಗಳಾಗಿವೆ. ಯಯಾತಿ ರಾಜ ವಿಶ್ವಾಮಿತ್ರನ ಶಿಷ್ಯನಾದ ಗಾವಲ ಋಷಿಗೆ ಹನ್ನೆರಡು ಕುದುರೆಗಳ ಬದಲು ತನ್ನ ಮಗಳಾದ ಮಾಧವಿಯನ್ನೇ ದಾನಮಾಡುತ್ತಾನೆ. ಹೀಗೆ ಸಿಕ್ಕ ಮಾಧವಿಯನ್ನು ಗಾವಲ ಋಷಿ ಹರ್ಯಶ್ವ, ಉಶೀನರ, ದೀವೋದಾಸನಂತಹ ರಾಜರಿಗೆ ಒಂದೊಂದು ವರ್ಷದ ಅವಧಿಯ ವರೆಗೆ ಮಾರಾಟ ಮಾಡಿ ಆಕೆಯಿಂದ ಅವರಿಗೆ ಒಂದೊಂದು ಮಗುವಾದಾಗ, ಕೊನೆಗೆ ಇನ್ನೂ ಕುದುರೆಗಳು ಕಡಿಮೆ ಬಿದ್ದಾಗ ವಿಶ್ವಾಮಿತ್ರನ ಹತ್ತಿರ ತಂದು ಮಾಧವಿಯನ್ನು ಅರ್ಪಿಸುತ್ತಾನೆ. ಕೊನೆಗೆ ವಿಶ್ವಾಮಿತ್ರನಿಗೂ ಮಾಧವಿ ಒಂದು ಮಗುವನ್ನು ನೀಡಿದಾಗ ಗಾವಲ ಆಕೆಯನ್ನು ತಂದೆಯಾದ ಯಯಾತಿ ರಾಜನ ಮನೆಗೆ ಕರೆತಂದು ಒಪ್ಪಿಸುತ್ತಾನೆ. ಆಗ ತಂದೆ ಮಾಧವಿಗೆ ಸ್ವಯಂವರ ಏರ್ಪಡಿಸುತ್ತಾನೆ. ವಿಶ್ವಾಮಿತ್ರನೊಂದಿಗೆ ಮೂರು ರಾಜರಿಗೂ ದೇಹವನ್ನೊಪ್ಪಿಸಿ ಅವರೆಲ್ಲರಿಗೂ ಒಂದೊಂದರಂತೆ ನಾಲ್ಕು ಗಂಡು ಮಕ್ಕಳನ್ನು ಹೆತ್ತು ಬಿಟ್ಟು ಬಂದ ಮಾಧವಿಯ ಕೋಪ ಜ್ವಾಲೆಯಾಗುತ್ತದೆ. ಹೆಣ್ಣನ್ನು ದನದಂತೆ ಮಾರಾಟ ಮಾಡುವ ಅಂದಿನ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸುವದಕ್ಕೋಸ್ಕರ ಆಕೆ ತಂದೆ ಏರ್ಪಡಿಸಿದ ಸ್ವಯಂವರವನ್ನು ತಿರಸ್ಕರಿಸುವದರ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ. ಹೆಣ್ಣಿನ ಬಗೆಗೆ ಎಂತಹ ನಿಕೃಷ್ಟ ಭಾವನೆ ಅಂದಿನ ಸಮಾಜ ವ್ಯವಸ್ಥೆಯಲ್ಲಿತ್ತೆಂಬುದನ್ನು ಕಾದಂಬರಿ ತುಂಬಾ ಪರಿಣಾಮಕಾರಿಯಾಗಿ ಹೇಳುತ್ತದೆ.

ಮೂಲಕಥೆಯ ವಸ್ತುವಿನಿಂದ ಅದರ ಆಶಯದಲ್ಲಿ ಬದಲಾವಣೆ ಮಾಡಿಕೊಂಡ ಲೇಖಕಿ ಇಲ್ಲಿ ಹೊಸತನ ಮೆರೆದಿದ್ದಾರೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲೇ 'ಮಾಧವಿ'ಗೆ

ಮಹತ್ವದ ಸ್ಥಾನವಿದೆ. ಹೆಣ್ಣಿನ ಯಮಯಾತನೆಯನ್ನು ಲೇಖಿಕಿ ತುಂಬಾ ಸಂಯಮದಿಂದ ಚಿತ್ರಿಸಿದ್ದಾರೆ. ಶತಮಾನಗಳ ಮೌನದೊಳಗಿದ್ದುಕೊಂಡೇ ಅಂದಿನ ಸಮಾಜ ವ್ಯವಸ್ಥೆಗೆ ಸವಾಲಾಗುವ ಮಾಧವಿ ನಮಗಿಂದಿಗೂ ಪ್ರಸ್ತುತವಾಗುತ್ತಾಳೆ.

ಸ್ತ್ರೀಪಾತ್ರಗಳು

ಅನುಪಮಾ ಅವರ ಕಾದಂಬರಿಗಳಲ್ಲಿ ಬರುವ ಸ್ತ್ರೀಪಾತ್ರಗಳಿಗೆ ಒಂದು ವೈಶಿಷ್ಟ್ಯತೆ ಇದೆ. ಉಳಿದ ಕಾದಂಬರಿಗಳ ಸ್ತ್ರೀಪಾತ್ರಗಳಂತೆ ಇವರ ಸ್ತ್ರೀಪಾತ್ರಗಳು ಕೇವಲ ಅಡುಗೆ ಮನೆಯ ಗೌರಮ್ಮಗಳಾಗದೆ, ಪತಿಯೇ ಪರದೈವವೆಂದು ತಿಳಿದು ಪತಿಯ ಪಾದಪೂಜೆಯಲ್ಲಿಯೇ ಸಕಲವನ್ನೂ ಕಾಣುವ ಭ್ರಮಿಷ್ಟರಾಗದೆ, ಮನುಷ್ಯರಾಗಿ ಮಾತನಾಡುತ್ತಾರೆ. ಹೆಣ್ಣು-ಗಂಡುಗಳ ಅಂತರವನ್ನು ಅಳಿಸಿಹಾಕಲು ಪ್ರಯತ್ನಿಸುತ್ತಾರೆ. ಸಮಾನತೆಯ ಬದುಕಿಗಾಗಿ ಹಾತೊರೆಯುತ್ತಾರೆ. ಕನಸು ಭ್ರಮೆಗಳನ್ನು ಬದಿಗೊತ್ತಿ ಪ್ರತಿಭಟನೆ, ಹೋರಾಟದ ಮೂಲಕ ಹೊಸ ದಿಕ್ಕುಗಳನ್ನು ಕಂಡುಕೊಳ್ಳುತ್ತಾರೆ. ಶತಮಾನಗಳ ಮೌನವೊಡೆದು ಮಾತನಾಡುತ್ತಾರೆ. ಆದ್ದರಿಂದ ಅನುಪಮಾ ಅವರ ಸ್ತ್ರೀಪಾತ್ರಗಳಿಗೆ ವಿಶಿಷ್ಟತೆ ಇದೆ. ಈ ಪಾತ್ರಗಳು ಕೇವಲ ಕಾದಂಬರಿಯ ಪುಟಗಳಿಗಷ್ಟೇ ಸೀಮಿತವಾಗದೆ ಇವರೆಲ್ಲರೂ ಬದುಕಿನ ಇಡೀ ಭಾಗವಾಗುವದರಿಂದ ಅನುಪಮಾ ನಮಗೆ ದೊಡ್ಡ ಸಾಹಿತಿಯಾಗಿ ಕಾಣುತ್ತಾರೆ.

'ಆಳ'ದ ಮಾಲಿನಿ, 'ಮುಕ್ತಿಚಿತ್ರ'ದ ಅಲಕಾ ಮತ್ತು ಜಾನಕಿ, 'ಘೋಷ'ದ ಭೂದೇವಿ, 'ಎಳೆ'ಯ ಗಿರಿಜಾ, 'ಚಿತ್ತಮೋಹನ'ದ ಜಾನಕಿ 'ಋಣ'ದ ಗೋದಾವರಿ, 'ಸ್ನೇಹಪಲ್ಲವಿ'ಯ ಸರಳಾ, 'ಶ್ವೇತಾಂಬರಿ'ಯ ರಾಧಾ ಮತ್ತು ಪೌರಾಣಿಕ ಕಾದಂಬರಿಯ ಮಾಧವಿ ಈ ಎಲ್ಲಾ ಸ್ತ್ರೀಪಾತ್ರಗಳು ಸಮಾಜ ವ್ಯವಸ್ಥೆಯಲ್ಲಿನ ಸ್ತ್ರೀಸಮೂಹವನ್ನು ಪ್ರತಿನಿಧಿಸುವದರ ಮೂಲಕ ಹೆಣ್ಣಿನ ಬದುಕಿನ ಹೊಸದಿಕ್ಕುಗಳನ್ನೇ ತೆರೆದು ತೋರಿಸುತ್ತವೆ.

'ಆಳ'ದ ಮಾಲಿನಿ ಮತ್ತು 'ಮುಕ್ತಿಚಿತ್ರ' ಕಾದಂಬರಿಯ ಅಲಕಾ ಹಾಗೂ ಜಾನಕಿಯರು ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಬಂಡೆದ್ದರೆ, 'ಚಿತ್ತಮೋಹನ'ದ ಜಾನಕಿ 'ಸ್ನೇಹಪಲ್ಲವಿ'ಯ ಸರಳಾ 'ಎಳೆ' ಕಾದಂಬರಿಯ ಗಿರಿಜಾ - ಇವರೆಲ್ಲಾ ಸಂಪ್ರದಾಯದ ವಿರುದ್ಧ, ಜಾತಿ ವ್ಯವಸ್ಥೆಯ ವಿರುದ್ಧ ಬಂಡೇಳುತ್ತಾರೆ. 'ಘೋಷ' ಕಾದಂಬರಿಯ ಭೂದೇವಿ ಸರ್ವಾಧಿಕಾರ ವ್ಯವಸ್ಥೆಯನ್ನು ಪ್ರತಿಭಟಿಸುವಲ್ಲಿ ಮಹತ್ವದ ಸ್ಥಾನ ಪಡೆದರೆ, ಪೌರಾಣಿಕ ಕಾದಂಬರಿಯ ಮಾಧವಿ ಹೆಣ್ಣಿನ ಶತಮಾನಗಳ ನೋವಿಗೆ ಉತ್ತರವಾಗುತ್ತಾಳೆ. 'ಶ್ವೇತಾಂಬರಿ'ಯ ರಾಧಾ ಕರ್ತವ್ಯನಿಷ್ಠೆಯ ಸಂಕೇತವಾಗಿ, ಪವಿತ್ರಪ್ರೇಮದ ಪ್ರತೀಕವಾಗಿ ಅರಳಿದರೆ, 'ಋಣ' ಕಾದಂಬರಿಯ ಗೋದಾವರಿ ಋಣ ಮುಕ್ತಳಾಗುವದರ ಮೂಲಕ ದೊಡ್ಡವಳಾಗುತ್ತಾಳೆ.

ಶತಮಾನಗಳಿಂದ ಶೋಷಿತರಾದರೂ ಇಲ್ಲಿಯ ಸ್ತ್ರೀಪಾತ್ರಗಳು ಗಂಡಸಿನ ಮೇಲೆ-ವ್ಯವಸ್ಥೆಯ ಮೇಲೆ ಸೇಡು ತೀರಿಸಿಕೊಳ್ಳುವದಿಲ್ಲ. ಅದರ ಬದಲಾಗಿ ಸಮಾನತೆಯ ಬದುಕು ಕೇಳುತ್ತಾರೆ. ಪ್ರೀತಿ ತ್ಯಾಗಗಳ ಉದ್ಯಾನವಾಗುತ್ತಾರೆ. ಗಂಡಿಗಿಂತ ಹೆಣ್ಣು ಮೇಲು, ಹೆಣ್ಣಿಗಿಂತ ಗಂಡು ಮೇಲುಗಳೆಂಬ ವ್ಯರ್ಥ ಭ್ರಮೆಗಳು ಇಲ್ಲಿಲ್ಲ. ಗಂಡು ಹೆಣ್ಣು ಸಮಾನತೆಯಿಂದ, ಸೌಹಾರ್ದತೆಯಿಂದ, ಒಬ್ಬರನ್ನೊಬ್ಬರು ಅರ್ಥೈಸಿಕೊಂಡು ಬದುಕುವ ಪರಿಯನ್ನು ಲೇಖಕಿ ಹೇಳುತ್ತಾರೆ. ಹೆಣ್ಣು ಮೇಲು-ಗಂಡು ಮೇಲು ಎಂಬಂತಹ ಕ್ಷುಲ್ಲಕ ವಿಷಯಗಳನ್ನೇ ಬೆಳೆಸುವುದರ ಬದಲು ಅವರಿಬ್ಬರಿಗೂ ಕಾಡುವ ಬದುಕಿನ ಸಮಸ್ಯೆಗಳತ್ತ ಗಮನಹರಿಸುವದರಿಂದ ಅನುಪಮಾ ತೀರಾ ಮುಖ್ಯವಾಗುತ್ತಾರೆ. ಉಳಿದ ಯಾವ ಲೇಖಕಿಯರಲ್ಲೂ ಕಾಣದ ಈ ವೈಶಿಷ್ಟ್ಯ ಅನುಪಮಾ ಅವರ ಕಾದಂಬರಿಗಳಲ್ಲಿದೆ.

ಸಮಾರೋಪ

ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಡಾ। ಅನುಪಮಾ ನಿರಂಜನ ಅವರ ಕೊಡುಗೆ ದೊಡ್ಡದು. ಅವರ ಸಮಕಾಲೀನರೇ ಆದ ಎಂ. ಕೆ. ಇಂದಿರಾ ಅವರೊಂದಿಗೆ ಈ ಲೇಖಕಿಯನ್ನು ಹೋಲಿಸಿ ನೋಡಿದಾಗ ಇಂದಿರಾ ನಿಂತ ಹಂತದಿಂದ ಅನುಪಮಾ ಬೆಳೆಯುತ್ತಾರೆ. ತ್ರಿವೇಣಿಯವರ 'ಶರಪಂಜರ', ಇಂದಿರಾ ಅವರ 'ಗೆಜ್ಜೆ ಪೂಜೆ'. ಅನುಪಮಾ ಅವರ 'ಮುಕ್ತಿಚಿತ್ರ' ಈ ಮೂರು ಕಾದಂಬರಿಗಳನ್ನು ಅವಲೋಕಿಸಿದಾಗ ಕನ್ನಡ ಲೇಖಕಿಯರ ಬೆಳವಣಿಗೆಯ ಹಂತ ಗೋಚರಿಸುತ್ತದೆ. ಮನೋವೈಜ್ಞಾನಿಕ ವಿಶ್ಲೇಷಣೆಯ ಮುಖಾಂತರ ತ್ರಿವೇಣಿ 'ಶರಪಂಜರ'ದಲ್ಲಿ ಓದುಗರ ಗಮನ ಸೆಳೆದರೂ ಅದು ಅನುಕರದ ಮಟ್ಟಕ್ಕೆ ನಿಲ್ಲುತ್ತದೆ. ಇಂದಿರಾ ಅವರ 'ಗೆಜ್ಜೆ ಪೂಜೆ' ಈ ನಾಡಿನ ದೇವದಾಸಿ ಪದ್ಧತಿಯ ಒಳನೋಟಗಳನ್ನೆಲ್ಲ ಸೂಕ್ಷ್ಮವಾಗಿ ಬಿಚ್ಚಿ ತೋರಿಸಿದರೂ ಕೂಡ ಈ ದೇಶದ ವ್ಯವಸ್ಥೆಗೆ ಸವಾಲಾಗುವದಿಲ್ಲ. ಆದರೆ ಅನುಪಮಾ ಅವರ 'ಮುಕ್ತಿಚಿತ್ರ'ದಲ್ಲಿ ಶತಮಾನಗಳ ನೋವನ್ನುಂಡ ಸಂಪ್ರದಾಯಸ್ಥ ಮಹಿಳೆಯೊಬ್ಬಳು ಅರಿವಿನ ಸ್ಫೋಟದಿಂದ-ಪರಿಸರದ ಪ್ರಭಾವದಿಂದ ಪುರುಷ ಪ್ರಧಾನ ವ್ಯವಸ್ಥೆಯನ್ನೇ ಧಿಕ್ಕರಿಸಿ ನಿಲ್ಲುವದು ತುಂಬಾ ಮಹತ್ವದ್ದಾಗುತ್ತದೆ. ತ್ರಿವೇಣಿಯವರ ಕಾದಂಬರಿಗಳಲ್ಲಿ ನವುರಾದ ಭಾವನೆಗಳು, ಮಾನಸಿಕ ತುಮುಲಾಟಗಳು ಮುಖ್ಯವಾದರೆ, ಇಂದಿರಾ ಅವರ ಕಾದಂಬರಿಗಳಲ್ಲಿ ಹೆಣ್ಣಿನ ಸಮಸ್ಯೆಯ ಒಳನೋಟಗಳು ಬಿಚ್ಚಿಕೊಂಡಿವೆ. ಆದರೆ ಅನುಪಮಾ ಅವರು ಹೆಣ್ಣಿನ ಒಳ-ಹೊರ ಸಮಸ್ಯೆಗಳನ್ನು ವಿಶ್ಲೇಷಿಸುವದರೊಂದಿಗೆ ಆ ಸಮಸ್ಯೆಗಳಿಗೆ ಕಾರಣವಾದ ವ್ಯವಸ್ಥೆಯ ವಿರುದ್ಧ ಹೋರಾಟವನ್ನು ಕಟ್ಟಿನಿಲ್ಲಿಸುತ್ತಾರೆ. ಶತಮಾನಗಳಿಂದ ಬಾಯಿಮುಚ್ಚಿಕೊಂಡಿದ್ದ ಹೆಣ್ಣಿಗೆ ದನಿ ಕೊಡುತ್ತಾರೆ. ಹೆಣ್ಣು-ಗಂಡುಗಳಿಗೆ ಸಮನಾಗಿಯೇ ಕಾಡುವ ವರ್ಗ ಹೋರಾಟದ ಆಶಯ ಸೃಷ್ಟಿಸುತ್ತಾರೆ. ಹೀಗಾಗಿ ಅನುಪಮಾ ನಮಗಿಂದು ಮುಖ್ಯವಾಗುತ್ತಾರೆ. ತಾತ್ವಿಕ ನೆಲೆಗಟ್ಟಿನಲ್ಲರಳಿದ

ಅನುಭವಗಳನ್ನು ಸೃಜಿಸುವ ಲೇಖಕಿಯಿಂದ ಮಾತ್ರ ಇಂತಹ ಸಾಹಿತ್ಯ ಬರಲಿಕ್ಕೆ ಸಾಧ್ಯ. ಹಸಿವು - ಬಡತನಗಳನ್ನೇ ಉಂಡು ಬೆಳೆದ ಅನುಪಮಾ, ಜಾತಿ ವಿರುದ್ಧ ತನ್ನ ಬದುಕಿನಲ್ಲೇ ಸಮರ ಹೂಡಿ ಅಂತರ್ಜಾತಿ ವಿವಾಹವಾದ ಅನುಪಮಾ ತಮ್ಮ ಬರವಣಿಗೆಯಲ್ಲಿ ಅನುಪಮೆಯಾಗಿದ್ದಾರೆ. 'ಘೋಷ', 'ಮಾಧವಿ'ಯಂತಹ ಕಾದಂಬರಿಗಳು ಕೇವಲ ಅನುಪಮಾಗಂತಹವರಿಂದ ಮಾತ್ರ ಬರಲು ಸಾಧ್ಯ. ಅಂತೆಯೇ ಸೈದ್ಧಾಂತಿಕ ಸಾಹಿತ್ಯಕ್ಕೂ-ಕಲ್ಪನೆಯ ಸಾಹಿತ್ಯಕ್ಕೂ ತುಂಬಾ ಅಂತರವಿದೆ. ಪ್ರಾರಂಭದ ಕಾದಂಬರಿಗಳಲ್ಲಿರುವ ಹಲವಾರು ಮಿತಿಗಳನ್ನು ದಾಟಿ ಬೆಳೆದಿರುವ ಅನುಪಮಾ ಇಂದು ಅನೇಕ ಮಹತ್ವದ ಕೃತಿ ಕೊಟ್ಟಿದ್ದಾರೆ. ಕನ್ನಡದಲ್ಲಿ ಕಾದಂಬರಿ ಇರುವವರೆಗೆ ಆ ಕ್ಷೇತ್ರದಲ್ಲಿ ಅನುಪಮಾ ಹಸಿರಾಗಿರುತ್ತಾರೆ.

ಅನುಪಮಾ ಅವರ ಕಾದಂಬರಿಗಳಲ್ಲಿ ವರ್ಗಪ್ರಜ್ಞೆ ೨

- ಡಾ। ಬಸವರಾಜ ಸಬರದ

ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಮಹಿಳೆಯರಿಂದ ಅನೇಕ ಕಾದಂಬರಿಗಳು ಬಂದಿದ್ದರೂ, ಗಮನ ಸೆಳೆವ ಲೇಖಕಿಯರು ಮಾತ್ರ ಬೆರಳೆಣಿಕೆಯಷ್ಟಿದ್ದಾರೆ. ಅವರಲ್ಲಿ ಡಾ। ಅನುಪಮಾ ನಿರಂಜನ ಅತ್ಯಂತ ಪ್ರಮುಖರು. ಅನುಪಮಾ ಅವರ ಸಂದರ್ಭ ದಲ್ಲಿಯೇ ಬರೆದ ತ್ರಿವೇಣಿ, ಎಂ. ಕೆ. ಇಂದಿರಾ ಅವರ ಕಾದಂಬರಿಗಳಿಗೂ, ಅನುಪಮಾ ಅವರ ಕಾದಂಬರಿಗಳಿಗೂ ವಸ್ತು ಧೋರಣೆಯ ದೃಷ್ಟಿಯಿಂದ ತುಂಬಾ ಅಂತರವಿದೆ.

ಎಡ ಪಂಥೀಯ ಸಿದ್ಧಾಂತವನ್ನು ಅರಗಿಸಿಕೊಂಡು, ಪ್ರಗತಿಶೀಲ ಚಳುವಳಿ ಯನ್ನು ಹುಟ್ಟು ಹಾಕಿದವರಲ್ಲಿ ಪ್ರಮುಖರಾದ ನಿರಂಜನ ಅವರು, ಅನುಪಮಾ ಅವರ ಬದುಕಿನಲ್ಲಿ ಪ್ರವೇಶಿಸಿದಾಗಲೇ ಲೇಖಕಿಯ ಧೋರಣೆಯಲ್ಲಿ ಬೆಳವಣಿಗೆಯಾದದ್ದನ್ನು ಕಾಣಬಹುದಾಗಿದೆ. ಆದರೆ ಈ ಲೇಖಕಿಯ ಪ್ರಾರಂಭದ ಕಾದಂಬರಿಗಳನ್ನು ಗಮನಿಸಿ ದಾಗ ದ್ವಂದ್ವ ಭಾವ ಎದ್ದು ಕಾಣುತ್ತದೆ. ಸ್ಪಷ್ಟ ಧೋರಣೆ ಕಾಣದೇ ಹೋಗುತ್ತದೆ. ಆ ಸಂದರ್ಭದಲ್ಲಿ ಅವರು ಸಂಪ್ರದಾಯವನ್ನು ಪೂರ್ಣ ತಳ್ಳಿ ಹಾಕದೆ, ಪ್ರಗತಿಪರ ವಿಚಾರವನ್ನು ಬಿಟ್ಟುಕೊಡುವ ಮನಸ್ಸೂ ಇಲ್ಲದೆ ಸಂದಿಗ್ಧ ಸ್ಥಿತಿಯಲ್ಲಿ ತೊಳಲಾಡು ತ್ತಾರೆ. ಹೀಗಾಗಿ ಅವರ ಪ್ರಾರಂಭದ ಕಾದಂಬರಿಗಳು ಉಳಿದ ಲೇಖಕಿಯರಂತೆ ನಾಯಕ ಸಂಸ್ಕೃತಿಯನ್ನು ಹೇಳುತ್ತಾ ರಂಜನೆ ನೀಡುತ್ತವೆ. 'ಮಾಧವಿ' ಕಾದಂಬರಿಯಿಂದ

ಅವರ ಕಾದಂಬರಿಗಳು ಹೊಸ ತಿರುವು ಪಡೆದಿವೆ. ೧೯೭೭ರಲ್ಲಿ ಪ್ರಕಟವಾದ 'ಮಾಧವಿ' ಕಾದಂಬರಿಗಿಂತ ಮುಂಚೆ ಪ್ರಕಟವಾದ ಕಾದಂಬರಿಗಳಲ್ಲಿ 'ಸೂಲು ನೇಯ್ದ ಚಿತ್ರ' ಮತ್ತು 'ಕಣಿವೆಗೆ ಬಂತು ಬೇಸಗೆ' ಗಮನ ಸೆಳೆಯುತ್ತವೆ.

ಅನುಪಮಾ ಅವರು ವಿಶಿಷ್ಟ ಲೇಖಕಿಯಾಗಿ ಕಾಣುವುದು ಎರಡು ಕಾರಣಗಳಿಂದ. ಅವರ ಅನೇಕ ಕಾದಂಬರಿಗಳು ಮಾನವೀಯ ಸಂಬಂಧಗಳ ಮಹತ್ವವನ್ನು ಹೇಳುತ್ತಲೇ ಕರುಣೆ-ಪ್ರೀತಿಗೆ ಒತ್ತುಕೊಡುತ್ತವೆ. ಅವರ ಇತ್ತೀಚಿನ ಕಾದಂಬರಿಗಳು ಸಾಮಾಜಿಕ ಸಮಸ್ಯೆಗಳನ್ನೆತ್ತಿಕೊಂಡು ವಿಶ್ಲೇಷಿಸುವದರ ಜತೆಗೆ ಸೈದ್ಧಾಂತಿಕ ಹೋರಾಟ ವರ್ಗಪ್ರಜ್ಞೆ ಬಂಡಾಯ ಮನೋಭಾವ ಇವುಗಳನ್ನೂ ಸ್ಫೋಟಿಸುತ್ತಲೇ ಕಲಾತ್ಮಕವಾಗಿ ಅರಳುತ್ತವೆ.

ಈ ಎರಡು ಕಾರಣಗಳಿಂದ ಅನುಪಮಾ ಕನ್ನಡದ ಅರ್ಥಪೂರ್ಣ ಲೇಖಕಿಯಾಗಿ ಗಮನ ಸೆಳೆಯುತ್ತಾರೆ. ಇವರ ಜತೆಗೆ ಬರೆಯುತ್ತಿರುವ ಉಳಿದ ಯಾವ ಲೇಖಕಿಯಲ್ಲಿಯೂ ವರ್ಗಪ್ರಜ್ಞೆಗೆ ಸಂಬಂಧಿಸಿದ ಸೈದ್ಧಾಂತಿಕ ಹೋರಾಟ ಕಾಣಸಿಗುವದಿಲ್ಲ. ಈ ದೃಷ್ಟಿಯಿಂದಂತೂ ಅನುಪಮಾ ಇನ್ನೂ ಮಹತ್ವದ ಸ್ಥಾನ ಪಡೆಯುತ್ತಾರೆ.

ವರ್ಗ ಸಂಘರ್ಷದ ಬಗೆಗೆ ಮೊದಲು ಕಾದಂಬರಿ ರಚಿಸಿದವರು ಕನ್ನಡದಲ್ಲಿ ಪ್ರಗತಿಶೀಲ ಲೇಖಕರು. ಎಡ ಪಂಥೀಯ ಸಿದ್ಧಾಂತದ ಹಿನ್ನೆಲೆಯಿಂದ ಬಂದ ಇವರು ಕಾದಂಬರಿಗಳಲ್ಲಿ ವರ್ಗಹೋರಾಟ ಒಂದು ಪ್ರಮುಖ ಅಂಶವೆಂದು ಭಾವಿಸಿದರು. ನವ್ಯೋತ್ತರದ ಕೃತಿಗಳಲ್ಲಂತೂ ವರ್ಗ ಹೋರಾಟಕ್ಕೆ ಸಂಬಂಧಿಸಿದಂತೆ ಅನೇಕ ಉದಾಹರಣೆಗಳು ದೊರೆಯುತ್ತವೆ.

ಕನ್ನಡ ಲೇಖಕಿಯರಲ್ಲಿ ಮೊಟ್ಟಮೊದಲ ಬಾರಿಗೆ ಕಾದಂಬರಿಗಳಲ್ಲಿ ವರ್ಗ ಸಂಘರ್ಷದ ಆಶಯವನ್ನು ಹುಟ್ಟು ಹಾಕಿದವರು ಅನುಪಮಾ. ಆದ್ದರಿಂದ ಅನುಪಮಾ ಅವರಿಗೆ ಮಹಿಳೆಯೆಂಬ ರಿಯಾಯತಿಯ ಅಗತ್ಯವಿಲ್ಲವೆನಿಸುತ್ತದೆ.

ಅನುಪಮಾ ಅವರ ಇಪ್ಪತ್ತೆರಡು ಕಾದಂಬರಿಗಳಲ್ಲಿ ನಾಲ್ಕು ಕಾದಂಬರಿಗಳು ವರ್ಗ ಸಂಘರ್ಷದ ಆಶಯವನ್ನೊಳಗೊಂಡಿವೆ. 'ಸೂಲು ನೇಯ್ದ ಚಿತ್ರ', 'ಕಣಿವೆಗೆ ಬಂತು ಬೇಸಗೆ', 'ಎಳೆ' ಮತ್ತು 'ಕೊಳಚೆ ಕೊಂಪೆಯ ದಾನಿಗಳು'- ಈ ನಾಲ್ಕೂ ಕಾದಂಬರಿಗಳಲ್ಲಿ ವರ್ಗ ಹೋರಾಟದ ಆಶಯ ವೈವಿಧ್ಯಮಯ ರೀತಿಯಲ್ಲಿ ಅಭಿವ್ಯಕ್ತವಾಗಿದೆ.

ಈ ದೇಶದ ಆರೋಗ್ಯಪೂರ್ಣ ಬೆಳವಣಿಗೆಗೆ ಯಾವ ಜಾತಿ ಸಂಘಟನೆಯ ಹೋರಾಟವೂ ನೆರವು ನೀಡಲಾರದು. ಒಂದರ್ಥದಲ್ಲಿ ಜಾತಿ ಸಂಘಟನೆಗಳೇ ಈ ದೇಶದ ವೈರಿಗಳಾಗಿವೆ. ವರ್ಗ ಹೋರಾಟದಿಂದ ಮಾತ್ರ ಈ ದೇಶದಲ್ಲಿ

ಸಮಾನತೆಯ ಸರಕಾರವನ್ನು ಸ್ಥಾಪಿಸುವದು ಸಾಧ್ಯ. ವರ್ಗ ಹೋರಾಟದಲ್ಲಿ ಕೆಳಜಾತಿಯವರ, ಕೂಲಿ ಕಾರ್ಮಿಕರ, ಶೋಷಿತರ ಧ್ವನಿಯಿರುವದರಿಂದ, ನಿಜವಾದ ಹೋರಾಟ ಬೂರ್ಜ್ವಾ ವ್ಯವಸ್ಥೆ ಮತ್ತು ದುಡಿವ ವರ್ಗದ ಜನತೆಯ ನಡುವೆ ನಡೆಯಬೇಕಾಗುತ್ತದೆ. ಸಮಸ್ತ ಜನತೆಯ ಬದುಕಿಗೆ ಬೆಳಕಾಗಬಲ್ಲ ಈ ವರ್ಗ ಹೋರಾಟದ ಆಶಯಗಳು ಕನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ ತೀವ್ರವಾಗುತ್ತಿರುವದು ಆರೋಗ್ಯಕರ ಲಕ್ಷಣವಾಗಿದೆ.

೧೯೭೧ರಲ್ಲಿ ಪ್ರಕಟವಾದ ಅನುಪಮಾ ಅವರ 'ನೂಲು ನೇಯ್ದ ಚಿತ್ರ' ಕಾದಂಬರಿಯಲ್ಲಿ ವರ್ಗ ಸಂಘರ್ಷದ ನೇರ ಹೋರಾಟವಿರದಿದ್ದರೂ, ವರ್ಗಪ್ರಜ್ಞೆಯ ಅಂಶಗಳಿವೆ. ಭಾರತದಲ್ಲಿ ಕೈಗಾರಿಕೆಗಳು ಪ್ರಾರಂಭವಾದ ಮೇಲೆ, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಇಲ್ಲಿ ಭಾರೀ ಉದ್ದಿಮೆಗಳನ್ನು ಸ್ಥಾಪಿಸಿದ ಮೇಲೆ ಗುಡಿಕೈಗಾರಿಕೆಗಳು ನಿಂತು ಹೋಗಿ ಬಡ ನೇಕಾರರ ಬದುಕು ಎಷ್ಟು ದಾರುಣವಾಯಿತು ಎಂಬುದನ್ನು ಕಾದಂಬರಿ ಹೇಳುತ್ತದೆ. ಗುಡಿಕೈಗಾರಿಕೆಗಳನ್ನು ಮಾಡಿಕೊಂಡು ನೆಮ್ಮದಿಯಿಂದ ಬದುಕುತ್ತಿದ್ದ ಬಡವರು, ದೊಡ್ಡ ದೊಡ್ಡ ಪವರ್ ಲೂಮ್‌ಗಳು ಬಂದಮೇಲೆ, ಉದ್ದಿಮೆದಾರರ ಶೋಷಣೆಗೆ ತುತ್ತಾಗುವ, ಅನ್ನಕ್ಕಾಗಿ ಊರಿಂದ ಊರಿಗೆ ಅಲೆದಾಡುವ ಬಡ ನೇಕಾರರ ಗೋಳಿನ ಚಿತ್ರವನ್ನು ಇಲ್ಲಿ ಲೇಖಕಿ ಪರಿಣಾಮಕಾರಿಯಾಗಿ ಹೇಳಿದ್ದಾರೆ. ಗಾಂಧೀಜಿಯ ಪ್ರೇರಣೆಯಿಂದ ಹುಟ್ಟಿದ ಅನೇಕ ಗುಡಿಕೈಗಾರಿಕೆಗಳು ನೆಹರೂ ಆಳ್ವಿಕೆಯಲ್ಲಿ ಹೇಗೆ ಅವಸಾನ ಹೊಂದಿದವು, ಹಳ್ಳಿಯಲ್ಲಿ ನೆಮ್ಮದಿಯಿಂದ ಬದುಕುತ್ತಿದ್ದ ಸಹಸ್ರಾರು ಜನ ಹೇಗೆ ತತ್ತರಿಸಿಹೋದರು ಎಂಬುದನ್ನು ಕಾದಂಬರಿ ದಾಖಲಿಸುತ್ತದೆ.

ಓದುವ ಮನಸ್ಸಿದ್ದರೂ ಬಡತನದ ಕಾರಣದಿಂದ ಈ ಕಾದಂಬರಿಯ ಕಥಾನಾಯಕ ಶಾಮು, ವಂಶಪಾರಂಪರ್ಯವಾಗಿ ಬಂದಿದ್ದ ತನ್ನ ಮನೆತನದ ನೇಕಾರ ವೃತ್ತಿಯನ್ನೇ ಮುಂದುವರಿಸುತ್ತಾನೆ. ತಾನು ಮೊದಲಿನಿಂದ ಪ್ರೀತಿಸುತ್ತಿದ್ದ ಪಾರೂನನ್ನು ಮದುವೆಯಾಗಿ ಹೊನ್ನಳ್ಳಿಯಲ್ಲಿ ಸಂಸಾರ ಪ್ರಾರಂಭಿಸಿದಾಗ ಶಾಮು ದುಡಿದದ್ದು ಸಾಲದಾಗುತ್ತದೆ. ತಾನು ದುಡಿದದ್ದು ಹೊಟ್ಟೆಗೆ ಸಾಲದಾದಾಗ ಶಾಮು ಹೊನ್ನಹಳ್ಳಿಯನ್ನು ಬಿಟ್ಟು ಸಂಸಾರ ಸಮೇತ ಸೋಮಪುರಕ್ಕೆ ಬರುತ್ತಾನೆ. ಅಲ್ಲಿ ಗೆಳೆಯ ಭೀಮಣ್ಣನ ಸಹಕಾರದೊಂದಿಗೆ ಮಗ್ಗವನ್ನು ಹಾಕಿ ನೇಯ್ಗೆ ಕೆಲಸ ಪ್ರಾರಂಭಿಸುತ್ತಾನೆ. ಪವರ್ ಮಗ್ಗಗಳ ಹಾವಳಿ ಹೆಚ್ಚಾದಾಗ ಕೈಯಿಂದ ತಯಾರಿಸಿದ ಬಟ್ಟೆಗಳಿಗೆ ಬೆಲೆ ಕಡಿಮೆಯಾಗುತ್ತದೆ, ಜತೆಗೆ ಬೇಡಿಕೆಯೂ ಇಲ್ಲದಂತಾಗುತ್ತದೆ. ಆಗ, ತನ್ನ ಮಗ್ಗವನ್ನು ಮಾರಿ ಭೀಮಣ್ಣನ ಪವರ್ ಲೂಮ್‌ದಲ್ಲಿ ಶಾಮು ಕೆಲಸಕ್ಕೆ ಸೇರಬೇಕಾಗುತ್ತದೆ. ಅಲ್ಲಿಯೂ ಸಂಸಾರ ಸರಿಯಾಗಿ ನಡೆಯದೇ ಹೋದಾಗ ಶಾಮು ಹೆಂಡತಿಯೊಂದಿಗೆ ಬೆಂಗಳೂರಿಗೆ ಬರುತ್ತಾನೆ. ಅಲ್ಲಿಯ ದೊಡ್ಡ ಮಿಲ್ ಒಂದರಲ್ಲಿ ಕೆಲಸಕ್ಕಾಗಿ ಅಲೆಯುತ್ತಾನೆ. ಲಂಚ ಕೊಡಲು ಒಪ್ಪಿದಾಗ ಕಾರ್ಮಿಕ ಕೆಲಸ ಸಿಗುತ್ತದೆ.

ಆದರೆ ಆ ಬಟ್ಟೆ ಮಿಲ್‌ನಲ್ಲಿ ನಡೆಯುವ ಭ್ರಷ್ಟಾಚಾರ, ಕೆಲಸದ ಅಸ್ಥಿರತೆ ಶಾಮನನ್ನು ದಂಗುಬಡಿಸುತ್ತವೆ. ಔಷಧಕ್ಕೆ ಹಣವಿಲ್ಲದೆ ಮಗಳು ಸಾಯುತ್ತಾಳೆ. ಕೊನೆಗೆ ಶಾಮ ಮತ್ತೆ ಮರಳಿ ತನ್ನ ಹಳ್ಳಿ ಸೇರಬೇಕಾಗುತ್ತದೆ.

ಮಗ್ಗದ ಜೀವನದಿಂದ ದೊಡ್ಡ ಮಿಲ್‌ದ ಜೀವನದ ವರೆಗೆ ಶಾಮನ ಓಡಾಟ ಇದೆ. ಹಳ್ಳಿಯಿಂದ ನಗರಕ್ಕೆ, ಮತ್ತೆ ನಗರದಿಂದ ಹಳ್ಳಿಗೆ ಸುತ್ತಾಡುವ ಕ್ರಿಯೆಯಲ್ಲಿ ಅವನ ಬದುಕು ನಿರರ್ಥಕವಾಗುತ್ತದೆ. ಬೆಂಗಳೂರಲ್ಲಿ ಬಟ್ಟೆ ಕಾರ್ಖಾನೆಯಲ್ಲಿ ಶಾಮ ಕೆಲಸ ಮಾಡುತ್ತಿದ್ದಾಗ, ಅಲ್ಲಿಯ ಕಾರ್ಮಿಕರಿಗೆ ಅನೇಕ ತೊಂದರೆಗಳಾಗುತ್ತವೆ. ಸರಿಯಾದ ಸಂಬಳ ಕೊಡದೆ ಕಾರ್ಮಿಕರನ್ನು ದುಡಿಸಿಕೊಳ್ಳುವದು, ಎಷ್ಟೋ ವರ್ಷ ದುಡಿದ ಕಾರ್ಮಿಕರನ್ನು ಖಾಯಂಗೊಳಿಸದೇ ಇರುವದು, ಇದೂ ಸಾಲದಂತೆ ಮಧ್ಯವರ್ತಿಗಳಿಂದ ನಡೆವ ಶೋಷಣೆ ಇವೆಲ್ಲಾ ಶಾಮನ ಬದುಕುವ ಆಸೆಯನ್ನೇ ಚಿವುಟಿ ಹಾಕುತ್ತವೆ. ಅಲ್ಲಿಯ ಕಾರ್ಮಿಕರೆಲ್ಲಾ ಸಂಘಟನೆಯಾಗಿ ಹೋರಾಟ ಮಾಡುತ್ತಾರೆ. ಆದರೆ ಮಿಲ್ ಮಾಲಕರು ಕಾರ್ಖಾನೆಯನ್ನೇ ಮುಚ್ಚುವ ಬೆದರಿಕೆ ಹಾಕಿದಾಗ, ಹೊಟ್ಟೆಗಿಲ್ಲದ ಬಡ ಕಾರ್ಮಿಕರು ಮತ್ತೆ ಅದೇ ನರಕದ ಜೀವನದಲ್ಲೇ ಮುಂದುವರೆಯುತ್ತಾರೆ.

ಲೇಖಕಿ ಅನುಪಮಾ ಅವರಿಗೆ ಇಲ್ಲಿ ವರ್ಗ ಸಂಘರ್ಷವನ್ನು ಹುಟ್ಟುಹಾಕುವ ಉದ್ದೇಶವಿಲ್ಲ. ಬಡ ನೇಕಾರರ ಜೀವನದ ಏರಿಳಿತಗಳನ್ನು ವಾಸ್ತವವಾಗಿ ವರ್ಣಿಸುವ ಉದ್ದೇಶವಿದೆ. ಅಂತೆಯೇ ಅವರು ಈ ಕಾದಂಬರಿಯಲ್ಲಿ ಹೋರಾಟವನ್ನು ಹುಟ್ಟು ಹಾಕದೆ, ಸಂಘರ್ಷಕ್ಕೆ ಅವಕಾಶ ನೀಡದೆ ಮತ್ತೆ ಶಾಮನನ್ನು ತಾನು ಬಂದ ಹಳ್ಳಿಗೆ ಮರಳಿ ಕಳುಹಿಸುತ್ತಾರೆ.

ಗ್ರಾಮೀಣ ಕೈಗಾರಿಕೆಗಳ ಅವಸಾನದ ದಟ್ಟ ಚಿತ್ರಣವನ್ನು ಕಾದಂಬರಿ ಒಳಗೊಂಡಿದೆ. ಕಾರ್ಮಿಕರ ಅನೇಕ ನೋವು ಕಷ್ಟಗಳನ್ನೂ ಅವು ಹುಟ್ಟುವ ಪ್ರಸಂಗಗಳನ್ನೂ ಲೇಖಕಿ ವಿಶ್ಲೇಷಿಸುವದರಿಂದ ವರ್ಗ ಪ್ರಜ್ಞೆಯ ಅನೇಕ ಅಂಶಗಳನ್ನು ಈ ಕಾದಂಬರಿ ಒಳಗೊಳ್ಳುತ್ತದೆ. ಶಾಮ ಬೆಂಗಳೂರಿನಲ್ಲಿ ಕಾರ್ಮಿಕನಾಗಿ ಬಟ್ಟೆ ಕಾರ್ಖಾನೆಯಲ್ಲಿ ದುಡಿಯುತ್ತಿದ್ದಾಗ ಅಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಕಂಡು ಅಸಹಾಯಕನಾಗುತ್ತಾನೆ. ವರ್ಗ ಸಂಘರ್ಷದ ವಿಚಾರ ಒಂದು ವೇಳೆ ಆ ಕಾದಂಬರಿ ಬರೆಯುವಾಗ ಇದ್ದಿದ್ದರೆ ಲೇಖಕಿ ಖಂಡಿತಾ ಕಾರ್ಮಿಕರ ಹೋರಾಟವನ್ನು ಹುಟ್ಟು ಹಾಕುತ್ತಿದ್ದರು. ಬಡ ನೇಕಾರರ ನೋವು-ನಲಿವಿನ ಬದುಕಿನ ದಾಖಲೆಗಳನ್ನು ಮಾತ್ರ ಈ ಕಾದಂಬರಿ ಒಳಗೊಂಡಿದ್ದರಿಂದ, ಕಾದಂಬರಿಯ ಆಶಯ ಅಷ್ಟಕ್ಕೆ ನಿಲ್ಲುತ್ತದೆ.

ಆದರೆ ೧೯೬೧ರಲ್ಲಿಯೇ ಕನ್ನಡದ ಲೇಖಕಿಯೊಬ್ಬರು ಕಾರ್ಮಿಕರ ಬದುಕಿನ ಎಳೆ ಎಳೆಗಳನ್ನು ಬಿಡಿಸುತ್ತಾ ವರ್ಗ ಪ್ರಜ್ಞೆಯ ಅಂಶಗಳನ್ನು ಹೇಳುವದರಿಂದ ಕಾದಂಬರಿ

ಗಮನ ಸೆಳೆಯುತ್ತದೆ. ಇಲ್ಲಿ ಕಾರ್ಮಿಕ ಮತ್ತು ಮಾಲಿಕರ ನಡುವೆ ನೇರ ಸಂಘರ್ಷ ನಡೆಯದಿದ್ದರೂ, ಕಾರ್ಮಿಕರು ಆಲೋಚಿಸಲು ಪ್ರಾರಂಭಿಸುವ, ಜಾಗೃತವಾಗುವ ಕೆಲವು ಲಕ್ಷಣಗಳಿವೆ.

೧೯೭೨ರಲ್ಲಿ ಪ್ರಕಟವಾದ 'ಕಣಿವೆಗೆ ಬಂತು ಬೇಸಗೆ' ಕಾದಂಬರಿಯಲ್ಲಿ ವರ್ಗ ಸಂಘರ್ಷದ ನಿಚ್ಚಳವಾದ ಬೆಳವಣಿಗೆಯಿದೆ. ಅರ್ಚಕ ನಾರಾಯಣ ಶರ್ಮರ ಮಗನಾದ ನರಹರಿ ಸಂಪ್ರದಾಯಸ್ಥ ವೈದಿಕ ಮನೆತನದಿಂದ ಬಂದಿದ್ದರೂ, ನಿರುದ್ಯೋಗದ ಬವಣೆಯಲ್ಲಿ ಬೆಂದು ಕೊನೆಗೆ ರಂಗಸ್ವಾಮಪ್ಪನವರ ಮಿಲ್‌ದಲ್ಲಿ ಕೆಲಸ ಸಿಕ್ಕಾಗ ಅಲ್ಲಿಯ ಕಾರ್ಮಿಕರನ್ನು ಸಂಘಟಿಸಿ ಅನ್ಯಾಯದ ವಿರುದ್ಧ ಸಿಡಿದೇಳುವದು ಬಹಳ ಮುಖ್ಯ ವಾಗುತ್ತದೆ. ಆದರೆ ನರಹರಿಗೆ ಯಾವುದೇ ಸೈದ್ಧಾಂತಿಕ ಹೋರಾಟದ ಪರಿಚಯ ವಿರದೇ ಇರುವದರಿಂದ, ಎಲ್ಲ ಕಾರ್ಮಿಕರು ಈತನನ್ನು ನಂಬಿ ತಮ್ಮ ಮುಖಂಡನನ್ನಾಗಿ ಮಾಡಿದಾಗ, ನರಹರಿ ಸ್ವಾರ್ಥಕ್ಕೆ ಬಿದ್ದು ಮಿಲ್ ಮಾಲಕರಿಂದ ಹಣ ಪಡೆದು ಕಾರ್ಮಿಕರ ಹೋರಾಟವನ್ನು ತಣ್ಣಗೆ ಮಾಡುತ್ತಾನೆ. ಅಂತೆಯೇ ಲೇಖಕಿ ನರಹರಿಯನ್ನು ಒಬ್ಬ ಹೋರಾಟಗಾರನನ್ನಾಗಿ, ಕಾರ್ಮಿಕರ ಪ್ರಾಮಾಣಿಕ ಮುಖಂಡನನ್ನಾಗಿ ಚಿತ್ರಿಸಲು ಉದ್ದೇಶಿಸಿಲ್ಲ. ನರಹರಿಯು ಯಾವಾಗ ಹಣಕ್ಕೆ ಆಸೆಬಿದ್ದು, ಸ್ವಾರ್ಥಕ್ಕಾಗಿ ಕಾರ್ಮಿಕರ ಹೋರಾಟವನ್ನು ಉಪಯೋಗಿಸಿಕೊಂಡನೋ ಆವಾಗಲೇ ಅವನು ಓದುಗರ ಸಹಾನು ಭೂತಿಯನ್ನು, ಕಾರ್ಮಿಕರ ನಂಬಿಕೆಯನ್ನು ಕಳೆದುಕೊಳ್ಳುತ್ತಾನೆ.

ಮಿಲ್ ಮಾಲಕರಾದ ರಂಗಸ್ವಾಮಪ್ಪನವರ ಸಾಕುಮಗ ಗಂಗಾಧರ ಬಡ ರೈತನಾದ ಸಿದ್ದಪ್ಪನ ಮಗಳು ಸರಸಳನ್ನು ಮೋಸದಿಂದ ವಂಚಿಸಿ ಕಾಮಸುಖ ಪಡೆದಾಗ ಆಕೆ ಗರ್ಭಿಣಿಯಾಗಿ ಸಾಯುವದು, ನಂತರ ಆಕೆಯ ಸೋದರಿ ಜಯಾಳ ಮೇಲೆಯೂ ಗಂಗಾಧರ ಬಲಾತ್ಕಾರ ಮಾಡಲು ಪ್ರಯತ್ನಿಸುವದು, ಇವೆಲ್ಲಾ ಉದ್ದಿಮೆದಾರರ ಮಕ್ಕಳು ಹಳ್ಳಿಯ ಜನರ ಮೇಲೆ ನಿರಂತರವಾಗಿ ಮಾಡುತ್ತಾ ಬಂದ ಶೋಷಣೆಗೆ ಉದಾಹರಣೆಯಾಗುತ್ತವೆ. ಜಯಾಳನ್ನು ಬಲಾತ್ಕರಿಸಲು ಹೋದಾಗ ಮನೆಯ ತೊಲೆ ಬಿದ್ದು ಗಂಗಾಧರ ಸತ್ತಾಗ, ಜಯಾಳೇ ಗಂಗಾಧರನನ್ನು ಕೊಂದಳೆಂದು ರಂಗಸ್ವಾಮಪ್ಪ ನವರು ಕೋರ್ಟಿನಲ್ಲಿ ಕೇಸ್ ಹಾಕುವದು ಉಳ್ಳವರು ಮಾಡುವ ಅನ್ಯಾಯವೆಂತಹ ದೆಂದು ಸ್ಪಷ್ಟವಾಗುತ್ತದೆ.

ಕೋರ್ಟಿನಲ್ಲಿ ಜಯಾ ನಿರಪರಾಧಿಯೆಂದು ತೀರ್ಪು ಬಂದಾಗ ಸಿದ್ದಪ್ಪ ತನ್ನ ಮಗಳು ಜಯಾಳೊಂದಿಗೆ ಆ ಹಳ್ಳಿಯನ್ನೇ ಬಿಟ್ಟು ಹೋಗುವದು, ನರಹರಿಯ ಹೋರಾಟ ಗೌಣವಾಗುವದು ಕಾದಂಬರಿಯ ಹೋರಾಟದ ಆಶಯಕ್ಕೆ ಆತಂಕಗಳಾ ಗುತ್ತವೆ.

ಪ್ರಾರಂಭದಲ್ಲಿ ನರಹರಿ ಕಾರ್ಮಿಕರನ್ನು ಸಂಘಟಿಸುವ ಚಿತ್ರ ಸೊಗಸಾಗಿ ಬಂದಿದೆ. ಕಾರ್ಮಿಕರೆಲ್ಲಾ ಸಂಘಟಿತರಾಗಿ ಮಿಲ್ ಮಾಲಕರ ವಿರುದ್ಧ ಸಿಡಿದೇಳ ಬೇಕೆಂದಾಗ ನರಹರಿಯಂತಹ ಸ್ವಾರ್ಥಿಗಳಿಂದ ಹೋರಾಟ ತಣ್ಣಗಾಗುವದು, ಕಾರ್ಮಿಕ ರಲ್ಲಿಯೇ ಇರದ ಒಕ್ಕಟ್ಟನ್ನು ಹೇಳುತ್ತದೆ. ಕಾರ್ಮಿಕರು ತಮ್ಮ ಸ್ವಾರ್ಥವನ್ನು ಬದಿಗೊತ್ತಿ ಎಲ್ಲ ದುಡಿವವರ ಪರವಾಗಿ ಶ್ರದ್ಧೆಯಿಂದ ಸಂಘಟನಾತ್ಮಕವಾಗಿ ಹೋರಾಡಿ ದಾಗ ಮಾತ್ರ ಕಾರ್ಮಿಕರ ಹೋರಾಟ ಯಶಸ್ವಿಯಾಗಬಲ್ಲದೆಂದು ಕಾದಂಬರಿ ಹೇಳು ತ್ತದೆ. ಇದು ವಾಸ್ತವಾಂಶವೂ ಆಗಿದೆ. ಅಂತೆಯೇ ನರಹರಿ ಜೈಲಿಗೆ ಹೋಗುವದು. ಆತನ ಹೆಂಡತಿ ಸಾಯುವದು, ಅರ್ಜಕರು ಕಷ್ಟ ಅನುಭವಿಸುವದು, ಜಯಾ-ಸಿದ್ದಪ್ಪ ಆ ಹಳ್ಳಿಯನ್ನೇ ಬಿಟ್ಟು ಹೋಗುವದು ಮಾಲಿಕರ ಅಟ್ಟಹಾಸಕ್ಕೆ. ಅವರ ನಿರಂತರ ಶೋಷಣೆಗೆ ಅನುಕೂಲವಾಗುತ್ತವೆ.

ಕಾರ್ಮಿಕರ ಹೋರಾಟವೊಂದು ಸೈದ್ಧಾಂತಿಕ ಹಿನ್ನೆಲೆಯಿಲ್ಲದೆ ನಡೆದದ್ದಾದರೆ ಹೇಗೆ ಸ್ವಾರ್ಥಿಗಳು ಸಮಯ ಸಾಧಿಸಿ ಕೊಳ್ಳುತ್ತಾರೆ ಮತ್ತು ಕಾರ್ಮಿಕರಿಗೆ ಎಂತಹ ಕಷ್ಟಗಳುಂಟಾಗುತ್ತವೆಂಬುದನ್ನು ಕಾದಂಬರಿ ಬಹಳ ಪರಿಣಾಮಕಾರಿಯಾಗಿ ಹೇಳುತ್ತದೆ. ನರಹರಿ ಪ್ರಾಮಾಣಿಕನಾಗಿ, ಕಾರ್ಮಿಕರ ಹಿತಸಾಧನೆಯನ್ನೇ ಗುರಿಯಾಗಿಟ್ಟುಕೊಂಡು ಹೋರಾಡಿದ್ದರೆ ನಿಜಕ್ಕೂ ಅವನ ಹೋರಾಟ ಯಶಸ್ವಿಯಾಗಬಹುದಿತ್ತು. ಮಿಲ್ ಮಾಲಿಕರ ದರ್ಪ – ಅಹಂಕಾರ ಕಡಿಮೆಯಾಗಿ, ಬಡವ ಸಿದ್ದಪ್ಪ, ಆತನ ಮಗಳು ಜಯಾ ಊರು ಬಿಟ್ಟು ಹೋಗುವ ಪ್ರಸಂಗ ಬರುತ್ತಿರಲಿಲ್ಲ.

ಕಾರ್ಮಿಕರ ಹೋರಾಟ ಅತ್ಯಂತ ಅನಿವಾರ್ಯವಾದದ್ದೆಂದು ಹೇಳುವ ಈ ಕಾದಂಬರಿ ಆ ಹೋರಾಟ ಪ್ರಾಮಾಣಿಕವಾಗಿರಬೇಕು ಎಂಬುದನ್ನು ಸೂಚಿಸುತ್ತದೆ. ಈ ಕಾದಂಬರಿಯಲ್ಲಿ ರಂಗಸ್ವಾಮಪ್ಪ ಬಂಡವಾಳಶಾಹಿಯ ಪ್ರತಿನಿಧಿಯಾದರೆ, ಜಮೀನ್ದಾರ ಗೋಪಾಲಕೃಷ್ಣಯ್ಯ ಊಳಿಗಮಾನ ಪದ್ಧತಿಯ ಪ್ರತಿನಿಧಿಯಾಗುತ್ತಾನೆ. ಹೀಗೆ ಬಂಡವಾಳಶಾಹಿ ಮತ್ತು ಊಳಿಗಮಾನ ಪದ್ಧತಿಯ ಶಕ್ತಿಗಳ ನಡುವೆ ಹಳ್ಳಿಯೊಂದು ತತ್ತರಿಸಿ ಹೋಗುವ ದೃಶ್ಯವನ್ನು ಲೇಖಕಿ ಬಹಳ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ.

ನಿಜವಾದ ವರ್ಗ ಸಂಘರ್ಷವನ್ನು ನಿಚ್ಚಳವಾಗಿ ದಾಖಲಿಸುವ ಕಾದಂಬರಿ ಗಳೆಂದರೆ 'ಎಳೆ' ಮತ್ತು 'ಕೊಳಚೆ ಕೊಂಪೆಯ ದಾನಿಗಳು.' ೧೯೮೦ರಲ್ಲಿ ಪ್ರಕಟವಾದ 'ಎಳೆ' ಕನ್ನಡದ ವಿಶಿಷ್ಟ ಕಾದಂಬರಿ. ಇಲ್ಲಿ ವರ್ಗ ಹೋರಾಟದ ಜತೆಗೆ ನೇಕಾರರ ಬದುಕಿನ ನೈಜ ಚಿತ್ರಣವಿದೆ. ಇದುವರೆಗೆ ಕನ್ನಡಕ್ಕೆ ಅಪರಿಚಿತನಾಗಿದ್ದ ನೇಕಾರರ ಬದುಕಿನ ಎಳೆ-ಎಳೆಗಳನ್ನು ಲೇಖಕಿ ಇಲ್ಲಿ ಸೊಗಸಾಗಿ ಹೆಣೆದಿದ್ದಾರೆ.

ಚೌಡಪ್ಪ-ಉಗ್ರಪ್ಪ-ಮುದ್ದುಸ್ವಾಮಿ ಈ ಮೂವರೂ ಒಂದೇ ಜಾತಿಗೆ ಸೇರಿದವರು. ಮೂವರೂ ನೇಕಾರ ಮನೆತನದಿಂದ ಬಂದವರು. ಚೌಡಪ್ಪ ಬಡ ನೇಕಾರನಾದರೆ, ಉಗ್ರಪ್ಪ ಶ್ರೀಮಂತ ನೇಕಾರ. ಮುದ್ದುಸ್ವಾಮಿ ಶಾಸಕನಾಗಿ ಭ್ರಷ್ಟತೆಯಿಂದ ಹಣಗಳಿಸಿದ ರಾಜಕೀಯ ಪುಢಾರಿ. ಚೌಡಪ್ಪನ ಮಗ ರಂಗದಾಸ ಎಂ.ಎ.ದವರೆಗೆ ಅಭ್ಯಾಸ ಮಾಡಿ ಕಾಲೇಜೊಂದರಲ್ಲಿ ಉಪನ್ಯಾಸಕನಾಗಿ ಕೆಲಸಕ್ಕೆ ಸೇರುತ್ತಾನೆ. ತಂದೆ ಚೌಡಪ್ಪನಿಗೆ ವಂಶ ಪಾರಂಪರ್ಯದಿಂದ ಬಂದ ನೇಕಾರ ವೃತ್ತಿಯನ್ನು ಬಿಡುವ ಮನಸ್ಸಿರದಿದ್ದರೂ, ರಂಗದಾಸ ಅಂತಹ ಸಾಂಪ್ರದಾಯಿಕ ವಿಚಾರವನ್ನು ತೊರೆದು ತಾನು ಮಗ್ಗಗಳಲ್ಲಿ ಸವೆದು ಸಣ್ಣಾಗುವುದರ ಬದಲು ದೊಡ್ಡ ವಿದ್ಯಾವಂತನಾಗಿ ಬೆಳೆದು ದುಡಿವ ವರ್ಗದ ನೇಕಾರರನ್ನು ಸಂಘಟಿಸಿ ಮಹತ್ವಪೂರ್ಣವಾದ ಹೋರಾಟವನ್ನು ಹುಟ್ಟುಹಾಕುವುದು ಪ್ರಮುಖ ವಿಷಯವಾಗುತ್ತದೆ. ಉಗ್ರಪ್ಪನಿಗೆ ಹಣವೇ ಮುಖ್ಯವಾಗಿ ತನ್ನ ಮಗಳು ಗಿರಿಜೆ ರಂಗದಾಸನನ್ನು ಪ್ರೀತಿಸುತ್ತಿದ್ದರೂ ಒತ್ತಾಯದಿಂದ ಪುಢಾರಿ ಮುದ್ದುಸ್ವಾಮಿಯೊಂದಿಗೆ ಮದುವೆ ಮಾಡುತ್ತಾನೆ. ಚೌಡಪ್ಪ-ಉಗ್ರಪ್ಪ-ಮುದ್ದುಸ್ವಾಮಿ ಮೂವರು ಒಂದೇ ಜಾತಿಯವರಾದರೂ, ಚೌಡಪ್ಪ ಬಡ ನೇಕಾರನೆಂಬ ಕಾರಣಕ್ಕಾಗಿ ಉಗ್ರಪ್ಪ ಮತ್ತು ಮುದ್ದುಸ್ವಾಮಿ ಆತನನ್ನು ತಿರಸ್ಕರಿಸುತ್ತಾರೆ. ಉಗ್ರಪ್ಪ ಆತನ ಮಗನೊಂದಿಗೆ ಸಂಬಂಧ ಬೆಳೆಸಲು ನಿರಾಕರಿಸುತ್ತಾನೆ. ಈ ಜಾತಿಗೀತಿ, ಅಂತಸ್ತಿನ ಅಹಂಕಾರ ಎಷ್ಟು ವಿಷಕಾರಿಯಾದುದೆಂದು ಲೇಖಕಿ ಇಲ್ಲಿ ಪರಿಣಾಮಕಾರಿಯಾಗಿ ಹೇಳಿದ್ದಾರೆ. ಅಂತೆಯೇ ರಂಗದಾಸ ವಿವೇಕದಿಂದ ಸೈದ್ಧಾಂತಿಕವಾದ ಹೋರಾಟವೊಂದನ್ನು ಹುಟ್ಟುಹಾಕುತ್ತಾನೆ. ತಾನು ಪ್ರೀತಿಸಿದ ಗಿರಿಜೆ ಶ್ರೀಮಂತ ಶಾಸಕನೊಬ್ಬನನ್ನು ಮದುವೆಯಾದಾಗ ರಂಗದಾಸನಿಗೆ ನೋವುಂಟಾದರೂ, ಗಿರಿಜೆ ಎಲ್ಲಿದ್ದರೂ ಸುಖವಾಗಿರಲೆಂದು ಹಾರೈಸುತ್ತಾ ಕಾರ್ಮಿಕರನ್ನು ಸಂಘಟಿಸುವ ಕಾರ್ಯದಲ್ಲಿ, ವಿದ್ಯಾರ್ಥಿಗಳನ್ನು ಜಾಗೃತಗೊಳಿಸುವ ಕೆಲಸದಲ್ಲಿ ನಿರತನಾಗುತ್ತಾನೆ. ತನ್ನ ಪ್ರೀತಿ–ಪ್ರೇಮ, ಸಂಸಾರಕ್ಕಿಂತ ರಂಗದಾಸನಿಗೆ ದುಡಿವ ನೇಕಾರರ ಗೋಳಿನ ಚಿತ್ರಣ ಬಹಳ ಮುಖ್ಯವಾಗುತ್ತದೆ.

ಉಗ್ರಪ್ಪನ ಪವರ್‌ಲೂಮದಲ್ಲಿ ಕೆಲಸ ಮಾಡುತ್ತಿದ್ದ ಅರಸಪ್ಪನ ಕೈಮುರಿದು ಆತನ ಬದುಕೇ ಅಂಧಕಾರವಾದಾಗ, ರಂಗದಾಸ ಸಹಾಯಕ್ಕೆ ಬರುತ್ತಾನೆ. ಶಿಸ್ತಿನಿಂದ - ಸಂಯಮದಿಂದ ಎಲ್ಲ ಕಾರ್ಮಿಕರನ್ನು ಸಂಘಟಿಸಿ ಉಗ್ರಪ್ಪನ ವಿರುದ್ಧ ಹೋರಾಟಕ್ಕಿಳಿಯುತ್ತಾನೆ. ಅರಸಪ್ಪನಿಗೆ ಪರಿಹಾರಧನ ಕೊಡಿಸುತ್ತಾನೆ. ಹೊತ್ತು - ಗೊತ್ತು ಒಂದೂ ಇರದೆ ಪ್ರಾಣಿಗಳಂತೆ ಬಡ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿದ್ದ ಉಗ್ರಪ್ಪನಿಗೆ ರಂಗದಾಸ ಸಿಂಹಸ್ವಪ್ನವಾಗುತ್ತಾನೆ. ಅಹಿಂಸೆಯಿಂದಲೇ ಹೋರಾಟವನ್ನು ತೀವ್ರಗೊಳಿಸಿ ಉಗ್ರಪ್ಪನ ಪವರ್‌ಲೂಮದಲ್ಲಿ ದುಡಿಯುತ್ತಿದ್ದ ಕಾರ್ಮಿಕರಿಗೆ ಅನೇಕ

ಸವಲತ್ತುಗಳನ್ನು ಒದಗಿಸಿಕೊಡಲು ಒತ್ತಾಯಿಸುತ್ತಾನೆ. ಉಗ್ರಪ್ಪ ತನ್ನ ಶ್ರೀಮಂತಿಕೆಯ ಸೊಕ್ಕಿನಲ್ಲಿ, ಅಳಿಯ ಶಾಸಕನೆಂಬ ಅಹಂಭಾವದಲ್ಲಿ ಮೆರೆಯುತ್ತಿದ್ದಾಗ, ರಂಗದಾಸ ತಣ್ಣನೆಯ ಹೋರಾಟದಿಂದಲೇ ಎಲ್ಲವನ್ನೂ ಸಾಧಿಸುತ್ತಾನೆ.

ತಿಮ್ಮಪ್ಪನ ನಾಯಕತ್ವದಲ್ಲಿ ಕಾರ್ಮಿಕರೆಲ್ಲಾ ಒಗ್ಗಟ್ಟಿನಿಂದ ಸತ್ಯಾಗ್ರಹ ಮಾಡುವಂತೆ ರಂಗದಾಸ ಸಲಹೆ ನೀಡುತ್ತಾನೆ. ಉಗ್ರಪ್ಪ ಗೂಂಡಾಗಳನ್ನು ಛೂಬಿಟ್ಟು ರಂಗದಾಸನ ಮೇಲೆ ಹಲ್ಲೆ ಮಾಡಿದಾಗ ತಿಮ್ಮಪ್ಪನ ಮುಖಂಡತ್ವದಲ್ಲಿ ಹೋರಾಟ ನಿಲ್ಲದೇ ಮುಂದೆ ಸಾಗುತ್ತದೆ. ಮತ್ತೆ ಚೇತರಿಸಿಕೊಂಡು ಬಂದ ರಂಗದಾಸ್, ಉಗ್ರಪ್ಪನಿಗೆ ಬಗೆಹರಿಯದ ಸಮಸ್ಯೆಯಾಗುತ್ತಾನೆ. ಕಾರ್ಮಿಕರನ್ನು ಒಡೆಯಬೇಕೆಂದು ಎಷ್ಟೇ ಪ್ರಯತ್ನ ಪಟ್ಟರೂ ಶಾಸಕ ಮುದ್ದುಸ್ವಾಮಿಯಿಂದಾಗಲಿ, ಉಗ್ರಪ್ಪನಿಂದಾಗಲಿ ಸಾಧ್ಯವಾಗುವದಿಲ್ಲ.

ವಿಚಾರವಾದಿ ಯುವಕನೊಬ್ಬ ಶಿಸ್ತಿನಿಂದ ಕಾರ್ಮಿಕನನ್ನು ಸಂಘಟಿಸಿ ಸೈದ್ಧಾಂತಿಕವಾಗಿ ಹೋರಾಡುವ ಸನ್ನಿವೇಶಗಳು ತುಂಬಾ ಪರಿಣಾಮಕಾರಿಯಾಗಿ ಮೂಡಿವೆ. ಜಾತಿ ಸಂಘಟನೆಗಿಂತ ವರ್ಗ ಹೋರಾಟ ಮುಖ್ಯವೆಂದು ನಂಬಿದ ರಂಗದಾಸ, ತನ್ನ ಜಾತಿಯ ಉಗ್ರಪ್ಪನ ವಿರುದ್ಧವೇ ಕಾರ್ಮಿಕರ ಹೋರಾಟವನ್ನು ಅಣಿಗೊಳಿಸಿ ವರ್ಗ ಸಂಘರ್ಷದ ಅನಿವಾರ್ಯ ಕ್ರಿಯೆಯಾಗುತ್ತಾನೆ. ರಂಗದಾಸನ ಸೈದ್ಧಾಂತಿಕ ಹೋರಾಟದೆದುರು ಉಗ್ರಪ್ಪ ತಣ್ಣಗಾಗಬೇಕಾಗುತ್ತದೆ. ಮುದ್ದುಸ್ವಾಮಿ ಹೃದಯಾಘಾತದಿಂದ ಸತ್ತಾಗ, ಗಿರಿಜೆಗೆ ಒಂದು ಹೆಣ್ಣು ಮಗು ಇದ್ದರೂ ರಂಗದಾಸ್ ಅವಳನ್ನು ಮದುವೆಯಾಗುವುದರ ಮೂಲಕ ಅವಳಿಗೆ ಹೊಸ ಜೀವನ ಕೊಡುತ್ತಾನೆ.

ಪ್ರಾಮಾಣಿಕ ಹೋರಾಟಗಾರನೊಬ್ಬ ಹೇಗೆ ಒಂದು ಹಳ್ಳಿಗೆ ಅನಿವಾರ್ಯವಾಗಬಲ್ಲನೆಂಬುದನ್ನು ಈ ಕಾದಂಬರಿ ಹೇಳುತ್ತದೆ. ರಂಗದಾಸ್ ತಾನೊಬ್ಬ ನಾಯಕನಾಗಿ ಮೆರೆಯದೆ ಕಾರ್ಮಿಕರಲ್ಲಿ ಅರಿವನ್ನುಂಟುಮಾಡಿ ಹೋರಾಟ ನಿರಂತರವಾಗಿ ನಡೆಯುವಂತೆ ಮಾಡುತ್ತಾನೆ. ಅಂತೆಯೇ ರಂಗದಾಸ ಹಲ್ಲೆಗೊಳಗಾದಾಗಲೂ ತಿಮ್ಮಪ್ಪನ ಮುಖಂಡತ್ವದಲ್ಲಿ ಕಾರ್ಮಿಕರ ಉಪವಾಸ ಸತ್ಯಾಗ್ರಹ ಮತ್ತು ಹೋರಾಟ ಮುಂದುವರೆಯುತ್ತವೆ. ಒಬ್ಬ ಸೈದ್ಧಾಂತಿಕ ಹೋರಾಟಗಾರ ಹೋರಾಟವನ್ನು ಹೇಗೆ ನಿರಂತರಗೊಳಿಸುತ್ತಾನೆಂಬುದನ್ನು ಕಾದಂಬರಿ ಬಹಳ ಅರ್ಥಪೂರ್ಣವಾಗಿ ವಿವರಿಸುತ್ತದೆ.

ನೇಕಾರರ ಬದುಕಿನ ಪರಂಪರೆಯನ್ನೇ ವಿವರವಾಗಿ ಅಧ್ಯಯನ ಮಾಡಿದ ರಂಗದಾಸ್ ದುಡಿವ ನೇಕಾರರಲ್ಲಿರುವ ಅನೇಕ ಅಂಧ ಸಂಪ್ರದಾಯಗಳನ್ನು, ಮೂಢ ನಂಬಿಕೆಗಳನ್ನು ಅಲ್ಲಗಳೆದು, ವಿಧವೆಯಾದ ಗಿರಿಜೆಯನ್ನು ಮದುವೆಯಾಗುವುದರ ಮೂಲಕ ಮಾನವೀಯತೆಯ, ಪ್ರಗತಿಪರ ವಿಚಾರದ ಹರಿಕಾರನಾಗುತ್ತಾನೆ.

ನೇಕಾರರ ಬದುಕಿನ ಏಳೆ-ಎಳೆಗಳನ್ನು ವಿವರಿಸುವ ಈ ಕಾದಂಬರಿ ಸೈದ್ಧಾಂತಿಕ ಹೋರಾಟವೊಂದರ ಸೂಕ್ಷ್ಮಗಳನ್ನೂ ಹೇಳುತ್ತದೆ. ದುಡಿವ ಕಾರ್ಮಿಕರು ಯಾವುದೇ ಜಾತಿಯವರಾಗಿದ್ದರೂ ಅವರಿಗೆಲ್ಲ ಕಾಡುತ್ತಿರುವ ಸಮಸ್ಯೆ ಒಂದೇಯಾಗಿದ್ದರಿಂದ, ಅವರೆಲ್ಲ ಜಾತಿಯನ್ನು ಮರೆತು ಎಲ್ಲರೂ ಒಗ್ಗಟ್ಟಾಗಿ ತಮ್ಮ ಬದುಕಿನ ಅಸ್ತಿತ್ವಕ್ಕಾಗಿ ಹೋರಾಡಲೇ ಬೇಕೆಂದು ಹೇಳುವ ಈ ಕಾದಂಬರಿ ಮಹತ್ವದ ಆಶಯವನ್ನೊಳಗೊಂಡಿದೆ.

ರಂಗದಾಸ್ ಮತ್ತು ಗಂಗಾಧರ ಇಬ್ಬರೂ ಸಹಪಾಠಿಗಳು, ಸ್ನೇಹಿತರು ಆಗಿದ್ದರೂ ಕೂಡ ರಂಗದಾಸ ಜಾತಿಯನ್ನು ಮೀರಿ ಬೆಳೆದು ಹೋರಾಟಗಾರನಾದರೆ, ಗಂಗಾಧರ ಸಂಪ್ರದಾಯದ ಗೆರೆಯಲ್ಲೇ ಸುತ್ತುತ್ತಾ ತಂದೆ ಹೇಳಿದ ಹಾಗೆ ಕೇಳಿಕೊಂಡು ನಿರುಪಯೋಗಿಯಾಗುತ್ತಾನೆ.

ರಂಗದಾಸ ತನ್ನ ಪ್ರಾಧ್ಯಾಪಕರೊಂದಿಗೆ ಚರ್ಚಿಸುವದು, ಅನೇಕ ಕೃತಿಗಳನ್ನು ಅಧ್ಯಯನ ಮಾಡುವದು, ಬಡತನ ಶ್ರೀಮಂತಿಕೆಗಳಿಗೆ ಕಾರಣ ಹುಡುಕುವದು, ಈ ದೇಶದ ಸಂಸ್ಕೃತಿಯನ್ನು ಪ್ರಶ್ನಿಸುತ್ತಲೇ ತನ್ನ ಆಲೋಚನೆಗಳಿಂದ ಸೈದ್ಧಾಂತಿಕ ಹೋರಾಟಗಾರನಾಗಿ ಬೆಳೆದು ನಿಲ್ಲುವದು ತುಂಬಾ ಮುಖ್ಯವೆನಿಸುತ್ತದೆ. ವರ್ಗ ಸಂಘರ್ಷದ ಅರ್ಥಪೂರ್ಣ ದಾಖಲೆಯಾಗಿ ಈ ಕಾದಂಬರಿ ಗಮನ ಸೆಳೆಯುತ್ತದೆ.

೧೯೮೧ರಲ್ಲಿ ಪ್ರಕಟವಾದ 'ಕೊಳಚೆ ಕೊಂಪೆಯ ದಾನಿಗಳು' ಕಾದಂಬರಿ ಅನುಪಮಾ ಅವರ ಮಹತ್ವದ ಕಾದಂಬರಿ. ಕೊಳಚೆ ಕೊಂಪೆಯ ಬದುಕಿನ ಚಿತ್ರಣವನ್ನು ಕಟ್ಟಿಕೊಡುವ ಈ ಕಾದಂಬರಿ ವರ್ಗ ಸಂಘರ್ಷದ ತೀವ್ರ ಹೋರಾಟವನ್ನು ಸ್ಫೋಟಿಸುವದರಿಂದ ಬಹಳ ಮುಖ್ಯವಾಗುತ್ತದೆ. ಕೊಳಚೆ ಕೊಂಪೆಯ ಜನರ ದಾರುಣ ಬದುಕಿನತ್ತ ಇದು ವರೆಗೆ ಕನ್ನಡದ ಯಾವ ಲೇಖಕಿಯೂ ಕಣ್ಣು ಹಾಯಿಸಿಲ್ಲ. ಅನುಪಮಾ ಕೊಳಚೆ ಜನರ ನೋವು-ಯಾತನೆಗಳನ್ನು ಕಣ್ಣಾರೆ ಕಂಡು, ಅನೇಕ ಸಲ ಕೊಳಚೆ ಕೊಂಪೆಗಳಿಗೆ ಭೇಟಿ ಕೊಟ್ಟು ತುಂಬಾ ವಾಸ್ತವವಾಗಿ ಈ ಕೃತಿ ರಚನೆ ಮಾಡಿದ್ದಾರೆ. ಸಾಮಾಜಿಕ ಪ್ರಜ್ಞೆ, ಬಂಡಾಯ ಮನೋಭಾವ, ದಲಿತರ ಚಿತ್ರಣ, ವರ್ಗ ಹೋರಾಟ ಹೀಗೆ ಅನೇಕ ವಿಷಯವನ್ನೊಳಗೊಂಡ ಈ ಕಾದಂಬರಿ ಕನ್ನಡಕ್ಕೆ ಅಪರಿಚಿತವಾಗಿದ್ದ ಕೊಂಪೆಯ ಜನರ ಬದುಕನ್ನು ಕಟ್ಟಿಕೊಡುತ್ತದೆ.

ಕೊಳಚೆ ಕೊಂಪೆಯ ನಿವಾಸಿಗಳಾದ ಸಂಜ-ಕನ್ನಮ್ಮ-ಮುತ್ಯಾಲ-ಪಳಿನಿ-ಅಂಥೋಣಿ-ಸೆಲ್ವಿ-ಮೇರಿ ಇವರೆಲ್ಲಾ ಬಡತನ-ಮೌಢ್ಯತೆ - ಅಸಹಾಯಕತೆಯಿಂದ ಯಾತನೆಯ ಬದುಕನ್ನು ಅನುಭವಿಸಿದರೆ, ಕೊಂಪೆಯ ಒಡೆಯನಾದ ಸಿಂಗೇಗೌಡ ಆತನ ಅಪ್ತ ಸಹಾಯಕ ಸಂಕಪ್ಪ, ಪುಡಾರಿ ದೇವಪ್ಪ ಇವರೆಲ್ಲಾ ಈ ಕೊಂಪೆಯ

ಬಡವರ ರಕ್ತ ಹೀರಿ ಬದುಕುವ ಶೋಷಕ ಪ್ರತಿನಿಧಿಗಳಾಗುತ್ತಾರೆ. ಕೊಳಚೆ ಕೊಂಪೆಯಲ್ಲಿಯೇ ಚಿಗುರೊಡೆದ ಯುವ ಪೀಳಿಗೆಯ ಸಂಜೀವ-ಬಾಬು-ಅರ್ಜುನ-ಮಹಮ್ಮದ ಇವರೆಲ್ಲಾ ಹೋರಾಟದ ಕಿಡಿಗಳಾಗಿ ವರ್ಗ ಸಂಘರ್ಷ ಹುಟ್ಟು ಹಾಕಲು ಕಾರಣರಾಗುತ್ತಾರೆ.

ಸಿಂಗೇ ಗೌಡ ತನ್ನ ರಾಜಕೀಯದ ಲಾಭಕ್ಕಾಗಿ ಹನುಮಂತ ಸ್ಲಮ್‌ದ ಜನರನ್ನು ಉಪಯೋಗಿಸಿಕೊಂಡು, ಅವರೇ ಕಟ್ಟಿದ ಗುಡಿಸಲುಗಳಿಂದ ಬಾಡಿಗೆ ವಸೂಲಿ ಮಾಡುತ್ತಾ, ಸಂಕಪ್ಪನಂತಹ ಆಪ್ತ ಸಹಾಯಕನಿಂದ ಅವರಿಗೆ ಬೆದರಿಕೆ ಹಾಕುತ್ತಾ, ಚುನಾವಣೆ ಬಂದಾಗಲೆಲ್ಲಾ ಅವರಿಂದ ಓಟು ಪಡೆಯುತ್ತಾ, ತೋರಿಕೆಗೆ ತಾನೊಬ್ಬ ದೊಡ್ಡ ದಾನಿಯೆಂದು ಹೇಳಿಕೊಳ್ಳುತ್ತಾ ಇಡೀ ಕೊಂಪೆಯ ಜನರ ಬದುಕನ್ನೇ ಹೊಸೆದು ಹಾಕುವದು, ಈತನಿಗೆ ಸಹಾಯಕನಾಗಿ ದೇವಪ್ಪ ಪೂಜಾರಿ ಜತೆಗೂಡುವದು, ಕೊಂಪೆಯಲ್ಲಿ ಕೂಲಿ ಮಾಡಿ ಬದುಕುತ್ತಿದ್ದ ಬಡವರಿಗೆ ದಿಕ್ಕೇ ತಪ್ಪಿದಂತಾಗುತ್ತದೆ. ಧರ್ಮಪುರಿಯ ಜನ ಈ ಕೊಂಪೆಯನ್ನು ತೆಗೆಯಬೇಕು, ಇದು ತಮ್ಮ ನಗರಕ್ಕೆ ಕಳಂಕವಾಗಿದೆ ಎಂದು ಸರಕಾರಕ್ಕೆ ಒತ್ತಾಯಿಸುವದು, ಈ ದೇಶದ ಮಧ್ಯಮ ವರ್ಗದ ನಾಗರೀಕರು ಕೂಲಿಗಳನ್ನು, ಕೊಂಪೆಯ ಜನರನ್ನು ಎಷ್ಟು ನಿಕೃಷ್ಟವಾಗಿ ಕಾಣುತ್ತಾರೆ ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಅಸಹಾಯಕ ಪರಿಸ್ಥಿತಿಗೆ ಸಿಕ್ಕು ಮೇರಿಯಂತಹವರು ವೇಶ್ಯಾವಾಟಿಕೆ ಸೇರುವದು, ಭಾಗ್ಯಳಂತಹ ಬಡ ಯುವತಿ ಸಿಂಗೇ ಗೌಡ-ದೇವಪ್ಪನವರ ಕಾಮ ಪಿಪಾಸೆಗೆ ಬಲಿಯಾಗುವದು ಈ ದೇಶದಲ್ಲಿ ನಡೆವ ಉಳ್ಳವರ ನಿರಂತರ ಶೋಷಣೆಗೆ ಸಾಕ್ಷಿಯಂತಿವೆ.

ಕೊಳಚೆ ಕೊಂಪೆಯಲ್ಲಿ ದೇವಸ್ಥಾನವೊಂದನ್ನು ಕಟ್ಟಿಸಿ ತಾನೊಬ್ಬ ಶ್ರೇಷ್ಠ ಭಕ್ತನೆಂದು ಕರೆಯಿಸಿಕೊಳ್ಳುವ ಶೆಟ್ಟಿ, ಕೊಂಪೆಯ ಜನರಿಗೆಲ್ಲಾ ಜಾಗವನ್ನು ಬಾಡಿಗೆಗೆ ಕೊಟ್ಟು, ಅವರಿಗೆ ತಾನೇ ಬದುಕು ಕೊಟ್ಟಿದ್ದೇನೆಂದು ಬೀಗುವ ಸಿಂಗೇ ಗೌಡ, ಕನ್ನಮ್ಮನ ಮಗಳನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಅವಳಿಂದ ದೇಹ ಸುಖ ಪಡೆದು ನಂತರ ಅವಳ ಕತ್ತು ಹಿಚುಕಿ ಕೊಂಪೆಯ ಕಸದ ಡಬ್ಬಿಯಲ್ಲಿ ಒಗೆಸುವ ದೇವಪ್ಪ-ಸಿಂಗೇ ಗೌಡ, ಸಿಂಗೇ ಗೌಡನ ಕುಟಿಲ ಕೆಲಸಗಳಿಗೆಲ್ಲಾ ಸಹಾಯಕನಾಗುವ ಸಂಕಪ್ಪ ಈ ಸಮಾಜ ವ್ಯವಸ್ಥೆಯಲ್ಲಿರುವ ಉಳ್ಳವರ-ಸ್ವಾರ್ಥ ಪೂಜಾರಿಗಳ-ಗೋಮುಖ ವ್ಯಾಘ್ರರಂತಿರುವ ನರಿ ಬುದ್ಧಿಯವರ ಪ್ರತಿನಿಧಿಗಳಾಗುತ್ತಾರೆ.

ಆರಡಿ ಗುಡಿಸಲದಲ್ಲಿದ್ದ ಮುತ್ತ್ಯಾಲ ಒಂದು ತಿಂಗಳು ಬಾಡಿಗೆ ಕೊಡಲು ತಡವಾದದ್ದಕ್ಕೆ ಸಂಕಪ್ಪ ಆತನನ್ನು ಮತ್ತು ಆತನ ಹೆಂಡತಿಯನ್ನು ಗುಡಿಸಲಿನಿಂದ ಹೊರದಬ್ಬುವ ದೃಶ್ಯ ಕರುಣಾಜನಕವಾಗಿದೆ. ಅಂಥೋಣಿಯಂತಹ ಕುಡುಕ ಗಂಡನನ್ನು

ಕಟ್ಟಿಕೊಂಡು ಹಸಿವೆಯಿಂದ ಪರಿತಪಿಸುತ್ತಿರುವ ಸೆಲ್ವಿ ತನ್ನ ಮಗುವಿಗೆ ವಿಷ ಕೊಟ್ಟು-ತಾನೂ ವಿಷ ಕುಡಿದು ಸಾಯಲು ಪ್ರಯತ್ನಿಸುವ ದೃಶ್ಯ ಮನಮಿಡಿಯುವಂತಿದೆ. ಭಾಗ್ಯಳ ಶೀಲ ಅಪಹರಿಸಿ ಅವಳನ್ನೂ ಕತ್ತು ಹಿಸುಕಿ ಕಸದ ಡಬ್ಬಿಯಲ್ಲಿ ಒಗೆದ ಚಿತ್ರ ವಂತೂ ಸೇಡಿನ ಕಿಡಿ ಜ್ವಾಲಾಮುಖಿಯಾಗುವಂತೆ ಮಾಡುತ್ತದೆ.

ಸಂಜೀವ-ಅರ್ಜುನ-ಬಾಬು ಕೊಳಚೆ ಕೊಂಪೆಯ ಆಶಾದೀಪಗಳಾಗಿ ಹೋರಾಟ ಮಾಡುವದು ತುಂಬಾ ಸ್ವಾಗತಾರ್ಹವಾಗಿದೆ. ನಾಗರಾಜನ್‌ನ ಮಾರ್ಗದರ್ಶನದಲ್ಲಿ ಸಂಜೀವನಂತಹ ಯುವಕರು ಸಂಘಟನೆಯನ್ನು ಕಟ್ಟುವದು, ಕೊಂಪೆಯ ಜನತೆಗೆ ಸಿಂಗೇ ಗೌಡನ ಗೋಸಂಬಿತನವನ್ನು ಪರಿಚಯ ಮಾಡಿಕೊಡುವದು, ಸಿಂಗೇಗೌಡ ಕೊಂಪೆಯ ಜಾಗವನ್ನು ಸರಕಾರಕ್ಕೆ ಕೊಟ್ಟಾಗ, ತಾವು ಅಲ್ಲಿಂದ ಹೋಗುವದಿಲ್ಲವೆಂದು ಪಂಜಿನ ಮೆರವಣಿಗೆ ತೆಗೆಯುವದು, ಭಯ-ಅಸಹಾಯಕತೆ ತುಂಬಿಕೊಂಡಿದ್ದ ಕೊಂಪೆ ಯಲ್ಲಿ ಧೈರ್ಯದ ವಾತಾವರಣವನ್ನು ನಿರ್ಮಿಸಿ, ದುಡಿವ ಜನರನ್ನೆಲ್ಲ ಸಂಘಟಿಸಿ ಸಿಂಗೇ ಗೌಡನ ವಿರುದ್ಧ ಪ್ರತಿಭಟಿಸುವದು ನಿಜಕ್ಕೂ ಮಹತ್ವದ ಪ್ರಸಂಗಗಳಾಗುತ್ತವೆ.

ಈ ದೇಶದ ಶ್ರೀಮಂತರು, ಸ್ವಾರ್ಥ ರಾಜಕಾರಣಿಗಳು ಕೊಂಪೆಯ ಬಡಜನತೆ ಯನ್ನು ಹೇಗೆ ಅಜ್ಞಾನದಲ್ಲಿಡುತ್ತಾರೆ ಮತ್ತು ಅವರನ್ನು ನಿರಂತರ ಶೋಷಣೆ ಮಾಡುತ್ತಾ ಹೋಗುತ್ತಾರೆಂಬುದನ್ನು ಕಾದಂಬರಿ ಸ್ಪಷ್ಟಪಡಿಸುತ್ತದೆ. ಪದವೀಧರ ನಾಗಿರದಿದ್ದರೂ, ಸ್ವಲ್ಪ ಓದಲು ಕಲಿತುಕೊಂಡ ಸಂಜೀವನಂತಹ ಯುವ ಶಕ್ತಿಗಳು ಸಂಘಟಿತರಾಗಿ ಶ್ರೀಮಂತ ಸಿಂಗೇ ಗೌಡನ ವಿರುದ್ಧ, ಪ್ರಜಾಪ್ರಭುತ್ವದ ಸೋಗು ಹಾಕಿದ ಭ್ರಷ್ಟ ಸರಕಾರದ ವಿರುದ್ಧ ಸಿಡಿದೇಳುವದು ಹೊಸ ವ್ಯವಸ್ಥೆಯ ಹುಟ್ಟಿಗೆ ಕಾರಣ ವಾಗುವ ಸಿದ್ಧತೆಗಳಂತೆ ಕಾಣುತ್ತವೆ.

ಒಂದ್ಹೊತ್ತಿನ ಊಟಕ್ಕೂ ಗತಿಯಿಲ್ಲದ ಅಂಥೋಣಿ - ಜಾರ್ಜ್‌ನಂತಹವರು ದುಡಿದು ಬಂದ ಸ್ವಲ್ಪ ಹಣವನ್ನೇ ಸರಾಯಿ ಕುಡಿಯಲು ಕಾರಣ ಅವರು ತಮ್ಮ ದುಃಖವನ್ನು ಮರೆಯಲಿಕ್ಕೆ ಎಂಬುದು ಸ್ಪಷ್ಟವಾಗುತ್ತದೆ. ಹೀಗೆ ಬಡವರೆಲ್ಲ ಕುಡುಕರಾಗಿ ಕನಸುಗಳಲ್ಲಿ - ಭ್ರಮೆಗಳಲ್ಲಿ ಸುಖ ಕಾಣುವ ಪ್ರಸಂಗ ಈ ದೇಶದ ದಾರಿದ್ರ್ಯವನ್ನು ಬಣ್ಣಿಸುತ್ತದೆ. ಅಂಥೋಣಿ, ಜಾರ್ಜ್‌ರಂತಹವರು ಕುಡುಕರಾಗಿ ಕಂಟಕಪ್ರಾಯರಾದರೆ, ರಾಮಕ್ಕ ಚಂದನಾ ಬಾಯಿಯಂತಹವರು ಹಣಗಳಿಸುವದಕ್ಕಾಗಿ ಮೋಸದ ಕೆಲಸ ಮಾಡುವದು, ವೇಶ್ಯಾವಾಟಿಕೆ ನಡೆಸುವದು ಮಾಡುತ್ತಾರೆ. ಇಂತಹವರ ಮೋಸಕ್ಕೆ ಅಂದರೆ ಅಂಥೋಣಿಯ ದುಶ್ಚಟಕ್ಕೆ ಸೆಲ್ವಿ ನರಳಿ ಸಾಯುವ ಪ್ರಸಂಗ ಬಂದರೆ, ರಾಮಕ್ಕನ ಸ್ವಾರ್ಥಕ್ಕೆ ಮೇರಿ ವೇಶ್ಯೆಯಾಗುವ ಪರಿಸ್ಥಿತಿ ಬರುತ್ತದೆ. ಇದು ತಮ್ಮ ಕರ್ಮವೆಂದು ದುಡಿದುಡಿದು ಸಾಯುವ ಕನ್ನಮ್ಮ, ಮುತ್ತ್ಯಾಲ-

ಪಳಿನಿಯಂತಹವರು ಸದಾ ಸಂಕಟದ ಬದುಕನ್ನೇ ಬಾಳಬೇಕಾಗುತ್ತದೆ. ಸಂಜೀವನನ್ನು ಮದುವೆಯಾಗುವ ಕನಸುಹೊತ್ತ ಸುಂದರ ಹುಡುಗಿ ಭಾಗ್ಯ ಸಿಂಗೇ ಗೌಡ, ದೇವಪ್ಪರ ಕಾಮಪಿಪಾಸೆಗೆ ಬಲಿಯಾಗುವದು, ಈ ದೇಶದಲ್ಲಿ ನಿರಂತರವಾಗಿ ನಡೆಯುತ್ತ ಬಂದ ಸ್ತ್ರೀಶೋಷಣೆಗೆ ಸಾಕ್ಷಿಯಂತಿದೆ.

ಕೊಂಪೆಯಲ್ಲಿ ನಡೆಯುವ ಈ ಅನ್ಯಾಯ ಅತ್ಯಾಚಾರವನ್ನು ಕಂಡ ಸಂಜೀವ-ಅರ್ಜುನ-ಬಾಬು ಉಳ್ಳವರ ಅಹಂಭಾವದ ವಿರುದ್ಧ ಸಿಡಿದೇಳುವದು, ಕೊನೆಗೆ ಸಿಂಗೇ ಗೌಡನ ಕೊಲೆಯೊಂದಿಗೆ ಕಾದಂಬರಿ ಮುಕ್ತಾಯವಾಗುವದು ಕಾದಂಬರಿಯ ಕೆಂಪು ಅಧ್ಯಾಯವಾಗುತ್ತದೆ. ಸಿಂಗೇ ಗೌಡ ಸಂಜೀವನನ್ನು ಮಚ್ಚಿನಿಂದ ಹೊಡೆಯಬೇಕೆಂದು ಕೈಗೆ ಮಚ್ಚು ತೆಗೆದುಕೊಂಡಾಗ, ಸಂಜೀವ ಚಾಕುವಿನಿಂದ ಸಿಂಗೇ ಗೌಡನನ್ನು ಇರಿಯುವದು, ನಂತರ ಸಿಂಗೇ ಗೌಡ ಸಾಯುವದು ಕೇವಲ ಸೇಡಾಗದೆ ಶತಮಾನಗಳಿಂದ ಉಳ್ಳವರು ನಡೆಸುವ ಅತ್ಯಾಚಾರಕ್ಕೆ ದೊರೆತ ಪ್ರತಿಫಲವಾಗುತ್ತದೆ.

ಸರಕಾರ ಕೊಂಪೆಯ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಂಡು ಪೋಲಿಸರನ್ನು ಕಳಿಸಿದಾಗ, ಪೋಲಿಸರು ತಮ್ಮ ಲಾಠಿ ಬಂದೂಕಗಳಿಂದ ಕೊಂಪೆಯ ಬಡವರನ್ನು ಮಾತನಾಡಿಸಿದಾಗ, ಕೊಂಪೆಯ ಜನರೆಲ್ಲಾ ಒಂದುಗೂಡಿ ಸಂಜೀವನ-ನೇತೃತ್ವದಲ್ಲಿ ಸಂಘಟಿತರಾಗಿ ಧರ್ಮಪುರಿಯಿಂದ ದೂರವಿರುವ ಬಯಲು ಜಾಗಕ್ಕೆ ವಲಸೆ ಹೋಗುವದು, ಅವರ ಹೋರಾಟದ ಘೋಷಣೆಗಳೊಂದಿಗೆ ಕಾದಂಬರಿ ಕೊನೆಗೊಳ್ಳುವದು ತುಂಬಾ ಅರ್ಥಪೂರ್ಣವೆನಿಸುತ್ತದೆ. ದುಡಿವ ಬಡವರೆಲ್ಲಾ ಒಂದಾಗಿ ಅನ್ಯಾಯ-ಅತ್ಯಾಚಾರದ ವಿರುದ್ಧ ಶ್ರೀಮಂತ ವರ್ಗವನ್ನು ಪ್ರತಿಭಟಿಸುವದು ಈ ಕಾದಂಬರಿಯ ಪ್ರಮುಖ ಆಶಯವಾಗಿದೆ.

'ಎಳೆ' ಕಾದಂಬರಿಯಲ್ಲಿ ಅಹಿಂಸಾತ್ಮಕವಾದ ಸೈದ್ಧಾಂತಿಕ ಹೋರಾಟವಿದ್ದರೆ, 'ಕೊಳಚೆ ಕೊಂಪೆಯ ದಾನಿಗಳು' ಕಾದಂಬರಿಯಲ್ಲಿ ಹಿಂಸಾತ್ಮಕವಾದ ರೊಚ್ಚಿನ ಹೋರಾಟವಿದೆ. ಇವೆರಡೂ ಕಾದಂಬರಿಗಳಲ್ಲಿ ವರ್ಗ ಸಂಘರ್ಷವಿದೆ. ಆದರೆ ಅದರ ರೂಪ ಮಾತ್ರ ಬೇರೆಬೇರೆಯಾಗಿದೆ. ಈ ದೇಶದ ಬಡವರು-ದುಡಿವವರು ತಮ್ಮ ತಮ್ಮ ಜಾತಿ-ಮತಗಳ ಅಂಧಾಭಿಮಾನವನ್ನು ಮರೆತು, ಶ್ರೀಮಂತರಿಂದ-ಸ್ವಾರ್ಥ ರಾಜಕಾರಣಿಗಳಿಂದ ನಿರಂತರವಾಗಿ ನಡೆಯುತ್ತಿರುವ ಶೋಷಣೆಯ ವಿರುದ್ಧ ಬಂಡೇಳಬೇಕೆಂದು ಎರಡೂ ಕಾದಂಬರಿಗಳು ಹೇಳುತ್ತವೆ. 'ಕಣಿವೆಗೆ ಬಂತು ಬೇಸಗೆ' ಕಾದಂಬರಿಯಲ್ಲಿ ಪ್ರಾಮಾಣಿಕವಾಗಿರದ ಅಸಂಘಟಿತ ಹೋರಾಟ ಹೇಗೆ ಅಸಫಲವಾಗುತ್ತದೆಂದು ಹೇಳಿದರೆ, 'ನೂಲು ನೇಯ್ದ ಚಿತ್ರ' ಕಾದಂಬರಿಯಲ್ಲಿ ಬಡ ನೇಕಾರರ ಸಂಕಟ ಒಳಗೊಳಗೆ ಕುದಿಯುತ್ತಾ-ಸಂಘಟನೆಯ ಶಿಸ್ತು ಇರದೇ ಇದ್ದುದಕ್ಕೆ ಅದು ಅಸಹಾಯಕತೆಯಿಂದ ನರಳುತ್ತ ಹೇಗೆ ತಣ್ಣಗಾಗುತ್ತದೆ ಎಂಬುದನ್ನು ಬಿಂಬಿಸಲಾಗಿದೆ.

ಈ ಕಾದಂಬರಿಗಳು ಹೋರಾಟವನ್ನು ಹೊತ್ತುಕೊಂಡು ನಿಗಿನಿಗಿಸುತ್ತಿದ್ದರೂ, ಎಲ್ಲಿಯೂ ಭಾವಾವೇಶಕ್ಕೆ ಒಳಗಾಗದೆ, ಕೃತ್ರಿಮವಾಗದೆ ಜೀವಂತ ಘಟನೆಗಳಂತೆ, ನಿತ್ಯ ನಡೆವ ಸಂಗತಿಗಳಂತೆ ಕಣ್ಣಿಗೆ ಕಟ್ಟುತ್ತವೆ. ಸರಳವಾದ ಶೈಲಿ, ನಿರಾಡಂಬರವಾದ ಪದಪುಂಜಗಳು ಎಂತಹವರನ್ನಾದರೂ ಓದಿಸಿಕೊಂಡು ಹೋಗುತ್ತವೆ.

ಸೈದ್ಧಾಂತಿಕ ಹಿನ್ನಲೆಯುನ್ನೊಳಗೊಂಡ ವರ್ಗ ಹೋರಾಟಕ್ಕೂ ಯಾವ ಸಿದ್ಧಾಂತವಿಲ್ಲದೆ, ಕೇವಲ ರೊಚ್ಚು ಆವೇಶದಿಂದ ಸಿಡಿದೇಳುವದಕ್ಕೂ ತುಂಬಾ ಅಂತರವಿದೆಯೆಂಬ ಅಂಶವನ್ನು ಈ ಕಾದಂಬರಿಗಳ ಮುಖಾಂತರ ತಿಳಿದುಕೊಳ್ಳಬಹುದಾಗಿದೆ. ಅನುಪಮಾ ಕೇವಲ ನಾಲ್ಕು ಗೋಡೆಗಳ ನಡುವೆ ಕುಳಿತು ಬರೆಯುವ ಲೇಖಕಿಯಲ್ಲ: ಅವರು ಸ್ವತಃ ಅನೇಕ ಜನಪರ ಹೋರಾಟಗಳಲ್ಲಿ ಭಾಗವಹಿಸಿದವರು. ವೈದ್ಯೆಯಾಗಿ ಅನೇಕ ಬಡ ರೋಗಿಗಳ ಕಷ್ಟಗಳನ್ನು ತಿಳಿದುಕೊಂಡವರು. ಪತಿ ನಿರಂಜನರಂತಹ ಸತ್ವಪೂರ್ಣ ಸಾಹಿತಿಗಳಿಂದ ಅನೇಕ ಎಡ ಪಂಥೀಯ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡವರು. ಬಡತನದ ಕುಟುಂಬದಲ್ಲಿ ಹುಟ್ಟಿ ಅನೇಕ ಕಷ್ಟಗಳನ್ನೆದುರಿಸಿ ಬದುಕಿನುದ್ದಕ್ಕೂ ಹೋರಾಡುತ್ತಲೇ ಬಂದವರು. ದುಡಿವ ಶೋಷಿತ ವರ್ಗದಿಂದ ಬಂದ ಈ ಲೇಖಕಿ ಕಟ್ಟಿಕೊಡುವ ಇಲ್ಲಿನ ಅನುಭವಗಳೆಲ್ಲಾ ನಿಜಕ್ಕೂ ಕನ್ನಡ ಸಾಹಿತ್ಯಕ್ಕೆ ಹೊಸತನವನ್ನು ಮೂಡಿಸಬಲ್ಲವುಗಳಾಗಿವೆ. ವರ್ಗ ಹೋರಾಟ ಕುರಿತಂತೆ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಅನುಪಮಾ ಮೊಟ್ಟಮೊದಲು ಮಾತನಾಡಿದ ಲೇಖಕಿಯಾಗುತ್ತಾರೆ. ಈ ಎಲ್ಲ ಕಾರಣಗಳಿಂದ ಅನುಪಮಾ ಅರ್ಥಪೂರ್ಣ ಲೇಖಕಿಯಾಗುತ್ತಲೇ ಹೊಸ ಆಶಯಗಳನ್ನು ಹುಟ್ಟು ಹಾಕುತ್ತಾರೆ.

'ಎಳೆ'-ಒಂದು ವಿಶ್ಲೇಷಣೆ

-ಡಾ। ಕಮಲಾ ಹಂಪನಾ

ನಮ್ಮ ಇಂದಿನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕೇಳಿ ಬರುವ ಕೆಲವೇ ಕೆಲವು ಪ್ರಮುಖ ಸಾಹಿತಿಗಳ ಹೆಸರುಗಳಲ್ಲಿ ಡಾ। ಅನುಪಮಾ ನಿರಂಜನರದ್ದು ಒಂದು ದೊಡ್ಡ ಹೆಸರು. ವೃತ್ತಿಯಿಂದ, ಪ್ರವೃತ್ತಿಯಿಂದ ಕನ್ನಡ ಸಾಹಿತ್ಯಕ್ಕೆ ಇವರು ಕೊಟ್ಟ ದೇಣಿಗೆ ಹಿರಿದಾದುದು. ಮುವ್ವತ್ತು ವರುಷಗಳ ಸುದೀರ್ಘ ಶ್ರಮದಿಂದ ವೈಜ್ಞಾನಿಕ ಸಾಹಿತ್ಯವನ್ನೂ ಗಂಭೀರ ವೈಚಾರಿಕ ಸಾಹಿತ್ಯವನ್ನೂ, ಜನಪ್ರಿಯ ಸಾಹಿತ್ಯವನ್ನೂ ಸಿರಿಗೊಳಿಸಿದ ಶ್ರೇಯಸ್ಸು ಡಾ। ಅನುಪಮಾ ಅವರಿಗೆ ಸಲ್ಲುತ್ತದೆ. ಕಥೆಗಾರರಾಗಿ, ಕಾದಂಬರಿಕಾರರಾಗಿ, ವೈಜ್ಞಾನಿಕ ವಿಷಯಗಳ ಅಂಕಣಕಾರರಾಗಿ ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಉನ್ನತ ಸ್ಥಾನ ಅವರದಾಗಿದೆ.

ಕೇವಲ ಕಥೆಗಾಗಿ ಕಥೆ, ಕಾದಂಬರಿಗಾಗಿ ಕಾದಂಬರಿ ಬರೆಯುತ್ತಿರುವ ಅನೇಕ ಲೇಖಕರ, ಲೇಖಕಿಯರ ಮಧ್ಯೆ ಡಾ। ಅನುಪಮಾ ಅವರ ಎಲ್ಲ ಬರಹಗಳು ವಿಶಿಷ್ಟ ವಿಭಿನ್ನತೆಯಿಂದ ಎದ್ದು ನಿಲ್ಲುತ್ತವೆ ; ಹೊಸ ಧೋರಣೆ, ಹೊಸ ಕಾಳಜಿಗಳನ್ನು ಪ್ರತಿ ಬಿಂಬಿಸುತ್ತವೆ. ಬರವಣಿಗೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಬರೆಯುತ್ತಿರುವ ಅನುಪಮಾ ಅವರು ಜನತೆಗೆ, ಸಮಾಜಕ್ಕೆ ಏನನ್ನಾದರೂ ಕೊಡಲೇಬೇಕೆನ್ನುವ ಚಿಂತನೆಗೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಯಾವುದೇ ವಿಷಯವನ್ನು ಆಯ್ಕೆ ಮಾಡಿಕೊಂಡರೂ ಆ ವಿಷಯದಲ್ಲಿನ ಆಳಕ್ಕೆ ಇಳಿದ ಅಧ್ಯಯನದ ಫಲಶ್ರುತಿಯನ್ನು ಇವರ ಬರವಣಿಗೆ ಯಲ್ಲಿ ನಿಚ್ಚಳವಾಗಿ ಗುರುತಿಸಬಹುದಾಗಿದೆ. ಅದು ಉತ್ಖನನವಾಗಬಹುದು, ವಾಸ್ತು ಶಿಲ್ಪವಾಗಬಹುದು, ಕೊಳಚೆ ಪ್ರದೇಶದ ಜೀವನವಾಗಬಹುದು, ಸ್ತ್ರೀರೋಗ, ಸ್ತ್ರೀ ಸ್ವಾಸ್ಥ್ಯವನ್ನು ಕುರಿತಾದ ಕಥೆ ಕಾದಂಬರಿಗಳಾಗಬಹುದು, ಬಿಡಿ ಬಿಡಿ ಲೇಖನಗಳಾಗ ಬಹುದು, ಆತ್ಮಚರಿತ್ರೆಯೇ ಇರಬಹುದು, ಒಂದು ಜನಾಂಗದ ಇತಿಹಾಸವಾಗ ಬಹುದು - ಇಲ್ಲೆಲ್ಲಾ ಲೇಖಕಿಯ ಗಂಭೀರ ಚಿಂತನೆಯನ್ನು ಸ್ಫುಟವಾಗಿ ಕಾಣಬಹುದು. ತನ್ನ ಸಾಹಿತ್ಯದಿಂದ ಸಮಾಜಕ್ಕೆ ಉಪಯುಕ್ತವಾದುದೇನನ್ನಾದರೂ ಕೊಡಬೇಕೆಂಬ ತೀವ್ರ ಹಂಬಲ ಅವರ ಎಲ್ಲಾ ಬರವಣಿಗೆಯಲ್ಲಿನ ಮೂಲ ಸ್ರೋತವಾಗಿದೆ.

ತನ್ನ ಕಥಾವಸ್ತುವಿನ ವಿಶಿಷ್ಟತೆಯಿಂದ ಪರಿಗಣಿಸಲ್ಪಡುವ ಕಾದಂಬರಿಗಳಲ್ಲಿ ಡಾ। ಅನುಪಮಾ ಅವರ 'ಎಳೆ' ಒಂದು ಉತ್ತಮ ಕಾದಂಬರಿಯಾಗಿದೆ. ನೂಲಿನೆಳೆ ಯನ್ನು ಬಿಡಿಸುವ, ಅವುಗಳನ್ನು ಸೂಕ್ಷ್ಮವಾಗಿ ಸೇರಿಸಿ ನೇಯ್ದು ಬಣ್ಣ ಬಣ್ಣದ ಬಟ್ಟೆ ಗಳನ್ನು ತಯಾರಿಸುವ ಮಾನವನ ಬದುಕಿಗೆ 'ಎಳೆ'ಯನ್ನು ಸಾಂಕೇತಿಸುವ ಕಾದಂಬರಿ ಗಾರ್ತಿಯ ಆಲೋಚನಾ ವಿಧಾನ, ಅದನ್ನು ಕಾದಂಬರಿಯ ಉದ್ದಕ್ಕೂ ಧ್ವನಿಸುವ ರೀತಿ ಮನೋಜ್ಞವಾದುದು.

ಬಲ್ಲಿದ ಬಡವನನ್ನು, ವಿದ್ಯಾವಂತ ಅವಿದ್ಯಾವಂತನನ್ನು, ಗಂಡು ಹೆಣ್ಣನ್ನು, ಮೇಲ್ಜಾತಿಯವನು ಕೀಳ್ಜಾತಿಯವನನ್ನು ಶೋಷಿಸುವ ಜ್ವಲಂತ ನಿದರ್ಶನಗಳು ಬೇಕಾದಷ್ಟು ದೊರೆಯುತ್ತವೆ. ಆದರೆ ಒಂದೇ ಜನಾಂಗದ. ಒಂದೇ ಜಾತಿ ಪಂಗಡ ಗಳಿಗೆ ಸೇರಿದವರಲ್ಲಿಯೂ ಈ ಶೋಷಣೆ ಹೇಗೆ ನಡೆಯುತ್ತದೆ ಎನ್ನುವ ಸೂಕ್ಷ್ಮ 'ಎಳೆ' ಗಳನ್ನು ಬಿಡಿಸುವ ಕುಸುರಿಗೆಲಸ ಈ ಕಾದಂಬರಿಯಲ್ಲಿದೆ. ಅಲ್ಪಸಂಖ್ಯಾತ, ಹಿಂದುಳಿದ ಕೋಮಿಗೆ ಸಂಬಂಧಿಸಿದ ಒಂದು ಜನಾಂಗದ ವಿಭಿನ್ನ ವ್ಯಕ್ತಿತ್ವದ ವ್ಯಕ್ತಿಗಳನ್ನು ಅವರ ಆಚಾರ–ವಿಚಾರ, ನಡೆ-ನುಡಿ, ನಂಬಿಕೆ-ಮೂಢನಂಬಿಕೆ, ಕಂದಾಚಾರ, ತಿಳುವಳಿಕೆಗಳನ್ನು ಪರಿಚಯಿಸುವುದು, ಆ ಮೂಲಕ ಆ ಸಮಾಜದಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುವುದು, ಬದುಕನ್ನು ತಿದ್ದಿಕೊಳ್ಳುವ, ನೇರ್ಪಡಿಸಿಕೊಳ್ಳುವ

ಸೂಚನೆ ಕೊಡುವುದು, ಹಳೆಯ ತಲೆಮಾರಿನಿಂದ ಹೊಸ ತಲೆಮಾರಿಗೆ ಸಮಾಜ ಮುಂದುವರಿಯಲು ಬೇಕಾದ ಸೂಚನೆ ಕೊಡುವ ಅಂಶಗಳು ಕಾದಂಬರಿಯಲ್ಲಿ ಸ್ಫುಟವಾಗಿ ನಿರೂಪಿತವಾಗಿವೆ.

ಯಾವುದೇ ಜಾತಿ, ಯಾವುದೇ ಕೋಮು, ಯಾವುದೇ ಜನಾಂಗದ ವ್ಯಕ್ತಿ, ಆತ ಶ್ರೀಮಂತನಾಗಿದ್ದರೆ, ಸಿರಿವಂತನಾಗುವ ಅತೀವ ಬಯಕೆ ಇದ್ದರೆ, ಅವನು ಎಲ್ಲರನ್ನೂ ಶೋಷಿಸುವಂತೆ ತನ್ನ ಜನಾಂಗ, ತನ್ನ ಬಂಧುಗಳನ್ನೇ ಇಲ್ಲವೇ ತನ್ನ ಕುಟುಂಬದ ವ್ಯಕ್ತಿಗಳನ್ನೇ ಶೋಷಿಸುತ್ತಾನೆ. ಇದು ಇತಿಹಾಸ ಸಾರಿರುವ ಸತ್ಯಸಂಗತಿ. ಈ ಕಾದಂಬರಿ ಇದನ್ನು ಸಾರುತ್ತದೆ. ಜೊತೆಯಲ್ಲಿಯೇ ಇಂಥ ಶೋಷಣೆ ತಪ್ಪಬೇಕು ಎನ್ನುವ ಕಳಕಳಿಯ ಕಣ್ತೆರೆಯುವಿಕೆ ಈ ಕಾದಂಬರಿಯ ಮುಖ್ಯ ಧ್ಯೇಯವಾಗಿದೆ.

ನೇಕಾರ ಜನಾಂಗಕ್ಕೆ ಸೇರಿದ ಶ್ರೀಮಂತನೊಬ್ಬ ತನ್ನ ಜನಾಂಗದ ಬಂಧುಗಳನ್ನೇ ಶೋಷಿಸುವ ಚಿತ್ರ ಇಲ್ಲಿ ಪ್ರಮುಖವಾದರೂ ವಿಧವೆಗೆ ಮರುಮದುವೆ ಮಾಡಿಸುವ, ಅಂತರಜಾತಿಯ ವಿವಾಹ ನೆರವೇರಿಸುವ, ಅಂಗವಿಕಲನಿಗೆ ಮದುವೆ ಮಾಡಿಸುವ, ಬಡವ ಶ್ರೀಮಂತರ ನಡುವೆ ಸೌಹಾರ್ದ ಸಂಬಂಧ ಕಲ್ಪಿಸುವ, ಕಾರ್ಮಿಕ ಸಂಘವನ್ನು ಸ್ಥಾಪಿಸುವ - ಇಂಥ ಅನೇಕ ಹೊಸ ಸಂಗತಿಗಳ ಕ್ಷ-ಕಿರಣಗಳು ಈ ಕಾದಂಬರಿಯಲ್ಲಿವೆ.

ಕಥಾನಾಯಕ ವಿಚಾರವಂತನಾದ ರಂಗದಾಸನು, ಪ್ರಶ್ನೆ ಹಾಕಿಕೊಳ್ಳುವ ಅನಂತರ ಅವುಗಳಿಗೆ ಉತ್ತರ ಹುಡುಕುವುದರ ಮೂಲಕ ವಿಷಯಗಳಿಗೆ ವಿವರಣೆ ನೀಡುತ್ತಾನೆ. ಕಥೆಯ ಪ್ರತಿನಾಯಕನಂತಿರುವ ಉಗ್ರಪ್ಪ, ಹೆಸರಿನಲ್ಲಿರುವ ವಾಚ್ಯವನ್ನು ಗುರುತಿಸಿಯೂ, ಎಲ್ಲ ಕಥೆಯ ಖಳನಾಯಕನಂತೆಯೇ ಕ್ರೂರ ಸ್ವಭಾವದವನಾಗಿ ಕಾಣುತ್ತಾನೆ.

ಒಂದು ಹಳ್ಳಿಯ, ಒಂದು ಜನಾಂಗದ ಅತ್ಯಂತ ಸೂಕ್ಷ್ಮ ಸ್ತರಗಳನ್ನು ವಿಶ್ಲೇಷಿಸುವಲ್ಲಿ, ಆ ವಿವರದ ಅಚ್ಚುಕಟ್ಟು ನಿರೂಪಣೆಯಲ್ಲಿ ಕಾದಂಬರಿಗಾರ್ತಿ ಯಶಸ್ವಿಯಾಗಿದ್ದಾರೆ. ಒಂದು ಜನಾಂಗದ ಸಮಗ್ರ ಚಿತ್ರ, ಬದಲಾಗುತ್ತಿರುವ ಸಾಮಾಜಿಕ ನಡವಳಿಕೆ, ಸಂಪ್ರದಾಯ ನಂಬಿಕೆಗಳ ಸಂಘರ್ಷ, ನವೋದಯದ ಒಂದು ಸಂಕ್ರಮಣ- ಇವೆಲ್ಲ ಇಲ್ಲಿ ಸಮರ್ಥ ರೀತಿಯಲ್ಲಿ ದಾಖಲಾಗಿವೆ.

ಈ ಕಾದಂಬರಿಯಲ್ಲಿನ ಅನೇಕ ಸಾಮಾಜಿಕ ನಂಬಿಕೆಗಳಿಗೆ ರಂಗದಾಸನ ವಿಶ್ಲೇಷಣೆ ಕಾದಂಬರಿಗಾರ್ತಿಯ ವಿಶ್ಲೇಷಣೆಯೇ ಆಗಿದೆ. ಎಲ್ಲವನ್ನೂ ಬೆದಕುವ, ಕೆದಕುವ, ಪ್ರಶ್ನಿಸಿಕೊಳ್ಳುವ ಹಂತದಲ್ಲಿಯೇ ನಿಲ್ಲದೆ ಅವುಗಳ ಮೂಲ ಹುಡುಕಿ ಹಿಂದಿನ, ಇಂದಿನ ಮುಂದಿನ ನಿಲುವುಗಳನ್ನು ಅರ್ಥ ಮಾಡಿಕೊಳ್ಳುವ ಪ್ರಾಮಾಣಿಕ ಯತ್ನ ಕಾದಂಬರಿಯ ಮತ್ತೊಂದು ಪ್ರಮುಖ ಗುಣ.

ಮುನೇಶ್ವರನ ಗುಡಿಯ ಚಿತ್ರ, ಆ ದೇವರಲ್ಲಿದ್ದ ಜನರ ಭಕ್ತಿ, ಪೂಜೆ, ಬಲಿಪೂಜೆ ಹಿಂದೆ ಆದಿವಾಸಿಗಳು ಗಂಡಸು ಹೆಂಗಸರನ್ನು ಬಲಿಕೊಡುತ್ತಿದ್ದ ರೀತಿ, ಬಲಿ–ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗದೆ ಫಿಲಿಪೈನ್ಸ್‌ಮೊದಲಾದ ದೇಶದಲ್ಲಿ ಮನುಷ್ಯನನ್ನು ಬೇಟೆಯಾಡಿ ಗದ್ದೆ–ತೋಟಗಳಿಗೆ ಬಲಿ ಕೊಡುತ್ತಿದ್ದ ಬಗೆ - ಈ ವಿಷಯಗಳಿಗೆ ಇಲ್ಲಿ ಸಾಕಷ್ಟು ಮಾಹಿತಿ ದೊರೆಯುತ್ತದೆ. ಇಲ್ಲೆಲ್ಲಾ ಇತಿಹಾಸ ಕಣ್ಬಿಟ್ಟಿದೆ.

ಈ ಕಾದಂಬರಿಯಲ್ಲಿ ಪೌರಾಣಿಕ ವಿಷಯಗಳ ವಿಶ್ಲೇಷಣೆಯೂ ಸಾಕಷ್ಟು ನಡೆದಿದೆ. ಮದುವೆಯ ಶಾಸ್ತ್ರ, ಸಂಪ್ರದಾಯ ಆಚರಣೆಗಳ ವಿವರಗಳ ಜೊತೆಯಲ್ಲಿಯೇ ಹನುಮ ಶೆಟ್ಟಿ ಕೊಡುವ ನೇಕಾರರ ಒಳಪಂಗಡಗಳ ಇತಿಹಾಸ ಕುತೂಹಲ ಆಶ್ಚರ್ಯ ಭರಿತವಾಗಿದೆ. ಇದೇ ಸಂದರ್ಭದಲ್ಲಿ, ಇಲ್ಲಿ ಬರುವ ಭಾಗವತರದು ಒಂದು ಸ್ವಾರಸ್ಯಕರ ಪಾತ್ರ. ಜನತೆಯ ಅಜ್ಞಾತೆಯನ್ನು ತನ್ನ ವೃತ್ತಿಲಾಭಕ್ಕೆ ಬಳಸಿಕೊಳ್ಳುವ ರೀತಿ ಸ್ವಾರಸ್ಯಕರವಾಗಿದೆ. ನೇಕಾರ ವಂಶದ ಮೂಲಪುರುಷ ದೇವಲನ ಜನನ, ಆತ ದೇವಾನುದೇವತೆಗಳಿಗೆ ವಸ್ತ್ರ ತಯಾರಿಸಿದ್ದು, ದೇವ–ದಾನವರ ಯುದ್ಧ, ದೇವ, ದೇವಲ ಮುನಿಗೆ ಚೌಡೇಶ್ವರಿ ಸಹಾಯ ಮಾಡಿದ ಪರಿ, ಅಂದಿನಿಂದ ಆ ಜನಾಂಗದ ದೇವತೆಯಾಗಿ ಚೌಡೇಶ್ವರಿ ಪೂಜೆಗೊಳ್ಳುತ್ತಿರುವ ರೀತಿ - ಈ ವಿವರಣೆಯೆಲ್ಲಾ ತುಂಬ ಸಹಜವಾಗಿ ಜನಸಾಮಾನ್ಯರು ನಂಬುವಂತೆ ವಿಸ್ತಾರಗೊಂಡಿದೆ.

ಪೌರಾಣಿಕವೆನ್ನಬಹುದಾದ ಈ ಕಥೆಗಳನ್ನೆಲ್ಲಾ ಎಷ್ಟು ನಂಬಬಹುದು ಎನ್ನುವ ಪ್ರಶ್ನೆ ಕೆಲವರಲ್ಲಾದರೂ ಮೂಡಬಹುದು. ಅದಕ್ಕೆ ಭಾಗವತರು ಕೊಡುವ ಉತ್ತರವೇ ಸರಿಯಾದುದು. "ಇಲ್ಲಿ ನಂಬುವ ಬಿಡುವ ಪ್ರಶ್ನೆಯೇ ಇಲ್ಲ. ನಮ್ಮ ಜನಕ್ಕೆ ಇಂಥ ಕಪೋಲಕಲ್ಪಿತ ಕಥೆಗಳು ಬೇಕು. ಆದ್ದರಿಂದ ಹೇಳ್ತೀನಿ. ಇದರ ಜೊತೆಗೆ ನನ್ನ ಕಲ್ಪನೆಯೂ ಒಂದಿಷ್ಟು ಸೇರುತ್ತೆ. ಹೊಟ್ಟೆಪಾಡಿಗೆ ಮಾಡಿದರೂ ತಪ್ಪಲ್ಲ ಸ್ವಾಮಿ". ಇಂಥ ಅನೇಕ ಕಪೋಲಕಲ್ಪಿತ ಕಥೆಗಳ ಆಗರವೇ ನಮ್ಮ ಪೌರಾಣಿಕಾಂಶ ಗಳಾಗಿವೆ ಎಂಬ ವ್ಯಂಗ್ಯವನ್ನು ಡಾ। ಅನುಪಮಾ ಅವರು ಚೆನ್ನಾಗಿ ವಿಶದೀಕರಿಸಿದ್ದಾರೆ. ಕೇಳುವ, ನಂಬುವ ಜನ ಇರುವ ವರೆಗೂ ಭಾಗವತರಂಥ ಹೇಳುವ ಜನರೂ ಇರುತ್ತಾರೆ.

ಡಾ। ಅನುಪಮಾ ಅವರು ಕನ್ನಡ ಸಾಹಿತ್ಯದ ಕೆಲವು ಸ್ವಾರಸ್ಯಕರ ತುಣುಕು ಗಳನ್ನು ಕಾದಂಬರಿಯ ನೇಯ್ಗೆಯಲ್ಲಿ ತಂದು ಕೂಡಿಸಿರುವುದು ಕಥೆಯ ಚೌಕಟ್ಟಿಗೆ ಹೆಚ್ಚಿನ ಮಹತ್ವ ತಂದಿದೆ. ಹೊಸ ತಂತ್ರ ಇಲ್ಲಿ ತಲೆ ಹಾಕಿದೆ. ನಾಗವರ್ಮನ ಕಾದಂಬರಿಯಲ್ಲಿ ಬರುವ ಪುಂಡರೀಕ ಮಹಾಶ್ವೇತೆಯರ ಪವಿತ್ರ ಪ್ರೇಮದ ಸಂಕೇತ, ಕಡೆಯಲ್ಲಿ ಕಥಾನಾಯಕ ರಂಗದಾಸ, ನಾಯಕಿ ಗಿರಿಜೆಯನ್ನು ಒಂದುಗೂಡಿಸುವಲ್ಲಿ ಸಫಲವಾಗಿದೆ.

ದೇವಲ ಋಷಿಯ ಕಥೆ. ಚೌಡೇಶ್ವರಿಯ ಕಥೆಯನ್ನು ಹೇಳುವಲ್ಲಿ, ಹಿನ್ನೆಲೆಯಾಗಿ ಅಲ್ಲಲ್ಲಿ ಜೇಡರ ದಾಸಿಮಯ್ಯನ ವಚನಗಳನ್ನು ಹಾಡುವಲ್ಲಿ. ನೇಕಾರ ಜನಾಂಗದ ಒಬ್ಬ ವಚನಕಾರನಿಗೆ, ಅದರಲ್ಲಿಯೂ ವಚನಕಾರರಲ್ಲಿ ಆದ್ಯನಾದವನಿಗೆ ಕಾದಂಬರಿಗಾರ್ತಿ ಸಲ್ಲಿಸಿರುವ ಒಂದು ಪ್ರಾಮಾಣಿಕ ಗೌರವವೂ ಆಗಿದೆ ; ಜೊತೆಗೆ ವಚನ ಸಾಹಿತ್ಯದಲ್ಲಿನ ಅವರ ಅಭಿರುಚಿಯೂ ವ್ಯಕ್ತವಾಗಿದೆ.

ಸಾಂಬಶಿವನ್ ಪ್ರಾಧ್ಯಾಪಕ ಪಾತ್ರಕ್ಕೆ ಒಂದು ಉದಾಹರಣೆಯಾದಂತೆ ಮುದ್ದು ಸ್ವಾಮಿ, ಗಂಗಾಧರ - ವಿಭಿನ್ನ ಸ್ವಭಾವಗಳ ಪಾತ್ರಗಳಾಗಿದ್ದಾರೆ. ಗಿರಿಜೆಯ ಮಾನಸಿಕ ಪರಿವರ್ತನೆ ಕಾದಂಬರಿಯ ಮುಖ್ಯ ಆಶಯಗಳಲ್ಲಿ ಒಂದಾಗಿದೆ. ಪರಾವಲಂಬಿ ಅಬಲೆ ಹೆಣ್ಣು ಸ್ವತಂತ್ರಳಾಗಿ ಸಬಲೆಯಾಗುವ ಬದಲಾವಣೆ ಬಹಳ ಮುಖ್ಯವಾದ ಒಂದು ಪರಿವರ್ತನೆ. ಬದಲಾದ ಸಮಾಜ, ವ್ಯಕ್ತಿಗಳಿಗೆ ಸಂಕೇತವಾಗಿ ಆಕೆ ನಿಲ್ಲುತ್ತಾಳೆ. ವ್ಯಕ್ತಿಗಳು ಬದಲಾಗುವ ವ್ಯವಸ್ಥೆಗೆ ಕ್ರಮೇಣ ಹೊಂದಿಕೊಳ್ಳಬೇಕಾದ ಸೂಚನೆಗಳು ಕಾದಂಬರಿಯಲ್ಲಿ ಹೆಚ್ಚಾಗಿ ಕಾಣುತ್ತವೆ.

ಶೋಷಿತರ ಪರವಾಗಿ ಹುಟ್ಟುವ ಕಾರ್ಮಿಕ ಸಂಘ. ಕಾರ್ಮಿಕರಲ್ಲಿ ಆಧುನಿಕ ಆಶಾಭಾವನೆಯ ಪರಿಸರ ನಿರ್ಮಾಣ ಮಾಡಿದೆ. ಉಗ್ರಪ್ಪನಂಥವರೂ ಈ ಪರಿಸರಕ್ಕೆ ಮಣಿಯಲೇಬೇಕಾದ ಅನಿವಾರ್ಯತೆಯ ಚಿತ್ರ, ಇಂದಿನ ಸಮಾಜದಲ್ಲಿನ ಅನ್ಯಾಯ ದಬ್ಬಾಳಿಕೆಯನ್ನು ಹತ್ತಿಕ್ಕಲೇಬೇಕು ಎನ್ನುವ ಛಲದ ಹೋರಾಟಕ್ಕೆ, ಹೋರಾಟದ ಜಯಕ್ಕೆ ಒಂದು ದೃಷ್ಟಾಂತವಾಗಿದೆ.

ಗ್ರಾಮೀಣ ಜನರ ಭಾಷೆಯನ್ನು ಸಹಜವಾಗಿ ಬಳಸಿರುವುದರಿಂದ ಆ ಪಾತ್ರಗಳಿಗೆ ನೈಜತೆ ಮೂಡಿದೆ. ಗಿರಿಜೆಯ ಮದುವೆ, ಅರಸಪ್ಪ ಕೈ ಕಳೆದುಕೊಳ್ಳುವುದು, ಕಾರ್ಮಿಕ ಸಂಘದ ಸ್ಥಾಪನೆ, ಹೋರಾಟ, ಗಿರಿಜೆಯ ಮಾನಸಿಕ ಪರಿವರ್ತನೆ, ಗಂಗಾಧರನ ಮದುವೆಯ ವಿಷಯದಲ್ಲಿ ಉಗ್ರಪ್ಪ ತಳೆಯುವ ಭಾವನೆ - ಇವೆಲ್ಲ ಮಹತ್ವದ ಘಟ್ಟಗಳಾಗಿ ಹೊಸ ತಿರುವು ಪಡೆದು ಕಾದಂಬರಿಯ ಬೆಳವಣಿಗೆಯಲ್ಲಿ ಸಹಾಯಕವಾಗಿವೆ.

ಸಮಾಜಶಾಸ್ತ್ರದ ಸಂಗತಿ, ಜನಾಂಗದ ಆಚರಣೆ, ಸಾಹಿತ್ಯಕ ವಿಚಾರಧಾರೆ, ಮುಗ್ಧ ಜನರ ನಿಸ್ಸಹಾಯಕತೆ, ಕಾರ್ಮಿಕರ ಹೋರಾಟ ಈ ವಿಚಾರಧಾರೆಗಳು ಕಾದಂಬರಿಗೆ ಹೊಸ ಆಯಾಮವನ್ನು ತಂದುಕೊಟ್ಟಿವೆ.

ರಂಗದಾಸನ ವಿಚಾರವಂತಿಕೆ, ಉಗ್ರಪ್ಪನ ದಾಷ್ಟಿಕತೆ, ಮುದ್ದುಸ್ವಾಮಿಯ ಕ್ರೌರ್ಯ, ಮೂಡಲಯ್ಯನ ಲಂಪಟತನ, ಗಂಗಾಧರನ ಸ್ವಾರ್ಥ, ಸೂರಮ್ಮನ ಅಸಹಾಯಕತೆ, ಗಿರಿಜೆಯ ಪ್ರೇಮನಿಷ್ಠೆ, ಭಾಗವತನ ಚಾಕಚಕ್ಯತೆ, ಸಾಂಬಶಿವರ ಸರಸತೆ, ತಿಮ್ಮಪ್ಪನ ಪ್ರಚಾರಪ್ರಿಯತೆ - ಈ ವಿಭಿನ್ನ ವ್ಯಕ್ತಿಗಳ ವಿಶಿಷ್ಟ ಗುಣಗಳಿಂದ ಕಾದಂಬರಿ ಸಮಗ್ರ ವೈವಿಧ್ಯತೆಯ ಸತ್ವ ಪಡೆದಿದೆ. ಡಾ। ಅನುಪಮಾ ಅವರ ಸಾಹಿತ್ಯ ಕೃತಿಗಳಲ್ಲಿ 'ಎಳೆ' ವೈಚಾರಿಕ ನೆಲೆಗಟ್ಟಿನ ಒಂದು ಉತ್ತಮ ಕಾದಂಬರಿಯಾಗಿದೆ.

೪ ನೂಲು ನೆಯ್ದ ಚಿತ್ರ-ಕೆಲವು ಟಿಪ್ಪಣಿಗಳು

-ಡಾ। ನಾ. ದಾಮೋದರ ಶೆಟ್ಟಿ

ಕಾದಂಬರಿಯು ಸಮಾಜದ ಸಮಗ್ರ ಚಿತ್ರಣವಾಗಬೇಕೆಂದೇನೂ ಇಲ್ಲವಾದರೂ ಆಯ್ದ ವಸ್ತುವಿನ ಪೂರ್ವಾಪರಗಳ ಕೂಲಂಕಷ ಪರಾಂಬರಿಕೆ ಆಗುವುದರ ಅಗತ್ಯವಿದೆ. ಪಾತ್ರಗಳು, ಘಟನೆಗಳು ಅಲ್ಲಲ್ಲಿ ಉತ್ಪ್ರೇಕ್ಷೆಗೆ ಗುರಿಯಾಗುವುದು, ಅನಿರೀಕ್ಷಿತ ತಿರುವುಗಳು ಒದಗಿ ಬರುವುದು ಕೃತಿಯ ಒಡಲಲ್ಲಿ ಒದಗಬಹುದಾದ ಅನಿವಾರ್ಯ ಅಂಶಗಳು.

-ಹೀಗೆ ಕೆಲವು ಅನಿರೀಕ್ಷಿತ ತಿರುವುಗಳು, ಉತ್ಪ್ರೇಕ್ಷೆಗಳು ಅಪೇಕ್ಷಣೀಯವಾಗಿ ಒದಗಿಬಂದು ಅನುಪಮಾ ಅವರ 'ನೂಲು ನೆಯ್ದ ಚಿತ್ರ' ಹೆಚ್ಚು ನೈಜ ಕಾದಂಬರಿಯಾಗಿ ಮೂಡಿದೆ.

*　　　　*　　　　*　　　　*

ಆರ್ಥಿಕ ಕೆಳಸ್ತರದ ನೇಕಾರ ಕುಟುಂಬವೊಂದನ್ನು ಕುರಿತ ಕಾದಂಬರಿಯಿದು. ಕೃತಿಯ ಉದ್ದಕ್ಕೂ ಅನೇಕ ಏಳುಬೀಳುಗಳನ್ನು ಕಾಣುವ ಶಾಮು, ಜಾಣ ವಿದ್ಯಾರ್ಥಿಯಾಗಿದ್ದರೂ ಶಾಲೆಗೆ ಶರಣುಹೊಡೆದು ಮಗ್ಗ ನೇಯಬೇಕಾದ ಸ್ಥಿತಿ ಒದಗಿಬರುವುದಕ್ಕೆ ಆತನ ಬಡತನವೇ ಕಾರಣ.

ತಂದೆ ನಾರಣಪ್ಪ ಬಡವ, ಜೊತೆಗೆ ಸೋಮಾರಿ ಕೂಡ. ಮಗನಿಗೆ ಪಕ್ಕದ ಮನೆಯ ಪಾರ್ವತಿಯನ್ನು ಮದುವೆ ಮಾಡಿಸಿ, ಮಗಳನ್ನು ಸದಾಶಿವನೆಂಬ ಧನಿಕನಿಗೆ ಕೊಟ್ಟು ಜವಾಬ್ದಾರಿಯನ್ನು ಕಳೆದುಕೊಂಡಿದ್ದ.

*　　　　*　　　　*　　　　*

ಬಾಲ್ಯದಲ್ಲಿಯೇ ಸದಾಶಿವನಿಗೆ ಶಾಮನ ತಂಗಿ ಗಂಗೆಯನ್ನು ಕೊಟ್ಟು ಮದುವೆ ಮಾಡುವ ತೀರ್ಮಾನವಾಗಿತ್ತು. ಎಲ್ಲರೂ ಅದೇ ಭರವಸೆಯನ್ನಿಟ್ಟುಕೊಂಡಿದ್ದಂತೆಯೇ ಒಮ್ಮೆ ಶಾಮನ ಮನೆಗೆ ಬಂದ ಸದಾಶಿವ, ಪಕ್ಕದ ಮನೆಯಲ್ಲಿ ಪಾರ್ವತಿಯನ್ನು ಕಂಡು, ಇಂತಹ ಚೆಲುವೆ ಶಾಮನ ಪತ್ನಿಯಾಗಬೇಕೇಕೆ? ತನ್ನ ಪತ್ನಿಯಾಗಬಾರದೇಕೆ ಎಂದುಕೊಂಡು, ವಿಚಾರಿಸುವುದಕ್ಕೆ ಜನಬಿಟ್ಟ. ಅಲ್ಲಿಂದ ಬಂದ ಪ್ರತಿಕ್ರಿಯೆ ಸದಾಶಿವನಿಗೆ ಅನಿರೀಕ್ಷಿತ ಹೊಡೆತ ನೀಡಿತ್ತು. ತಾಯಿಯ ಒತ್ತಾಯಕ್ಕ ಮಣಿದು ಕೊನೆಗೂ ಗಂಗೆಯನ್ನೇ ಮದುವೆಯಾದ.

ತನಗೆ ದಕ್ಕದ ಪಾರ್ವತಿಯನ್ನು ಮದುವೆಯಾದ ಶಾಮನ ಮೇಲೆ ಪ್ರತೀಕಾರ ತೀರಿಸುವುದಕ್ಕೆ ಆತನ ತಂಗಿಯನ್ನು ಮದುವೆಯಾದದ್ದೇ ಒಳ್ಳೆಯದಾಯ್ತು ಎಂದುಕೊಂಡ ಸದಾಶಿವ. ಯಾವತ್ತೂ ಗಂಗೆ ಸುಖವಾಗಿ ಇರಲೂ ಇಲ್ಲ;

ಮಕ್ಕಳ ತಾಯಿ ಆಗಲೂ ಇಲ್ಲ. ಕೊನೆಯ ತನಕವೂ ಆಕೆಯನ್ನು ಸುಖದಲ್ಲಿರಿಸು ವುದಕ್ಕೆ ಸದಾಶಿವನಿಗೆ ತೋರಲೂ ಇಲ್ಲ. ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ, ಬಹುದೊಡ್ಡ ಧನಿಕನಾಗಿದ್ದ ಸದಾಶಿವ ದಿವಾಳಿಯೆದ್ದು ಗಂಗೆ ತವರನ್ನು ಸೇರ ಬೇಕಾಗಿ ಬಂದದ್ದು ಕಾದಂಬರಿಯ ಕೊನೆಯ ಘಟ್ಟದ ತಿರುವು.

ಶಾಮು, ತಾನು ಹೊನ್ನಹಳ್ಳಿಯನ್ನು ಬಿಡದೆ ಉದ್ಧಾರವಾಗಲಾರೆನೆಂದು ತಿಳಿದು ಗೆಳೆಯ ಭೀಮಣ್ಣನ ಸಲಹೆಯಂತೆ ಸೋಮಾಪುರಕ್ಕೆ ಸಂಸಾರ ಸಮೇತ ಹೊರಡುತ್ತಾನೆ. ಅದೃಷ್ಟ ಆತನ ಕೈಗೆ ನಿಲುಕತೊಡಗಿತ್ತು. ಆದರೆ ಪವರ್ ಲೂಮ್‌ಗಳು ಬಂದು ಆತನ ಕೈಮಗ್ಗದ ಸೀರೆಗಳಿಗೆ ಬೇಡಿಕೆ ಇಲ್ಲವಾಗುತ್ತದೆ. ಕೈಗೆ ಬಂದದ್ದು ಬಾಯಿಗೆ ಬಾರದೆ ಹೋಗುತ್ತದೆ.

ಮುಂದೆ ಸಂಸಾರ ಸಮೇತ ಬೆಂಗಳೂರಿಗೆ ಹೋಗುತ್ತಾನೆ. ಜನಸಾಗರದ ಮಧ್ಯೆ ಆತ ಮುಳುಗಿಹೋಗುತ್ತಾನೆ. ಕೊನೆಗೂ ಗಂಡ ಹೆಂಡತಿಯರಿಬ್ಬರು ದುಡಿದು ತಕ್ಕಮಟ್ಟಿಗೆ ಎದ್ದು ನಿಲ್ಲುತ್ತಾರೆ. "ನಾಲ್ಕು ಜನರ ಮಧ್ಯೆ ಎದ್ದು ನಿಲ್ಲುವಂತೆ ಬದುಕಬೇಕು ಎಂದು ಹಳ್ಳಿತೊರೆದು ಬಂದಿದ್ದ ಶಾಮು". ಕಾದಂಬರಿಗಾರ್ತಿ ಶಾಮುನ ಬಗ್ಗೆ ನೀಡಿದ ಈ ಅಭಿಪ್ರಾಯವನ್ನು ಈಡೇರಿಸುವ ಬಗ್ಗೆ ಅನೇಕ ಪ್ರಯತ್ನಗಳು ಕೃತಿಯುದ್ದಕ್ಕೂ ನಡೆಯುತ್ತವೆ. ಈ ನಡುವೆ ಆತನ ಎರಡನೆಯ ಮಗು ಸಾಯು ತ್ತದೆ. ತಾನು ಕೆಲಸ ಕಳೆದು ಕೊಳ್ಳುತ್ತಾನೆ. ಮಹತ್ತರವಾದ ಆಸೆಗಳನ್ನು ಹೊತ್ತು ಕೊಂಡು ಬಂದ ಶಾಮುನ ಸಂಸಾರ ಅನ್ಯ ದಾರಿ ಕಾಣದೆ ಊರಿಗೆ ಹಿಂದಿರುಗುತ್ತದೆ. ಹಾಗೂ ಹೀಗೂ ಕೂಡಿಸಿಟ್ಟ ಮೊತ್ತದಿಂದ ಜಮೀನು ಖರೀದಿಸಿ ಬೇಸಾಯ ಪ್ರಾರಂಭಿಸುತ್ತದೆ.

* * * *

ಇಡಿಯ ಕಾದಂಬರಿಯನ್ನು ಕ್ರಮವಾಗಿ ಅಂಚು, ಒಡಲು ಹಾಗೂ ಸೆರಗು ಗಳೆಂಬ ಮೂರು ಹಂತಗಳಲ್ಲಿ ರಚಿಸಲಾಗಿದೆ.

'ಅಂಚಿ'ನಲ್ಲಿ ಶಾಮುನ ಬಾಲ್ಯದಿಂದ ಮೊದಲ್ಗೊಂಡು ಗೃಹಸ್ಥನಾಗುವ ತನಕದ ಹಾಗೂ ಮುಂದಿನ ಜೀವನದಲ್ಲಿ ಏಳಿಗೆಯನ್ನು ಕಾಣುವ ಸಲುವಾಗಿ ಸಂಸಾರ ಸಮೇತ ಸೋಮಾಪುರಕ್ಕೆ ಹೋಗಿ ನೆಲೆಸುವ ತನಕದ ಕತೆಯಿದೆ.

'ಒಡಲಿ'ನಲ್ಲಿ ಸೋಮಾಪುರ, ಬೆಂಗಳೂರುಗಳಲ್ಲಿ ಶಾಮು ಸಂಸಾರ ಹೂಡಿದ ವಿವರವಿದೆ.

'ಸೆರಗು' ಭಾಗದಲ್ಲಿ ಬೆಂಗಳೂರಿನ ದಿನಗಳನ್ನು ನಿಭಾಯಿಸಿ ಕೊನೆಗೂ ಊರಿಗೆ ಹಿಂದಿರುಗಿ ಬಂದು ಹಳ್ಳಿಯ ಜೀವನಕ್ಕೆ ಶರಣುಹೋಗುವ ಘಟನೆಗಳಿವೆ.

* * * *

ಒಂದೆಡೆಯಲ್ಲಿ ಪುರೋಗಮನವನ್ನು ಬಯಸುವ ಶಾಮ ಜೀವನದಲ್ಲಿ ಮೇಲೇರುವ ಪ್ರಯತ್ನ ಪಡುತ್ತಿದ್ದಂತೆಯೆ ಇನ್ನೊಂದೆಡೆಯಲ್ಲಿ ಕೈಗಾರಿಕೀಕರಣ ಆತನನ್ನು ಕೆಳಕ್ಕೆ ತಳ್ಳುತ್ತಾ ಬರುವ ವಿಪರ್ಯಾಸ ಕಾದಂಬರಿಯಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ. ಅಂತೆಯೇ ಒಂದೆಡೆಯಲ್ಲಿ ಎಲ್ಲವೂ ಕೈವಶವಾಯಿತು ಎಂದಕೊಳ್ಳುತ್ತಿದ್ದಂತೆಯೆ ಯಾವುದೂ ಕೈಗೆಟಕದೆ ಹೋಗುವ ವಿಪರ್ಯಾಸವೂ ಕಾದಂಬರಿಯೊಳಗೆ ಹಾಸುಹೊಕ್ಕಾಗಿದೆ.

ಬಡತನವನ್ನು ಅಷ್ಟಾಗಿ ಹಚ್ಚಿಕೊಳ್ಳದ ಶಾಮ, ಜೀವನವನ್ನು ಹಸಿಯಾಗಿ ನಿಭಾಯಿಸುವ ಮಹತ್ವಾಕಾಂಕ್ಷಿಯುಳ್ಳವ. ಮಗ್ಗದಲ್ಲಿ ಕುಳಿತು ನೇಯುವಾಗ ನೆಯ್ಗೆಯೊಂದೇ ಆತನ ಮನಸ್ಸನ್ನು ಆವರಿಸಿದರೆ ಮರು ಗಳಿಗೆಯಲ್ಲಿ ನಾಟಕವಾಡುವ ಖಯಾಲಿ. ಮನೋವೇದಿಕೆಯಲ್ಲೂ ನಾಟಕರಂಗವನ್ನು ಸಿದ್ಧಪಡಿಸಿಕೊಳ್ಳುವ ಸಹೃದಯಿ.

ಸಂಸಾರದ ಹೊಣೆ ಹೆಚ್ಚುತ್ತಿದ್ದಂತೆಯೆ ಬಡತನದ ತಾಪ ಅಧಿಕವಾಗ ತೊಡಗಿತು. ನಗರದಲ್ಲಿ ನೆಲಸುವುದರ ಮೂಲಕ ತನಗೆ, ತನ್ನ ಸಂಸಾರಕ್ಕೆ ಹೆಚ್ಚಿನ ಆರ್ಥಿಕ ಪ್ರಯೋಜನಗಳಾಗಬಹುದೆಂದು ಭಾವಿಸಿ ಸೋಮಾಪುರಕ್ಕೆ ಹೋದ ಶಾಮನಿಗೆ ಪ್ರಾರಂಭದಲ್ಲಿ ನಗರ ಜೀವನ ಹಿಡಿಸಿತ್ತು. ದುಡಿಮೆ ಚೆನ್ನಾಗಿಯೇ ಸಾಗಿತ್ತು. ಕೈಗೆ ನಾಲ್ಕು ಕಾಸೂ ಬಂದಿತ್ತು. ತನಗೆ ಸವಾಲೆಸೆದಿದ್ದ ಸದಾಶಿವನ ಅಹಂಕಾರವನ್ನು ಹಚ್ಚಿಸುವ ಸಾಧ್ಯತೆ ಹೆಚ್ಚತೊಡಗಿತ್ತು. ಮರುಕ್ಷಣದಲ್ಲಿ ಎಲ್ಲೆಲ್ಲೂ ಕಾಣಿಸಿಕೊಂಡ ಕೈಗಾರಿಕಾ ಕ್ರಾಂತಿ ನಿಮಿತ್ತವಾದ ಪವರ್‌ಲೂಮ್‌ಗಳು ಶಾಮನ ಅಸ್ತಿತ್ವವನ್ನೇ ಅಲುಗಾಡಿಸಿತು. ಕೈಮಗ್ಗದ ಸೀರೆಗಳಿಗೆ ಬೇಡಿಕೆಯೇ ಇಲ್ಲವಾಯಿತು. ಶಾಮ ಮೊದಲಿಗಿಂತಲೂ ಬಡವನಾದ.

ಆದರೆ ಆತನ ಮನಸ್ಸಿನಾಳದ ಪ್ರಗತಿಪರ ಮನೋಭಾವ ಆತನನ್ನು ಸುಮ್ಮನೆ ಉಳಿಯಗೊಡಲಿಲ್ಲ. ಎಂತಹ ಕಷ್ಟ ಪರಂಪರೆಯನ್ನು ನೀಗುವುದೂ ಸಾಧ್ಯ ಎಂಬ ಅಚಲ ಮನೋಭಾವ, ನಾಳೆಯ ಬಗ್ಗೆ ಆಶಾದಾಯಕ ಭಾವನೆ ಶಾಮನಲ್ಲಿ ತುಂಬಿತ್ತು. ಪರಿಣಾಮವಾಗಿ ಆತ ಸಂಸಾರ ಸಮೇತ ಬೆಂಗಳೂರಿಗೆ ಹೋದ.

ಹೊಸ ಪರಿಸರ, ಹೊಸ ವಾತಾವರಣ-ಈ ನಡುವೆ ಕೊನೆಗೂ ತನಗೆ ಕೆಲಸ ಸಿಕ್ಕಿದಾಗ ಇನ್ನೇನೂ ಆತನಿಗೆ ಹೊಳೆಯಲಿಲ್ಲ; ಹೊಳೆದದ್ದೊಂದೆ: "ನನ್ನ ಮಗನಿಗೆ ನನ್ಗತಿ ಬರಬಾರ್ದು ಪಾರೂ. ಅವನ್ನ ಚೆನ್ನಾಗಿ ಓದಿಸ್ಬೇಕು, ದೊಡ್ಡ ಕೆಲ್ಸ ಸಿಗೋ ಅಂಗೆ ಮಾಡ್ಬೇಕು...." (ಪುಟ ೧೯೭)

ಅಲ್ಲಿಯ ತನಕ ತನ್ನ ಹಾಗೂ ತನ್ನ ಹೆಂಡತಿಯ ಬಗೆಗೆ ಚಿಂತಿಸುತ್ತಿದ್ದ ಶಾಮ ಅದನ್ನು ಬದಿಗೊತ್ತಿ ತನ್ನ ಮಗನ ಬಗ್ಗೆ ಚಿಂತಿಸತೊಡಗುತ್ತಾನೆ. ತನ್ನ ಜೀವನದಲ್ಲಿ ಕಾಣಲಾಗದ ಸುಂದರ ದಿನಗಳು ಮಗನ ಜೀವನದಲ್ಲಾದರೂ ಕಾಣಿಸಿಕೊಳ್ಳಲಿ ಎಂಬುದು ಅತ್ಯಂತ ಪುರೋಗಾಮಿಯಾದ ಚಿಂತನೆ.

*　　　*　　　*　　　*

ಒಳ್ಳೆಯ ನಾಳೆಗಳನ್ನು ಬಯಸಿ ಶಾಮ ಹಿಡಿದ ಕೈಸೆಯ್ಗೆ ಉದ್ಯೋಗವನ್ನು ಬದಿಗೊತ್ತಿದ. ಪವರ್‌ಲೂಮ್‌ನಲ್ಲಿ ಕೆಲಸಮಾಡಿದ. ಯಾಕೋ ಸರಿಹೊಂದಲಿಲ್ಲ. ಬೆಂಗಳೂರಿಗೆ ಹೋಗಿ ಮಿಲ್ಲಿನಲ್ಲಿ ಕೆಲಸಮಾಡಿದ. ಅಲ್ಲೂ ಶಾಶ್ವತವಾಗಿ ನಿಲ್ಲಲಾಗಲಿಲ್ಲ. ಊರಿಗೆ ಹಿಂತಿರುಗಿ ಜೇಸಾಯಕ್ಕೆ ಮನಸ್ಸು ಮಾಡಿದ.

ಎರಡು ರೀತಿಯಲ್ಲಿ ಮೇಲಿನ ಉದ್ಯೋಗ ಪಲ್ಲಟವನ್ನು ಗಮನಿಸಬಹುದು. ನೇಯುವಾತನೇ ನೇಯಬೇಕೆಂಬ ನಂಬಿಕೆ ಹಳೆಯದಾಯಿತು. ಯಾರೂ ಯಾವ ಉದ್ಯೋಗವನ್ನೂ ಹಿಡಿಯಬಹುದೆಂಬುದಕ್ಕೆ ತನ್ನ ಕುಲವೃತ್ತಿಯನ್ನು ಬದಿಗೊತ್ತಿ ಕೃಷಿಕನಾದ ಶಾಮ ನಿದರ್ಶನನಾಗುತ್ತಾನೆ. ಇಲ್ಲಿ ಆತನ ಪುರೋಗಾಮಿ ಮನೋವೃತ್ತಿ ಗಮನ ಸೆಳೆಯುತ್ತದೆ.

ಅಂತೆಯೇ ಕೈಗಾರಿಕೀಕರಣದಿಂದ ಅದೆಷ್ಟೋ ಆಶಾವಾದಿಗಳ ಆಶೆಗಳೆಲ್ಲ ನುಚ್ಚು ನೂರಾಗಿವೆ. ಕೈಗೆ ಬಂದದ್ದು ಬಾಯಿಗೆ ಬಾರದೆ ಹೋಗಿವೆ. ಕೊನೆಗೂ ಶಾಮ ಮಣ್ಣಿಗೆ ಮರಳುತ್ತಾನೆ. ಪ್ರಕೃತಿ ಮಾನವನಿಗೆ ಎಂತಹ ಸಂದರ್ಭದಲ್ಲೂ ಆಸರೆ ನೀಡಬಲ್ಲುದು; ಪ್ರಕೃತಿ-ಪುರುಷ ಸಂಬಂಧ ಅನನ್ಯವಾದುದು ಎಂಬುದು ಗಮನಕ್ಕೆ ಬರುತ್ತದೆ.

*　　　*　　　*　　　*

ಕಾದಂಬರಿಯ ಒಳಹೊಕ್ಕಂತೆ ಅಲ್ಲಲ್ಲಿ ಮಿಂಚುವ ಬಿಡಿ ಘಟನೆಗಳು ಕೃತಿಯ ಒಟ್ಟು ಶಿಲ್ಪವನ್ನು ಬಿಗಿಗೊಳಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ.

ಸಂಜೀವನೆಂಬಾತ ಶಾಮನಿಂದ ಐದು ರೂಪಾಯಿಗಳನ್ನು ಪಡೆದು ಕೊಂಡಿದ್ದ. ಶಾಮ ಅದನ್ನು ಮರಳಿ ಕೇಳಲು ಹೋಗಿ, ಕೇಳದೆ ಹಿಂದಿರುಗುವುದು, ಶಾಮ ಬೆಂಗಳೂರಿನಲ್ಲಿದ್ದಾಗ ಸೋಮಾಪುರದ ಗೆಳೆಯ ಭೀಮಣ್ಣ-ಅನಿರೀಕ್ಷಿತವಾಗಿ-ಪತ್ರ ಬರೆದು ವಿಚಾರಿಸಿಕೊಳ್ಳುವುದು, ಗೋಪಾಲಯ್ಯ ಶಾಮನ ಮನೆ ಹುಡುಕಿ ಬರುವುದು, ಹಳ್ಳಿಯ ಲಕ್ಷ್ಮಿಯನ್ನು ಪಾರ್ವತಿ ಬೆಂಗಳೂರಿನಲ್ಲಿ ಕಾಣುವುದು, ಶಾಮ ಹಳ್ಳಿಗೆ

ಹಿಂದಿರುಗಿದಾಗ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದ ಗಂಗೆ ಅವರನ್ನು ಸ್ವಾಗತಿಸುವುದು ಮುಂತಾದ ಘಟನೆಗಳು ಕಾದಂಬರಿಯನ್ನು ಹನಿಗೂಡಿ ಹಳ್ಳವಾಗಿಸುತ್ತವೆ.

* * * *

ಪ್ರಗತಿಪರ ಚಿಂತನೆಗಳಿಂದ ಕೂಡಿದ 'ನೂಲು ನೆಯ್ದ ಚಿತ್ರ' ಒಂದು ನಿರ್ದಿಷ್ಟ ಸಮಾಜದ ಸಮಗ್ರ ಚಿತ್ರವನ್ನು ನೀಡುವಲ್ಲಿ ವಿಶೇಷ ಪ್ರಯತ್ನ ನಡೆಸಿದ ಕಾದಂಬರಿ. ಅನುಪಮಾ ನಿರಂಜನ ಅವರ ಕೃತಿಗಳಲ್ಲಿ ಸ್ವಾನುಭವ ಸಂಪನ್ನವಾದ ಈ ಕಾದಂಬರಿ ವಿಶಿಷ್ಟ ಸ್ಥಾನ ಪಡೆಯುತ್ತದೆ.

ಕೊಳಚೆ ಕೊಂಪೆಯ ದಾನಿಗಳು

- ಡಾ। ಚೆನ್ನಣ್ಣ ವಾಲಿಕಾರ

ಅನುಪಮಾ ನಿರಂಜನ ಅವರ 'ಕೊಳಚೆ ಕೊಂಪೆಯ ದಾನಿಗಳು' ಬಡವರ, ಶೋಷಿತರ, ದುಡಿವ ವರ್ಗದ ಬದುಕಿನ ಸೂಕ್ಷ್ಮ ವಿವರಗಳನ್ನು ನೀಡುವ ಕಾದಂಬರಿಯಾಗಿದೆ. ಮೇಲ್ವರ್ಗದ ಜನ ತಮ್ಮ ಸುಖ ಸಂತೃಪ್ತಿಗಾಗಿ ಕೆಳವರ್ಗದವರ ಬದುಕಿಗೆ ಹೇಗೆ ಬೆಂಕಿ ಹಚ್ಚುವರೆಂಬ ಕರುಣಾಜನಕ ಸಂಗತಿಗಳು ಇಲ್ಲಿ ಬರುವವು. ಕೊಳಚೆಗೇರಿ ಜನ ಯಾಕೆ ಕಳ್ಳರು. ಭ್ರಷ್ಟರು. ತಲೆಹಿಡುಕರು ಆಗುವರೆಂಬುದನ್ನು ತಿಳಿಸುವುದರ ಜೊತೆಗೆ ಅವರಲ್ಲಿ ಅಡಗಿರುವ ಪ್ರೀತಿ, ಮಮತೆ, ಮಾನವೀಯ ಗುಣ, ಬಂಡಾಯತನ ಈ ಕಾದಂಬರಿಯಲ್ಲಿ ಕಾಣುವವು.

ಒಂದು ಹೆಣ್ಣು ತಾನಾಗಿಯೇ ಸೂಳೆಯಾಗುವುದಿಲ್ಲ. ಒಬ್ಬ ಬಡವ ತಾನಾಗಿಯೇ ದುಷ್ಟ, ಭ್ರಷ್ಟನಾಗುವುದಿಲ್ಲ. ಮೇಲ್ವರ್ಗದ ಜನ ಹೀಗಾಗಲು ಎಂಥ ಪರಿಸ್ಥಿತಿಯನ್ನುಂಟುಮಾಡುವರೆಂಬುದು ಇಲ್ಲಿ ವಿವರವಾಗಿ ಬಂದಿದೆ. ಕೊಳಚೆ ಕೊಂಪೆಯ ದಾನಿಗಳು ಮೇಲ್ವರ್ಗದವರು, ಆಳುವ ಜನ ಸಿರಿವಂತ ಮಂದಿ ಎಂದು ಈ ಕಾದಂಬರಿಯ ಉದ್ದಕ್ಕೂ ಕಾಣುವೆವು. ಬರಗಾಲಿಗೆ. ಬಡತನಕ್ಕೆ, ಶೋಷಣೆಗೀಡಾದ ಕೆಳವರ್ಗದ ಹಳ್ಳಿಯ ಜನ ತಮ್ಮೂರು ಬಿಟ್ಟು ಪಟ್ಟಣಗಳ ಕೊಳಚೆಗೇರಿ ಸೇರುವ ವಿವರ ತುಂಬ ವಾಸ್ತವವಾಗಿ ಬಂದಿದೆ. ಕಾದಂಬರಿಯ ವಸ್ತು ತುಂಬ ದೊಡ್ಡದಾದರೂ ಇದನ್ನು ಸಂಗ್ರಾಹ್ಯವಾಗಿ ಹಿತಮಿತವಾಗಿ ಹೇಳಿದ್ದರಿಂದ ಓದುಗರ ಮೇಲೆ ಇದರ ಪರಿಣಾಮ ತೀವ್ರವಾಗುವುದು. ದೀನದಲಿತ. ದಿಕ್ಕಿಲ್ಲದ, ಅನಾಥ ಜನ ಮೇಲವರ ತುಳಿತಕ್ಕೆ ಸಿಗುವಲ್ಲಿ, ತಾವಾಗಿಯೇ ಕೆಟ್ಟ ಚಟಕ್ಕೆ ಸಿಕ್ಕು ಗೋಳಾಡುವಲ್ಲಿ, ಪ್ರಸಂಗಗಳಿಗೆ

ಬಲಿಯಾಗುವಲ್ಲಿ ನಮ್ಮೆದೆ ತಟ್ಟಿ ಕಣ್ಣೀರಿನ ಕೋಡಿ ಹರಿಸುವರು. ಅನಾಥರ ಬದುಕು ಎಷ್ಟೊಂದು ನೋವಿನ ಮಡುವಿನಿಂದ ತುಂಬಿರುವದೆಂಬುದು ಇಡೀ ಕಾದಂಬರಿ ಹೇಳುತ್ತ ಹೋಗುವುದು.

ಈ ಕಾದಂಬರಿಯಲ್ಲಿ ಎರಡೇ ಬಣಗಳು. ಸಿಂಗೇ ಗೌಡ, ದೇವಪ್ಪ ಮೇಲ್ವರ್ಗದ ಪ್ರತಿನಿಧಿಗಳು. ಶೋಷಣೆ ಮಾಡುವ ಜನ. ದೇವಪ್ಪನನ್ನು ಚುನಾವಣೆಗೆ ನಿಲ್ಲಿಸಿ ದುಡ್ಡು ಸುರಿಸಿ, ಕುರಿ ಕೋಳಿ ಚೆಲ್ಲಿ ಗೆದಿಸಿ ತನಗೆ ಬೇಕಾದಂತೆ ಅವನಿಗೆ ಕುಣಿಸುತ್ತ ಖಾಲಿ ಇದ್ದ ಸ್ಥಳಗಳನ್ನು ತನ್ನದನ್ನಾಗಿ ಮಾಡಿಕೊಂಡು ಶ್ರೀರಾಮ ಮತ್ತು ಹನುಮಾನ ಸ್ಲಮ್ ಏರಿಯಾ ಮಾಡುತ್ತ ದುಡ್ಡು ಮಾಡುತ್ತ ಹೋಗುವ, ದುಡ್ಡು ಕೊಡದ ಬಾಡಿಗೆದಾರರಿಗೆ ಹಿಂಸಿಸುತ್ತ ನಡೆವ ಸಿಂಗೇ ಗೌಡ ಈ ಕಾದಂಬರಿಯ ಖಳನಾಯಕ. ಇಂಥ ಖಳನಾಯಕ ನನ್ನು ಕೊಲ್ಲುವ ಸಂಜೀವ ನಾಯಕ. ಇಡೀ ಕೊಳಚೆಗೇರಿಯ ಜನರೆ ವಿರೋಧಿಸಲು ನಿಲ್ಲುವಲ್ಲಿ ಸಂಜೀವನಂಥ ಯುವಕರು ಹೇಗೆ ನಾಯಕತ್ವ ವಹಿಸಿ ಸಮಾಜದ ಕಾಯಿಲೆಯಾದ, ಭ್ರಷ್ಟ ಬೇರುಗಳಾದ ಸಿಂಗೇ ಗೌಡನಂಥವರನ್ನು ಕೊಂದುಹಾಕುವ ಚಿತ್ರ ಮನಮುಟ್ಟುವಂತೆ ಚಿತ್ರಿತವಾಗಿದೆ ಇಲ್ಲಿ.

ಈ ಕಾದಂಬರಿಯಲ್ಲಿ ಬರುವ ದೇವಪ್ಪ ಮಾದಯ್ಯರ ಚುನಾವಣಾ ಪ್ರಸಂಗ ಇಡೀ ದೇಶದ ರಾಜಕೀಯದ ಮೇಲೆ ಬೆಳಕು ಬೀರುವಂತಿದೆ. ದೇವಪ್ಪ ಹೆಂಡ ಹಣ ದಿಂದ, ಕುರಿ ಕೋಳಿಯಿಂದ ಸೀರೆ ಪಂಚೆಯಿಂದ ಮುಗ್ಧ, ಬಡ, ಅನಾಥ ಜನತೆಯನ್ನು ವಂಚಿಸಿ ಓಟು ಪಡೆದು ಆರಿಸಿ ಬರುವನು. ಸಿದ್ಧಾಂತದ ಮಾತಾಡಿ ಪ್ರತಿಸ್ಪರ್ಧಿಯಾದ ಮಾದಯ್ಯ ಸೋಲುವನು. ಮಾದಯ್ಯನಿಗೆ ಬಾಬು, ಸಂಜೀವ, ನಾಗರಾಜರಂಥ ಬಿಸಿ ರಕ್ತದ, ಪ್ರಗತಿಪರ ವಿಚಾರಧಾರೆಯ ಯುವಕರೆಷ್ಟೋ ಬೆಂಬಲಿಸಿದರೂ ಇವರು ಅಲ್ಪ ಸಂಖ್ಯಾತರಾದ ಕಾರಣ ಮಾದಯ್ಯನಿಗೆ ಸೋಲಾಗುವದು. ದುಡ್ಡಿನ ಮೂಲಕ ಅಡ್ಡ ದಾರಿಯಿಂದ ಚುನಾವಣೆ ಹೇಗೆ ಗೆಲ್ಲಬಹುದೆಂಬುದು ಸಿಂಗೇ ಗೌಡ, ದೇವಪ್ಪ ತೋರಿಸಿಕೊಡುವರು. ಅಡ್ಡ ದಾರಿಯಿಂದ ಅಧಿಕಾರಕ್ಕೆ ಬಂದ ದೇವಪ್ಪ ಮೇರಿ ಯನ್ನೂ ಬಡವರ ರಕ್ತ ಹಿಂಡಿ ಸಿರಿವಂತನಾದ ಸಿಂಗೇ ಗೌಡ ಭಾಗ್ಯಳ ಬಾಳನ್ನೂ ಹೇಗೆ ಹಾಳು ಮಾಡುವರೆಂಬುದು ವ್ಯವಸ್ಥೆ ಎಂಥೆಂಥ ಅನಾಹುತಗಳನ್ನುಂಟು ಮಾಡುವ ದೆಂಬುದು ತಿಳಿಸುವದು. ಸಿಂಗೇ ಗೌಡ ದೇವಪ್ಪನಿಗೆ ಬೆಂಬಲಿಸಿದರ ಫಲ ಹನುಮಂತ ಸ್ಲಮ್, ಶ್ರೀರಾಮ ಸ್ಲಮ್ ಜಾಗಗಳನ್ನು ತನ್ನದನ್ನಾಗಿ ಮಾಡಿಸಿಕೊಂಡು ಅಲ್ಲಿ ನೆಲೆಸುವ ಜನರಿಂದ ಬಾಡಿಗೆ ರೂಪದಲ್ಲಿ ಜಿಗಣೆಯಂತೆ ಹಣ ಸೆಳೆಯುತ್ತಾ ಹೋಗು ವನು. ಪೋಲಿಸಧಿಕಾರಿಗಳಿಗೆ ತನ್ನ ಹಿಡಿತದಲ್ಲಿಟ್ಟುಕೊಂಡು ಬಡ ಜನತೆ ಸಿಡಿದೇಳದಂತೆ ಮಾಡುವನು. ಸಂಕಪ್ಪನೆಂಬ ಪಠಾಣನಂತವನಿಗೆ ಇಟ್ಟುಕೊಂಡು ಅವನ ಮೂಲಕ

ಈರ ಬೀರರಿಗೆ ಚೂಬಿಟ್ಟು ಹೊಡೆದು ಬಡಿದು ಹಣ ವಸೂಲಿ ಮಾಡುವ ವಿಧಾನ ತುಂಬ ಕ್ರೂರತನದಿಂದ ಕೂಡಿದೆ. ಆ ಕೊಳೆಚೆಗೇರಿಯ ಗುಡಿಸಲಿನಲ್ಲಿರುವ ಮುತ್ಯಾಲನಿಗೆ ಬಾಡಿಗೆ ಕೊಡದ್ದಕ್ಕಾಗಿ ಸಂಕಪ್ಪನ ಆಜ್ಞೆಯಂತೆ ಈರ ಬೀರರು ಅವನ ಸಾಮಾನುಗಳನ್ನೆಲ್ಲ ಬೀದಿಗೆ ಚೆಲ್ಲಿ ಹೊರದಬ್ಬುವ, ಅವನ ಹೆಂಡಿರು ಮಕ್ಕಳು ಮುಗಿಲುಮುಟ್ಟುವಂತೆ ಗೋಳಾಡುವ ದೃಶ್ಯ ಆ ಜನತೆಯ ಬದುಕಿನ ಬಗ್ಗೆ ಮರುಕವನ್ನು ಹುಟ್ಟಿಸುವದು.

ಮೇಲ್ವರ್ಗದವರು ತಮ್ಮ ಸುಖಕ್ಕಾಗಿ ಕೆಳವರ್ಗದವರನ್ನು ಶೋಷಿಸುವ ಚಿತ್ರ ಒಂದು ಕಡೆಗಾದರೆ ತಮ್ಮ ಬಡತನ, ಅಜ್ಞಾನ, ದುಶ್ಚಟಗಳಿಂದ ಕೆಳಜನ ಹೇಗೆ ದುಃಖಕ್ಕೀಡಾಗುವರೆಂಬ ಚಿತ್ರ ಇನ್ನೊಂದು ಕಡೆಗೆ ಕಾಣುವೆವು. ಸೆಲ್ವಿಯ ಗಂಡ ಅಂಥೋಣಿ ಹೆಂಡತಿಯ ಮಾತಿನಂತೆ ಆಕೆಯ ತಂಗಿ ಮೇರಿಗೆ ಜಾರ್ಜನೆಂಬ ವರ ನೋಡಿ ಲಗ್ನ ಮಾಡಿ ಕೊಡುವನು. ಆದರೆ ಆ ದಂಪತಿಗಳು ಬದುಕಿನಲ್ಲಿ ಬರುವ ಪ್ರಸಂಗಗಳನ್ನು ಸಹಿಸಿಕೊಳ್ಳದೆ ಜಗಳವಾಡಿ ದೂರಾಗಿ ಬಿಡುವರು. ಜಾರ್ಜ್ ಮನೆಬಿಟ್ಟು ಹೋದವನು ಹಿಂದಿರುಗಿ ಬರುವುದಿಲ್ಲ. ತನ್ನ ಗಂಡನ ಜೊತೆ ತನ್ನ ತಂಗಿ ಮೇರಿ ಮಲಗಿದ್ದು ನೋಡಿ ಸೆಲ್ವಿ ಆಕೆಗೆ ಹೊರಹಾಕುವಳು. ಮೇರಿ ಚುಕ್ಕಾಣಿಯಿಲ್ಲದ ಹಡಗಿನಂತಾಗಿ ರಾಮಕ್ಕನ ಮನೆ ಸೇರುವಳು. ಆಕೆಯ ಮಾತಿಗೆ ಮರುಳಾಗಿ ಮಾಲಿಂಗನ ಮೂಲಕ ಸೂಳೆಯರೊಡತಿ ಚಂದನ ಬಾಯಿಯ ಮನೆ ಸೇರುವ ಕಥೆ ತುಂಬ ರೋಚಕವಾಗಿದೆ. ಆಶ್ರಯ ಬೇಡಲು ಬಂದವಳ ಮೇಲೆ ಹಣ ಮಾಡಬೇಕೆನ್ನುವ ರಾಮಕ್ಕನ ಮನಸ್ಸಿನ ರಾಜಕೀಯ ತಂತ್ರ ತುಂಬ ಕುತಂತ್ರದಿಂದ ಕೂಡಿದೆ. ಕೆಳ ಜನಕ್ಕೂ ದುಡ್ಡು ಮಾಡುವ ಆಶೆ ಮೂಡಿದಾಗ ಅವರು ಮೇಲ್ವರ್ಗದವರಂತಾಗುವರೆಂಬುದು ರಾಮಕ್ಕ, ಮಾಲಿಂಗ, ಚಂದನ ಬಾಯಿಯ ಪಾತ್ರಗಳು ತಾವಾಗಿಯೇ ಬಾಯಿ ತೆರೆದು ಹೇಳುವವು.

ಮೇರಿ ಪ್ರಸಂಗಗಳಿಗೆ ಮಣಿದು ಸೂಳೆಯಾದರೂ ಮುಂದೆ ಗರ್ಭನಿಂತಾಗ ತಾಯಿಯಾಗಬೇಕೆಂಬ ಆಕೆಯ ನಿರ್ಧಾರ ಅವಳ ತಾಯ್ತನ, ಮಮತೆಗಳನ್ನೆಲ್ಲ ತೋರಿಸುವದು. ಆ ಗರ್ಭಕ್ಕೆ ಜನನ ಕೊಡಲು ಆಕೆ ಪಡುವ ಕಷ್ಟ ಅಸಾಧ್ಯವಾದುದು. ರಾಮಕ್ಕ, ಮಾಲಿಂಗ, ಚಂದನ ಬಾಯಿ, ಅಂಥೋಣಿ, ಶೆಲ್ವಿಯರಿಂದ ದೂರಾಗುವಳು. ಶ್ರೀರಾಮ ಸ್ಲಮ್ ಸೇರಿ ಮತ್ತೆ ಅದೇ ದಂಧಾ ನಡೆಸುತ್ತ ತನ್ನ ಮಗುವಿನ ಬರವಿಗಾಗಿ ಅಲ್ಲಿಯ ಜನರಿಂದ ಪಡಬಾರದ ಕಷ್ಟ ಪಡುತ್ತ ಹೋಗುವಳು.

ಪ್ರಸಂಗದ ಬೇಟೆಯಾಗಿ ಮೇರಿ ಸೂಳೆಯಾಗಿ ಪಡಬಾರದ ಕಷ್ಟ ಪಡುತ್ತ ಜೀವನ ಸಾಗಿಸಿದರೆ ಕನ್ನಮ್ಮ. ನಂಜರ ಮಗಳು ಭಾಗ್ಯ ವಿನಾ ಕಾರಣ ಸಿಂಗೇ ಗೌಡನ ಕಾಮಕ್ಕೆ ಬಲಿಯಾಗಿ ಸತ್ತು ಹೋಗುವ ಚಿತ್ರ ನಮ್ಮ ಕರುಳನ್ನು ಕೊರೆಯುವದು. ಇನ್ನೊಬ್ಬ ಸಿರಿವಂತರ ಮನೆಯಲ್ಲಿ ಕೆಲಸಕ್ಕಿದ್ದಾಗ ಭಾಗ್ಯ ಅವರ ಮಕ್ಕಳು ಧರಿಸುವ ಸರಕ್ಕಾಸೆ ಮಾಡಿ ಕಳವು ಮಾಡುವುದು ಸಹಜ ಸಂಗತಿಯಾಗಿದೆ. ಈ ಕಾರಣಕ್ಕೆ

ಆ ಮನೆಯವರು ಕೆಲಸ ಬಿಡಿಸಿದಾಗ ಮುಂದೆ ಸಿಂಗೇಗೌಡನ ಮನೆಯಲ್ಲಿ ಕೆಲಸ ಮಾಡು ತ್ತಿದ್ದಾಗ ಅವನ ತೋಟದ ಮನೆಯಲ್ಲಿ ಆಕೆ ಸಾಯುವ ಚಿತ್ರ ಅಳು ಬರಿಸುವಂಗಿದೆ. ಬಡವರ ಮಕ್ಕಳು ಸುಖ ಕಾಣುವ ಚಿತ್ರ ಭಾಗ್ಯಳ ಮೂಲಕ ಕಾದಂಬರಿಕಾರರು ಚೆನ್ನಾಗಿ ನಿರೂಪಿಸಿದ್ದಾರೆ. ಭಾಗ್ಯಳೂ ತನ್ನ ಗೆಳತಿಯರಂತೆ ತಾನೂ ಲಗ್ನವಾಗಬೇಕು, ಒಳ್ಳೆಯವನ ಕೈಹಿಡಿಯಬೇಕು, ಸುಖಜೀವನ ನಡೆಸಬೇಕೆಂಬುದು ಸಹಜವಾಗಿ ಮೂಡಿದೆ. ಅದರಂತೆ ಆಕೆ ಸ್ಫುರದ್ರೂಪಿಯಾದ, ಯುವಕನಾದ ಸಂಜೀವನನ್ನು ಪ್ರೀತಿಸುವದು ಲೈಲಾ ಮಜನೂರ ನೆನಪು ತಂದು ಕೊಡುವದು. ಲೈಲಾ ಮಜನೂರದೊಂದು ದುರಂತ ವಾದರೆ ಈ ಬಡ ಪ್ರೇಮಿಗಳದ್ದು ಇನ್ನೊಂದು ಬಗೆಯ ದುರಂತವಾಗಿದೆ. ಅಲ್ಲಿ ವ್ಯವಸ್ಥೆಗೆ ಇಬ್ಬರೂ ಬಲಿಯಾದರೆ ಇಲ್ಲಿ ಭಾಗ್ಯಳಷ್ಟೇ ಬಲಿಯಾಗುವಳು. ಸಂಜೀವ ಇನ್ನೊಂದು ಪ್ರಸಂಗದಲ್ಲಿ ಭಾಗ್ಯಳ ಕೊಲೆಗೆ ಕಾರಣನಾದ ಸಿಂಗೇ ಗೌಡನ ಬಲಿ ತೆಗೆದು ಕೊಳ್ಳುವನು.

ಬಾಲ್ಯದಲ್ಲಿ ಮನೆಬಿಟ್ಟು ಹೋದ ಮಗ ಸಿದ್ಧವೀರ ದೊಡ್ಡವನಾಗಿ ಮನೆಗೆ ಬಂದಾಗ ಎಂಥ ನೀಚ ಕೆಲಸ ಮಾಡುತ್ತಿದ್ದ ಮುದುಕಿ ರಾಮಕ್ಕನ ಕರುಳು ಸಂತೋಷ ಸಾಗರದಲ್ಲಿ ತೇಲಾಡುವ ಚಿತ್ರ ಸೊಗಸಾಗಿ ಮೂಡಿದೆ. ತನ್ನ ಮಗನಿಗಾಗಿ ಹಂಬಲಿಸುವ ರಾಮಕ್ಕ ಪರರ ಮಕ್ಕಳ ಕತ್ತು ಹಿಚುಕಲು ಬಯಸುವ ಸಂಗತಿಗಳು ತುಂಬ ನೋವಿನಿಂದ ಕೂಡಿವೆ. ಹಣಕ್ಕಾಗಿ ಕೆಳ ಜನವು ಎಂಥ ಹೀನ ಕಾರ್ಯಕ್ಕೂ ಇಳಿಯುವರೆಂಬ ಪ್ರಸಂಗ ರಾಮಕ್ಕನಿಂದ ತಿಳಿಯುವದು. ಎಲ್ಲರೂ ತಮ್ಮ ತಮ್ಮ ಸ್ವಾರ್ಥ ಸುಖ ನೋಡಿ ಕೊಳ್ಳುವರೆಂಬುದು ಸೆಲ್ವಿ ಮೇರಿಯರ ಪ್ರಸಂಗದಿಂದ ತಿಳಿಯುವದು.

ಈ ಕೊಳಚೆಗೇರಿಗೆ ಸಂಜೀವನಂಥ ಆಲೋಚಕ, ಯುವಕ ಬಂದಾಗಲೇ ಇಲ್ಲಿ ಹೊಸ ಗಾಳಿ ಬೀಸಲಾರಂಭಿಸುವದು. ಸಂಜೀವ ಅವರಿಗೆ ಪ್ರಶ್ನೆಯ ಮಾಲೆಯಾಗಿಯೇ ಸ್ಫೋಟಿಸುವನು. ವಿನಾ ಕಾರಣ ಮಾರಮ್ಮನ ಜಾತ್ರೆ ಮಾಡುತ್ತ ಹಣ ಪೋಲು ಮಾಡುವದನ್ನು ವಿರೋಧಿಸುವನು. ಹಣ ವಸೂಲಿ ಮಾಡಲು ಬಂದಾಗ ಬಡ ಜನತೆಗೆ ಹಿಂಸಿಸುವ ಸಂಕಪ್ಪ, ಈರ ಬೀರರ ಸೊಕ್ಕಡಗಿಸುವನು. ಬಾಡಿಗೆ ಕೊಡಲಾರದ ಸ್ಥಿತಿ ಬಂದಾಗ ಕೇರಿ ಜನರಿಗೆ ಕೇರಿ ಬಿಡಿಸಲು ನಿಂತ ಸಿಂಗೇ ಗೌಡನ ವಿರುದ್ಧ ಜನತೆಯನ್ನು ಸಿದ್ಧಪಡಿಸುವನು. ಎಲ್ಲಾ ಜನರನ್ನು ಕರೆದುಕೊಂಡು ಸಿಂಗೇ ಗೌಡನ ಮನೆಗೆ ಕರೆದು ಕೊಂಡು ಹೋಗಿ ಕೇಳುವನು. ಮಾತಿನ ಚಕಮಕಿಯಲ್ಲಿ ಸಿಂಗೇ ಗೌಡ ಸಂಜೀವನಿಗೆ ಕೊಲ್ಲಲು ಮಾಡಿದ ಪ್ರಯತ್ನ ತಪ್ಪುವದು. ಕುಪಿತನಾದ ಸಂಜೀವನು ತನ್ನಲ್ಲಿದ್ದ ಚಾಕು ಅವನೆದೆಗೆ ಹೊಡೆದು ಸಿಂಗೇ ಗೌಡನಿಗೆ ನೆಲಕ್ಕೆ ಹಾಕುವನು. ಮಧ್ಯರಾತ್ರಿಯಲ್ಲಿ ಸಿಂಗೇ ಗೌಡ ಆಸ್ಪತ್ರೆಯಲ್ಲಿ ಅಸು ನೀಗುವ, ಸಂಜೀವನಿಗೆ ಹಿಡಿದುಕೊಂಡು ಹೋಗುವ, ಗುಡಿಸಲುಗಳಲ್ಲಿ ಬಾಡಿಗೆ ಇದ್ದ ಜನರಿಗೆ ಕೇರಿ ಬಿಡಿಸುವ ಒಂದೊಂದು ಚಿತ್ರಗಳು, ಪ್ರಸಂಗಗಳು ಹೊಸ ಆಲೋಚನೆಗೆ ಹಚ್ಚುವದು.

ಕಾದಂಬರಿಕಾರರು ಈ ಕಾದಂಬರಿಯಲ್ಲಿ ಬಳಸಿರುವ ಭಾಷೆ ಆಡು ನುಡಿ ಆ ಪರಿಸರವನ್ನು ಕಣ್ಮುಂದೆ ನಿಲ್ಲಿಸುವದು. ಆ ಜನರ ಬದುಕಿಗೆ ಕನ್ನಡಿ ಹಿಡಿಯುವದು.

(i) ಥೂ ನೀನೊಬ್ಬ ಗಂಡ್ಸು (ಪು ೨೫)

(ii) ದೇವ್ರು ಮೈಮ್ಯಾಲೆ ಬಂದದೆ....ಜಾಗ ಬಿಡ್ರಿ (ಪು ೮೩)

(iii) ನಂದೂಂತ ಈ ಪ್ರಪಂಚದಲ್ಲಿ ಏನೈತೆ? ಮಗುವಾದ್ರೂ ಇರ್‍ಲಿ (ಪು ೧೧೬)

(iv) ದುಡ್ಡು ಕೊಟ್ಟು ಹೋಗೋ ಬೋಸುಡಿ ನನ್ಮಗ್ನೆ.... ನಾಳೆ ಕೊಡ್ತೀನಿ. ಈಗ್ ನನ್ತಾವ್ ದುಡ್ಡಿಲ್ಲ (ಪು ೧೩೨)

(v) ಜೈಲಿನಲ್ಯಾಕ್ ಬುದ್ಧಿ? ನನ್ನೂ ಸಾಯ್ಸಿಬಿಡಿ (ಪು ೧೫೬)

ಅನ್ನ ಇಲ್ಲದಕ್ಕಾಗಿ ಸೆಲ್ವಿ ತನ್ನ ಮಗುವಿಗೆ ಇಲಿ ಪಾಷಾಣ ಕೊಟ್ಟು ಕೊಲ್ಲುವ, ಜೈಲಿಗೆ ಹೋಗುವ ಆಕೆಯ ಗಂಡ ಅಂಥೋಣಿ ಹುಚ್ಚನಂತೆ ತಿರುಗುವ ಹೀಗೆ ಎಷ್ಟೋ ಬಾಳಿನ ಪ್ರಸಂಗಕ್ಕೆ ಬಲಿಯಾದವರ ಚಿತ್ರ ಈ ಕಾದಂಬರಿಯ ಉದ್ದಕ್ಕೂ ಕಾಣುವವು.

ಬಡವರು ಸತ್ತಾರ ಸುಡಲಾಕ ಸೌದಿಲ್ಲ
ಒಡಲೆಂಬ ಬೆಂಕಿಲಿ ಹೆಣ ಬೆಂದು । ಶಿವರಾಯ
ಬಡವಂಗೆ ಸಾವ ತರಬ್ಯಾಡ

ಎಂದು ಹಳ್ಳಿಯ ಗರತಿ ಹಾಡಿದ್ದು ಇಲ್ಲಿ ನೆನಪಿಗೆ ಬರುವುದು. ಕೆಳ ವರ್ಗದ ಜನ ತಮ್ಮ ಬಡತನ, ಅಜ್ಞಾನ, ಮೂರ್ಖತನ, ದುಶ್ಚಟಗಳಿಂದ ಬಲಿಯಾಗುವುದು ಮೇಲವರ ಕುಮ್ಮಕ್ಕಿನಿಂದ; ಅವರಾಡುವ ಕುತಂತ್ರದಿಂದ. ಸಂಜೀವಸಂಘ ಬಿಸಿರಕ್ತದ ಯುವಕರು, ಹೊಸ ವಿಚಾರದವರಿಂದ ಮಾತ್ರ ಕೊಳಚೆಗೇರಿಗಳ ಸುಧಾರಣೆ ಸಾಧ್ಯ ವೆಂಬ ಮಾತು ಈ ಕಾದಂಬರಿ ಧ್ವನಿಪೂರ್ಣವಾಗಿ ತಿಳಿಸುವದು. ಮೇಲವರ ತಲೆಯಲ್ಲಿ. ಎದೆಯಲ್ಲಿ ಕುಳಿತಿರುವ ಕೊಳೆಯು ಸಂಜೀವಸಂಘ ಯುವಕರಿಂದ ಹೋಗಲು ಸಾಧ್ಯ ಎಂಬುದು ತಿಳಿಸುವದು.

ಅನುಪಮಾ ಅವರ ಬರಹ ತುಂಬ ಸಂಯಮತನದಿಂದ ಕೂಡಿದೆ. ಕಾಮ ಪ್ರಸಂಗಗಳನ್ನು ಚಿತ್ರಿಸುವಲ್ಲೂ ಅವರು ಸಂಯಮವನ್ನು ಕಳೆದುಕೊಳ್ಳುವದಿಲ್ಲ, ಅಶ್ಲೀಲವಾಗಿ ಚಿತ್ರಿಸುವುದಿಲ್ಲ. ನಮ್ಮ ಕರುಳು ಕೊರೆಯುವಂತೆ, ಅರಳುವಂತೆ ಚಿತ್ರಿಸುವ ಅವರ ಬರೆಹ ಬಡವರ ಬಂಗಾರವಾಗಿದೆ.

'ಘೋಷ' ಮತ್ತು 'ಮಾಧವಿ'

- ಆರ್. ವಿ. ಭಂಡಾರಿ

ಸಮಕಾಲೀನ ಸಾಹಿತ್ಯದ ವಸ್ತುದೃಷ್ಟಿ ವಾಸ್ತವಿಕವಾದುದು. ಅಂದರೆ, ಕೃತಿಯಲ್ಲಿ ಜರಗುವ ಸಂಗತಿಗಳು ಕಾಲ್ಪನಿಕವಾಗಿರಲಿ ಅಥವಾ ಐತಿಹಾಸಿಕ - ಪೌರಾಣಿಕ ವಾಗಿರಲಿ, ಅದು ಆಕಾರ ತಳೆದು ಒಂದು ಕಲಾಕೃತಿಯಾಗುವಾಗ ವಾಸ್ತವತೆಯ ವಿಶ್ಲೇಷಣಾತ್ಮಕ ವೈಚಾರಿಕತೆಯ ಅಂತಸ್ಸತ್ವವನ್ನೇ ಹೊಂದಿರುತ್ತದೆ. ಈ ವಿಶ್ಲೇಷಣೆ ಒಂದು ಕೌಟುಂಬಿಕ ಸಂಘಟನೆಯಲ್ಲಿ ನಡೆಯಬಹುದು ಅಥವಾ ಸಾಮಾಜಿಕ ವೈಶಾಲ್ಯತೆಯನ್ನು ಹೊಂದಬಹುದು.

ಆ ವೈಚಾರಿಕ ಎಳೆ ರಾಜಕೀಯ ಆಯಾಮದಲ್ಲಿ ವಿಸ್ತೃತವಾದರೆ ಮಾತ್ರ ಸಾಲದು. ಅದು ಒಂದು ಪ್ರಾತಿನಿಧಿಕ ಸ್ವರೂಪವನ್ನು ಪಡೆದಾಗ ಧ್ವನಿ ಪೂರ್ಣವಾಗುತ್ತದೆ. ಅದು ಯುಗಧರ್ಮ ಕೂಡ ಆಗುತ್ತದೆ.

ಆ ಒಂದು ಗ್ರಹಿಕೆಯಲ್ಲಿ 'ಘೋಷ' ಮತ್ತು 'ಮಾಧವಿ'ಯ ಧ್ವನಿ ಪ್ರಾತಿನಿಧಿಕವಾಗಿ ಘನಿಷ್ಠಗೊಳ್ಳುತ್ತದೆ.

ಘೋಷ ಮತ್ತು ಮಾಧವಿಯ ಮುಖಾಂತರ ಅನುಪಮಾ ಅವರು ತಮ್ಮ ಕಲಾತ್ಮಕ ಹೆಜ್ಜೆಗಳನ್ನು ಹಿಗ್ಗಿಸಿಕೊಂಡಿದ್ದು ಮಹತ್ವದ ಅಂಶವಾಗುತ್ತದೆ. ಮಹಿಳಾ ಲೇಖಕಿಯರು ಎಂಬ 'ಒಂದು ನಮೂನೆಯ ದೃಷ್ಟಿಯಿಂದ' ನೋಡುವ ನಮ್ಮ ವಿಮರ್ಶಕರೂ ಈ ಕಡೆ ದೃಷ್ಟಿ ಹಾಯಿಸುವ ಆವಶ್ಯಕತೆಯನ್ನು ಅವು ಸಾರುತ್ತವೆ.

'ಘೋಷ'ದ ಮುನ್ನುಡಿಯಲ್ಲಿ ಲೇಖಕಿಯರು "ಕಾದಂಬರಿ ವಸ್ತು, ಶೈಲಿ, ಆಕೃತಿ, ಕಾಳಜಿ ಈ ಎಲ್ಲ ದೃಷ್ಟಿಗಳಿಂದಲೂ ನನ್ನ ಇತರ ಕಾದಂಬರಿಗಳಿಗಿಂತ ಭಿನ್ನವಾದದ್ದು. ಈ ಕ್ಲಿಷ್ಟ ವಸ್ತುವನ್ನು ಆರಿಸಿದ್ದು ಕೂಡ ನನ್ನ ಬರೆವಣಿಗೆಗೆ ಹೊಸ ಆಯಾಮ ಬೇಕು ಎಂಬ ಆಶಯದಿಂದ" ಎಂದಿರುವ ಮಾತು 'ಮಾಧವಿ'ಗೂ ಅನ್ವಯಿಸಬಹುದಾಗಿದೆ.

ಈ ಹೊಸ ಆಯಾಮದ ಒತ್ತಡ ಅಂಥ ಕ್ಲಿಷ್ಟತೆಯನ್ನು ತಾನು ನಿರ್ವಹಿಸಬೇಕೆಂಬ ಒತ್ತಡದಿಂದ ಬರುತ್ತದೆ. ಮತ್ತು ಅಂಥ ಒತ್ತಡ ವಾಸ್ತವಿಕತೆಯ ಬೌದ್ಧಿಕ ವಿಕಾಸವೇ ಆಗಿರುತ್ತದೆ. ಇಂಥ ಈ ಆಶಯ ಈ ಎರಡೂ ಕಾದಂಬರಿಗಳಲ್ಲಿ ಹೆಚ್ಚು ಪಾಲು ನೆರವೇರಿದೆ. ಇವೊಂದು ಮಹಾ ಆವೇಶವಾಗಿ ಜರಗುವುದಿಲ್ಲ ಎಂಬ ಎಚ್ಚರಿಕೆಯ ಮಧ್ಯದಲ್ಲೇ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ.

'ಘೋಷ' ಸರ್ವಾಧಿಕಾರಿ ಪ್ರಭುತ್ವದ ಕಟಕಿ ಆಗಿದೆ. ಸುಲು ದ್ವೀಪದ ಭೂಪಾಲಿಕರು, ಅಂದರೆ ಪ್ರಾತಿನಿಧಿಕವಾಗಿ ಇಳಿರಾಜ ಮತ್ತು ಸರ್ವಾಧಿಕಾರಿ ಮಿಲಿಟರಿ ಸರ್ವಾಧಿಕಾರಿಯಾದ ಕಲಮಂತ ಇವರ ಕಾರ್ಪಣ್ಯಕ್ಕೆ, ಭ್ರಷ್ಟತೆಗೆ ಇದೇ ದ್ವೀಪ ಈಡಾಗಿದೆ.

ಈ ದ್ವೀಪ ಸಮೂಹ ಕಾಲ್ಪನಿಕವಾದುದು. ದ್ವೀಪ ಸಮೂಹ ಹಾಗೂ ಅಲ್ಲಿ ಬಳಸುವ ಹೆಸರುಗಳು ಕಾಲ್ಪನಿಕ ಜಗತ್ತಿಗೆ ಸೇರಿರುವುದರಿಂದ ಅದೊಂದು ಸಾರ್ವತ್ರಿಕತೆಯನ್ನು ಹೊಂದಿದೆ. ಮಿಲಿಟರಿ ಸರ್ವಾಧಿಕಾರದ ಜಾಗತಿಕ ಸ್ವರೂಪದಲ್ಲಿ ತಾನು ಹಿಗ್ಗುತ್ತದೆ. ಆದರೆ ಆದೇ ಹೊತ್ತಿಗೆ ಅದು ಪ್ರಾದೇಶಿಕ ಖಾಸಗೀತನವನ್ನು (ಅಥೆಂಟಿಸಿಟಿಯನ್ನು) ಕುಗ್ಗಿಸಿಕೊಂಡು ಸೊರಗಿದಂತಿರುತ್ತದೆ. ಆದರೆ ಕಾದಂಬರಿಯ ವೈಚಾರಿಕ ವಿಶ್ಲೇಷಣೆ ಸಮಕಾಲೀನ ಸಂಗತಿಗಳೊಡನೆ ಭಾವ ಸಂಬಂಧವನ್ನಿರಿಸಿ ಕೊಂಡಿರುವುದರಿಂದ, ಇನ್ನೂ ಸ್ಪಷ್ಟವಾಗಬೇಕೆಂದರೆ ಕಾದಂಬರಿ ಬಿಚ್ಚಿಕೊಳ್ಳುವ ಸಂಗತಿಗಳು ಇದೋ ಇಲ್ಲಿ ಜರಗಿದ್ದು-ಹೀಗೆ ಜರಗಿತ್ತಲ್ಲಾ ಎಂಬ ಅನ್ನಿಸಿಕೆಯನ್ನು ಹುಟ್ಟಿಸುತ್ತವಾದುದರಿಂದ, ಅದು ಒಂದು ಕಡೆ ಕಳೆಕೊಂಡದ್ದನ್ನು ಮತ್ತೊಂದು ಕಡೆ ಪೂರ್ತಿ ಅಲ್ಲದಿದ್ದರೂ, ಬಹು ಅಂಶದಲ್ಲಿ ಪಡೆದುಕೊಳ್ಳುತ್ತದೆ. ಆದ್ದರಿಂದ ಇದು ಕಾದಂಬರಿಯ ಕಲಾತ್ಮಕ ಯಶಸ್ಸು ಕೂಡಾ ಹೌದು.

ವಸ್ತು ಕೇವಲ ಸೆಟಾಯರ್ ಆಗಿದ್ದರೆ ವಿಮರ್ಶೆ ಸುಲಭವಾಗುತ್ತದೆ. ಆದರೆ ಕಾದಂಬರಿ ಹೊಂದಿರುವ ವಸ್ತು ಮೂಲಭೂತವಾಗಿಯೇ ಸಂಕೀರ್ಣವಾದುದು.

ಮೂಲಭೂತವಾದ ಸಮಸ್ಯೆಯೆಂದರೆ ಮಾನವಜೀವಿಯ ಸೃಜನಾತ್ಮಕ ಕ್ರಿಯಾಶೀಲತೆಗೆ ಸಂಬಂಧಿಸಿದ್ದುದು.

ಸೆರೆಮನೆಸುಲ್ಲಿರುವ ವೇಶ್ಯೆ ಗಿಲ್ದಾಳಿಗೆ ಭೂದೇವಿ "ನಿಂಗಿಲ್ಲಿ ಬೇಜಾರಾಗೊಲ್ವೆ?" ಎಂದು ಕೇಳಿದಾಗ "ಬೇಜಾರಾಗುತ್ತೆ, ಆದ್ರೆ ಎರಡು ಹೊತ್ತಿನ ಊಟಕ್ಕೆ ಮೈ ಮಾರ್ಕೊಳ್ಳೋದು ತಪ್ಪಲ್ಲ ಅಂತ ಮನಸ್ಸು ನಿಸೂರವಾಗಿದೆ" ಎಂದು ಹೇಳಿದಾಕ್ಷಣ ಮನಸ್ಸಿನಲ್ಲಿ ವಿಚಾರಿಸುತ್ತಾಳೆ. "ಆ ವೇಶ್ಯಾವಾಟಿಕೆಯಲ್ಲಿ ತನಗೊಂದಿಷ್ಟು ಸ್ವಾತಂತ್ರ್ಯ ವಿತ್ತು. ತನ್ನ ವಯಸ್ಸಿನವರೆ ಆದ ಹುಡುಗಿಯರಿದ್ದರು. ಒಂದೊಂದು ದಿನ ಹಗಲು ಹೊತ್ತು ಅವರು ಕುಲಿವಿನ ಪೇಟೆಗೆ ಹೋಗುತ್ತಿದ್ದರು................ದಾರಿಯಲ್ಲಿ ತರುಣರು ಗೇಲಿ ಮಾಡಿದರೆ ಇವರು ಕಿಸಿಕಿಸಿ ನಗುತ್ತಿದ್ದರು. ಆ ಪ್ರವಾಸದ ಸೊಗಸೇ ಸೊಗಸು ಅದು" ಎಂದುಕೊಳ್ಳುತ್ತಾಳೆ.

ಸೆರೆಮನೆಯಲ್ಲಿರುವ ಭೂದೇವಿ, "ಸುತ್ತು ಮುತ್ತಲಿನ ಹೆಂಗಸರಿಗೆ ಪುಕ್ಕಟೆ ಅಕ್ಷರ ಹೇಳಿಕೊಡಲಾರಂಭಿಸಿದ್ದೆ. ಅಕ್ಷರ ಓದಲು ಬಂದಾಗ ಅವರಿಗೆಷ್ಟು ಆನಂದವಾ ಗಿತ್ತು!" ಎಂದುಕೊಳ್ಳುತ್ತಾಳೆ. ಇವೆಲ್ಲ ಘನೀಭವಿಸುವುದು ಸ್ವಾತಂತ್ರ್ಯಾಭಿಲಾಷೆಯಲ್ಲಿ.

ಅಂದರೆ ಇಲ್ಲಿಯ ಪ್ರಶ್ನೆ ರೂಪುಗೊಳ್ಳುವುದು ಸೃಜನಾತ್ಮಕ ಸ್ವಾತಂತ್ರ್ಯಾಭಿಲಾಷೆಯಲ್ಲಿ. ಇದು ಮಾನವೀಕವಾದ ಮುಖ್ಯ ಸೆಲೆ. ಇದರ ಸಾಂಸ್ಕೃತಿಕ ಅಭಿವ್ಯಕ್ತಿ ಕಲೆ.

"ಈಗ ನೋಡಿದರೆ ಬೀದಿ ಬರಿದಾಗಿವೆ. ಪಾದರಸ್ತೆಯಲ್ಲಿ ಕುಳಿತ ಭಿಕ್ಷುಕರು ಮತ್ತು ಪಾದಚಾರಿಗಳನ್ನು ಬಿಟ್ಟರೆ ಎಲ್ಲೂ ಲವಲವಿಕೆಯೇ ಇಲ್ಲ". ಕಲಮಂತ ಸಿಟ್ಟಿನಿಂದ ಕೇಳಿದ, "ಜನರು ಸ್ವಾತಂತ್ರ್ಯ ಸಮಾರಂಭಾನ ಯಾಕೆ ಸಂತೋಷದಿಂದ ಆಚರಿಸ್ತಾ ಇಲ್ಲ? ಬೀದಿಗಳಲ್ಲಿ ನೃತ್ಯ, ಸಂಗೀತ, ಪಟಾಕಿ. ಜಯ ಘೋಷ ಎಲ್ಲ ಎಲ್ಲಿ ಹೋಯಿತು?" ಎಂದು.

ಈ ಸ್ವಾತಂತ್ರ್ಯಾಭಿಲಾಷೆಯು ಇನ್ನೊಂದು ತುಡಿತ ಸಮಾನತೆ. ಸಮಾನತೆ ಮೂರ್ತಗೊಳ್ಳುವುದು ರಾಜಕೀಯದಲ್ಲಿ. ಅಂದರೆ ಸ್ವಾತಂತ್ರ್ಯಾಭಿಲಾಷೆಯ ಇಮ್ಮುಖವಾಗಿ ಸಂಸ್ಕೃತಿ ಮತ್ತು ರಾಜಕೀಯವಿದೆ.

ಇದರ ಹಿಂದಣ ಶಕ್ತಿ ಸಂಪತ್ತು. ಅದರ ಹಂಚಿಕೆ. ಈ ಆಶಯಕ್ಕೆ ಮೂರ್ತ ಸ್ವರೂಪ ಕೊಡುವುದೆ ಹೋರಾಟ, ವರ್ಗ ಸಂಘರ್ಷ ಇತ್ಯಾದಿ.

ಕಾದಂಬರಿ ಈ ಸಂಕೀರ್ಣವಾದ ಸಮಸ್ಯೆಯಲ್ಲಿ ತಳಕು ಹಾಕಿದೆ. ಆದರೆ ಅದು ಕಲಾತ್ಮಕ ಅಭಿವ್ಯಕ್ತಿಗೊಳ್ಳುವುದು ಸರ್ವಾಧಿಕಾರದ ಕಟಕಿ ಅಥವಾ ಸೆಟಾಯರ್‌ನಲ್ಲಿ. ಆದ್ದರಿಂದ ಉಳಿದ ಸಂಕೀರ್ಣ ಸಂಗತಿ ಕಾಣದಾಗಿ ರಾಜಕೀಯ ಮುಖ ಮಾತ್ರ ಮೆರೆದಿದೆ. ಅದು ಚೇತೋಹಾರಿಯಾಗಿರುವುದರಿಂದ ಕೃತಿ ಮಹತ್ವದ್ದಾಗುತ್ತದೆ.

ಕಾದಂಬರಿಯಲ್ಲಿ ಬರುವ ಜೈಲಿನ ವರ್ಣನೆ, ಅಲ್ಲಿಯ ಕ್ರೌರ್ಯ, ಅಮಾನುಷತೆ ಬೆರಗುಗೊಳಿಸುತ್ತದೆ. ಅದರೊಂದಿಗೆ ಸರ್ವಾಧಿಕಾರದ ಕ್ರೌರ್ಯ ನಮ್ಮ ಕಣ್ಣ ಮುಂದೆ ಕಟ್ಟುತ್ತದೆ. ಆ ಸನ್ನಿವೇಶದ ಅಥವಾ ಸಂಗತಿಯ ಜರಗುವಿಕೆ ಎಷ್ಟು ವಾಸ್ತವಿಕವಾಗಿದೆಯೆಂದರೆ ಎಲ್ಲೂ ಹೆಸರು ಹೇಳದಿದ್ದರೂ, ಕಾಲ್ಪನಿಕ ದ್ವೀಪದಲ್ಲಿ ಸಂಗತಿಗಳನ್ನು ನಿರ್ಮಾಣ ಮಾಡಿದ್ದರೂ ಅದು ನಮ್ಮ ದೇಶದ ತುರ್ತುಪರಿಸ್ಥಿತಿಯನ್ನೇ ಜರಗಿಸುತ್ತದೆ ಅಥವಾ ಸಂಭವಿಸುತ್ತದೆ.

ಕಾಳಿಚರಣನ ವಿಚಾರಣೆಯ ಸಂದರ್ಭದಲ್ಲಿ "ಆರ್ಡರ್ ಆರ್ಡರ್. ಅಧ್ಯಕ್ಷರ ವಿಷಯ ಮಾತಾಡಬೇಡಿ. ಮಾನ್ಯ ಅಧ್ಯಕ್ಷರು ಪ್ರಶ್ನಾತೀತರು" ಎಂದು ನ್ಯಾಯಾಧೀಶ ಅನ್ನುವುದು, ಕಲಮಂತ ತನ್ನ ಅಧ್ಯಕ್ಷೀಯ ಭಾಷಣದಲ್ಲಿ "ತುರ್ತು ಪರಿಸ್ಥಿತಿ ಬಂದಾಗಿನಿಂದ ಜನರು ಅತ್ಯಂತ ಶಿಸ್ತಿನಿಂದ ವರ್ತಿಸುತ್ತಾರೆ. ಮುಂದಿನ ದಶಕದಲ್ಲಿ ಇನ್ನಷ್ಟು ಸಮೃದ್ಧತೆ ನಮ್ಮ ಗುರಿ" ಎನ್ನುವುದು, ಸರ್ವಾಧಿಕಾರಿಯನ್ನು ಪ್ರತಿಭಟಿಸಿದವರನ್ನೆಲ್ಲ

ಜೈಲಿಗೆ ತುಂಬುವುದು, ಜೈಲಿಗೆ ಹೋದವರ ಪತ್ತೆಯೇ ಇಲ್ಲದಿರುವುದು, ಸ್ಥಾನಬದ್ಧತೆಯಲ್ಲಿಟ್ಟಿರುವವರನ್ನು ವಿಚಾರಣೆಗೇ ಗುರಿಪಡಿಸದಿರುವುದು ಎಲ್ಲ ನಮ್ಮ ತುರ್ತು ಪರಿಸ್ಥಿತಿಯ ತಾಜಾ ಸಂಗತಿಗಳಾಗಿ ಸಂಭವಿಸುತ್ತವೆ.

ಸರ್ವಾಧಿಕಾರಿಯು ಕೊನೆಯಲ್ಲಿ ತನಗೆ ತಾನೇ ಗುಂಡು ಹಾಕಿಕೊಂಡು ಸಾಯುವುದು ಹಿಟ್ಲರನ ಅಂತ್ಯವನ್ನು ನೆನಪಿಸುತ್ತದೆ. ಹೀಗೆ ಕಾದಂಬರಿ ಒಂದು ತಾತ್ವಿಕ ಸ್ವರೂಪವನ್ನೇ ಪಡೆದುಕೊಳ್ಳುತ್ತದೆ.

ಎಲ್ಲೆಲ್ಲಿ ಸ್ವಾತಂತ್ರ್ಯಕ್ಕೆ ಕುತ್ತು ಬಂತೊ ಅಲ್ಲಲ್ಲಿ ಸಾವಕಾಶ ಪ್ರತಿಭಟನೆ ತಲೆ ಎತ್ತುತ್ತದೆ. ಆದರೆ ಆ ಪ್ರತಿಭಟನೆ ಒಂದು ಸಾಮೂಹಿಕ ರೂಪು ಪಡೆದು ಶಕ್ತಿಶಾಲಿಯಾಗಬೇಕಾದರೆ ಕಾಲ ಪಕ್ವವಾಗಬೇಕಾಗುತ್ತದೆ. ಅದಕ್ಕಾಗಿ ಜನತೆ ಸಹಿಸಬೇಕಾದ ತ್ಯಾಗ ಕೂಡ ಅಪಾರವಾಗಿರುತ್ತದೆ.

ಸುಲು ದ್ವೀಪದಲ್ಲಿ ಸಹ ಈ ಪ್ರತಿಭಟನೆ ಸಾವಕಾಶ ಆರಂಭವಾಗುತ್ತದೆ. ಮೊದಲು ಒಂಟಿ ಪ್ರಯತ್ನವಾಗಿ ಸ್ಫೋಟವಾದದ್ದು ಹಾನಿಗೇ ಕಾರಣವಾಗುತ್ತದೆ. ಆದರೆ ಇತಿಹಾಸದಿಂದ ಜನತೆ ಪಾಠ ಕಲಿಯುತ್ತದೆ. ಚರಿತ್ರೆಯ ಕ್ರಿಯಾತ್ಮಕತೆಗೆ ಇದೊಂದು ಪ್ರತೀಕವಾಗುತ್ತದೆ.

ದೌರ್ಜನ್ಯ ಹೆಚ್ಚಾದ ಹಾಗೆ ಸುಲಿಗೆಯ ಶೋಷಣೆಯ ಝಳ ಸರ್ವವ್ಯಾಪ್ತಿಯಾದಾಗ ಜನ ತನ್ನನ್ನು ನಡೆಸುವ ನೇತಾರನಿಗಾಗಿ ಹುಡುಕಾಡುತ್ತದೆ. ಅಥವಾ ಅದು ತಾನೇ ಸೃಷ್ಟಿಸಿಕೊಳ್ಳುತ್ತದೆ. ಅಂಥ ಮುಂದಾಳ್ತನ ಸಿಕ್ಕಿದಾಗ ಸಾಮಾನ್ಯರೆನ್ನುವ ಜನ ಅಸಾಮಾನ್ಯರಾಗುತ್ತಾರೆ.

ಸುಲುವಿನಲ್ಲಿ ವಿದ್ಯಾರ್ಥಿಗಳು, ಬುದ್ಧಿ ಜೀವಿಗಳು, ಮಹಿಳೆಯರು, ರೈತರು, ಕೂಲಿಗಳು ಎಲ್ಲರೂ ಸರ್ವಾಧಿಕಾರದ ಕ್ರೂರ ಕುಲುಮೆಯಲ್ಲಿ ಬೇಯ ತೊಡಗಿದಂತೆ ಜಾಗೃತಿ ಸಹ ಉಂಟಾಗುತ್ತದೆ.

ಜನತೆಯ ಅದಮ್ಯ ಪ್ರತೀಕಾರದೆದುರಲ್ಲಿ ಪೋಲೀಸು, ಸೈನ್ಯ ಪಡೆ ಸಹ ಕುಸಿಯುತ್ತದೆ ಎಂಬ ಚಾರಿತ್ರಿಕ ಸತ್ಯವನ್ನು ಕಾದಂಬರಿ ಅನಾವರಣ ಮಾಡುತ್ತದೆ.

ಕಾದಂಬರಿ ಅಧ್ಯಾಯ ಅಧ್ಯಾಯದ ಗುಂಟ ಬೆಳೆಯುತ್ತ ಹೋಗುವುದಿಲ್ಲ. ಬದಲಾಗಿ ವರದಿಯಾಗಿ, ಪ್ರಜ್ಞಾ ಪ್ರವಾಹದ ಶೈಲಿಯಾಗಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಇದು ಕಾದಂಬರಿಯ ತಂತ್ರ ವೈಶಿಷ್ಟ್ಯ ಕೂಡ ಹೌದು.

ನಮಗೇಕೆ ರಾಜಕೀಯ, ನಮ್ಮ ಜೀವನದ ಮಜ ನಮಗಿರಲಿ ಎಂದುಕೊಳ್ಳುವ ಲಾರಾ ಕೊನೆಗೆ ಮಹಾ ಪ್ರತಿಭಟನೆಯ ಮತ್ತು ಸಂಘಟನೆಯ ನೇತಾರಳಾಗಿ ಬೆಳೆಯುವುದು ತುಂಬಾ ಕಲಾತ್ಮಕವಾಗಿದೆ.

ಕಾದಂಬರಿಯ ಅನೇಕ ಹೃದಯಸ್ಪರ್ಶಿ ಸನ್ನಿವೇಶಗಳು ವಸ್ತು ಧ್ವನಿಯನ್ನು ತುಂಬುತ್ತದೆ.

ನಮ್ಮ ದೇಶದ ತುರ್ತುಪರಿಸ್ಥಿತಿಯ ವಾಸ್ತವಿಕ ಸನ್ನಿವೇಶದ ಗಾಢವಾದ ಅನುಭವವನ್ನು ಒಂದು ಕಾಲ್ಪನಿಕ ಶಿಲ್ಪದಲ್ಲಿ ಕಡೆದು ಒಂದು ಭಾವಾತ್ಮಕ ಅನುಭವವನ್ನೂ ಒಂದು ಚಾರಿತ್ರಿಕ ವಿಶ್ಲೇಷಣೆಯನ್ನೂ ಒದಗಿಸುವುದರಲ್ಲಿ ಕೃತಿ ಗಣ್ಯ ಎನ್ನಿಸುತ್ತದೆ.

ಕಾದಂಬರಿಯ ಪ್ರಾರಂಭದಲ್ಲಿ ಬರುವ ಸುಜಿ ದ್ವೀಪದ ಜ್ವಾಲಾಮುಖಿಯ ಸಂಕೇತ ಇಡೀ ಕಾದಂಬರಿಯ ಕ್ರಿಯೆಗೆ ಮೈಒಡ್ಡಿಕೊಳ್ಳುವುದರಲ್ಲಿ ಸತ್ಯವಾಗದೆ ದೂರ ಉಳಿಯುತ್ತದೆ. ಕೇವಲ ೧೫–೨೦ ಮೈಲುಗಳಷ್ಟು ದೂರವಿರುವ ಆ ದ್ವೀಪವನ್ನು ಅನಾಗರಿಕವಾಗಿಯೇ ಬಿಡುವುದು, ಬಂಡವಾಳಶಾಹಿಯ ಹಂತಕ್ಕೆ ಸಮೀಪವಿದೆ ಎಂದು ತೋರುವಂತೆ ವಿವರಣೆಗೊಂಡ ಸುಲು-ಕುಲು ದ್ವೀಪಗಳ ಸುಲಿಗೆಯ ಚಕ್ರಕ್ಕೆ ಸಿಲುಕದಿರುವುದು ಅನಾಗರಿಕರಲ್ಲಿಯ ಸ್ವಾತಂತ್ರ್ಯ ಸೌಜನ್ಯವನ್ನು ತೋರುವುದಕ್ಕಾಗಿ ನಿರ್ಮಿಸಿದಂತಿದೆಯಲ್ಲದೆ, ಅನುಭವದಲ್ಲಿ ಸತ್ಯವಾಗಿ ಸಂಭವಿಸುವುದಿಲ್ಲ. ಲೇಖಕಿ ಕೃತಿಯಲ್ಲಿ ತಾನು ಫೆಂಟಸಿಯನ್ನು ಬಳಸಿದ್ದೇನೆ ಎಂದುಕೊಂಡರೂ ಕೂಡ ಈ ಮಾತು ಸತ್ಯವಾಗುತ್ತದೆ. ಇದನ್ನು ಹೊರತಾಗಿ ಕಾದಂಬರಿಯ ಆಶಯ ಭಂಗಗೊಳ್ಳಬೇಕಾದುದೇನೂ ಇಲ್ಲ.

ಮಾಧವಿ

"ಭಾರತೀಯ ನಾರಿ ಅನೇಕ ಸಾಮಾಜಿಕ ಸ್ತರಗಳ, ಐತಿಹಾಸಿಕ ಯುಗಗಳ ಮತ್ತು ರಾಜಕೀಯ ಪರಿಸ್ಥಿತಿಗಳ ಮೂಲಕ ಹಾದು ಬಂದಿದ್ದಾಳೆ. ಬೆಂಕಿಯನ್ನೂ, ನೀರನ್ನೂ ಆಕೆ ಒಂದೇ ರೀತಿಯಲ್ಲಿ ದಾಟಿ ಬಂದಿದ್ದಾಳೆ. ಸೇವೆಯೇ ಅವಳ ಸ್ವಭಾವವಾಗಿದೆ. ತ್ಯಾಗವೇ ಅವಳ ಪಾಥೇಯವಾಗಿದೆ - ಅಂದರೆ ಬಾಳಿನ ಬುತ್ತಿಯಾಗಿದೆ. ಈ ಕಥೆ ಉದಾತ್ತವಾಗಿದೆ: ಕರುಣಾಜನಕವಾಗಿದೆ; ಕಠೋರವಾಗಿಯೂ ಇದೆ" ಎಂದು "ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ"(ಅನು:ಪ್ರಧಾನ ಗುರುದತ್ತ–೧೯೭೩) ಎಂಬ ತಮ್ಮ ಪುಸ್ತಕದಲ್ಲಿ ಭಗವತ್‌ಶರಣ ಉಪಾಧ್ಯಾಯ ಬರೆಯುತ್ತಾರೆ.

ಕ್ರಿ. ಪೂರ್ವ ಸುಮಾರು ೧೦೦೦ ವರ್ಷಗಳ ಹಿಂದಿನ ಸಾಮಾಜಿಕ ಸಂದರ್ಭದಲ್ಲಿ ಹೆಣ್ಣಿನ ಅಸಹಾಯಕತೆ, ಅಸ್ವಾತಂತ್ರ್ಯ, ಒಟ್ಟಾರೆಯಾದ ಅವಳ ಬಾಳಿನ ನೋವಿನ ಒಂದು ಕಟುಸತ್ಯದ ವ್ಯಾಖ್ಯಾನವನ್ನು 'ಮಾಧವಿ' ಕೊಡುತ್ತದೆ.

"ಆ ಶೋಷಿತ ಸಮಾಜದಲ್ಲಿ ಮಹಿಳೆ ದಂಗೆಯೇಳುವ ಹಾಗೆಯೇ ಇರಲಿಲ್ಲ. ಪುರುಷ ಪ್ರಧಾನವಾದ ಆ ಸಮಾಜದಲ್ಲಿ, "ಏನು ಎತ್ತ ಎಂದು ಕೇಳುವ ಹಕ್ಕು ಮಹಿಳೆಗೆ ಇರಲಿಲ್ಲ. ಒಂದು ವೇಳೆ ಆಕೆ ಅಂಥ ಪ್ರವೃತ್ತಿಯನ್ನು ತೋರಿದರೆ ಇಡೀ ಸಮಾಜ ಅವಳ ಮೇಲೆ ಮುಗಿಬೀಳುತ್ತಿತ್ತು. ಹೆಂಗಸಿನ ಕರ್ತವ್ಯವೆಂದರೆ ಮಗುವಿಗೆ ಜನ್ಮ ಕೊಡುವುದು ಮಾತ್ರ. ಅದು ಯಾರಿಂದ? ಯಾವ ರೀತಿಯಲ್ಲಿ?' ಎಂದು ಆಕೆ ಪ್ರಶ್ನಿಸುವ ಹಾಗಿರಲಿಲ್ಲ. ಗಂಡಸಿಗೆ ತಮ್ಮ ತ್ಯಾಗ ವಿಧೇಯತೆಗಳಿಂದ ಶರಣಾಗುವವರು ಮಾತ್ರ 'ಆದರ್ಶ' ಮಹಿಳೆಯರು ಎನ್ನಿಸಿಕೊಳ್ಳುತ್ತಿದ್ದರು. ಏಕಪತ್ನಿತ್ವ ಆಗಿನ್ನೂ ಆಚರಣೆಯಲ್ಲಿಲ್ಲವಾದುದರಿಂದ ಪುರುಷ ಎಷ್ಟು ಜನ ಪತ್ನಿಯರನ್ನು ಬೇಕಾದರೂ ಹೊಂದ ಬಹುದಿತ್ತು; ಎಷ್ಟು ಬಾರಿ ಬೇಕಾದರೂ ಮದುವೆಯಾಗಬಹುದಿತ್ತು. ಮದುವೆ ಸಂಖ್ಯೆ ಜಾಸ್ತಿಯಾದಷ್ಟು ಆತನ ಪುರುಷತ್ವದ ಬೆಲೆ ಏರುತ್ತಿತ್ತು ....ಒಟ್ಟಿನಲ್ಲಿ ಪಿತೃ ಪ್ರಧಾನವಾದ ಸಂಸಾರವೇ ಆಗಿನ ಕಾಲದ ಸಮಾಜದ ಬೆನ್ನೆಲುಬಾಗಿತ್ತು. ಹೆಂಗಸು ಯಾವ ವರ್ಣಕ್ಕೆ ಸೇರಿದ್ದರೂ ಸಮಾಜದಲ್ಲಿ ಅವಳ ಸ್ಥಾನ ಶೂದ್ರರಿಗೆ ಸರಿ ಸಮಾನವಾಗಿರುತ್ತಿತ್ತು" ಎನ್ನುವುದು ಇಲ್ಲಿಯ ಚಿಂತಾನಾದ್ರವ್ಯ.

ಆದರೆ ಈ ಕಥೆಯಲ್ಲಿ ಈ ಚಿಂತನಾದ್ರವ್ಯ ತಾನೇ ತಾನಾಗಿ ತನ್ನ ಸ್ವರೂಪ ದಲ್ಲಿ ಎಲ್ಲೂ ತಲೆ ಹಾಕುವುದಿಲ್ಲ. ಆದರೆ ಈ ವೈಚಾರಿಕತೆಯ ವಾಸ್ತವಿಕ ಎಳೆ ಎಲ್ಲಿಯೂ ಗೈರುಹಾಜರಿಯಾಗುವುದಿಲ್ಲ.

"ಸ್ವಾತಂತ್ರ್ಯ ಬಯಸುವ ಇಂಥ ವ್ಯಕ್ತಿ ಎಲ್ಲ ಕಾಲದಲ್ಲೂ ಇರಬಹುದಾದ ಸ್ತ್ರೀ ಮಾತ್ರವಲ್ಲ, ಮಾಧವಿ ಎಲ್ಲ ಕಾಲದ ಶೋಷಿತ ಸ್ತ್ರೀಯರ ಪ್ರತಿನಿಧಿಯಾಗ ಬಲ್ಲಳು ಎಂಬ ಅನ್ನಿಸಿಕೆಯಿಂದ, ಅವಳು ನನ್ನ ಕಾದಂಬರಿಯ ಕೇಂದ್ರ ಪಾತ್ರವಾಗಿ ದ್ದಾಳೆ" ಎಂಬ ಲೇಖಕಿಯರ ಮಾತು ಮುಖ್ಯವಾಗುತ್ತದೆ.

ಈ ಪಾತ್ರದ ಕೇಂದ್ರ ಪ್ರಜ್ಞೆಯಿಂದಲೇ ಕಾದಂಬರಿ ರೂಪ ತಳೆಯುತ್ತ ದಾದ್ದರಿಂದ ಕಾದಂಬರಿ ಶಿಲ್ಪ ನೇರವಾಗಿದೆ. ಇದು ಇಲ್ಲಿಯ ಚೊಕ್ಕತನ ಆಗಿರು ವಾಗಲೇ ಕೊರತೆ ಕೂಡ ಹೌದು.

ತನ್ನ ಗುರುವಾದ ವಿಶ್ವಾಮಿತ್ರನಿಗೆ ಗುರುಕಾಣಿಕೆ ಕೊಡಲು ೮೦೦ ಕುದುರೆ ಗಳನ್ನು ಆಶಿಸಿ ಬಂದ ಗಾಲವ ಋಷಿಗೆ ಯಯಾತಿ ಮಹಾರಾಜ ತನ್ನ ಮಗಳಾದ ಮಾಧವಿಯನ್ನು ದಾನ ಮಾಡಿ ಬಿಡುತ್ತಾನೆ.

ಇಲ್ಲಿಂದ ಮಾಧವಿಯ ಗೋಳಿನ ಕಥೆ ಶುರುವಾಗುತ್ತದೆ. ಮಾಧವಿಯಾದರೂ ಕನಸು ಕಾಣುವ ಷೋಡಶಿ. "ಅವನು ಶೂರನೂ ಉದಾರಿಯೂ ಧರ್ಮಿಷ್ಠನೂ ವಿನಯವಂತನೂ ಆಗಿರಬೇಕು."

"ಈ ಎಲ್ಲ ಗುಣ ಉಳ್ಳವನು ಈ ಪ್ರಪಂಚದಲ್ಲಿ ಸಿಗಬಹುದೆ ಮಾಧವಿ?"

"ಸಿಗಬಹುದು ಚಾರುನೇತ್ರೆ. ಅವನು ಏಕಪತ್ನೀವ್ರತನಾಗಿರಬೇಕು. ನನ್ನೊಬ್ಬಳನ್ನು ಬಿಟ್ಟು ಬೇರೆಯವರನ್ನೇ ನೋಡಬಾರದು."

"ರಾಜ ಎಂದರೆ ಸಾವಿರ ಹೆಂಗಸರ ಸರದಾರ."

"ಉಹೂಂ ನನ್ನ ರಾಜಕುಮಾರ ಹಾಗಲ್ಲ........" ಎನ್ನುವ ಕನಸಿನ ಹೊಂದೇರು–ಆದರೆ ಅಷ್ಟೇ ಸಹಜವಾಗಿ ಹೊತ್ತವಳು. ಅವಳಿಗೆ ಧುತ್ತೆಂದು ಬಂದೊದಗಿದ ವಾಸ್ತವ ಎಷ್ಟು ಕರಾಳವಾದುದು!

ತನಗೆ ಗಂಡು ಹುಟ್ಟಬೇಕೆಂದು ಬಯಸಿದ ಯಯಾತಿ ಈ ಹೆಣ್ಣು ಹುಟ್ಟಿದಾಗಲೇ ಆತ ಅಸಡ್ಡೆ ತೋರಿದ್ದ. ಹೆಣ್ಣಿನ ಕುರಿತಾಗಿರುವ ಉಪೇಕ್ಷೆಯೇ ಮಾಧವಿಯನ್ನು ದಾನ ಮಾಡುವಲ್ಲಿ ಉದಾರಿಯನ್ನಾಗಿ ಮಾಡಿದ್ದು. ಪ್ರಜೆಗಳು ಯಾರೂ ರಾಜನ ಈ ಕೃತ್ಯವನ್ನೇ ದೂರುವುದಿಲ್ಲ. ಅವರು 'ಮಗಳನ್ನೇ ಕೊಟ್ಟು ಬಿಟ್ಟ. ಎಂಥ ದಾನಶೂರ' ಎಂದು ಹೊಗಳುತ್ತಾರೆ. ಆದರೆ ಅಲ್ಲಿ ಈ ಎಲ್ಲ ಧರ್ಮಿಷ್ಠತೆಗೆ ಪ್ರತಿಭಟನೆಯ ಭಾಷ್ಯದ ಸೊಲ್ಲು ಮಾಧವಿಯನ್ನು ಸಾಕಿ ಬೆಳೆಸಿದ ದಾಸಿ ಅವ್ವೆಯಿಂದ ಬರುತ್ತದೆ. (ಯಾಕೆಂದರೆ ಮಾಧವಿಯ ನಿಜವಾದ ಅವ್ವ ಸತ್ತು ಹೋಗಿದ್ದಳು. ಇದು ಕಥೆಯ ಓಟಕ್ಕೆ ಪೂರಕವಾಗಿದೆ. ಅವಳೇ ಇದ್ದಿದ್ದರೆ ಇದರ ಪ್ರತಿಕ್ರಿಯೆ ಹೇಗಾಗುತ್ತಿತ್ತೊ.) ಆದರೆ "ಮಹಾರಾಜರು ಧರ್ಮಿಷ್ಠರಿರಬಹುದು; ಆದರೆ ಹೃದಯವಿಲ್ಲದವರು" ಎಂಬುದು ಸರಿಯಾದ ವ್ಯಾಖ್ಯಾನವಾಗುತ್ತದೆ. ಆದರೆ ಈ ಸಹಜ ಪ್ರತಿಕ್ರಿಯೆ ಕೇವಲ ಶಬ್ದ ಬರದ ಮಾತು ಅಷ್ಟೆ.

"ನಾನು ರಾಜಕುಮಾರಿ ಆಗದೆ ಯಾರಾದರೂ ಬಡವರ ಮನೆಯಲ್ಲಿ ಹುಟ್ಟಿದಿದ್ದರೆ ಇಂಥ ಅವಸ್ಥೆ ಬರುತ್ತಿರಲಿಲ್ಲ ಅವ್ವೆ!" ಎಂಬುದಕ್ಕೆ "ಎಲ್ಲಿ ಹುಟ್ಟಿದರೂ ಹೆಣ್ಣಿಗೆ ದುಃಖ ತಪ್ಪಿದ್ದಲ್ಲ ಮಗೂ. ಇದು ಹಾಳು ಬಾಳು" ಎಂಬ ಅವ್ವೆಯ ಪ್ರತಿಕ್ರಿಯೆ ಹೆಣ್ಣು ಇಡೀಯಾಗಿ ಶೋಷಿತ ವರ್ಗಕ್ಕೆ ಸೇರಿ ಹೋದ ವಸ್ತುಸ್ಥಿತಿಯನ್ನು ತೋರುತ್ತದೆ.

ಮಾಧವಿ ಮೂರು ರಾಜರ ಆಶ್ರಯದ ರಾಣಿ ವಾಸಕ್ಕೂ ಒಬ್ಬ ಋಷಿಯ ಆಶ್ರಯಕ್ಕೂ ಸೇರಿ ಒಬ್ಬೊಬ್ಬರಿಂದ ಒಂದೊಂದು ಗಂಡು ಮಗುವನ್ನು ಹಡೆಯುತ್ತಾಳೆ.

ಅಯೋಧ್ಯಾ ಪತಿಯಾದ ಹರ್ಯಶ್ವನಿಗೆ ಸುಮಾರು ವಯಸ್ಸು ಐವತ್ತು. ಮಾಧವಿ "ಈತನೇ ಹರ್ಯಶ್ವ ಮಹಾರಾಜನೇ? ಇವನಿಗೆ ನನ್ನ ತಂದೆಯ ವಯಸ್ಸಿರಬಹುದು", ಎಂದುಕೊಳ್ಳುತ್ತಾಳೆ. "ಮಾಧವಿಯ ಕಣ್ಣುಗಳಲ್ಲಿ ನೀರು ತುಂಬಿ ಕೊಂಡಿತು".

ಹರ್ಯಶ್ವ ಮತ್ತೆ ಮತ್ತೆ ಮಾಧವಿಯನ್ನು ನೋಡಿ, "ಮುನಿವರ್ಯ, ಈ ಕನ್ಯೆಯನ್ನು ನೋಡಿದಾಕ್ಷಣ ಇವಳಲ್ಲಿ ಮೋಹಿತನಾಗಿದ್ದೇನೆ. ಕನ್ಯಾಶುಲ್ಕವೆಂದು ಎಷ್ಟು ಧನಕನಕ ಬೇಕು ಹೇಳಿ?" ನಿರ್ಲಜ್ಜನಾಗಿ ಹೇಳುತ್ತಾನೆ.

ಈ ಧನ ಶಕ್ತಿಯೇ ಹೆಣ್ಣಿನ, ದಾಸರ ಜೀವನವನ್ನೇ ನರಕ ಸದೃಶವನ್ನಾಗಿ ಮಾಡಿದ್ದು.

ಯಾವ ರಾಜನಲ್ಲಿ ಹೋದರೂ ಇದೇ ಹಸಿವು. ಯುದ್ಧ, ಪಾನ, ಹೆಣ್ಣು. ಧರ್ಮ-ಪದ್ಧತಿಯೆಲ್ಲ ಅವರ ಅನುಕೂಲಕ್ಕೆ.

ರಾಣಿವಾಸದಲ್ಲಿ ಮತ್ಸರ, ಪೈಪೋಟಿ, ನಿತ್ಯ ಕಣ್ಣೀರು. ಆದರೆ ಯಾವು ದನ್ನೂ ರಾಜ ಲಕ್ಷ್ಯಿಸುವಂತಿಲ್ಲ. ರಾಣಿಯರು ಗಂಡು ಮಗುವನ್ನೇ ಹಡೆದು ಕೊಡಲು ಮಾತ್ರ ಬಾಧ್ಯರೇ ಹೊರತು ಯಜಮಾನಿಕರಲ್ಲ. ರಾಜರಿಗೆ ಅವರು ನಡೆಸುವ ಸುಲಿಗೆ ಈ ಅಧಿಕಾರವನ್ನು ದೊರಕಿಸಿಕೊಟ್ಟಿದೆ.

"ಯಜ್ಞ ವೇದಿಕೆಯಲ್ಲಿ ನಡೆಯುತ್ತಿದ್ದ ಹೋಮಗಳನ್ನೆಲ್ಲ ವೀಕ್ಷಿಸುತ್ತಿದ್ದ ಮಾಧವಿಗೆ ಒಂದು ಕ್ಷಣ ಅನಿಸಿತು. ಈ ಅಶ್ವಮೇಧ ಯಾಗಕ್ಕಾಗಿ ಸಹಸ್ರ ಕೋಟಿ ವರಹಗಳನ್ನಾದರೂ ವ್ಯಯ ಮಾಡಿರಬೇಕು. ಇದರಿಂದ ಯಾರಿಗೆ ಪ್ರಯೋಜನ? ತಂದೆ ಯಯಾತಿಯೂ ಇಂಥ ಯಾಗಗಳನ್ನು ಮಾಡಿದ್ದ. ಆಗ ಪ್ರಜೆಗಳ ಮೇಲೆ ವಿಶೇಷ ತೆರಿಗೆ ಬೀಳುತ್ತಿತ್ತು. ತೆರಿಗೆ ಕೊಡದವರಿಗೆ ರಾಜಭಟರು ಹೊಡೆಯುತ್ತಿದ್ದ ರಂತೆ. ಬಡವರ ಮನೆಗಳಲ್ಲಿ ಸಿಕ್ಕಿದ ಸಾಮಾನುಗಳನ್ನು ದೋಚಿಕೊಂಡು ಬರುತ್ತಿದ್ದರಂತೆ. ಇವು ದಾಸಿಯರು ಹೇಳುತ್ತಿದ್ದ ಕತೆಗಳು. ಅಂಥವು ಈ ರಾಜ್ಯದಲ್ಲಿಯೂ ನಡೆದಿರ ಬೇಕು." ಈ ಅನ್ನಿಸಿಕೆ ಅಂದಿನ ಸಾಮಾನ್ಯ ಪರಿಸ್ಥಿತಿಯೇ ಆಗಿತ್ತು.

ರಾಜರಲ್ಲಿ ಮಾತ್ರ ಹೀಗಿತ್ತು ಎಂದೇನೂ ಅಲ್ಲ. ಅಂದಿನ ಸಮಾಜದ ಗಣ್ಯ ವರ್ಗಗಳಾದ ಕ್ಷತ್ರಿಯ, ಬ್ರಾಹ್ಮಣರಲ್ಲಿ ಇದೇ ಸ್ಥಿತಿಯಿತ್ತು.

ಮಾಧವಿಯನ್ನು ವಿಶ್ವಾಮಿತ್ರನಲ್ಲಿ ಒಯ್ದಾಗ, "ಎಂಟುನೂರು ಅಶ್ವಗಳ ಬದಲಾಗಿ ಈ ಮಾಧವಿಯನ್ನೇ ಸ್ವೀಕರಿಸಿ ಅಂತ ಹೇಳಿ ಇವಳನ್ನು ನನ್ನಲ್ಲಿ ತಂದು ಬಿಟ್ಟಿದ್ದರೆ ಎಷ್ಟು ಚೆನ್ನಾಗಿತ್ತು" ಎಂದುಕೊಳ್ಳುವ ವಿಶ್ವಾಮಿತ್ರ "ಕಾಮವನ್ನು ಬೇಕಾದ ಹಾಗೆ ಸವಿದೋಳು ನೀನು. ಅದಕ್ಕೇ ನಿನಗೆ ಬಯಕೆಯಿಲ್ಲ. ಆದರೆ ನನಗಿರೊ ಹಸಿವು ಹಲವು ವರ್ಷದ್ದು. ಅದನ್ನು ತಣಿಸದೇ ಹೋದರೆ ಹುಚ್ಚನಾಗ್ತೀನಿ" ಎಂದು ನಗ್ನನಾಗುತ್ತಾನೆ.

ಹೆಣ್ಣು ಇವರೆಲ್ಲರ ಕಾಮದ ಹುಚ್ಚಿಗೆ ಬಲಿಪಶು ಮಾತ್ರ.

ಈ ಬಲಿಪಶುಗಳ ಪ್ರತಿಕ್ರಿಯೆ ಕಾದಂಬರಿಗುಂಟ ದಾಖಲಾಗಿದೆ. ಆದರೆ ಇವು ಅಂದಿನ ಸಾಮಾಜಿಕ ವ್ಯವಸ್ಥೆಯ ಮಧ್ಯೆ ಉಡುಗಿ ಹೋಗಿವೆ.

ಮಾಧವಿಯು ಜೊತೆ ಗಾಲವ ಋಷ್ಯಾಶ್ರಮದ ಆಶ್ರಯ ಪಡೆದಾಗ ಅಲ್ಲಿ ನಡೆಯುವ ಬ್ರಹ್ಮಜಿಜ್ಞಾಸೆ ಒಂದು ಉತ್ತಮ ಸಂದರ್ಭ.

"ಪುಣ್ಯಲೋಕವನ್ನು ಪಡೆಯಲು ಯಾವ ಯಾವ ಮಾರ್ಗಗಳು?"

"ಸ್ವರ್ಗ ಪ್ರಾಪ್ತಿಗೆ ಏಳು ಮಾರ್ಗಗಳಿವೆಯೆಂದು ನಮ್ಮ ಗುರುಗಳು ಹೇಳುತ್ತಿದ್ದರು. ತಪಸ್ಸು, ಧನ, ಶಮ, ದಮ, ಲಜ್ಜೆ, ಋಜುತ್ವ ಮತ್ತು ಸರ್ವ ಭೂತಾನುಕಂಪ".

ಇದನ್ನು ಕೇಳಿಸಿಕೊಂಡ ಮಾಧವಿ ಋಷಿ ಪತ್ನಿಯಲ್ಲಿ ಕೇಳುತ್ತಾಳೆ. "ಸರ್ವ ಭೂತಾನುಕಂಪವಿದ್ದಿದ್ದರೆ ಗಾಲವರು ನನ್ನನ್ನು ಬಲಿಪಶುವನ್ನಾಗಿ ಮಾಡುತ್ತಿದ್ದರೆ ಅಕ್ಕಾ....?

ಅನುಕಂಪದಿಂದ ಋಷಿ ಪತ್ನಿ, "ತಂಗಿ, ಇವು ಉಪದೇಶಿಸಲಿಕ್ಕೆ ಇರುವಂಥವು. ಋಷಿಗಳೆಲ್ಲ ಹೀಗೇ ನಡೆಯಬೇಕೆಂಬ ನಿರ್ಬಂಧವೇನೂ ಇಲ್ಲವಲ್ಲ!" ಇದರ ಸತ್ಯಾಸತ್ಯತೆಗೆ ನಮಗೆ ಸಾಕಷ್ಟು ನಿತ್ಯ ನಿದರ್ಶನಗಳು ಸಿಕ್ಕುತ್ತವೆ.

ವಿಶ್ವಾಮಿತ್ರಾಶ್ರಮದಲ್ಲಿ ಯದು ಎಂಬ ವಟು ವಿಶ್ವಾಮಿತ್ರನ ವ್ಯಾಖ್ಯಾನದಿಂದ ಸಂತುಷ್ಟನಾಗುವುದಿಲ್ಲ. ಆದರೆ ಅದನ್ನು ಕೇಳುವವರು ಯಾರು? ಅದನ್ನು ಆತ ಮಾಧವಿಯಲ್ಲಿ ಹೇಳಿಕೊಳ್ಳುತ್ತಾನೆ. ಆ ಪ್ರತಿಭಟನೆಯ ಧ್ವನಿ ಕೇಳಿ ಮಾಧವಿ ಬೆರಗಾಗಿ ಸಂತೋಷಗೊಳ್ಳುತ್ತಾಳೆ.

ಅದೇ ಹುಡುಗ ಆಶ್ರಮದಲ್ಲಿ ಹಾವು ಕಚ್ಚಿ ಸತ್ತಾಗ ವಿಶ್ವಾಮಿತ್ರ ಏನೂ ಆಗದಂತೆ ಬೂದಿ ಮಾಡಿಬಿಡಿ ಎನ್ನುತ್ತಾನೆ. ಆಗ ಮಾಧವಿ ಮಾನವೀಯ ಅನುಕಂಪ ತುಂಬಿ, "ಅಯ್ಯೋ ಬೇಡಿ. ಇಷ್ಟು ಸಣ್ಣ ಹುಡುಗನನ್ನು ಸುಟ್ಟು ಬಿಡೋದೆ ? ಅವನನ್ನು ಬದುಕಿಸಿ. ಇಷ್ಟು ದೇವರನ್ನು ನೀವು ಒಲಿಸಿಕೊಂಡಿದ್ದೀರಿ. ನಿಮ್ಮ ಪ್ರಾರ್ಥನೆಗೆ ದೇವತೆಗಳು ಇಲ್ಲ ಅನ್ನೋದಿಲ್ಲ" ಎಂದು ಗೋಗರೆಯುತ್ತಾಳೆ.

ವಿಶ್ವಾಮಿತ್ರ ಪ್ರಶಾಂತನಾಗಿಯೇ "ಆಯುಸ್ಸು ಮುಗಿದ್ಮೇಲೆ ಬದಕ್ಕೋಕಾಗಲ್ಲ ಮಾಧವಿ" ಎಂದ ತಕ್ಷಣ ಮಾಧವಿ ಸಿಡಿದೆದ್ದು "ಹಾಗಾದ್ರೆ ನಿಮ್ಮ ತಪಸ್ಸಿನ ಫಲ ಇಷ್ಟೆ ಏನು ? ಅದರಿಂದ ಯಾರಿಗೂ ಪ್ರಯೋಜನವಾಗದಿದ್ದರೆ ಅಂಥದು ಇದ್ದೇನು ಸಾರ್ಥಕ?" ಸವಾಲು ಹಾಕುವುದು ಮಾಧವಿಯ ವ್ಯಕ್ತಿತ್ವದ ಸಹಜ ಬೆಳವಣಿಗೆಯಾಗಿದ್ದಂತೆಯೇ ಲೇಖಕಿಯರು ನಿಂತಿರುವ ಪಾತಳಿಯನ್ನು ತೋರಿಸುತ್ತದೆ.

ಯದುವಿನ ಸಾವಿಗಾಗಿ ಅಷ್ಟು ನಿರ್ಲಕ್ಷ್ಯವಾಗಿರುವ ವಿಶ್ವಾಮಿತ್ರನ ಮಾನಸಿಕ ಹಿನ್ನೆಲೆಯಲ್ಲಿ ಯದು ತನ್ನ ಬ್ರಾಹ್ಮಜಿಜ್ಞಾಸೆಗೆ ಸೆಟೆದು ನಿಲ್ಲುವ ವ್ಯಕ್ತಿತ್ವದ ಚಿಗುರು ಎಂಬುದೂ ಕಾರಣವಾಗಿದೆ. ತಮಗೆ ಪ್ರತಿಭಟನೆ ಒಡ್ಡಿದವರನ್ನು ನಾಶ ಮಾಡಿಬಿಡುವುದು ಅವರಿಗೆ ಸಹಜವೇ ಆಗಿದೆ.

ಈ ಎಲ್ಲ ದೇವದರ್ಶನದ ಟೊಳ್ಳುತನವನ್ನು ಬಯಲು ಮಾಡುವ ಇನ್ನೊಂದು ಸನ್ನಿವೇಶ ಬಹಳ ಶಕ್ತಿಯುತವಾಗಿದೆ. ಅದೇ ದಿವೋದಾಸನು ಮಾಡಿಸುವ ಪುತ್ರಕಾಮೇಷ್ಟಿ ಯಜ್ಞ.

"ಆಗ ಭಾರದ್ವಾಜರು ಉಚ್ಚಕಂಠದಿಂದ ಹೇಳತೊಡಗಿದರು. ಮಹಾರಾಜ ಆಹವನೀಯ ಯಜ್ಞ ಕುಂಡದಿಂದ ಎಣೆಯಿಲ್ಲದ ಕಾಂತಿಯುಳ್ಳ ದೊಡ್ಡ ಪುರುಷಾಕೃತಿ ಉದ್ಭವಿಸಿದೆ ನೋಡು."

"ದಿವೋದಾಸ ಕಣ್ಣು ಪಿಳುಕಿಸಿ ನೋಡಿದ. ಬೆಂಕಿಯ ಹೊರತು ಮತ್ತೇನೂ ಅವನ ಕಣ್ಣಿಗೆ ಕಾಣಲಿಲ್ಲ."

"ಭಾರದ್ವಾಜರ ಧ್ವನಿ ಮುಂದುವರಿಯಿತು. ಮಹಾವೀರ್ಯವುಳ್ಳ ಕೆಂಪು ಕಪ್ಪು ಬಣ್ಣಗಳಿಂದ ಕೂಡಿದ ವಸ್ತ್ರವನ್ನು ಧರಿಸಿರುವ ಈ ದೇವತೆಯನ್ನು ನೋಡು. ಮುಖ ಕೆಂಪಗೂ, ಧ್ವನಿ ದುಂದುಭಿಯಂತೆಯೂ, ಕೂದಲು ಸಿಂಹದ ಮೈಗೂದಲಿನಂತೆಯೂ ಇರುವ ಈ ದೇವತೆಯನ್ನು ನೋಡಿ ಪ್ರಣಾಮ ಮಾಡು. ಶುಭ ಲಕ್ಷಣಗಳಿಂದ, ದಿವ್ಯಾಭರಣಗಳಿಂದ ಅಲಂಕೃತನಾದ ಈ ಮಹಾಮಹಿಮನಿಗೆ ನಮಸ್ಕಾರ ಮಾಡು."

ಭಾರದ್ವಾಜರು ವರ್ಣಿಸುತ್ತಿದ್ದಂತೆ ಅಂತಹ ಪುರುಷನನ್ನು ಕಾಣಲು ಪ್ರಯತ್ನಿಸಿ ಸೋತ ರಾಜನಿಗೆ ದುಃಖ ಉಂಟಾಯಿತು. ದೇವತೆಗಳು, ಮಹಾಮಹಿಮರು ಕಣ್ಣಿಗೆ ಮಾತ್ರ ಕಾಣುವರಂತೆ. ಆದರೂ ತನಗೆ ದೇವತೆಗಳು ಗೋಚರಿಸಲಿಲ್ಲ ಎಂದು ಮುನಿಗಳ ಮುಂದೆ ಒಪ್ಪಿಕೊಳ್ಳಲು ಅವನ ಮನಸ್ಸು ಒಡಂಬಡಲಿಲ್ಲ.

"ದಿವೋದಾಸ ಅಗ್ನಿಗೆ ಎರಡು ಕೈಗಳನ್ನೂ ಮುಗಿದು ನಮಸ್ಕರಿಸಿ ಕೃತಾರ್ಥನಾದೆ ಎಂದ."

ಬಹಳ ಸ್ಫುಟವಾದ ಮತ್ತು ಸಹಜವಾದ ಈ ಚಿತ್ರ ನಮಗೆ ಒಂದು ಒಳನೋಟವನ್ನು ಕೊಡುತ್ತದೆ. ಇಡೀ ವ್ಯವಸ್ಥೆಯಲ್ಲಿ ಹೆಪ್ಪುಗಟ್ಟಿರುವ ನಿರರ್ಥಕ ವಿಧಿಯನ್ನು ಇದು ಜಾಲಾಡುತ್ತದೆ.

ವಿಶ್ವಾಮಿತ್ರನಿಂದ ಒಂದು ಗಂಡು ಮಗು ಪಡೆದು ಅದನ್ನು ಅವನಿಗೆ ಅರ್ಪಿಸಿ ಹೊರಡಬೇಕಾದ ಸಂದರ್ಭದಲ್ಲಿ ಗಾಲವ "ನಿನಗೆ ಶುಭವಾಗಲಿ" ಎಂದು ಆಶೀರ್ವದಿಸುತ್ತಾನೆ.

ತಕ್ಷಣ ಮಾಧವಿಯು ಸಿಟ್ಟು ಕಟ್ಟು ಮುರಿದು ಬರುವ ನೀರಿನ ರಭಸದಂತೆ ಸಿಡಿದು ಬರುತ್ತದೆ.

"ನಿಮ್ಮ ಆಶೀರ್ವಾದಕ್ಕೆ ಅರ್ಥವಾದರೂ ಏನಿದೆ? ನನ್ನ ಬಾಳು ಚೂರು ಚೂರು ಮಾಡಿದೋರು ನೀವು............ಒಬ್ಬ ಹೆಣ್ಣು ಮಗಳನ್ನು ಯಾಕೆ ಇಂಥ ಚಿತ್ರಹಿಂಸೆಗೆ ಗುರಿಮಾಡಿದ್ರಿ? ನನ್ನನ್ನು ಅಯ್ಯೋ ಅನ್ನಿಸಿದ್ದಕ್ಕೆ ಪ್ರಪಂಚದ ಯಾವ ಹೆಂಗಸು ಯಾವ ಕಾಲಕ್ಕೂ ನಿಮ್ಮನ್ನು ಕ್ಷಮಿಸೊಲ್ಲ!"

"ಗಾಲವ ಮತ್ತಷ್ಟು ಕುಸಿದ."

ಈ ಎಲ್ಲ ಅಂಶಗಳು ಪ್ರತಿಭಟನೆಯ ಸಾಕಾರ ಪಡೆಯುವುದು, ಅವಳು ತನಗಾಗಿ ಏರ್ಪಡಿಸಿದ ಸ್ವಯಂವರದಲ್ಲಿ ತನಗೆ ಸಿಕ್ಕ ಸ್ವಾತಂತ್ರ್ಯವನ್ನು ಕೈಯಲ್ಲಿದ್ದ ಹೂಮಾಲೆಯನ್ನು ನೆಲಕ್ಕೆ ಒಗೆದು ಬರಬರನೆ ವನಕ್ಕೆ ಹೊರಟುಹೋಗುವುದರಲ್ಲಿ.

ಮಾಧವಿಯ ಪ್ರತಿಕ್ರಿಯೆ ಎಲ್ಲರದ್ದೂ ಆಗದ್ದಿರಬಹುದು. ಆದರೆ ಅವಳ ಪ್ರತಿಭಟನೆ ಸಹಜವಾಗಿಯೇ ಆ ಪರಿಸರದಲ್ಲಿ ಮೂಡಿ ಬಂದು ನಮ್ಮನ್ನು ಮರು ಚಿಂತನೆಗೆ ತೊಡಗಿಸುವಷ್ಟು ಶಕ್ತಿಯುತವಾಗಿರುವುದು ಮುಖ್ಯ ಅಂಶ.

ಒಂದು ಪೌರಾಣಿಕ ಹಿನ್ನೆಲೆಯನ್ನು ನಮ್ಮ ಭಾವಸ್ಪಂದನಕ್ಕೆ ಅನುಗೊಳಿಸುವಲ್ಲಿ ಲೇಖಕಿಯರ ಭಾಷೆ ಉದಾರವಾಗಿದೆ. ಸಮರ್ಥವಾಗಿದೆ. ಅಲ್ಲಿ ಬರುವ ರಾಜನ ಆಸ್ಥಾನದ, ಆಶ್ರಮದ, ಬೇಟೆಯ, ಯುದ್ಧದ, ಆಭರಣಗಳ ವರ್ಣನೆ ಈ ಆವರಣವನ್ನು ಸೃಷ್ಟಿಸುವಲ್ಲಿ ಸಫಲವಾಗಿದೆ.

ಮಾಧವಿಯ ಬದುಕಿನಂಥ ಕರುಣಾಮಯ ಬದುಕನ್ನು ಚಿತ್ರಿಸುವಾಗಲೂ ಲೇಖಕಿ ಎಲ್ಲೂ ಸಂಯಮದ ಕಟ್ಟನ್ನು ಮೀರದಿರುವುದು ಕೃತಿಯ ಒಂದು ಹೆಚ್ಚಳವಾಗಿದೆ. ಅಂತೆಯೇ ಇಲ್ಲಿ ಬರುವ ಪ್ರಾಮುಖ್ಯವಲ್ಲದ ಪಾತ್ರಗಳು ಜೀವೋನ್ಮುಖಿಗಳಾಗಿದ್ದು ಮೈತುಂಬಿಕೊಂಡು ಬಂದಿರುವುದೂ ಸಹ ಇಲ್ಲಿಯ ಬೌದ್ಧಿಕಾಂಶದ ಮೇಲೆ ಬೆಳಕು ಚೆಲ್ಲುತ್ತದೆ.

ಅಸಹಜತೆ, ಅತಿರೇಕಗಳು ತಲೆ ಹಾಕದೆ, ಜೀವೋನ್ಮುಖತೆಯನ್ನೇ ಅಂತರಿಕ ಅಂಶವಾಗಿ ಹೊಂದಿರುವುದು ಈ ಕೃತಿ ಒಂದು ಪ್ರಬುದ್ಧ ಕೃತಿಯ ಸಾಲಿಗೆ ಸೇರುತ್ತದೆ.

ತಾತ್ವಿಕ ಆಶಯದ 'ಘೋಷ'

- ಬಿ. ಜನಾರ್ದನ ಭಟ್

೧

'ಘೋಷ' ಕಾದಂಬರಿ ಅನುಪಮಾ ನಿರಂಜನ ಅವರ ಕಾದಂಬರಿಗಳಲ್ಲಿ ವಿಶಿಷ್ಟವಾದದ್ದು. 'ಘೋಷ ಕಾದಂಬರಿ ವಸ್ತು, ಶೈಲಿ, ಆಕೃತಿ, ಕಾಳಜಿ ಈ ಎಲ್ಲ ದೃಷ್ಟಿಗಳಿಂದಲೂ ನನ್ನ ಇತರ ಕಾದಂಬರಿಗಳಿಗಿಂತ ಭಿನ್ನವಾದದ್ದು' ಎಂದು ಅನುಪಮಾ ಅವರು ಮುನ್ನುಡಿಯಲ್ಲಿ ಸೂಚಿಸಿದ್ದಾರೆ. 'ಇಡೀ ಜನಸಮುದಾಯ ವ್ಯವಸ್ಥೆಯ ಕಪಿಮುಷ್ಟಿಯಲ್ಲಿ ಹೇಗೆ ನರಳುತ್ತದೆ ಎಂಬುದನ್ನು ಚಿತ್ರಿಸಿದರೆ ಇಂದಿನ ಸಾಮಾಜಿಕ ಹಾಗೂ ರಾಜಕೀಯ ಸಂದರ್ಭಕ್ಕೂ ಪ್ರಸ್ತುತವಾಗುತ್ತದೆ' ಎಂದು ಭಾವಿಸಿ ಅವರು ಸೃಷ್ಟಿಸಿದ ಕಾದಂಬರಿಯ ಕಥೆ 'ಪ್ರಪಂಚದ ಯಾವುದೇ ಭಾಗದಲ್ಲಿ ಬೇಕಾದರೂ ನಡೆಯಬಹುದು....ಆದ್ದರಿಂದಲೇ ಕಥೆ ಕಾಲ್ಪನಿಕ ದ್ವೀಪವೊಂದರಲ್ಲಿ ಅರಳುತ್ತದೆ'.

ಕಾದಂಬರಿಯ ಕಥಾವಸ್ತು ಹೀಗೆ: ಶಾಂತ ಸಾಗರದ ನೀಲದ್ವೀಪಸ್ತೋಮದಲ್ಲಿ ಮುಖ್ಯವಾದವು ಐದು ದ್ವೀಪಗಳು. ನೀಲದ್ವೀಪ ಕೈಗಾರಿಕೋದ್ಯಮಗಳಿಂದ ಕೂಡಿದ ಶ್ರೀಮಂತ ದ್ವೀಪ. ಇಲ್ಲಿ ವಜ್ರದ ಗಣಿಗಳೂ ಇವೆ. ಮುಲು, ಸುಲು, ಕುಲು ಮತ್ತು ಸುಜಿ ಇತರ ದ್ವೀಪಗಳು. ಸುಲು ಮತ್ತು ಕುಲು ಕೃಷಿ ಪ್ರಧಾನ ದ್ವೀಪಗಳು. ಇಲ್ಲಿ ಬಡಜನರೇ ಹೆಚ್ಚು. ಮುಲುವಿನಲ್ಲಿ ದೇಶದ ದೊಡ್ಡ ಕಾರಾಗೃಹವಿದೆ. ಸುಜಿಯಲ್ಲಿ ಮೂರು-ನಾಲ್ಕು ವರ್ಷಗಳಿಗೊಮ್ಮೆ ಬೆಂಕಿ ಕಾರುವ ಅಗ್ನಿಪರ್ವತ, ಕಾಡು ಮನುಷ್ಯರು, ಕ್ರೂರ ಮೃಗಗಳು ಇದ್ದು ಅಲ್ಲಿಗೆ ಜನ ಹೋಗುವುದಿಲ್ಲ. ಹೋದವರಾರೂ ಹಿಂದೆ ಬರುವುದಿಲ್ಲವೆಂಬ ಪ್ರತೀತಿ. ದೇಶವನ್ನು ಆಳುವವ ಆಜೀವ ಅಧ್ಯಕ್ಷ ಸರ್ವಾಧಿಕಾರಿ ಕಲಮಂತ. ಇದು ಸ್ಥೂಲವಾಗಿ ದೇಶದ ಪರಿಸ್ಥಿತಿ.

ಇಷ್ಟು ವಿವರಗಳಲ್ಲಿಯೇ ಕಾದಂಬರಿಯ ಸನ್ನಿವೇಶವನ್ನು ಊಹಿಸಿಕೊಳ್ಳಬಹುದು. ಒಂದು ದ್ವೀಪ ಶ್ರೀಮಂತವಾಗಿದ್ದು ಉಳಿದ ದ್ವೀಪಗಳನ್ನು ಆಳುತ್ತಿದೆ. ಎರಡು ದ್ವೀಪಗಳು ಬಡತನದಿಂದಿದ್ದು ಆಳಲ್ಪಡುತ್ತವೆ. ಒಂದು ಇಡೀ ದ್ವೀಪವೇ ಕಾರಾಗೃಹಕ್ಕೆ ಮೀಸಲಾಗಿರಬೇಕಾದರೆ ಆ ದೇಶದ ನ್ಯಾಯವ್ಯವಸ್ಥೆಯ ಅನ್ಯಾಯವನ್ನು ಕಲ್ಪಿಸಿಕೊಳ್ಳಬಹುದು. ಕಾಡು ಮನುಷ್ಯರಿರುವ ಬೆಂಕಿ ಕಾರುವ ದ್ವೀಪ ಜನರ ಭಯ, ಕುತೂಹಲಗಳಿಗೆ ಕಾರಣವಾದ ನಿಗೂಢ ದ್ವೀಪ. ಮನುಷ್ಯನ ಸುಪ್ತ ಚೇತನಕ್ಕೂ ಒಂದು ಸಂಕೇತವಾಗಿರಬಹುದಾದ ಈ ಸುಜಿ ದ್ವೀಪದ ಪ್ರಸ್ತುತತೆಯನ್ನು ಮುಂದೆ ಪರಿಶೀಲಿಸೋಣ.

ಕಾದಂಬರಿಯ ಪ್ರಾರಂಭದಲ್ಲಿ ಸುಲು ದ್ವೀಪದಲ್ಲಿ ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಡುವ ಒಂದು ಗುಂಪು ನ್ಯಾಯನಿಷ್ಠ ಸಮತಾವಾದಿಗಳು ಹೇಗೆ ದಮನಿಸಲ್ಪಡುತ್ತಾರೆ ಎಂಬ ಚಿತ್ರಣ ಇದೆ. ಇಳೆಯರಾಜ ಎಂಬವ ಆ ಊರಿನ ದುಷ್ಟ ಜಮೀನುದಾರ. ಅವನ ಶೋಷಣೆಯಿಂದ ತಪ್ಪಿಸಿಕೊಳ್ಳಲು ಹರಿಚರಣ ಎಂಬ ಸಮಾಜ ಸೇವಕ ಸಹಕಾರ ಸಂಘ ಸ್ಥಾಪಿಸಿ ಇಳೆಯರಾಜನ ವಿರೋಧ ಕಟ್ಟಿಕೊಂಡಿದ್ದ. ಹರಿಚರಣ ಹೃದಯಾಘಾತವಾಗಿ ಸತ್ತಾಗ ಅದು ಬಹುಶಃ ಇಳೆಯರಾಜ ಮಾಟ ಮಾಡಿಸಿದ್ದರ ಪರಿಣಾಮ ಎಂದು ಕೂಡ ಕೆಲವರು ಊಹಿಸಿದ್ದರು. ಹರಿಚರಣನ ಹೆಂಡತಿ ಭೂದೇವಿ ಶಿಕ್ಷಕಿಯಾಗಿ ವಿದ್ಯಾಪ್ರಸಾರದ ಮೂಲಕ ಅರಿವಿನ ಕಿಡಿ ಹಚ್ಚುವ ಧ್ಯೇಯ ಉಳ್ಳವಳು. ಹರಿಚರಣನ ಚಿಕ್ಕಪ್ಪನ ಮಗ ಕಾಳಿಚರಣ ಊರಿನ ಕ್ರಾಂತಿಕಾರಿಗಳ ನಾಯಕ. ಅವನ ಜತೆಗಿರುವವರು ಮನು, ಕನು, ಗೇಬ್ರಿಯಲ್, ಸಯ್ಯದ್, ಜಯತಿಲಕ ಮುಂತಾದವರು.

ಕಾಳಿಚರಣನ ತಂಗಿ ಸುಜಲಳನ್ನು ಇಳೆಯರಾಜನೂ ಅವನ ಸಂಗಡಿಗರೂ ಅತ್ಯಾಚಾರ ಮಾಡಿ ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಒಂದು ರಾತ್ರಿ ಕಾಳಿಚರಣ ತನ್ನ ಮಿತ್ರರೊಂದಿಗೆ ಇಳೆಯರಾಜನ ಮನೆಗೆ ಬೆಂಕಿ ಹಚ್ಚಿ ಇಳೆಯರಾಜನೂ ಅವನ ಕುಟುಂಬದವರೂ ಒಳಗೆ ಬೆಂದುಹೋಗುವಂತೆ ಮಾಡುತ್ತಾನೆ. ಅದು ತನ್ನೊಬ್ಬನದೇ ಕೃತ್ಯ ಎಂದು ಕಾಳಿಚರಣ ಹೇಳಿದರೂ ಪೊಲೀಸರು ಅವನ ಜತೆಗೆ ಮನು, ಕನು ಮತ್ತು ಸಂಪೂರ್ಣ ನಿರಪರಾಧಿಯಾದ ಭೂದೇವಿಯನ್ನು ಕೂಡಾ ಬಂಧಿಸಿ ಮುಲು ಸೆರೆಮನೆಗೆ ಕಳಿಸುತ್ತಾರೆ. ಕಾಳಿಚರಣನಿಗೆ ನೇಣು ಶಿಕ್ಷೆ, ಉಳಿದವರಿಗೆ ಜೀವಾವಧಿ ಶಿಕ್ಷೆ ಆಗುತ್ತದೆ. ಕನು ಜೈಲಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಕೊಲ್ಲಲ್ಪಡುತ್ತಾನೆ. ಅವನಿಗೆ ಸಹಾಯಮಾಡಿರಬಹುದೆಂದು ಶಂಕಿಸಿ ಮನುವನ್ನು ಒಂಟಿ ಸೆಲ್‌ಗೆ ಕಳಿಸಿ ಅವನನ್ನು ಕುರುಡನನ್ನಾಗಿಸುತ್ತಾರೆ.

ಅತ್ತ ದ್ವೀಪ ಸಮುದಾಯದಲ್ಲಿ ಮಾನವ ಹಕ್ಕುಗಳಿಗಾಗಿ ಹೋರಾಟ ಹೆಚ್ಚು ಹೆಚ್ಚು ಬಿರುಸಾಗುತ್ತದೆ. ಕಾಳಿಚರಣನ ನೇಣುಶಿಕ್ಷೆ ರದ್ದಾಗಬೇಕೆಂದು ಒತ್ತಾಯ ಮಾಡಲು ಬೃಹತ್ ಸಭೆ ನಡೆಯುತ್ತದೆ. ಇದರಿಂದ ಸಮಸ್ಯೆ ಸಾಮಾಜಿಕ ಅನ್ಯಾಯದ ವಿರುದ್ಧ ಹೋರಾಟವಾಗಿ ಪ್ರಾರಂಭವಾದದ್ದು ಸರ್ವಾಧಿಕಾರಿ ಪ್ರಭುತ್ವದ ವಿರುದ್ಧ ಹೋರಾಟವಾಗಿ ಬೆಳೆಯುತ್ತದೆ. ಸಭೆಯ ಮೇಲೆ ಪೊಲೀಸರು ಗುಂಡು ಹಾರಿಸಿ ಅನೇಕರನ್ನು ಕೊಲ್ಲುತ್ತಾರೆ. ಕ್ರಾಂತಿ ಪಕ್ಷದ ಅಧ್ಯಕ್ಷ ವೃದ್ಧ ಮಹಾಪಾತ್ರರನ್ನೂ ಇತರ ಅನೇಕರನ್ನೂ ಬಂಧಿಸಿ ಮುಲು ದ್ವೀಪಕ್ಕೆ ಕಳಿಸುತ್ತಾರೆ. ಸರಿಯಾದ ವೈದ್ಯಕೀಯ ಶುಶ್ರೂಷೆ ಇಲ್ಲದೆ ಮಹಾಪಾತ್ರರು ಜೈಲಿನಲ್ಲಿ ಸಾಯುತ್ತಾರೆ. ಅದಕ್ಕಿಂತ ಮೊದಲೇ ಕಾಳಿಚರಣನನ್ನು ಗುಟ್ಟಿನಲ್ಲಿ ನೇಣಿಗೇರಿಸುತ್ತಾರೆ.

ಕ್ರಾಂತಿಕಾರರ ಉತ್ಸಾಹೀ ನಾಯಕ ಜಯತಿಲಕ ಸೆರೆಸಿಕ್ಕಿ ಮುಲು ಕಾರಾಗೃಹ ಸೇರುತ್ತಾನೆ. ದೇಶದಲ್ಲಿ 'ಗಂಡಾಂತರ ಪರಿಸ್ಥಿತಿ' ಹೇರಲ್ಪಡುತ್ತದೆ. ಅದರ ವಿರುದ್ಧ ಬರೆದ 'ಬೆಳಕು' ಪತ್ರಿಕೆಯ ಸಂಪಾದಕ ಸಾಲೊಮನ್, ಎಡ ಪಂಥೀಯ ವಿಚಾರವಾದಿ ಪ್ರೊ। ರಾಜವರ್ಧನ ಬಂಧಿಸಲ್ಪಟ್ಟ ಇತರ ಇಬ್ಬರು ಪ್ರಮುಖರು. ಸೆರೆಸಿಕ್ಕದೆ ಭೂಗತರಾಗಿದ್ದ ಸಯ್ಯದ್, ಗೇಬ್ರಿಯಲ್ ಮತ್ತು ಜಯತಿಲಕನ ಪ್ರೇಯಸಿ ಲಾರಾಳ ಸಾಹಸದಿಂದ ಜಯತಿಲಕ ಜೈಲಿನಿಂದ ತಪ್ಪಿಸಿಕೊಳ್ಳುತ್ತಾನೆ. ಅವನು ಮೊದಲು ಸುಜಿ ದ್ವೀಪಕ್ಕೆ ಹೋಗಿ ಬಿದ್ದರೂ ಅಲ್ಲಿನ ಅನಾಗರಿಕರ ಸಹಾಯದಿಂದ ಸುಲುವಿಗೆ ತಲುಪು ತ್ತಾನೆ. ಅವನು ಗುಪ್ತವಾಗಿ ಜನ ಸಂಘಟನೆ ಮಾಡಿ ನೀಲನಗರದಲ್ಲಿ ಜನಸಾಗರ ಕೂಡಿಸಿ ಅಧ್ಯಕ್ಷ ಕಲಮಂತ ತನಗೆ ತಾನೆ ಗುಂಡು ಹಾರಿಸಿಕೊಂಡು ಸೋಲೊಪ್ಪಿಕೊಳ್ಳುವ ಹಾಗೆ ಮಾಡುತ್ತಾನೆ. ಪ್ರಜಾಪ್ರಭುತ್ವ ಸ್ಥಾಪನೆಯಾಗುತ್ತದೆ. ಇದು ಕತೆಯ ಚೌಕಟ್ಟು.

ಕಾದಂಬರಿಯ ಬಹುಭಾಗ ಮುಲು ಕಾರಾಗೃಹದಲ್ಲಿ ನಡೆಯುತ್ತದೆ. ಮೂರು ದ್ವೀಪ ಜನರಿಗೆ ಒಂದು ದ್ವೀಪ ಕಾರಾಗೃಹ! ಜನರ ದೌರ್ಭಾಗ್ಯಕ್ಕೆ ಇದಕ್ಕಿಂತ ಹೆಚ್ಚಿನ ವಿವರಣೆ ಬೇಕಿಲ್ಲ. ಸರ್ವಾಧಿಕಾರ ಕೊನೆಗೊಂಡಾಗ ಮುಲು ದ್ವೀಪದಿಂದ ಬಿಡುಗಡೆ ಗೊಂಡ ಕೈದಿಗಳು ಮತ್ತು ಅವರ ಸಂಬಂಧಿಕರು ಊರಿಗೆ ಮರಳಲು ದೋಣಿಕಟ್ಟೆಗೆ ಬರುವುದರೊಂದಿಗೆ ಕಾದಂಬರಿ ಕೊನೆಗೊಳ್ಳುತ್ತದೆ. ಮನುಷ್ಯತ್ವ, ಸ್ತ್ರೀಯರಿಗೆ ಗೌರವ, ಗಂಡು ಹೆಣ್ಣಿನ ಪ್ರೀತಿ ಮತ್ತೆ ಅರಳುತ್ತದೆ. ಕಾದಂಬರಿಯ ಕೊನೆ ಹೀಗೆ:

'ಅವನು (ಗೇಬ್ರಿಯಲ್) ಅನುರಾಗ ತುಂಬಿದ ಕಣ್ಣುಗಳಿಂದ ಮಂಜರಿಯನ್ನು ನೋಡುತ್ತಾ, "ಬೇಗ್ಬೇಗ ಬನ್ನಿ, ನೀವು ಹೆಂಗಸ್ರೆಲ್ಲಾ ಮೊದಲ ದೋಣೀಲಿ ಹೊರಟ್ಬಿಡಿ" ಎಂದ.'

ಕಾದಂಬರಿಯ ಪಾತ್ರಗಳು ಒಂದು ಸಾಮೂಹಿಕ ಗುರಿಸಾಧನೆಗಾಗಿ (ಅಥವಾ ಅನಿವಾರ್ಯವಾಗಿ) ವೈಯಕ್ತಿಕ ಜೀವನದ ನೆಮ್ಮದಿಗಳಿಂದ ವಂಚಿತರಾಗಿರುತ್ತಾರೆ. ತಾಯಿ ಸೆರೆಮನೆಗೆ ಹೋದಳೆಂಬ ಕಾರಣಕ್ಕಾಗಿ ಭೂದೇವಿಯ ಮಗಳು ಮಂಜರಿಯ ಮದುವೆ ನಿಶ್ಚಿತಾರ್ಥ ಮುರಿದು ಬೀಳುತ್ತದೆ. ಅವರೆಲ್ಲರ ವೈಯಕ್ತಿಕ ಜೀವನ ಮತ್ತೆ ಸರಾಗವಾಗಿ ನಡೆಯುವುದೆಂಬ ಸೂಚನೆ ಮಂಜರಿಯನ್ನು ಗೇಬ್ರಿಯಲ್ ಪ್ರೀತಿಸ ಲಾರಂಭಿಸುವ ಸುಳಿವಿನಲ್ಲಿದೆ.

೨

ಒಂದು ಜನಸಮುದಾಯದ ಹೋರಾಟದ ಕತೆಯಾದ ಘೋಷದ ಯಾವ ಪಾತ್ರವೂ ಮುಖ್ಯವಾಗದೆ ಒಟ್ಟು ಹೋರಾಟದ ನಡೆ ಮಾತ್ರ ಮುಖ್ಯವಾಗುವುದು. ಆದ್ದರಿಂದ ಇಲ್ಲಿನ ಕೆಲವು ಪಾತ್ರಗಳನ್ನು ಕಾದಂಬರಿಯ ಹೊರಗಿಟ್ಟರೂ ಅಥವಾ

ಇಷ್ಟೆಲ್ಲ ಪಾತ್ರಗಳನ್ನು ಸೇರಿಸಿದರೂ ಕಾದಂಬರಿಯ ಸ್ವರೂಪದಲ್ಲಿ (ಕಥಾ ಸಂವಿಧಾನದಲ್ಲಿ) ಮಹತ್ತರ ಬದಲಾವಣೆ ಆಗುವುದಿಲ್ಲ. ಇಲ್ಲಿನ ಪಾತ್ರಗಳಿಗೆಲ್ಲ ಒಂದೇ ಗುರಿಯಿದೆ. ಅದು ಅನ್ಯಾಯದ ಆಡಳಿತದ ವಿರುದ್ಧ ಹೋರಾಡುವುದು. ಕಾದಂಬರಿಯ ಪ್ರಥಮ ಭಾಗದಲ್ಲಿ ಭೂದೇವಿ ಮತ್ತು ಕೊನೆಗೆ ಜಯತಿಲಕ ಮುಖ್ಯ ಪಾತ್ರಗಳಂತೆ ಕಾಣಿಸುತ್ತಾರೆ.

ತಮ್ಮ ಸಾಮಾಜಿಕ, ರಾಜಕೀಯ ಸಂದರ್ಭದ ವಿರುದ್ಧ ಸಾಗಬೇಕೆಂಬ ಛಲ ಇಲ್ಲದ, ತಮ್ಮ ಕುರಿತು ಮಾತ್ರ ಯೋಚಿಸುವ ಪಾತ್ರಗಳಿದ್ದರೂ ಅವಗು ಕಾದಂಬರಿಗೆ ಅಗತ್ಯರಲ್ಲ. ಕಾರಾಗೃಹಗಳಲ್ಲಿ ಮಹಿಳೆಯರ ಶೋಷಣೆ ಹೇಗೆ ನಡೆಯುತ್ತದೆ ಎಂದು ತೋರಿಸಲು ಕೆಲವು ಮಹಿಳಾ ಕೈದಿಗಳ ಪರಿಚಯ ಮಾಡಿಕೊಡಲಾಗಿದೆ.

ಮಹಿಳಾ ಕೈದಿಗಳ ಶೋಷಣೆಯ ಬಗ್ಗೆಯೇ ಕಾದಂಬರಿ ಬರೆಯಬೇಕೆಂದು ಮೊದಲು ಅನುಪಮಾ ಅವರು ಅಂದುಕೊಂಡಿದ್ದರಂತೆ. 'ಮುಗ್ಧಳಾದ ಹಳ್ಳಿಯ ಹೆಂಗಸೊಬ್ಬಳು ತನ್ನದಲ್ಲದ ತಪ್ಪಿಗೆ ಸೆರೆಮನೆ ಸೇರಿ ಸುಮಾರು ಹದಿನೈದು ವರ್ಷಕಾಲ ನರಕಯಾತನೆ ಅನುಭವಿಸಿದ' ಕುರಿತು Deccan Herald ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನ ಈ ಕಾದಂಬರಿಗೆ ಪ್ರೇರಣೆಯಾಯಿತೆಂದು ಅವರು ಮುನ್ನುಡಿಯಲ್ಲಿ ಹೇಳಿದ್ದಾರೆ.

ಮುಲು ಸೆರೆಮನೆಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಈ ಕಾದಂಬರಿಯಲ್ಲಿ ಮುಖ್ಯವಲ್ಲದ ಒಂದು ಅಂಶವಾಗಿ ಮಾತ್ರ ಕಂಡು ಬರುತ್ತದೆ. ಪ್ರಾರಂಭದಲ್ಲಿ ಭೂದೇವಿಯನ್ನು ಬಂಧಿಸಿ ಮುಲು ಸೆರೆಮನೆಗೆ ತಳ್ಳಿ, ಆಜೀವ ಸೆರೆವಾಸ ಶಿಕ್ಷೆ ವಿಧಿಸುವುದನ್ನು ಓದುವಾಗ ಇದು ಕಾಫ್ಕಾನ ಕಾದಂಬರಿಗಳಲ್ಲಿ ಇರುವಂಥ ಒಂದು ಅತಂತ್ರ ಸ್ಥಿತಿಯ ಚಿತ್ರಣವಾಗಿ ಸಾಗಬಹುದೆಂದು ಅನಿಸುತ್ತದೆ. ಆದರೆ ನಂತರ ಕಾದಂಬರಿಯ ದೃಷ್ಟಿ ಇತರ ಕೈದಿಗಳತ್ತ ಮತ್ತು ಸರ್ವಾಧಿಕಾರದ ವಿರುದ್ಧ ಹೋರಾಟದತ್ತ ಸರಿಯುತ್ತದೆ. ಆಗ ಜೈಲಿನಲ್ಲಿ ನಡೆಯುವ ಕ್ರೌರ್ಯವೂ ಅಂತಿಮವಾಗಿ ಅಧ್ಯಕ್ಷ ಕಲಮಂತನ ಕ್ರೌರ್ಯದ ಪ್ರತೀಕವಾಗಿ, ಒಟ್ಟಿನಲ್ಲಿ ಸರ್ವಾಧಿಕಾರದ ಅನಿಷ್ಟದ ಒಂದು ಮುಖವಾಗಿ ಮೂಡಿ ಬಂದಿದೆ. ಅಂದರೆ ನಮ್ಮ ದೃಷ್ಟಿ ಜೈಲಿನಲ್ಲಿದ್ದಾಗಲೂ ಆಸಕ್ತಿ ಕಲಮಂತನಲ್ಲಿ ಇರುತ್ತದೆ.

ಇದಕ್ಕೆ ಕಾದಂಬರಿಯಲ್ಲಿಯೂ ಆಧಾರಗಳಿವೆ. ಉದಾಹರಣೆಗೆ ಮಲು ನರಳುತ್ತಿರುವಾಗ ಜಯತಿಲಕ ಯೋಚಿಸುವುದು: 'ಮನುಷ್ಯ ಇಷ್ಟು ಕ್ರೂರಿಯಾಗಬಹುದೆ? ಇನ್ನೊಬ್ಬರ ಸಂಕಟದಿಂದ ಇವರಿಗೇನು ಸುಖ ಸಿಗುತ್ತದೆ? ಇಂಥ ನಡವಳಿಕೆಗೆ ಅಧಿಕಾರ ಮದವೇ ಕಾರಣವಲ್ಲವೆ? ನಾಳೆ ಜನತೆಯು ಸರ್ಕಾರ ಅಧಿಕಾರಕ್ಕೆ ಬಂದಾಗ, ಈ ಪಾಷಂಡಿಗಳಿಗೆ ಎಂಥ ಶಿಕ್ಷೆ ವಿಧಿಸಬಹುದು'? (ಪುಟ ೧೨೧)

ಭೂದೇವಿ ನಿಷ್ಕಾರಣವಾಗಿ ಜೈಲು ಸೇರಿದವಳಾದರೂ ಅವಳಿಗೆ ಹೋರಾಟ ಮನೋಭಾವ ತನ್ನ ನಿಕಟವರ್ತಿಗಳಿಂದ ಬಂದಿದೆ. ಜೈಲಿನಲ್ಲಿಯೂ ಅವಳು ಮಹಿಳೆಯರಲ್ಲಿ, ಮಕ್ಕಳಲ್ಲಿ ಅರಿವು ಮೂಡಿಸಲು ಪ್ರಯತ್ನಿಸುತ್ತಾಳೆ; ಸತ್ಯಾಗ್ರಹದ ಮೂಲಕ ಕೆಲವು ಅನ್ಯಾಯಗಳ ವಿರುದ್ಧ ಹೋರಾಡುತ್ತಾಳೆ. ಆದ್ದರಿಂದ ಭೂದೇವಿಯನ್ನು ಒಬ್ಬಳು 'ಮುಗ್ಧಳಾದ ಹಳ್ಳಿಯ ಹೆಂಗಸಿಗೆ' ಹೋಲಿಸಲಾಗುವುದಿಲ್ಲ. ಭೂದೇವಿಯಂತೆ ಇನ್ನು ಕೆಲವು ಮಹಿಳಾ ಕೈದಿಗಳು ಜೈಲಿನಲ್ಲಿದ್ದಾರೆ. ಅವರಲ್ಲಿ ಮೂವರ ಪರಿಚಯ ಓದುಗರಿಗೆ ಆಗುತ್ತದೆ.

ಜುಬೇದಾ ಅನ್ನುವಾಕೆ ಉನ್ಮಾದ ರೋಗದಿಂದಾಗಿ ತನ್ನದೇ ಮಗುವನ್ನು ಕೊಂದು ಜೈಲಿಗೆ ಬಂದವಳು. ಸುಂದರಿ ಗಿಲ್ಡಾ ಸೂಳೆಯಾಗಿದ್ದವಳು. ಪೊಲೀಸ್ ದಾಳಿಯಲ್ಲಿ ಸಿಕ್ಕಿಬಿದ್ದಿದ್ದಳು. ಗಿಲ್ಡಾ ಈಗಾಗಲೇ ಮೂರುವರ್ಷ ಜೈಲಿನಲ್ಲಿ ಕಳೆದಿದ್ದಳು. ಇವರನ್ನೆಲ್ಲ ಜೈಲಿನಲ್ಲಿ ಹಿಡಿದಿಟ್ಟ ಅನ್ಯಾಯಕ್ಕಿಂತಲೂ ಮಿಗಿಲಾದದ್ದು ಮಿನಾ ಅನ್ನುವವಳನ್ನು ಪೊಲೀಸರು ಅತ್ಯಾಚಾರ ಮಾಡಿ ಜೈಲಿಗೆ ತಂದು ಹಾಕಿದ್ದು. ಅವಿವಾಹಿತ ಹುಡುಗಿ ಮಿನಾ ಅತ್ಯಾಚಾರದ ಶಿಶುವನ್ನು ಜೈಲಿನಲ್ಲಿ ಹಡೆಯುತ್ತಾಳೆ.

ಕಾದಂಬರಿ ಗಮನಿಸುವ ನಿಜವಾದ ಅಪರಾಧಿ ಮಾನಸಿಂಹ. ಅವನು ಹೆಂಡತಿಯನ್ನು ಕೊಂದು ಜೈಲಿಗೆ ಬಂದರೂ ಆರಾಮವಾಗಿರುತ್ತಾನೆ. ಅವನು ಪಿಕ್‌ಪಾಕೆಟ್ ಮಾಡಿ ಸಿಕ್ಕಿಬಿದ್ದ ಹುಡುಗನೊಬ್ಬನೊಡನೆ ಸಲಿಂಗ ರತಿ ನಡೆಸುತ್ತಿದ್ದ.

ಇವರನ್ನು ಬಿಟ್ಟರೆ ಉಳಿದ ಪುರುಷ ಕೈದಿಗಳು (ಓದುಗರಿಗೆ ಪರಿಚಯವಾಗುವವರು) ಮಾನವ ಹಕ್ಕುಗಳಿಗಾಗಿ ಹೋರಾಡಿದವರು; ಕಾಳಿಚರಣನೊಂದಿಗೆ ಜೈಲು ಸೇರಿದ ಮನು. ಕನು; ನಂತರ ಹೋರಾಟ ತೀವ್ರವಾದಾಗ ಬಂಧಿಸಲ್ಪಟ್ಟ ಕ್ರಾಂತಿ ಪಕ್ಷದ ಅಧ್ಯಕ್ಷ ಮಹಾಪಾತ್ರ, ಜಯತಿಲಕ, 'ಬೆಳಕು' ಪತ್ರಿಕೆಯ ಸಂಪಾದಕ ಸಾಲೊಮೆನ್, ನೀಲನಗರ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ರಾಜವರ್ಧನ ಇವರು.

೩

ಅನುಪಮಾ ಅವರು ಮಾರ್ಕ್ವೆಸ್‌ನಿಂದ ಸ್ಫೂರ್ತಿಗೊಂಡು ಫ್ಯಾಂಟಸಿಯನ್ನು ವಾಸ್ತವದೊಂದಿಗೆ ಬೆಸೆಯುವ ಪ್ರಯತ್ನ 'ಘೋಷ'ದಲ್ಲಿ ಮಾಡಿದ್ದಾರೆ. ಆದರೆ ಫ್ಯಾಂಟಸಿಯ ಉಪಯೋಗ ಪೂರ್ಣ ಪ್ರಮಾಣದಲ್ಲಿಲ್ಲ. ಕಾದಂಬರಿ ಒಂದು ಕಾಲ್ಪನಿಕ ದ್ವೀಪ ಸಮುದಾಯದಲ್ಲಿ ನಡೆಯುತ್ತದೆ ಅನ್ನುವ ವಿಷಯದಲ್ಲಿ ಅದು ಫ್ಯಾಂಟಸಿಯಲ್ಲ. ಕಾದಂಬರಿಗೆ ನಿಗೂಢತೆಯ ಸ್ಪರ್ಶ ಕೊಟ್ಟಿರುವ ಸುಜಿ ದ್ವೀಪವೇ ಕಾದಂಬರಿಯ ಫ್ಯಾಂಟಸಿಯ ಕೇಂದ್ರ. ಕಲಮಂತ ಹಿಂದಿನ ಅಧ್ಯಕ್ಷ ಕಾರ್ನವಾಲೋನ ಆತ್ಮದೊಂದಿಗೆ ಮಾತಾನಾಡುವ ಒಂದು ಪ್ರಸಂಗವನ್ನೂ ಫ್ಯಾಂಟಸಿಯೆಂದು ಪರಿಗಣಿಸಬಹುದು.

ಸುಜಿ ದ್ವೀಪದಲ್ಲಿ ಮೂರು ನಾಲ್ಕು ವರ್ಷಗಳಿಗೊಮ್ಮೆ ಬೆಂಕಿ ಕಾರುವ ಜ್ವಾಲಾಮುಖಿಯಿದೆ. ಅದರಿಂದ ಹರಿದ ಲಾವಾರಸ ಭೂಮಿಯನ್ನು ಫಲವತ್ತಾಗಿಸುವು ದರಿಂದ ಅಲ್ಲಿ ಹೋಗಿ ಕೃಷಿ ಮಾಡಬೇಕೆಂದು ಕೆಲವು ಯುವಕರು ಬಯಸಿದ್ದರು. ಆ ದ್ವೀಪದ ಕಾಡುಮನುಷ್ಯರು ನರಭಕ್ಷಕರೆಂದು ಪ್ರತೀತಿ. ಕಾಡು ಪ್ರಾಣಿಗಳೂ ಅಲ್ಲಿದ್ದು ಒಟ್ಟಿನಲ್ಲಿ ಜನರಲ್ಲಿ ಭಯ, ಕುತೂಹಲಗಳನ್ನು ಮೂಡಿಸಿದ್ದ ನಿಗೂಢ ದ್ವೀಪ ಸುಜಿ.

ಸುಜಿ ದ್ವೀಪದ ಜ್ವಾಲಾಮುಖಿ ಬೆಂಕಿ ಕಾರುವುದರೊಂದಿಗೆ ಪ್ರಾರಂಭವಾಗುವ ಕಾದಂಬರಿ ಮುಂದೆ ಅದನ್ನು ಹೆಚ್ಚು ಕಡಿಮೆ ಮರೆತು ಬಿಡುತ್ತದೆ. ಅದರ ವಿಷಯ ಮತ್ತೆ ಬರುವುದು ಕಾಳಿಚರಣ ಒಂಟಿ ಸೆಲ್‌ನ ಅಸಹನೀಯ ಏಕಾಂತವನ್ನು ಮೀರಲು ತನ್ನ ಕಲ್ಪನೆಯಲ್ಲಿ ಸುಜಿ ದ್ವೀಪವನ್ನು ಕುರಿತು ಕಣಸು (vision) ಕಾಣುವಾಗ. ಹಿಂದೊಮ್ಮೆ ಹರಿಚರಣ ತಾವಿಬ್ಬರೂ ಸುಜಿ ದ್ವೀಪಕ್ಕೆ ಹೋಗಬೇಕೆಂದು ಆಸೆ ವ್ಯಕ್ತ ಪಡಿಸಿದ್ದ. ಈಗ ಕಾಳಿಚರಣ ತನ್ನ ಕಲ್ಪನೆಯಲ್ಲಿ ಹರಿಚರಣನೊಂದಿಗೆ ಸುಜಿ ದ್ವೀಪಕ್ಕೆ ಹೋದ ಅನುಭವ ಪಡೆಯುತ್ತಾನೆ. ಸುಜಿ ದ್ವೀಪದ ಅನಾಗರಿಕರು ಇವರನ್ನು ಚೆನ್ನಾಗಿ ಉಪಚರಿಸುತ್ತಾರೆ. 'ಪರಸ್ಪರರ ಮಾತು ಅರ್ಥವಾಗದಿದ್ದರೂ ಹೃದಯ ಸಂವಾದ ಆರಂಭವಾಗಿತ್ತು'. ಅಲ್ಲಿ ಕಾಡು ಪ್ರಾಣಿಗಳೂ ಇವರನ್ನು ಉಪಚರಿಸುತ್ತವೆ.

ಮತ್ತೊಮ್ಮೆ ಸುಜಿ ದ್ವೀಪ ಕಾದಂಬರಿಯಲ್ಲಿ ಸಾಕಾರವಾಗುವುದು ಜಯತಿಲಕ ಜೈಲಿನಿಂದ ತಪ್ಪಿಸಿಕೊಂಡು ಬರುವಾಗ ದೋಣಿ ಮುಳುಗಿ ಸುಜಿಯ ತೀರಕ್ಕೆ ಹೋಗಿ ಬಿದ್ದಾಗ. ಕಾಳಿಚರಣನಿಗೆ ಕಂಡ ಕನಸು ಜಯತಿಲಕನಿಗೆ ನನಸಾಗುತ್ತದೆ. ಕಾಡು ಮನುಷ್ಯರು ಜಯತಿಲಕನನ್ನು ಉಪಚರಿಸುತ್ತಾರೆ. ಒಬ್ಬಾಕೆ ಹುಡುಗಿ ಅವನ ಗಾಯ ಗಳಿಗೆ ಮದ್ದು ಲೇಪಿಸುತ್ತಾಳೆ. 'ಮಾತಿಲ್ಲದಿದ್ದರೂ ಪರಸ್ಪರರನ್ನು ಅರ್ಥಮಾಡಿಕೊಳ್ಳ ಬಹುದು ಎಂದು ಜಯತಿಲಕನಿಗೆ ಮೊದಲಬಾರಿಗೆ ಹೊಳೆಯಿತು.' ಅವರ ರೀತಿ ನೀತಿ ಗಳು ಮತ್ತು ಸಂಸ್ಕೃತಿ ನಾಗರಿಕರಿಗಿಂತ ಉತ್ತಮ ಅನಿಸಿತು. ಕೊನೆಗೆ ಆ ಕಾಡು ಜನರೇ ಅವನಿಗೆ ಊರಿಗೆ ಹಿಂದಿರುಗಲು (ದೋಣಿ ಸರಿಪಡಿಸಿಕೊಟ್ಟು) ಸಹಾಯ ಮಾಡುತ್ತಾರೆ.

ಈ ವಿವರಗಳು ಫ್ಯಾಂಟಸಿಯಾಗಿ ಕಾದಂಬರಿಯ ಅರ್ಥ ವಿಸ್ತಾರಕ್ಕೆ ನೆರವಾಗುವುದಿಲ್ಲ. ಬದಲಿಗೆ ಇವು ಕಾದಂಬರಿಯ ಕ್ರಿಯೆಯನ್ನು ಸಂಕೇತಿಸುತ್ತವೆ. ಸುಜಿ ಸ್ವಾತಂತ್ರ್ಯದ ಮತ್ತು ಫಲವತ್ತತೆಯ ಸಂಕೇತವಾಗಿದೆ. ಅದೊಂದು ನಿಗೂಢ ಆಕರ್ಷಣೆಯಾಗಿದೆ. ಜ್ವಾಲಾಮುಖಿಯನ್ನು ಕ್ರಾಂತಿಯೆಂದು ಅರ್ಥೈಸಬಹುದು. ಕೆಲವು ಯುವಕರು ಆ ಹೊಸ ಬದುಕಿನ (ಸ್ವಾತಂತ್ರ್ಯ, ಕ್ರಾಂತಿಗಳ) ಕನಸು ಕಂಡಿದ್ದರು. ಹರಿಚರಣ ಮತ್ತು ಕಾಳಿಚರಣ ಅದನ್ನು ಕುರಿತು ಯೋಚಿಸಿದ್ದರು. ಕಾಳಿಚರಣನಿಗೆ ಅಲ್ಲಿಗೆ ತಲುಪಿದ ಕಾಣ್ಕೆಯಾಗುತ್ತದೆ. ಜಯತಿಲಕ ಸುಜಿಯನ್ನು ತಲುಪುತ್ತಾನೆ; ಅಂದರೆ ಕ್ರಾಂತಿಯನ್ನು ಸಾಧಿಸುತ್ತಾನೆ.

ಜ್ವಾಲಾಮುಖಿ ಕ್ರಾಂತಿಗೆ ಸಂಕೇತವೆಂದು ಭಾವಿಸಿದರೆ ಕಾದಂಬರಿಯ ಪ್ರಾರಂಭ ವನ್ನು ಅರ್ಥಮಾಡಿಕೊಳ್ಳಬಹುದು. ಜ್ವಾಲಾಮುಖಿ ಬೆಂಕಿ ಕಾರಿದಾಗಲೆಲ್ಲ-ಅಂದರೆ ಕ್ರಾಂತಿಯ ಪ್ರಯತ್ನಗಳಾದಾಗಲೆಲ್ಲ - ಅನಿಷ್ಟವೇ ಆಗಿದೆ ಎಂದು ಭೂದೇವಿ ಭಯ ಪಟ್ಟುಕೊಳ್ಳುತ್ತಾಳೆ. ಹಿಂದಿನ ಸಲದ ಅಗ್ನಿಸ್ಫೋಟದ ನಂತರ ಹರಿಚರಣ ಸತ್ತಿದ್ದ. ಈ ಸಲ ಕಷ್ಟಗಳ ಸರಮಾಲೆಯೇ ಬಂದೊದಗಿ ಅಂತಿಮವಾಗಿ ಕ್ರಾಂತಿಕಾರರ ವಿಜಯ ದಲ್ಲಿ ಮುಗಿಯುತ್ತದೆ. ಲಾವಾರಸ ಹರಿದಲ್ಲಿ ಭೂಮಿ ಫಲವತ್ತಾಗುವುದು ಅನ್ನುವುದು ಕ್ರಾಂತಿಯಿಂದಾಗಿ ಒಮ್ಮೆ ಸಾವುನೋವುಗಳು ಬಂದರೂ ಅಂತಿಮವಾಗಿ ನೆಮ್ಮದಿ ಸಿಗುವುದು ಎಂಬುದಕ್ಕೆ ಸೂಚನೆಯಾಗಿದೆ.

ಸರ್ವಾಧಿಕಾರಿ ಕಲಮಂತ ಸಹಜವಾಗಿ ಕ್ರಾಂತಿ ವಿರೋಧಿ. ಅಗ್ನಿಜ್ವಾಲೆ ಯೆದ್ದ ಮರುದಿನ 'ಇವತ್ತು ಸಮುದ್ರದ ಮೇಲೆ ಮೀನು ಹಿಡಿಯೋಕೆ ಯಾರೂ ಹೋಗ ಕೂಡದು. ಇದು ಅಧ್ಯಕ್ಷ ಕಲಮಂತರ ಆಜ್ಞೆ!' ಎಂದು ಪೊಲೀಸರು ಘೋಷಿಸುತ್ತಾರೆ. ಮೀನು ಪ್ರತಿಭಟನೆಯ, ಸ್ವಾತಂತ್ರ್ಯದ ಸಂಕೇತವಾಗಿ ಇಲ್ಲಿ ಬಂದಿದೆ. ಯಾರೂ ಕ್ರಾಂತಿಯ ಕಾಲದಲ್ಲಿ ಶಾಮೀಲಾಗಬಾರದು ಎಂಬ ಒಳ ಅರ್ಥವನ್ನಿಲ್ಲಿ ಗಮನಿಸಬಹುದು. ಈ ಅರ್ಥವಲ್ಲದಿದ್ದರೆ ಜನರ ಜೀವವನ್ನು ಯಃಕಶ್ಚಿತ್ತಾಗಿ ಕಾಣುವ ಕಲಮಂತ ಮೀನು ಗಾರರ ಜೀವದ ಬಗ್ಗೆ ಕಾಳಜಿ ವಹಿಸಿದನೆಂದು ಸೂಚಿಸುವುದು ಕಾದಂಬರಿಯ ಮೂಲಾಶಯಕ್ಕೆ ವಿರುದ್ಧವಾದದ್ದು.

ಮೀನು ಪ್ರತಿಭಟನೆ ಮತ್ತು ಸಂತೃಪ್ತ ಜೀವನದ ಸಂಕೇತವಾಗಿ ಇನ್ನೂ ಕೆಲವು ಕಡೆ ಬಂದಿದೆ. ಕಾಳಿಚರಣನ ಒಂದು ಕಣಸಿನಲ್ಲಿ ಮೀನುಗಾರರಿಗೆ ಒಂದು ದೊಡ್ಡ ಮೀನು ಸಿಗುತ್ತದೆ. ಅದನ್ನು ದಡಕ್ಕೆ ತಂದುಹಾಕಿದ ಮೀನುಗಾರರ ಹಿರಿಯ ಯಾರಿಗೆ ಎಷ್ಟು ಬೇಕಾದರೂ ಮಾಂಸ ತೆಗೆದುಕೊಂಡು ಹೋಗಬಹುದೆಂದು ಹೇಳು ತ್ತಾನೆ. ಎಲ್ಲರೂ ತಮಗೆ ಬೇಕಾದಷ್ಟು ಮಾಂಸ ಒಯ್ದರೂ ಅದು ಮುಗಿಯುವುದೇ ಇಲ್ಲ. ಆದರೆ ಮರುದಿನ ನೋಡಿದಾಗ ಅದು ಶಿಲೆಯಾಗಿತ್ತು. ಕಾದಂಬರಿಯ ಕೊನೆಗೆ ಮನುವಿಗೆ ಅವನ ಸೋದರ ಸಂಬಂಧಿ ಹೇಳುವುದು: 'ಊರ್‍ನಲ್ಲಿ ಎಷ್ಟು ಖುಷಿ ಯಾಗವರೇಂತ ಕೇಳ್ಬೇಡ. ಎಲ್ಲರ ಮನೇಲೂ ಇವತ್ತು ಮೀನು ಸಾರು.'

ಹೀಗೆ ಕಾದಂಬರಿಯಲ್ಲೊಂದು ಸಾಂಕೇತಿಕ ಅರ್ಥ ವ್ಯವಸ್ಥೆ ಇದೆ. ಆದರೆ ಒಟ್ಟು ಕಾದಂಬರಿಯೇ ಸಾಂಕೇತಿಕ ಕಾದಂಬರಿಯಲ್ಲ. ಕಾದಂಬರಿಯ ತಾತ್ವಿಕ ಆಶಯಕ್ಕೆ ಒತ್ತುಕೊಡುವ ಸಂಕೇತ ಸರಪಣಿಯೊಂದು ಇಲ್ಲಿ ಸಮಾನಾಂತರವಾಗಿ ಸಾಗುತ್ತದೆ.

೪

ಸಂಕೇತಗಳು ಒಂದು ಕಡೆ ಕಾದಂಬರಿಯ ಕ್ರಿಯೆಯನ್ನು ತಾತ್ವಿಕವಾಗಿ ಪುಷ್ಟೀಕರಿಸುತ್ತಾ ಹೋದರೂ ಕಾದಂಬರಿಯ ಮುಖ್ಯ ಬೆಳವಣಿಗೆ ಸರಳವಾಗಿಯೇ ಸಾಗುತ್ತದೆ. ಮಾನವ ಹಕ್ಕುಗಳಿಗಾಗಿ ಹಾಗೂ ಸರ್ವಾಧಿಕಾರದ ವಿರುದ್ಧ ಒಂದು ಸಮುದಾಯ ನಡೆಸಿದ ಹೋರಾಟ ನೇರವಾದ ಕ್ರಿಯೆಗಳಲ್ಲಿ ಮತ್ತು ಮಾತುಗಳಲ್ಲಿ ವ್ಯಕ್ತವಾಗಿದೆ. ಪ್ರಮುಖ ಪಾತ್ರಗಳು ತಮ್ಮ ತಾತ್ವಿಕ ಆಶಯವನ್ನು ನೇರವಾದ ಮಾತುಗಳಲ್ಲಿಯೇ ಘೋಷಿಸುವುದರಿಂದ ಕಾದಂಬರಿಯ ತಾತ್ವಿಕ ಆಶಯವೂ ಸ್ಪಷ್ಟವಾಗಿ ವ್ಯಕ್ತವಾಗಿದೆ.

ಕಾದಂಬರಿಯ ಗುರಿ ಗೋಚರಿಸಿದ ಮೇಲೆ ಉಳಿಯುವ ಕುತೂಹಲವೆಂದರೆ ಜನರು ಅದನ್ನು ಸಾಧಿಸುತ್ತಾರೋ ಇಲ್ಲವೋ ಅಥವಾ ಸಾಧಿಸಿದರೆ ಹೇಗೆ ಅನ್ನುವುದು. ಅಂದರೆ ಕಾದಂಬರಿಯ ಗತಿ ಒಂದು ಪೂರ್ವ ನಿರ್ಧರಿತ ಚೌಕಟ್ಟಿನಲ್ಲಿ ಸಾಗುತ್ತದೆ. ಈ ವಸ್ತುವಿಗೆ ಅದು ಅನಿವಾರ್ಯವೂ ಹೌದು.

ಕಾದಂಬರಿಯ ಸಂಕೇತಗಳಲ್ಲಿ ತಾತ್ವಿಕ ಆಶಯ ಇದ್ದರೆ ಕಾದಂಬರಿಯ ನೇರ ವಿವರಗಳಲ್ಲಿ ಬರುವ ಅಪ್ರತ್ಯಕ್ಷ ಸೂಚನೆಗಳು(allusions) ಇಂಥದೊಂದು ಕತೆ ಯಾವ ದೇಶದಲ್ಲೂ ಯಾವ ಕಾಲದಲ್ಲೂ ನಡೆಯಬಹುದು ಅನ್ನುವುದನ್ನು ಸೂಚಿಸುತ್ತವೆ.

ಕಲಮಂತ ಅಧ್ಯಕ್ಷ ಕಾರ್ನವಾಲೋನನ್ನು ಕೊಲ್ಲುವಾಗ ಅವನು 'ಕಲಮಂತ, ನೀನು?' ಎಂದು ತೊದಲುವುದು (ಬ್ರೂಟಸ್-ಸೀಸರ್); 'ಗಂಡಾಂತರ ಪರಿಸ್ಥಿತಿ' (ನಮ್ಮ ತುರ್ತುಪರಿಸ್ಥಿತಿ); ಕಲಮಂತ ದೇವಸ್ಥಾನಗಳಲ್ಲಿ ತನ್ನ ಪ್ರತಿಮೆಗೆ ಪೂಜೆ ಸಲ್ಲಿಸಬೇಕೆಂದು ಆಜ್ಞೆ ಹೊರಡಿಸುವುದು (ಹಿರಣ್ಯಕಶಿಪು ಮುಂತಾದ ರಾಕ್ಷಸರು); ಕಾಳಿಚರಣನ ನೇಣುಶಿಕ್ಷೆ ರದ್ದು ಮಾಡಬೇಕೆಂದು ಒತ್ತಾಯಿಸಲು ನೆರೆದ ಜನರ ಮೇಲೆ ಗುಂಡು ಹಾರಿಸುವುದು - ಒಂದು ಕಡೆ ಸಾಲಾಗಿ ಮೆಷಿನ್‌ಗನ್ ಹಿಡಿದು ನಿಂತವರು, ಇನ್ನೊಂದು ಕಡೆ ಸಮುದ್ರ (ಜಲಿಯನ್ ವಾಲಾಬಾಗ್); 'ಶತ್ರುಗಳು' ಸಮೀಪಿಸುವಾಗ ಕಲಮಂತ ಆತ್ಮಹತ್ಯೆಮಾಡಿಕೊಳ್ಳುವುದು (ಹಿಟ್ಲರ್)-ಇವು ಕೆಲವು ಉದಾಹರಣೆಗಳು.

ಕಾದಂಬರಿ ನೀಡುವ ಸಂದೇಶ ಮಹತ್ವದ್ದು: ಸದಾ ಸ್ವಾತಂತ್ರ್ಯದತ್ತ ತುಡಿಯುವ ಮನುಷ್ಯ ಚೇತನವನ್ನು ಅಂತಿಮವಾಗಿ ದಮಿಸಲಾಗದು; ಮನುಷ್ಯ ಸಂಬಂಧಗಳಿಂದ ಕಳಚಿಕೊಳ್ಳುವ ಸರ್ವಾಧಿಕಾರಿ ಹೆಚ್ಚು ಹೆಚ್ಚು ವ್ಯಗ್ರನಾಗಿ ತನಗೆ ತಾನೆ ನಾಶವಾಗುತ್ತಾನೆ; ಕ್ರೌರ್ಯ ತೀವ್ರವಾದಷ್ಟು ಪ್ರತಿಭಟನೆ ಕ್ಷಿಪ್ರವಾಗುತ್ತದೆ- ಇಂಥವು ಸಾರ್ವಕಾಲಿಕ ಅರ್ಥವಿರುವ, ಐತಿಹಾಸಿಕವಾಗಿ ಸಿದ್ಧವಾದ ವಿಷಯಗಳು. ಇವುಗಳನ್ನೊಂದು ಕಲಾಕೃತಿಯಲ್ಲಿ ಅಡಗಿಸಲು ಮಾಡಿದ ಪ್ರಯತ್ನ ಕೂಡ ಮಹತ್ವದ್ದಾಗುತ್ತದೆ.

ಹೀಗೆ ಅರ್ಥಶೋಧನೆಗೆ ಆಹ್ವಾನಿಸುವ 'ಘೋಷ' ಅನುಪಮಾ ನಿರಂಜನ ಅವರ ಒಂದು ಮುಖ್ಯ ಕಾದಂಬರಿಯಾಗಿದೆ.

೮ “ಮಾಧವಿ”

- ಡಾ। ಎಚ್. ಎಸ್. ಸುಜಾತ

ಧರ್ಮ ಪುರಾಣಗಳು ವ್ಯಷ್ಟಿ ಜೀವನದ ಮೇಲೂ ಸಮಷ್ಟಿ ಜೀವನದ ಮೇಲೂ ಪ್ರಭಾವ ಬೀರುವಂತಹವು. ಅರ್ಥಪೂರ್ಣ ಸಮಕಾಲೀನ ಅಂಶಗಳು ಅಲ್ಲಿ ಹುದುಗಿರುತ್ತವೆ. ಸಮಕಾಲೀನವಾದ ಎಳೆಗಳಿಗೆ ಬೆಳಕುಬೀರಿ ವರ್ತಮಾನದ ಸಂಗತಿಗಳನ್ನು ನಿರೂಪಿಸುವುದು ಇಲ್ಲಿನ ಸವಾಲು. ಪುರಾಣದ ಸಂದರ್ಭಗಳನ್ನು ಆಯ್ದುಕೊಂಡಾಗ ಪ್ರತಿಭಾ ಪ್ರಕಾಶನಕ್ಕೆ ಅವಕಾಶವಿದೆ. ಇಲ್ಲದಿದ್ದಲ್ಲಿ ಪುರಾಣದ ಚೌಕಟ್ಟೇ ಒಂದು ಬಂಧನವಾಗುತ್ತದೆ. ಆಯ್ದ ವಸ್ತುವಿನಲ್ಲಿ ಸೇರ್ಪಡೆಯೋ ಬದಲಾವಣೆಯೋ ಆಗಬಹುದು. ಹಳೆಯ ಪುರಾಣದ ಕವಚದಲ್ಲಿ ಸಮಕಾಲೀನ ಸತ್ಯವನ್ನು ಹೇಗೆ ಹುದುಗಿಸಲಾಗಿದೆ ಎಂಬುದೇ ಮುಖ್ಯ. ಒಂದು ಒಳನೋಟ ಇದ್ದಲ್ಲಿ ಈ ಸವಾಲನ್ನು ಇದಿರಿಸುವುದು ಸುಲಭ.

ಇರಾವತಿ ಕರ್ವೆಯವರ ‘ಯುಗಾಂತ’ದಿಂದ ಪ್ರೇರಣೆ ಪಡೆದು ಅನುಪಮಾ ತಮ್ಮ ಕಾದಂಬರಿಯನ್ನು ರಚಿಸಿದ್ದಾರೆ. ಯಯಾತಿ ರಾಜನ ಒಬ್ಬಳೆ ಮಗಳು ಮಾಧವಿ. ವಿಶ್ವಾಮಿತ್ರನಲ್ಲಿ ಶುಕ್ಲ ಯಜುರ್ವೇದವನ್ನು ಅಭ್ಯಸಿಸಿದ ಗಾಲವ ಗುರುದಕ್ಷಿಣೆಯನ್ನು ಅರ್ಪಿಸಲು ಇಚ್ಛಿಸಿದಾಗ ವಿಶ್ವಾಮಿತ್ರ ಅದೇನೂ ಬೇಡ ಎಂದರೂ ಗಾಲವ ಬಲವಂತ ಮಾಡಿದ. ಮೈಯೆಲ್ಲ ಬೆಳ್ಳಗೂ, ಒಂದು ಕಿವಿ ದಪ್ಪಗೂ ಇರುವ ಎಂಟು ನೂರು ಕುದುರೆಗಳನ್ನು ಒಪ್ಪಿಸು ಎಂದು ವಿಶ್ವಾಮಿತ್ರ ಹೇಳಿದಾಗ ಗಾಲವ ಯಯಾತಿಯ ಬಳಿಗೆ ಹೋದ. ಕುದುರೆಗಳ ಬದಲಾಗಿ ಯಯಾತಿ ತನ್ನ ಒಬ್ಬಳೇ ಮಗಳನ್ನು ಕೊಟ್ಟ. ಗಾಲವನ ಒಪ್ಪಂದದ ಪರಿಣಾಮವಾಗಿ ಇಕ್ಷ್ವಾಕು ವಂಶದ ಹರ್ಯಶ್ವನಲ್ಲಿ ಮಾಧವಿ ಒಂದು ವರ್ಷ ಇದ್ದು ವಸುಮನನೆಂಬ ಪುತ್ರನನ್ನು ಪಡೆದು ರಾಜನಿಗೆ ಕೊಡಬೇಕಾಯಿತು. ಆಗ ಗಾಲವನಿಗೆ ಇನ್ನೂರು ಕುದುರೆಗಳು ಸಿಕ್ಕವು. ಕಾಶಿಯ ದಿವೋದಾಸನಲ್ಲಿ ಇದ್ದಾಗ ಪ್ರತರ್ದನ ಜನಿಸಿದ. ಗಾಲವನಿಗೆ ಪುನಃ ಇನ್ನೂರು ಕುದುರೆಗಳು ದೊರಕಿದವು. ಇದೇ ರೀತಿ ಭೋಜ ನಗರದ ಉಶೀನರನಿಂದ ಶಿಬಿ ಜನಿಸಿದಾಗ ಗಾಲವ ಪುನಃ ಇನ್ನೂರು ಕುದುರೆಗಳನ್ನು ಪಡೆದ. ಮಿಕ್ಕ ಇನ್ನೂರು ಕುದುರೆಗಳ ಬದಲಾಗಿ ಮಾಧವಿಯನ್ನೇ ವಿಶ್ವಾಮಿತ್ರನಿಗೆ ಒಪ್ಪಿಸಿದಾಗ ಅಷ್ಟಕನೆಂಬ ಪುತ್ರ ಜನಿಸಿದ. ಐದು ವರ್ಷಗಳ ನಂತರ ಗಾಲವ ಮಾಧವಿಯನ್ನು ತಂದೆಯ ಬಳಿಗೊಯ್ದಾಗ ಯಯಾತಿ ಅತೀವ ಪಶ್ಚಾತ್ತಾಪದಿಂದ ಸ್ವಯಂವರವನ್ನು ಏರ್ಪಡಿಸಿದ. ಆದರೆ ಮಾಧವಿ ಎಲ್ಲವನ್ನೂ ತಿರಸ್ಕರಿಸಿ ತಪಸ್ಸಿಗೆಂದು ಅರಣ್ಯಕ್ಕೆ ಹೋದಳು. ಇದಿಷ್ಟು ಸ್ಥೂಲಕತೆ. ಮುಂದೆ ಯಯಾತಿ ಅನೇಕ ಕಾಲ ಸ್ವರ್ಗಸುಖವನ್ನು ಪಡೆದು ಗಳಿತ ಪುಣ್ಯನಾಗಿ ಭೂಮಿಗೆ ಬಂದಾಗ ಮಾಧವಿ ತಂದೆಯನ್ನು ಭೇಟಿಮಾಡುವ ಪ್ರಸಂಗ ಆದಿಪರ್ವದಲ್ಲಿದೆ. ಅನುಪಮಾ ಈ ಕಡೆಯ ಭಾಗವನ್ನು ಬಿಟ್ಟಿದ್ದಾರೆ.

ಇದೇ ಕಾದಂಬರಿಯಲ್ಲಿ ಅಂತರ್ಗತವಾಗಿರುವುದು ಶೋಷಣೆಯ ವಿವಿಧ ಹಂತಗಳು, ವಿಫಲ ಪ್ರತಿಭಟನೆ ಹಾಗೂ ವ್ಯಂಗ್ಯ. ತೀರ ಸರಳ ನಿರೂಪಣೆಯಲ್ಲಿ ಅನುಪಮಾ ಏರುದನಿಯಿಲ್ಲದೆ ತಣ್ಣನೆಯ ಕಟಕಿಯಿಂದ ಇದನ್ನು ಸಾಧಿಸಿದ್ದಾರೆ. ದಾನ ಕೇಳಲು ಬಂದ ಗಾಲವನಿಗೆ ಕುದುರೆಗಳ ಬದಲು ಮಗಳನ್ನೇ ಕೊಡುವ ತಂದೆ ಯಯಾತಿ ಶೋಷಕರ ಪ್ರತಿನಿಧಿ. ರಕ್ಷಿಸಬೇಕಾದ ತಂದೆ ಔದಾಸೀನ್ಯ, ತಿರಸ್ಕಾರ ಹೊಣೆ ತಪ್ಪಿಸಿಕೊಳ್ಳುವ ಆಸೆಗಳಿಂದ ಯಾರೂ ಮಾಡಬಾರದ ಕೆಲಸ ಮಾಡಿದ. ಯಾರನ್ನು ದಾನ ಕೊಡುತ್ತಿದ್ದಾನೊ ಆ ಮಾಧವಿಯ ಬಗೆಗೆ ಬೆಲೆ ಕೊಡಬೇಕಾಗಿಲ್ಲ ಎಂದುಕೊಳ್ಳುತ್ತಾನೆ. ಪ್ರಜೆಗಳು ಕೂಡ ಮಗಳನ್ನೇ ದಾನಕೊಟ್ಟ ಶೂರ ಎಂದು ಕೊಂಡಾಡುವರೆಂಬ ಧೂರ್ತ ಆಲೋಚನೆಯನ್ನು ಮಾಡುತ್ತಾನೆ. (ಪು. ೩೯.) ಹೆತ್ತ ತಾಯಿಯ ಸ್ಥಾನದಲ್ಲಿರುವ ದೇವಯಾನಿ ಕೂಡ ಅತಿ ಹೀನ ರೀತಿಯಿಂದ ತನಗೆ ಆದರ ವಿಲ್ಲದ ಮಾಧವಿಯನ್ನು ಹೊರಹಾಕಲು ಉದ್ಯುಕ್ತಳಾಗುತ್ತಾಳೆ. "ಬೊಕ್ಕಸದಲ್ಲಿ ಹಣ ಇಲ್ಲ ಎನ್ನುತ್ತೀರ. ಮಾಧವಿಯ ಸ್ವಯಂವರ ಏರ್ಪಡಿಸಿದರೆ ಧನ ಕನಕ ಬೇಡವೆ? ಅದಕ್ಕೆ ಬದಲು ಮಾಧವಿಯನ್ನು ಈ ಮುನಿಗೆ ದಾನ ಕೊಟ್ಟುಬಿಟ್ಟರೆ ನಮ್ಮ ಧರ್ಮವೂ ಉಳಿಯಿತು. ಸ್ವಯಂವರಕ್ಕೆ ಹೊಂದಿಸಿಕೊಳ್ಳಬೇಕಾದ ಹಣದ ಯೋಚನೆಯೂ ತಪ್ಪೀತು" (ಪು. ೩೯) ಎಂಬುದು ಅವಳದೇ ಮಾತು. ಕಡೆಯ ಪಕ್ಷ ತಾನೂ ಹೆಣ್ಣು ಎಂಬುದು ಕೂಡ ಮಹಾರಾಣಿಗೆ ನೆನಪಿನಲ್ಲಿರಲಿಲ್ಲ. ಇದೇ ದೇವಯಾನಿ ಲಕ್ಷ್ಮೀಪೂಜೆಗೆ ಸಿದ್ಧಳಾದಾಗ ಶರ್ಮಿಷ್ಠೆಯ ಪೂಜೆಯ ಆಸೆಗೆ ತಡೆಹಾಕಿ ಮಹಾರಾಣಿಗೆ ಮಾತ್ರ ಪೂಜೆಯ ಹಕ್ಕು ಎನ್ನುತ್ತಾಳೆ. ಅರಸಿಯರ ನಡುವಿನ ಈ ಮಾತು ತೀರ ವಿಚಿತ್ರ ವಾಗಿದೆ. ಅವರಿಬ್ಬರೂ ಹೆಂಗಸರೇ; ಪೂಜಾರ್ಹ ದೇವತೆಯೂ ಹೆಣ್ಣೇ. ಪುರುಷರ ದಬ್ಬಾಳಿಕೆಯಿಂದ ಹೆಣ್ಣಿನ ಶೋಷಣೆ ಎಂದು ಕಾದಂಬರಿ ಹೇಳುವಂತೆ ಕಂಡರೂ ಈ ವಿರುದ್ಧ ಸಾಕ್ಷ್ಯ ಹೆಣ್ಣು ಹೆಣ್ಣನ್ನೇ ಶೋಷಿಸುವ ವಿವಿಧ ಮುಖಗಳ ಮೇಲೆ ಬೆಳಕು ಬೀರುತ್ತದೆ. ಹೆಣ್ಣಿನಿಂದಲೇ ಹೆಣ್ಣಿಗಾಗುವ ಅತ್ಯಾಚಾರವನ್ನು ಬಯಲು ಮಾಡುತ್ತದೆ. ಇಂಥ ಒಳಸುಳಿಗಳಿಂದ ಕಾದಂಬರಿಯ ವ್ಯಂಗ್ಯಕ್ಕೆ ಹೊಸ ಆಯಾಮ ಬಂದಿದೆ.

ಗಾಲವನಿಗೆ ಬೇಕಾದ ಎಂಟುನೂರು ಕುದುರೆಗಳಿಲ್ಲದ ಹರ್ಯಶ್ವ ಒಂದು ವರ್ಷದ ವರೆಗೆ ತಾನು ಮಾಧವಿಯನ್ನು ಭೋಗಿಸುವುದಾಗಿಯೂ ಬದಲಾಗಿ ಇನ್ನೂರು ಕುದುರೆಗಳನ್ನು ಕೊಡುವುದಾಗಿಯೂ ಮಿಕ್ಕ ಕುದುರೆಗಳಿಗೆ ಪುನಃ ಮಾಧವಿಯನ್ನು ಬೇರೊಬ್ಬ ರಾಜನಲ್ಲಿರಿಸಬಹುದೆಂದೂ ಸೂಚಿಸುತ್ತಾನೆ. ಪೃಥ್ವೀಪತಿಯೊಬ್ಬನ ಶೋಷಣೆಯ ರೀತಿ ಇದು. ಇನ್ನು ಗುರುಸ್ಥಾನದಲ್ಲಿರುವ ಗಾಲವನಾದರೋ "ಮಾಧವಿಯ ವಿಧಿಬರೆಹ ಹೀಗಿದ್ದರೆ ಯಾರೇನು ಮಾಡಲು ಸಾಧ್ಯ?" ಎಂದು ಹೊಣೆ ಕಳಚಿಕೊಳ್ಳುತ್ತಾನೆ [ಪು.೩೧]. ಕಾಶೀನಗರದ ದಿವೋದಾಸ "ರಾಜನಾದ ನಾನು ಪರನಾರಿ ಸಹೋದರ. ಅಗ್ನಿಸಾಕ್ಷಿಯಾಗಿ ಕೈಹಿಡಿದವಳು ಮಾತ್ರ ಮಡದಿ. ವಂಶಕ್ಕೆ ಪತಿವ್ರತೆ

ಬರಬೇಕಾದ್ರೆ ಇಂಥ ಶಾಸ್ತ್ರೋಕ್ತ ಸಂಬಂಧವಾಗ್ಬೇಕು !” [ಪು. ೯೬] ಎನ್ನುತ್ತಾನೆ. ಎಷ್ಟು ವಿವಾಹಗಳಿಗೆ ಬೇಕಾದರೂ ಪರವಾನಿಗೆ ಇರುವ ಮನುಷ್ಯ ಆಡುವ ಈ ಮಾತಿಗೆ ಬೆಲೆ ಏನೂ ಇಲ್ಲ. ಇದು ಕೇವಲ ಜಾಣತನದ ಮಾತು. ಈ ವ್ಯವಹಾರಗಳಿಗೆ ಹೇಸಿದ ಮಾಧವಿ ಮೂರನೆಯ ರಾಜ ಭೋಜನಗರದ ಉಶೀನರನೊಡನೆ ತಾನು ಈಗಾಗಲೇ ಇಬ್ಬರೊಡನೆ ಬಾಳ್ವೆ ಮಾಡಿದವಳು ಎಂಬ ಸತ್ಯವನ್ನು ಬಯಲು ಮಾಡಿದಾಗ ತನ್ನನ್ನು ಬಿಟ್ಟುಬಿಟ್ಟಾನು, ಗಾಲವನಿಗೆ ಶಿಕ್ಷೆಯಾದೀತು ಎಂಬುದು ಅವಳ ಒಳ ಆಸೆ. “ನೀನು ಹೆಂಗಸು. ನಿನ್ನ ಮಾತನ್ನು ನಾನು ನಂಬೋದಿಲ್ಲ. ನೀನು ಹೇಳಿದ್ದು ನಿಜವಿನಲಿ, ಸುಳ್ಳಿರಲಿ, ಚಿಂತೆಯಿಲ್ಲ. ಹೆಂಗಸರು ಕಾಮಿಸಿದಷ್ಟು ಸುಂದರಿಯರಾಗ್ತಾರೆ. ಇಂದ್ರಲೋಕದ ರಂಭೆ ಊರ್ವಶಿಯರ ವಿಷಯ ಕೇಳಿಲ್ವೆ ? ಆ ಸೂಳೆಯರ ರೂಪ ಯಾರಿಗಿದೆ ಹೇಳು ?” [ಪು. ೧೪೯] ಎನ್ನುತ್ತಾ ಅವಳು ಬೆಚ್ಚುವ ಹಾಗೆ ಮಾಡುತ್ತಾನೆ. ತಾನೊಬ್ಬ ವೇಶ್ಯೆಗೆ ಸಮಾನ ಎಂಬುದು ಅವಳಿಗೆ ಆಘಾತ ತಂದ ವಿಷಯ. ಇದಕ್ಕೂ ವಿಚಿತ್ರವಾದ ಸತ್ಯವೊಂದು ದಿವೋದಾಸನ ಬಳಿಯಿದ್ದಾಗಲೇ ಅವಳಿಗೆ ಅನುಭವಕ್ಕೆ ಬಂದಿದೆ. ದಿವೋದಾಸನ ಬಳಿಯ ದೇವದಾಸಿ ಮಂದಾರಮಾಲೆ “ಪಂಜರದ ಹಕ್ಕಿ ಹಾಗೆ ಇಲ್ಲಿರೋಕೆ ನಂಗಿಷ್ಟವಿಲ್ಲ. ಹೊರಗೆ ಚೆನ್ನ. ನಂಗಿಷ್ಟವಾದವರ ಜೊತೆ ಮಲಗ್ತೀನಿ. ಹೀಗೆ ಹೇಳಿದ್ದೇಂತ ರಾಜಕುಮಾರಿ ತಪ್ಪು ತಿಳ್ಕೋಬಾರ್ದು. ಇಷ್ಟರ ಮಟ್ಟಿಗೆ ನಾನು ಸ್ವತಂತ್ರೆ.” [ಪು. ೧೧೭] ಎಂಬುದು ತಾನು ವೇಶ್ಯೆಯ ಸ್ವಾತಂತ್ರ್ಯವನ್ನು ಪಡೆದವಳಲ್ಲ ಎಂಬ ಕ್ರೂರ ಸತ್ಯವನ್ನು ಬಯಲು ಮಾಡುತ್ತದೆ. ಉಶೀನರ ಮಾಹಿಷ್ಮತಿಯ ಅರಸನನ್ನು ಗೆದ್ದು ಅಲ್ಲಿನ ರಾಜಕುಮಾರಿಯನ್ನು ಮದುವೆಯಾದಾಗ ವಧು ಮಹಿಮಾ ಸಾಧಾರಣ ರೂಪವತಿಯಾಗಿದ್ದವಳು ಅದೇ ಸಂಕಟದಿಂದ ರೂಪ ಇದ್ರೆ ಬಂತಾ ಪುಣ್ಯ ? ಒಬ್ರಲ್ಲ ಇಬ್ರು ಮೂವರು ರಾಜನ ಜೊತೆ ಹ್ಯಾಗಾದ್ರೂ ಬಾಳುವೆ ಮಾಡೋದೋ ಏನೋ ! ಥೂ ಹೇಸಿಗೆ. [ಪು. ೧೪೯] ಎನ್ನುವುದು ಮಾಧವಿಯ ಬಗೆಗೆ ಕೇವಲ ಈರ್ಷ್ಯೆಯ ಮಾತಾಗದೆ ಶೋಷಣೆ ಎಂಬುದು ಎಷ್ಟು ವಲಯಗಳಲ್ಲಿ ವ್ಯಕ್ತವಾಗಿದೆ ಎನ್ನುವುದನ್ನು ಬಯಲು ಮಾಡುತ್ತದೆ.

ಬಡವಳಾಗಿಯಾದರೂ ಇದ್ದಿದ್ದರೆ ಈ ಗೋಳು ಇರುತ್ತಿರಲಿಲ್ಲ ಎಂದು ಆಶಿಸಿದ್ದ ಮಾಧವಿಗೆ ಸಾಮಾನ್ಯ ಜನರ ಸಂಕಟ ತಿಳಿದಾಗ ಶೋಷಣೆಯ ಕಬಂಧ ಬಾಹುಗಳ ವ್ಯಾಪ್ತಿ ತಿಳಿದು ದಿಗ್ಭ್ರಮೆಯಾಗುತ್ತದೆ. ನೂರು ವರಹಗಳಿಗೆ ವಿಕ್ರಯಗೊಂಡು ಬಂದ ಮೇಖಲಾ ರಾಜನ ಪಾಲಿಗೆ ಒಮ್ಮೆ ಮಾತ್ರ ಬಂದವಳು. ಅನಂತರ ನಿರಂತರ ದಾಸೀಪಟ್ಟ. ಹೊಟ್ಟೆ ಬಟ್ಟೆಗಳ ಚಿಂತೆಯಾದರೂ ಕಳೆಯಿತೆಂದು ಮೇಖಲೆ ಹೇಳುವ ಮಾತಿಗೆ ಇವೆರಡು ಬಿಟ್ಟರೆ ಹೆಂಗಸಿಗೆ ಬೇರೇನೂ ಬೇಡವೆ ಎಂದು ಮಾಧವಿ ಖಿನ್ನಳಾಗುತ್ತಾಳೆ.

ಮಾಧವಿಯದು ವಿಫಲ ಪ್ರತಿಭಟನೆ, ಕಡೆಯ ಗೆಲುವು ಕೂಡ ತೀರ ವೈಯಕ್ತಿಕವಾದದ್ದು. ವ್ಯವಸ್ಥೆಗೇನೂ ಧಕ್ಕೆಯಿಲ್ಲ. ಗಾಲವನ ದಾಸವಾಗಿ ತಾನು ಹೋಗಲಾರೆ ಎಂದು ಹೇಳಿದ ಮಾಧವಿಯ ಪ್ರತಿಭಟನೆ ಮೊಳಕೆಯಲ್ಲೇ ಚಿವುಟಲ್ಪಡು ತ್ತದೆ. ತಾನು ಧರ್ಮ ಸಂಕಟದಲ್ಲಿದ್ದೇನೆ ಎಂದು ಯಯಾತಿರಾಜ ಜಾರಿಕೊಳ್ಳುತ್ತಾನೆ.

ದಾರಿಯಲ್ಲಿ .ಗಾಲವ ಸ್ವರ್ಗ ಪ್ರಾಪ್ತಿಗೆಂದು ಯಾಗಾದಿಗಳ ಮಹತ್ವವನ್ನು ತಿಳಿಸಿದಾಗ ಮಾಧವಿ ತನ್ನ ತಂದೆಯೂ ಯಾಗಗಳನ್ನು ಮಾಡಿದ್ದಾಗಿಯೂ ಈಗ ತಾನೆ ಯಜ್ಞ ಪಶುವಾಗಿದ್ದಾಳೆಂದು ನುಡಿಯುತ್ತಾಳೆ. ಇದೇ ನಾರೀಕುಲದ ಪ್ರತಿಭಟನೆ ಯನ್ನು ಧಾರುಣಿ ಋಷಿಯ ಪತ್ನಿ ವೇದವತಿಯ ಮೂಲಕ ಅನುಪಮಾ ವ್ಯಕ್ತಪಡಿಸು ತ್ತಾರೆ. ಎಳೆಯ ಬಾಣಂತಿಯನ್ನು ಆಯಾಸ ಪಡಿಸಬಾರದು ಎಂದು ಹೇಳುತ್ತಾ ಆಕೆ 'ನಿಮ್ಮ ಪುಣ್ಯ ಮಾಧವಿ ಬದುಕಿ ಉಳಿದ್ಲು. ಅವಳು ಸತ್ತಿದ್ರೆ ಸ್ತ್ರೀಹತ್ಯೆಯ ಪಾಪ ಸುತ್ತಿಕೊಳ್ಳುತ್ತಿತ್ತು.' [ಪುಟ ೮೫] ಎನ್ನುತ್ತಾರೆ. ಕಡೆಯಲ್ಲಿ ತಂದೆಯ ಮನೆಗೆ ಹಿಂದಿರುಗುವಾಗ ಮಾಧವಿ ತಪಸ್ಸಿನಿಂದ ಜಗತ್ತು ಉದ್ಧಾರವಾಗುತ್ತದೆಯೇ ಎಂದಾಗ ಗಾಲವ ನನ್ನೊಬ್ಬನಿಂದ ಏನು ಸಾಧ್ಯ ಎಂದಾಗ ಮಾಧವಿ ಸಿಡುಕಿ "ಅಂದ್ಮೇಲೆ ಒಬ್ಬ ಹೆಣ್ಣು ಮಗಳ್ನ ಯಾಕೆ ಇಂಥ ಚಿತ್ರಹಿಂಸೆಗೆ ಗುರಿ ಮಾಡಿದ್ರಿ ? ನನ್ನನ್ನ ಅಯ್ಯೋ ಅನಿಸಿದ್ದಕ್ಕೆ ಪ್ರಪಂಚದ ಯಾವ ಹೆಂಗಸು ಯಾವ ಕಾಲಕ್ಕೂ ನಿಮ್ಮನ್ನು ಕ್ಷಮಿಸೋಲ್ಲ !" (ಪು. ೨೦೦) ಎನ್ನುತ್ತಾಳೆ. ಮಾಧವಿಯ ಜೀವನದ ನೋವಿನ ಭೂತವಾಕ್ಯವಾಗಿ ಈ ಮಾತು ಗಾಲವ ಒಳಗೇ ಸೋಲುವಂತೆ ಮಾಡುತ್ತದೆ. "ನೀವು ಗಾಲವರು ಸೇರ್ಕೊಂಡು ನನ್ನ ಬದುಕನ್ನು ಮಾರಾಬಟ್ಟೆ ಮಾಡ್ಬಿಟ್ರಿ" (ಪು. ೧೯೩-೧೯೪) ಎನ್ನುವ ಮಾಧವಿಗೆ "ಸಾಕು ಬಾಯ್ಮುಚ್ಕೋ. ಹೆಂಗಸು ಹೆಚ್ಚು ಮಾತಾಡಬಾರ್ದು"! (ಪು. ೧೯೪) ಎಂದು ಹೇಳುವ ವಿಶ್ವಾಮಿತ್ರನಿಗೆ ೮೦೦ ಕುದುರೆಗಳು ಅನಗತ್ಯ. ಗಾಲವನಿಗೆ ಕೇವಲ ಪ್ರತಿಷ್ಠೆಯ ಪ್ರಶ್ನೆ. ಮಾಧವಿಗೆ ಇದು ಜೀವವನ್ನು ಸಾವಿಗೊಯ್ದ ಸೂತ್ರ. ಇದೇ ಚಿತ್ರ ವ್ಯಂಗ್ಯವಾಗುತ್ತದೆ. ತಂದೆಯ ಮನೆಗೆ ಹಿಂದಿರುಗಿದ ಮೇಲೆ ತನ್ನ ಸ್ವಯಂವರದ ಏರ್ಪಾಟನ್ನು ಧಿಕ್ಕರಿಸುತ್ತಾಳೆ. ಪ್ರತಿಯೊಬ್ಬ ರಾಜಕುಮಾರನನ್ನು ತಿರಸ್ಕರಿಸುತ್ತಾಳೆ. ಆಯ್ಕೆ ಅವಳದಾದರೂ ದಕ್ಕಿದ್ದು ಏನು ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ.

ಗಾಲವ, ವಿಶ್ವಾಮಿತ್ರರನ್ನು ಹುಲಿಗಳಂತೆ ಸಂಕೇತಿಸಿದ್ದಾರೆ ಅನುಪಮಾ. ಮೊದಲ ಬಾರಿ ಗಾಲವ ಅವಳನ್ನು ದೈಹಿಕ ಕಾಮನೆಯಿಂದ ಸಮೀಪಿಸಿದಾಗ ಮಲಗಿದ್ದ ಮಾಧವಿ ದಿಗ್ಗನೆದ್ದು "ಅಯ್ಯೋ ಹುಲಿ ಬಂತು ಹುಲಿ" (ಪು. ೫೪) ಎಂದು ಕಿರಿಚಿ ಕೊಂಡು ಏಳುತ್ತಾಳೆ. ನಿರ್ಜನ ಪ್ರದೇಶ, ನೀರವ ರಾತ್ರಿ. ಒಂಟಿ ಹೆಣ್ಣು ಮಾಧವಿಗೆ ಧೈರ್ಯ ಹೇಳಿ ತನ್ನ ಬಯಕೆಯನ್ನು ಅದುಮಿ ಗಾಲವ ದೂರ ಹೋಗುತ್ತಾನೆ. ಹುಲಿಯ ಅಸ್ತಿತ್ವ ಕನಸಿನಲ್ಲಿರುವುದು ಸೂಚ್ಯವೇ. ಏಕೆಂದರೆ ಗಾಲವನ ಬಯಕೆ ನನಸಾಗುವುದೇ ಇಲ್ಲ. ಮುಂದೆ ಈ ಅನುಭವ ನಿಜವಾಗುವುದು ವಿಶ್ವಾಮಿತ್ರನೊಡನೆ.

ಇಂಥದೇ ಸಂದರ್ಭದಲ್ಲಿ ಹುಲಿಯು ನೆನಪಿನೊಡನೆ ಆಗ ಅವಳು ಬೆದರಿದ ಹುಲ್ಲೆ ಯಂತೆ ಸ್ವಾಧೀನಳಾಗುತ್ತಾಳೆ. ವಿಶ್ವಾಮಿತ್ರ ಗಾಲವ ಇಬ್ಬರನ್ನೂ ಹುಲಿಗೆ ಹೋಲಿಸ ಲಾಗಿದೆ. ಶಿಷ್ಯ ಕನಸಿನ ಹುಲಿಯಾಗಿದ್ದರೆ ಗುರು ನಿಜವಾದ ಹುಲಿಯಾಗಿದ್ದಾನೆ.

ಪುರಾಣಗಳ ಆದರ್ಶದ ಕವಚಗಳನ್ನು ಕಳಚಿ ಹಾಕಿ ಸಾಮಾನ್ಯ ಮಾನವರ ಚಿತ್ರಣವನ್ನು ಅನುಪಮಾ ಇಲ್ಲಿ ನೀಡಿದ್ದಾರೆ. ಧರ್ಮದ ಹೆಸರಿನಲ್ಲಿ ನಿರಂತರ ಶೋಷಣೆ ಯನ್ನು ಮಾಡುತ್ತಿದ್ದ ಅರಮನೆ ಗುರುಮನೆಗಳ ಅಂತರಂಗವನ್ನು ಬಯಲಿಗೆಳೆದು ಅರಸೊತ್ತಿಗೆಯಂದೇ ಅದ ಎಳೆಯ ಮುಗ್ಧ ಜೀವವೊಂದು ಸುರುಟಿಹೋದದ್ದನ್ನು 'ಮಾಧವಿ'ಯ ವ್ಯಥೆಯ ಕಥೆಯಲ್ಲಿ ಚಿತ್ರಿಸಿದ್ದಾರೆ.

೯ 'ಮಾಧವಿ' ಮತ್ತು ಇತಿಹಾಸದ ಪುನರುಚ್ಚಾರ

- ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ

ಮಹಿಳಾ ಸಾಹಿತ್ಯವನ್ನು ಒಟ್ಟಾರೆ ಕನ್ನಡ ಸಾಹಿತ್ಯದ ಪ್ರವಾಹದಿಂದ ಪ್ರತ್ಯೇಕಿಸುವುದರ ಔಚಿತ್ಯದ ಬಗ್ಗೆ ಬಹಳಷ್ಟು ಚರ್ಚೆ ನಡೆದಿದೆ. ಆದರೆ ಈ ಚರ್ಚೆ ಯನ್ನು ಮುಂದುವರಿಸುವ ಮುನ್ನ ಮಹಿಳಾ ಸಾಹಿತ್ಯದ ಕಲ್ಪನೆಯ ಬಗ್ಗೆ ಇನ್ನಷ್ಟು ಆಲೋಚನೆ ಅಗತ್ಯ. ನಾವು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವ ಉದ್ದೇಶ ಇಷ್ಟೆ: ಶತಮಾನಗಳಿಂದ ಹೆಣ್ಣಿನ ದನಿ ಕೇಳಿಸದೇ ಹೋಗಿದೆ. ಅವಳ ಬದುಕಿನ ಕಟು ವಾಸ್ತವ್ಯವನ್ನು ಮರೆಸುವುದರಲ್ಲಿ ಸಮಾಜದ ಪ್ರಬಲ ಗುಂಪುಗಳು ಒಂದಾಗಿವೆ. ಈ ಅಗೋಚರ ಹೆಣ್ಣಿನ ಅಚಲ ಸಂಕೇತವಾಗಿ ಮಹಿಳಾ ಸಾಹಿತ್ಯದ ಪರಂಪರೆಯನ್ನು ನಿರ್ಮಾಣ ಮಾಡಬೇಕಾಗಿದೆ. ಹಾಗೆಯೇ, ಹೆಣ್ಣಿನ ಹೋರಾಟದ ವೃತ್ತಾಂತವನ್ನು ಬಣ್ಣಿಸುವುದರ ಮೂಲಕ, ಹುದುಗಿ ಹೋಗಿರುವ ದಾಸ್ಯದ ಮತ್ತು ವಿಜಯದ ಐತಿಹಾಸಿಕ ಕೊಂಡಿಗಳನ್ನು ಪ್ರತ್ಯಕ್ಷಿಸಬೇಕು. ಹೆಂಗಸನ್ನು ಸಾದೃಶ್ಯ ಮತ್ತು ಶ್ರವ್ಯ ಗಳನ್ನಾಗಿಸುವ ಈ ಕಾರ್ಯದಲ್ಲಿ ನಾವು ಉಪಯೋಗಿಸಬಹುದಾದ ಅಂಶಗಳು ಹಲವು. ಅನುಪಮಾ ನಿರಂಜನರ ಕಾದಂಬರಿ 'ಮಾಧವಿ' ಐತಿಹಾಸಿಕ ಮತ್ತು ಪೌರಾಣಿಕ ಅಂಶ ಗಳನ್ನು ಬಳಸಿಕೊಳ್ಳುವ ರೀತಿಯಿಂದಾಗಿ ಸಮಕಾಲೀನ ಸಾಹಿತ್ಯದಲ್ಲಿ ವಿಶಿಷ್ಟವಾಗಿದೆ.

'ಮಾಧವಿ'ಯ ಮುನ್ನುಡಿಯಲ್ಲಿ ಲೇಖಕಿ ಹೇಳಿದ್ದಾರೆ: "ಪುರಾಣದ ವ್ಯಕ್ತಿ ಗಳನ್ನೂ ಆಗಿನ ಸಮಾಜವನ್ನೂ ವೈಜ್ಞಾನಿಕವಾಗಿ ವಿಶ್ಲೇಷಿಸುವುದು .... ಅಗತ್ಯ. (ಪು. ೫). ಈ ಮಾತನ್ನು ನಾವು ಇತಿಹಾಸದ ಪುನರುಚ್ಚಾರದ ಅಥವಾ ಪುನರ್ ವಿಮರ್ಶೆಯ ಹಿನ್ನೆಲೆಯಲ್ಲಿ ಅರ್ಥೈಸಬಯಸುತ್ತೇವೆ. ಭೂತ ಭವಿಷ್ಯತ್ತುಗಳ

ಸುಳಿವಿಲ್ಲದೆ, ರಂಗುರಂಗಿನ ವರ್ತಮಾನದಲ್ಲಿ ತೇಲುವ ಬಹುಪಾಲು ಮಹಿಳಾ ಸಾಹಿತ್ಯದಿಂದ ದೂರ ನಿಲ್ಲುತ್ತದೆ 'ಮಾಧವಿ'. ಸಂಪ್ರದಾಯವನ್ನು ಭಿನ್ನವಾಗಿ ಬಳಸಿದಾಗ ಉದ್ಭವಿಸುವ ಹೊಸ ವಿಚಾರಗಳಿಗೆ, ನವೀನ ವಿಚಾರಧಾರೆಗೆ 'ಮಾಧವಿ' ಪ್ರತೀಕಳಾಗುತ್ತಾಳೆ.

ಯಾವುದೇ ಸಮಾಜದ ಜ್ಞಾನ ಮತ್ತು ಸಂಪ್ರದಾಯಗಳ ಅವಿಚ್ಛಿನ್ನತೆಯೊಳಗೆ ಒಡಕುಗಳನ್ನೂ ಕವಲುದಾರಿಗಳನ್ನೂ ಗುರುತಿಸಬಹುದು. ತ್ರಿವೇಣಿ ಮತ್ತು ವಾಣಿಯವರ ಬರವಣಿಗೆಯ ಪರಂಪರೆಗೆ ಬದ್ಧವಾಗಿದ್ದ ಅನುಪಮಾ ಅವರ ಕಾದಂಬರಿಗಳ ಸಾಲಿನಲ್ಲಿ 'ಮಾಧವಿ' ಇಂಥ ಒಂದು ಕವಲಿನ ದಿಕ್ಸೂಚಿ ಎಂದರೆ ತಪ್ಪಾಗಲಾರದು. ಲೇಖಕಿಯರೇ ಹೇಳುವಂತೆ, 'ಮಾಧವಿ'ಯ ಅನಂತರದ ತಮ್ಮ ಕೃತಿಗಳ ವಸ್ತು ಅನಿವಾರ್ಯವಾಗಿ ಬದಲಾಗತೊಡಗಿತು; ಹಲವು ಸಮಾಜ ಸೃಷ್ಟಿತ ಸನ್ನಿವೇಶಗಳಿಗೆ ಸಿಕ್ಕಿ ಅವರ ಬಹುತೇಕ ಪಾತ್ರಗಳು ಬಳಲಿದರೂ ಕೊನೆಗೆ ಉಳಿಯುವುದು ಅಚಲ ಮನಸ್ಥೈರ್ಯ. 'ಮಾಧವಿ'ಯ ಪೌರಾಣಿಕ ಕಥಾತಂತ್ರ ಮಹಿಳಾ ಸಾಹಿತ್ಯಕ್ಕೆ ಹೊಸತಾಗಿತ್ತು. ಕನ್ನಡದ ಮಹಿಳಾ ಸಾಹಿತ್ಯದ ಪರಂಪರೆಯ ಮೊದಲಿಗರಾದ ತಿರುಮಲಾಂಬ ಮತ್ತು ಇನ್ನಿತರರ ಕೃತಿಗಳಲ್ಲೂ ಪೌರಾಣಿಕ ಪಾತ್ರಗಳ ಉಪಯೋಗವನ್ನು ನಾವು ಕಾಣಬಹುದು, ನಿಜ. ಆದರೆ ಇವರು ಇತಿಹಾಸ ಅಥವಾ ಪುರಾಣವನ್ನು ವಿಮರ್ಶಾತ್ಮಕವಾಗಿ ಬಳಸಿಕೊಳ್ಳದೆ ಅದು ಪೂರ್ವನಿರ್ಮಿತ ಅಂಶವೆಂದು ಒಪ್ಪಿ, ಅಂಗೀಕರಿಸಿಕೊಂಡಿದ್ದಾರೆ.

ಈಗ ಕಾದಂಬರಿಯ ವಸ್ತುವಿನ ಕಡೆ ಗಮನ ಹರಿಸೋಣ. ಮಾಧವಿ ರಾಜ ಯಯಾತಿಯ ಮಗಳು: ಸುಕೋಮಲ ರಾಜಕುಮಾರಿ. ಸಕಲ ಲಜ್ಜಾ ಭಾವನೆಗಳಿಂದ ಸ್ವಯಂವರಕ್ಕಾಗಿ ಸಿದ್ಧಳಾಗುತ್ತಿದ್ದಾಳೆ. ಆಗ ಗಾಲವ ಮುನಿಯು ಆಸ್ಥಾನಕ್ಕೆ ಬಂದು, ತನ್ನ ಗುರುದಕ್ಷಿಣೆ ತೀರಿಸುವ ಸಂಬಂಧವಾಗಿ ಮೈಯೆಲ್ಲ ಬೆಳ್ಳಗೂ ಒಂದು ಕಿವಿ ಕಪ್ಪಾಗಿಯೂ ಇರುವ ೮೦೦ ಕುದುರೆಗಳನ್ನು ಬೇಡುತ್ತಾನೆ. ಇಂಥ ಕುದುರೆಗಳು ತನ್ನಲ್ಲಿ ಇಲ್ಲವೆಂದೂ ಮಗಳು ಮಾಧವಿಯನ್ನೇ ಕೊಡುವುದಾಗಿಯೂ ಯಯಾತಿ ಸೂಚಿಸುತ್ತಾನೆ. ಕುದುರೆಗಳ ಸಂಪಾದನೆಯಲ್ಲಿ ವಿನಿಮಯದ ವಸ್ತುವಾಗಿ ಮಾಧವಿ ಒಬ್ಬ ರಾಜನಿಂದ ಮತ್ತೊಬ್ಬನ ಬಳಿ ಹೋಗಬೇಕಾಗುತ್ತದೆ. ಮೂರು ರಾಜರಿಗೆ ಮೂರು ಗಂಡುಮಕ್ಕಳನ್ನು ಕೊಡುವ ಮಾಧವಿಯ ಸಹಾಯದಿಂದ ಗಾಲವ ೬೦೦ ಕುದುರೆಗಳನ್ನು ಪಡೆಯುತ್ತಾನೆ. ಕೊನೆಗೆ ಮತ್ತೂ ಇನ್ನೂರು ಕುದುರೆಗಳ ಬದಲಾಗಿ ಮಾಧವಿಯನ್ನೇ ಗುರು ವಿಶ್ವಾಮಿತ್ರನ ಬಳಿ ಕರೆದೊಯ್ಯುತ್ತಾನೆ. ಆತನಿಗೂ ಗಂಡು ಮಗು ಹುಟ್ಟಿದಮೇಲೆ ಮಾಧವಿಯನ್ನು ತಂದೆಯ ಮನೆಗೆ ಹಿಂತಿರುಗಿಸುತ್ತಾನೆ ಗಾಲವ.

ಯಯಾತಿ ರಾಜ ಭಾರೀ ಸ್ವಯಂವರವನ್ನು ಏರ್ಪಡಿಸುತ್ತಾನೆ. ಮಾಧವಿ ಹಿಡಿದ ಹಾರವನ್ನು ಕೆಳಗೆಸೆದು ನೆರೆದ ರಾಜರನ್ನೆಲ್ಲಾ ತಿರಸ್ಕರಿಸಿ ಕಾಡಿಗೆ ಹೊರಟುಹೋಗುತ್ತಾಳೆ.

ಲೇಖಕಿಯರು ಹೇಳುವ ಪ್ರಕಾರ. "ಮಾಧವಿಯ ಭಾವನೆಗಳು, ಪ್ರತಿಕ್ರಿಯೆಗಳು, ಎಲ್ಲ ಕಾಲದ ಸ್ತ್ರೀಯರೂ ತೋರಿಸುವಂಥವು". (ಪು.೯) ಆಕೆಯದು "ವೈಯಕ್ತಿಕ ಗೆಲವು" ಅಂತಲೂ ಬರೆಯಲಾಗಿದೆ. ನಮ್ಮ ಅಭಿಪ್ರಾಯದಲ್ಲಿ ಇಂಥ ಹೇಳಿಕೆಗಳು ಮಹಿಳೆಯರೇ ಆಗಲಿ ಗಂಡಸರೇ ಆಗಲಿ ಹೇಗೆ ಬಹುಮಟ್ಟಿಗೆ ಸಾಮಾಜಿಕವಾಗಿ ನಿರ್ಮಿತರಾಗಿದ್ದಾರೆ ಅನ್ನುವುದನ್ನು ಮರೆಸಬಹುದು. ಆದರೆ ಕಾದಂಬರಿಯೇ ಲೇಖಕಿಯ ಮಾತುಗಳಿಗೆ ವಿರುದ್ಧವಾದ ರೀತಿಯಲ್ಲಿ ಸೃಷ್ಟಿಯಾಗಿರುವ ಹಾಗಿದೆ. ಪಾತ್ರಗಳನ್ನು ಮನೋವೈಜ್ಞಾನಿಕ ವಸ್ತುನಿಷ್ಠತೆಯಿಂದ ಲೇಖಕಿಯರು ವರ್ಣಿಸಲು ಪ್ರಯತ್ನಿಸಿದಾಗ ಕತೆ ತೆಳುವಾಗುತ್ತದೆ. ಹೀಗಾಗಿ ಮಾಧವಿಯ ಪಾತ್ರವನ್ನು ಬೇರೆಯೇ ದೃಷ್ಟಿಕೋನದಿಂದ ನಾವು ನೋಡಬೇಕು. ಆಕೆಯದು epic ಪಾತ್ರ. ಈ ಮಹಿಳೆ ಹೇಗೆ ಸಾಮಾಜಿಕ ಶಕ್ತಿಗಳಿಂದಾಗಿ ನಿರ್ಮಿತಳಾಗಿದ್ದಾಳೆ ಎಂಬುದನ್ನು ಲೇಖಕಿ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಯಯಾತಿ, ಗಾಲವ, ಮಾಧವಿಯ ಮಕ್ಕಳ ತಂದೆಯರು, ವಿಶ್ವಾಮಿತ್ರ, ದಾಸಿಯರು. ಶಿಷ್ಯರು-ಇವರೆಲ್ಲ ಒಂದು ಸ್ತರದಲ್ಲಿ ಮಾತ್ರ ವ್ಯಕ್ತಿಗಳು. ಮತ್ತೊಂದು ಸ್ತರದಲ್ಲಿ ಅವರು ಒಂದು ಇಡೀ ಸಮಾಜ ವ್ಯವಸ್ಥೆಯ ಪ್ರತೀಕಗಳಾಗುತ್ತಾರೆ. ಕಾದಂಬರಿಯುದ್ದಕ್ಕೂ ಮಾಧವಿಯ 'ಮೌನ' ಹೇಗೆ ಸಾಂಕೇತಿಕವಾಗಿದೆಯೋ ಅವಳ ಪ್ರತಿಭಟನೆ ಕೂಡ ಶಕ್ತಿಯುತ ಸಂಕೇತವಾಗಿ ಕಂಡು ಬರುತ್ತದೆ. ನಾನಾ ವಿಧದ ಶೋಷಣೆಯನ್ನು ಮಾಧವಿ ಅರ್ಥೈಸಿಕೊಂಡಾಗಲಿಯೇ ಆಕೆಯ ಪ್ರತಿಭಟನೆ ತೀವ್ರವಾಗುವುದು ಗಮನಾರ್ಹ. ದಾಸಿಯರ ಆರ್ಥಿಕ-ಸಾಮಾಜಿಕ ಶೋಷಣೆ ಮತ್ತು ಮುನಿಶಿಷ್ಯರ ಧಾರ್ಮಿಕ ಶೋಷಣೆ ಮಾಧವಿಯ ಬೌದ್ಧಿಕ ಬೆಳವಣಿಗೆಗೆ ಸಹಾಯ ನೀಡುತ್ತವೆ.

ಮಾಧವಿ ಪೌರಾಣಿಕ ವ್ಯಕ್ತಿ, ನಿಜ. ಆದರೆ ಅವಳನ್ನು ಶೋಷಿತ ಹೆಣ್ಣಿನ ಅಥವಾ ಹೆಣ್ಣಿನ ಧೃಡತೆಯ ಸಂಕೇತ ಎಂದು ತೆಗೆದುಕೊಂಡಾಗ ನಾವು ಇದುವರೆಗೆ ಒಪ್ಪಿಕೊಂಡ ಇತಿಹಾಸವನ್ನು ಹೊಸದಾದ ದೃಷ್ಟಿಯಿಂದ ನೋಡಿದಂತೆ. "ಪುರಾಣದ ವ್ಯಕ್ತಿಗಳನ್ನೂ ಆಗಿನ ಸಮಾಜವನ್ನೂ ವೈಜ್ಞಾನಿಕವಾಗಿ ವಿಶ್ಲೇಷಿಸುವುದು ಅಗತ್ಯ," ಎನ್ನುತ್ತಾರೆ ಲೇಖಕಿ. ಇದರೊಂದಿಗೆ ಸೇರಿಸಬಹುದಾದ ಇನ್ನೊಂದು ಅಂಶ: ಗತಕಾಲದ ಸಮಾಜದ, ಆಗಿನ ಮಹಿಳೆಯ ಸ್ಥಿತಿಗತಿಯ ಅರಿವಿನ ಜತೆಗೆ, ಆ ಜನಜೀವನದ, ಆಚಾರ-ವಿಚಾರಗಳ ಹಾಗೂ ಇಂದಿನ ನಮ್ಮ ಸಾಮಾಜಿಕ ಸ್ಥಿತಿಯ ನಡುವಿನ ಸಂಬಂಧಗಳನ್ನು ಬೆಳಕಿಗೆ ತರಬೇಕು. ಪೌರಾಣಿಕ ಅಂಶಗಳು ನಮ್ಮ ಆಲೋಚನೆಗಳಲ್ಲಿ, ಸಾಂಸ್ಕೃತಿಕ ಮೌಲ್ಯಗಳಲ್ಲಿ ಹಾಸುಹೊಕ್ಕಾಗಿ ಇವೆ. ಇದೇ

ಅಂಶಗಳನ್ನು ನೂತನ ದೃಷ್ಟಿಕೋನದಿಂದ ನೋಡಿದಾಗ ಇತಿಹಾಸದ ಮೇಲೆ ಪುರಾಣ ಬೆಳಕು ಚೆಲ್ಲಿದಂತೆ ಇರುತ್ತದೆ. ಪುರಾಣದ ಪುನರ್‌ವಿಮರ್ಶೆಯು ಹೊಸ ಇತಿಹಾಸವನ್ನು, ಹೊಸ ಪರಂಪರೆಯನ್ನು ಸೃಷ್ಟಿಸುತ್ತದೆ.

ಈ ಕಾದಂಬರಿ ಪ್ರಕಟಣೆಗೊಂಡ ಸಂದರ್ಭದತ್ತ ಕಣ್ಣು ಹಾಯಿಸೋಣ. ಅದರ ಮೊದಲ ಆವೃತ್ತಿ ಹೊರ ಬಿದ್ದದ್ದು ೧೯೭೬ರಲ್ಲಿ. ಅದು 'ಮಹಿಳಾ ದಶಕ'ದ ಕಾಲ. ಹಾಗೆಯೇ ಭಾರತದಲ್ಲಿ 'ಮಹಿಳಾ ಚಳುವಳಿ' ಬೇರು ಬಿಡುತ್ತಿದ್ದ ಕಾಲ. ಹೆಣ್ಣಿನ ಶೋಷಣೆಯ ಹಾಗೂ ಆಕೆಯ ಧಾರ್ಢ್ಯದ ದಾಖಲೆಗಳನ್ನು ಅರಸಿ, ಪುನರ್ ನಿರ್ಮಿಸಿ, ಇತಿಹಾಸದ ಬುನಾದಿಯನ್ನು ಸ್ಪಷ್ಟಪಡಿಸುತ್ತಿದ್ದ ಕಾಲ. ಈ ಸಂಕಲ್ಪದೊಂದಿಗೇ ಭೂತಕಾಲವನ್ನು ನಮ್ಮ ವಶಕ್ಕೆ ತೆಗೆದುಕೊಳ್ಳುವ ಕಾರ್ಯ ಹೆಜ್ಜೆ ಹಾಕಿತು. ಇಂಥ ಸನ್ನಿವೇಶದಲ್ಲಿ ಐತಿಹಾಸಿಕ ಘಟನೆಗಳ ಅಥವಾ ಪುರಾಣ ಕತೆಗಳ ಬಳಕೆಯು ಒದಗಿಸುವ ಸಾಂಕೇತಿಕ ಅರ್ಥ ವರ್ತಮಾನದ ವಾಸ್ತವ್ಯಕ್ಕೆ ಪ್ರತಿಕ್ರಿಯೆ ನೀಡುವುದರಲ್ಲಿ ಸಹಾಯಕವಾಗಿದೆ.

ಹೀಗೆ ಇತಿಹಾಸ ಸದಾಕಾಲ ವರ್ತಮಾನದ ಮೇಲೆ ಪ್ರಭಾವ ಬೀರುತ್ತದೆ. ಸಾಮಾನ್ಯವಾಗಿ ನಮ್ಮ ದೇಶದ ಮಹಿಳೆಯರಿಗೆ ಮಾದರಿಗಳಾಗಿ ಸೀತೆ ಅಥವಾ ಸಾವಿತ್ರಿಯನ್ನು ಎತ್ತಿಹಿಡಿಯಲಾಗಿದೆ. ಎಷ್ಟೇ ಕಷ್ಟ ಬರಲಿ, ಎಷ್ಟೇ ಹಿಂಸೆ ಅನುಭವಿಸಲಿ ಗಂಡನಿಗೋಸ್ಕರ ಎಲ್ಲವನ್ನೂ ತ್ಯಾಗಮಾಡುವ ಪತಿವ್ರತೆಯರು ಇವರು. ಊಳಿಗಮಾನ್ಯ ಸಮಾಜ ವ್ಯವಸ್ಥೆಯಲ್ಲಿ ಪಿತೃಪ್ರಧಾನ ವ್ಯವಸ್ಥೆ ಗಟ್ಟಿಯಾಗುತ್ತಿರುವ ಕಾಲದಲ್ಲಿ ಈ ಹೆಂಗಸರು ಯಾರ ಆಸ್ತಿ ಅನ್ನುವುದು ಮುಖ್ಯವಾಗುತ್ತದೆ. ಅವರ 'ಶೀಲ'ದ ಕಡೆಗೂ ಗಮನ ಹರಿಯುತ್ತದೆ. ತಂದೆಯಿಂದ ಮಗನಿಗೆ ರಾಜ್ಯವೇ ಆಗಲಿ ಎರಡೆಕರೆ ಜಮೀನೇ ಆಗಲಿ ಬರಬೇಕಾದಾಗ ಪಿತೃತ್ವ ಪ್ರಮುಖವಾಗುತ್ತದೆ; ಹೆಂಗಸಿನ ಮೇಲಿನ ಅಧಿಕಾರವೂ ಹೆಚ್ಚುತ್ತದೆ. ಅನುಪಮಾ ನಿರಂಜನರು ಡಾಂಗೆಯವರ India from Primitive Communism to Slavery ಯನ್ನು ಉಲ್ಲೇಖಿಸುತ್ತಾರೆ: "ಊಳಿಗಮಾನ್ಯ ಸಮಾಜ ವ್ಯವಸ್ಥೆಯಲ್ಲಿ ಹೆಂಗಸನ್ನು ಕೊಳ್ಳುವುದು, ಮಾರುವುದು, ದಾನಮಾಡುವುದು ಸಾಧಾರಣ ಪದ್ಧತಿಯಾಗಿತ್ತು" (ಪು ೫). ಇಂಥ ಸಮಾಜ ವ್ಯವಸ್ಥೆಯಲ್ಲಿ ಒಂದು ಕಡೆ ಮಾಧವಿಯನ್ನು ದಾನ ಮಾಡುವ ಯಯಾತಿ ರಾಜ ಮತ್ತೊಂದು ಕಡೆ ಸ್ವಯಂವರವನ್ನು ಏರ್ಪಡಿಸಿ ಅವಳ ಕನ್ಯತ್ವವನ್ನು ಸಾರಿ ಹೇಳಬೇಕು. ಮಹಿಳೆಯ ಶರೀರದ ಮೇಲೆ ಸಂಪೂರ್ಣ ಅಧಿಕಾರ ವಹಿಸುವ ಪಿತೃಪ್ರಧಾನ ವ್ಯವಸ್ಥೆ ಅವಳನ್ನು ಮಾರಲು ಅಥವಾ ಕೊಳ್ಳಲು ತಯಾರಿದ್ದರೂ ಅವಳ ಕನ್ಯತ್ವದ ಅಥವಾ ಶೀಲದ ಸಾಬೀತು ಕೇಳಬಹುದು. ಇದು ಮೇಲಿಂದ ಮೇಲೆ ನೋಡಿದಾಗ ಮಾತ್ರ ವಿಪರ್ಯಾಸದಂತೆ ಕಾಣುತ್ತದೆ.

ಪುರಾಣಗಳಲ್ಲಿ ಮಹಿಳೆಯ ಪಾತ್ರವನ್ನು ಗುರುತಿಸುವವರು ಸೀತೆ ಮುಂತಾದವರ ಬಗ್ಗೆ ಮಾತಾಡಿದರೂ ಮಾಧವಿಯಂಥ ಪಾತ್ರವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ತಮ್ಮ ಪಾಡನ್ನು ಸ್ವೀಕರಿಸುವ ಸತಿ ಸಾವಿತ್ರಿಯರು ಹಿಂದೂ ಮಹಿಳೆಯ ಮಾದರಿಯಾಗಿ ಮಾರ್ಪಾಡಾದರೆ ಎಲ್ಲವನ್ನೂ ತಿರಸ್ಕರಿಸುವ ಶಕ್ತಿಯನ್ನು ಹೊಂದುವ ಮಾಧವಿ ವಿಚಿತ್ರವಾಗಿಯೇ ಕಾಣುತ್ತಾಳೆ. ಆದರೆ ಈ ಎರಡು ರೀತಿಯ ಪಾತ್ರಗಳೂ ಪುರಾಣಗಳಲ್ಲಿ ಕಂಡುಬರುತ್ತವೆ. ಮಹಿಳೆಯರಿಗಾಗಿ ಪರಂಪರೆಯನ್ನು ಸೃಷ್ಟಿಸುವವರು ಸೀತೆಯನ್ನು ಸೇರಿಸಿ ಮಾಧವಿಯನ್ನು ಮರೆತು ಬಿಡುತ್ತಾರಲ್ಲವೇ? ಪುರಾಣ, ಇತಿಹಾಸಗಳನ್ನು ಪುನರ್‌ನಿರ್ಮಿಸುವ ಕಾರ್ಯದಲ್ಲಿ ತೊಡಗಿರುವ ಲೇಖಕ ಲೇಖಕಿಯರು ಮಾಧವಿಯಂಥ ನಾಯಕಿಗೆ ತಕ್ಕ ಸ್ಥಾನವನ್ನು ಕೊಡಬೇಕು. ಈ ಕಾರ್ಯದಲ್ಲಿ ಅನುಪಮಾರವರ 'ಮಾಧವಿ' ಕಾದಂಬರಿ ಮುಖ್ಯವಾದ ಹೆಜ್ಜೆಯಾಗಿದೆ.

೦ “ಸಂಕೋಲೆಯೊಳಗಿಂದ”

-ಮುರಳೀಧರ ಉಪಾಧ್ಯ ಹಿರಿಯಡಕ

'ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದನು ಒಬ್ಬರ ಒಡವೆ ಎಂದು ಅರಿಯಬೇಕು' - ಗೊಗ್ಗವ್ವೆ (ವಚನಕಾರ್ತಿ)

“ಪುಸ್ತಕಗಳನ್ನು ಓದದೆ ಟೀಕಿಸಲೆತ್ನಿಸುವ ಪುರುಷರ ಅಹಂಕಾರ ನನ್ನನ್ನು ದಿಗ್ಭ್ರಮೆಗೊಳಿಸಿದೆ”[1] ಎಂದು ಡಾ। ಅನುಪಮಾ ನಿರಂಜನ ಹೇಳುತ್ತಾರೆ. ಯಾಕೆ ಈ ಮಾತು ನೆನಪಾಗುತ್ತಿದೆ ಎಂದರೆ, ಅವರ 'ಸಂಕೋಲೆಯೊಳಗಿಂದ' ವಿಮರ್ಶಕರು ಅಲಕ್ಷಿಸಿರುವ ಕಾದಂಬರಿಯೇನೂ ಅಲ್ಲ. 'ಸಂಕೋಲೆಯೊಳಗಿಂದ' ಮೌಲಿಕ ದೃಷ್ಟಿಯಿಂದ ಒಳ್ಳೆಯ ಕಾದಂಬರಿ ಎಂದು ಡಾ। ಡಿ. ಆರ್. ನಾಗರಾಜ್ ಹೇಳಿದ್ದಾರೆ.[2] ಗಿರಡ್ಡಿ ಗೋವಿಂದ ರಾಜರು 'ಕನ್ನಡ ಕಾದಂಬರಿಗಾರ್ತಿಯರಲ್ಲಿ ವಸ್ತು ನಿರ್ವಹಣೆ' ಎಂಬ ಲೇಖನದಲ್ಲಿ ಕೇಂದ್ರ ವಸ್ತುವುಳ್ಳ ಕಾದಂಬರಿಗಳಿಗೆ ಉದಾಹರಣೆಯಾಗಿ 'ಸಂಕೋಲೆಯೊಳಗಿಂದ' ಕಾದಂಬರಿಯನ್ನು ಚರ್ಚಿಸಿದ್ದಾರೆ. ಬೇರೆ ರೀತಿಯ ಅಭಿಪ್ರಾಯವೂ ಇದೆ. ಚ. ಸರ್ವಮಂಗಳಾ ಅವರು ತನ್ನ 'ಕನ್ನಡ ಬರಹಗಾರ್ತಿಯರ ಒಲವು ನಿಲವುಗಳು' ಲೇಖನದಲ್ಲಿ ' ಒಂದೇ ರೀತಿಯ ಜೀವನಕ್ರಮ, ಭಾವನಾವಶತೆ, ಬಣ್ಣ ಬಣ್ಣದ ಬೆಡಗುಗಾರಿಕೆ, ಸುಳ್ಳು ಸುಳ್ಳೆ ಆದರ್ಶ, ಹಳಸಿದ ವಸ್ತು, ಕನಸಿನ ಒಡೆಯದ ಪೊಟ್ಟಣಗಳು, ಇಷ್ಟು ಬಹುಪಾಲು ಲೇಖಕಿಯರ ಒಲವು-ನಿಲವಾದವು' ಎನ್ನುತ್ತ ಇತರ ಕಾದಂಬರಿಗಳೊಂದಿಗೆ 'ಸಂಕೋಲೆಯೊಳಗಿಂದ' ಕಾದಂಬರಿಯನ್ನು ಹೆಸರಿಸಿದ್ದಾರೆ.[3] (ಇದು ಅವಸರದ ಓದಿನ ತೀರ್ಪು ಎಂದು ನನ್ನ ಅಭಿಪ್ರಾಯ).

'ಸಂಕೋಲೆಯೊಳಗಿಂದ' ಕಾದಂಬರಿಯನ್ನು ಬರೆದ ಕಾಲದ ತನ್ನ ಜೀವನಾನುಭವ ಮತ್ತು ಸೃಜನಶೀಲ ಚಿಂತನೆಯ ಹಿನ್ನೆಲೆಗಳನ್ನು ಅನುಪಮಾ ನಿರಂಜನರು ತನ್ನ ಲೇಖನವೊಂದರಲ್ಲಿ ವಿವರಿಸಿದ್ದಾರೆ. ಅವರು ಹೇಳಿರುವಂತೆ, 'ಸಂಕೋಲೆಯೊಳಗಿಂದ' ಕಾದಂಬರಿ ಬರೆದಾಗ ನನಗೆ ೧೯ ವರ್ಷ ವಯಸ್ಸು. ನಾನಾಗ ಮೆಡಿಕಲ್ ಕಾಲೇಜು ವಿದ್ಯಾರ್ಥಿನಿ. ಅಷ್ಟು ಹೊತ್ತಿಗೆ ನಾನು ಒಂದೂ ಇಂಗ್ಲಿಷ್ ಕಾದಂಬರಿ ಓದಿರಲಿಲ್ಲ. ಹಳೆಗನ್ನಡ ಸಾಹಿತ್ಯದ ಗಂಧ ಕೂಡ ನನಗಿರಲಿಲ್ಲ. ಆದರೆ ಸೀಮಿತ ಅನುಭವಕ್ಕೆ ನಾನು ತೀವ್ರವಾಗಿ ಸ್ಪಂದಿಸಿದೆನೆಂದು ಕಾಣುತ್ತದೆ."[4] "ಈ ಕಾದಂಬರಿಯ ಪಾತ್ರ ವಿಜಯಳಂತಹ ಹಲವಾರು ಅಸಹಾಯ ಜೀವಿಗಳ ನೆನಪಿಗೆ ಈ ಕೃತಿ. ಜೀವಮಾನದಲ್ಲಿ ಎಂದೂ ತಮ್ಮ ಆಸೆ ಆಕಾಂಕ್ಷೆಗಳನ್ನು ವ್ಯಕ್ತಪಡಿಸದೆ ಕೊರಗಿ, ಸೊರಗಿ ಮಣ್ಣಿನ ಮಡಿಲು ಸೇರುವ ಮೂಕ ಜೀವಿಗಳ ಯಾತನೆ ಕೊನೆಗಾಣಬೇಕು ಎಂಬ ಆಶಯದೊಡನೆ" ಅನುಪಮಾ ಈ ಕಾದಂಬರಿ ಬರೆದಿದ್ದಾರೆ. 'ಹೆಣ್ಣಿನ ಮೇಲಿನ ಗಂಡಿನ ದಬ್ಬಾಳಿಕೆ' 'ಸಂಕೋಲೆಯೊಳಗಿಂದ' ಕಾದಂಬರಿಯ ವಸ್ತು ಎಂದು ಜಿ. ಎಸ್. ಆಮೂರ್ ಸರಿಯಾಗಿ ಗ್ರಹಿಸಿದ್ದಾರೆ.[5] ಈ ಕಾದಂಬರಿಯ ವಸ್ತು-ತಂತ್ರಗಳ ಕುರಿತು ಲೇಖಕಿ ಅನುಪಮಾ ಹೀಗೆಂದಿದ್ದಾರೆ-"ಹೀಗೆ ರೋಗಿ ವಿಜಯಾ, ಮೆಡಿಕಲ್ ವಿದ್ಯಾರ್ಥಿನಿ ಸಂದಾ ಮತ್ತು ನರ್ಸ್ ನೀಲಾ ಈ ಮೂರು ಮುಖ್ಯ ಪಾತ್ರಗಳನ್ನಿರಿಸಿಕೊಂಡು ನಾನು 'ಸಂಕೋಲೆಯೊಳಗಿಂದ' ಕಾದಂಬರಿ ರಚಿಸಿದೆ. ಈ ಕಾದಂಬರಿಯ ಕೇಂದ್ರವಸ್ತು ಸ್ತ್ರೀಶೋಷಣೆ. ಶೋಷಣೆಯ ವಿವಿಧ ಸ್ತರಗಳು ಮತ್ತು ಅದಕ್ಕೆದಿರು ಹೋರಾಟ ಕಟ್ಟುವ ಆಶಯ ಒಂದಕ್ಕೊಂದು ಪೂರಕವಾಗಿ ಬರುತ್ತವೆ. ಕಾದಂಬರಿಯ ಆಕೃತಿ ಕೂಡ ಆ ಕಾಲಕ್ಕೆ ಹೊಸದಾಗಿತ್ತು. ಪ್ರಥಮ ಪುರುಷದಲ್ಲಿ ವಿಜಯಾ ಆರಂಭಿಸುವ ಕತೆಯನ್ನು ಸಂದಾ ಮುಂದುವರಿಸುತ್ತಾಳೆ. ಮುಕ್ತಾಯ ನೀಲಾಳಿಂದ. ಈ ತಂತ್ರ ಕತೆಯ ವಿಕಾಸಕ್ಕೆ ನೆರವಾಗುವುದಲ್ಲದೆ ಧ್ವನಿ ದಟ್ಟವಾಗಲೂ ಸಹಾಯ ಮಾಡಿದೆ".[6]

ಪುರುಷಪ್ರಧಾನವಾದ ನಮ್ಮ ಕೌಟುಂಬಿಕ, ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಮೇಲಿನ ಗಂಡಿನ ದಬ್ಬಾಳಿಕೆಯನ್ನು ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ'ಯ ಲೇಖಕ ಗುಲ್ವಾಡಿ ವೆಂಕಟರಾಯರು ಸೂಕ್ಷ್ಮವಾಗಿ ಗಮನಿಸಿದ್ದರು. ಹೆಣ್ಣಿನ ಶೋಷಣೆಯ ಸಮಸ್ಯೆಯನ್ನು ಲೇಖಕರು ಅರ್ಥೈಸಿಕೊಳ್ಳುವುದು ಎಷ್ಟು ಮುಖ್ಯವೋ, ಲೇಖಕಿಯರು ಸರಿಯಾಗಿ ಪರಿಗ್ರಹಿಸುವುದು ಅಷ್ಟೇ ಮುಖ್ಯ. ಹೆಣ್ಣಿನ ಸ್ಥಿತಿಯನ್ನು ಕುರಿತ ಲೇಖಕಿಯ ಅರಿವು ಸಾಮಾಜಿಕ ಮೌಲ್ಯಗಳ ಬದಲಾವಣೆ ಹಾಗೂ ಮಹಿಳಾ ಸಾಹಿತ್ಯದ ಮಾಗುವಿಕೆ ಎರಡೂ ದೃಷ್ಟಿಗಳಿಂದ ಮುಖ್ಯವಾಗುತ್ತದೆ. 'ಬೆಳೆಯ ಸಿರಿ ಮೊಳಕೆಯಲ್ಲಿ' ಎಂಬಂತೆ ಅನುಪಮಾ ತನ್ನ ಆರಂಭದ ಕೃತಿಗಳಲ್ಲೊಂದರಲ್ಲಿ ಪುರುಷಮದ- ಸ್ತ್ರೀಶೋಷಣೆಯ ವಸ್ತುವನ್ನು

ಚಿಂತಿಸಿದ್ದಾರೆ. (ಅವರ 'ಮಾಧವಿ' ಪೌರಾಣಿಕ ಕಾದಂಬರಿಯಲ್ಲಿ ಹೆಣ್ಣು ಗಂಡಿನ 'ಆಸ್ತಿ'ಯಾಗುವ ವಸ್ತು ಇದೆ.) 'ಸಂಕೋಲೆಯೊಳಗಿಂದ' ಕಾದಂಬರಿಯ ಆರಂಭದ ಭಾಗದಲ್ಲಿ, ಶ್ರೀಮಂತನೊಬ್ಬನ ಮಡದಿಯಾಗಿ ಸುಖದ ಭ್ರಮಾಲೋಕದಲ್ಲಿರುವ ವಿಜಯಾಗೆ ತಾನೇ ಸಂಕೋಲೆಯ ಒಳಗಿದ್ದೇನೆ ಎಂಬ ವಾಸ್ತವದ ಅರಿವು ಮೂಡು ತ್ತದೆ. ಅನುಭವಕ್ಕೆ ನಿಷ್ಠರಾಗಿ ಇರಬಯಸಿದ ಲೇಖಕಿ ವೈಜ್ಞಾನಿಕ ಮನೋಧರ್ಮದ ಅವಿವಾಹಿತೆ ಮೆಡಿಕಲ್ ವಿದ್ಯಾರ್ಥಿನಿ ನಂದಾ ಮತ್ತು ನರ್ಸ್ ನೀಲಾರ ದೃಷ್ಟಿಕೋನ ದಲ್ಲಿ ಕಾದಂಬರಿಯನ್ನು ಮುಂದುವರಿಸಿದ್ದಾರೆ. ಅಲ್ಲಲ್ಲಿ ವಿಷಯಾಂತರ ಇದೆಯಾದರೂ ಈ ತಂತ್ರ ಅಸಹಜವೇನೂ ಆಗಿಲ್ಲ. ವಿಜಯಾ, ನಂದಾ, ನೀಲಾ ಮೂವರೂ ಹೆಣ್ಣಿನ ಶೋಷಣೆಯ ಸಮಸ್ಯೆಯನ್ನು 'ಒಳಗಿನಿಂದ' ನೋಡುತ್ತಿದ್ದಾರೆ. "ಬದಲಾಗಿ ವಿಜಯಾಳ ಗಂಡ ರಾಮನಾಥನ ದೃಷ್ಟಿಕೋನದ ಮೂಲಕ ಅವನ ಕಥೆಯ ಅರ್ಥ ವನ್ನು ಹೇಳುವುದು ಸಾಧ್ಯವಾಗಿದ್ದರೆ ವಸ್ತುವಿಗೆ ಹೆಚ್ಚಿನ ಸಂಕೀರ್ಣತೆ ಬರಬಹು ದಾಗಿತ್ತು."[7] ಎಂಬ ಜಿ. ಎಸ್. ಆಮೂರರ ಅಭಿಪ್ರಾಯಕ್ಕೆ ನನ್ನ ಸಮ್ಮತವಿಲ್ಲ. ನಂದಾ, ನೀಲಾ ಈ ಇಬ್ಬರೂ ನಿರೂಪಕಿಯರು ಲೇಖಕಿ ಅನುಪಮಾ ಅವರ ಪ್ರತಿನಿಧಿ ಗಳಾಗಿದ್ದಾರೆ. ಆರ್ಥಿಕವಾಗಿ ಸ್ವತಂತ್ರವಾಗಿರುವ ನೀಲಾ, ಸ್ವತಂತ್ರವಾಗಲಿರುವ ನಂದಾ- ಇವರ ಮೂಲಕ ಲೇಖಕಿ ಹೆಣ್ಣಿನ ಶೋಷಣೆಯ ವಿರುದ್ಧ ಹೋರಾಟ ಕಟ್ಟುವ ಕನಸು ಕಾಣುತ್ತಿದ್ದಾರೆ. ಈ ಕನಸಿನಲ್ಲಿ ಬಂಡಾಯದ ಧ್ವನಿ ಇದೆ. ರಾಮನಾಥನ ದೃಷ್ಟಿ ಕೋನದಿಂದ ಕಥೆಯನ್ನು ಮುಂದುವರಿಸಿದರೆ ವಸ್ತುವನ್ನು 'ಹೊರಗಿನಿಂದ' ನೋಡಿ ದಂತಾಗುತ್ತಿತ್ತು. ಪ್ರೊ। ಎಲ್. ಎಸ್. ಶೇಷಗಿರಿರಾಯರು ಅನುಪಮಾ ನಿರಂಜನರ ಯಾವ ಕಾದಂಬರಿಯನ್ನೂ ಹೆಸರಿಸದೆ, "ಅನುಪಮಾ ನಿರಂಜನರು ಮಧ್ಯಮ ವರ್ಗ ದವರ ಹಂಬಲ ಕಷ್ಟಕಾರ್ಪಣ್ಯಗಳನ್ನು ಸರಳವಾಗಿ, ನೇರವಾಗಿ ನಿರೂಪಿಸಿದರು. ಆದರೆ ತಂತ್ರ ಅನಿವಾರ್ಯವಾಗದೆ, ಹೊಸ ತಂತ್ರದ ಮೋಹಕ್ಕಾಗಿ ಬಳಸಿದಾಗ ಕಾದಂಬರಿ ತತ್ತರಿಸಿ ಸೋಲುವುದನ್ನು ಕಾಣಬಹುದು."[8] ಎಂದಿದ್ದಾರೆ. ಹೊಸ ತಂತ್ರದ 'ಮೋಹ' ಎಂಬ ಟೀಕೆ 'ಸಂಕೋಲೆಯೊಳಗಿಂದ' ಕಾದಂಬರಿಗೆ ಅನ್ವಯಿಸು ವುದಿಲ್ಲ.

ವಿಜಯಾ ತನ್ನ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದಿರುವ ಅನಾಥೆ. ಅವಳು ತನ್ನ ಚಿಕ್ಕಪ್ಪನ ಮಗ ನಾಗರಾಜನ ಗೆಳೆಯ ಸುಬ್ಬುವನ್ನು ಮೆಚ್ಚಿದರೂ ಅದನ್ನು ವ್ಯಕ್ತಪಡಿಸುವುದಿಲ್ಲ. ಸುಬ್ಬು ಅನ್ಯ ಜಾತಿಯವನು, ಆದ್ದರಿಂದ ಚಿಕ್ಕಪ್ಪ ಗದರಿಸಿ ಯಾರು ಎಂದು ಭಯಪಡುತ್ತಾಳೆ. ಅನಾಥ, ನವಶ್ರೀಮಂತರ ರಾಮನಾಥ ವಿಜಯಾ ಳನ್ನು ಮದುವೆಯಾಗುತ್ತಾನೆ. ರಾಮನಾಥನ ಸಂಪತ್ತಿಗೆ ಮಾರುಹೋದ ವಿಜಯಾಗೆ ಕ್ರಮೇಣ, 'ಬದುಕೋದಕ್ಕೆ ಹಣ, ಒಡವೆ ಸಾಲದು. ಪ್ರೀತಿಸುವ ಒಂದು ಹೃದಯ ಬೇಕು' ಎಂದು ಅನ್ನಿಸತೊಡಗುತ್ತದೆ. ರಾಮನಾಥ ಸ್ವಪ್ರೀತಿಯೂ ಇಲ್ಲದ,

ಇತರರನ್ನೂ ಪ್ರೀತಿಸಲಾರದ ಸ್ವಾರ್ಥಿ. ಹೆಂಡತಿಯ ಜತೆಗಿನ ಅವನ ಸಂಬಂಧ ಮನಶ್ಶಾಸ್ತ್ರಜ್ಞರು ಹೇಳುವ 'ಹ್ಯಾವಿಂಗ್' (HAVING) ಪ್ರವೃತ್ತಿಯದು. ಈ 'ಹ್ಯಾವಿಂಗ್' ಪ್ರವೃತ್ತಿಯ ಗಂಡು ಹೆಣ್ಣನ್ನು ತನ್ನ ಆಸ್ತಿ ಎಂದು ಪರಿಗಣಿಸುತ್ತಾನೆ. ಅವನಿಗೆ ಹೆಣ್ಣನ್ನು ಹತೋಟಿಯಲ್ಲಿಡುವುದು ಮುಖ್ಯವಾಗುತ್ತದೆ. ವಿಜಯಾ ಅನಾರೋಗ್ಯದಲ್ಲಿರುವ ತನ್ನ ಚಿಕ್ಕಪ್ಪನನ್ನು ನೋಡಲು ಹೋಗಬಯಸಿದಾಗ ರಾಮನಾಥ ಅನುಮತಿ ನೀಡುವುದಿಲ್ಲ. ಸುಬ್ಬು ತನ್ನನ್ನು ಪ್ರೀತಿಸುತ್ತಿದ್ದ ಎಂದು ತಿಳಿದಾಗ ವಿಜಯಾ ಪಶ್ಚಾತ್ತಾಪಪಡುತ್ತಾಳೆ. ಮೆಡಿಕಲ್ ವಿದ್ಯಾರ್ಥಿನಿ ನಂದಾ, ತನ್ನ ಗೆಳತಿ ವಿಜಯಾಳ ಗಂಡನ ಹೃದಯಹೀನ ವ್ಯಕ್ತಿತ್ವವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಾಳೆ. ವಿಜಯಾ ರಾಮನಾಥನಿಂದ ಪ್ರೀತಿಯನ್ನು ಬಯಸುತ್ತಾಳೆ. ಆದರೆ ಅವಳಿಗೆ ಅವನಿಂದ ಸಿಗುವುದು ಲೈಂಗಿಕ ರೋಗ ಮಾತ್ರ. ರೋಗದಿಂದ ನರಳುತ್ತಿರುವ ವಿಜಯಾಳನ್ನು ಕೈಬಿಟ್ಟು ರಾಮನಾಥ ಪಲಾಯನ ಮಾಡುತ್ತಾನೆ. ಹದಿನೆಂಟರ ಹರೆಯದಲ್ಲಿ ವಿಧವೆಯಾಗಿ ಅನಂತರ ನರ್ಸ್ ಕೆಲಸದಲ್ಲಿರುವ ನೀಲಾ, ವಿಜಯಾಳ ಕೊನೆಯ ದಿನಗಳಲ್ಲಿ ಅವಳಿಗೆ ಸಾಂತ್ವನ ನೀಡುತ್ತಾಳೆ. ಇಲ್ಲಿನ ಪಾತ್ರಗಳ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಲೇಖಕಿ ಅಲಕ್ಷಿಸಿದ್ದಾರೆ. ನಾಗರಾಜ, ಸುಬ್ಬು, ರಾಮನಾಥ ಮೊದಲಾದ ಇಲ್ಲಿನ ಪುರುಷಪಾತ್ರಗಳ ಚಿತ್ರಣ ಅಪೂರ್ಣವಾಗಿದೆ ಅನ್ನಿಸುತ್ತದೆ.

ಲಿಂಗಾಧಾರಿತ ಅಸಮಾನತೆ, ಶ್ರೀಮಂತ ಮಹಿಳೆ - ಬಡ ಮಹಿಳೆಯರ ಅಸಮಾನತೆ-ಇವುಗಳನ್ನು ಅನುಪಮಾ ಗಮನಿಸಿದ್ದಾರೆ. ವಿಜಯಾ ಯೋಚಿಸುತ್ತಾಳೆ- "ಆದರೆ ಅವರು ಗಂಡಸರು, ಏನು ಬೇಕಾದರೂ ಮಾಡಬಹುದು. ನಾವು ಹೆಂಗಸರು ಅಬಲೆಯರು. ಸಮಾಜ ನಿಂದಿಸುವುದು ನಮ್ಮನ್ನು ಮಾತ್ರ". ಮಹಿಳಾ ಕ್ಲಬ್‌ನ ಸದಸ್ಯೆ ಶ್ರೀರಂಗಮ್ಮ ಹೇಳುತ್ತಾರೆ - "ನಿಮಗೆ ಗೊತ್ತಿಲ್ವೇನು ? ಹೊಲಿಗೆ ನಿಟ್ಟಿಂಗ್ ಕಲಿತು ಎಷ್ಟೋ ಜನ ಜೀವನ ಮಾಡ್ತಿದ್ದಾರೆ. ಅಂಥ ಸ್ಥಳಗಳಿಗೆ ನಾವು ಹೋದರೆ ನಮ್ಮ ಮರ್ಯಾದೆ, ಘನತೆ ಗಾಂಭೀರ್ಯಕ್ಕೆ ಕುಂದು". ಸ್ತ್ರೀಸ್ವಾತಂತ್ರ್ಯದ ಕುರಿತು ಶ್ರೀರಂಗಮ್ಮನ ಹಾಸ್ಯ ಚಟಾಕಿ ಹೀಗಿದೆ-"ಸ್ವಾತಂತ್ರ್ಯ ಅಂದಾಗ ನಿಮ್ಮಂಥ ಶ್ರೀಮಂತ ಮಹಿಳೆಯರಿಗೆ ಅಂತ ಅರ್ಥ. ಇನ್ನೇನು ಇದನ್ನ ಬಡವರಿಗೆ ಅನ್ವಯಿಸುವುದಕ್ಕಾಗುತ್ಯೇ ? ತಿನ್ನೋಕೆ ಇಲ್ದೆ ಹತ್ತಾರು ಜನ ಮಕ್ಕಳನ್ನ ಕಟ್ಟಿಕೊಂಡು ಒದ್ದಾಡುತಿರತ್ವೆ ಆ ತಾಯಿಗಳು.... ಅವಕ್ಕೆ ಸ್ವಾತಂತ್ರ್ಯ ಒಂದು ಕೇಡು".

ತನ್ನ ಸುತ್ತಲ ಸಮಾಜದ-ಬೆಂಗಳೂರು, ಮೈಸೂರಿನಂಥ ನಗರಗಳಲ್ಲಿರುವ- ಆರ್ಥಿಕ ಅಸಮಾನತೆಯನ್ನು ಕಾದಂಬರಿಕಾರ್ತಿ ಹಲವು ಕಡೆ ಚಿತ್ರಿಸಿದ್ದಾರೆ. ರಾಮನಾಥನ ಮನೆಗೆ ಊಟಕ್ಕೆ ಬಂದ ರಂಗರಾಯರು ತಿಂಡಿಗಳನ್ನು ಬರೇ ರುಚಿನೋಡಿ ಬಿಡುತ್ತಾರೆ. ಅಷ್ಟರಲ್ಲಿ ಹೊರಗಿನಿಂದ 'ಮೂರು ದಿವಸದಿಂದ ಉಪವಾಸ ತಾಯಿ' ಎಂದು ಭಿಕ್ಷೆ ಬೇಡುವ ಧ್ವನಿ ಕೇಳಿಸುತ್ತದೆ. ರಾಮನಾಥ ಕೆಲಸದವನನ್ನು ಕರೆದು, "ಆ ಪ್ರಾಣೀನ

ಹೊರಗೆ ಕಳಿಸೋ. ಸಮಯ ಗಿಮಯ ಅನ್ನೋ ಯೋಚನೇನೆ ಇಲ್ಲ ಇವಕ್ಕೆ" ಎಂದು ಗರ್ಜಿಸುತ್ತಾನೆ. ರಾಮನಾಥನ ತಪ್ಪಿನಿಂದಾದ ಕಾರು ಅಪಘಾತದಲ್ಲಿ ರಾಜಣ್ಣ ಸಾಯುತ್ತಾನೆ. ಅವನ ಹೆಂಡತಿ ಬಡವಿ ಹೊನ್ನವ್ವ ಅನಾಥಳಾಗುತ್ತಾಳೆ. ರಾಮನಾಥ ಇನ್ನೂರು ರೂಪಾಯಿ ದಂಡ ತೆತ್ತು ಪಾರಾಗುತ್ತಾನೆ. ಆಸ್ಪತ್ರೆಯಲ್ಲಿ ಡಾಕ್ಟರ್ ತುರ್ತು ಸಹಾಯ ಬೇಕಾಗಿದ್ದ ಬಡ ಗರ್ಭಿಣಿಯೊಬ್ಬಳನ್ನು ಅಲಕ್ಷಿಸಿ ಶ್ರೀಮಂತರೊಬ್ಬರ ಕರೆಗೆ ಓಗೊಡುತ್ತಾರೆ. ಡಾಕ್ಟರರ ಅಲಕ್ಷ್ಯದಿಂದ ಬಡ ಗರ್ಭಿಣಿ ಸಾಯುತ್ತಾಳೆ. ಮೆಡಿಕಲ್ ವಿದ್ಯಾರ್ಥಿನಿಯಾಗಿದ್ದು ಆಸ್ಪತ್ರೆಯ ಅಪ್ರಿಯ ಸತ್ಯಗಳನ್ನು 'ಒಳಗಿನಿಂದ' ಕಂಡ ಅನುಪಮಾ ಅಲ್ಲಿನ ಅಲಕ್ಷ್ಯ, ಪಕ್ಷಪಾತ, ಪೂರ್ವಗ್ರಹಗಳನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಲೇಖಕಿಯ ತಾತ್ವಿಕ ನಿಲುವುಗಳಲ್ಲಿ ಗೊಂದಲಗಳಿಲ್ಲ. ಸಂಕೋಲೆಯೊಳಗಿರುವ ವಿಜಯಾ ಹೇಳುತ್ತಾಳೆ-"ಅವರು ನನ್ನನ್ನು ಪ್ರೀತಿಸ್ಲೇ ಇಲ್ಲ. ಬೇರೆಯವರಲ್ಲೇ ಸದಾ ಸುಖ ಕಂಡರು. ಅವರು ಆ ಕೆಲಸ ಮಾಡಬಹುದಾದರೆ ಒಂದು ಕಾಲದಲ್ಲಿ ಒಪ್ಪಿಕೊಂಡಿದ್ದವನನ್ನು ನಾನು ಯಾಕೆ ಪ್ರೀತಿಸ್‌ಬಾರ್ದು?" ಇಂಥ ಯೋಚನೆ ಮಾನಸಿಕ ವ್ಯಭಿಚಾರ ಎಂಬ ಪಾಪಪ್ರಜ್ಞೆ ಇಲ್ಲಿಲ್ಲ. ಮೋಹನ ಹೇಳುತ್ತಾನೆ-"ಪ್ರಯತ್ನ ಪಟ್ಟಿದ್ರೆ ವಿಜಯ ತನ್ನ ಬದುಕು ಬದಲಾಯಿಸಬಹುದಿತ್ತು". ವಿಜಯ ಆಶಾವಾದಿಯಾಗಿ ಭವಿಷ್ಯದ ಬಗ್ಗೆ ಚಿಂತಿಸುತ್ತಾಳೆ - "ಎಂದಾದರೊಂದು ದಿನ ಈ ವಿಷಮ ಸಾಮಾಜಿಕ ಅವ್ಯವಸ್ಥೆ ಅಳಿಸಿಹೋಗುವುದನ್ನೂ ನೋಡುವೆ". ಪುರುಷಪ್ರಧಾನವಾದ ಕುಟುಂಬ ವ್ಯವಸ್ಥೆಯನ್ನು, ವಿಷಮ ಸಾಮಾಜಿಕ ವ್ಯವಸ್ಥೆಯನ್ನು 'ಬದಲಾಯಿಸುವುದು ಸಾಧ್ಯ' ಎಂಬ ಅರಿವು ತನ್ನ ಒಡಲಾಳದಲ್ಲಿ ಕ್ರಾಂತಿಕಾರಿಯಾದುದು. 'ಸಂಕೋಲೆಯೊಳಗಿಂದ' ಕಾದಂಬರಿಯಲ್ಲಿ ಅನುಪಮಾ ಅವರ ತಾತ್ವಿಕ ನಿಲುವುಗಳು ಸಮಾಜವಾದಿ ವಾಸ್ತವವಾದಕ್ಕೆ ಹತ್ತಿರವಾಗಿವೆ.

ಅನುಪಮಾ ಅವರು ಕತೆಗಾರ ನಿರಂಜನರನ್ನು ಮೊದಲ ಬಾರಿ ಭೇಟಿಯಾದದ್ದು ೧೯೫೦ರಲ್ಲಿ. ೧೯೫೬ರಲ್ಲಿ ನಿರಂಜನ ಅನುಪಮಾರ ಮದುವೆ ನಡೆಯಿತು. 'ಸಂಕೋಲೆಯೊಳಗಿಂದ' ೧೯೫೪ರಲ್ಲಿ ಪ್ರಕಟವಾಗಿದೆ. ೧೯೫೦-೧೯೫೩ರ ದಿನಗಳಲ್ಲಿ ನಿರಂಜನ ಕಮ್ಯೂನಿಸ್ಟ್ ಪಾರ್ಟಿಯ ಸಕ್ರಿಯ ಕಾರ್ಯಕರ್ತರಾಗಿದ್ದರು. ಮಾರ್ಕ್ಸ್‌ವಾದಿ ನಿರಂಜನರ ವಿಚಾರಧಾರೆಯಿಂದ ಅವರ ಭಾವಿ ಸಂಗಾತಿ ಪ್ರೇರಣೆ ಪಡೆದಿರುವುದನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ತನ್ನ ನಿರಂಜನರ ವಿವಾಹಪೂರ್ವ ಗೆಳೆತನದ ಬಗ್ಗೆ ಅನುಪಮಾ ಹೇಳುತ್ತಾರೆ-"ನಮ್ಮನ್ನು ಪರಸ್ಪರ ಬೆಸೆದುದು ಪ್ರೀತಿಯೊಂದೇ ಅಲ್ಲ, ಸಮಾನ ಆಸಕ್ತಿಗಳು ಹೇರಳವಾಗಿದ್ದುವು. ಸಾಹಿತ್ಯ, ಜೀವನದ ಧೋರಣೆಗಳು, ಸಮಾನತೆಯ ಸಮಾಜ ಕಟ್ಟಬೇಕೆಂಬ ಹಂಬಲ ಇತ್ಯಾದಿ."[೨]

ಲಿಂಗಾಧಾರಿತ ಅಸಮಾನತೆ ಇರುವ ಸಮಾಜದಲ್ಲಿ, ಗಂಡಿನ ‘ಹ್ಯಾವಿಂಗ್’ ಪ್ರವೃತ್ತಿಯು ‘ಪ್ರೇಮ’ದಿಂದ ಮಾನಸಿಕ, ದೈಹಿಕ ಹಿಂಸೆ ಅನುಭವಿಸುತ್ತಿರುವ ಹೆಣ್ಣಿನ ಅಂತರಾಳವನ್ನು ಕೆದಕುವ, ಸೃಜನಶೀಲ, ರಚನಾತ್ಮಕ ಕೆಲಸವನ್ನು ಅನುಪಮಾ ‘ಸಂಕೋಲೆಯೊಳಗಿಂದ’ ಕಾದಂಬರಿಯಲ್ಲಿ ಆರಂಭಿಸಿದ್ದಾರೆ. ಈ ಕಾದಂಬರಿಯ ವಿಜಯಾ, ಸಂದಾ ಗಂಭೀರ ಪ್ರಶ್ನೆಗಳನ್ನು ಕೇಳುತ್ತಾರೆ. ಹದಿನೆಂಟರ ಹರೆಯದ ಅನುಪಮಾ ಅವರು “ತನ್ನ ಸೀಮಿತ ಅನುಭವಕ್ಕೆ ತೀವ್ರವಾಗಿ ಸ್ಪಂದಿಸಿದ್ದನ್ನು” ಈ ಕಾದಂಬರಿಯಲ್ಲಿ ಗುರುತಿಸಬಹುದು. ಈ ಕಾದಂಬರಿಗಿರುವುದು ಜೀವನಚರಿತ್ರೆಕಾರನ ಆಸಕ್ತಿಯ ಮಹತ್ವ ಮಾತ್ರವಲ್ಲ, ಇದು ಪ್ರಗತಿಶೀಲ ಚಳುವಳಿಯ ಕಾಲದ ಗಮನಾರ್ಹವಾದ ಒಳ್ಳೆಯ ಕಾದಂಬರಿಗಳಲ್ಲೊಂದು. ಒಬ್ಬ ಲೇಖಕ ಬರೆದ ಕೃತಿಗಳೆಲ್ಲ ‘ಮೇಜರ್’ ಕೃತಿಗಳಾಗಬೇಕೆಂದು ಬಯಸುವುದು. ಮೇಜರ್ ಕೃತಿಗಳನ್ನು ಬರೆಯದ ಲೇಖಕರನ್ನು ಅಲಕ್ಷಿಸುವುದು ಸಾಹಿತ್ಯ ವಿಮರ್ಶೆಯಲ್ಲಿ ಇವೆರಡೂ ಪ್ರಮಾದಗಳು.

ಟಿಪ್ಪಣಿಗಳು

೧, ೨, ೪– ಡಾ। ಅನುಪಮಾ ನಿರಂಜನ-“ನನ್ನ ಕೃತಿಗಳು ಮತ್ತು ಕನ್ನಡ ಕಾದಂಬರಿ ಪರಂಪರೆ” (ಸಂವಾದ-ಸಂಚಿಕೆ-೧) ಮಲ್ಲಾಡಿಹಳ್ಳಿ, ಸಂವಾದ ಪ್ರಕಾಶನ, ನವಂಬರ್-ಡಿಸೆಂಬರ್-೧೯೮೬.

೩, ೫,೬,೭– ಶಿವರುದ್ರಪ್ಪ. ಜಿ.ಎಸ್. (ಸಂ) ‘ಮಹಿಳೆ ಮತ್ತು ಕನ್ನಡ ಸಾಹಿತ್ಯ’, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾನಿಲಯ-೧೯೭೯.

೮– ಶೇಷಗಿರಿರಾವ್. ಎಲ್. ಎಸ್., ‘ಹೊಸಗನ್ನಡ ಸಾಹಿತ್ಯ’, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾನಿಲಯ-೧೯೭೫.

೯– ಈಶ್ವರ ಭಟ್ಟ, ಬೋಳಂತಕೋಡಿ ‘ನಿರಂಜನ ಅಭಿನಂದನ’ ಪುತ್ತೂರು-ಕರ್ನಾಟಕ ಸಂಘ-೧೯೮೬.

೧ ಆಳ

-ಡಾ। ಕೃಷ್ಣಮೂರ್ತಿ ಕಿತ್ತೂರ

ಕನ್ನಡದ ಸುಪ್ರಸಿದ್ಧ ಲೇಖಿಕೆ ಡಾ। ಅನುಪಮಾ ನಿರಂಜನ ಅವರ ತೀರ ಇತ್ತೀಚಿನ ಕಾದಂಬರಿ "ಆಳ"ವು "ಸುಧಾ" ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಪುರುಷಪ್ರಧಾನವಾದ ನಮ್ಮ ಸಮಾಜದಲ್ಲಿ ಸ್ತ್ರೀಯರಿಗೆ ಸಲ್ಲಬೇಕಾದ ಸ್ಥಾನಮಾನ-ಗೌರವ ಸಿಗುತ್ತಿಲ್ಲವೆಂಬುದು ಸರ್ವವಿದಿತ. ಅನುಪಮಾ ಅವರು ಈ ಅಸಮಾನತೆಯ ಬಗ್ಗೆ ಬಹುವಾಗಿ ಹಚ್ಚಿಕೊಂಡವರಲ್ಲಿ ಒಬ್ಬರು. ಅದು ಅವರ ಮಾತಿನಲ್ಲಿ, ಬರವಣಿಗೆಗಳಲ್ಲಿ ಪದೇಪದೇ ವ್ಯಕ್ತವಾಗುತ್ತಲೇ ಇದೆ. ವಿದ್ಯಾಬುದ್ಧಿ-ಅಧಿಕಾರ-ಗಳಿಕೆ-ಸ್ಥಾನಮಾನಗಳಲ್ಲಿ ತನ್ನಕಿಂತಲೂ ಕಡಿಮೆಯಾಗಿರುವ ಸ್ತ್ರೀಯನ್ನು ಪುರುಷ ಕಡೆಗಣಿಸುವುದಂತೂ ಸರ್ವೇ ಸಾಮಾನ್ಯ. ಆದರೆ ಈ ಯಾವುದರಲ್ಲೂ ಕಡಿಮೆಯಿಲ್ಲದ, ಎಲ್ಲದರಲ್ಲೂ ಸರಿಸಮಾನವಾದ ಸ್ತ್ರೀಪುರುಷರಿಬ್ಬರು ವಿವಾಹದಿಂದ ಬಂಧಿತರಾದಾಗ ಹೇಗೆ ನಡೆದುಕೊಳ್ಳಬಹುದು? ಮುಖಾಮುಖಿಯಾದ ಈ ಸರಿಸಮಾನರಿಗೆ ಎಂಥ ಸಮಸ್ಯೆಗಳು ಎದುರಾಗಬಹುದು? ಅವುಗಳನ್ನು ಅವರು ಹೇಗೆ ಎದುರಿಸಬಹುದು? ಪರಿಹಾರ ಏನಾಗಬಹುದು?-ಎಂಬಂಥ ಪ್ರಶ್ನೆಗಳನ್ನು ಇಟ್ಟುಕೊಂಡು ಅನುಪಮಾ ಅವರು ಈ ಕಾದಂಬರಿಯನ್ನು ಬರೆದಿರುವರು.

ವಿದ್ಯೆ-ಪಾಂಡಿತ್ಯಗಳಲ್ಲಿ ರವೀಂದ್ರ ಮತ್ತು ಮಾಲಿನಿ ಇಬ್ಬರೂ ಸಮಾನರು. ಆರ್ಕಿಯಾಲಜಿಯಲ್ಲಿ ಇಬ್ಬರೂ ಡಾಕ್ಟರೇಟ್ ಡಿಗ್ರಿ ಪಡೆದವರು. ವಿಶ್ವವಿದ್ಯಾಲಯದಲ್ಲಿ ಅವನು ಮೊದಲು ಸೇರಿಕೊಂಡಿದ್ದರಿಂದ ಅವನು ರೀಡರ, ಇವಳು ಉಪನ್ಯಾಸಕಿ-ಅಷ್ಟೇ. ಅವನಷ್ಟೇ ಅಥವಾ ಬಹುಶಃ ಅವನಿಗಿಂತಲೂ ಮಿಗಿಲಾದ ಪಾಂಡಿತ್ಯಪೂರ್ಣವಾದ ಸಂಶೋಧನ ಪ್ರಬಂಧಗಳನ್ನು ಬರೆಯಬಲ್ಲಳು. ಬೆಳೆದ ಪರಿಸರ, ದೊರೆತ ಸಂಸ್ಕಾರ ಕೂಡ ಮಾಲಿನಿಯದೇ ಮಿಗಿಲಾದದ್ದು. ಹೀಗಿದ್ದರೂ ಕೂಡ ರವೀಂದ್ರ ನ್ಯಾಯವಾಗಿ ಕೊಡಬೇಕಾದ ಗೌರವವನ್ನು ಕೊಡಲೊಲ್ಲ. ಅವಳು ಅವನ ಹೆಂಡತಿ ಎನ್ನುವದೊಂದೇ ಬಹುಶಃ ಅದಕ್ಕೆ ಕಾರಣ. ಈ ಅನ್ಯಾಯವನ್ನು ಮಾಲಿನಿ ಹೇಗೆ ಸಹಿಸಿ, ಕೊನೆಗೆ ಅವನಿಂದ ದೂರ ಸರಿದಳೆಂಬುದನ್ನು ಈ ಕಾದಂಬರಿ ಕುತೂಹಲಕರವಾಗಿ ನಿರೂಪಿಸುತ್ತದೆ.

ಕಾದಂಬರಿಯ ಹೆಸರು 'ಆಳ'-ಬಹು ಅರ್ಥಪೂರ್ಣವಾದುದು. ಅವರಿಬ್ಬರೂ ಭೂಮಿಯ ಆಳಕ್ಕೆ ಇಳಿದು ಭೂಗರ್ಭವನ್ನು ಶೋಧಿಸುತ್ತಾರೆ. ಇಂಥವರ ಜೀವನದಲ್ಲಿ, ಹೃದಯದ ಆಳದಲ್ಲಿ ಇರುವುದೇನು ನಡೆಯುವುದೇನು ಎಂಬುದನ್ನೂ ಈ ಕಾದಂಬರಿಯಲ್ಲಿ ಕೆದಕಿ ನೋಡಲು ಯತ್ನಿಸಲಾಗಿದೆ. "ನೆಲದಾಳವನ್ನು ಅಗೆಯಬಹುದು. ಆದರೆ ಮನದಾಳವನ್ನು ಲೆಕ್ಕ ಮಾಡಲು ಸಾಧ್ಯವಿಲ್ಲ" ಎಂಬಂಥ ಮಾತುಗಳು

ಕಾದಂಬರಿಯಲ್ಲಿ ಅನೇಕ ಸಲ ಬಂದಿವೆ. ಪ್ರೀತಿಯ ಸ್ನೇಹದ, ಪ್ರೇಮ-ಕಾಮಗಳ, ಆಸೆ-ಆಕಾಂಕ್ಷೆಗಳ ಮತ್ತು ಮೆದುಳಿನಲ್ಲಿ ಅವಿತುಕೊಂಡು ಕುಳಿತಿರುವ ನೆನಪುಗಳ-ಆಳ ಆಳವಾಗಿರುವಂತೆ ಅಗಲವೂ ಆಗಿರಬಹುದು ಎಂಬುದನ್ನು ಈ ಚಿಕ್ಕ ಕಾದಂಬರಿಯ ಪುಟಗಳು ಓದುಗರ ಗಮನಕ್ಕೆ ತಂದುಕೊಡುತ್ತವೆ. ಮನಸ್ಸಿನ ಉತ್ಖನನ, ಅಲ್ಲಿ ಸಿಗುವ ಸಿಹಿ-ಕಹಿ ನೆನಪುಗಳು, ಅವುಗಳಿಂದ ಆಗುವ ಸಂತೋಷ ಮತ್ತು ಅದಕ್ಕಿಂತ ಹೆಚ್ಚಿನ ಮಾನಸಿಕ ಹಿಂಸೆ ಅನಿವಾರ್ಯವಾದರೂ "ಮನದ ಆಗೆತ ಮುಂದಿನ ಬದುಕಿನ ಗುರಿಯನ್ನು ನಿಚ್ಚಳಗೊಳಿಸುತ್ತದೆ"- ಎಂದು ಕಥಾನಾಯಕಿ ಮಾಲಿನಿ ತಿಳಿಯುತ್ತಾಳೆ. ಆದರೂ ಅವಳ ಭವಿಷ್ಯದ ಅಡಿಗಳು ಸುಗಮವಾಗುವದಿಲ್ಲ.

ಓದಿನಲ್ಲಿ ಜಾಣೆಯಾದ ಮಾಲಿನಿ ತಂದೆಯಂತೆ ವೈದ್ಯೆಯಾಗಲು ಒಲ್ಲದೆ ತನ್ನ ಪ್ರೀತಿಗಾಗಿ ಪುರಾತತ್ವ ಶಾಸ್ತ್ರವನ್ನೇ ಓದುತ್ತಾಳೆ. ಮೊದಲಿನಿಂದಲೂ ಎಲ್ಲಾ ಹೆಣ್ಣು ಮಕ್ಕಳಂತೆ ಇರದ, ಸ್ವತಂತ್ರ ವ್ಯಕ್ತಿತ್ವವನ್ನು ತೋರುವ ಮಾಲಿನಿ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವಾಗಲೇ ವಸಂತನ ಬಣ್ಣದ ಮಾತಿಗೆ ಮರುಳಾದಳು. ಆದರೆ ಅವನ ವರದಕ್ಷಿಣೆಯ ದುರಾಸೆ ವ್ಯಕ್ತವಾದಾಗ ನಿಶ್ಚಯವಾಗಿದ್ದ ಮದುವೆಯನ್ನು ನಿರಾಕರಿಸಿದಳು. ಇಂಥ ಸ್ವತಂತ್ರ ವ್ಯಕ್ತಿತ್ವದ ಪುರುಷಸಮಾನ ಮನೋಭಾವದ ತರುಣಿ ಪುರುಷದ್ವೇಷಿಯೇ ಆಗಬಹುದಿತ್ತು, ಹಾಗಾಗಲಿಲ್ಲ: ಅಷ್ಟೇ ಅಲ್ಲ, ಅವಳು ಮೊದಲು ಕಲಿತ ಪಾಠವನ್ನು ಸುಲಭವಾಗಿ ಮರೆತು ಬಿಡುತ್ತಾಳೆ. ಸಹೋದ್ಯೋಗಿಯಾದ ರವೀಂದ್ರ ಅನ್ಯಜಾತಿಯವನಾದರೂ ಅವನನ್ನು ಮೆಚ್ಚಿ ಮದುವೆಯಾದಳು. ಆದರೆ ಅದಕ್ಕೂ ಮೊದಲು ಅವನ ಅಂತರ್ಯವನ್ನು ಅರಿತುಕೊಳ್ಳುವ ಪ್ರಯತ್ನವನ್ನು ಮಾಡಲೇ ಇಲ್ಲ. ವಸಂತನಂತೆ ಹಣದ ಮೋಹವಿಲ್ಲದ ಈ ತರುಣನ ಮತ್ತು ತನ್ನ ಅಭಿರುಚಿಗಳು ಒಂದೇ ಎಂದು ಗ್ರಹಿಸಿದಳಲ್ಲದೆ, ಪರೀಕ್ಷಿಸಿ ನೋಡಲಿಲ್ಲ. ಮುಂದೆ ತನ್ನ ಆತ್ಮಗೌರವಕ್ಕೆ ಅವನಿಂದ ಮನ್ನಣೆ ಸಿಗಲಿಲ್ಲವೆಂದು ಅವಳು ಅವನಿಂದ ದೂರ ಸರಿದಳು. ಪಶ್ಚಿಮದ ಕೆಲಕಾಲದ ಸಹೋದ್ಯೋಗಿ ಮೈಕೇಲ ತನ್ನ ನಯವಿನಯಗಳಿಂದ ಮತ್ತೆ ಇವಳ ಮನವನ್ನು ಸೆಳೆದು ಮದುವೆಗೆ ಕೈಚಾಚುತ್ತಾನೆ. ಆದರೆ ಈ ಸಲ ಮಾಲಿನಿ ಆತನ ಬಗ್ಗೆ ಒಲವು ಮೂಡಿದ್ದರೂ, ಸಾರಾಸಾರ ವಿಚಾರಕ್ಕೆ ಆಸ್ಪದ ಕೊಡುತ್ತಾಳೆ. ಭಾರತೀಯನಿಂದ ಸಿಕ್ಕದ ವೈವಾಹಿಕ ಭದ್ರತೆಯು ಈ ಪಾಶ್ಚಾತ್ಯನಿಂದ-ಅದೂ ವಿವಾಹ ವಿಚ್ಛೇದನ ಪಡೆದ ತರುಣನಿಂದ-ಸಿಗಲಾರದು ಎಂದು ಸರಿಯಾಗಿಯೇ ತಿಳಿಯುತ್ತಾಳೆ. "ಯಾವ ಗಂಡಸಿನ ಆಧಾರವೂ ಇಲ್ಲದೆ ನಾನು ಒಬ್ಬಳೇ ಇರಬಲ್ಲೆ" ಎಂದು ನಿರ್ಧರಿಸುತ್ತಾಳೆ. ರವೀಂದ್ರನ ಮತ್ತು ತನ್ನ ಹೃದಯಗಳ ಉತ್ಖನನಗೈದು "ಮೂಲಭೂತವಾಗಿ ನಮ್ಮಿಬ್ಬರ ಪ್ರವೃತ್ತಿಗಳೂ ಭಿನ್ನ-ಆದ್ದರಿಂದಲೇ ಈ ಸಂಘರ್ಷ" ಎಂದು ಅರಿತುಕೊಳ್ಳುತ್ತಾಳೆ. ಅಲ್ಲದೆ "ಹೆಂಡತಿ ತನ್ನಕಿಂತ ಬುದ್ಧಿವಂತಳೆಂದು ಯಾವ ಗಂಡನೂ ಒಪ್ಪಲಾರ" ಎಂದು ತಾನೇ ನಿರ್ಣಯಕ್ಕೆ ಬರುತ್ತಾಳೆ. ಆದರೂ ತನ್ನ ಮತ್ತು

ರವೀಂದ್ರನ ವೈವಾಹಿಕ ಜೀವನ ಅಯಶಸ್ವಿಯಾಗಲು ಇಬ್ಬರೂ ಕಾರಣ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡು, ನಾವು ಮಿತ್ರರಂತೆ ಗೌರವದಿಂದ ಅಗಲೋಣ ಎಂದು ಗಂಡನಿಗೆ ಪತ್ರ ಬರೆದು, ಮತ್ತೆ ಎರಡು ವರ್ಷ ಇಂಗ್ಲೆಂಡಿನಲ್ಲಿಯೇ ಉಳಿಯಲು ನಿರ್ಧರಿಸುತ್ತಾಳೆ. ಆದರಿಂದ ಅವಳ ಮನಸ್ಸು ಹಗುರವೂ ಪ್ರಫುಲ್ಲಿತವೂ ಆಗುತ್ತದೆ.

ಸರಿಸಮಾನ ಮೇಧಾವಿಗಳಾಗಿಯೂ ಕಾದಂಬರಿಯ ಆಲ್ವಿನ್ ದಂಪತಿಗಳಂತೆ ಯಶಸ್ವೀ ಜೀವನವನ್ನು ನಡೆಸಬಹುದು. ಅದಕ್ಕೆ ಇಬ್ಬರಲ್ಲಿಯೂ ತಿಳಿವಳಿಕೆ - ವಿವೇಕ ಬೇಕಾಗುತ್ತದೆ. ಆದರೆ ರವೀಂದ್ರ ಮತ್ತು ಮಾಲಿನಿಯರು ಸುಖೀಜೀವನದಿಂದ ವಂಚಿತರಾಗಲು ಅವರವರ ವ್ಯಕ್ತಿತ್ವಗಳೇ ಕಾರಣ. ಮೊದಲಿನಿಂದಲೂ ಮಾಲಿನಿಯಲ್ಲಿ ಸಾಮಾನ್ಯ ಸ್ತ್ರೀಯರಿಂದ ಭಿನ್ನವಾದ ವಿಚಾರಗಳು ತುಂಬಿಕೊಂಡಿವೆ. "ಹುಡುಗರು ಮಾಡಬಹುದಾದ ಎಲ್ಲ ಕೆಲಸಗಳನ್ನೂ ಹುಡುಗೀರು ಮಾಡ್ಬಹುದು" ಎಂಬುದನ್ನು ತೋರಿಸಲೆಂದೇ ಬಹುಶಃ ಅವಳು ಆರ್ಕಿಯಾಲಜಿ ಅಧ್ಯಯನವನ್ನು ಆಯ್ದುಕೊಳ್ಳುತ್ತಾಳೆ. ತಂಗಿ ನಳಿನಿಯಂತೆ ಅವಳಿಗೆ ಅಡಿಗೆ-ಊಟ, ಸೀರೆ-ಕುಪ್ಪಸ ಮೊದಲಾದವುಗಳಲ್ಲಿ ಆಸಕ್ತಿ ಕಡಿಮೆ. ಮದುವೆ ಗಂಡ-ಮಕ್ಕಳು ಇವಿಷ್ಟೇ ಸ್ತ್ರೀಯ ಕ್ಷೇತ್ರವಾಗ ಬೇಕಿಲ್ಲ-ಎಂದು ನಂಬಿದ ಅವಳು "ನಾವೇನು ಕುರ್ಚಿ-ಮೇಜುಗಳೇ ವಸ್ತು ಎನ್ನಲಿಕ್ಕೆ? ಅಥವಾ ದಾನವಾಗಿ ಕೊಡುವ ದನಕರುಗಳೇ? ನಮಗೂ ಸ್ವತಂತ್ರ ವ್ಯಕ್ತಿತ್ವವಿದೆ". "ತನ್ನ ಸುಖದ ಕಲ್ಪನೆಯೇ ಬೇರೆ. ಗಂಡ ಹೆಂಡತಿಯ ಆತ್ಮೀಯ ಸಂಬಂಧ ಪರಸ್ಪರ ಗೌರವ ಸಮಾನತೆಗಳೊಂದಿಗೆ ಬದುಕಿಗೊಂದು ಅರ್ಥ ನೀಡುವಂತಿರಬೇಕು." ಎಂದು ತಿಳಿದಿರುತ್ತಾಳೆ. ಆದ್ದರಿಂದಲೇ ಅವಳಿಗೆ ಮಗುವೊಂದೇ ತನ್ನ ಬದುಕಿನ ಗುರಿ ಅಲ್ಲ ಎನಿಸುತ್ತದೆ. ಆತ್ಮಾಭಿಮಾನವುಳ್ಳ ಅವಳು ಗಂಡನ ನೆರಳಾಗಿ ಅಥೆನ್ಸಿಗೆ ಹೋಗಲು ನಿರಾಕರಿಸುತ್ತಾಳೆ. ಮುಂದೆ ತನಗೇ ಕರೆಬಂದಾಗ ಗಂಡ ಬೇಡ ಎಂದರೂ ಹಟದಿಂದ ಹೋಗುತ್ತಾಳೆ. ತಾನು ಆಧುನಿಕ ಅಂತಿಗೊನೆ ಎಂದೇ ಅವಳು ಭಾವಿಸುತ್ತಾಳೆ. ಆತ್ಮಗೌರವದ ಕಲ್ಪನೆ ಅವಳನ್ನು ಅತಿಯಾಗಿ ಕಾಡುತ್ತಿರುತ್ತದೆ. ಅವಳ ಅಯಶಸ್ವೀ ದಾಂಪತ್ಯಕ್ಕೆ ಇದುವೇ ಬಹುಶಃ ಮುಖ್ಯ ಕಾರಣವಾಗುತ್ತದೆ.

ಭೂಮಿಯನ್ನು, ಕನ್ಯೆಯನ್ನು 'ವರ್ಜಿನ್' ಎನ್ನುವಂತೆ ಪವಿತ್ರವಾದ ವರ್ಜಿನ್ ಪುರುಷ ಯಾಕೆ-ಇರಬಾರದು-ಎಂದು ಅವಳು ಕೇಳುತ್ತಾಳೆ. ಅವಳ ಅಭಿಪ್ರಾಯ ಸರಿಯೇ ಹೌದು. ಅವಳ ಗತಜೀವನದಲ್ಲಿ ವಸಂತನ ಕ್ಷಣಿಕವಾದ ಆಗಮನ ರವೀಂದ್ರನ ಮನವನ್ನು ಕಲುಷಿತಗೊಳಿಸಬಹುದಾದರೆ, ರವೀಂದ್ರ-ಲಕುಮಿಯರ ಸಂಬಂಧದ ಕುರುಹಾದ ಹುಡುಗ ನಾಗರಾಜ, ರವೀಂದ್ರನ ಬಗ್ಗೆ ಅವಳಲ್ಲಿ ತಿರಸ್ಕಾರವನ್ನುಂಟುಮಾಡಿದ್ದು ಸಹಜವೇ. ಅದರ ಜೊತೆಗೆ ರವೀಂದ್ರನ ದಬ್ಬಾಳಿಕೆಯ ಪ್ರವೃತ್ತಿ, ಸಂದೇಹ-ಅಸೂಯೆಗಳೂ ಅವರನ್ನು ದೂರ ಮಾಡಲು ಕಾರಣವಾದವು.

ಮೊದಲು ತಪ್ಪೆಲ್ಲವೂ ಗಂಡನದೇ ಎಂದು ತಿಳಿದ ಮಾಲಿನಿ ಕೊನೆಗಾದರೂ ತಪ್ಪು ಇಬ್ಬರಲ್ಲೂ ಇದೆ ಎಂದು ಒಪ್ಪಿ ರವೀಂದ್ರನಿಗೆ ಪತ್ರ ಬರೆಯುವಲ್ಲಿ ಮಾತ್ರ ಅವಳ ವಿವೇಕ ವ್ಯಕ್ತವಾಗಿದೆ.

ಸಾಕ್ರೆಟಿಸ್ ಎಂದು ಕರೆಯಿಸಿಕೊಳ್ಳುತ್ತಿದ್ದ ಗಂಭೀರ ಸ್ವಭಾವದ ರವೀಂದ್ರ ಹಳ್ಳಿಯ ಗೌಡರ ಮಗ. ನೋಡಲು ಚೆನ್ನಾಗಿಲ್ಲದ ಅವನನ್ನು ಅವನ ಸಹಪಾಠಿಗಳು ನಿಗ್ರೋ ಎಂದೇ ಗೇಲಿ ಮಾಡುತ್ತಿದ್ದರು. ಹೆಣ್ಣು ಹುಡುಗಿಯರನ್ನು ಮಾತನಾಡಿಸಲಿಕ್ಕೇ ಹಿಂಜರಿಯುತ್ತಿದ್ದ ಕೀಳರಿಮೆಯ ಈ ಯುವಕ ಮಾಲಿನಿಯನ್ನು ಮೋಹಿಸಿ ಮದುವೆಯಾಗುವ ಧೈರ್ಯ ತೋರಿದ್ದು ಹೆಚ್ಚಿನದೇ. ಪ್ರೇಮ ಕುರುಡು ಎಂಬಂತೆ, ಮಾಲಿನಿಯ ಹಾಗೆ ಇವನೂ ತಮ್ಮ ದಾಂಪತ್ಯ ಸಮರಸವಾಗಬಹುದೇ ಎಂದು ಯೋಚಿಸುವದೇ ಇಲ್ಲ. ಅಲ್ವಿನ್ ದಂಪತಿಗಳಂತೆ ತಾವಿಬ್ಬರೂ ಗಂಡ ಹೆಂಡಿರು ಹೆಸರಾಂತ ಸಂಶೋಧಕರಾಗುವ ಕನಸು ಕಂಡನಾದರೂ, ವಿವಾಹದ ಅನಂತರ ಮಾಲಿನಿಯನ್ನು ತನ್ನ ಸಮಾನಳೆಂದು ರವೀಂದ್ರ ಕಾಣಲೇ ಇಲ್ಲ. ತಂದೆಯ ಕ್ರೂರ ದಬ್ಬಾಳಿಕೆಯ ಸ್ವಭಾವವನ್ನು ರವೀಂದ್ರ ಮೆಚ್ಚಿರಲಿಲ್ಲವಾದರೂ ಬಹುಶಃ ಅವನ ರಕ್ತದಲ್ಲಿ ಸುಪ್ತವಾಗಿದ್ದ ತಂದೆಯ ಗುಣಗಳು ಮಾಲಿನಿಯ ಮೇಲೆ ಒಂದು ವಿಧವಾದ ನಾಗರಿಕ ರೀತಿಯಲ್ಲಿ ಆಳಿಕೆ ನಡೆಸತೊಡಗಿದವು. ಅವಳ ಲೇಖನಗಳು ತನ್ನಕಿಂತ ಉತ್ತಮವಾಗಿದ್ದರೂ ರವೀಂದ್ರ ಅದನ್ನು ಒಪ್ಪಲಾರದೆ ಹೋಗುತ್ತಾನೆ. ಬೇರೆಯವರು ಅವಳನ್ನು ಹೊಗಳಿದರೆ ಅವನಲ್ಲಿ ಅಸಂತೋಷ ಅಸಹನೆ ಕಾಣತೊಡಗಿದವು. ಅಷ್ಟೇ ಅಲ್ಲ, ಅವನು ಅವಳ ಚಾರಿತ್ರ್ಯವನ್ನೇ ಸಂದೇಹದಿಂದ ಕಾಣತೊಡಗಿದ. ಅಪರಿಚಿತ ಮೈಕೇಲನ ವಿಚಾರ ಇರಲಿ, ಸ್ವಂತ ಗುರುಗಳಾದ ವೆಂಕಟೇಶ್ವರನ್ ಅವರನ್ನೂ ಸಂಶಯದಿಂದ ಕಾಣುವಷ್ಟು ಕೆಳಕ್ಕಿಳಿದ. ಮಾಲಿನಿ ವಸಂತನಿಗೆ ಬರೆದಿದ್ದ ಪತ್ರದ ಪ್ರತಿಯನ್ನು ಕಂಡ ಮೇಲಂತೂ ಮಾತೇ ಮುಗಿಯಿತು. ವಸಂತನ ವಿಷಯವನ್ನು ತಮ್ಮ ಮದುವೆಯ ಮೊದಲೇ ಯಾಕೆ ಹೇಳಲಿಲ್ಲ ಎಂದು ಹೆಂಡತಿಯನ್ನು ಕೇಳಿ ದಂಡಿಸುವ ರವೀಂದ್ರ, ಅದಕ್ಕಿಂತ ಕೀಳುಮಟ್ಟದ ತನ್ನ ಮತ್ತು ಲಚುಮಿಯ ಸಂಬಂಧವನ್ನು ತಾನೂ ಹೆಂಡತಿಗೆ ಹೇಳಿಲ್ಲವೆಂಬುದನ್ನೂ ನೆನೆಯಲಿಲ್ಲ. ಲಚುಮಿಯ ಬಗ್ಗೆ ತನ್ನಲ್ಲಿದ್ದುದು ಕೇವಲ ಕಾಮವಾಸನೆ. ಮಾಲಿನಿಯಲ್ಲಿ ತನಗೆ ನಿಜವಾದ ಪ್ರೇಮ ಎಂದು ಮಾಲಿನಿಯಲ್ಲಿ ಭರವಸೆ ಹುಟ್ಟಿಸಲು ಯತ್ನಿಸಿದ. ಆದರೂ ಅಪರಾಧೀ ಪ್ರಜ್ಞೆ ಅವನ ಅಂತರಾಳದಲ್ಲಿ ಕಾಡುತ್ತಲೇ ಇತ್ತು. ಮಾಲಿನಿ ಮಾತ್ರ ತನ್ನ ಮೇಲಿನ ಪ್ರೇಮದಿಂದಲೇ ರವೀಂದ್ರ ತನ್ನಲ್ಲಿ ಸಂಶಯ ತಾಳುತ್ತಾನೆ ಎಂದೂ ಒಮ್ಮೊಮ್ಮೆ ಸಮಾಧಾನ ತಂದುಕೊಂಡಳು. ಆದರೆ ಅವನ ಮನಸ್ಸಿನ ಕ್ಷುದ್ರತೆ ಹೆಚ್ಚು ಹೆಚ್ಚಾಗಿ ಪ್ರಕಟವಾದಂತೆ, ಮಾಲಿನಿಗೆ ಅವನ ಸಹವಾಸ ಅಸಹನೀಯವಾಯಿತು.

ಪುರುಷಪ್ರಧಾನ ಸಮಾಜದ ಗಂಡಸೊಬ್ಬನ ಪ್ರತಿನಿಧಿಯಂತೆ ರವೀಂದ್ರ ಚಿತ್ರಿತವಾಗಿರುವನು. ಇಲ್ಲಿ ನಿರೂಪಿತವಾದ ರವೀಂದ್ರನ ವ್ಯಕ್ತಿತ್ವದಲ್ಲಿಯ ನ್ಯೂನತೆಗಳೂ ದೋಷಗಳೂ ಕೇವಲ ರವೀಂದ್ರನಿಗೆ ಮಾತ್ರ ಸೀಮಿತವಾದವುಗಳಲ್ಲ. ಇಡೀ ಪುರುಷ ವ್ಯಕ್ತಿತ್ವವೇ ಹೀಗೆ-ಎಂದು ಬಹುಶಃ ಲೇಖಿಕೆ ಹೇಳಬಯಸಿದಂತಿದೆ. ಇದು ಬಹು ಮಟ್ಟಿಗೆ ನಿಜವೂ ಆಗಿರಬಹುದು. ಆದರೆ ಇದಕ್ಕೆ ನಮ್ಮ ಸ್ತ್ರೀಯರೂ ಬಹು ಮಟ್ಟಿಗೆ ಕಾರಣ ಎನ್ನಬೇಕು. ಪತಿಯೇ ಸರ್ವಸ್ವ, ಅವನೇ ದೇವರು ಎಂದು ನಂಬಿ, ಪತಿಗೆ ಅತಿಯಾದ ಮಹತ್ವವನ್ನು ಕೊಡುತ್ತ ಬಂದಿರುವದು ನಮ್ಮ ಸಾಮಾಜಿಕ ಸಂಸ್ಕೃತಿಯ ಲಕ್ಷಣವಾಗಿದೆ. ಇದನ್ನು ಒಮ್ಮೆಲೇ ಹೋಗಲಾಡಿಸಲು ಸಾಧ್ಯವಾಗಲಾರದು. ಸರಿಸಮಾನತೆಯ ವಿಚಾರ ನಮ್ಮ ಸ್ತ್ರೀಯರಲ್ಲಿ ಈಗೀಗ ಬರತೊಡಗಿದೆ. ಇದಕ್ಕೆ ಹೊಂದಿಕೊಳ್ಳಲು ಪುರುಷನಿಗೆ ಕಾಲಾವಕಾಶ ಬೇಕು. ಅಲ್ಲಿಯವರೆಗೆ ಇಂಥ ತಾಕಲಾಟಗಳು ಅನಿವಾರ್ಯ. ಡಾ। ಅನುಪಮಾ ಅವರು ಇಂಥ ಘರ್ಷಣೆಯ ಜೀವನವನ್ನು 'ಆಳ' ಕಾದಂಬರಿಯಲ್ಲಿ ಚಿತ್ರಿಸಿರುವದರ 'ರೆಲವನ್ಸ್' ಇದ್ದೇ ಇದೆ. ಆದರೆ ಅವರು ಈ ಸಮಸ್ಯೆಯನ್ನು ಇನ್ನೂ ಹೆಚ್ಚು ವಸ್ತುನಿಷ್ಠವಾಗಿ ಚಿತ್ರಿಸಬಹುದಿತ್ತು. ಇಡೀ ಕಾದಂಬರಿಯಲ್ಲಿ ರವೀಂದ್ರನಿಗಿಂತ ಮಾಲಿನಿಯ ಬಗ್ಗೆ ಹೆಚ್ಚು ಸಹಾನುಭೂತಿಯನ್ನೂ ಪಕ್ಷಪಾತವನ್ನೂ ತೋರಿಸಿದಂತೆ ಭಾಸವಾಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ ಸ್ತ್ರೀ-ಪುರುಷರ ಬಗ್ಗೆ ಲೇಖಿಕೆ ತಳೆದಿರುವ ಧೋರಣೆಗೆ ಅನುಗುಣವಾಗಿಯೇ ಅವರು ಮಾಲಿನಿ ಮತ್ತು ರವೀಂದ್ರರ ಪಾತ್ರಗಳನ್ನು ರೂಪಿಸುತ್ತ ಹೋಗಿರುವರು. ಅದ್ದರಿಂದಲೇ ಈ ಎರಡೂ ಪಾತ್ರಗಳು ತಮ್ಮಷ್ಟಕ್ಕೆ ತಾವೇ ಬೆಳೆದು ರೂಪುಗೊಂಡು ಪುಷ್ಟವಾಗುವುದಿಲ್ಲ.

ಈ ಮುಖ್ಯ ಪಾತ್ರಗಳನ್ನುಳಿದ ಕಾದಂಬರಿಯ ಬೇರೆ ಪೋಷಕ ಪಾತ್ರಗಳ ಚಿತ್ರಣದಲ್ಲಿ ಇನ್ನೂ ಹೆಚ್ಚಿನ ನೈಜತೆ ಕಂಡಿದೆ. ಅದರಲ್ಲಿಯೂ ಪ್ರೊಫೆಸರ ವೆಂಕಟೇಶ್ವರನ್ ಅವರ ಸಂತಾನವಿಹೀನ ಪತ್ನಿ ನಾಗವೇಣಿ ಅತ್ಯಂತ ಜೀವಂತ ಪಾತ್ರ. "ಹೆಣ್ಣು ಹೆಂಗಸು ಗಂಡಸರ ಜೊತೆ ರಾತ್ರಿಹೊತ್ತು ತಿರುಗಾಡಿದರೆ ಏನೊಂದು ಮಾತು ಬರುತ್ತದೆ." ಎಂದು ಮಾಲಿನಿಗೆ ತಿಳಿಹೇಳುವ, ತನಗೂ ಒಂದು ಮಗುವಾಗಲಿ, ಆಗಬಹುದು ಎಂಬ ಆಸೆಯಿಂದ ಸಮೀರದೇವಿಯ ದಿಬ್ಬಕ್ಕೆ ಹೋಗಿ ಬರುವ, ಬಾಣಂತಿ ಸಂಕಮ್ಮನ ಹೊಟ್ಟೆಗೆ ಬಿಗಿಯಲು ತನ್ನ ಸೀರೆಯನ್ನು ಕೊಡುವ, ಅಷ್ಟೇ ಏಕೆ, ಮಾಲಿನಿಗೆ ಅಬಾರ್ಶನ್ ಆಗಿದ್ದನ್ನು ತಿಳಿದು ಒಂದು ರೀತಿ ಸಂತೋಷವನ್ನು ಪಡುವ ನಾಗವೇಣಿ ಅತ್ಯಂತ ಮಾನವೀಯವಾಗಿ ಕಾಣುವಳು. ಅದರಂತೆ ಗೋಪಾಲಸ್ವಾಮಿ, ಸುಭದ್ರಮ್ಮ, ರವೀಂದ್ರನ ತಂದೆ ಕೃಷ್ಣೇಗೌಡ, ಮಾಲಿನಿಯ ತಂಗಿ ನಳಿನಿ, ಮಾಲಿನಿಗೆ ಕೈಕೊಟ್ಟು ಬ್ಲ್ಯಾಕ್‌ಮೇಲ್ ಮಾಡುವ ವಸಂತ, ಲಚುಮಿಯ ತಾಯಿ ನಾರಾಯಣಿ ಇಂಥವರೆಲ್ಲ ಕಾದಂಬರಿಯಲ್ಲಿ ಅಮುಖ್ಯವಾದರೂ, ಅಚ್ಚಳಿಯದ ಮಸಿಯಿಂದ ಮೂಡಿ ಬಂದವರು.

ಡಾ। ಅನುಪಮಾ ಅವರು ಮಾನವ ಸ್ವಭಾವದ ಸೂಕ್ಷ್ಮಗಳನ್ನು ನಯವಾಗಿ ಚಿತ್ರಿಸಬಲ್ಲವರು. 'ಆಳ'ದಲ್ಲಿಯ ಮಾಲಿನಿ ಮತ್ತು ರವೀಂದ್ರರ ಚಿತ್ರಣದಲ್ಲಿಯ ಕೆಲವು ಏಕಪಕ್ಷೀಯ ಅತಿರೇಕಗಳನ್ನು ಬಿಟ್ಟರೆ, ಉಳಿದಂತೆ ಎಲ್ಲ ಪಾತ್ರಗಳಲ್ಲೂ ಸಹಜತೆ ಇದೆ. ಹಾವು ಕಚ್ಚಿದ ಡೇವಿಡ್‌ನನ್ನು ಉಪಚರಿಸಲು ಬಂದ ಹಳ್ಳಿಯ ಡಾಕ್ಟರರ ಮನೆ ತೀರ ಹತ್ತಿರವಿದ್ದರೂ, ಜೀಪು ಇರುವಾಗ ನಡೆಯುವುದೇಕೆ ಎಂಬ ಧೋರಣೆಯಿಂದ "ನನ್ನನ್ನು ಮನೆ ಹತ್ರ ಬಿಟ್ಬಿಡಿ" ಎನ್ನುವದಾಗಲಿ, ಹೆರಿಗೆಬೇನೆ ತಾಳಲಾರದೆ ಬೊಬ್ಬಿಡುವವಳನ್ನು ಕುರಿತು ಉಳಿದ ಹೆಣ್ಣುಮಕ್ಕಳು "ಬಾಯಿ ಮುಚ್ಕಳೇ, ಸುತ್ತಾ ಗಂಡಸ್ರುವ್ರೆ" ಎಂದು ಗದರಿಸುವುದಾಗಲಿ. ಮಾಲಿನಿಯ ಡೇರೆ ಯಲ್ಲಿ ಜನಿಸಿದ ತನ್ನ ಮಗುವಿಗೆ ಮಲ್ಲಿ ಎಂದು ಹೆಸರಿಡುವ ಮುಗ್ಧ ಸಂಕಲ್ಪ, ಮಗಳು ತನ್ನ ಮದುವೆಯ ವಿಚಾರವನ್ನು ಮೊದಲು ತನಗೆ ಹೇಳಲಿಲ್ಲವೆಂದು ಅಸಮಾಧಾನ ಪಡುವ ಮಾಲಿನಿಯ ತಾಯಿ ಸುಭದ್ರಮ್ಮ, ಆ ರಾತ್ರಿ ಗೊಣಗುತ್ತಲೇ ಎದ್ದು ಬಂದು ಮಾಲಿನಿಯನ್ನು ಪರೀಕ್ಷಿಸುವ ಸರಕಾರಿ ಆಸ್ಪತ್ರೆಯ ಲೇಡಿ ಡಾಕ್ಟರ, "ಸ್ವಾಮೋರೇ ನೀವು ಮಗಾನ ಒಂದಪ ನೋಡ್ರಿ" ಎಂದು ರವೀಂದ್ರನನ್ನು ದೈನ್ಯದಿಂದ ಬೇಡಿ ಕೊಂಡಿದ್ದರೂ, ಅವನಿಗೇ ಆ ಮಗುವನ್ನು ಕೊಡಬೇಕಾದಾಗ "ನಾಳೆ ನನ್ಗತಿಯಾನು ಸೋಮಿಯೋರೆ?" ಎಂದು ಚಿಂತಿಸುವ ನಾರಾಯಣಿ-ಇಂಥವರ ಅಂತರ್ಯದ ಆಳಕ್ಕೇ ಇಳಿಯುತ್ತಾರೆ ಲೇಖಿಕೆ.

ಅದರಂತೆ ಸನ್ನಿವೇಶ ಚಿತ್ರಣದಲ್ಲಿಯೂ ಲೇಖಿಕೆಯ ಪಳಗಿದ ಕೈಯನ್ನು ಕಾಣಬಹುದು. ಮಾಲಿನಿಯ ಪತ್ರದ ಝೆರಾಕ್ಸ್ ಪ್ರತಿಯನ್ನು ವಸಂತ ರವೀಂದ್ರನಿಗೆ ತಂದುಕೊಟ್ಟದ್ದು, ತನ್ನ ಮಗುವನ್ನು ರವೀಂದ್ರ ಮೊದಲ ಸಲ ನಾರಾಯಣಿಯ ಗುಡಿಸಲಲ್ಲಿ ಕಂಡುದು, ಗೋಪಾಲಸ್ವಾಮಿಯವರ ಮನೆಗೆ ರವೀಂದ್ರ ಮೊದಲ ಸಲ ಬಂದುದು, ಕೃಷ್ಣೇಗೌಡರು ದನಗಾಹಿ ಬೂದನ ಕಪಾಳಕ್ಕೆ ಹೊಡೆದುದು, ಡೇವಿಡ್‌ನನ್ನು ಹಾವು ಕಚ್ಚಿದ್ದು. ಅಥವಾ ಮಾಲಿನಿಗೆ ಉಂಟಾದ ಗರ್ಭಪಾತ-ಇಂಥ ಮೊದಲಾದ ಸನ್ನಿವೇಶಗಳನ್ನು ಕೌಶಲ್ಯಪೂರ್ಣವಾಗಿ ಚಿತ್ರಿಸಿದ ರೀತಿ ಮೆಚ್ಚತಕ್ಕದ್ದು.

ಡಾ। ಅನುಪಮಾ ನಿರಂಜನರು ಬಹುಶ್ರುತರು. ಇದಕ್ಕೆ ಕಾದಂಬರಿಯಲ್ಲಿ ಹಲವಾರು ನಿದರ್ಶನಗಳುಂಟು. ತಮಗೆ ಸಂಪೂರ್ಣ ಅಪರಿಚಿತವಾದ ಪುರಾತತ್ವ ಶಾಸ್ತ್ರ, ಭೂಸಂಶೋಧನೆ ಮೊದಲಾದವುಗಳಲ್ಲಿ ಅವರು ತೋರಿದ ಆಸಕ್ತಿ ಮತ್ತು ಕೈಕೊಂಡ ಅಧ್ಯಯನದ ಕುರುಹುಗಳು ಕಾದಂಬರಿಯ ಪುಟಪುಟಗಳಲ್ಲಿ ವ್ಯಕ್ತ ವಾಗಿವೆ. ಭೂಮಿಯ ಉತ್ಖನನದ ತಂತ್ರ ವಿವರಗಳನ್ನು ತಿಳಿದು, ಕಾದಂಬರಿಯಲ್ಲಿ ಉಚಿತವಾಗಿಯೂ ಕಲಾತ್ಮಕವಾಗಿಯೂ ನಿರೂಪಿಸಿರುವರು. ಅದರಂತೆ ಗ್ರೀಸ್ ಇಂಗ್ಲಂಡ್ ಮೊದಲಾದ ದೇಶಗಳು, ಅಲ್ಲಿಯ ಜನರು, ಅವರ ನಾಗರಿಕತೆ

ಮೊದಲಾದವುಗಳ ಯಥೋಚಿತ ವರ್ಣನೆಗಳೂ ಸುಸಂಗತವಾಗಿವೆ. ರಕ್ತದಲ್ಲಿಯ ಆರ್. ಎಚ್.ಗುಂಪಿನ ವಿಷಯವಂತೂ ಅವರ ಅಧ್ಯಯನದ ಕ್ಷೇತ್ರವೇ ಆಗಿದೆ. ಆದರೆ ಅದನ್ನು ಕೂಡ ಸನ್ನಿವೇಶಕ್ಕೆ ತಕ್ಕಂತೆ ಬಣ್ಣಿಸಿರುವರು.

ಇದೆಲ್ಲ ಸರಿಯಾದರೂ ಕಾದಂಬರಿಯಲ್ಲಿ ಅನೇಕ ಕಡೆಗಳಲ್ಲಿ ಕಾದಂಬರಿ ಕಾರ್ತಿ ಸರಳೀಕರಣದ ಸೂತ್ರಕ್ಕೆ ಕಟ್ಟು ಬಿದ್ದಂತೆ ಕಂಡು ಬರುತ್ತದೆ. ಅಂತರ್‌ಜಾತೀಯ ಮದುವೆಯನ್ನು ಮಾಲಿನಿ ಮತ್ತು ರವೀಂದ್ರರ ಹಿರಿಯರು ಹೆಚ್ಚಿನ ತಕರಾರು ಇಲ್ಲದೆ ಒಪ್ಪಿಬಿಡುವರು. ರವೀಂದ್ರನ ಅಥವಾ ಮಾಲಿನಿಯ ಪಿಎಚ್. ಡಿ. ಮಹಾಪ್ರಬಂಧ ಗಳು ಯಾವ ಅಡಚಣೆಗಳಿಲ್ಲದೆ ಮುಕ್ತಾಯಗೊಂಡುದು, ರವೀಂದ್ರ ರೀಡರ ಮತ್ತು ಮುಖ್ಯಸ್ಥನಾದುದು, ಮಾಲಿನಿಗೆ ಅತ್ಯಂತ ಅನಾಯಾಸವಾಗಿ ಅದೇ ವಿಭಾಗದಲ್ಲಿ ಕೆಲಸ ದೊರೆತುದು. ಅವಳ ಪ್ರಬಂಧಗಳಿಗೆ ದೇಶ ವಿದೇಶಗಳ ವಿದ್ವಾಂಸರಿಂದ ಸಹಜವಾಗಿ ಮನ್ನಣೆ ದೊರಕುವುದು, ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅವಳನ್ನು ಉಪನ್ಯಾಸಕ್ಕೆ ಆಮಂತ್ರಿಸುವದು, ಉತ್ಖನನದಲ್ಲಿ ಪಾಲ್ಗೊಳ್ಳಲು ಪರದೇಶಗಳಿಂದ ಇಬ್ಬರಿಗೂ ನಿಮಂತ್ರಣ ಬರುವದು, ಅಥವಾ ಕಾದಂಬರಿಯಲ್ಲಿ ನಡೆದ ಎಲ್ಲಾ ಉತ್ಖನನಗಳೂ ಅಷ್ಟೇ ಯಶಸ್ವಿಯಾಗುವದು, ಸಮೀರದೇವಿಯ ಗುಡ್ಡವನ್ನು ಸ್ಥಳಾಂತರಿಸುವ ಕಾರ್ಯದಲ್ಲಿ ಮಲ್ಲಯ್ಯನ ಹಂಚಿಕೆ ಯಾರಿಗೂ ಸಂದೇಹ ಬಾರದಂತೆ ಕೈಗೂಡುವುದು, ಇವೆಲ್ಲಕ್ಕಿಂತ ಹೆಚ್ಚಾಗಿ ಅವರು ಕೇಳಿದ ಎಲ್ಲಾ ಕೆಲಸಗಳಿಗೂ ಸರಕಾರದಿಂದ ಪರವಾನಗಿ ಮತ್ತು ಸಕಾಲದಲ್ಲಿ ಧನಸಹಾಯ ದೊರೆಯುವುದು-ಇಂಥವುಗಳೆಲ್ಲ ವಾಸ್ತವ ಜೀವನ ದಲ್ಲಿ ಇಷ್ಟು ಸುಲಭವಾಗಿ ಎಂದೂ ನಡೆಯಲಾರವು. ಇಂಥವುಗಳಲ್ಲಿ ಉಂಟಾಗುವ ಸಮಸ್ಯೆಗಳು ಅಡ್ಡಿ ಆತಂಕಗಳು, ಅವುಗಳ ಪರಿಹಾರಕ್ಕಾಗಿ ನಡೆಸಬೇಕಾದ ಪ್ರಯತ್ನ ಗಳನ್ನೂ ಯಶಾಪಯಶಗಳನ್ನೂ ಚಿತ್ರಿಸಿದ್ದರೆ ಕಾದಂಬರಿಯ ವಾಸ್ತವತೆ ಹೆಚ್ಚುತ್ತಿತ್ತು. ಜನಪ್ರಿಯ ಕಾದಂಬರಿಕಾರರ ಫಾರ್ಮುಲಾವನ್ನು ಅನುಸರಿಸಿ, ಎಲ್ಲಾ ಘಟನೆಗಳು ಪೂರ್ವಯೋಜಿತ ರೀತಿಯಲ್ಲಿ ನಡೆದಂತೆ ತೋರುವದರಿಂದ ಕಾದಂಬರಿಯ ಕಟ್ಟಡ ಶಿಥಿಲವೆನಿಸುತ್ತದೆ.

ಇಂಥ ಕೆಲವು ವಿಚಾರಗಳಿದ್ದರೂ ಡಾ। ಅನುಪಮಾ ಅವರ "ಆಳ"ವು ಖಚಿತ ವಾಗಿಯೂ ಒಂದು ಸ್ವಾಗತಾರ್ಹ ಕಾದಂಬರಿಯಾಗಿದೆ. ಮುಖ್ಯವಾಗಿ ಅವರು ಆಯ್ದುಕೊಂಡ ವಸ್ತುವಿನ ಹೊಸತನ ಕಾದಂಬರಿಯ ಪ್ರಮುಖ ಆಕರ್ಷಣೆ. ಪತ್ರಿಕೆ ಗಳಿಗೆ ಧಾರಾವಾಹಿಯಾಗಿ ಬರೆಯುವವರು ಸಾಮಾನ್ಯ ವಾಚಕರ ಕುತೂಹಲವನ್ನು ವಾರ ದಿಂದ ವಾರಕ್ಕೆ ಕೆರಳಿಸುತ್ತ, ಅವರ ಅಭಿರುಚಿಯನ್ನು ತಣಿಸುತ್ತ ಬರೆಯಬೇಕಾಗುತ್ತದೆ. ಈ ಮಾತನ್ನು ನೆನೆದರೆ ಡಾ। ಅನುಪಮಾ ಅವರು ಇಂಥ ಇತಿಮಿತಿಗಳಲ್ಲಿಯೂ ಸಾಧಿಸಿದ ಯಶಸ್ಸು ಗಮನಾರ್ಹವಾಗಿದೆ. ಒಳ್ಳೆಯ ಕಥನಶಕ್ತಿಯುಳ್ಳ

ಡಾ। ಅನುಪಮಾ ಅವರು ಇನ್ನೂ ಪುಷ್ಟವಾದ ಕಲಾತ್ಮಕವಾದ ಗಟ್ಟಿಯಾದ ಕಾದಂಬರಿಯನ್ನು ಖಚಿತವಾಗಿಯೂ ಬರೆಯಬಲ್ಲರು. ಅವರಲ್ಲಿ ಜೀವನದ ಅನುಭವವಿದೆ, ಸೂಕ್ಷ್ಮ ನಿರೀಕ್ಷಣಶಕ್ತಿಯಿದೆ, ನಿರೂಪಣೆಯ ಸುಭಗತೆಯಿದೆ-ಇವೆಲ್ಲ ಅವರಿಗಿರುವ ಅನುಕೂಲತೆಗಳು. ಇವುಗಳಿಂದ ಅವರು ಇನ್ನೂ ಗಂಭೀರವಾದ ಚಿರಸ್ಥಾಯಿಯಾಗಿ ನಿಲ್ಲುವಂಥ ಕಾದಂಬರಿಗಳನ್ನು ಬರೆಯಲಿ ಎಂದು ಹಾರೈಸೋಣ.

"ಮುಕ್ತಿಚಿತ್ರ" - ಒಂದು ಚಿತ್ರ ೧೦

- ವಿ. ಗ. ನಾಯಕ

"ಸಮಾಜದ ಸ್ಥಿತ್ಯಂತರಗಳನ್ನು ಗುರುತಿಸುವುದೇ ಈ ಕಾದಂಬರಿಯ ಮುಖ್ಯ ಉದ್ದೇಶ ಆಗಿದೆ. ಇದುವರೆಗೆ ಅಬಲೆ, ಅಸಹಾಯಳು ಎಂದೇ ಕರೆಸಿಕೊಳ್ಳುತ್ತಿದ್ದ ಮಹಿಳೆ, ಹೊಸ ಪ್ರಜ್ಞೆಯಿಂದ ಜಾಗೃತಳಾಗಿ ಶೋಷಣೆಯ ವಿರುದ್ಧ ಬಂಡೇಳುವುದೇ ಇಲ್ಲಿನ ಕಥಾ ವಸ್ತು. ಮಹಿಳೆಯ ಪರವಾಗಿ ಗಟ್ಟಿಗೊಳ್ಳುತ್ತಿರುವ ಆಂದೋಲನಗಳನ್ನು ದಾಖಲೆ ಮಾಡುವುದೂ ಈ ಕೃತಿಯ ಇನ್ನೊಂದು ಪ್ರಮುಖ ಗುರಿ". ಅನುಪಮಾ ನಿರಂಜನ ಅವರು ತಮ್ಮ 'ಮುಕ್ತಿಚಿತ್ರ' ಕಾದಂಬರಿಯ 'ಒಂದೆರಡು ಮಾತು'ಗಳಲ್ಲಿ ಹೀಗೆ ಸ್ಪಷ್ಟವಾಗುತ್ತಾರೆ. ಎಂದರೆ ಇದು ಬಂಡಾಯದ ಕಾದಂಬರಿ ಆಗಿದೆ. ಮಹಿಳೆಯರು ಈ ರೀತಿಯಾಗಿ ಚಿಂತಿಸುವಲ್ಲಿ, ಬರೆಯುವಲ್ಲಿ ತೋರಿಸುವ ಕಾಳಜಿಯೇ ಮೊದಲಾಗಿ, ಖುಷಿ ಕೊಡುವ ಸಂಗತಿಯಾಗಿದೆ. ವಾಸ್ತವವಾಗಿ, ನಮ್ಮ ಹೆಂಗಳೆಯರು ಗೃಹ ಬಂಧನಕ್ಕೊಳಗಾದವರು. ಇದನ್ನು ಅರ್ಥೈಸಿಕೊಳ್ಳದ ನಮ್ಮ ಬಹುತೇಕ ಲೇಖಿಕೆಯರು ಇಂಥ ವ್ಯವಸ್ಥೆಯನ್ನು ಹಾಡಿ ಹೊಗಳಿದ್ದೇ ಹೆಚ್ಚು. ನಮ್ಮ ಹೆಚ್ಚಿನ ಮಹಿಳಾ ಕಾದಂಬರಿಗಳು ಲಘುವಾಗಿದ್ದೇ ಅಂಥ ಕಾರಣಗಳಿಗಾಗಿ. ಮಹಿಳೆಯರ ಬಗ್ಗೆ ಲಘುವಾದ ಮಾತುಗಳು ಗಟ್ಟಿಗೊಂಡದ್ದೂ ಅಂಥ ಕಾದಂಬರಿಗಳಿಂದಾಗಿಯೇ. ಇಂಥ ಸಂದರ್ಭದಲ್ಲಿ ಅನುಪಮಾ ಅಂಥವರ ಕಾದಂಬರಿಗಳು ಕತ್ತಲು ಸೀಳಿ ಹೊರ ಬಂದಿರುವುದು ಅಲಕ್ಷಿಸಬಾರದ ಬೆಳವಣಿಗೆಯಾಗಿದೆ. ಇದರ ಅರ್ಥವೇನೆಂದರೆ, 'ಮುಕ್ತಿಚಿತ್ರ' ಕಲಾತ್ಮಕವಾಗಿ ಏನು, ಎಷ್ಟು ಎಂಬುದು ಬೇರೆಯಾಗಿ ಚರ್ಚೆಯ ವಿಷಯವಾದರೂ, ಅದು ಅಗತ್ಯವಾಗಿ ಯೋಚಿಸಲು ಹಚ್ಚುವ ಕೃತಿಯಾಗಿ ಗಣಿಸಬೇಕಾದ್ದು ಎಂಬುದು.

ಇಲ್ಲಿ ಜಾನಕಿ ಹಾಗೂ ಶ್ಯಾಮಲಾ ಎಂಬವರು ಆ ದೃಷ್ಟಿಯಿಂದ ಮುಖ್ಯ ಆಗುತ್ತಾರೆ. ಮತ್ತು ಇವರ ಬಂಡಾಯಕ್ಕೆ ಸ್ತ್ರೀ ಮುಕ್ತಿ ಕೇಂದ್ರ, ಅದರ ಮುಖ್ಯಸ್ಥೆ ಯಮುನಾ ತಾಯಿ ಪ್ರೇರಕ ಶಕ್ತಿಯಾಗಿದ್ದಾರೆ. ಮತ್ತು ವೈಚಾರಿಕವಾಗಿ ಹದಗೊಂಡ

ಅಲಕಾ ಹಾಗೂ ಜಯಪಾಲ ಅವರುಗಳು ವ್ಯಕ್ತಿ ಸ್ವಾತಂತ್ರ್ಯದ ಪ್ರಜ್ಞೆಯಿಂದ ಅರಳಿ ಕೊಂಡವರೇ ಆಗಿದ್ದಾರೆ. ಹೀಗೆ ಶೋಷಿತ ಮಹಿಳೆಯರ ಪರವಾದ ಕಾದಂಬರಿಯಾಗಿ ಇದು, ಪುರುಷ ಪ್ರಾಧಾನ್ಯ ವ್ಯವಸ್ಥೆಯ ಮೇಲೆ ಚಾಟಿ ಬೀಸುತ್ತದೆ.

ಬಿ.ಎ. ಕೊನೆಯ ವರ್ಷದಲ್ಲಿದ್ದ ಶ್ಯಾಮಲಾ, ಕಾಲೇಜು ಬಿಟ್ಟು ಮದುವೆಗೆ ಸಿದ್ಧವಾದ್ದು ಯಾಕೆ ಎಂದರೆ ಹೆತ್ತವರಿಗೆ ತಾನು ಹೆಣಭಾರವಾಗಬಾರದು ಎಂಬುದಕ್ಕಾಗಿಯೇ; ಹೆಣ್ಣಿನ ಬಗೆಗೆ ಹೆತ್ತವರಿಗಿರುವ ಸಾಂಪ್ರದಾಯಿಕ ಶ್ರದ್ಧೆಯಿಂದಾಗಿಯೇ.

ಅಲಕಾ, ಅವಳ ಕೈ ಹಿಡಿದುಕೊಂಡು, "ನಿಜ ಹೇಳು. ನೀನವನನ್ನ ಒಪ್ಪಿದ್ದೀಯಾ?" ಎಂದು ಕೇಳಿದಳು.

ಶ್ಯಾಮಲಾ ತಲೆತಗ್ಗಿಸಿ ನುಡಿದಳು: "ನನ್ನ ಒಪ್ಪಿಗೆ ಕೇಳ್ತೋರು ಯಾರು? ಹಿಂದೆ ಮೂರು ನಾಲ್ಕು ಜನ ಬಂದು 'ಈ ಹುಡುಗಿ ಬೇಡ' ಎಂದು ಹೇಳಿ ಹೋಗಿದ್ದರಲ್ಲ! ಅಪ್ಪ, ಅಮ್ಮ ದಿನಾ ಇದೇ ಮಾತಾಡೋರು. ಇವಳಿಗೆ ಮದ್ವೆ ಯಾಗುತ್ತೋ ಇಲ್ವೋ ಅಂತ ಹಲುಬ್ತಾ ಇದ್ರು. ಆ ಹೊತ್ನಲ್ಲಿ ಇವನು 'ಹೂ' ಅಂದಿದ್ದೇ ತಡ. ಅವರು ಎಷ್ಟು ಸಂಭ್ರಮ ಪಟ್ಟರೂಂತಿ? ಅವನು ಒಪ್ಕೊಂಡಿದ್ದಾನೆ. ನಿನ್ನ ಪುಣ್ಯ ಅಂತ ನಂಗೆ ಬಂದು ಹೇಳಿದ್ರು. ಇಂಥ ಹೊತ್ತಿನಲ್ಲಿ ನಾನು ಹೂ ಅನ್ನೋದು ಬಿಟ್ಟು ಬೇರೆ ಯಾವ ದಾರಿಯಿತ್ತು ಹೇಳು? ಯಾವತ್ತಿದ್ರೂ ಮದ್ವೆ ಆಗ್ಬೇಕು. ಯಾರೋ ಒಬ್ಬ ಅನ್ಕೊಂಡು ಸಮಾಧಾನ ಮಾಡ್ಕೊಂಡೆ!" (ಪುಟ ೧೮)

ಈ ಮಾತುಗಳನ್ನು ಕೇಳಿಸಿಕೊಂಡ ಅಲಕಾ ಹೀಗೆ ನಿಡುಸುಯ್ಯುತ್ತಾಳೆ: (ಅನುಪಮಾ ಹೀಗೆ ಬೇಯುತ್ತಾರೆ) "ಒಬ್ಬ ವ್ಯಕ್ತಿ, ಹುಡುಗಿಯಾದ ಮಾತ್ರಕ್ಕೆ ಸಮಾಜ ಇಷ್ಟು ಅವಮಾನ ಮಾಡಬಹುದೆ?"

ಶ್ಯಾಮಲೆಯ ಗಂಡನ ಮನೆಯಲ್ಲಿ ಮನುಷ್ಯರಿರಲಿಲ್ಲ, ಗಂಡ ನಾಗೇಂದ್ರ ಸಹಿತವಾಗಿ. ಶ್ಯಾಮಲೆ ಅಲ್ಲಿ ನಗಲಿಲ್ಲ; ನಗುವನ್ನು ಕಾಣಲಿಲ್ಲ. ವರದಕ್ಷಿಣೆಯ ದಾಹಕ್ಕೆ ಸಿಕ್ಕ ಅತ್ತೆ. ನಾದಿನಿ: ಅವರ ಕೈಗೊಂಬೆಯಾದ ಗಂಡ-ಇವರುಗಳ ಮಧ್ಯೆ ಶ್ಯಾಮಲೆ ಹೆಣವಾಗಿ ಹೋಗುತ್ತಾಳೆ. ತೌರ್ಮನೆಯವರು ಕಡು ಬಡವರಾದರೂ ಇವರ ನಿರ್ದಯದ ವರ್ತನೆಗೆ ನಡುಗಿ ಅಲ್ಲಿಂದ 'ಮೊಪೆಡ್' ತರಿಸಿ ಕೊಡುತ್ತಾಳೆ. ಅದೂ ಸಾಲದೇ, ಟಿ.ವಿ.ಗೂ ಬಲವಂತಿಸಿದಾಗ, ಕೊಡಲಾಗದೆ ತೌರವರ ಪರವಾಗಿ ಶ್ಯಾಮಲೆ ಗಟ್ಟಿಯಾಗುತ್ತಾಳೆ. ಪ್ರತಿಫಲವಾಗಿ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗುತ್ತಾಳೆ:

"....ಅವನು ಅವಳನ್ನು ಅವಾಚ್ಯ ಶಬ್ದಗಳಲ್ಲಿ ಗಟ್ಟಿಯಾಗಿ ಬಯ್ಯುತ್ತಾ ಬಚ್ಚಲು ಮನೆಗೆ ಎಳೆದೊಯ್ದು....ಅಷ್ಟರಲ್ಲಿ ಇದ್ದಕ್ಕಿದ್ದ ಹಾಗೆ ಅಡುಗೆ ಮನೆಯಿಂದ ಬಂದ ಸಾತು ಅವಳ ಮೇಲೆ ಸೀಮೆಯೆಣ್ಣೆ ಸುರಿದಳು....'ಕಳ್ಮುಂಡೆ! ನಿಂಗ್ ಸರ್‍ಯಾಗಿ ಬುದ್ಧಿ ಕಲಿಸ್ತೀನಿ ಇರು!' ಎನ್ನುತ್ತಾ ಅತ್ತೆ ಬೆಂಕಿಕಡ್ಡಿ ಗೀರಿ ಅವಳ ಮೈಗೆ ಮುಟ್ಟಿಸಿದರು." (ಪುಟ ೧೨೭)

ಆದರೆ ನೆರೆಮನೆಯ ಸವಿತಾ ಹಾಗೂ ಆಕೆಯ ಗಂಡ ಮಧುಸೂದನನ ಸಮಯೋಚಿತ ನೆರವಿನಿಂದಾಗಿ ಆಕೆ ಬಚಾವಾಗುತ್ತಾಳೆ; ವೈದ್ಯಕೀಯ ಚಿಕಿತ್ಸೆಯಿಂದ ಚೇತರಿಸಿಕೊಂಡವಳಾಗಿ - ಪೋಲೀಸ್‌ನವರಿಗೆ ಹಕೀಕತ್ತನ್ನು ಒಪ್ಪಿಸುತ್ತಾಳೆ. ಈ ಸಂದರ್ಭದಲ್ಲಿ ಅಲಕಾ ಸ್ತ್ರೀ ಮುಕ್ತಿಕೇಂದ್ರದ ಬೆಂಬಲ ಪಡೆಯುವುದು ಗಮನಾರ್ಹವಾಗಿದೆ. ಇನ್ನೂ ಬೇರೆ ಬೇರೆ ಘಟ್ಟಗಳಲ್ಲೂ ಈ ಮುಕ್ತಿಕೇಂದ್ರದ ಪಾತ್ರ ದೊಡ್ಡದಾಗಿಯೇ ಇದೆ. ಅಂದರೆ ಇಂಥ ಮುಕ್ತಿಕೇಂದ್ರದ ಸ್ಥಾಪನೆಗೆ, ಅದರ ಕಾರ್ಯಾಚರಣೆಯ ವಿಧಾನದ ಬಗೆಗೆ ಉದ್ದಕ್ಕೂ ಕಾದಂಬರಿ ಒತ್ತಿ ಹೇಳುವುದಾಗಿದೆ.

"ಮುಕ್ತಿ ಕೇಂದ್ರದ ಸದಸ್ಯೆಯರು ನಾಗೇಂದ್ರನ ಮನೆಯ ಮುಂದೆ ಬೀದಿ ನಾಟಕ ಆಡಿದರು. ಘೋಷಣೆ ಕೂಗಿದರು. ಅಕ್ಕಪಕ್ಕದ ಮನೆಯವರೆಲ್ಲಾ ಬಂದು ನಿಂತು ಅವರಿಗೆ ಒತ್ತಾಸೆ ನೀಡಿದರು". (ಪುಟ ೧೩೩) ಸ್ತ್ರೀ ವರದಿಗಾರರೂ ಇಲ್ಲಿಗೆ ಬೆಂಬಲವಾದರು. "ಮರುದಿನ ಬೆಳಗ್ಗೆ ಎಲ್ಲಾ ಪತ್ರಿಕೆಗಳಲ್ಲೂ ಶ್ಯಾಮಲೆಯ ಸುದ್ದಿಯೇ". ಹೀಗಾದಾಗ, ಅಂಥ ಅಪರಾಧಿಗಳ ಮೇಲೆ ಆಗುವ ಚಿತ್ರ-ವಿಚಿತ್ರವಾದ ಹಿಂಸೆ, ಮತ್ತು ಅಂಥ ಸ್ವಭಾವದ ಇತರರಿಗೂ ಆಗಬಹುದಾದ ಎಚ್ಚರ - ಕೋರ್ಟ್ ನ್ಯಾಯಕ್ಕಿಂತ ಹೆಚ್ಚು ಪರಿಣಾಮಕಾರಿಯಾದದ್ದು ಎಂಬುದು ಇಲ್ಲಿನ ಸೂಚ್ಯಾರ್ಥವಾಗಿದೆ. ಹಾಗಿದ್ದರೂ, ಕೋರ್ಟನ್ನು ಬಿಡುವಂತಿಲ್ಲ ಎಂಬುದೂ ಅನುಪಮಾ ಅವರ ಆಶಯವಾಗಿದೆ. ಶ್ಯಾಮಲಾ ತಂದೆ ಕೇಸ್ ಮುಂದುವರಿಸುವುದಕ್ಕೆ ಒಡಂಬಡುತ್ತಾರೆ. ಯಮುನಾತಾಯಿಯವರ ಗಂಡ ಅಪ್ಪ ಅವರು ಅದಕ್ಕೆ ಒತ್ತಾಸೆ ನೀಡುವುದರ ಹಿಂದಿನ ಕಳಕಳಿ ಕೇವಲ ಮಾನವೀಯತೆಯಿಂದ ಕೂಡಿದ್ದು: "ಇದು ಸೇಡು ತೀರಿಸುವ ಮನೋಭಾವ ಅಲ್ಲ. ಜನ ತಾವೇನು ಮಾಡಿದ್ರೂ ಬಚಾವಾಗಬಹುದ್ದು ಅಂತ ತಿಳ್ಕೋಬಾರ್ದು...." (ಪುಟ ೧೩೫).

ಶ್ಯಾಮಲೆ ಗಂಡನ ಮನೆಯಿಂದ, "ಈಗ ನಿಮ್ಮ ಮಗಳು ತಾನು ಹೇಳಿದ್ದೆಲ್ಲ ಸುಳ್ಳು ಅಂತ ಪೋಲೀಸರಿಗೆ ಒಂದು ಹೇಳಿಕೆ ಕೊಟ್ಟು ಬಿಟ್ರೆ ಈ ಕೇಸು ಖಲಾಸೆ ಆಗುತ್ತೆ. ಅವಳ್ನ ಕ್ಷಮಿಸಿ ತಮ್ಮ ಮನೆಗೂ ಕರ್ಕೊಳ್ತೀವಿ" (ಪುಟ ೧೩೭)ಎಂದಿತ್ಯಾದಿ ಬಂದ ಸಂದೇಶವನ್ನು ಕೇಳಿ, ಒಂದಿಷ್ಟೂ ವಿಚಲಿತಳಾಗದೇ "ಅಪ್ಪ, ನಿನಗೆ ಅವರೆಂಥವರು ಅನ್ನೋದು ಗೊತ್ತಿಲ್ಲ. ನಾನು ಸುಳ್ಳು ಹೇಳಿಕೆ ಕೊಟ್ಟು ಅವರು ಬಚಾವಾದ್ಮೇಲೆ,

ನನ್ನನ್ನ ಹತ್ರ ಸೇರಿಸ್ತಾರೆ ಅಂತ ತಿಳಕೊಂಡ್ಯಾ? ಕ್ಷಮಿಸೋದು ಇದೆಲ್ಲಾ ಭಾರೀ ನಾಟಕ. ಇಷ್ಟಕ್ಕೂ ಅವರು ಕ್ಷಮಿಸಬೇಕಾದೋಳು ನಾನು. ಆ ಮೂರ್ಖತನದ ಕೆಲಸ ಖಂಡಿತ ನಾನು ಮಾಡೋದಿಲ್ಲ" ಎಂದು ಸಬಲೆಯಾಗುತ್ತಾಳೆ; ವ್ಯಕ್ತಿ ಸ್ವಾತಂತ್ರ್ಯಕ್ಕೆ ಮರ್ಯಾದೆಯಾಗುತ್ತಾಳೆ. ಕೊಲೆಯತ್ನದ ಆರೋಪ ದೃಢವಾಗಿ ನಾಗೇಂದ್ರನಿಗೆ ಜೈಲು ಶಿಕ್ಷೆ ಆದಾಗಲೂ ಶ್ಯಾಮಲಾ ಒಂದು ಚಣವೂ ದುಗುಡಕ್ಕೊಳಗಾಗದ್ದು ಸ್ತ್ರೀಯ ಬಲಿಷ್ಠವಾದ ಮಾನಸಿಕ ಸ್ಥಿತಿಗೆ ಒದಗಿಸಿದ ಗೌರವವೇ ಆಗಿದೆ. "....ಒಂದ್ಸಾರಿ ಮದುವೆಯಾಗಿ ಅನುಭವಿಸಿದ್ದು ಸಾಕು. ನನ್ಗೆ ಖಂಡಿತ ಮದ್ವೆ ಬೇಡಪ್ಪಾ. ನಾನೊಂದು ಕೆಲ್ಸ ಹಿಡೀತಿನಿ. ನಿಮ್ಗೆ ಖಂಡಿತ ಭಾರವಾಗೊಲ್ಲ" ಎಂದು ಶ್ಯಾಮಲೆ ತಂದೆ-ತಾಯಿ ಯರಿಗೆ ಮುಖಾಮುಖಿಯಾದುದರಲ್ಲೂ ಮಹಿಳೆಯರು ಸವಾಲುಗಳನ್ನು ಎದುರಿಸ ಬೇಕಾದ ರೀತಿಯನ್ನೇ ನಿರ್ದೇಶಿಸಿದ್ದಾಗಿದೆ.

ಅಲಕಾಳ ತಾಯಿ ಜಾನಕಿ ಮತ್ತೊಂದು ಥರದ ಹಿಂಸೆಯಿಂದ ನರಳಿದುದಾಗಿದೆ. ಗಂಡ ಚಿದಾನಂದ ದೊಡ್ಡ ಕುಳ: ಕೈಗಾರಿಕೋದ್ಯಮಿ. ಈಗ ಎಂ. ಎಲ್. ಎ ಮತ್ತು ಕರಕುಶಲ ಮಂಡಳಿ ನಿಗಮದ ಅಧ್ಯಕ್ಷ. ಆದರೆ ಆತ ಹೆಂಡತಿಯನ್ನು ನಡೆಯಿಸಿಕೊಂಡು ಬಂದ ಪರಿಯಂತೂ ಅಮಾನುಷವಾದ್ದು. ಕಾದಂಬರಿ ಇವರ ಬಗೆಗೇ ಹೆಚ್ಚು ಪುಟ ಗಳನ್ನು ಒದಗಿಸಿದೆ. ಜಾನಕಿಯ ಸ್ವಗತವನ್ನು ಹಿಡಿದಿಟ್ಟು ಚಿದಾನಂದನನ್ನು ಒಂದಿಂಚು ತೋರಿಸಬಹುದೇನೋ. ಹಾಗೆಯೇ ಸಾಮಾನ್ಯ ಮಟ್ಟದ ಮಹಿಳೆಯರನ್ನೂ.

"ಕಾರಣವಿಲ್ಲದೆ ಚಿದಾನಂದ ತನ್ನನ್ನು ಹೊಡೆಯುತ್ತಿದ್ದ, ಕಚ್ಚುತ್ತಿದ್ದ, ಉರಿಯುವ ಸಿಗರೇಟಿನ ತುದಿಯಿಂದ ಚುಚ್ಚುತ್ತಿದ್ದ. ಇವನು ಯಾಕೆ ಹೀಗೆ ವರ್ತಿಸು ತ್ತಾನೆ? ಎಂಬುದೇ ತನಗೆ ಬಗೆಹರಿಸಲಾರದ ಸಮಸ್ಯೆ. ಹೆಂಡತಿ ತನ್ನ ಮಾತು ಕೇಳಬೇಕು ಎಂಬ ಅಹಂಭಾವವೇ? ಅವನು ಹಾಕಿದ ಗೆರೆಯನ್ನು ತಾನೆಂದೂ ದಾಟಿರ ಲಿಲ್ಲ. ಹೆಂಡತಿಗಿಂತ ತಾನು ಮೇಲು ಎಂದು ತೋರಿಸಿಕೊಳ್ಳುವ ದುರಭಿಮಾನವೇ? ತಾನು ಅವನಿಗಿಂತ ಕೀಳು ಎಂದು ಯಾವೊತ್ತೋ ಒಪ್ಪಿಕೊಂಡಾಗಿತ್ತು...." (ಪುಟ ೪೭) ಅದಲ್ಲದೇ ತನ್ನ ತಾಯಿ ಮನೆಗೂ ಆಕೆ ಹೋಗುವಂತಿಲ್ಲ. ಆ ಕಡೆಯವರೂ ಈ ಮನೆಗೆ ಬರಲಾಗದು. ಒಟ್ಟಾರೆಯಾಗಿ ಜಾನಕಿಯ ಪಾಲಿಗೆ ಸ್ವಾತಂತ್ರ್ಯವೆಂಬುದು ಕನಸಿನ ಗಂಟಾಯಿತು. ಆದರೂ ಜಾನಕಿ ಆಗೊಮ್ಮೆ, ಈಗೊಮ್ಮೆ ಆತ್ಮಾಭಿಮಾನ ದಿಂದ ಸೆಟೆದುಕೊಳ್ಳದೇ ಇರಲಿಲ್ಲ. ಅಂಥ ಒಂದು ಸಂದರ್ಭದಲ್ಲಿ "ಚಿದಾನಂದ ಮೇಜಿನ ಮೇಲಿದ್ದ ಹೂದಾನಿಯನ್ನು ತೆಗೆದುಕೊಂಡು ರಪ್ಪನೆ....ಹೊಡೆದಿದ್ದ." ಆದಾಗಿಯೂ ಗಂಡನಿಗೆ ಕಾಗದ ಬರೆದು ತೌರ್ಮನೆಗೆ ಹೋಗುವ ಧೈರ್ಯ ತೋರುತ್ತಾಳೆ ಜಾನಕಿ. ಆದರೆ ಆಕೆಗೆ ತೌರ್ಮನೆಯೂ ಹತ್ತಿರವಾಗಲಿಲ್ಲ. ತಾಯಿಯ ಹಿತವಚನ ಇದು: "ಹೆಂಗ್ಸಿಗೆ ಗಂಡನ ಮನೆ ಬಿಟ್ರೆ ಬೇರೆಲ್ಲೂ ಗೌರವ ಇರೊಲ್ಲ ಕಣೆ!" ಹೆಣ್ಣು ಮಕ್ಕಳಿಗೆ ನಮ್ಮ ವ್ಯವಸ್ಥೆ ಎಸಗುತ್ತಲಿರುವ ದ್ರೋಹಕ್ಕೆ ಇದು ಇನ್ನೊಂದು ಪುರಾವೆ ಆಗುತ್ತದೆ.

ಇದೇ ಚಿದಾನಂದನ ಉದ್ಧಟತನ ಇನ್ನೂ ಎಷ್ಟಕ್ಕೆ ಮುಂದೆ ಹೋಯಿತೆಂದರೆ ಎಂ. ಎಲ್. ಎ. ರಾಮೇಶ್ವರಿಯನ್ನು ತನ್ನ ಮನೆಗೇ ಕರೆತಂದು ಅಲ್ಲೇ ರೋಮಾನ್ಸ್ ಮಾಡುವಷ್ಟು. ಈಗಲೀಗ ಮಗಳು ಅಲಕಾಳಿಂದ ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ಮುಕ್ತಿ ಕೇಂದ್ರ ಇತ್ಯಾದಿ ಇತ್ಯಾದಿ ಕೇಳಿ ತಯಾರಾಗಿದ್ದ ಜಾನಕಿ ರಾಮೇಶ್ವರಿಯ ಮುಂದೆಯೇ ಗಂಡನನ್ನು ಪ್ರತಿಭಟಿಸುವಷ್ಟು ಸಾಹಸ ಮೆರೆಯುತ್ತಾಳೆ. ಮತ್ತೊಂದು ಸಂದರ್ಭದಲ್ಲಿ ಮನೆಗೆ ಬಂದ ರಾಮೇಶ್ವರಿ "ಅಭಿನಂದನೆಗಳು. ಏನೋ ಹೊಸ ಸುದ್ದಿ ಕೇಳ್ದೆ. ನಂಗೆ ತುಂಬಾ ಸಂತೋಷವಾಗಿದೆ. ಎನ್ನುತ್ತಾ ಅವನನ್ನು ಬಿಗಿದಪ್ಪಿ ಚುಂಬಿಸಿದಳು...." "ಅವಳು ಮುಂದೆ ಬಂದು ರಾಮೇಶ್ವರಿಯನ್ನು ಹಿಡಿದೆಳೆಯುತ್ತಾ, 'ನನ್ನ ಮನೇನ ಹಾಳು ಮಾಡೋದಕ್ಕೆ ಎಷ್ಟು ದಿವ್ಸದಿಂದ ಹೊಂಚ ಹಾಕಿದ್ದಿಯೆ ಛಿನಾಲಿ?' ಎಂದು ಅಬ್ಬರಿಸಿದಳು." ಪರಿಣಾಮವಾಗಿ ಚಿದಾನಂದ ಜಾನಕಿಯನ್ನು ಬಲವಾಗಿ ಎಳೆದು ಹಿಂದಕ್ಕೆ ನೂಕಿ ಬಿಡುತ್ತಾನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆದು, ಪ್ರಜ್ಞೆ ಮರಳಿ, ಮನೆಗೆ ಹೊರಡಲು ವೈದ್ಯರು ಒಪ್ಪಿಗೆ ಕೊಟ್ಟಾಗ ಜಾನಕಿ ಅಪೇಕ್ಷಿಸಿದ್ದು ತನ್ನ ಹಾಗೂ ಗಂಡನ ನಡುವಣ ಸಂಬಂಧದ ಘಟಸ್ಫೋಟವನ್ನೇ.

"ನಂಗೆ ಆ ಮನೇಲಿ ಎಲ್ಲವೂ ಸಾಕಾಗಿ ಹೋಗಿದೆ. ನಂಗಿನ್ನು ಶಾಂತಿಯಿಂದ ಬಾಳೋದು ಬೇಕು. ಗೌರವದಿಂದ ಬಾಳೋದು ಬೇಕು....ಯಮುನಾತಾಯಿ ನಂಗೆ ಮುಂದಿನ ದಾರಿ ತೋರಿಸ್ತಾರೆ....." (ಪುಟ ೧೪೪).

ಸ್ತ್ರೀ ಮುಕ್ತಿ ಕೇಂದ್ರ ಸೇರಿದ ಜಾನಕಿ ಯಮುನಾತಾಯಿಯವರ ಪತಿ ಲಾಯರ್ ಆಪ್ಟೆ ಅವರ ಸಲಹೆ ಪಡೆದು ಚಿದಾನಂದನಿಗೆ ವಿವಾಹ ವಿಚ್ಛೇದನಕ್ಕೆ ನೋಟೀಸು ಕೂಡ ಕಳಿಸುವಷ್ಟು ಕೆಚ್ಚೆದೆ ತೋರುವುದು ಹೆಣ್ಣಿನ ಸಾಧ್ಯತೆಯ ಶಕ್ತಿಗೆ ನಿದರ್ಶನವಾಗುತ್ತದೆ. ಮತ್ತು ಕೋರ್ಟಿನಲ್ಲಿ ಜಾನಕಿ ಗೆಲ್ಲುವುದಲ್ಲದೇ ಚಿದಾನಂದ ನಿಂದ ತಿಂಗಳಿಗೆ ಒಂದು ಸಾವಿರ ರೂಪಾಯಿ ಜೀವನಾಂಶ ಪಡೆಯುವ ಹಕ್ಕನ್ನೂ ಹೊಂದುತ್ತಾಳೆ.

ಈ ಮಧ್ಯೆ 'ಪ್ರಜಾಹಾರ' ಪತ್ರಿಕೆಯಲ್ಲಿ, ಜಾನಕಿ ಚಿದಾನಂದನ ಬಗ್ಗೆ ಕೊಟ್ಟ ಮಾಹಿತಿಯನ್ನು ಸೇರಿಸಿ ಆಪ್ಟೆ ಅವರು ಕೊಡಿಸಿದ ವರದಿ ಪ್ರಕಟವಾಗಿ, ಚಿದಾನಂದನಿಗೆ ದಕ್ಕಲಿದ್ದ ಮಂತ್ರಿ ಪದವಿಯೂ ಜಾರಿ, ಇದ್ದ ನಿಗಮದ ಅಧ್ಯಕ್ಷ ಸ್ಥಾನವೂ ತಪ್ಪಿ ಹೋಗುತ್ತದೆ! ಎಂದರೆ ಇಲ್ಲಿ ಸ್ತ್ರೀ ಶಕ್ತಿ ಪುರುಷ ಪ್ರಾಧಾನ್ಯವನ್ನು ಸೀಳಿ ಹಾಕಿದ್ದಾಗಿದೆ.

ರಾಜೀವಲೋಚನನ ಪ್ರಕರಣದಲ್ಲೂ ಸ್ತ್ರೀ ಮುಕ್ತಿ ಕೇಂದ್ರದ ಪಾತ್ರ ಗುರುತರ ವಾದ್ದೇ. 'ಇಬ್ರು ಮಕ್ಕಳಿರುವ' ಹೆಂಡತಿಯನ್ನು ಬಿಟ್ಟು ಎರಡನೇ ಮದುವೆಗೆ ಅಣಿಯಾಗುತ್ತಿರುವ ರಾಜೀವಲೋಚನನ ಮೇಲೆ ಸ್ತ್ರೀ ಮುಕ್ತಿ ಕೇಂದ್ರ ದಾಳಿ ಮಾಡು ತ್ತದೆ. ತನ್ಮೂಲಕ ವ್ಯವಸ್ಥೆಯು ಹೆಣ್ಣನ್ನು ದಂಡಿಸಲು ಹುಡುಕುವ ಬಗೆ ಬಗೆ ಕಾರಣ ಗಳ ಬಗ್ಗೆ ಕೆಂಡ ಕಾರುತ್ತದೆ:

"ನಾವು ಸ್ತ್ರೀ ಮುಕ್ತಿ ಕೇಂದ್ರದ ಸದಸ್ಯೆಯರು. ಒಳ್ಳೇ ಮಾತ್ನಲ್ಲಿ ಈ ಎರಡ್ನೇ ಮದ್ವೆ ಬಿಟ್ಟು ಹೆಂಡತಿ ಮಕ್ಕಳನ್ನು ವಾಪ್ಸು ಕರೆಸ್ಕೊಳ್ಳಿ. ಆ ಹುಡುಗಿ ಯಾವ ತಪ್ಪೂ ಮಾಡಿಲ್ಲ. ಎರಡ್ನೇ ಮಗೂನೂ ಹೆಣ್ಣಾದ್ದು ಅವಳ ತಪ್ಪೆ? ಇದ್ರಲ್ಲಿ ನಿಮ್ಮ ಪಾಲೂ ಇಲ್ವೆ?" (ಪುಟ ೯೧) ಅಷ್ಟಕ್ಕೇ ಅದು ತೃಪ್ತಿಗೊಳ್ಳುವುದಿಲ್ಲ. ಆತನ ಮನೆ ಯಿಂದ ಹೊರಬಂದವರ ಕೈಗಳಲ್ಲಿದ್ದ "ಭಿತ್ತಿ ಪತ್ರಗಳು ಮೇಲೆದ್ದವು".

'ಸ್ತ್ರೀ ಶೋಷಣೆಗೆ ಧಿಕ್ಕಾರ' 'ಎರಡ್ನೇ ಮದುವೆ ಮೋಸದ ಮದುವೆ'

'ಮಹಿಳೆಗೆ ಘನತೆ ಕೊಡಿ; ಗೌರವ ಕೊಡಿ' (ಪುಟ ೯೨).

ಮತ್ತೂ ಮುಂದುವರಿಯುತ್ತಾರೆ. ಅಲ್ಲೇ ಬೀದಿ ನಾಟಕವಾಡುತ್ತಾರೆ. "ಅತ್ತೆ, ಸೊಸೆ, ಗಂಡ, ನಾದಿನಿ, ಹೀಗೆ ವಿಭಿನ್ನ ಪಾತ್ರಗಳು. ಯಾರೂ ನಾಟಕದ ಸಂಭಾಷಣೆಯನ್ನು ಬಾಯಿಪಾಠ ಮಾಡಿರಲಿಲ್ಲ..... ತಮ್ಮ ಮನಸ್ಸಿನ ಮಾತು ಗಳನ್ನೇ ಇವರು ಆಡುತ್ತಿರುವರೆ? ಎಂದು ಓಣಿಯ ಹೆಂಗಸರಿಗೆ ಅನಿಸಿತು" (ಪುಟ ೯೩) ಜೊತೆಗೇನೇ, ಸುತ್ತ ಸೇರಿದವರೊಡನೆ ಕೇಂದ್ರದವರು ನಡೆಯಿಸುವ ಸಂಭಾಷಣೆ ಕೂಡ ಉಂಟು ಮಾಡುವ ಜಾಗೃತಿ ಕಡೆಗಣಿಸುವಂಥದ್ದಲ್ಲ:

"....ಆತ ಮತ್ತೆ ಮದ್ವೆ ಮಾಡ್ಕೊಂಡದ್ದೇ ಆದ್ರೆ ಈ ಓಣಿಲಿರೋ ನೀವು ಸಾಮಾಜಿಕವಾಗಿ ಅವರಿಗೆ ಬಹಿಷ್ಕಾರ ಹಾಕಿ". ಗುಂಪಿನಲ್ಲಿದ್ದ ಗಂಡಸೊಬ್ಬನೆಂದ: "ನಮ್ ಕೈಲಿ ಇನ್ನೇನಾಗದಿದ್ರೂ ಅದನ್ನಾದ್ರೂ ಮಾಡ್ಬಹುದು!" "ಈ ವಿಷ್ಯ ಕೇಳಿ ನಂಗೆ ತಲೆತಗ್ಗಿಸೋ ಹಾಗಾಗಿದೆ ತಾಯಿ. ನಾನು ರಾಜೀವಲೋಚನನಿಗೆ ಒಂದ್ಮಾತು ಹೇಳೋಕೆ ಪ್ರಯತ್ನಪಡ್ತೀನಿ. ಅದು ನನ್ನ ಕರ್ತವ್ಯ" ಎಂದು ಇನ್ನೊಬ್ಬನೆಂದ (ಪುಟ ೯೩).

ರಾಜೀವಲೋಚನನಿಗೆ ಹೆಣ್ಣು ಕೊಡಲಿರುವ ಮನೆಗೂ ಕೇಂದ್ರ ಮುತ್ತಿಗೆ ಹಾಕುತ್ತದೆ: ಮೊದಲ ಹೆಂಡತಿ ಮತ್ತು ಮಕ್ಕಳ ಭಾವಚಿತ್ರವನ್ನು ಕಣ್ಣಿಗೊಡ್ಡುತ್ತದೆ. ಮದುವೆಯ ಹುಡುಗಿ ಕುಸುಮಾ "ಒಂದು ಕ್ಷಣ ದಿಟ್ಟಿಸಿ, 'ಅಪ್ಪ, ನಾನವನನ್ನು ಮದ್ವೆಯಾಗೊಲ್ಲ' ಎಂದು ಹೇಳಿ ಮತ್ತೆ ಒಳಗೆ ಹೋದಳು". ಒಟ್ಟಾರೆಯಾಗಿ ಹೆಂಗಳೆ ಯರು ಸಂಘಟಿತರಾದರೆ ಹೇಗೆಲ್ಲ ಶೋಷಣೆಯನ್ನು ತಡೆಗಟ್ಟಬಹುದು ಎಂಬುದನ್ನೇ ಮತ್ತೆ ಮತ್ತೆ ಅನುಪಮಾ ತಟ್ಟಿಮುಟ್ಟಿ ಹೇಳುವುದಾಗಿದೆ.

ಕಾದಂಬರಿಯಲ್ಲಿ ಸ್ತ್ರೀ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ರಾಮೇಶ್ವರಿ ಹಾಗೂ ಅಲಕಾ ನಡಕೊಳ್ಳುವ ರೀತಿ ಅತ್ಯಂತ ಗಮನಾರ್ಹವಾದ್ದು. ಈ ಎರಡೂ ಪಾತ್ರಗಳು ಪುರುಷ ಪ್ರಾಧಾನ್ಯವನ್ನು ಪ್ರತಿಭಟಿಸುವುದು ವಿಭಿನ್ನ ಮಾರ್ಗಗಳಿಂದ. ರಾಮೇಶ್ವರಿ ಬಹುತೇಕ ಗಂಡಸರಂತೆಯೇ ವರ್ತಿಸುವುದರಲ್ಲಿ.ಶೋಷಕರನ್ನು ಶೋಷಿಸಬೇಕೆಂಬ ಹಟದ

ಕ್ಯವಾದವಿದೆ: "ತಾನು ದುಬಾರಿ ವ್ಯಕ್ತಿ ನಿಜ. ತನ್ನೊಡನೆ ಬಂದವರು ತನಗೆ ಡ್ರಿಂಕ್ಸ್, ಚಿಕನ್ ಪೂರೈಸಬೇಕು ಮತ್ತು ಬೆಲೆಬಾಳುವ ಉಡುಗೊರೆಗಳನ್ನು ಕೊಡಬೇಕು. ಜೀವನ ಇರುವುದೇ ಮಜಾ ಮಾಡಲಿಕ್ಕೆ....ಚಿದಾನಂದ ಐಶ್ವರ್ಯವಂತ. ರೂಪವಂತ. ಅಧಿಕಾರ ಇರುವವನು. ಅವನಿಂದ ತನಗೆ ಉಪಯೋಗವಾಗುತ್ತದೆ. ಬೇಡ ಎನಿಸಿದಾಗ ಅವನನ್ನು ಬಿಟ್ಟು ಬಿಡಲೂ ತಾನು ಸ್ವತಂತ್ರಳು" (ಪುಟ ೧೧೪).

ಚಿದಾನಂದನೊಡನೆ ತುಂಬ ಸಲಿಗೆಯಿಂದ ಇದ್ದೂ, ಆತ ತನ್ನ ಬೆನ್ನನ್ನು ಕಚ್ಚಲು ಬಂದಾಗ ರಾಮೇಶ್ವರಿ, "ಹೀಗೆಲ್ಲಾ ಮಾಡೋ ಹಾಗಿದ್ರೆ ನನ್ನ ಹತ್ತಿರಾನೇ ಬರ್ಬೇಡಿ" ಎಂದು ಕಿಡಿಕಿಡಿಯಾದವಳು. ಆ ಮೂಲಕವಾಗಿ, ಹಿಂಸೆಯ ಮುಖಾಂತರ ನಡೆಯುವ ಲೈಂಗಿಕ ಕ್ರಿಯೆಯನ್ನು ಖಂಡಿಸಿದವಳು. ಪುರುಷರ ಕಣ್ಣಿಲ್ಲದ ಕ್ರಿಯೆಗೆ ರಾಮೇಶ್ವರಿ ಹೀಗೆ ಸಂಕಲೆ ಹಾಕುವುದು-ಸೂಕ್ಷ್ಮವಾಗಿ ಗುರುತಿಸಬೇಕಾದ್ದು. ಆಕೆ ಮದುವೆಯನ್ನು ವಿರೋಧಿಸುವುದೂ ಅದಕ್ಕೇ: "ಮದ್ವೆಯಾದ್ ಕೂಡ್ಲೆ ಗಂಡನಾದೋನು ಅಧಿಕಾರ ಚಲಾಯಿಸೋಕೆ ಶುರು ಮಾಡಿಬಿಡ್ತಾನೆ. ಹೀಗೇ ಯಾವಾಗ್ಲೂ ಫ್ರೀಯಾಗಿರ್ಬೇಕು ಅನ್ನೋದು ನನ್ನಿಷ್ಟ". "ಇದು ಸರೀನಾ?"ಪ್ರಶ್ನೆಗೆ, "....ಇದು ಪುರುಷಪ್ರಧಾನ ಸಮಾಜ ಅಲ್ವೇ? ಈ ಸಮಾಜದ ಬಗ್ಗೆ ನಾನು ತಿರಸ್ಕಾರ ತೋರಿಸೋದು ಈ ರೀತಿ. ಅರ್ಥವಾಯ್ತು?" (ಪುಟ ೧೧೭) ಗುಡುಗುತ್ತಾಳೆ.

ಇದೇ ಚಿದಾನಂದ ತನ್ನ ಪರವಾಗಿ ಸಾಕ್ಷಿ ಹೇಳಲು ರಾಮೇಶ್ವರಿಯನ್ನು "ಇದು ನನ್ನ ಮರ್ಯಾದೆ ಪ್ರಶ್ನೆ" ಎಂದು ದುಂಬಾಲು ಬೀಳುವುದು; "ಈಗ ಇವನ ಮಾನ ಉಳಿದಿರುವುದು ಅಷ್ಟರಲ್ಲೇ ಇದೆ" ಎಂದು ರಾಮೇಶ್ವರಿ ಅಂದುಕೊಳ್ಳುವುದು ಮತ್ತು ಸಾಕ್ಷಿ ಹೇಳುವುದು ಪುರುಷ ಅಹಂಗೆ ಬಿದ್ದ ಮಾರ್ಮಿಕವಾದ ಹೊಡೆತವಾಗಿದೆ.

ಅದರಂತೆ ಚಿದಾನಂದ-ಜಾನಕಿಯರ ವಿವಾಹ ವಿಚ್ಛೇದನದ ಬಳಿಕ ಚಿದಾನಂದ ರಾಮೇಶ್ವರಿಯನ್ನು ವಿವಾಹವಾಗುತ್ತಾನೆಂಬ ಮಾತು ಕೇಳಿ ಬಂದರೂ ಅದರ ಬಗ್ಗೆ ಕಾದಂಬರಿ ಮತ್ತೆ ಏನನ್ನೂ ಹೇಳದಿರುವುದರಿಂದ ನಾವೂ ಆ ಸಾಧ್ಯತೆಯ ಬಗ್ಗೆ ಅನುಮಾನವಷ್ಟೇ ಮಾಡಬಹುದಾಗಿದೆ. ಆದರೆ ಒಂದೊಮ್ಮೆ ರಾಮೇಶ್ವರಿ ವಿವಾಹವಾದಗೂ ಚಿದಾನಂದನ ಎಲ್ಲ ಪ್ರತಿಷ್ಠೆ, ಠಿಕ್ಕತ್ತುಗಳಿಗೂ ಗೋರಿ ತೋಡಿಯಾಳು ಎಂಬುದಂತೂ ನಿಸ್ಸಂದೇಹವಾದ್ದು. ಮತ್ತು ಈಗಾಗಲೇ ಆತ ಮಾನನಷ್ಟ ಹೂಡಿದ್ದಂತೂ ರಾಮೇಶ್ವರಿಗೆ ದೊಡ್ಡ ಧನಾತ್ಮಕ ದಾಖಲೆಯಾಗಿರುವಂಥದ್ದು.

ಹಾಗೆಂದರೂ ರಾಮೇಶ್ವರಿಯನ್ನು ಅನುಪಮಾ ಅವರು ಇಲ್ಲಿ ಆದರ್ಶವಾಗಿಯೇನೂ ತೆಗೆದುಕೊಂಡಂತಿಲ್ಲ. ಆದರೆ ಗಂಡಸರ ಕ್ರೌರ್ಯಕ್ಕೆ ಆಕೆಯ ಧೋರಣೆಯನ್ನು ಮುಖಾಮುಖಿಯಾಗಿಸುವುದೇನೋ ಹೌದು. ಅಂದರೆ, ಹಾಗೊಂದೆಡೆ ಅಂಥ ಶಾಕ್ ಟ್ರೀಟ್‌ಮೆಂಟ್‌ಗೆ ಒತ್ತಾಸೆ ನೀಡುವುದೇನೋ ಹೌದು.

ಆದರೂ ಅನುಪಮಾ ಅವರ ಪ್ರೀತಿ - ಅಲಕಾಳ ಮೇಲೆ: ಅಲಕಾಳ ಒಟ್ಟೂ ನಡೆ-ನುಡಿಯ ಮೇಲೆ. ಎಂದರೆ ಅಲಕಾ ಅನುಪಮಾ ಅವರನ್ನು ಪ್ರತಿನಿಧಿಸುವ ದಾಗಿದೆ ಎಂದುಕೊಳ್ಳಬಹುದು.

ಅಲಕಾ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಸ್ವಂತದ್ದೇ ಆದ ಪರಿಕಲ್ಪನೆ ಉಳ್ಳವಳು. ಅದು ಅವಳ ನಿರೀಕ್ಷಣೆ, ಓದು. ಚಿಂತನೆ ಇವುಗಳಿಂದ ಹುರಿಗೊಂಡದ್ದು. ತಾನು ತನಗಾಗಿ ಯೋಚಿಸುವಂತೆ ಇತರರಿಗಾಗಿಯೂ ಸ್ಪಂದಿಸಬೇಕು ಎಂಬುದು ಅಲಕಾಳ ಅಪೇಕ್ಷೆ. ಕಾಲೇಜು ಓದುತ್ತಿದ್ದ ಶ್ಯಾಮಲಾ ಮದುವೆಗೆ. ಅದೂ ವರದಕ್ಷಿಣೆಯ ಮದುವೆಗೆ ಒಪ್ಪಿಕೊಂಡದ್ದಕ್ಕೆ ಅಲಕಾ ದುಃಖಿಸುತ್ತಾಳೆ: "(ಹೆತ್ತವರು) ಹೇಳಿದ್ದಕ್ಕೆಲ್ಲಾ ನೀನು ಒಪ್ಪಿ ಬಿಟ್ಯಾ? ಈ ವರ್ಷ ಓದಿದ್ರೆ, ನಿನ್ ಬಿ. ಎ. ಮುಗಿಯೋದು...." (ಪುಟ ೧೭) "(ವರದಕ್ಷಿಣೆ) ಕೊಡ್ಬಾರ್ದು ಅಂತ ಕಾನೂನಿದೆ ಅಂತ ಗೊತ್ತಾ ನಿಂಗೆ? ನೀನಿದಕ್ಕೆ ಒಪ್ಕೋಬಾರದಿತ್ತು!" (ಪುಟ ೧೮) ಕೊನೆಗೂ ಶ್ಯಾಮಲಾ ಬಾಳು ಹಾಳಾಗು ತ್ತಿರುವ ಬಗ್ಗೆ ತಿಳಿದು. ಅದನ್ನು ತಡೆಯಲು ಅಲಕಾ ಸ್ತ್ರೀ ಮುಕ್ತಿ ಕೇಂದ್ರದ ನೆರವು ಯಾಚಿಸುತ್ತಾಳೆ: ಶ್ಯಾಮಲಾಗೆ ಬೆಂಕಿ ಹಚ್ಚಿ ಕೊಲ್ಲುವ ಯತ್ನ ನಡೆಯಿಸಿದಾಗ ಸ್ತ್ರೀ ಮುಕ್ತಿ ಕೇಂದ್ರವನ್ನು ಮುಂದು ಮಾಡಿಕೊಂಡು ಹೋರಾಡುತ್ತಾಳೆ. ರಾಜೀವ ಲೋಚನನ ಎರಡನೇ ಮದುವೆ ಮುರಿಯುವಲ್ಲೂ ಅಲಕಾಳ ಶ್ರಮ ಇದ್ದೇ ಇದೆ. ಆಸ್ಪತ್ರೆಯಲ್ಲಿ ಪ್ರಜ್ಞಾಹೀನಳಾಗಿ ಮಲಗಿದ್ದ ತನ್ನ ತಾಯಿಯೆಡೆ ದೃಷ್ಟಿ ಹಾಯಿಸಿದ ಅಲಕಾ ಅವುದು ಕಟ್ಟಿದ್ದು ಹೀಗೆ: "ತಾಯಿಯೇನಾದರೂ ಸತ್ತರೆ ತಾನು ತಂದೆಯನ್ನು ಸುಮ್ಮನೆ ಬಿಡುವುದಿಲ್ಲ-ಎಂದು" (ಪುಟ ೮೫). ತಂದೆ ಹೊಡೆದ ಪೆಟ್ಟಿನಿಂದಾಗಿ ಎರಡನೆಯ ಬಾರಿ ಆಸ್ಪತ್ರೆ ಸೇರಿದ ತನ್ನ ತಾಯಿ ಮರಳಿ ಮನೆಗೆ ಹೋಗಲು ಬಯಸದೇ, "ಯಮುನಾತಾಯಿ ಅವರ ಮನೆಗೆ ಕರ್ಕೊಂಡ್ಹೋಗು" ಎಂದಾಗ "ನಿನ್ನಿಷ್ಟವಮ್ಮ" ಎಂದು ಹಾಗೆ ಮಾಡಲು ಅಲಕಾ ಒಪ್ಪುದುದು ಪುರುಷ ಪ್ರಭುತ್ವಕ್ಕೆ ಕಟುವಾಗಿ ಹೇಸಿಯೇ ಆಗಿದೆ. ಕೋರ್ಟಿನಲ್ಲಿ ತಾಯಿಯ ವಿಚ್ಛೇದನಕ್ಕೆ ಸಂಬಂಧಿಸಿದ 'ಹಿಯರಿಂಗ್' ದಿನವೂ ತಂದೆಯ ಮುಖವಾಡವನ್ನು ಕಿತ್ತೊಗೆಯುವಲ್ಲಿ ಅಲಕಾ ಎಳ್ಳಷ್ಟೂ ದಾಕ್ಷಿಣ್ಯ ತೋರುವುದಿಲ್ಲ.

"ನಂಗಿಷ್ಟ ಬಂದೋನ್ನ ಮಾತ್ರ ನಾನು ಮದ್ವೆ ಆಗ್ತೀನಿ. ಅಪ್ಪ, ಅಮ್ಮ ಹೇಳಿದೋರ್ನಲ್ಲ" (ಪುಟ ೧೮) "ನಂಗೆ ಯಾವುದು ಸರಿ ಅನ್ನುತ್ತೋ ಅದನ್ನು ಮಾತ್ರ ನಾನು ಮಾಡುವವಳು" (ಪುಟ ೧೪೨) ಎಂದ ಅಲಕಾ ಪ್ರೀತಿಸಿದ್ದು, ತಮ್ಮ ಜಾತಿ-ಅಂತಸ್ತಿಗೆ ಸರಿ ಹೋಗದ. ಆದರೆ ತನ್ನ ಅಭಿರುಚಿಗೆ ಸರಿ ಹೋಗುವ ಮನುಷ್ಯನೇ ಆದ ಜಯಪಾಲ ರೆಡ್ಡಿಯೆಂಬಾತನನ್ನು. "ನಾನು ಹ್ಯಾಗಿದೀನಿ ಅವರು ಹಾಗೇ ಸ್ವೀಕರಿಸ ಬೇಕಮ್ಮ. ಅವರಿಗೋಸ್ಕರ ನಾನೇನೂ ಬದಲಾವಣೆ ಮಾಡ್ಕೊಳಲ್ಲ!" (ಪುಟ ೧೦೧)

ಇದು ಅಲಕಾ ವ್ಯಕ್ತಿ ವೈಶಿಷ್ಟ್ಯವನ್ನು ಮನ್ನಿಸುವ ಇನ್ನೊಂದು ಪರಿಯಾಗಿದೆ. ಅದುದರಿಂದಲೇ ಜಯಪಾಲನ ತಾಯಿಗಾಗಿ, ತನಗೊಗ್ಗದ ವೇಷ ಭೂಷಣ ತೊಡುವು ದನ್ನು ಆಕೆ ನಿರಾಕರಿಸುತ್ತಾಳೆ.

ರಿಜಿಸ್ಟ್ರಾರ್‌ರ ಸಮಕ್ಷಮ, ಹತ್ತು ನಿಮಿಷದಲ್ಲೇ ಅಲಕಾ-ಜಯಪಾಲರ ಮದುವೆ ಮುಗಿದು ಹೋಗುತ್ತದೆ. ಆದರೆ ಅಲಕಾ ತಾಳಿ ಕಟ್ಟಿಕೊಳ್ಳುವುದಿಲ್ಲ. "ತಾಳಿ ಕಟ್ಟ್ಕೊಂಡು ಅಂದ್ರೇನೇ ನಾನು ಜಯಪಾಲನ ಸ್ವತ್ತಾದೆ ಅಂತ ಅರ್ಥ ಬರುತ್ತೆ. ನಾನು ಯಾರ ಸ್ವತ್ತೂ ಆಗೊಲ್ಲ. ನಾನು ಜಯಪಾಲ ಇಬ್ರೂ ಸಮಾನರು. ಆದ್ರಿಂದ ತಾಳಿಯಂಥ ಲಾಂಛನ ನಮಗೆ ಅಗತ್ಯ ಅನಿಸೊಲ್ಲ....ನಾವಿಬ್ರೂ ಪ್ರಬುದ್ಧರಾಗಿದೀವಿ. ಪರಸ್ಪರರನ್ನು ಅರ್ಥಮಾಡಿಕೊಂಡಿದೀವಿ. ಹಳೇ ರೀತಿ ಬಿಟ್ಟು ಹೊಸ ರೀತಿ ಬದುಕ್ಬೇಕು ಅಂತ ಆಸೆ ಪಡ್ತಿದೀವಿ" (ಪುಟ ೧೭೮) ಎಂದು ಹೊಸ ಬೆಳಕು ಹಾಯಿಸು ತ್ತಾಳೆ. ಎಂದರೆ ಪುರುಷ ಪ್ರಾಧಾನ್ಯದ ಸೊಕ್ಕು ಅಡಗಿಸುವಲ್ಲಿ ನಮ್ಮ ಹುಡುಗಿಯರು ತೆಗೆದುಕೊಳ್ಳಬೇಕಾದ ಜವಾಬ್ದಾರಿಯ ಚಿಂತನೆ ಇದಾಗಿದೆ. ಹೀಗಾಗುವುದರಿಂದ ಮಾತ್ರ ಮಹಿಳೆಗೆ ಬಿಡುಗಡೆ ಎಂಬುದು ಇಲ್ಲಿನ ಧ್ವನಿಯಾಗಿದೆ.

ಅದರಂತೆ ಜಾನಕಿ, ಪೈಶಾಚಿಕ ವರ್ತನೆಯ ಗಂಡ ಮತ್ತು ಮಗನಿಂದ ದೂರವಾಗಿ ಮಗಳು ಅಲಕಾ ಮತ್ತು ಅಳಿಯ ಜಯಪಾಲರ ಜೊತೆ ನಿಲ್ಲುವುದರ ಹಿಂದೆಯೂ, ಹೊಸ ಆಶಯವೇ ಮಡಿದುಕೊಂಡಿದೆ. ಅಂದರೆ ಹೆತ್ತವರಿಗೆ ಗಂಡು ಮಕ್ಕಳು ಮಾತ್ರ ಆಧಾರವೆಂಬ ಭ್ರಮೆಯನ್ನು ಇದು ಸುಳ್ಳಾಗಿಸುತ್ತದೆ. ಹೀಗೆ ಹೆಣ್ಣುಮಕ್ಕಳ ಬಗ್ಗೆ ಹೊಸದೃಷ್ಟಿ ಮೂಡಬೇಕಾದುದನ್ನೂ ಇದು ಸೂಚಿಸುತ್ತದೆ.

ಆದರೆ ಅದಷ್ಟಕ್ಕೇ ಕಾದಂಬರಿ ಸೀಮಿತಗೊಳ್ಳದೆ, ಇನ್ನೂ ಕೆಲವಾರು ಮಗ್ಗುಲುಗಳನ್ನು ಸ್ಪರ್ಶಿಸುತ್ತದೆ. ಅಲಕಾ ಮತ್ತು ಜಯಪಾಲ ಅವರು ಆರ್ಕಿಟೆಕ್ಚರ್‌ಗೆ ಸಂಬಂಧಿಸಿ ಚರ್ಚಿಸುವುದು ಅದರ ಕುರಿತು ಅಷ್ಟಾಗಿ ತಿಳಿಯದವರಿಗೆ ಪ್ರಾಥಮಿಕ ಪಾಠ ವಾಗುತ್ತದೆ. ಚಂಡೀಗಢ, ಕಾರ್ಬುಸಿಯರ್ ವಾಸ್ತುಶಿಲ್ಪ, ರಾಕ್‌ಗಾರ್ಡನ್- ನಮ್ಮೆದುರೇ ನಿಂತ ಅನುಭವವಾಗುತ್ತದೆ. ಲೇಖಿಕೆ ವಾಸ್ತುಶಿಲ್ಪ ಮತ್ತು ಬದುಕು ಒಂದಕ್ಕೊಂದು ಪೂರಕವೆಂದು ಮನದಟ್ಟು ಮಾಡಿಸುವ ರೀತಿ ಕಲಾತ್ಮಕವಾಗಿ ಬಂದಿದೆ. ಲೇಡಿ ದಬೋನಾ ಬರೆದ The Second Sex, ಆಕೆಯ ಪ್ರಿಯಕರ ಸಾರ್ತ್ರನ ಅಸ್ತಿತ್ವವಾದ ಇದರ ಕುರಿತು ಇಲ್ಲಿ ಸಂವಾದವಿದೆ. ಅನುಪಮಾ ಅವರು ಹೀಗೆ ತನ್ನ ಅಪಾರವಾದ ಓದು ಹಾಗೂ ಪ್ರವಾಸದ ಅನುಭವವನ್ನು ಕಾದಂಬರಿಯಲ್ಲಿ ಅಳವಡಿಸಿಕೊಳ್ಳುವ ಮೂಲಕವಾಗಿ ಲೇಖಿಕೆಯರಿಗೆ ಸಂಬಂಧಿಸಿ ಆರೋಪಿಸಲಾಗುವ ಅಂಥ ಮಿತಿಗಳಿಗೂ ಉತ್ತರವಾಗಿ ನಿಲ್ಲುತ್ತಾರೆ.

ಜೊತೆಗೆ ರಾಜಕಾರಣಿಗಳ ದಗಲುಬಾಜಿತನಗಳನ್ನೂ ಅನುಪಮಾ ಈ ಕಾದಂಬರಿಯಲ್ಲಿ ಚಿತ್ರಿಸುತ್ತಾರೆ. ಚಿದಾನಂದ, ರಾಮೇಶ್ವರಿ, ಕುರಿಮಂತ್ರಾ ಇವರದ್ದೆಲ್ಲ ಹಡಬೆ ಬುದ್ಧಿಯೇ ಎಂಬುದು ಕಾದಂಬರಿಯ ವ್ಯಥೆ ಆಗಿದೆ. ತಮಗಾಗದವರನ್ನು ಸಫಾಯಿ ಮಾಡಲು ಈ ಕುತಂತ್ರಿಗಳು ಮರಿ ಗೂಂಡಾ ಶಂಭು ಅಂಥವರನ್ನು ಬಗಲೊಳಗೆ ಇಟ್ಟುಕೊಂಡಿರುವುದನ್ನು ಅದು ವಿಷಾದಪೂರ್ವಕ ಅಭಿವ್ಯಂಜಿಸುತ್ತದೆ. "ನಮ್ಮ ಪೋಲೀಸರು ಲಾಠಿಗೀಟಿ ಹಿಡ್ಕೊಂಡು ಬರೋ ಹೊತ್ಗೆ ಮದ್ವೇನೂ ಮುಗ್ದು ಹೋಗಿರುತಿತ್ತು" (ಪುಟ ೯೪) ಎಂದು ಕಾದಂಬರಿ, ಪೋಲೀಸು ಮತ್ತು ನಿಧಾನವನ್ನು ಸಮೀಕರಿಸುವಲ್ಲಿನ ವ್ಯಂಗ್ಯ ಹರಿತವಾಗಿದೆ. "ನಮ್ಮ ಲೀಡಿಂಗ್ ಫಿಲ್ಮ್ ಸ್ಟಾರ್‌ಗಳೆಲ್ಲ ಎರಡೆರಡು ಮದುವೆ ಮಾಡ್ಕೊಂಡಿಲ್ವೆ?" (ಪುಟ ೧೧೭) ಎಂಬಲ್ಲಿ ನಮ್ಮ ಸ್ಟಾರ್‌ಗಳ ಅನೈತಿಕತೆಯ ಬಗ್ಗೆ ಹೇಸಿಗೆ, ಮತ್ತು ಹೆಣ್ಣೇ ಹೆಣ್ಣನ್ನು ಶೋಷಿಸುವ ಬಗೆಗೆ ವ್ಯಸನ-ಎಲ್ಲಾ ಹೆಪ್ಪುಗಟ್ಟಿದೆ.

ಸದ್ಯದ ಮಹಿಳಾ ಸಮಾಜಗಳ ಸಂಕುಚಿತ ದೃಷ್ಟಿಯನ್ನು, "ಪರಸ್ಪರ ಒಡವೆ, ಸೀರೆ ಬಗ್ಗೆ ಚರ್ಚೆ, ಅವರಿವರ ಮನೆ ಸುದ್ದಿ ಮಾತಾಡೋದು, ಇವಕ್ಕೊಂದು ಜಾಗ. ಇನ್ನೂ ಹೆಚ್ಚು ಅಂದ್ರೆ ಹಾಡು ಹೇಳ್ಕೊಡೋದು ಅಥವಾ ರುಚಿ ರುಚಿ ತಿಂಡಿ ಮಾಡೋಕೆ ಹೇಳ್ಕೊಡೋದು. ಹೂವಿನ ಜೋಡಣೆ, ರಂಗೋಲಿ ಹಾಕೋದು ಇತ್ಯಾದಿ, ಇತ್ಯಾದಿ", ಮೂದಲಿಸುತ್ತ "ಅವರು ಒಂದು ವ್ಯಕ್ತಿತ್ವ ಬೆಳೆಸ್ಕೋಬೇಡ್ವೆ? ಆತ್ಮವಿಶ್ವಾಸ ಪಡೀಬೇಡ್ವೆ? ಓದಬೇಕು. ಚರ್ಚೆ ಮಾಡಬೇಕು, ಬೌದ್ಧಿಕವಾಗಿ ಬೆಳೀಬೇಕು. ಆರ್ಥಿಕವಾಗಿ ಮನೆಗೆ ನೆರವಾಗುವಂಥ ದಾರಿಗಳನ್ನು ಹುಡ್ಕೋಬೇಕು. ಆಗ ತಾನೇ ಗಂಡಸ್ರು ಅವರಿಗೆ ಗೌರವ ಕೊಡೋದು? ಮಹಿಳಾ ಸಮಾಜಗಳು ಈ ಕೆಲ್ಸ ಮಾಡ್ಬೇಕಮ್ಮ" (ಪುಟ ೪೭) ಎಂದು ಅಲಕಾ ಮೂಲಕ ಅನುಪಮಾ ಅವರು ಕೊಡುವ ಸಂದೇಶದಲ್ಲಿ-ಇಡೀ ಮಹಿಳಾ ಸಮಾಜವನ್ನೇ ಬಡಿದೆಬ್ಬಿಸುವ ತಾತ್ವಿಕ ದೃಷ್ಟಿಕೋನವಿದೆ. ಮತ್ತು ಕೇವಲ ಪುರುಷದ್ವೇಷದಲ್ಲಿ ಹುರುಳಿಲ್ಲ ಎಂಬ ಜ್ಞಾನವಿದೆ.

ಅದರಂತೆ ಕಾದಂಬರಿಯಲ್ಲಿನ ಆಕ್ಷೇಪಾರ್ಹವಾದ ಒಂದೆರಡು ಸಂದರ್ಭಗಳನ್ನೂ ಎತ್ತಿ ತೋರಿಸಬಹುದಾಗಿದೆ. ಕಾಲೇಜು ಓದುತ್ತಿದ್ದ ಶ್ಯಾಮಲೆ, ತನ್ನ ವಿವಾಹದ ಕರೆಯೋಲೆ ಕೊಟ್ಟು ಮರಳಿದ ಮೇಲೆ "ಅಲಕಾ ಕಳವಳದಿಂದಲೇ ಒಳಗೆ ಬಂದಳು". "ಶ್ಯಾಮಲಾ ಗತಿ ಏನಾಗುತ್ತೋ? ಅನಿಸ್ತಿದೆ. ಅವಳು ಈ ಮದುವೇನ ತಿರಸ್ಕರಿಸಬೇಕಾಗಿತ್ತು. ...." (ಪುಟ ೨೦) ಎಂದು ಗಾಬರಿ, ಭಯಕ್ಕೆ ಒಳಗಾಗುತ್ತಾಳೆ. ಆದರೆ ಇಷ್ಟೆಲ್ಲ ಪರಿತಪಿಸಲು ಅಲಕಾಳಿಗೆ ಅಂಥ ಕಾರಣವೇನೂ ಸಿಕ್ಕಿಲ್ಲ. ಮತ್ತು ಅಲಕಾ ಭವಿಷ್ಯ ಹೇಳುವ ಶಕ್ತಿ ಪಡೆದವಳೂ ಅಲ್ಲ. ಆದರೂ ಕೊನೆಗೆ ಅಲಕಾ ಎಣಿಸಿದಂತೆಯೇ ಶ್ಯಾಮಲಾ ದುರಂತಕ್ಕೆ ಈಡಾಗುತ್ತಾಳೆ. ಅಂದರೆ ಅನುಪಮಾ ತನ್ನ ನಿರ್ಧಾರಗಳನ್ನು ಪಾತ್ರಗಳ ಮೇಲೆ ಹೇರುವುದರಿಂದ ಇಂಥ ದೋಷ ನುಸುಳುತ್ತದೆ.

ಚಿದಾನಂದ-ಜಾನಕಿಯರ ಮಗ 'ಅಜಯ'ನ ಬಗ್ಗೂ ಕಾದಂಬರಿ ಇರಬೇಕಾದ್ದಕ್ಕಿಂತ ಹೆಚ್ಚು ನಿಷ್ಠುರವಾಗಿದೆಯೆಂದೇ ನನಗನ್ನಿಸುತ್ತದೆ. ತಂದೆಯಿಂದ ಸಾಕಷ್ಟು ಹೊಡೆತ-ಬಡಿತಗಳನ್ನು ಕಂಡು, ಸಾವು ಕಾದುಕೊಂಡಂತಿದ್ದಾಗಲೂ ಅಂಥ ತಾಯಿಯ ಬಗ್ಗೆ ಚೂರೂ ಮರುಗದ, ತಂದೆಯ ಬಗ್ಗೆ ಇಂಚೂ ಸಿಡುಕದ ಮಗನಾಗಿ ಅಜಯ ರೂಪುಗೊಂಡಿದ್ದಾನೆ. ಚಿದಾನಂದ ಮಹಾದುಷ್ಟನಾಗಿರುವುದರಿಂದ ಅಜಯ ಬೇರೆಯಾಗಿರಲು ಸಾಧ್ಯವಿಲ್ಲವೆಂಬ ಧಾಟಿಯಲ್ಲಿ ಕಾದಂಬರಿ ಇದ್ದಂತಿದೆ. ಹಾಗಾದರೆ ಇದು ಅಪಾಯಕಾರೀ ಧೋರಣೆಯಾಗುತ್ತದೆ. ಏನಾದರೂ, ತಾಯಿ ಚಿತ್ರಹಿಂಸೆಗೊಳಗಾಗುತ್ತಿದ್ದಾಗಲೆಲ್ಲ ಹೊಟ್ಟೆಯ ಮಗನಾದವನು ಸೆಕೆಂಡೂ ಸ್ಪಂದಿಸುವುದಿಲ್ಲ; ಅಪ್ಪನನ್ನು ಪ್ರತಿಭಟಿಸುವುದಿಲ್ಲ ಎನ್ನುವುದು ನಂಬಲು ದುಸ್ಸಾಧ್ಯವಾಗುತ್ತದೆ. ಈ ಪಾತ್ರವೂ ಅನುಪಮಾರ ಸೃಷ್ಟಿ ಮಾತ್ರ ಆಗಿ ಅಪರಾಡಿಸಿದಂತೆ ಆಡುತ್ತದೆ.

ಮತ್ತೊಂದು ಕಡೆ ತಿಳಿದೋ, ತಿಳಿಯದೆಯೋ ಅನುಪಮಾ ಅವರು, ಜಯಪಾಲನ ಆಲೋಚನಾ ಧಾಟಿಯಲ್ಲಿ ಸ್ತ್ರೀಯನ್ನು ಪುನಃ ಪುರುಷನ ಸ್ವತ್ತಾಗಿಸಿಬಿಡುತ್ತಾರೆ. ಅಂದರೆ ಅಲಕಾ ಮೆಚ್ಚುವ ಸ್ತ್ರೀಸ್ವಾತಂತ್ರ್ಯದ ಪರವಾಗಿರುವ ಜಯಪಾಲ ಹೀಗೆ ತರ್ಕಿಸುವುದು ಅಸಮಂಜಸವಾಗಿದೆ; ಅಪ್ರಬುದ್ಧವಾಗಿದೆ: "....ಈ ಅಲಂಕಾರ ತನ್ನ ತಾಯಿಗೆ ಇಷ್ಟವಾಗಬಹುದೇ ಎಂದು ಯೋಚಿಸಿದ. ಆದರೆ ಮರುಕ್ಷಣ ಅನಿಸಿತು. ತಾನು ಬೇರೆಲ್ಲ ಗಂಡಸರಂತೆ ಯೋಚನೆ ಮಾಡುತ್ತಿದ್ದೇನೆ. ಇದು ಸರಿಯಲ್ಲ. ಅಲಕಾಳ ಅಲಂಕಾರ ಇಷ್ಟವಾಗಬೇಕಾದ್ದು ಮುಖ್ಯವಾಗಿ ತನಗೆ" (ಪುಟ ೧೦೬). ಇದು ಕೂಡ ಲೇಖಿಕೆಯ ಹೇರಿಕೆಯೋ, ಮಿತಿಯೋ. ಗಂಡನಿಗೆ ಇಷ್ಟವಾದರೆ ಸಾಕೆಂಬ ರೀತಿಯ ದಾಸ್ಯ ಮನೋಭಾವವೇ-ಇಲ್ಲಿನದು. ಅಲಕಾಳ ಅಲಂಕಾರ ಇಷ್ಟವಾಗಬೇಕಾದ್ದು ಮುಖ್ಯವಾಗಿ ಅವಳಿಗೇ ಅಲ್ಲವೇ? ಅಂಥ ಮನಃಸ್ಥಿತಿಯಿಂದಲೇ ಪ್ರತಿಯೊಬ್ಬಳ ಸ್ವಂತಿಕೆಗೆ ಬೆಲೆ ಹೆಚ್ಚುತ್ತದೆ; ಕಾದಂಬರಿಯ ಬಂಧ ಬಿಗಿಗೊಳ್ಳುತ್ತದೆ.

ಅಲ್ಲಲ್ಲಿ ಹೀಗೆ ಅಡ್ಡಮಾತು ಆಡಬಹುದಾದರೂ ಒಟ್ಟಿನಲ್ಲಿ ಕಾದಂಬರಿ ಜನಪರವಾಗಿ ತೆರೆದುಕೊಂಡು ನಮಗೆ ಇಷ್ಟವಾಗುತ್ತದೆ. ಹಾಗಿದ್ದರೂ ಜನಪ್ರಿಯ ಕಾದಂಬರಿಯ ಸಿದ್ಧ ಶೈಲಿ, ತಂತ್ರವನ್ನೇ ಇಲ್ಲಿ ಲೇಖಿಕೆ ನೆಚ್ಚಿಕೊಂಡಿದ್ದರಿಂದಾಗಿ ಇಡಿಯಾಗಿ ಕೃತಿಗೆ ಕಲಾತ್ಮಕ ಸ್ವರೂಪ ದಕ್ಕದೇ ಹೋಗುತ್ತದೆ. ಇವರದೇ ಶ್ರೇಷ್ಠ ಕಾದಂಬರಿ 'ಘೋಷ'ದೊಟ್ಟಿಗೆ ಇದನ್ನಿಟ್ಟಾಗ ಇದರ ಇತಿ-ಮಿತಿ ಇನ್ನಷ್ಟು ನಿಚ್ಚಳವಾಗುತ್ತದೆ.

೩ ಅನುಪಮಾ ಅವರ ಸಣ್ಣ ಕಥೆಗಳ ವಾಸ್ತವಲೋಕ

-ಡಾ। ಬಿ. ಎನ್. ಸುಮಿತ್ರಾಬಾಯಿ

ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ವಿಪುಲವಾಗಿ ಕೃತಿರಚಿಸಿ ತಮ್ಮ ಪ್ರತಿಭೆಯನ್ನು ಹಂಚಿಕೊಟ್ಟಿರುವ ಡಾ। ಅನುಪಮಾ ನಿರಂಜನರನ್ನು ಜನ ಸಾಮಾನ್ಯವಾಗಿ ಗುರುತಿಸುವುದು ಅವರ ಕಾದಂಬರಿಗಳಿಗಾಗಿ. ವಿಮರ್ಶಕರೂ ಈ ವಾಡಿಕೆಯಿಟ್ಟಿದ್ದಾರೆ. ಆದರೆ ಕಾದಂಬರಿಗಿಂತ ವಿಭಿನ್ನ ಕುಶಲತೆಯನ್ನು ಬಯಸುವ ಸಣ್ಣಕಥೆಯ ಪ್ರಕಾರಕ್ಕೆ ಈವರೆಗೆ ಅನುಪಮಾ ಒಂಬತ್ತು ಕಥಾಸಂಕಲನಗಳನ್ನು ನೀಡಿದ್ದಾರೆ. ಇದೇನೂ ಸಣ್ಣ ಸಾಧನೆಯಲ್ಲ. ಆದರೂ ಈ ಕಥೆಗಳ ವಿಮರ್ಶಾತ್ಮಕ ಅಧ್ಯಯನ ನಡೆದಿಲ್ಲ.

೧೯೫೩ರಿಂದ ೧೯೮೩ರ ವರೆಗಿನ ಮೂರು ದಶಕದ ಅವಧಿಯಲ್ಲಿ 'ಕಣ್ಮಣಿ', 'ರೂಪಾರಿಯ ಲಕ್ಷ್ಮಿ', 'ನೀರಿಗೆ ನೈದಿಲೆ ಶೃಂಗಾರ', 'ಏಳು ಸುತ್ತಿನ ಮಲ್ಲಿಗೆ', 'ಗಿರಿಧಾಮ', 'ಹೃದಯ ಸಮುದ್ರ', 'ಒಡಲು', 'ಪುಷ್ಪಕ' ಹಾಗೂ ಇತ್ತೀಚೆಗಿನ 'ಒಂದು ಗಿಣಿಯ ಕಥೆ'ಗಳನ್ನು ಅನುಪಮಾ ರಚಿಸಿದ್ದಾರೆ. ಈ ಮೂರು ದಶಕಗಳ ಅವಧಿಯಲ್ಲೇ ಕನ್ನಡ ಸಾಹಿತ್ಯ ಪ್ರಗತಿಶೀಲ, ನವ್ಯ ಹಾಗೂ ಬಂಡಾಯ ಚಳುವಳಿಗಳನ್ನು ಕಂಡಿದೆ. ಈ ಚಳುವಳಿಗಳ ಮಗ್ಗುಲಲ್ಲೇ ಅನುಪಮಾರ ಕಥಾಸಾಹಿತ್ಯ ಸಾಗಿದೆ ಎಂಬುದು ಚಾರಿತ್ರಿಕ ದೃಷ್ಟಿಯಿಂದ ಹಾಗೂ ಬರಹಗಾರರ ವೈಯಕ್ತಿಕ ಸಾಧನೆಯ ದೃಷ್ಟಿಯಿಂದಲೂ ಕುತೂಹಲಕರವಾದ ಸಂಗತಿಯಾಗಿದೆ.

ಮಹಿಳಾ ಸಾಹಿತ್ಯದ ಒಟ್ಟು ಮೌಲ್ಯದ ಬಗ್ಗೆ ಹೇಳುವಾಗಲೆಲ್ಲ ಸಾಮಾನ್ಯವಾಗಿ ವಾಣಿ, ತ್ರಿವೇಣಿ, ಗೀತಾ ಕುಲಕರ್ಣಿ, ಆರ್ಯಾಂಬ ಪಟ್ಟಾಭಿ, ಎಚ್. ಎಸ್. ಪಾರ್ವತಿ, ಉಷಾ ನವರತ್ನರಾಂ ಮುಂತಾದವರ ಜೊತೆಗೆ ಅನುಪಮಾ ನಿರಂಜನರನ್ನೂ ಸೇರಿಸಿ, ಇವರೆಲ್ಲರೂ 'ಜಾಗೃತ ಸ್ತ್ರೀ ಪ್ರತೀಕಗಳನ್ನು ಸೃಷ್ಟಿಸುತ್ತಾರೆ.' ಇವರಲ್ಲಿ 'ಪ್ರಗತಿಶೀಲ ಮನೋಭಾವ, ವೈಚಾರಿಕ ತುಮುಲಗಳ ವಿಶ್ಲೇಷಣೆಯಿದೆ' ಎಂದು ಹೇಳುವುದಿದೆ.[1] ಸ್ತ್ರೀಯಲ್ಲಿ ಸ್ವಾಭಿಮಾನ, ಸ್ವಂತಿಕೆ, ಸಂವೇದನೆಗಳನ್ನು ಗುರುತಿಸಿ, ಆಕೆಯ ದೃಷ್ಟಿಯಿಂದ ಬದುಕನ್ನು ವಿವೇಚಿಸಬಲ್ಲರು ಎಂಬ ದೃಷ್ಟಿಯಿಂದ ಈ ಮೇಲಿನ ಅಭಿಪ್ರಾಯ ನಿಜವೆನ್ನಬಹುದು. ಆದರೆ ಪ್ರಗತಿಶೀಲ ಮನೋಭಾವ ಬಹು ದಿಟ್ಟವಾಗಿ ಖಚಿತವಾಗಿ ರೂಢಿಸಿರುವುದು ಅನುಪಮಾರ ಕಥೆಗಳಲ್ಲಿ ಮಾತ್ರ. ಈ ಕಾರಣಕ್ಕಾಗಿ, ಅವರ ಕಥೆಗಳನ್ನು ಪ್ರತ್ಯೇಕವಾಗಿ ಪರಿಗಣಿಸುವುದು ಅಗತ್ಯವೆಂದು ತೋರುತ್ತದೆ. ಇದಲ್ಲದೆ ಅನುಪಮಾ ಅವರ ಕಥಾಶೈಲಿ ನವೋದಯದ ಶೈಲಿಯನ್ನು ದಾಟಿ ಮುಂದೆ ಹೋಗಲೇ ಇಲ್ಲ ಎಂಬ ಆಕ್ಷೇಪಣೆಯಿದೆ.[2] ನವ್ಯ ಚಳುವಳಿಗೆ ಭಾಷೆ, ತಂತ್ರಗಳ ದೃಷ್ಟಿಯಿಂದ ರಾಜಲಕ್ಷ್ಮಿ ಎನ್. ರಾವ್ ಮತ್ತು ವೀಣಾ ಶಾಂತೇಶ್ವರರ ಹೊರತು

ಬೇರಾವ ಲೇಖಕಿಯೂ ಸ್ಪಂದಿಸಿಲ್ಲವೆಂಬ ರೂಢಿಗತ ಅಭಿಪ್ರಾಯವೂ ಇದೆ.[3] ಮಹಿಳೆಯರ ಬರಹಗಳಲ್ಲಿ 'ವಿಚಾರಗಳ ಪ್ರತಿಪಾದನೆ ಅಭಿವ್ಯಕ್ತಿಯಲ್ಲಿ ಹಾಸು ಹೊಕ್ಕಾಗಿ ಬೆರೆಯದೆ ಬೇರೆಯಾಗಿಯೇ ಉಳಿದು ಬಿಟ್ಟು ಒಂದು ಬಗೆಯ ನೀತಿ ಬೋಧನೆಯ ಸ್ವರೂಪ ತಳೆದಿದೆ'[4]; ಬಾಲ್ಯವಿವಾಹ, ವಿಧವಾ ಸಮಸ್ಯೆ, ವೇಶ್ಯಾ ಸಮಸ್ಯೆ, ವರದಕ್ಷಿಣೆ, ಜಾತಿ ಸಮಸ್ಯೆಗಳಷ್ಟಕ್ಕೇ ಮಹಿಳೆಯರ ಬರಹಗಳು ಸೀಮಿತವಾಗಿವೆ; ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಬೌದ್ಧಿಕ ಸಮಸ್ಯೆಗಳ ಕಡೆ ಅವರ ಗಮನ ಹರಿದಿಲ್ಲ[5] ಮುಂತಾಗಿ ಆಕ್ಷೇಪಣೆಗಳಿವೆ. ಈ ವಿವಿಧ ರೀತಿಯ ಅಭಿಪ್ರಾಯ, ಆಕ್ಷೇಪಗಳ ಹಿನ್ನೆಲೆಯಲ್ಲಿ ಅನುಪಮಾ ಅವರ ಕಥೆಗಳನ್ನು ಪರೀಕ್ಷಿಸಬೇಕಾಗಿದೆ. ಯಾಕೆಂದರೆ ಬರಹವನ್ನು ಸ್ವಂತ ವ್ಯಕ್ತಿತ್ವದ ವಿಕಾಸಕ್ಕೆ ಹೇಗೋ ಹಾಗೇ ಜನಜಾಗೃತಿಗೂ ಅತ್ಯಗತ್ಯ ಮಾಧ್ಯಮವೆಂದು ಗಂಭೀರವಾಗಿ ಸ್ವೀಕರಿಸಿದವರು ಅವರು.

ಪ್ರಗತಿಶೀಲ ಚಳುವಳಿ ಉತ್ಕರ್ಷದಲ್ಲಿದ್ದಾಗ ಅನುಪಮಾ ಕಥಾಕ್ಷೇತ್ರಕ್ಕೆ ಬಂದರು. ಬಹು ಪ್ರಮುಖ ಪ್ರಗತಿಶೀಲ ಬರಹಗಾರರಾದ ನಿರಂಜನ ಅವರ ವಿಚಾರ ಪ್ರಭಾವಕ್ಕೆ ಬಹು ನಿಕಟವಾಗಿ ಒಳಗಾದರು[6] ಎಂಬ ಅಂಶಗಳನ್ನು ಗಮನಿಸಬೇಕು. ಈ ಸಂಯೋಗದಿಂದಾಗಿ ಪ್ರಾರಂಭದಿಂದ ಇವತ್ತಿನ ವರೆಗೆ ಅವರ ರಚನೆಗಳಲ್ಲಿನ ಸಾಹಿತ್ಯ ಧೋರಣೆ ಮೂಲಭೂತವಾಗಿ ಪ್ರಗತಿಶೀಲ ಧೋರಣೆಯೇ ಆಗಿ ಉಳಿದಿದೆ. ಸಾಹಿತ್ಯವು ಮಾನವೀಯ ಭಾವನೆಯಿಂದ ತುಂಬಿರಬೇಕು; ಜೀವನದಲ್ಲಿ ಶ್ರದ್ಧೆಯನ್ನೂ ಉಜ್ವಲ ಭವಿಷ್ಯತ್ತಿನಲ್ಲಿ ಭರವಸೆಯನ್ನೂ ಹೊಂದಿರಬೇಕು; ಜಾತಿ, ಕುಲ, ಜನಾಂಗ, ಮತ ಧರ್ಮಗಳು ಒಂದು ಮತ್ತೊಂದರ ಮೇಲೆ ಅಧಿಕಾರ ಚಲಾಯಿಸುವುದು, ಧ್ಯೇಯ ರಹಿತ ಜೀವನ, ಮೂಢನಂಬಿಕೆ, ನಿರಾಸೆ, ವಿಧಿವಾದ-ಇವೆಲ್ಲ ಪ್ರಗತಿಗೆ ವಿರೋಧಿಗಳು; ಸಾಹಿತ್ಯದಲ್ಲಿ ಸೌಂದರ್ಯ ಕಲಾತ್ಮಕತೆಯಿರಬೇಕು; ಕಾಮ ಪ್ರಚೋದನೆ ಅಶ್ಲೀಲತೆಗಳಿರಬಾರದು; ಸಾಹಿತಿಗಳು ಜನಸೇವೆಯಲ್ಲೂ ಕ್ರಿಯಾಶೀಲರಾಗಿದ್ದು, ಸುಖಮಯ ಸಮೃದ್ಧ ಜೀವನದ ಕಡೆಗೆ ಮುನ್ನಡೆಯುವಂತೆ ಜನತೆಯನ್ನು ತಮ್ಮ ಸೃಷ್ಟ್ಯಾತ್ಮಕ ಬರಹಗಳ ಮೂಲಕ ಪ್ರಚೋದಿಸಬೇಕು ಎಂಬುದು ೧೯೩೬ರಲ್ಲಿ ಪ್ರಗತಿಶೀಲರು ಮಾಡಿದ್ದ ಘೋಷಣೆ.[7] ಇದೇ ಸುಮಾರಿನಲ್ಲಿ ಅನುಪಮಾರ ಮೊದಲ ಕಥಾಸಂಕಲನ ಪ್ರಕಟವಾಯಿತು. ಈ ಸಂಕಲನದ ಪ್ರಕಟಣೆ ನಿರಂಜನರ ಮೂಲಕವೇ ಆಯಿತು.[8] ಹಾಗೂ ಅಲ್ಲಿನ ಕಥೆಗಳಲ್ಲಿ ಮೇಲಿನ ಸಾಹಿತ್ಯ ಧೋರಣೆಯು ಎಳೆಗಳಿವೆ. 'ಕಣ್ಮಣಿ'ಗೆ ಮುನ್ನುಡಿ ಬರೆದ ಚದುರಂಗರ ಈ ನುಡಿಗಳು ಗಮನಾರ್ಹವಾಗಿವೆ:

"ಇವರು ಗೌರಮ್ಮ, ಶ್ಯಾಮಲೆ, ವಾಣಿ ಇವರ ಪರಂಪರೆಯನ್ನು ಕಾಯ್ದುಕೊಂಡಿರುವುದಲ್ಲದೆ ಬಾಳನ್ನು ನೋಡುವ ನೋಟದಲ್ಲಿ ಅವರೆಲ್ಲರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ." "ಹಿಂದಿನ ಲೇಖಕಿಯರು ಈ ಪುರುಷ ಸಮಾಜದಲ್ಲಿ

ಹೆಣ್ಣಿಗೆ ನಡೆಯುವ ಅಪಚಾರ, ಅನ್ಯಾಯಗಳನ್ನು ಚಿತ್ರಿಸಿದರೂ ಹೆಣ್ಣಿನ ದುರಂತದ ನೈಜಕಾರಣವನ್ನು ಅರಿಯಲಾರದೆ ಹೋದರು....ಅನುಪಮಾದೇವಿ ಈ ಸಮಸ್ಯೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ನಮ್ಮ ಸಮಾಜದ ಆರ್ಥಿಕ ವಿಷಮತೆಯ ಗರ್ಭದಲ್ಲಿ ಹುದುಗಿಹೋದ ಇದರ ಎಳೆಗಳನ್ನು ಸೂಕ್ಷ್ಮವಾಗಿ ಶೋಧಿಸಿ ನೋಡಿದ್ದಾರೆ. ಇದು ಪಾಳೆಯಗಾರ ಪದ್ಧತಿಯ ಶೃಂಖಲೆಗಳಲ್ಲಿ ಸಿಕ್ಕು ತೊಳಲುತ್ತಿರುವ ಸಮಾಜ; ಈ ಪದ್ಧತಿಯನ್ನು ನಾಶಪಡಿಸಿದ ಹೊರತು ಹೆಣ್ಣಿಗೆ ಮುಕ್ತಿಯಿಲ್ಲ; ಅವಳ ಬಾಳು ಸಹಜವಾಗಿ ಅರಳಿ ತನ್ನ ಪರಿಮಳವನ್ನು ನಾಲ್ಕೂ ಕಡೆಗೆ ನವುರಾಗಿ ಬೀರುವುದಿಲ್ಲ- ಎಂದು ಮನಗಂಡಿದ್ದಾರೆ."[9]

ಚದುರಂಗರು ಗುರುತಿಸಿರುವಂತೆ ಅನುಪಮಾ ಅವರ ಮುಂದಿನ ಎಲ್ಲ ಕಥಾ ಸಂಕಲನಗಳಲ್ಲೂ ಪ್ರಸಕ್ತ ವ್ಯವಸ್ಥೆಯ ವಿಷಮ ಸಂಗತಿಗಳು ಹೇಗೆ ಬಡವರು, ದಲಿತರು, ಸ್ತ್ರೀಯರನ್ನು ನಿರಂತರವಾಗಿ ಶೋಷಿಸುತ್ತಾ ಬರುತ್ತಿವೆ ಎಂಬುದರ ಪರಿಶೀಲನೆಯಿರುವುದನ್ನು ಕಾಣುತ್ತೇವೆ. ಈ ದೃಢವಾದ ವೈಚಾರಿಕ ನೆಲೆಗಟ್ಟಿನ ದೃಷ್ಟಿಯಿಂದಾಗಿ, ಅನುಪಮಾ ಮೂಲಭೂತವಾಗಿ ಪ್ರಗತಿಶೀಲ ಲೇಖಕಿಯಾಗಿದ್ದಾರೆ. ಕೆಲವೆಡೆಗಳಲ್ಲಿ ಈ ವಿಚಾರದ ಪೂರ್ಣ ಉಪಯೋಗವಾಗದೆ, ಅವರ ಇತರ ಸಮಕಾಲೀನ ಲೇಖಕಿಯರ ಹಾಗೆ ರಮ್ಯ, ಭಾವುಕ ಬದುಕುಗಳನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸುತ್ತಾರಾದರೂ[10] ಕಥಾಲೋಕಕ್ಕೆ ಬಂದಾಗ ಬಹುಮಟ್ಟಿಗೆ ಮೇಲಿನ ವಿಚಾರ ಧಾರೆಗೇ ನಿಷ್ಠರಾಗುತ್ತಾರೆ. ವಿಚಾರದ ಗಟ್ಟಿತನವಷ್ಟೇ ಅಲ್ಲ, ಜಗತ್ತಿನ ಕಥಾಸಾಹಿತ್ಯದಲ್ಲಿ ವಿಶೇಷ ಸಾಧನೆ ಮಾಡಿದವರ ಮಹತ್ಕೃತಿಗಳ ಆಳವಾದ ಅಭ್ಯಾಸದಿಂದ ತಮ್ಮ ಕಥೆಗಳ ಸ್ವರೂಪ, ತಂತ್ರ, ಶೈಲಿಯನ್ನು ರೂಪಿಸಿಕೊಂಡುದಾಗಿ ಅವರು ಹೇಳುತ್ತಾರೆ.[1] ವೃತ್ತಿಯಿಂದ ವೈದ್ಯರಾಗಿದ್ದು, ಸಹಜವಾಗಿ ವಿವಿಧ ವರ್ಗ, ಜಾತಿ, ಸ್ವಭಾವಗಳ ಸ್ತ್ರೀ-ಪುರುಷರ ಬದುಕನ್ನು ನಿಕಟವಾಗಿ ಪರಿಚಯಿಸಿಕೊಳ್ಳುವ ಅವಕಾಶವೂ ಅವರಿಗೆ ದೊರೆತಿದೆ. ಹೀಗೆ ಗಳಿಸಿದ ವಿಸ್ತಾರವಾದ ಜೀವನದ ಅನುಭವ ಅವರ ಕಥೆಗಳಿಗೆ ವಸ್ತುವೊದಗಿಸಿದೆ. ಹೀಗೆ ಸಾಮಾಜಿಕವಾಗಿ ಜನಸೇವೆಯ ವೃತ್ತಿಯೊಂದರಲ್ಲಿ ತೊಡಗಿ ಕೊಂಡು, ಕ್ರಿಯಾತ್ಮಕವಾಗಿ ಜನರ ಕಷ್ಟನಷ್ಟಗಳೊಂದಿಗೆ ಪಾಲುಗೊಳ್ಳುತ್ತಾ ಅದರಿಂದ ಗಳಿಸಿದ ಅನುಭವವನ್ನು ಪುನಃ ಜನರ ಸಾಂಸ್ಕೃತಿಕ ಜಾಗೃತಿಗಾಗಿ ಬಳಸುವ ಪ್ರಕ್ರಿಯೆಯಲ್ಲಿ ಅನುಪಮಾ ಅವರ ಎಲ್ಲ ಸಮಕಾಲೀನರಿಗಿಂತ ಭಿನ್ನರಾಗಿ ತೋರುತ್ತಾರೆ.

ಮೇಲೆ ಪ್ರಸ್ತಾಪಿಸಿದ ಅಂಶಗಳನ್ನು ಹಿನ್ನೆಲೆಯಲ್ಲಿಟ್ಟು, ಅವರ ಕಥಾಲೋಕದ ಒಳಹೊಕ್ಕರೆ, ನಾವು ಕಾಣುವುದು ಸಣ್ಣ ಮನುಷ್ಯರ, ಸಣ್ಣ ಪುಟ್ಟ ಆಕಾಂಕ್ಷೆಗಳು, ಅವುಗಳಿಗಿರುವ ಅಡ್ಡಿ ಆಪತ್ತುಗಳು, ದುರ್ಬಲರ ಮೇಲೆ ಬಲಿಷ್ಠರ ಹಿಡಿತದಿಂದಾಗಿ ಅವರ ಬದುಕನ್ನಾವರಿಸಿರುವ ದುಃಖ, ದಾರಿದ್ರ್ಯ, ಯಾತನೆಗಳು ತುಂಬಿರುವ

ಊಹಾ ಬಣ್ಣದ ಜಗತ್ತು. ಈ ಲೋಕದ ಜನರು ಯಾವುದೇ ಸಾಮಾಜಿಕ ಸ್ತರಕ್ಕೆ ಸೇರಿದವರಿರಲಿ, ಅವರೊಳಗಿನ ಮಾನವತ್ವಕ್ಕೇ ಇಲ್ಲಿ ಆದ್ಯತೆ. ಎಲ್ಲರೂ ಪರಿಸರದ ಕೂಸುಗಳಾಗಿದ್ದು ಅವರ ಭಾವನೆ, ವಿಚಾರ, ವರ್ತನೆಗಳೆಲ್ಲ ಈ ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ ನಡೆಯುವುದರ ವಿವೇಚನೆ ಇದೆ. ವಸ್ತುವಿನ ದೃಷ್ಟಿಯಿಂದ ಅನುಪಮಾ ಅವರ ಕಥೆಗಳು ಸ್ಥೂಲವಾಗಿ ಮೂರು ವಿಷಯಗಳಡಿ ಸೇರುತ್ತವೆನ್ನಬಹುದು;

(೧) ಬಡವರ, ನಿಮ್ನವರ್ಗದವರ - ಶೋಷಿತರ ಬದುಕಿನ ಹೋರಾಟ

(೨) ಸ್ತ್ರೀ ಸಮುದಾಯದ ವಿವಿಧ ಸಮಸ್ಯೆಗಳ ವಿವೇಚನೆ.

(೩) ಮಾನವ ಸಂಬಂಧಗಳ ಅರ್ಥ ಶೋಧನೆ, ಸಾವಿನ ಸಮಸ್ಯೆ.

೧) ವರ್ಗ ಸಂಘರ್ಷದ ಸಿದ್ಧಾಂತದ ಹಿನ್ನೆಲೆಯಲ್ಲಿ ದಲಿತರು, ನಿರ್ಗತಿಕರು, ಬಡವರು, ಕೂಲಿಕಾರರ ಬದುಕಿನ ಹೋರಾಟವನ್ನು ಪ್ರಧಾನವಾಗಿ ಚಿತ್ರಿಸುವ ಕಥೆಗಳೆಂದರೆ 'ಮಣ್ಣು ದಿಬ್ಬದ ಮೇಲೆ', 'ರೂವಾರಿಯ ಲಕ್ಷ್ಮಿ', 'ಒಂಟಿಹಾಯಿ', 'ಬಿಳಿ-ಕಪ್ಪು', 'ಮಣ್ಣು', 'ದಮ್ಮಯ್ಯ ಬಿಟ್ಬಿಡಿ', 'ಪ್ರಳಯ', 'ಅಣ-ಉಡುಗಿ' ಇತ್ಯಾದಿ. ಈ ಬಗೆಯ ಕಥೆಗಳಲ್ಲಿ ಕೂಲಿಕಾರರು, ಶಿಲ್ಪಿಗಳು, ಬೆಸ್ತರು, ಕಾರ್ಖಾನೆಯ ದುಡಿಮೆಗಾರರು, ಪರಿಸ್ಥಿತಿಯ ಒತ್ತಡದಿಂದಾಗಿ ಸೇವಕರಾದವರು, ಜೇಬುಗಳ್ಳತನ ಮುಂತಾದ ದುಷ್ಟ ವೃತ್ತಿಗಿಳಿದವರು ಮುಂತಾದ ಸಮಾಜದ ಕೆಳವರ್ಗದವರ ಜೀವನ ಚಿತ್ರಣವಿದೆ. ಅವರವರ ಪರಿಸರದ ವಿವರಗಳನ್ನು, ಅವರ ಮಾತು. ಭಾಷೆ. ಬದುಕಿನ ರೀತಿನೀತಿಗಳನ್ನು ಅವುಗಳ ವಾಸ್ತವ ರೂಪದಲ್ಲಿ ಗ್ರಹಿಸಿ ದಾಖಲಿಸಲು ಅನುಪಮಾ ಶ್ರಮಪಡಿಸುತ್ತಾರೆ. ಒಂದು ಹೊತ್ತಿನ ಗಂಜಿಗಾಗಿ, ಕೇವಲ ಉಸಿರಾಡುತ್ತಾ ಬದುಕಿರುವುದಕ್ಕಾಗಿ ಈ ಜನ ಪಡುವ ಬವಣೆಗಳ ಯಥಾರ್ಥ ಚಿತ್ರ ಇಲ್ಲಿದೆ. ಆದರೆ ಇಂಥ ಕಥೆಗಳಲ್ಲಿ ಭಾವುಕತೆ ವಿಚಾರವನ್ನು ಮರೆಮಾಚದಿರುವಂತೆ ಒಂದು ವಿಧವಾಗಿ ನಿರ್ಲಿಪ್ತವಾದ ಸರಳವಾದ ಭಾಷಾ ಶೈಲಿಯನ್ನು ಅನುಪಮಾ ಬಳಸಿಕೊಳ್ಳುತ್ತಾರೆ. ಉದಾಹರಣೆಗೆ: 'ಮಣ್ಣು ದಿಬ್ಬದ ಮೇಲೆ' ಅವರ ಮೊದಲ ಯಶಸ್ವೀ ಕಥೆ. ಇದರಲ್ಲಿ ಊರಾಚೆಗಿನ ಮಣ್ಣುದಿಬ್ಬದ ಮೇಲೆ ಕೂಲಿಕಾರರು ಕಟ್ಟಿಕೊಂಡಿದ್ದ ಜೋಪಡಿಗಳು ಶ್ರೀಮಂತನೊಬ್ಬನ ದುರಾಸೆ, ದುರಾಗ್ರಹಗಳಿಂದಾಗಿ ನಾಶವಾಗುತ್ತವೆ. ಯಾರ ತಂಟೆಗೂ ಬರದೆ, ಬಡತನದ ನಡುವೆಯೂ ಪರಸ್ಪರ ಸಹಕಾರ ಭಾವದಿಂದ ಬದುಕಲು ಹೋರಾಡುವ ಕೂಲಿಗಾರ ಕುಟುಂಬಗಳು ನಿರಾಶ್ರಿತರಾಗಿ, ಆ ಸ್ಥಳ ಬಿಟ್ಟು ಬೇರೆಡೆಗೆ ಆಸರೆ ಅರಸುತ್ತ ಹೋಗುವುದರ ಮಾರ್ಮಿಕ ಚಿತ್ರಣ ಈ ಕಥೆಯಲ್ಲಿದೆ. ಜಗತ್ತಿನ ಇತರ ಕೂಲಿಗಾರರಿಂದ ಇವರು ಪ್ರತ್ಯೇಕವಾಗಿರುವುದರಿಂದ ಬಲಿಷ್ಠರ ವಿರುದ್ಧ ಇವರು ಹೋರಾಡಲು ಆಗದ ಅಸಹಾಯಕತೆಯಿದೆ. ಆದರೆ ಈ ಸ್ಥಿತಿಯೇ ಶಾಶ್ವತವಲ್ಲ. ಇವರ ಬದುಕು ಮುಂದುವರೆಯುತ್ತೆ ಎಂಬುದನ್ನು ಕಥೆ ಧ್ವನಿಸುವ ರೀತಿ ಗಮನಾರ್ಹ.

'ಅವರ ದಿಬ್ಬದ ಸುತ್ತಲೂ ನಿಂತಿದ್ದ ನೀರು, ಸುತ್ತಮುತ್ತಲಿನ ಸಂಪರ್ಕದಿಂದ ಅವರನ್ನು ಬೇರ್ಪಡಿಸಿತ್ತು. ಪ್ರಪಂಚದ ಎಲ್ಲ ಜನರಿಂದಲೂ ತಾವು ಬೇರೆ, ನಮ್ಮ ಜೊತೆ ಯಾರೂ ಇಲ್ಲ ಎನ್ನುವ ಭಾವ ಅವರೆಲ್ಲರ ಮನಸ್ಸಿನಲ್ಲಿ ಹಣಿಕಿ ಹಾಕುತ್ತಿತ್ತು.'

'ಒಂದು ದಿನ ಬೆಳಗಿನ ನಸುಬೆಳಕಿನಲ್ಲಿ ಅವರೆಲ್ಲಾ ಹೊರಟರು. ಮೈಮೇಲೆ ಹೊತ್ತ ಮಕರಿ, ಒಂದು ಗುದ್ದಲಿ, ಒಂದೆರಡು ಮಡಕೆ ಇವಿಷ್ಟೆ ಅವರ ಆಸ್ತಿ. ಇದು ಹಗಲು ರಾತ್ರಿ ಹುಟ್ಟಿದಾಗಿನಿಂದ ದುಡಿದು ಅವರು ಸಂಪಾದಿಸಿದ ಹಿರಿಯ ಆಸ್ತಿ.'

'ಕಾಗೆಗಳು ಚೀರುತ್ತಿದ್ದವು. ಅವರು ಆ ವರೆಗೆ ಸಾಕಿದ್ದ ನಾಯಿಗಳು ಬೌ ಬೌ ಎಂದು ಅಳುವ ಧ್ವನಿಯಲ್ಲಿ ಬೊಗಳುತ್ತಿದ್ದವು. ಮಕ್ಕಳು ಹೊಟ್ಟೆ ಹಸಿವಿನಿಂದ ಅಳುತ್ತಿದ್ದವು. ದೂರದಿಂದ ನೋಡುವವರಿಗೆ ಕಾಣಿಸುತ್ತಿದ್ದುದು ಮಸುಕು ಮಸುಕಾದ ಆಕಾರಗಳು ಮಾತ್ರ. ಎಲ್ಲಿಗೋ ಕೊನೆಯಿಲ್ಲದ ಪಯಣಕ್ಕೆ ಹೊರಟಿರುವ ಯಾತ್ರಿಕರಂತಿದ್ದರು ಅವರು.'[12]

ದಿಗಂತದಲ್ಲಿ ಸೂರ್ಯ ಹುಟ್ಟುವ ಮುನ್ನಿನ ನಸುಬೆಳಕಲ್ಲಿ ಗುದ್ದಲಿ ಹಾರೆ ಹೊತ್ತ ಈ ಮಸುಕು ಆಕಾರಗಳ ಚಿತ್ರ - ಅವರ ಬದುಕಿನ ಹೋರಾಟ ಮುಂದುವರೆಯುವ ಆಶಾವಾದ ಹೊತ್ತಿರುವುದು ಗಮನಾರ್ಹ. ಇಲ್ಲಿ ದುರಂತದ ಚಿತ್ರವಿದೆ. ಭಾವಾವೇಶ, ಆಕ್ರೋಶವಿಲ್ಲ. ಭಾಷೆಯ ಈ ಬಗೆಯ ಬಳಕೆಯ ಸಾಮರ್ಥ್ಯ ಅನುಪಮಾ ಅವರ ಮೊದಲ ಕಥಾಸಂಕಲನದಲ್ಲೇ ವ್ಯಕ್ತವಾಗಿರುವುದೂ ಗಮನಿಸಬೇಕಾದ ಮತ್ತೊಂದು ಅಂಶ. ಈ ಕಥೆ ಬಿಟ್ಟರೆ, ಉಳಿದೆಡೆ, ತಾಂತ್ರಿಕವಾಗಿ ಶಿಥಿಲತೆ, ವಾಚ್ಯ ತಲೆಹಾಕಿದೆಯಾದರೂ ಇಂತಹ ದೋಷಗಳನ್ನು ಪ್ರಯತ್ನಪೂರ್ವಕವಾಗಿ ಮುಂದೆ ನಿವಾರಿಸಿಕೊಂಡಿದ್ದಾರೆ ಲೇಖಕಿ. ಅಲ್ಲದೆ, ವಸ್ತುವನ್ನು ತೀವ್ರವಾಗಿ ತಲುಪಿಸುವುದಕ್ಕಾಗಿ ಭಾಷೆಯಲ್ಲಿ ಪ್ರಯೋಗ ಮಾಡುವ ಪ್ರಯತ್ನವನ್ನೂ ನಡೆಸಿದ್ದಾರೆ. "ಪುಷ್ಪಕ" ಸಂಕಲನಕ್ಕೆ ಸೇರಿದ (೧೯೮೦) 'ಬಿಳಿ ಕಪ್ಪು' ಕಥೆಯಲ್ಲಿ ಈ ಬಣ್ಣಗಳು ಎರಡು ವರ್ಗಗಳ ಬದುಕನ್ನು ಸಂಕೇತಿಸುವ ಶಬ್ದಗಳಾಗಿ ಬಳಕೆಯಾಗುತ್ತವೆ. ಮಲ್ಲಿಂಗರ ಗುಡಿಸಲಿಗೆ 'ಕಪ್ಪು ತಗಡಿನ ಹೊದಿಕೆ'; ಅವರ ಮೈ ಕಪ್ಪು (ದುಡಿಮೆಯಿಂದ), ಅವರ ಸಣಕಲ ಕೈಕಾಲುಗಳು, ಮುಖಗಳು ಕಪ್ಪು (ಹಸಿವಿನಿಂದ). ಅವರ ಇಡೀ ಬದುಕು ದುಃಖ, ಅಸಹಾಯಕತೆ, ಬಲಿಷ್ಠರ ಶೋಷಣೆಗಳಿಂದ ಕಪ್ಪಾಗಿದೆ. ಅವರ ಬದುಕಿಗೆ ಯಾವುದಾದರೂ ಸವಲತ್ತು ಒದಗಿದರೆ ಅದು ಮಲ್ಲಿಯ 'ಬಲಗಾಲಿಗೆ ಬಿಳಿಯ ಹವಾಯಿ ಚಪ್ಪಲಿ, ಎಡಗಾಲಿಗೆ ತೊಗಲಿನ ಕಪ್ಪು ಚಪ್ಪಲಿ', ಅದೂ ಯಾರೋ ಪುಣ್ಯಾತ್ಮರು ಬೇಡವೆಂದು ಎಸೆದದ್ದು - ಎಂಬ ರೀತಿಯದು. ಈ ಕಪ್ಪು ಬದುಕಿಗೆ ವೈರುಧ್ಯ ಒದಗಿಸುತ್ತದೆ ಈ ಜನ ಕಟ್ಟುತ್ತಿರುವ 'ಬಿಳಿ' ಮನೆ. ಆ ಮನೆಗೆ ವಿಸ್ತಾರವಾದ ಕಾಂಪೌಂಡು, ಮನೆಯ ಸುತ್ತ ವಿವಿಧ ಹೂಗಳ ಉದ್ಯಾನ,

ಮನೆಯೊಡೆಯನ 'ಎಣ್ಣೆಗೆಂಪು ಮೈ'. ಈ ಬಿಳಿಯ ವೈಭವವೆಲ್ಲ ಕಪ್ಪಿನ ಶ್ರಮದ ಮೇಲೆ ಅವಲಂಬಿಸಿರುವುದನ್ನು ಸಾರುವಂತೆ 'ಬಿಳಿ ಸೂರ್ಯ ಕಪ್ಪುಡಾಮರಿನ ಮೇಲೆ ತಮಟೆ ಬಾರಿಸುತ್ತಿದ್ದಾನೆ'. ಇಂಥ ಸಂದರ್ಭಗಳಲ್ಲಿ ಅನುಪಮಾ ನಿರಂಜನ ರೀತಿಯಲ್ಲಿ ಭಾಷೆಯ ಪ್ರಯೋಗ ಮಾಡಲೆತ್ನಿಸುತ್ತಾರೆ. ಆದರೆ ಕಥೆಯ ಹಿಂದಿನ ವಿಚಾರ ಸೂತ್ರ ಮಾತ್ರ ಮೊದಲಿನದೇ. ಬಿಳಿಯ ಬದುಕಿನ ಹಿಂದಿರುವ ಕ್ರೌರ್ಯ, ಕಪ್ಪು ಬದುಕಿನಲ್ಲಿ ಬವಣೆಯ ನಡುವಿನಲ್ಲೂ ಜಿನುಗುವ ಮಾನವೀಯತೆ, ಆದರಿಂದ ಆ ಬದುಕಿನಲ್ಲಿ ಇರುವ ಜೀವಂತಿಕೆಗಳೂ ಇಲ್ಲಿ ದಾಖಲಾಗುತ್ತವೆ.

'ಚಕ್ರಗಳು' ಕಥೆ 'ಒಂದು ಗಿಣಿಯ ಕಥೆ' (೧೯೮೩) ಸಂಕಲನದ್ದು. ಕಲಾತ್ಮಕತೆಯ ದೃಷ್ಟಿಯಿಂದ ಮೇಲಿನ ಎರಡು ಕಥೆಗಳಿಗಿಂತಲೂ ಉತ್ತಮ ಸ್ತರದ್ದಾಗಿದೆ. ಇಲ್ಲಿ ವರ್ಗಗಳ ಘರ್ಷಣೆ, ಹಿನ್ನೆಲೆಗೆ ಸರಿಯುತ್ತದೆ. ಆದರೆ ಅದರ ಪರಿಣಾಮ ಮಾತ್ರ ಮನೋವೇಧಕವಾಗಿ ದಾಖಲಾಗುತ್ತದೆ, ನಿರ್ಲಿಪ್ತ ಧಾಟಿಯಲ್ಲಿ. ಕಾಲೇಜು ಹುಡುಗರು ಸ್ಟ್ರೈಕ್ ಮಾಡಿ ಗಲಭೆಯೆಬ್ಬಿಸಿದಾಗ ಪೋಲೀಸರು ಬಂದು ಅವರನ್ನೆಲ್ಲ ಬಡಿದು, ಬಂಧಿಸಿ ಲಾಕಪ್ಪಿಗೆ ಎಳೆದೊಯ್ಯುತ್ತಾರೆ. ಕಾಲೇಜಿನ ಬಳಿ ಮರದಡಿ ಸೈಕಲ್ ರಿಪೇರಿ ಮಾಡಲು ತಳವೂರಿದ್ದ ಬಡ ಕಾರ್ಮಿಕ ಕರಿಯಣ್ಣನ ಕೈಯಲ್ಲಿ ಸೈಕಲ್ ಚೈನು ಕಂಡು, ಅವನನ್ನೂ ಪೋಲೀಸರು ಗಲಭೆ ಮಾಡಿದ ಅಪರಾಧ ಹೇರಿ ಬಂಧಿಸಿ ಕರೆದೊಯ್ಯುತ್ತಾರೆ. ಅವನು ದುಡಿದು ನಾಲ್ಕು ಕಾಸು ಗಳಿಸಿದರೆ ಹೆಂಡತಿ ಮಕ್ಕಳು ಗಂಜಿ ಕಾಣಬಹುದು. ಚುರುಕು ಬುದ್ಧಿಯ ಮಗ ಶಾಲೆಯಲ್ಲಿ ಕಲಿಕೆ ಮುಂದುವರಿಸುವ ಕನಸು, ಮಗಳು ಹೊನ್ನಿ ಪರರ ಮನೆಗೆಲಸಕ್ಕೆ ಹೋಗಬಾರದೆಂಬ ಅಪೇಕ್ಷೆ-ಎಲ್ಲದರ ಕನಸು ಮನದಲ್ಲಿ ತುಂಬಿ ದುಡಿಯುತ್ತಿದ್ದ ಕರಿಯಣ್ಣ ಪೋಲೀಸರ ಹೊಡೆತ ತಿಂದು ವ್ಯಾನ್ ಏರಬೇಕಾಗುತ್ತದೆ. ಇದನ್ನು "ಚಕ್ರ ಒಂದು" ಎಂಬ ವಿಭಾಗ ನಿರೂಪಿಸುತ್ತದೆ. "ಚಕ್ರ ಎರಡ"ರಲ್ಲಿ ಕರಿಯಣ್ಣನ ಹೆಂಡತಿ ಸಣ್ಣೆ ಹಾಗೂ ಮಕ್ಕಳು ಅವನು ತರುವ ಕಾಸಿನಿಂದ ಗಂಜಿ ಕಾಣುವ ಕನಸು ಕಾಣುತ್ತಾ ಕಾದುಕಾದು ಅವನು ಬಾರದೇ ಹೋದಾಗ ಹಸಿವನ್ನೇ ಹಾಸಿ, ಹೊದ್ದು ಮಲಗುತ್ತಾರೆ. ನಡುರಾತ್ರಿಗೆ ಚೆನ್ನಾಗಿ ಬಾಸುಂಡೆ ಬಂದ ಕರಿಯ ನಡೆಯಲಾರದೆ ನಡೆದು ಬಂದು ಅವರ ಬಳಿಯೇ ಬಿದ್ದುಕೊಳ್ಳುತ್ತಾನೆ. ಹೊನ್ನಿಯನ್ನು ಕೆಲಸಕ್ಕೆ ಕಳಿಸದೆ ಬೇರೆ ದಾರಿಯೇ ಇಲ್ಲ ಎಂದು ಸಣ್ಣೆ ಹೇಳಿದಾಗ ಅವನ ಬಳಿ ಉತ್ತರವಿಲ್ಲ.

ಬೂಟುಗಾಲಿನ ಅಧಿಕಾರಶಾಹಿಯಡಿ ಇಂಥ ನಿರ್ಬಲರ ಬದುಕುಗಳು ಹೊಸಕಿ ಹೋಗುವ ವಿಧಾನವನ್ನು, ಸಂಜೆಯ ವೇಳೆಗೂ ಕರಿಯಣ್ಣ ಬಾರದಾದಾಗ, ಅವನ ನೆರೆಯ ಅಂಗಡಿಯ ಲಕ್ಕಪ್ಪ ಬಂದು ಸಣ್ಣೆಗೆ ನಡೆದ ಘಟನೆಯ ವರದಿ ಒಪ್ಪಿಸುವ ಮಾತುಗಳು ಸಾರುತ್ತವೆ. 'ನನ್ನಂಗಡಿ ಗತಿ ನೋಡವ್ವ! ಕಳ್ಳ ಸೂಳೆಮಕ್ಳು,

ಬೀಡಿ ಸಿಗರೇಟು ಒತ್ಕೊಂಡೋದ್ರು. ಬಾಳೆಹಣ್ಣು ನನ್ಮಿದುರ್ಗೇ ತಿಂದಾಕಿದ್ರು. ಡಬ್ಬಗಳನ್ನೆಲ್ಲಾ ಒರಗೆ ಎಸೆದವರೆ'. 'ಕರಿಯುನ್ ಸಾಮಾನ್ ಡಬ್ಬ ಖಾಲಿ ಬಿದ್ದಿತ್ ಕಣ್ ತಂಗಿ. ಪಂಪ್ರುಗಿಂಪ್ರು ಯಾವ್ದೂ ಕಾಣೆ. ಮರಕ್ಕೆ ಆಕಿದ್ದ ಟೈರುಗಳು ಅಂಗೇ ಇದ್ವು. ಅವನ್ನ ಎಂತ್ಕಂಬುದ್ ಒಳಗೆ ಮಡಗಿವ್ನಿ.'[13] ಇಲ್ಲಿ ಚಕ್ರ ಬದುಕಿನ ನಿಲ್ಲದ ಹೋರಾಟದ ಸಂಕೇತವಷ್ಟೇ ಅಲ್ಲ. ಪರಿಸ್ಥಿತಿ ಬದಲಾಗುವ ಆಶಾವಾದದ ಚಕ್ರವಾಗಿದೆ. ಆದ್ದರಿಂದಲೇ ಕರಿಯಣ್ಣನಿಗೆ ಮಗ ರಂಗ ಗೋಡೆ ಮೇಲೆ ಬಿಡಿಸಿದ್ದ ವಿಮಾನದ ಚಕ್ರಗಳು ತಿರುಗುತ್ತಿರುವಂತೆ ಭಾಸವಾಗುತ್ತದೆ.

ಹೀಗೆ ಭಾಷೆ, ಭಾವ-ವಿಚಾರಗಳ ಸಮತೋಲ ಕಾಯ್ದುಕೊಂಡು, ಸೌಂದರ್ಯ, ಸಂಕಟಗಳೆರಡನ್ನೂ ಸೆರೆಹಿಡಿಯಲು ಏಳಕೆಯಾಗಿ ಯಶಸ್ವಿಯೂ ಆಗುವುದನ್ನು 'ರೂವಾರಿಯ ಲಕ್ಷ್ಮಿ', 'ಮಣ್ಣು', 'ಬೇಟೆ', 'ಪ್ರಳಯ' ಕಥೆಗಳಲ್ಲೂ ಕಾಣಬಹುದು. 'ಅಣ - ಉಡುಗಿ' ಪ್ರಸಕ್ತ ಭ್ರಷ್ಟಾಚಾರ, ಹಣದ ಮದ ತುಂಬಿದ ಅಧಿಕಾರಶಾಹಿಯುವಿ ನೌಕರರ ಬಡತನದಿಂದಾಗಿ. ಅವರ ಶೋಷಣೆಯಾದರೂ, ಆಳುವವರು ಮಾತ್ರ ಏನೂ ಅಪಾಯವಿಲ್ಲದೆ ಸುಖವಾಗಿ ಬದುಕುವುದರ ವಿಡಂಬನೆಯಿದೆ. ಹೊಯ್ಸಳ ಚಕ್ರೇಶ ವಿಷ್ಣುವರ್ಧನನ ಸಾಮ್ರಾಜ್ಯ ವೈಭವದಲ್ಲಿ ಅವನ ಕೀರ್ತಿಕಲಶವಾದ ಶಿಲ್ಪ ಸಾಮ್ರಾಜ್ಯದ ನಿರ್ಮಾಣದ ಹಂತದಲ್ಲಿ, ಊಳಿಗಮಾನ ಅಧಿಕಾರ, ನಿರಂಕುಶ ದುರಾಚಾರ, ಲಂಪಟತನದಡಿಯಲ್ಲಿ ಬಡ ಶಿಲ್ಪಿ ಹಾಗೂ ಅವನ ಮೋಹದ ಮಡದಿಯ ಬದುಕು ಚೂರು ಚೂರಾಗುವುದರ ಚಿತ್ರಣ 'ರೂವಾರಿಯ ಲಕ್ಷ್ಮಿ'. ಸುಂದರವಾದ ಗಿರಿಧಾಮದ ವಿಶ್ರಾಂತಿಗೃಹದಲ್ಲಿ ಸರ್ವರ್ ಆಗಿ ದುಡಿವ ಎಳೆ ಹುಡುಗನೊಬ್ಬ ವ್ಯವಸ್ಥೆಯ ಬಂದಿಯಾಗಿ ಕುಡುಕನೂ, ಕ್ರೂರಿಯೂ ಆದ ತಂದೆಯ ಕೈಯಲ್ಲೇ ಮರಣವಪ್ಪುವ ದುರಂತ 'ಮಣ್ಣು' ಕಥೆಯಲ್ಲಿದೆ. ಬದುಕಿನಲ್ಲಿ ಒಳಿತು-ಕೆಡುಕುಗಳೆರಡಕ್ಕೂ ಬೀಜವಾಗಿರುವ 'ಮಣ್ಣು' ಇಡೀ ಕಥೆಯನ್ನು ವ್ಯಾಪಿಸುವ ಸಂಕೇತವಾಗಿ ಬೆಳೆಯುವ ಕ್ರಮ ಗಮನಾರ್ಹ.

ಕಥೆಗಳ ಸನ್ನಿವೇಶ, ಪಾತ್ರಗಳ ಬದುಕುಗಳನ್ನು ಯಥಾವತ್ತಾಗಿ ಲೇಖಕಿ ದಾಖಲಿಸುವ ಕ್ರಮಕ್ಕೆ ಒಂದು ಉದಾಹರಣೆ: ಮಿಲ್ಲಿನ ಈ ಕೆಲಸಗಾರರ ಚಿತ್ರ. 'ಮಿಲ್ಲಿನ ಒಳಗೆ ಅವರು ಬಂದಾಗ ತುಂಬಾ ನೂಕು ನುಗ್ಗಲು. ಅದರಲ್ಲೇ ನುಗ್ಗಿ ಜಾಗ ಮಾಡಿಕೊಂಡು ಲಚುಮಿ ಹೊರಟಳು. ಆ ಎರಡು ದಾರಿ ದಾಟಿ, ಮೂರನೆಯ ಕೊಠಡಿಯ ಬಳಿ ಎಡಕ್ಕೆ ತಿರುಗಿ, ತನ್ನ ಕೆಲಸದ ಜಾಗವನ್ನು ಲಚುಮಿ ತಲುಪಿದಳು.' 'ದಿನಕ್ಕಿಂತ ಹೆಚ್ಚಿನ ಕೆಲಸ. ಅಂದು ಮುಂಜಾವದಿಂದಲೇ ಲಚುಮಿಗೆ ಯಾಕೋ ಮೈಕೈ ನೋವು. ಮುಂದೆ ಬಿದ್ದಿದ್ದ ಹೊರೆಯಷ್ಟು ಹತ್ತಿ ನೋಡಿ ಅವಳ ಮೈ ಕಂಪಿಸಿತು. 'ಥೂ....ಇವನ ಮನೆ ಹಾಳಾಗ!' ಎಂದು ಶಪಿಸಿದಳು. ಆದರೆ ಮಾಡದ ಹೊರತು ಬೇರೆ ಗತಿಯಿರಲಿಲ್ಲ.'[14]

ಸನ್ನಿವೇಶದ ಅಗತ್ಯಕ್ಕೆ ತಕ್ಕಂತೆ ಈ ಭಾಷೆಗೆ ಕಾವ್ಯದ ತೆಳು ಲೇಪನ ಕೂಡ ಲೇಪಿಸಬಲ್ಲರು ಅನುಪಮಾ:

'ಮರಳ ಮೇಲೆ ನಿಂತು ಅವರೆಲ್ಲ ಕಡಲನ್ನು ನೋಡಿದರು. ರುದ್ರರೂಪಿಣಿಯಾಗಿದ್ದಳು ಕಡಲಕನ್ನೆ. ಚಂದ್ರಮನಲ್ಲಿ ಆಕೆ ಮೋಹಿತೆಯಾಗಿದ್ದುದು ನಿಶ್ಚಯ. ಆದರೆ ತನ್ನ ಪ್ರಯತ್ನವೆಲ್ಲಾ ವಿಫಲವಾದಾಗ, ಆಗಸದಲ್ಲಿ ಕಣ್ಮರೆಯಾದ ಚಂದ್ರಮನನ್ನು ತಾನು ಮುಟ್ಟಲು ಅಶಕ್ತಳಾದಾಗ ಆ ನಿರಾಶೆ ಮೋಹವನ್ನೆಲ್ಲಾ ಮೆಟ್ಟಿ ಕ್ರೋಧ ತಲೆದೋರಿತ್ತು.'[15]

ಹೀಗೆ ಶೋಷಿತರ ಬವಣೆಗಳನ್ನೇ ಚಿತ್ರಿಸುವ ಕಥೆಗಳಲ್ಲಿ, ಅನುಪಮಾ ಒಂದು ರೀತಿಯಲ್ಲಿ ಆ ಬದುಕಿನ ಜೊತೆ ತಲ್ಲೀನರಾಗುತ್ತಾರೆ. ಅದರಿಂದಾಗಿ ಕೆಲವೊಮ್ಮೆ ಒಂದು ಬಗೆಯ ಮೆಚ್ಚುಗೆ, ಆಪ್ತ ಸ್ವೀಕರಣೆಯ ಭಾವದಿಂದ ಈ ಬದುಕುಗಳನ್ನು ಚಿತ್ರಿಸುತ್ತಾರೆನಿಸುತ್ತದೆ. ಹೀಗೆಂದಾಗ ಈ ಜೀವನದಲ್ಲೂ ತಲೆ ಹಾಕುವ ಮಾತ್ಸರ್ಯ, ದ್ವೇಷ, ವಂಚನೆ ಮುಂತಾದ ಮನುಷ್ಯರ ಸಣ್ಣತನಗಳು, ನಿರ್ಬಿಢೆಯ ಕ್ರೌರ್ಯ, ಸ್ವಾರ್ಥಗಳ ಬಗ್ಗೆ ಮುಂದುವರಿದಾಳೆಂಬ ಭೀತಿಯಿಂದ ಗಂಡ ಅವಳಿಗೆ ಓದಲು ಅವಕಾಶ ನೀಡಲಾರ. ಕೊನೆಗೆ ಅಂತರಂಗದ ಕರೆಗೆ ಓಗೊಟ್ಟು ಮನೆ ತೊರೆದು ಹೋಗಿ, ವಿದ್ಯೆ ಮುಂದುವರೆಸಿ, ವಿಶ್ವ ಮಟ್ಟದ ಗಣಿತ ತಜ್ಞಳಾಗಿ ಕೀರ್ತಿಗಳಿಸಿದುದರ ಸೂಚನೆಯೊಂದಿಗೆ, ಗಂಡ ಮತ್ತೊಂದು ಮದುವೆಯಾಗಿದ್ದು, ಪತ್ರಿಕೆಯಲ್ಲಿ ವನಜಾಕ್ಷಿಯ ಸುದ್ದಿ ಓದಿ ಕರುಬುವುದರ ಜೊತೆ ಕಥೆ ಕೊನೆಗೊಳ್ಳುತ್ತದೆ.

ಕಾಲು ಕಳೆದುಕೊಂಡ ಮೇಲೆ ಹೆಣ್ಣಾದವಳು ಬದುಕಿದ್ದು ಪ್ರಯೋಜನವೇನು? ಎಂಬ ಸಂಪ್ರದಾಯನಿಷ್ಠ ಸಮಾಜದ ಹೆದರಿಕೆಗೆ ವಿರುದ್ಧವಾಗಿ, ಮೂಳೆಯ ಕ್ಯಾನ್ಸರಿನಿಂದ ಕಾಲು ಕತ್ತರಿಸಬೇಕಾಗಿ ಬಂದಾಗ, ಎಳೆ ವಯಸ್ಸಿನ ಯುವತಿ ಆ ಸ್ಥಿತಿಯನ್ನು ಧೈರ್ಯವಾಗಿ ಎದುರಿಸಿದುದನ್ನು ಚಿತ್ರಿಸುವ ಕಥೆ 'ಛಲ'. ಕಾಲುಕತ್ತರಿಸಬೇಕಾದ ವಿಷಯ ತಿಳಿದಾಗ ಆಪರೇಷನ್‌ಗೆ ಮೊದಲೇ, ಅವಳಿಗೆ ಗೊತ್ತಾಗಿದ್ದ ವರ ನುಣುಚಿಕೊಳ್ಳುತ್ತಾನೆ. ಆದರೆ ಉಮಾ ಅಂಜದೆ, ಈ ಸ್ಥಿತಿಯನ್ನು ಮೊದಲಿನಿಂದ ತಾನು ಬಯಸಿದ್ದ ಉನ್ನತ ವ್ಯಾಸಂಗದ ಅವಕಾಶವನ್ನಾಗಿ ಪರಿವರ್ತಿಸಿಕೊಂಡು, ಕಾಲೇಜು ಶಿಕ್ಷಕಿಯಾಗಿ ಆರ್ಥಿಕ-ಮಾನಸಿಕ ಸ್ವಾತಂತ್ರ್ಯ-ತೃಪ್ತಿ ಪಡೆದದ್ದನ್ನು ಕಥೆ ಚಿತ್ರಿಸುತ್ತದೆ.

'ತುಮುಲ' ಕಥೆಯ ವಸ್ತು ಇನ್ನೂ ಸಂಕೀರ್ಣವಾದದ್ದು. ಮದುವೆಯಾದ ಒಂದು ವರ್ಷದ ನಂತರ ಪತಿ ಅಪಘಾತದಲ್ಲಿ ಮಡಿದಾಗ, ಮಡಿಲಲ್ಲಿ ಮಗುವನ್ನು ತುಂಬಿಕೊಂಡಿದ್ದ ವೈದೇಹಿ ತವರು ಸೇರಬೇಕಾಗುತ್ತದೆ. ಮೊದಲ ಗಂಡನ ಜೊತೆಗಿನ

ಸೇರಿಸಿ ಓದಿ.

ಪುಟ ೨೮೨ರಲ್ಲಿ ೩ನೇ ಪಾರಾದಲ್ಲಿ "ಕ್ರೌರ್ಯ ಸ್ವಾರ್ಥಗಳ ಬಗ್ಗೆ" ಎಂದಿರುವುದರ ಅನಂತರ ಕೆಳಗಿನ ಅಂಶವನ್ನು ಸೇರಿಸಿರಿ.

ಉದಾಸೀನತೆ ಇದೆಯೆಂದಲ್ಲ. ಆದರೆ ಅವೆಲ್ಲ ಆಯಾ ವ್ಯಕ್ತಿಗಳಿಗೆ ಸಂಬಂಧಿಸಿದ ಪರಿಸರ, ಅವಕಾಶಗಳ ಮಿತಿ, ಮುಂತಾದವುಗಳ ಪರಿಣಾಮಗಳಾಗಿ ಕಾಣಿಸಿಕೊಳ್ಳುತ್ತವೆ.

೨. ಶೋಷಿತರ ಬಗ್ಗೆ ಅನುಪಮಾ ಹೊಂದಿರುವ ಕಾಳಜಿಯ ಮತ್ತೊಂದು ರೂಪವೇ ಸ್ತ್ರೀಯರ ಸಮಸ್ಯೆಗಳನ್ನು ಕುರಿತ ಕಥೆಗಳು. ಪ್ರಾರಂಭ ಕಾಲದ ಕಥೆಗಳಾದ 'ಮೂಲಾ ನಕ್ಷತ್ರದ ಹುಡುಗಿ' 'ಆ ಮೂರು ಮನೆಗಳು' ಮೊದಲಾದವುಗಳಲ್ಲಿ ಸ್ತ್ರೀ ಸಮುದಾಯವನ್ನು ಆವರಿಸಿರುವ ಸಾಂಸ್ಕೃತಿಕ ಆವರಣದಲ್ಲಿಯೇ ಅವರೆಲ್ಲ ಸಮಸ್ಯೆಗಳ ಮೂಲವನ್ನು ಗುರುತಿಸುವ ಯತ್ನವಿದೆ. ಮೂಲಾ ನಕ್ಷತ್ರದಲ್ಲಿ ಹುಟ್ಟಿದವಳೆಂಬ ಕಾರಣಕ್ಕಾಗಿ ಗಂಡುಗಳಿಂದ ತಿರಸ್ಕೃತಳಾಗಿ, ತಾಯಿಯ ಕ್ರೋಧಕ್ಕೆ, ನೆರೆಹೊರೆಯವರ ಅವಹೇಳನಕ್ಕೆ ತುತ್ತಾದ ಯುವತಿ ಅವರೆಲ್ಲರ ಮೇಲಿನ ಕೋಪದಿಂದ ವಯಸ್ಸಾದ ವಿಧುರನ ಕೈಹಿಡಿದು, ಐಶ್ವರ್ಯದ ನಡುವೆಯೂ ಪ್ರೀತಿಯ ಸುಖ ಕಾಣಲಾರದ ದುರಂತಕ್ಕೊಳಗಾದುದನ್ನು 'ಮೂಲಾ ನಕ್ಷತ್ರದ ಹುಡುಗಿ' ಚಿತ್ರಿಸುತ್ತದೆ. 'ಆ ಮೂರು ಮನೆಗಳು' ಕಥೆಯಲ್ಲಿ ಕೆಳ ಮಧ್ಯಮ ವರ್ಗದ ಭಾಗ್ಯಮ್ಮ ಪತಿಯ ದೌರ್ಜನ್ಯಕ್ಕೆ ಬೇಸತ್ತರೂ ಅಂಜಿಕೆಯಿಂದ ಅದಕ್ಕೇ ಅಂಟಿಕೊಳ್ಳುವ ಬಗೆ; ಬಡತನದಿಂದ ಪಾರಾಗಲು ವೇಶ್ಯೆಯಾಗಿ ಧನಿಕಳಾದ ಸುಭದ್ರೆ ಪ್ರೀತಿಯ ಕೊರತೆಯಿಂದ ನರಳುವ ಬಗೆ; ಶ್ರೀಮಂತರ ಅನ್ಯಾಯ ಕಂಡು ರೊಚ್ಚಿಗೆದ್ದರೂ ಬಡತನದ ಅಸಹಾಯಕತೆಯ ಅರಿವು ಜೊತೆಗೆ ಮುಂದೊಂದು ಒಳ್ಳೆಯ ಕಾಲ ಬಂದೀತು ಎಂಬ ಕೂಲಿ ಹೆಣ್ಣು ಲಚುಮಿಯ ಆಸೆಗಳು ದಾಖಲಾಗುತ್ತವೆ. ಈ ಕಥೆಗಳ ಕೊನೆಯಲ್ಲಿ ಲೇಖಕಿ ತಮ್ಮ ಉದ್ದೇಶವನ್ನು ವಾಚ್ಯವಾಗಿ ಹೇಳಲೆತ್ನಿಸಿರುವುದರಿಂದ ಅವುಗಳಲ್ಲಿ ಶಿಥಿಲತೆ ತಲೆದೋರುತ್ತದೆ. ಈ ಬಗೆಯ ಕಥನಕಲೆಯ ದೋಷಗಳನ್ನು ಮುಂದಿನ ಹಲವು ಒಳ್ಳೆಯ ಕಥೆಗಳಲ್ಲಿ ನಿವಾರಿಸಿರುವುದು ಗಮನಾರ್ಹ.

‘ಕರೆ’ ಕಥೆಯ ವನಜಾಕ್ಷಿ ಗಣಿತದಲ್ಲಿ ಅಪಾರ ಪ್ರತಿಭೆಯಿದ್ದು ಉನ್ನತ ವ್ಯಾಸಂಗ ಸಂಶೋಧನೆಗಳ ಬಗ್ಗೆ ಗಾಢವಾದ ಆಸೆಯಿಟ್ಟುಕೊಂಡಿದ್ದ ಯುವತಿ. ಮನೆಯವರ ಒತ್ತಾಯದಿಂದಾಗಿ ಪದವಿ ದೊರೆತ ಕೂಡಲೆ ಮದುವೆಯಾಗಬೇಕಾಗುತ್ತದೆ. ಸ್ವತಃ ಇಂಜಿನಿಯರನಾದರೂ ಗಂಡ ವಾಸುದೇವ ಹೆಣ್ಣಿನ ಕರ್ತವ್ಯ ಮನೆಗೆ. ಗಂಡ ಮಕ್ಕಳಿಗೆ ಮೀಸಲಾಗಿರಬೇಕೆಂಬ ಧೋರಣೆಯವನು. ಹೆಂಡತಿಯ ಹೆಚ್ಚಿನ ಓದಿನ ಆಸೆಯನ್ನು ನಿರಂತರವಾಗಿ ಹತ್ತಿಕ್ಕುತ್ತಾನೆ. ಗೃಹಿಣಿತನದ ಸೀಮಿತ ಬದುಕಿನಲ್ಲಿ ಸಮಾಧಾನ ಪಡೆಯದ ವನಜಾಕ್ಷಿಯ ಮನಸ್ಸು ಎಲ್ಲದರ ವಿರುದ್ಧ ಬಂಡೇಳುತ್ತದೆ. ಅವಳ ಮನೋಬೇನೆಯ ಕಾರಣ ಓದಲಾಗದ್ದರ ಬಗೆಗಿನ ಅತೃಪ್ತಿಯೇ ಎಂದು ವೈದ್ಯರು ವಾಸುದೇವನಿಗೆ ಹೇಳಿದರೂ, ತನಗಿಂತ ಹೆಂಡತಿ

ಪ್ರೇಮಮಯ ದಾಂಪತ್ಯದ ನೆನಪು ಇನ್ನೂ ಹಸಿಯಾಗಿರುವಾಗಲೇ ಮರುಮದುವೆಯಾಗಲು ಮುಂದೆ ಬಂದ ವಿಧುರನೊಬ್ಬನ ಪ್ರಸ್ತಾಪವನ್ನು ಒಪ್ಪಿಕೊಳ್ಳುವಂತೆ ತಂದೆ ತಾಯಿಯ ಒತ್ತಾಯ. ತಂದೆ ತಾಯಿಗಳ ಬಡತನ, ತಮ್ಮ ನಂತರ ಮಗ ಆಕೆಯನ್ನು ನೋಡಿಕೊಂಡಾನೆಯೇ ಎಂಬ ಆತಂಕ, ಈ ಮದುವೆ ಒಂದು ಸುವರ್ಣಾವಕಾಶವೆಂದು ಭಾವಿಸುವಂತೆ ಮಾಡುತ್ತವೆ. ಬ್ಯಾಂಕ್ ನೌಕರಿ ಹಿಡಿದು, ತಂದೆ ತಾಯಿಗಳಿಗೆ ಹೊರೆಯಾಗುವುದನ್ನು ತಪ್ಪಿಸಿಕೊಳ್ಳಬೇಕೆಂದು ಚಿಂತಿಸುತ್ತಿದ್ದ ವೈದೇಹಿ ಈಗ ಗೊಂದಲಕ್ಕೊಳಗಾಗುತ್ತಾಳೆ. ವಧು ಪರೀಕ್ಷೆಯ ಸಂದರ್ಭದಲ್ಲಿ ಸೌಜನ್ಯ, ವೈಚಾರಿಕತೆಯ ನಾಟಕ ಮಾಡಿದ ಶ್ಯಾಮಸುಂದರ ಹಾಗೂ ಅವನ ತಾಯಿ ಕನಕಾಂಬ, ಆಮೇಲೆ ೧೫೦೦೦ ರೂ. ಬೇಕೆಂದೂ, ಮದುವೆಯಾದ್ಮೇನಂತರ ವೈದೇಹಿ ತನ್ನ ಮಗುವನ್ನು ಕರೆತರಬಾರದೆಂದೂ ಭಾವೀ ಅತ್ತೆ ಷರತ್ತು ಹಾಕುತ್ತಾಳೆ. ಈ ಮೊದಲೇ ತನ್ನ ಗೆಳತಿಯಾದ ಗಿರಿಜೆಯ ಮೂಲಕವಾಗಿ, ಶ್ಯಾಮಸುಂದರನ ಮೊದಲ ಹೆಂಡತಿ ಗಂಡ ಅತ್ತೆಯರ ಧನದಾಹದಿಂದಾಗಿ ಬೆಂಕಿಗಾಹುತಿಯಾದಳೆಂಬ ವಿಷಯ ತಿಳಿದಿದ್ದ ವೈದೇಹಿ, ತನ್ನ ಮಗುವನ್ನು ತನ್ನಿಂದ ಅಗಲಿಸುವ ಈ ಮದುವೆಯೇ ತನಗೆ ಬೇಡವೆಂದು ಸಾರುತ್ತಾಳೆ.

ಒಂದು ಸಮಸ್ಯೆಯ ಹಲವು ಮಗ್ಗುಲಿನ ಚಿತ್ರಣ ಇಲ್ಲಿದೆ. 'ವಿಧವಾವಿವಾಹದ' ಆರೋಪದ ಹಿಂದೆ ಕೂಡ ಇರಬಹುದಾದ ನಯವಂಚಕತನವನ್ನು ಬಯಲು ಮಾಡುವ ಯತ್ನವಿದೆ. ಸ್ವತಃ ವಿಚಾರಶೀಲರಾಗಿರದ ಸಾಮಾನ್ಯ ಜನ, ಪರಿಸ್ಥಿತಿಯ ಒತ್ತಡಗಳಿಂದಾಗಿ ಹೇಗೆ ಒಂದು ನಿರ್ಧಾರಕ್ಕೆ ತಳ್ಳಲ್ಪಡುತ್ತಾರೆಂಬುದರ ವಿವೇಚನೆ ಇದೆ. ಇಲ್ಲಿನ ಸಮಸ್ಯೆಯ ಸಂಕೀರ್ಣತೆಯ ದರ್ಶನದಿಂದಾಗಿ, ವೈದೇಹಿ ಮರುಮದುವೆ ಬೇಡವೆಂಬುದನ್ನು ಪ್ರತಿಗಾಮಿತನವೆಂದು ತೀರ್ಮಾನಿಸಲು ಸಾಧ್ಯವಿಲ್ಲ. ಆದರೂ ಆರ್ಥಿಕ ಸ್ವಾವಲಂಬಿತನದ ಹಂಬಲ, ವರನ ಕಡೆಯವರ ದುರಾಶೆಯ ಬಗೆಗಿನ ಜಿಗುಪ್ಸೆ, ತನ್ನತನಕ್ಕೆ ಆಗಬಹುದಾದ ಅವಮಾನ, ಇದೆಲ್ಲಕ್ಕಿಂತಲೂ ಮಗುವನ್ನು ಅಗಲಲಾರದೆಯೇ ಅವಳು ಈ ಪ್ರಸ್ತಾಪವನ್ನು ತಿರಸ್ಕರಿಸುವುದು ಗಮನಾರ್ಹ. ಮದುವೆಯಾಗಲೊಪ್ಪಿದ್ದರೂ ವರದಕ್ಷಿಣೆಯನ್ನು ನೀಡುವುದು ಅವರಿಗೆ ಅಸಾಧ್ಯವಾಗಿತ್ತು ಎಂಬುದನ್ನೂ ಗಮನಿಸಿದರೆ, ವೈದೇಹಿಯದು ನಿರ್ಧಾರವೇ ಅಲ್ಲ. ಬಂದುದನ್ನು ಸ್ವೀಕರಿಸಬೇಕು ಎಂಬ ಧೋರಣೆಯಾಗಿ ತೋರುತ್ತದೆ.

'ಒಂದು ಗಿಣಿಯ ಕಥೆ' ಮತ್ತು 'ಒಂದು ಘಟನೆ ಮತ್ತು ಅನಂತರ' ಕಥೆಗಳಲ್ಲಿ ಅತ್ಯಾಚಾರಕ್ಕೆ ಬಲಿಯಾದ ಮಹಿಳೆಯರ ಸಮಸ್ಯೆಯಿದೆ. ಮೊದಲನೇ ಕಥೆಯಲ್ಲಿ, ನಿರಂಕುಶ ಸ್ವಭಾವದ, ಪುರುಷರತಿಯ, ಶ್ರೀಮಂತ ಮಾವನ ದಬ್ಬಾಳಿಕೆಯನ್ನು ವಿರೋಧಿಸುವ, ಬಡವರ ಮನೆಯಿಂದ ಬಂದ ಆತನ ಸೊಸೆ ಗೀತಾ,

ಮಾವನಿಂದಲೇ ವಂಚಿತಳಾಗಿ ಅತ್ಯಾಚಾರಕ್ಕೊಳಗಾಗುತ್ತಾಳೆ. ಪರಿಸ್ಥಿತಿ ಅರಿವಾದಾಗ ನಿದ್ರೆ ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆದರೆ ಸಾಯುವ ಮೊದಲು ಅವಳು ಬರೆದಿಟ್ಟಿದ್ದ ಪತ್ರದಿಂದ ತಂದೆಯ ನೀಚ ಕೃತ್ಯ ಅರಿತ ಮಗ, ಅದುವರೆಗೂ ತಂದೆಗೆ ಅಂಜುತ್ತಿದ್ದವನು ಈಗ ಸ್ವಾಭಿಮಾನದಿಂದ ಅವನ ಹಂಗನ್ನು ಧಿಕ್ಕರಿಸಿ ಸ್ವಾತಂತ್ರ್ಯದ ಹಾದಿಯತ್ತ ಹೊರಡುತ್ತಾನೆ. ಈ ಕಥೆಯಲ್ಲಿ ವಿಶೇಷ ರೀತಿಯ ತಂತ್ರ ಬಳಸಿ, ಡಾ। ಪ್ರಭುದೇವನ ಸ್ವಭಾವ, ಗೀತಾಳ ಬದುಕಿನ ಜೀವಂತಿಕೆಯ ಹಂಬಲ, ಆಸ್ತಿಯಾಸೆಯಿಂದ ಡಾಕ್ಟರನ ಹೀನತನವನ್ನೆಲ್ಲ ಸಹಿಸುವ ಮಗಳು-ಅಳಿಯರ ಸ್ವಾರ್ಥ- ಎಲ್ಲದಕ್ಕಿಂತ ಗೀತಾಳ ಗಂಡ ಸೋಮಸುಂದರನ ಭೋಳೆ ಅಂಜುಬುರುಕತನ ಎಲ್ಲವೂ ಗೀತಾಳನ್ನು ಪಂಜರದ ಗಿಣಿಯನ್ನಾಗಿ ಮಾಡಿರುವುದನ್ನು ದಟ್ಟವಾಗಿ ನಿರೂಪಿಸಲಾಗಿದೆ. ಪುರಂದರದಾಸರ ಪದದ ಸಾಲುಗಳೇ ಇಲ್ಲಿನ ಪಾತ್ರಗಳ ಸ್ಥಿತಿಯ ಪ್ರತೀಕಗಳಾಗುತ್ತವೆ. ಈ ದಬ್ಬಾಳಿಕೆಯ ವಿರುದ್ಧ ಹೊರಗೆ ಹೋಗುವ ಅವಕಾಶವೂ ಇರದ ಗೀತಾ ಆತ್ಮಹತ್ಯೆಯ ದಾರಿ ಹಿಡಿಯುತ್ತಾಳೆ. ಆದರೆ ಹಾಗೆ ಸತ್ತರೂ, ಪತಿಯಲ್ಲಿ ಸುಪ್ತವಾಗಿದ್ದ ಸ್ವಾಭಿಮಾನವನ್ನು ಜಾಗೃತಗೊಳಿಸಿ ಆ ಮೂಲಕ ಅವನು ಡಾಕ್ಟರನ ದೌರ್ಜನ್ಯವನ್ನು ಧಿಕ್ಕರಿಸುವಂತೆ ಮಾಡುತ್ತಾಳೆ. ಯಾವ ಸ್ವಾತಂತ್ರ್ಯಕ್ಕಾಗಿ ಅವಳು ಪ್ರಾಣ ತೆರುತ್ತಾಳೋ ಆ ಹಂಬಲ ಸೋಮಸುಂದರನಲ್ಲಿ ಮುಂದುವರೆಯುತ್ತದೆ.

‘ಒಂದು ಘಟನೆ....’ಯ ವ್ಯಾಪ್ತಿ ಇನ್ನೂ ಹಿರಿದು. ಇಲ್ಲಿ ಗಂಡ ಹೆಂಡತಿಯರಿಬ್ಬರೂ ಪರಿಸ್ಥಿತಿಯ ಬಂದಿಗಳಾಗಿದ್ದಾರೆ. ಸಮುದ್ರ ತೀರಕ್ಕೆ ವಿಹಾರ ಹೋದ ದಂಪತಿಗಳ ಮೇಲೆ ಗೂಂಡಾಗಳು ಆಕ್ರಮಣ ನಡೆಸಿ ಗಂಡನಿಗೆ ಚೂರಿ ತೋರಿಸಿ ಬಾಯಿ ಮುಚ್ಚಿಸಿ, ಹೆಂಡತಿಯ ಮೇಲೆ ಅತ್ಯಾಚಾರವೆಸಗುತ್ತಾರೆ. ಇಂತಹ ಘಟನೆಗಳು ಅನೇಕ ನಡೆಯುತ್ತಿದ್ದು ಚಲನ ಚಿತ್ರಗಳ ವಸ್ತುವೂ ಆಗಿವೆ. ಆದರೆ ಒಂದು ಉತ್ಕಟ ಆಪತ್ತಿನ ಸ್ಥಿತಿಯಲ್ಲಿ ನಿಜವಾಗಿ ಮನುಷ್ಯ ಹೇಗೆ ವರ್ತಿಸುತ್ತಾನೆ? ಎಂಬುದು ಆತನ ಅಥವಾ ಆಕೆಯ ಮನಸ್ಸಿನ ಸಂಸ್ಕಾರವನ್ನು ಅವಲಂಬಿಸಿರುವಂತೇ ಅವರಿರುವ ಪರಿಸರವನ್ನೂ ಅವಲಂಬಿಸಿರುತ್ತದೆ. ಈ ಅಂಶವನ್ನು ಪ್ರಸ್ತುತ ಕಥೆ ಪರೀಕ್ಷಿಸುತ್ತದೆ. ಹೀಗೆ ಇಲ್ಲಿ ಆ ಘಟನೆಗಿಂತಲೂ ಅದರ ಪರಿಣಾಮ ವ್ಯಕ್ತಿಗಳ ಸಂಬಂಧಗಳನ್ನು ಹೇಗೆ ಬದಲಾಯಿಸಬಲ್ಲದು ಎಂಬುದೇ ಮುಖ್ಯವಾಗುತ್ತದೆ. ಗೂಂಡಾಗಳ ಚೂರಿಗೇ ಹೆದರಿ ಪಲಾಯನ ಮಾಡಿದ ಗಂಡ ತನ್ನ ಪ್ರಾಣ, ತನ್ನ ಮಾನ, ಮುಂದಿನ ತನ್ನ ಬದುಕಿನ ಬಗ್ಗೆ ಚಿಂತಿಸುತ್ತಾನೆ. ಹೆಂಡತಿಯೊಂದಿಗೆ ಹಿಂದಿನಂತೆಯೇ ಪ್ರೀತಿಯಿಂದ ಬದುಕುವುದು ಅವನ ಮನಶ್ಯಕ್ತಿಗೆ ಮೀರಿದ ವಿಚಾರ. ಹಾಗೆಂದು ಪೋಲೀಸರಿಗೆ ದೂರು ಕೊಡಲೂ ಆತ ಸಿದ್ಧನಿಲ್ಲ. ಅವರಿವರ ಆಡಿಕೆಗೆ-ಗೇಲಿಗೆ ಗುರಿಯಾಗಬೇಕಾದೀತು ಎಂಬ ಅಂಜಿಕೆ. ಕೊನೆಗೆ ಯಾರಿಗೂ ತಿಳಿಯದಂತೆ, ಏನೂ ಆಗಿರದಂತೆ

ಹೆಂಡತಿಯನ್ನು ಮನೆಗೆ ಕರೆತರುತ್ತಾನೆ. ಆದರೆ ಮನೆಯೊಳಗೆ ಅವಳನ್ನು ಅಸ್ಪೃಶ್ಯಳಂತೆ ಹೀನಾಯವಾಗಿ ಕಾಣುತ್ತಾನೆ. ಅತ್ಯಾಚಾರ ನಡೆದಾಗ ಗಂಡನ ಹೇಡಿತನ, ಸ್ವಾರ್ಥ ಕಂಡು ಮೊದಲೇ ಜಿಗುಪ್ಸೆ ತಳೆದಿದ್ದ ಪತ್ನಿಗೆ ಈಗ ಆತನ ಆತ್ಮವಂಚಕತನದಿಂದ ಗೌರವದ ಲವಲೇಶವೂ ಇಲ್ಲವಾಗುತ್ತದೆ. ಇಂಥ ಬದುಕು ಅಸಹನೀಯವಾಗುತ್ತದೆ. ಅವಳು ಅವನನ್ನು ಧಿಕ್ಕರಿಸಿ, ಹೊರಟು ಹೊರ ಜಗತ್ತಿನಲ್ಲಿ ದಾರಿ ಹುಡುಕುತ್ತಾಳೆ. ಹೊರಡುವ ಮೊದಲು ಅವಳು ಬರೆದ ಪತ್ರ ಎರಡೇ ಸಾಲಿನದು:

'ನಮ್ಮ ಸಂಬಂಧ ನೆನ್ನೆಗೇ ಮುಗಿಯಿತು. ಯಾರ ಹಂಗೂ ಇಲ್ಲದೆ ಬದುಕಬೇಕೆಂದು ಹೊರಟಿದ್ದೇನೆ. ನನ್ನನ್ನು ಹುಡುಕುವ ಅಗತ್ಯವಿಲ್ಲ.' ಸಹಿಯ ಜಾಗದಲ್ಲಿ ಕರಿಮಣಿಸರವಿತ್ತು ಎಂಬ ಕಥೆಯ ಕೊನೆಯ ವಾಕ್ಯ ಈ ಕೌಟುಂಬಿಕ ಸಂಬಂಧದ ವಿಡಂಬನೆ ಮಾಡುತ್ತದೆ.

ಮೇಲಿನ ಕಥೆಗಳ ಪರಿಶೀಲನೆಯ ನಂತರ ಕೆಲವು ಪ್ರಚಲಿತ ಅಭಿಪ್ರಾಯಗಳನ್ನು ಗಮನಿಸುವುದು ಉಚಿತ: "ಮಹಿಳೆ ಹಳೆಯ ಪರಂಪರೆ ಹಾಗೂ ಹೊಸ ಸುಧಾರಣೆಗಳ ಮಧ್ಯೆ ಘರ್ಷಣೆಯಾದಾಗ ರಾಜಿ ಮಾಡಿಕೊಂಡು ಘರ್ಷಣೆಯನ್ನು ತಪ್ಪಿಸಿಕೊಳ್ಳುತ್ತಾಳೆ. ಪರಂಪರಾಗತವಾದ ನೈತಿಕ ಮೌಲ್ಯಗಳನ್ನು ಸ್ವೀಕರಿಸಲೂ ಆರದ ಬಿಡಲೂ ಆರದ ಅನಾಥ ಪ್ರಜ್ಞೆ ಸ್ತ್ರೀಸಾಹಿತ್ಯದಲ್ಲಿ ಕಂಡು ಬರುವುದಿಲ್ಲ." "ಭಾರತೀಯ ಮಹಿಳೆ ಎಷ್ಟೇ ಸುಧಾರಿಸಿದವಳಾದರೂ ಅವಳು ಕೆಲವು ಪರಂಪರಾಗತ ನೈತಿಕ ಮೌಲ್ಯಗಳಿಗೆ ಬದ್ಧಳು. ಪತಿನಿಷ್ಠೆ, ಅಪತ್ಯ ಪ್ರೇಮ, ಶೀಲ ರಕ್ಷಣೆ, ತನ್ನ ಕುಟುಂಬದ ಮರ್ಯಾದೆಯ ರಕ್ಷಣೆ ಇವುಗಳಿಗಾಗಿ ಯಾವ ಬೆಲೆಯನ್ನು ತೆರಲೂ ಅವಳು ಸಿದ್ಧಳು" ಮುಂತಾದ ಸಿದ್ಧಾಭಿಪ್ರಾಯಗಳಿವೆ.[16] ಮೇಲೆ ಪರಿಶೀಲಿಸಿದ ಕಥೆಗಳು, ಈ ತೀರ್ಪುಗಳೆಲ್ಲ ಸುಳ್ಳೆಂಬುದನ್ನು ಸಾಬೀತು ಪಡಿಸುತ್ತವೆ. ಇಂದಿನ ಸ್ಥಿತ್ಯಂತರದ ಸಮಾಜದಲ್ಲಿ ಎಲ್ಲ ಹಳೆಯ ಮೌಲ್ಯಗಳೂ ವಿಘಟನೆಯಾಗುತ್ತಿದ್ದು, ಸಾಮಾನ್ಯ ಸ್ತ್ರೀಯರೂ ಹೇಗೆ ಪರಿಸ್ಥಿತಿಯ ಸಂಕೀರ್ಣತೆಯಿಂದಾಗಿ ಅರಿತೋ ಅರಿಯದೆಯೋ, ಬದ್ಧತೆಯ ಹೊರಗೆ ಬರಲು ಯತ್ನಿಸುತ್ತಿದ್ದಾರೆ ಎಂಬುದನ್ನು ಬಹು ಸಮಂಜಸವಾಗಿ ಅನುಪಮಾ ತಮ್ಮ ಕಥೆಗಳ ಮೂಲಕ ಸಾರುತ್ತಿದ್ದಾರೆನಿಸುತ್ತದೆ. ಈ ಕಥೆಗಳ ನಾಯಕಿಯರಾದರೂ ವೀಣಾ ಶಾಂತೇಶ್ವರರ ಕಥೆಗಳ ಹಾಗೆ ಬುದ್ಧಿ ಜೀವಿಗಳಲ್ಲ. ಇವರು ಆಯ್ದುಕೊಳ್ಳುವ ದಾರಿಗಳೇ ಸರಿಯಾದದ್ದು, ಅದೇ ಸುಖದ ಹಾದಿ ಎಂಬ ಭ್ರಮೆಯೂ ಇಲ್ಲಿಲ್ಲ. ಬದಲಾಗಿ ಬದುಕು ಅನಂತ ಮುಖವಾಗಿ ಮುಂದುವರೆಯಲೇ ಬೇಕೆಂಬ ನಿಯತಿಯ ಪ್ರತೀಕ ಇಲ್ಲಿ ತೋರುತ್ತದೆ.

೩) ಎಂಥದೇ ಆಪತ್ತು ಬಂದರೂ ಅದರಿಂದ ಪಾರಾಗಲು ಯತ್ನಿಸುತ್ತಾ ಬದುಕಿಗೆ ಅತುಕೊಳ್ಳುವುದು ಜೀವಲೋಕದ ಮೂಲಭೂತ ಗುಣವಾದರೂ, ಎಲ್ಲ

ಪ್ರಾಣಿಗಳಲ್ಲಿ ತಾನು ಶ್ರೇಷ್ಠನೆಂದುಕೊಳ್ಳುವ ಮನುಷ್ಯ ನಾಗರಿಕನಾಗಿ ಸಭ್ಯನಾಗಿ ಅನೇಕ ಸಂಬಂಧ, ಮೌಲ್ಯಗಳನ್ನು ಬೆಳೆಸಿಕೊಂಡಿದ್ದಾನೆ. ಈ ಸಂಬಂಧಗಳು ಸಾವಿನೆದುರು ಹೇಗೆ ಶಿಥಿಲವಾಗಬಲ್ಲುದು ಎಂಬ ತಾತ್ವಿಕ ಜಿಜ್ಞಾಸೆ ಅನುಪಮಾ ಅವರ ಮೂರನೇ ಗುಂಪಿನ ಯಶಸ್ವೀ ಕಥೆಗಳ ತಿರುಳಾಗಿದೆ. 'ಕತ್ತಲು', 'ತಿರುಗು ಮುರುಗು' ಹಾಗೂ 'ಮೌನ' ಈ ದೃಷ್ಟಿಯಿಂದ ಮಹತ್ವದ ಕಥೆಗಳಾಗಿವೆ.

ಇದ್ದಕ್ಕಿದ್ದಂತೆ ದೃಷ್ಟಿ ಮಂದವಾಗಿ ಕಣ್ಣು ಕಾಣದಾದ ಬಡ ಶಾಲಾಮಾಸ್ತರನ ಬದುಕು, ಈ ಹೊಸ ಸ್ಥಿತಿಯಲ್ಲಿ ಹೇಗೆ ಅನೇಕ ಮಾನಸಿಕ ಯಾತನೆಗಳಿಗೆ ಆತನನ್ನು ಗುರಿಮಾಡುತ್ತದೆ ಎಂಬುದರ ಚಿತ್ರಣ 'ಕತ್ತಲು'. ಮನೆಗೆ ಪಾಠಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳು, ಮಾತಾಡಲು ಬರುತ್ತಿದ್ದ ಸಹೋದ್ಯೋಗಿಗಳು, ಕೆಲಸ ಎಲ್ಲ ನಿಂತಾಗ ಹೊರ ಜಗತ್ತಿನ ಸಂಪರ್ಕ ಪೂರ್ತಿ ತಪ್ಪುವಂತೆ ಮಾಡಿದ ಹೆಂಡತಿ, ಮಗ, ಆತನನ್ನು ಅವನ ಏಕಾಕಿತನ, ಅಸಹಾಯಕತೆ ಕತ್ತಲಿನಲ್ಲಿ ನರಳಲುಬಿಟ್ಟು, ತಮ್ಮ ಸುಖ ಅರಸಿ ಹೊರಗೆ ಹೋಗತೊಡಗುತ್ತಾರೆ. ಈ ಸ್ಥಿತಿಯಲ್ಲಿ ಹತಾಶೆಯಿಂದ ಆತ್ಮಹತ್ಯೆಗೆ ಯತ್ನಿಸುವ ಆತನನ್ನು ಮನೆಕೆಲಸದಾಕೆಯ ಮಗಳು ಪುಟ್ಟ ಹುಡುಗಿ ಸಿಂಗಿ ಮತ್ತೆ ಬದುಕಿಗೆ ಎಳೆದು ತರುವುದನ್ನು ಕಥೆ ಚಿತ್ರಿಸುತ್ತದೆ.

'ತಿರುಗು ಮುರುಗು'ವಿನಲ್ಲಿ ಹೃದಯಾಘಾತವಾಗಿ ಆಸ್ಪತ್ರೆ ಸೇರಿದ ತಂದೆ ಇನ್ನೇನು ಬದುಕುವುದೇ ಇಲ್ಲವೆಂಬುತ್ತಿದ್ದವನು ಬದುಕುತ್ತಾನೆ. ಅವನ ಸೇವೆ ಮಾಡಿ ಸೋತ ಹೆಂಡತಿ, ಮೊದಲ ಮಗ ಎಲ್ಲರೂ ಅಸಡ್ಡೆಯಿಂದ ಕಾಣುತ್ತಿದ್ದ ಮತ್ತೊಬ್ಬ ಮಗ ಇವರೆಲ್ಲರಿಗಾಗಿ ದುಡಿದು ದುಡಿದು ಹೃದಯಕ್ರಿಯೆ ನಿಲ್ಲುತ್ತದೆ. ವಯಸ್ಸಾಗಿ, ಅಸಹಾಯಕ ರೋಗಿಯಾದ ತಂದೆಯ ಮನಸ್ಸು, ತನ್ನ ಕಡೆಗೇ ತಿರುಗಿಕೊಂಡು, ಇತರರ ಪರಿಸ್ಥಿತಿಯ ಬಗ್ಗೆ ಕುರುಡಾಗಿ, ಕ್ರೂರ, ವಿಚಾರಕ್ಕೊಳಗಾಗುವ ಚಿತ್ರಣ ಇಲ್ಲಿವೆ. ತಂದೆಯ ಪ್ರಯೋಜಕತೆ ತೀರಿದ ಕೂಡಲೆ ಹೆಂಡತಿ ಮಕ್ಕಳ ಆಸಕ್ತಿ, ಗೌರವಗಳು ಕುಗ್ಗುವುದರ ನಿರೂಪಣೆ ಇದೆ. ಇವರೆಲ್ಲರ ಶೋಷಣೆಗೆ ಬಲಿಯಾಗಿ ಅಪಮೃತ್ಯು ವಿಗೀಡಾದ ಯುವಕನ ದುರಂತವಿದೆ. ಸಾವಿನ ನಿಗೂಢತೆ ಇಲ್ಲಿ ಹಣಿಕೆ ಹಾಕುತ್ತದೆ. ಅದರ ಬಳಿಯ ಬದುಕಿನ ಪ್ರಕ್ರಿಯೆ ಅನುಪಮಾರ ಮುಖ್ಯ ಕಾಳಜಿಯಾಗುತ್ತದೆ. ಈ ಅಂಶ 'ಮೌನ' ಕಥೆಯಲ್ಲಿ ಮತ್ತಷ್ಟು ಸ್ಪಷ್ಟವಾಗುತ್ತದೆ.

ಮೆದುಳಿನ ರಕ್ತಸ್ರಾವದಿಂದಾಗಿ ಪ್ರಜ್ಞೆ ತಪ್ಪಿದ ಮಹಿಳೆಯೊಬ್ಬಳ ಸುತ್ತ, ಆಕೆಯ ಕುಟುಂಬದವರ ಸಂಬಂಧಗಳಲ್ಲಾಗುವ ಪರಿವರ್ತನೆ ಈ ಕಥೆಯ ವಸ್ತು. ಮಾತಾಡದ, ಚಲಿಸದ ಆ ವೃದ್ಧೆ ತಾಯಿಗೆ ಟ್ಯೂಬ್ ಮೂಲಕ ದ್ರವಾಹಾರ ಯಾರಾದರೂ ಕಾಲಕಾಲಕ್ಕೆ ಸುರಿಯಬೇಕು, ಅವಳ ಮಲಮೂತ್ರಾದಿಗಳನ್ನು

ತೆಗೆಯಬೇಕು. ಈ ಕೆಲಸ ಮನೆಯವರ್‍ಯಾರೂ ಮಾಡಲಾರದಷ್ಟು ಅಸಹ್ಯ. ಹೇವರಿಕೆ. ಕೆಲಸದಾಕೆ ಸಿದ್ದವ್ವ ಇವನ್ನು ಪ್ರೀತಿಯಿಂದ ಮಾಡುವವಳು. ಜೀವಚ್ಛವದಂತಿರುವ ಹೆಂಡತಿ, ಮೊದಲು ಪತಿಯ ಪಾಲಿಗೆ ಎಷ್ಟೊಂದು ಪ್ರೀತಿಯ ಪತ್ನಿಯಾಗಿದ್ದರೂ. ಈಗ ಆತನಿಗೆ ಅವಳಿರುವ ಕೊಠಡಿಗೆ ಹೋಗಲೂ ಅಂಜಿಕೆ. 'ಅವಳು ಸತ್ತರೇ ವಾಸಿ'. 'ಛೇ ಸತ್ತರೆ ತಾನು ಒಂಟಿಯಾಗುವುದಿಲ್ಲವೇ. ದೇವರೇ ಅವಳನ್ನು ಬದುಕಿಸಲಿ' ಮುಂತಾಗಿ ಆತನ ಎಲ್ಲ ಯೋಚನೆಗಳೂ ತನ್ನ ಸುತ್ತಲೇ ತಿರುಗುತ್ತವೆ. ಆ ತಾಯಿಯ ಅಕ್ಕರೆಯಲ್ಲಿ ಬೆಳೆದ ಇಬ್ಬರು ಹೆಣ್ಣು ಮಕ್ಕಳು ಈಗ ಅವಳ ಬಳಿ ಬರಲೂ ಅಸಹ್ಯ, ಅಂಜಿಕೆ ಪಡುತ್ತಾರಾದರೂ ಅವಳ ಒಡವೆಗಳು, ಇನ್ಶೂರೆನ್ಸ್ ಪತ್ರಗಳಿಗಾಗಿ, ಅವಳಿನ್ನೂ ಬದುಕಿರುವಾಗಲೇ ಕಾದಾಡುತ್ತಾರೆ. ಹೀಗೆ ಶಾಶ್ವತವೆಂದುಕೊಂಡ ಕೌಟುಂಬಿಕ ಮೌಲ್ಯಗಳು. ಮನುಷ್ಯ ನಿಷ್ಪ್ರಯೋಜಕನಾದ ಕೂಡಲೆ ಆವಿಯಾಗಿ ಹೋದರೂ, ಅಶಾಶ್ವತವೆಂಬಂತಿದ್ದ ಒಡತಿ-ಸೇವಕಿ ಸಂಬಂಧದಲ್ಲಿ ಈ ಪ್ರೀತಿ, ಕೃತಜ್ಞತೆಗಳು ಇನ್ನೂ ಜೀವಂತವಿದ್ದು, ಮೇಲಿನ ಎಲ್ಲ ಸಂಬಂಧಗಳನ್ನೂ ಅದು ವಿಡಂಬಿಸುತ್ತದೆ. ಈ ದರ್ಶನವನ್ನು ನೇರವಾದ ನಿರೂಪಣೆಯ ಮೂಲಕ, ಆದರೆ ದಟ್ಟವಾದ ಬದುಕಿನ ಮಗ್ಗುಲುಗಳ ಪರಿಶೀಲನೆಯ ಮೂಲಕ ಹೇಳುವ ಯತ್ನ ಇಲ್ಲಿದೆ. ಮನಶ್ಶಾಸ್ತ್ರದ ಜ್ಞಾನ, ಜೀವನಾನುಭವ ಎಲ್ಲವನ್ನೂ ಬಳಸಿಕೊಂಡು ಸಮರ್ಥವಾಗಿ ಈ ವಿಚಾರವನ್ನು ತಲುಪಿಸುವಲ್ಲಿ ಅನುಪಮಾ ಪೂರ್ಣ ಯಶಸ್ವಿಯಾಗಿದ್ದಾರೆ. ಇತ್ತೀಚಿನ ಅವಧಿಯಲ್ಲಿ ಅವರು ಬರೆದಿರುವ 'ಚಕ್ರಗಳು', 'ಒಂದು ಘಟನೆ'.... ಹಾಗೆ ಇದೂ ಅವರ ಅತ್ಯುತ್ತಮ ಕಥೆಯಾಗಿದೆ.

ಆದರೂ ತಾಯಿಯ ಪ್ರೀತಿಯು ಒಂದು ಸ್ವೀಕೃತ ಮೌಲ್ಯವಾಗಿದ್ದು, ಪ್ರಸ್ತುತ ಕಥೆಯಲ್ಲಿ ತಾಯಿ ಜಡವಾಗಿರುವುದರಿಂದ, ಬದುಕಿನ ವಾಸ್ತವದ ಎದುರು ಆಕೆಯು ಕುಟುಂಬದ ಸಲುವಾಗಿ ಹೊಂದಿರಬಹುದಾದ ಸಂಬಂಧ ಶೋಧಿತವಾಗುವುದಿಲ್ಲ ಎಂಬುದು ಈ ಕಥೆಯ ಮಿತಿಯೂ ಆಗಿದೆ. ಈ ರೀತಿಯಲ್ಲಿ ಬದುಕಿನ ಮೌಲ್ಯ ಶೋಧನೆಗೂ ಮಿತಿಯೊದಗಿದಂತಾಗಿದೆ.

ಈ ವರೆಗೆ ಪರೀಕ್ಷಿಸಿದ ಕಥೆಗಳಷ್ಟೇ ಅಲ್ಲ: 'ಹೊಗೆ', 'ಸೊನ್ನೆ'. 'ಪುಷ್ಪಕ'. 'ದಾಹ', 'ಪೆಟ್ಟಿಗೆ', 'ಸಖ್ಯ', 'ಬೇಟೆ' ಮುಂತಾದ ಅನೇಕ ಸುಂದರ ಹಾಗೂ ವಿಚಾರ ಬೋಧಕ ಕಥೆಗಳನ್ನು ಅನುಪಮಾ ರಚಿಸಿದ್ದಾರೆ.

ಈ ಎಲ್ಲ ಕಥೆಗಳಲ್ಲಿ ಅವರ ಮೊದಲ ನಿಷ್ಠೆ ಹಾಗೂ ಕೊನೆಯದೂ ಕೂಡ ಬದುಕಿನ ವಾಸ್ತವ ಚಿತ್ರಣ ಹಾಗೂ ಆ ವಾಸ್ತವದ ವಿಶ್ಲೇಷಣೆ. ಅದಕ್ಕಾಗಿ ಸರಳವಾದ ನಿರಾಡಂಬರವಾದ ನಿರೂಪಣೆ. ಭಾಷೆ, ಶೈಲಿಗಳನ್ನು ಅವರು ರೂಪಿಸಿಕೊಂಡಿದ್ದಾರೆ.

ಅವರ ಭಾಷೆಯು ನಿರಾಡಂಬರತೆ, ಅದನ್ನು ಸೂಕ್ಷ್ಮವಾಗಿ ಗಮನಿಸದಿದ್ದರೆ ಕಥೆ ಗಾರಿಕೆಯೇ ತೆಳುವೇನೋ ಎನ್ನಿಸಿಬಿಡಬಹುದು. ಆದರೆ ವಸ್ತುತಃ ಹಾಗಿಲ್ಲ. ಬುದ್ಧಿ ಭಾವಗಳ ಸಮತೋಲ ಕಾಯ್ದುಕೊಂಡ ಆಳವಾದ ಧ್ವನಿಯುಳ್ಳ ತಮ್ಮದೇ ಆದ ಭಾಷೆ ಯನ್ನು ಅವರು ರೂಪಿಸಿಕೊಂಡಿದ್ದಾರೆ. ಅದು ನವೋದಯದ ಶೈಲಿ ಹೇಗೋ ಹಾಗೆಯೇ ಪ್ರಗತಿಶೀಲ, ನವ್ಯ, ನವ್ಯೋತ್ತರ ಶೈಲಿಗಳಿಂದ ಉತ್ತಮಾಂಶಗಳನ್ನು ಸ್ವೀಕರಿಸುತ್ತಾ ಬೆಳೆದಿರುವ ಶೈಲಿಯಾಗಿದೆ.

ತಂತ್ರದ ದೃಷ್ಟಿಯಿಂದ ಕೂಡ ಅನುಪಮಾ, ಕಥೆಯ ಉದ್ದೇಶಿತ ವಸ್ತುವನ್ನು ಜನರಿಗೆ ತಲುಪಿಸಲು, ಚೆನ್ನಾಗಿ ತಲುಪಿಸಲು ಮಾತ್ರ ತಾಂತ್ರಿಕ ಪ್ರಯೋಗಗಳನ್ನು ಮಾಡಿದ್ದಾರೆಯೇ ಹೊರತು ತಂತ್ರಕ್ಕಾಗಿ, ಅದರ ನಾವೀನ್ಯತೆಗಾಗಿ ಅಲ್ಲ. ಅರ್ಥಾತ್ ಭಾಷೆ,ತಂತ್ರ, ಶೈಲಿ ಎಲ್ಲವೂ ಲೇಖಕಿಯು ಉದ್ದೇಶಿಸಿರುವ ವಿಷಯದ ಪ್ರತಿಪಾದನೆಗೆ ಪೂರಕವಾಗುತ್ತವೆಯೇ ಹೊರತು, ಕಥನಕಲೆಯ ಪ್ರಕ್ರಿಯೆಯೊಳಗೇ ಸತ್ಯವೊಂದರ ಶೋಧನೆಗೆ ಯತ್ನಿಸುವ ರೀತಿಯಲ್ಲಿಲ್ಲ.

ಬದುಕಿನ ನಿರಂತರತೆ, ಅದಕ್ಕಾಗಿ ಜೀವಿಗಳ ಹೋರಾಟ, ಈ ಹೋರಾಟ ದಲ್ಲಿನ ವಿವಿಧ ನೋವುಗಳ ಮೂಲವನ್ನು, ಪರಿಸರದ ವಾಸ್ತವಾಂಶಗಳ ಮೂಲಕ ಕಾರ್ಯ-ಕಾರಣಗಳನ್ನು ಹುಡುಕುತ್ತಾ ತರ್ಕಬದ್ಧವೆನಿಸುವಂತೆ ನಿರೂಪಿಸುವುದೇ ಇಲ್ಲಿನ ಬಹುಮುಖ್ಯ ಕಾಳಜಿ. ವೈದ್ಯರಾಗಿ ರೋಗನಿಧಾನ ಕೈಗೊಳ್ಳುವ ಮನೋಧರ್ಮ ದಿಂದಲೇ ಅನುಪಮಾ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ವೀಕ್ಷಿಸಿ, ಎಚ್ಚರಿಸಲು ಯತ್ನಿಸುತ್ತಾರೆ. ವಸ್ತು ನಿರಪೇಕ್ಷವಾದ ಅಮೂರ್ತ, ಭಾವತೀವ್ರತೆ, ತಾತ್ವಿಕ ಜಿಜ್ಞಾಸೆ ಗಳಿಗಿಂತಲೂ ವಸ್ತುಲೋಕದ ಜಿಜ್ಞಾಸೆಯೇ ಅವರಲ್ಲಿ ಪ್ರಧಾನ ಮೃತ್ಯುವಿನ ನಿಗೂಢತೆ ಗಿಂತಲೂ ಮೃತ್ಯು ಬದಿಯಲ್ಲಿಟ್ಟುಕೊಂಡು ಸಾಗುವ ಬದುಕಿನ ಪ್ರಕ್ರಿಯೆ ಅವರಲ್ಲಿ ಕುತೂಹಲ ಕೆರಳಿಸುತ್ತದೆ. ಮಹತ್ವಾಕಾಂಕ್ಷಿಗಳ ವ್ಯತಿರೇಕಗಳುಳ್ಳ ಬದುಕುಗಳಿಗಿಂತ ಸಾಧಾರಣ ಜನರ, ದೈನಂದಿನ ಬದುಕಿನ ಜಂಜಡ, ಉಳಿವಿಗಾಗಿ ಜೀವಿಗಳು ನಡೆಸುವ ಹೋರಾಟದ ವಾಸ್ತವಲೋಕ ಇದು. ವಾಸ್ತವದ ಈ ಬಗೆಯ ವಿಶ್ಲೇಷಣೆಯನ್ನು ಅವರ ತಲೆಮಾರಿನ ಇತರ ಲೇಖಕಿಯರ ಸಣ್ಣಕಥೆಗಳಲ್ಲಿ ಕಾಣುವುದು ಕಷ್ಟ. ಅದ್ದರಿಂದ ಸಣ್ಣಕತೆಯ ಕ್ಷೇತ್ರಕ್ಕೆ ಅನುಪಮಾ ಅವರ ವಿಶಿಷ್ಟ ಕಾಣಿಕೆ ವಾಸ್ತವದ ದರ್ಶನವೆನ್ನ ಬಹುದು.

ಟಿಪ್ಪಣಿಗಳು:

1. ಗೀತಾ ದೇಸಾಯಿ : "ಆಧುನಿಕ ಮಹಿಳಾ ಕಥಾಸಾಹಿತ್ಯದಲ್ಲಿ ಸಮಕಾಲೀನ ಪ್ರಜ್ಞೆ", ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ/ಕನ್ನಡ ಸಾಹಿತ್ಯ ಪರಿಷತ್ತು/ಬೆಂಗಳೂರು/೧೯೮೨/ ಪುಟ ೨೦೦.
2. ಹೇಮಲತಾ ಮಹಿಷಿ : "ಸಣ್ಣಕಥೆ"/ಲೇಖಕಿಯರ ಸಾಹಿತ್ಯ ೭೫ ವರ್ಷಗಳಲ್ಲಿ / ಕರ್ನಾಟಕ ಲೇಖಕಿಯರ ಸಂಘ / ಬೆಂಗಳೂರು / ೧೯೮೭ / ಪುಟ ೪೪.
3. ಗಿರಡ್ಡಿ ಗೋವಿಂದರಾಜ : "ಸಣ್ಣ ಕಥೆಯ ಹೊಸ ಒಲವುಗಳು"/ಸಾಹಿತ್ಯ ಭಂಡಾರ/ಹುಬ್ಬಳ್ಳಿ, ೧೯೭೮. ಪುಟ ೧೦೭, ೮೭ ಮತ್ತು ೧೧೫.

4 & 5. ವೀಣಾ ಶಾಂತೇಶ್ವರ : "ಮಹಿಳೆಯರ ಬರಹಗಳಲ್ಲಿ ವೈಚಾರಿಕತೆ". / ಮಹಿಳೆ ಮತ್ತು ಕನ್ನಡ ಸಾಹಿತ್ಯ / ಬೆಂಗಳೂರು ವಿಶ್ವವಿದ್ಯಾಲಯ / ಬೆಂಗಳೂರು. ೧೯೭೯. ಪುಟ ೫೧.

6. ಡಾ। ಅನುಪಮಾ ನಿರಂಜನ : "ನೆನಪು ಸಿಹಿ-ಕಹಿ" (ಆತ್ಮಕಥನ) / ಡಿ. ವಿ. ಕೆ. ಮೂರ್ತಿ / ಮೈಸೂರು ೧೯೮೫. ಪುಟ ೪೭–೬೫
7. ನಿರಂಜನ : "ಬುದ್ಧಿ ಭಾವ ಬದುಕು". / ಸ್ಪಂದನ ಪ್ರಕಾಶನ / ಬೆಂಗಳೂರು / ೧೯೮೪ ಪುಟ ೫೪
8. ಡಾ। ಅನುಪಮಾ ನಿರಂಜನ : ಪೂರ್ವೋಕ್ತ. ಪುಟ ೬೭
9. ಚದುರಂಗ : ಮುನ್ನುಡಿ / ಕಣ್ಮಣಿ (ಕಥಾಸಂಕಲನ) / ಡಿ. ವಿ. ಕೆ. ಮೂರ್ತಿ / ಮೈಸೂರು ೧೯೭೨ (ದ್ವಿ. ಮು) ಪುಟ ೧೩
10. ಗಿರಡ್ಡಿ ಗೋವಿಂದರಾಜ : "ಕನ್ನಡ ಕಾದಂಬರಿಕಾರ್ತಿಯರಲ್ಲಿ ವಸ್ತು ನಿರ್ವಹಣೆ" / ಮಹಿಳೆ ಮತ್ತು ಕನ್ನಡ ಸಾಹಿತ್ಯ. (ಪೂರ್ವೋಕ್ತ) ಪುಟ ೨೯–೩೧
    ಹಾಗೂ
    ಎಸ್. ವಿ. ಭಾಗ್ಯಲಕ್ಷ್ಮಿ : "ಕನ್ನಡ ಬರಹಗಾರ್ತಿಯರಲ್ಲಿ ಸಂಸ್ಕೃತಿಯ ಚಿತ್ರಣ" / ಮಹಿಳೆ ಮತ್ತು ಕನ್ನಡ ಸಾಹಿತ್ಯ. (ಪೂರ್ವೋಕ್ತ). ಪುಟ ೪೩
11. ಡಾ। ಅನುಪಮಾ ನಿರಂಜನ : "ಸಣ್ಣಕಥೆ" / ಹೊಂಬೆಳಕು / ಕರ್ನಾಟಕ ಲೇಖಕಿಯರ ಸಂಘ / ಬೆಂಗಳೂರು / ೧೯೮೭ ಪುಟ ೮೫
12. ಕಣ್ಮಣಿ. / ಪೂರ್ವೋಕ್ತ. ಪುಟ ೬೦–೬೧
13. ಒಂದು ಗಿಣಿಯ ಕಥೆ (ಕಥಾಸಂಕಲನ) / ಡಿ. ವಿ. ಕೆ. ಮೂರ್ತಿ. / ಮೈಸೂರು / ೧೯೮೩ ಪುಟ ೮೭
14. ಕಣ್ಮಣಿ / ಪೂರ್ವೋಕ್ತ. ಪುಟ ೭೩
15. "ರೂವಾರಿಯ ಲಕ್ಷ್ಮಿ" (ಕಥಾಸಂಕಲನ) ಡಿ. ವಿ. ಕೆ. ಮೂರ್ತಿ / ಮೈಸೂರು / ೧೯೭೯ (ತೃತೀಯ ಮುದ್ರಣ) ಪುಟ ೯೦
16. ಗೀತಾ ದೇಸಾಯಿ : ಪೂರ್ವೋಕ್ತ. ಪುಟ ೩೦೫–೬

ಅನುಪಮಾ ಅವರ ಮಕ್ಕಳ ಸಾಹಿತ್ಯ

- ಸರಸ್ವತಿ ಪೂಜಾರ

"ಪುಟ್ಟ ಪುಟ್ಟ ಹೆಜ್ಜೆ ಇಡುವ ಮಗು ಮನೆಗೆ ಮಾಣಿಕ್ಯ
ತೊದಲ ಮಾತಿನಲ್ಲಿ ಲೋಕಜ್ಞಾನ ಪಡೆವ ಜಾಣಾಕ್ಷ"

ಹೀಗೆ ತೊದಲು ಮಾತನಾಡುವಾಗಲೇ ತನ್ನ ಸುತ್ತಲಿನ ಪರಿಸರವನ್ನರಿಯ ಬೇಕೆಂಬ ಹಂಬಲವುಳ್ಳ ಮಕ್ಕಳ ಅದಮ್ಯ ಕುತೂಹಲ ಕೆರಳಿಸಿ, ಅವರಲ್ಲಿ ಮೊಳೆಯು ತ್ತಿರುವ ಸುಪ್ತಭಾವನೆಗಳನ್ನು ಪ್ರಚೋದಿಸಿ, ಅವರ ಮುಗ್ಧ ಮನಸ್ಸನ್ನರಳಿಸಿ ಶಿಕ್ಷಣ ನೀಡುವಲ್ಲಿ ಕಥೆಗಳಿಗೆ ಪ್ರಥಮ ಸ್ಥಾನ. ಬದುಕಿನ ಆಗುಹೋಗುಗಳಿಗೆ ಸ್ಪಂದಿಸಬಲ್ಲ ವ್ಯಕ್ತಿತ್ವವನ್ನು ನಿರೂಪಿಸುವುದು ಹಿರಿಯರ ಕರ್ತವ್ಯಗಳಲ್ಲಿ ಅತಿ ಮುಖ್ಯವಾಗಿದೆ. ಮಕ್ಕಳ ಮಾನಸಿಕ ವಿಕಾಸಕ್ಕೆ ಪೂರಕವಾದ ಕೆಲಸ ಅಂದಿನಿಂದ ಇಂದಿನವರೆಗೂ ನಡೆದಿದೆ. ಪ್ರಸನ್ನ ಮನಸ್ಸು ಏನೆಲ್ಲ ಸಾಧಿಸಬಲ್ಲ ಸಾಮರ್ಥ್ಯ ಹೊಂದಿರುವುದನ್ನು ನಮ್ಮ ಪೂರ್ವಿಕರು ಗುರುತಿಸಿದ್ದರು.

"ಪ್ರಾಚೀನ ಕಾಲದಲ್ಲಿ ಚಾರಣ ಕವಿಗಳು ಊರಿಂದ ಊರಿಗೆ ಸಂಚರಿಸಿ ಕಥನ ಕವನಗಳನ್ನು ಹಾಡುತ್ತಾ ಮಕ್ಕಳ ಮನಸ್ಸನ್ನು ರಂಜಿಸುತ್ತಿದ್ದರು. ಜರ್ಮನಿಯಲ್ಲಿ ಇಂತಹ ಕವಿಗಳು ಹೇರಳವಾಗಿದ್ದರು."

"ಮೊಟ್ಟ ಮೊದಲು ಲ್ಯಾಟಿನ್ ಭಾಷೆಯಲ್ಲಿ ಮಕ್ಕಳಿಗಾಗಿ ಗ್ರಂಥ ರಚಿಸಿದವನು ಇಂಗ್ಲೆಂಡಿನ ಉಪಾಧ್ಯಾಯ ಬೀಡ್ ಎಂಬಾತ. ಕ್ಯಾಂಟರ್‌ಬರಿಯ ಆರ್ಚ್ ಬಿಷಪ್ ಆನ್ ಸಲ್ಮೆ ಮಕ್ಕಳಿಗಾಗಿ ಸಾಮಾನ್ಯ ತಿಳುವಳಿಕೆ ನೀಡುವ ವಿಶ್ವಕೋಶ ವನ್ನು ರಚಿಸಿದನು" (ಕನ್ನಡ ವಿಶ್ವಕೋಶ ಸಂ. ೧೨, ಪು. ೯೭೭).

೧೫ನೆಯ ಶತಮಾನದಲ್ಲಿ ಮುದ್ರಣ ರೂಢಿಗೆ ಬಂದ ಕೂಡಲೇ ಈಸೋಪನ ನೀತಿ ಕಥೆಗಳು, ಸ್ವಿಫ್ಟ್ ಬರೆದ 'ಗಲೀವ್ಹರ್‌ನ ಪ್ರವಾಸಗಳು', ಡೀಫೊ ಬರೆದ 'ರಾಬಿನ್ಸನ್ ಕ್ರೂಸೊ', ಫ್ರಾನ್ಸಿನಲ್ಲಿ 'ಸಿಂಡ್ರೆಲ್ಲಾ' ಜನ್ಮ ತಳೆದವು. ಪರ್ಶಿಯನ್ ಭಾಷೆಯ 'ಸಾವಿರದೊಂದು ರಾತ್ರಿ' ಕಥೆಗಳು, 'ಆಲೀಬಾಬಾ ಮತ್ತು ನಲವತ್ತು ಕಳ್ಳರು', 'ಅಲ್ಲಾವುದ್ದೀನನ ಅದ್ಭುತದೀಪ' ಮುಂತಾದ ಕಥೆಗಳು ಜಗತ್ತಿನ ಇತರ ಭಾಷೆಗಳಿಗೂ ಅನುವಾದಗೊಂಡು ಜನಪ್ರಿಯತೆ ಗಳಿಸಿದವು.

ಮಕ್ಕಳ ಕಥೆಗಳಲ್ಲಿ ಜಗತ್ತಿನಲ್ಲಿಯೇ ಪ್ರಸಿದ್ಧವಾದ ಡೆನ್ಮಾರ್ಕಿನ ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್‌ಸನ್ ಅವರ ಕಥೆಗಳು ಇಡೀ ಯುರೋಪಿನ ತುಂಬ ಜನ-ಪ್ರಿಯತೆ ಗಳಿಸಿದವು.

ಪೂರ್ವಕಾಲದಿಂದ ಭಾರತದಲ್ಲಿ ಸಂಸ್ಕೃತ ಮೂಲದ 'ಪಂಚತಂತ್ರ', 'ಹಿತೋಪದೇಶ' ಕಥೆಗಳು ಭಾರತದಲ್ಲಿ ಅಷ್ಟೇ ಅಲ್ಲ ಇತರ ದೇಶದ ಭಾಷೆಗಳಲ್ಲಿರುವುದು ಅವುಗಳ ಜನಪ್ರಿಯತೆಗೆ ಸಾಕ್ಷಿ.

ಕಥೆಯೆಂದರೆ ಎಲ್ಲ ಮಕ್ಕಳ ಕಿವಿ ಚುರುಕಾಗುತ್ತವೆ. ಸಂಜೆ ಹೊತ್ತು ಊಟದ ನಂತರ ಕಥೆ ಹೇಳಜ್ಜಿ, ಕಥೆ ಹೇಳಮ್ಮ ಎಂದು ಪೀಡಿಸಿ ಕಥೆ ಕೇಳಿದ ನಂತರವೇ ನಿದ್ರಿಸುವ ಕುತೂಹಲವುಳ್ಳ ಮಕ್ಕಳು ಮನೆ ಮನೆಯಲ್ಲೂ ಉಂಟು. ಅನುಪಮಾ ಅವರ ಮಕ್ಕಳೂ ಈ ರೀತಿ ಪೀಡಿಸಿದ್ದಕ್ಕೆ ಅವರಿಂದ ೩೬೫ ಕಥೆಗಳು ಹೊರಬರಲು ಸಾಧ್ಯವಾಯ್ತು.

ವೃತ್ತಿಯಿಂದ ವೈದ್ಯರಾದ ಅನುಪಮಾ ಅವರು ವೈಜ್ಞಾನಿಕ, ಕಥೆ, ಕಾದಂಬರಿ, ಪ್ರವಾಸ ಮುಂತಾದ ಕ್ಷೇತ್ರಗಳಲ್ಲಿ ಕೈಯಾಡಿಸಿದ್ದು, ಮಕ್ಕಳ ಕಥೆಗಳಿಗೂ ಕೈಚಾಚಿದ್ದಾರೆ. ೧೨ ಸಂಪುಟಗಳಲ್ಲಿ ೩೬೫ ಕಥೆಗಳನ್ನು ದಿನಕ್ಕೊಂದು ಹೇಳುತ್ತ ಮಕ್ಕಳನ್ನು ರಂಜಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ. ಒಟ್ಟು ಕಥೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು:

ಅತಿಮಾನುಷ ಕಥೆಗಳು ೪೫	ಅದ್ಭುತ ರಮ್ಯ ಕಥೆಗಳು ೫೮
ಬುದ್ಧಿವಂತಿಕೆಯ ಕಥೆಗಳು ೬೦	ನೀತಿ ಕಥೆಗಳು ೯೬
ವಾಸ್ತವಿಕ ಕಥೆಗಳು ೪೦	ಪೌರಾಣಿಕ ಕಥೆಗಳು ೪೨
ಸಾಹಸ ಕಥೆಗಳು ೯	ಐತಿಹಾಸಿಕ ಕಥೆಗಳು ೭
ಹಾಸ್ಯ ಕಥೆಗಳು ೬	ವೈಜ್ಞಾನಿಕ ಕಥೆಗಳು ೨

ಒಟ್ಟು ಸಂಖ್ಯೆಯಲ್ಲಿ ನೀತಿಯ ಕಥೆಗಳೇ ಹೆಚ್ಚು. ಮಕ್ಕಳ ಮನಸ್ಸು ಏನೂ ಬರೆಯದ ಪಾಟಿ ಇದ್ದಂತೆ. ಯಾವುದನ್ನು ಅದರ ಮೇಲೆ ಬಿಂಬಿಸುತ್ತೇವೆಯೋ ಅದು ಜೀವನದುದ್ದಕ್ಕೂ ಉಳಿಯಬಲ್ಲದು. ಚಿಕ್ಕ ವಯಸ್ಸಿನಲ್ಲಿ ಹೇಳಿದ್ದನ್ನು ಒಪ್ಪಿಕೊಳ್ಳುವ, ನಂಬುವ ಆಜ್ಞಾಧಾರಕ ಮನಸ್ಸು ಇರುವುದರಿಂದ ನೀತಿಯ ಬೇರು ಆಳಕ್ಕಿಳಿದು ಬಾಳು ಭದ್ರವಾಗಬಲ್ಲದೆಂಬುದನ್ನು ಅರಿತ ಅನುಪಮಾ ಅವರು ತಮ್ಮ ಕಥಾಮಾಲಿಕೆಯಲ್ಲಿ ಇಂತಹ ಕಥೆಗಳನ್ನು ಹೆಚ್ಚು ಸೇರಿಸಿದ್ದು ಉಚಿತವಾಗಿದೆ. ಇಂದು ನಾಗರಿಕತೆಯ ಮೆಟ್ಟಿಲನ್ನು ಏರುತ್ತಿರುವ ಮಾನವ ನೀತಿಯ ನೆಲೆಯಿಂದ ದೂರ ಸರಿಯುತ್ತಿರುವ ಈ ಕಾಲಕ್ಕೆ ಇಂತಹ ಕಥೆಗಳನ್ನು ಎಷ್ಟು ಹೇಳಿದರೂ ಕಡಿಮೆಯೆ. ಈ ಕಥೆಗಳಲ್ಲಿ ಹೆಚ್ಚು ಆಕರ್ಷಕವಾದ ಅಂಶವೆಂದರೆ ಹೆಚ್ಚಿನ ನೀತಿಯ ಕಥೆಗಳೆಲ್ಲ ಪ್ರಾಣಿ-ಪಕ್ಷಿಗಳಿಂದ ಕೂಡಿರುವಂಥವು. ಮಕ್ಕಳ ಮನೋರಾಜ್ಯದಲ್ಲಿ ಪ್ರಾಣಿಗಳೂ ಮಾತನಾಡಬಲ್ಲವು. ತಮ್ಮ ಸುತ್ತ

ಮುತ್ತಲಿನ ಕಾಗೆ, ಗುಬ್ಬಿ, ನಾಯಿ, ನರಿ, ಪಾರಿವಾಳ, ಒಂಟೆ, ಕುರಿ, ಜಿಂಕೆ, ಆನೆ, ಕತ್ತೆ ಮುಂತಾದ ಪ್ರಾಣಿಗಳ ಬಗ್ಗೆ ಕಥೆ ಕೇಳುವುದೆಂದರೆ ಮಕ್ಕಳಿಗೆ ಬಲು ಇಷ್ಟ. ಕೊಂಬು, ಬಾಲವುಳ್ಳ ಪ್ರಾಣಿಗಳ ಮೂಲಕ ರಂಜಿಸಿ ನೇರವಾಗಿ ನೀತಿ ಹೇಳುವುದೇ ಆದರೂ ಅನುಪಮಾ ಅವರು ಕಥೆ ಹೇಳುವುದು ಮಕ್ಕಳಿಗೆ ಅರ್ಥವಾಗುವ ಸಣ್ಣ ಸಣ್ಣ ವಾಕ್ಯಗಳಲ್ಲಿ. ಕಥೆಯ ಗಾತ್ರ ಕೂಡ ಚಿಕ್ಕದಾದರೂ ಮೂಲ ಆಶಯಕ್ಕೆ ಎಲ್ಲಿಯೂ ಭಂಗ ಉಂಟಾಗಿಲ್ಲ. ಇಂತಹ ಕಥೆಗಳನ್ನು ನೆನಪಿನಲ್ಲಿಡುವುದು ಬಹು ಸುಲಭ. ಉದಾ:- 'ಮೂರ್ಖ ದನ'—"ಪುರಾತನ ಕಾಲದಲ್ಲಿ ದನ ಒಂದು ನಕ್ಷತ್ರವಾಗಿತ್ತು. ಆಲಸಿಯಾದ ಮನುಷ್ಯ ಹೊಟ್ಟೆಪಾಡಿಗಾಗಿ ತೊಂದರೆ ಪಡುತ್ತಿದ್ದ. ದೇವರು ಮನುಷ್ಯನ ಸಹಾಯಕ್ಕಾಗಿ ದನ ನಕ್ಷತ್ರವನ್ನು ಕರೆದು ಭೂಲೋಕಕ್ಕೆ ಹೋಗಿ, 'ಕಷ್ಟಪಟ್ಟು ದುಡಿಯಿರಿ, ಮೂರು ದಿನಕ್ಕೊಮ್ಮೆ ಊಟ ಮಾಡಿರಿ' ಎಂದು ಮಾನವರಿಗೆ ಹೇಳಿ ಬರಲು ತಿಳಿಸಿದನಂತೆ. ಆಗ ದನ ನಕ್ಷತ್ರ ಭೂಲೋಕಕ್ಕೆ ಬಂದು 'ಕಷ್ಟಪಟ್ಟು ದುಡಿಯಿರಿ ಮತ್ತು ಮೂರು ಹೊತ್ತು ಊಟ ಮಾಡಿರಿ' ಎಂದು ಹೇಳಿತಂತೆ. ಇದನ್ನು ಕೇಳಿ ಹಸಿದ ಮಾನವನಿಗೆ ಸಂತೋಷವಾಯಿತು. ದನ ನಕ್ಷತ್ರ ತಿರುಗಿ ದೇವಲೋಕಕ್ಕೆ ಬಂದು 'ಕಷ್ಟಪಟ್ಟು ದುಡಿಯಿರಿ. ದಿನಕ್ಕೆ ಮೂರು ಹೊತ್ತು ಊಟ ಮಾಡಿರಿ' ಎಂದು ಹೇಳಿ ಬಂದೆ ಎಂದಾಗ ಅದರ ಮರೆವೆಗೆ ಬೈದು, 'ಆ ಮಾತಿಗೆ ತಪ್ಪುವ ಹಾಗಿಲ್ಲ. ನೀನು ಹೋಗಿ ಮಾನವನಿಗೆ ಸಹಾಯ ಮಾಡು' ಎಂದು ದೇವರು ಹೇಳಿದನಂತೆ. ಅಂದಿನಿಂದ ದನ ಭೂಲೋಕಕ್ಕೆ ಬಂತು. ಜನ ಸುಖವಾಗಿದ್ದಾರೆ."

ಈ ಕಥೆಯನ್ನು ಕೇಳುವ ಮಗು ದನದ ಮರೆವೆಗೆ ನಕ್ಕು ತಾನು ಮಾಡಿದ ತಪ್ಪಿಗೆ ಶಿಕ್ಷೆ ಎನ್ನುವಂತೆ ಇಂದಿಗೂ ಕಷ್ಟಪಡುತ್ತಿದೆ ಎಂಬುದನ್ನು ತುಂಬಾ ಸರಳವಾಗಿ ಅರ್ಥ ಮಾಡಿಕೊಳ್ಳುವುದರ ಜೊತೆಗೆ ವ್ಯಕ್ತಿ ಸದಾಕಾಲ ಜಾಗರೂಕನಾಗಿ ಕಾರ್ಯ ನಿರ್ವಹಿಸಬೇಕು. ಇಲ್ಲದೆ ಹೋದರೆ ತೊಂದರೆ ತಪ್ಪಿದ್ದಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುತ್ತದೆ. ಚಿಕ್ಕ ಮಕ್ಕಳಲ್ಲಿ ಜಾಗರೂಕತೆ ತುಂಬಾ ಕಡಿಮೆ. ಇಂತಹ ಕಥೆ ಆ ವಯಸ್ಸಿಗೆ ಅಷ್ಟೇ ಅಲ್ಲ ಇಡೀ ಜೀವಮಾನದುದ್ದಕ್ಕೂ ನೆನಪಿಡಬೇಕಾದ ಸಂಗತಿಯಾಗುತ್ತದೆ.

ಹೀಗೆ ಪ್ರಾಣಿಗಳ ಮೂಲಕ ಮಕ್ಕಳನ್ನು ರಂಜಿಸುತ್ತ ಅವರ ಕಲ್ಪನಾಶಕ್ತಿಯನ್ನು ಹಿಗ್ಗಿಸಲು ಕಾಡಿನಿಂದ ಇನ್ನೂ ದೂರದ ಪ್ರದೇಶಗಳಿಗೆ ಕರೆದೊಯ್ಯುತ್ತಾರೆ. ಅವರ ಮನದ ಒಳತೋಟಿಯನ್ನು ತೆರೆದು ಆಕಾಶಕ್ಕೆ ಹಾರುವ, ಏಳು ಸಮುದ್ರವನ್ನು ದಾಟಬಲ್ಲ, ಒಕ್ಕಣ್ಣ ರಾಕ್ಷಸ, ಮಂತ್ರಗಾತಿ ಮುದುಕಿ, ಮಂತ್ರದಂಡ, ಮಂತ್ರದ ಉಂಗುರ ಮುಂತಾದ ವಸ್ತುಗಳಿಂದ ಅದ್ಭುತರಮ್ಯವಾದ ಲೋಕವನ್ನೇ ತೋರಿಸುತ್ತಾರೆ. ಸುಮಾರು ೫೦ ಕಥೆಗಳನ್ನು ಸ್ವಾರಸ್ಯಕರವಾದ ರೀತಿಯಲ್ಲಿ ಹೇಳುವಾಗ ಪ್ರತಿಯೊಬ್ಬ

ಮಗು ತನ್ನ ಮೈಯೆಲ್ಲ ಕಣ್ಣಾಗಿಸಿಕೊಂಡು ಆ ರಾಕ್ಷಸನನ್ನೋ, ಮಾಂತ್ರಿಕ ದಂಡವನ್ನೋ ನೋಡುವ ಕುತೂಹಲಿಗನಾಗಿ ಅವುಗಳ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ತಾನು ಕಂಡರಿಯದ ವಿಷಯಗಳತ್ತ ಕುತೂಹಲ ಕೆರಳುವುದು ಜೀವನದುದ್ದಕ್ಕೂ ಚೈತನ್ಯದ ಚಿಲುಮೆಯಾಗಬಲ್ಲದು.

ಅದ್ಭುತ ರಮ್ಯ ಜಗತ್ತಿನ ದರ್ಶನ ಮಾಡಿಸುತ್ತ ಆಕಾಶಕಾಯರಾದ ಕಿನ್ನರರನ್ನು ತೋರಿಸಲು ಮರೆತಿಲ್ಲ. ವಾಸ್ತವಿಕ ಬದುಕಿನ ವೈಭವದ ರಾಜ-ರಾಣಿಯರನ್ನು, ದುಷ್ಟ ಬುದ್ಧಿಯ ಮಲತಾಯಿಯನ್ನು, ಆದರ್ಶದ ಅಣ್ಣ-ತಂಗಿಯರು ಮುಂತಾದ ೪೦ ವಾಸ್ತವಿಕ ಕಥೆಗಳಿಂದ ಬದುಕಿನ ನೈಜ ಚಿತ್ರಣವನ್ನು ಕೊಡುತ್ತಾರೆ.

ಮನುಷ್ಯನ ಜೀವನದಲ್ಲಿ ಹೆಚ್ಚು ಉಪಯೋಗಕಾರಿಯಾದದ್ದು ಅವನ ಬುದ್ಧಿವಂತಿಕೆ. ಮಕ್ಕಳ ಬುದ್ಧಿಗೆ ವ್ಯಾಯಾಮ ಒದಗಿಸುವ ೬೦ ಕಥೆಗಳನ್ನು ರಸವತ್ತಾಗಿ ಹೇಳುತ್ತಾರೆ. ಉದಾ:- 'ನೀರಿನೊಳಗೆ ಒಂದು ರಾತ್ರಿ'-ಈ ಕಥೆಯಲ್ಲಿ ಅಕಬರ-ಬೀರಬಲ ವಾಯುವಿಹಾರಕ್ಕೆ ಹೋದಾಗ ಕೊಳದಲ್ಲಿ ಕೈ ಹಾಕಿ ಇಷ್ಟು ತಂಪಾದ ನೀರಿನಲ್ಲಿ ಒಂದು ರಾತ್ರಿ ಕೂಡಬಹುದೆ? ಎಂದಾಗ ಹಣ ಕೊಟ್ಟರೆ ಜನರು ಏನನ್ನಾದರೂ ಮಾಡಿಯಾರು ಎಂದು ಬೀರಬಲ ನುಡಿದನಂತೆ. ಒಂದು ರಾತ್ರಿ ಕೊರೆವ ಚಳಿಯಲ್ಲಿ ಆ ಕೊಳದ ನೀರಿನಲ್ಲಿ ಕುಳಿತವರಿಗೆ ೧೦೦ ವರಹ ಕೊಡುವುದಾಗಿ ಅಕಬರ ಹೇಳಿದನಂತೆ. ಒಬ್ಬ ಭಿಕ್ಷುಕ ಕುಳಿತು ಮರುದಿನ ಹಣಕ್ಕಾಗಿ ಬಂದ. ರಾಜ "ಅಷ್ಟೊಂದು ತಂಪಾದ ನೀರಿನಲ್ಲಿ ಅದು ಹೇಗೆ ಕುಳಿತೆ"? ಎಂದಾಗ "ಎದುರಿನ ದೀಪದ ಕಂಬ ನೋಡುತ್ತ ಕುಳಿತೆ" ಎಂದು ಭಿಕ್ಷುಕ ಉತ್ತರಿಸಿದನಂತೆ. ಹಾಗಾದರೆ ನಿನಗೆ ಕಂಬದಿಂದ ಶಾಖ ದೊರಕಿರಬಹುದೆಂದು ಹೇಳಿ ಹಣ ಕೊಡದೆ ಕಳಿಸಿದ. ಆತ ಬೀರಬಲ ಬಳಿ ಬಂದು ಹೇಳಿದ. ಬೀರಬಲ ಹಣ ಕೊಡಿಸುವುದಾಗಿ ಹೇಳಿ ಭಿಕ್ಷುಕನನ್ನು ಸಮಾಧಾನಪಡಿಸಿ ಕಳಿಸಿದನಂತೆ. ಒಂದು ಗಿಡಕ್ಕೆ ಒಂದು ಪಾತ್ರೆಕಟ್ಟಿ ಕೆಳಗೆ ಉರಿ ಹಚ್ಚುತ್ತ ಕುಳಿತ. ಅಕಬರ ಎಷ್ಟು ಸಲ ಕರೆಕಳಿಸಿದರೂ "ಅನ್ನ ಆಗಿಲ್ಲ, ಅನ್ನ ಆದ ಮೇಲೆ ಊಟ ಮಾಡಿ ಬರುತ್ತೇನೆ" ಎಂದು ಬೀರಬಲ ಹೇಳಿ ಕಳಿಸಿದನಂತೆ. ತುಂಬಾ ಹೊತ್ತಾಗಲು ರಾಜನೇ ಎದ್ದು ಅಲ್ಲಿಗೆ ಹೋಗಿ ನೋಡಲಾಗಿ ಅಷ್ಟೊಂದು ಎತ್ತರದ ಮೇಲಿನ ಅಕ್ಕಿ ಕುದಿಯುವುದು ಹ್ಯಾಗೆ? ಎಂಥ ಮೂರ್ಖ ಎಂದಾಗ "ಕೊಳದ ಬದಿಯ ದೀಪದ ಕಂಬದಿಂದ ಕೊಳದಲ್ಲಿರುವವನಿಗೆ ಶಾಖ ಬರುವುದಾದರೆ ಈ ಗಿಡಕ್ಕೆ ಕಟ್ಟಿದ ಪಾತ್ರೆಯಲ್ಲಿನ ಅಕ್ಕಿ ಕೆಳಗೆ ಹಚ್ಚಿದ ಉರಿಯಿಂದ ಬೇಯಬಹುದಲ್ಲ!" ಎಂದು ನುಡಿದ ಬೀರಬಲನ ಜಾಣ್ಮೆಗೆ ಮೆಚ್ಚಿ ಭಿಕ್ಷುಕನಿಗೆ ನೂರು ವರಹಗಳನ್ನು ಕೊಟ್ಟು ಕಳಿಸಿದನಂತೆ.

ಹೀಗೆ ಬುದ್ಧಿವಂತಿಕೆಯಿಂದ ಮನುಷ್ಯ ಏನೆಲ್ಲ ಗೆಲ್ಲಬಲ್ಲ, ಬದುಕನ್ನು ಸುಂದರಗೊಳಿಸಿಕೊಳ್ಳಬಲ್ಲ ಎಂಬುದನ್ನು ಇಂತಹ ಅನೇಕ ಹಾಸ್ಯದಿಂದ ಕೂಡಿದ

ಅಕಬರ-ಬೀರಬಲ, ತೆನಾಲಿ ರಾಮಕೃಷ್ಣ ಮತ್ತು ಪ್ರಾಣಿಗಳ ಕಥೆಗಳನ್ನು ಬಳಸಿದ್ದಾರೆ. ಇಂತಹ ಕಥೆಗಳು ಮಕ್ಕಳ ಬುದ್ಧಿಯನ್ನು ಚುರುಕುಗೊಳಿಸಿ ವೈಚಾರಿಕತೆಯನ್ನು ಬೆಳೆಸಿಕೊಳ್ಳಲು ಸಹಾಯಕವಾಗಬಲ್ಲವು.

ಬದುಕಿನಲ್ಲಿ ಬರುವ ಕಷ್ಟ-ಕಾರ್ಪಣ್ಯ, ದುಃಖಿದುಮ್ಮಾನ, ದುಷ್ಟರ ದೌರ್ಜನ್ಯ ನೀಗಲು ಬುದ್ಧಿವಂತಿಕೆಯೊಂದಿಗೆ ದೈಹಿಕಬಲ, ಧೈರ್ಯ ಮುಖ್ಯ ಎಂಬುದನ್ನು ಸಾಹಸ ಕಥೆಗಳ ಮೂಲಕ ಮನದಟ್ಟು ಮಾಡಿಸುತ್ತಾರೆ. ಸಾಹಸ ಕಥೆಗಳನ್ನು ತಾಯಿಯಿಂದ ಕೇಳಿದ್ದರಿಂದಲೇ ಶಿವಾಜಿಯಲ್ಲಿ ಧೈರ್ಯ, ಛಲ, ಚಾತುರ್ಯ ಬೆಳೆದು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ವ್ಯಕ್ತಿತ್ವ ನಿರ್ಮಾಣವಾಯಿತು. ಈ ಮಾತನ್ನು ಅನುಪಮಾ ಮರೆತಿಲ್ಲ.

ಮಾನವನ ಬದುಕನ್ನು ನಿಯಂತ್ರಿಸಲು ಯಾವುದೋ ಒಂದು ವಿಶಿಷ್ಟ ಶಕ್ತಿ ನಿಸರ್ಗದಲ್ಲಿ ಉಂಟು ಎಂಬುದನ್ನು ಅನೇಕ ಪೌರಾಣಿಕ ಕಥೆಗಳಿಂದ ಸ್ಪಷ್ಟಪಡಿಸುತ್ತಾರೆ. ಬಾಲಕ ಮಾರ್ಕಂಡೇಯನ ಕಥೆ ಕೇಳಿದ ಮಗುವಿನಲ್ಲಿ ಅವನಂತೆ ಅಚಲವಾದ ನಂಬುಗೆಯಿಂದ ಅಸಾಧ್ಯವಾದುದನ್ನು ಸಾಧಿಸಬಲ್ಲೆನೆಂಬ ಆತ್ಮವಿಶ್ವಾಸ ಮೂಡುತ್ತದೆ.

ನಗು ಮನುಷ್ಯನಿಗೆ ದೇವರು ಕೊಟ್ಟ ವರ. ಅದು ಇರದಿದ್ದರೆ ಬಾಳು ಬರಡಾಗಿ ಹೋಗುತ್ತಿತ್ತು. "ನಕ್ಕರೆ ನಗೆ ಅದೇ ಸ್ವರ್ಗ" ಎನ್ನುವ ಬೀಚಿಯವರ ಮಾತಿನಂತೆ ನೇರವಾಗಿ ನೀತಿಯನ್ನು ಹೇಳದೆ ನಕ್ಕು ನಗಿಸಿ ನೀತಿಯನ್ನು ಕಲಿಸಲು ಪ್ರಯತ್ನಿಸಿದ್ದಾರೆ. ಸಾಹಿತ್ಯದ ಉದ್ದೇಶವೇ ನಗಿಸಿ ನೀತಿಯನ್ನು ಕಲಿಸುವುದಿರುವಾಗ ಹೆಚ್ಚಿನ ಕಥೆಗಳಲ್ಲಿ ನಗೆ ಇದ್ದೇ ಇದೆ. ಆದರೆ ತೆನಾಲಿ ರಾಮಕೃಷ್ಣನಂಥ ನಗೆಗಾರನನ್ನು ಮಕ್ಕಳಿಗೆ ತೋರಿಸಿ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಾರೆ.

ವೈಜ್ಞಾನಿಕ ದೃಷ್ಟಿ ಬೆಳೆಯಲು ಒಂದೆರಡು ವೈಜ್ಞಾನಿಕ ಕಥೆಗಳನ್ನು ಹೇಳಿದ್ದುಂಟು.

ಏನೆಲ್ಲ ಮಾಡಿದರೂ ಮಕ್ಕಳ ಮನಸ್ಸನ್ನು ಸಮಾಧಾನ ಪಡಿಸುವುದು ಬಲು ಕಷ್ಟ. ಅಳುವ ಮಗುವಿಗೆ ಸಮಾಧಾನ ಪಡಿಸಲು ಸರ್ಕಸ್ಸಿನ ಆನೆಯನ್ನು ತೋರಿಸಿದರೆ ಆನೆಯನ್ನು ಚೀಲದಲ್ಲಿ ತುರಿಸು ಎಂದಳುವ ಮಗುವನ್ನು ಸಮಾಧಾನ ಪಡಿಸುವುದೆಂತು? ಆಕಾಶದ ಚಂದ್ರನನ್ನು ಕೈಗೆ ಕೊಡುವುದೆಂತು? ವೈದ್ಯರಾದ ಅನುಪಮಾ ಅವರು ಮಕ್ಕಳ ಮನೋರೋಗಕ್ಕೆ ತುಂಬಾ ಪ್ರಯೋಜನಕಾರಿಯಾದ ಔಷಧಿಯನ್ನು ಕಥೆಯ ರೂಪದಲ್ಲಿ ಕೊಟ್ಟು ಮಕ್ಕಳು ನಕ್ಕು ನಲಿಯುವಂತೆ ಮಾಡಿದ್ದಾರೆ.

ಪುರಾಣ, ಇತಿಹಾಸ, ಪಂಚತಂತ್ರ, ಈಸೋಪನ ನೀತಿ ಕಥೆಗಳು, ರಾಮಾಯಣ-ಮಹಾಭಾರತಗಳಲ್ಲದೆ ಪಾಶ್ಚಾತ್ಯ ದೇಶದ ವರೆಗೂ ಕೈಚಾಚಿದ ಇವರ ಕಥೆಗಳ ವೈಶಿಷ್ಟ್ಯವೆಂದರೆ ಹಿರಿದಾದ ಕಥೆಗಳನ್ನು ಅವುಗಳ ಮೂಲದ ಆಶಯಕ್ಕೆ ಭಂಗ ಬರದಂತೆ ಲಲಿತ ಮನೋಹರವಾದ ರೀತಿಯಲ್ಲಿ ಚಿಕ್ಕದಾಗಿ ನಿರೂಪಿಸುವ ಸುಂದರ ಶೈಲಿ ಇವರದು. ೨-೩ ನಿಮಿಷಗಳಲ್ಲೇ ಮುಗಿಯುವ ಹಲವಾರು ಕಥೆಗಳು ಚಂಚಲ ಮನಸ್ಸಿನ ಮಕ್ಕಳಿಗೆ ಭಾವಗೀತೆಯಂತೆ ಪರಿಣಾಮ ಬೀರಿ ಅವರ ಮಾನಸಿಕ, ಬೌದ್ಧಿಕ ಬೆಳವಣಿಗೆಗೆ ಸಹಾಯಕವಾಗುತ್ತವೆ.

ಈ ಮಾಲಿಕೆಯ ಇನ್ನೊಂದು ವೈಶಿಷ್ಟ್ಯವೆಂದರೆ ಚೈತ್ರ-ವೈಶಾಖ-ಜೇಷ್ಠ ಎಂದು ವರ್ಷದ ೧೨ ತಿಂಗಳುಗಳ ಹೆಸರನ್ನಿರಿಸಿರುವುದು. ಜೊತೆಗೆ ಪ್ರತಿಯೊಂದು ಕಥೆಗೆ ಚಿತ್ರಗಳನ್ನು ಬರೆಸಿರುವುದರಿಂದ ಮಕ್ಕಳಿಗೆ ಕಥೆ ಇನ್ನೂ ಹತ್ತಿರವಾಗಿ ಸಹಜವಾಗಿ ಗ್ರಹಿಸಲು ಅನುಕೂಲಕರವಾಗಿವೆ.

ಅದರಂತೆ ಇವರ ಒಂದೊಂದು ಸಂಪುಟದಲ್ಲಿ ಬರುವ ಕಥೆಗಳೆಲ್ಲ ಒಂದೇ ವರ್ಗಕ್ಕೆ ಸೇರಲಾರದೆ ಮಕ್ಕಳ ಮನಸ್ಸನ್ನು ಭೂಮಿಯಿಂದ ಆಕಾಶಕ್ಕೆ-ಆಕಾಶದಿಂದ ಭೂಮಿಗೆ- ಅಲ್ಲಿಯ ಕಾಡು-ಕಾಡಿನಿಂದ ಮತ್ತೆ ನಾಡಿಗೆ-ರಾಜನ ಆಸ್ಥಾನಕ್ಕೆ ಹೀಗೆ ಭಿನ್ನ-ಭಿನ್ನ ಆಶಯಗಳುಳ್ಳ ಕಥೆಗಳಿಂದ ಮಕ್ಕಳನ್ನು ಮಾತ್ರವಲ್ಲದೆ ಮುದುಕರನ್ನೂ ರಂಜಿಸುವ ಸಾಮರ್ಥ್ಯ ಇವರ ಕಥೆಗಳಿಗೆ ಇದೆ. ಇವರ ಕಥೆಗಳ ಮತ್ತೊಂದು ವೈಶಿಷ್ಟ್ಯವೆಂದರೆ ಹೆಚ್ಚಿನ ಸಂಖ್ಯೆಯ ಕಥೆಗಳೆಲ್ಲಾ ಒಂದಾನೊಂದು ಊರು........... ಒಂದಾನೊಂದು ಕಾಡು............... ಒಂದೂರಿನಲ್ಲಿ ಒಬ್ಬ ರಾಜ...............ಎಂದು ಪ್ರಾರಂಭವಾಗಿ ಕೊನೆಯಲ್ಲಿ ಅವರು ಸುಖವಾಗಿದ್ದರು ಎಂದು ಸುಖಾಂತಗೊಳ್ಳುವ ಅನೇಕ ಕಥೆಗಳು ಜನಪದ ಮೂಲದವುಗಳಾಗಿವೆ. ಜನಪದವನ್ನು ಮಕ್ಕಳಿಗಾಗಿ ಪುನರ್ ನಿರೂಪಿಸುವುದರ ಜೊತೆಗೆ ಮಕ್ಕಳ ಮಾನಸಿಕ ಸ್ವಾಸ್ಥ್ಯಕ್ಕೆ ಒಳ್ಳೆಯ ಆಯಾಮ ಒದಗಿಸಬಲ್ಲ ಸಾಕಷ್ಟು ಕಥೆಗಳು. ಇಂತಹ ಸಾವಿರಾರು ಕಥೆಗಳು ತಲೆತಲಾಂತರದಿಂದ ಸ್ವಾರಸ್ಯ ಕಳೆದುಕೊಳ್ಳದೆ ಬದುಕಿ ಉಳಿದಿವೆ. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಕೂಡ ಮಕ್ಕಳ ಮನಸ್ಸನ್ನರಳಿಸಿ ಉಲ್ಲಾಸದಿಂದ ಕುಣಿಸುವ ಶಕ್ತಿ ಈ ಕಥೆಗಳಿಗಿದೆ. ಮಕ್ಕಳ ಮನಸ್ಸು ಕಲ್ಪನಾತೀತವಾದುದು. ಅವರ ಕಲ್ಪನೆಯಲ್ಲಿ ಅವಾಸ್ತವ ವಾಸ್ತವ ವಾಗಬಲ್ಲದು. ಅಸಾಧ್ಯವಾದದ್ದು ಸಾಧ್ಯವಾಗಬಲ್ಲದು. ಆಕಾಶಕ್ಕೆ ನೆಗೆಯುವ, ಸಮುದ್ರವನ್ನು ಲಂಘಿಸುವ ರಕ್ಕಸನನ್ನು ಕೊಲ್ಲುವ ಸಾಹಸಕ್ಕೆ ಮನಸ್ಸು ಮಾಡುವ, ಬುದ್ಧಿಗೆ ಕಸರತ್ತು ಮಾಡಿಸುವ ಈ ಕಥೆಗಳು ಉದ್ದೇಶಪೂರ್ವಕವಾಗಿ ಹುಟ್ಟಿರದಿದ್ದರೂ ಪರಿಣಾಮ ಫಲಪ್ರದವಾಗಿದೆ.

ಮಾನವನಿಗೆ ತನ್ನ ವಂಶದ ಕುಡಿ ಬೆಳೆದು ಒಳ್ಳೆಯ ಬಾಳನ್ನು ಬಾಳ ಬೇಕೆಂಬುದು ಕಾಲಾತೀತವಾದ ಬಯಕೆ. ಈ ಬಯಕೆಗೆ ಭೌಗೋಳಿಕ ಮೇರೆ ಇಲ್ಲ.

ಜಗತ್ತಿನ ಯಾವ ಮೂಲೆಯಲ್ಲಿ ಬದುಕಿದರೂ ಮಾನವ ಪ್ರವೃತ್ತಿ ಒಂದೇ ತೆರನಾಗಿರುವುದರಿಂದ ಪ್ರಪಂಚದ ಅನೇಕ ಕಥೆಗಳು ಹೆಚ್ಚು ಕಡಿಮೆ ಒಂದನ್ನೊಂದು ಹೋಲುತ್ತವೆ. ಇಂತಹ ಅನೇಕ ಕಥೆಗಳು ಈ ಕಥಾಮಾಲಿಕೆಯಲ್ಲಿ ಮೂಡಿಬಂದಿವೆ.

ಅನುಪಮಾ ಅವರು ಈ ಕ್ಷೇತ್ರದಲ್ಲಿ ಇಷ್ಟೊಂದು ಕೃಷಿ ಮಾಡಿದ್ದು ಹೆಮ್ಮೆಯ ವಿಷಯ. ಮಕ್ಕಳ ಉತ್ಸಾಹವನ್ನು ಪೂರ್ತಿಗೊಳಿಸುವ ಈ ಕಥೆಗಳಲ್ಲಿ ವೈಜ್ಞಾನಿಕ ಕಥೆಗಳು ಒಂದೆರಡು ಮಾತ್ರ ಇವೆ. ಅತ್ತ ಕಡೆಗೆ ಹೆಚ್ಚು ಗಮನ ಹರಿಸಿಲ್ಲ. ವೈಜ್ಞಾನಿಕ ಹಿನ್ನೆಲೆಯುಳ್ಳ ಅನುಪಮಾ ಅವರು ಸುಲಭವಾಗಿ ವೈಜ್ಞಾನಿಕ ಕಥೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಹೆಣೆಯಬಹುದಿತ್ತು. ಅದರಿಂದ ಹೆಚ್ಚಿನ ಪ್ರಯೋಜನ ಮಕ್ಕಳಿಗೆ ಲಭಿಸುತ್ತಿತ್ತು.

'ದಿನಕ್ಕೊಂದು ಕಥೆ' ಎಂಬ ಶೀರ್ಷಿಕೆ ಹೊತ್ತ ಈ ಕಥಾಮಾಲಿಕೆಯ ಕೆಲವು ಸಂಪುಟಗಳಲ್ಲಿ ೩೨, ೩೬ ಕಥೆಗಳಿರುವುದರಿಂದ ತಿಂಗಳಿನ ದಿನಗಳಿಗೆ ಹೊಂದಾಣಿಕೆ ಕಂಡುಬರುವುದಿಲ್ಲ.

ಏನೇ ಇದ್ದರೂ ಈ ಕೃತಿಗಳು ಕಲೆಗಳುಳ್ಳ ಪೂರ್ಣ ಚಂದಿರನಂತೆ ದೋಷಗಳು ಇಲ್ಲಿ ಗೌಣವಾಗುತ್ತವೆ. ಒಟ್ಟಿನಲ್ಲಿ ಇವರ ಕಥೆಗಳು ಗಾತ್ರದಲ್ಲಿ ಕಿರಿದಾಗಿದ್ದು ಹಿರಿದಾದ ಪರಿಣಾಮವನ್ನು ಬೀರುತ್ತವೆ. ಹೆಚ್ಚು ಕಥೆಗಳು ಪಂದ್ಯದ ಕುದುರೆಯಂತೆ ಗುರಿಯತ್ತ ಓಡಿದರೂ ಹಾಸ್ಯ, ಕರುಣೆ, ಬೀಭತ್ಸ, ಶಾಂತಿ ಮುಂತಾದ ರಸಗಳ ಹೂರಣ ಮಕ್ಕಳ ಮನಸ್ಸನ್ನು ಆಕರ್ಷಿಸಿ ಅವರಿಗರಿವಿಲ್ಲದಂತೆ ಸಂಸ್ಕಾರಗೊಳಿಸುತ್ತವೆ.

ಈ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯ ಪಿತಾಮಹ ಪಂಜೆ ಮಂಗೇಶರಾಯರು, ಎಂ. ಎಸ್. ಪುಟ್ಟಣ್ಣ, ಕುವೆಂಪು, ಶಿವರಾಮ ಕಾರಂತ, ಜಿ. ಪಿ. ರಾಜರತ್ನಂ, ಮೇವುಂಡಿ ಮಲ್ಲಾರಿ, ಭಾರದ್ವಾಜ, ದೇವುಡು, ನಾ ಕಸ್ತೂರಿ, ಹೊಯ್ಸಳ, ಬಿ. ಎಸ್. ಪಾಂಡುರಂಗರಾವ, ಬಿ. ಶಂಕರ ಭಟ್ಟ, ಬಿ. ದಾಮೋದರ, ಬಿ. ಎಂ. ಶರ್ಮಾ ಮತ್ತು ಸಿಸು ಸಂಗಮೇಶ ಮುಂತಾದವರು ಸಾಕಷ್ಟು ಕೃಷಿ ಮಾಡಿದ್ದಾರಲ್ಲದೆ ವಿಜ್ಞಾನವನ್ನು ಕಥಾರೂಪದಲ್ಲಿ ನೀಡುತ್ತಿರುವ ಬಿ.ಎಸ್. ರುಕ್ಕಮ್ಮ, ಪಿ.ವ್ಹಿ. ಚಂದ್ರಶೇಖರ, ಪ್ರಹ್ಲಾದ ರಾಯರು, ಮತ್ತು ಪದ್ಮಾ ನಾಡಿಗರ ಮುಂತಾದವರ ಸೇವೆ ಅಪೂರ್ವವಾಗಿದೆ. ೩೬೫ ಕಥೆಗಳನ್ನು ಕನ್ನಡ ಕುವರರಿಗೆ ನೀಡಿದ ಅನುಪಮಾ ಸ್ತುತ್ಯಾರ್ಹರು. ಸಣ್ಣ ಕಥೆ, ಕಾದಂಬರಿಯತ್ತ ಹೆಚ್ಚು ಒಲವುಳ್ಳ ಮಹಿಳೆಯರು ಮಕ್ಕಳ ಸಾಹಿತ್ಯದ ಕಡೆಗೆ ಗಮನ ಹರಿಸಿಲ್ಲ. ಈ ಮಾತು ಭಾರತಕ್ಕೆ ಮಾತ್ರವಲ್ಲ ವಿಶ್ವ ಸಾಹಿತ್ಯ ಕ್ಷೇತ್ರದಲ್ಲಿ ಈ ಕೊರಕಲು ಕಂಡು ಬರುತ್ತದೆ. ಹೆಚ್ಚು ಸಂಖ್ಯೆಯಲ್ಲಿ ಪರಿಣಾಮಕಾರೀ ಮಕ್ಕಳ ಕಥೆಗಳನ್ನು ನೀಡಿದ ಅನುಪಮಾ ಅವರಿಗೆ ಕನ್ನಡ ಕುಲಕೋಟಿ ಎಷ್ಟು ಅಭಿನಂದಿಸಿದರೂ ಕಡಿಮೆಯೆ.

ಗ್ರಂಥ ಋಣ

೧. **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ**
ರಾಜ್ಯ ಸಾಹಿತ್ಯ ಅಕಾಡೆಮಿ
ಬೆಂಗಳೂರು–೧೯೭೩

೨. **ಕನ್ನಡ ವಿಶ್ವಕೋಶ** ಸಂಪುಟ ೧೨

೩. **ಎಂ. ವಿ. ಸೀತಾರಾಮಯ್ಯ**
ಮಕ್ಕಳ ಸಾಹಿತ್ಯ (ಸಂಪಾದಿತ)
ವಿಶ್ವ ಕನ್ನಡ ಸಾಹಿತ್ಯ ಮೇಳ–೧೯೮೩

೪. **ಡಾ। ವರದರಾಜ ಹುಯಿಲಗೋಳ**
ಪಂಚತಂತ್ರದ ಕಥೆಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೧೯೭೩

೫. **ಶಿವರಾಮ ಕಾರಂತ**
ಬಿಡಿ ಬರಹಗಳು
ಅಕ್ಷರ ಪ್ರಕಾಶನ, ಸಾಗರ–೧೯೭೨

ಡಾ| ಅನುಪಮಾರವರ ರೇಡಿಯೋ ಬರಹಗಳು

- ವಸುಂಧರಾ ಶ್ರೀಧರ

ನಾನು ಟೇಪುಗಳನ್ನು ಮುದ್ರಿಸುವಾಗ - ಮುದ್ರಿಸಿದ್ದಕ್ಕೆ ಕತ್ತರಿ ಹಾಕುವಾಗಲೆಲ್ಲಾ ಈ ಮಾಧ್ಯಮದ ಬರಹಗಳ ಬಗ್ಗೆ ಆಗಾಗ್ಗೆ ಯೋಚಿಸುವುದುಂಟು. ಪತ್ರಿಕೆಗೆ ಬರೆಯುವುದಕ್ಕೂ ನಮ್ಮ ರೇಡಿಯೋಕ್ಕೆ ಬರೆಯುವುದಕ್ಕೂ ಸಾಕಷ್ಟು ಅಂತರವಿದೆ. ಕಥೆಯಾಗಲಿ, ರೂಪಕವಾಗಲಿ, ನಾಟಕವಾಗಲಿ - ಲೇಖನ ಅಥವಾ ಭಾಷಣವಾಗಲಿ ಬರೆಯುವಾಗ ಕೇಳುಗನನ್ನು ಮನಸಿನಲ್ಲಿ ಇಟ್ಟುಕೊಂಡು ಬರೆಯಬೇಕಾಗುತ್ತದೆ. ಕೆಲವು ಪ್ರಮುಖ ಅಂಶಗಳೆಂದರೆ ಆಡು ಭಾಷೆಯ ಬಳಕೆ, ಕುತೂಹಲವನ್ನು ಕೆರಳಿಸಿ ಸಮಾಧಾನ ನೀಡುವ ತಂತ್ರದ ಅರಿವು, ಅಬ್ಬರವಿರದೇ ಸರಳ ಪದಗಳ ಪ್ರಯೋಗ ಬೇಕು. ಪೂರ್ವಸಿದ್ಧತೆಯಂತೂ ಯಾವಾಗಲೂ ಉತ್ತಮ ಫಲಿತಾಂಶವನ್ನು ಕೊಡುತ್ತದೆ. ರೇಡಿಯೋಕ್ಕೆ ಬೇಕಾದ ಅಂದರೆ effective ಧ್ವನಿಯೊಂದಿಗೆ ಈ ಮಾಧ್ಯಮಕ್ಕೆ ಹೊಂದುವಂತೆ ಬರೆಯುವವರಲ್ಲಿ ಅನುಪಮಾ ಅವರೂ ಒಬ್ಬರು.

ಅವರ ಕ್ಷೇತ್ರವಾದ ಕಥೆ ಹೇಳುವುದರಲ್ಲಿ ಅನುಪಮಾರವರು ನಮ್ಮ ಶ್ರೋತೃಗಳ ಮನಸ್ಸನ್ನು ಗೆದ್ದಿದ್ದಾರೆ. ಕಥೆ ಬರೆಯುವುದಷ್ಟೇ ಅಲ್ಲದೇ ಹೇಳುವ ಅಂದರೆ ಓದುವಾಗಿನ ಶೈಲಿ ಇಲ್ಲಿ ಬಹಳಷ್ಟು ಮುಖ್ಯವಾದದ್ದು. ಆ ಚಾಕಚಕ್ಯತೆ ಅನುಪಮಾರವರಿಗೆ ಸಿದ್ಧಿಸಿದೆ. ಇವರು ರೇಡಿಯೋಕ್ಕಾಗಿ ಅನೇಕ ಕಥೆಗಳನ್ನು ಬರೆದಿದ್ದಾರೆ. ಇವರು ಬಳಸುವ ಭಾಷೆ ಸರಳ-ಭಾರಿಭಾರಿ ಶಬ್ದಪ್ರಯೋಗಕ್ಕಿಂತ ಸಾಮಾನ್ಯ ಕೇಳುಗನನ್ನು ಒಲಿಸುವ ಗ್ರಹಿಸುವ ಪದಗಳ ಬಳಕೆಯಿಂದಾಗಿಯೇ ಇವರು ಕೇಳುಗನ ಸಮೀಪಕ್ಕೆ ಹೋಗಿದ್ದಾರೆ. ಸಂಭಾಷಣೆಗಳಿದ್ದಲ್ಲಿ ರೇಡಿಯೋ ಕಥೆಗಳು ಹೆಚ್ಚು ಫಲಕಾರಿಗಳಾಗುತ್ತವೆ ಎಂಬುದು ನನ್ನ ಗ್ರಹಿಕೆ.

ಹೆಚ್ಚು ಹೆಚ್ಚು ಪಾತ್ರಗಳನ್ನು ಸೃಷ್ಟಿಸಿ ಕೇಳುಗನನ್ನು ಗೊಂದಲಕ್ಕೀಡು ಮಾಡದೇ ಸರಾಗವಾಗಿ ಅವನಿಗೆ ಅರ್ಥವಾಗುವಂತೆ ಕಥೆ ಹೇಳಬೇಕಾಗುತ್ತದೆ. ಮಿತವಾದ ಪಾತ್ರಗಳೊಂದಿಗೆ ಕಥೆಯನ್ನು ಹೇಳುವ ತಂತ್ರ ರೇಡಿಯೋ ಬರಹಗಾರನಿಗೆ ಗೊತ್ತಿರಬೇಕು.

ಈ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅನುಪಮಾರವರ ರೇಡಿಯೋ ಬರಹಗಳ ಬಗ್ಗೆ ಇಣುಕಿದಾಗ ನನಗನಿಸಿದ್ದು ಇಷ್ಟು-ಕಥೆಗಳಾದ ಪೆಟ್ಟಿಗೆ-ಕತ್ತಲು-ಸಖ್ಯ ಇನ್ನೂ ಮುಂತಾದವುಗಳನ್ನು ಗಮನಿಸಿದಾಗ ಇಲ್ಲಿ ಬರುವ ಪಾತ್ರಗಳ ಚಿತ್ರಣ-ಕಥೆಯ ಬೆಳವಣಿಗೆ ನಮ್ಮ ಈ ಮಾಧ್ಯಮಕ್ಕೆ ಸೂಕ್ತ ಉದಾಹರಣೆಗಳು.

ಉದಾ: ಕಥೆ ಕತ್ತಲು-ಇಲ್ಲಿ ಬರುವ ಪ್ರಮುಖ ಪಾತ್ರ ನರಸಯ್ಯ ಕಣ್ಣುಗಳನ್ನು ಕಳೆದುಕೊಂಡ ಮಾಸ್ತರು. ಕಣ್ಣುಗಳನ್ನು ಕಳೆದುಕೊಂಡ ಮೇಲೆ ಅವನ ಮನಸ್ಸಿನ ಹೋರಾಟ - ಬದಲಾಗುವ ಮಗ-ಹೆಂಡತಿ - ಸಹೋದ್ಯೋಗಿಗಳು-ಕೆಲಸದ ನಿಂಗಿ ಇವರೆಲ್ಲರ ಸುತ್ತ ಹೆಣೆದ ಕಥೆ ಇದು.

ಕಥೆ ಹೇಳುತ್ತಾ ಹೇಳುತ್ತಾ ಮನಸ್ಸಿನ ತುಮುಲ-ಆವೇಗದ ವರ್ಣನೆ ಬಂದಾಗ 'ನರಸಯ್ಯ'-ನಾನು ಆಗಿ ಪ್ರಥಮ ಪುರುಷ (first person)ದಲ್ಲಿ ಕಥೆ ಸಾಗುತ್ತದೆ. ಇದು ಈ ಮಾಧ್ಯಮಕ್ಕೆ ಹೆಚ್ಚು ಅನುಕೂಲ. ಓದುವುದಕ್ಕೂ, ಅರ್ಥಮಾಡಿಕೊಳ್ಳುವುದಕ್ಕೂ, ಪರಿಣಾಮಕಾರಿಯಾಗಿ ಕಥೆ ಹೇಳುವುದಕ್ಕೂ ಈ ತಂತ್ರ ಹೆಚ್ಚು ಸೂಕ್ತ.

ಉದಾ: ಒಂದು ದಿನ ಸ್ಕೂಲಿನಲ್ಲಿ ಪಾಠ ಹೇಳುತ್ತ ಕುಳಿತಿದ್ದೆ. ಚರಿತ್ರೆ ಪಾಠ. ಕಳಿಂಗದ ಮೇಲೆ ಅಶೋಕನ ಅಭಿಯೋಗ. ಇದ್ದಕ್ಕಿದ್ದ ಹಾಗೆ ಬಲಗಣ್ಣಿನ ಮುಂದೆ ಕೆಂಪದ ಮಳೆ ಬೀಳುತ್ತಿರುವ ಹಾಗೆ ಕಂಡಿತು. ಕಣ್ಣುಜ್ಜಿಕೊಂಡೆ. ಇನ್ನೂ ಜಾಸ್ತಿಯಾಯಿತು. ಸುಮ್ಮನೆ ಕುಳಿತುಕೊಂಡೆ. ಅರ್ಧ ನಿಮಿಷದಲ್ಲಿ ಮಳೆ ನಿಂತಿತು. ಮರುದಿನ ಮನೆಯಲ್ಲಿ ಪೇಪರ್ ಓದುತ್ತಿದ್ದಾಗ ಹಾಗೇ ಆಯಿತು. ದಿಗಿಲಾಗಿ ಯಶೋದೆಯನ್ನು ಕರೆದೆ.................................

ಹೀಗೆ ಸಾಗುತ್ತ ಕಥೆ ನಂತರ ಯಾಂತ್ರಿಕವಾಗಿ ಸೇವೆ ಮಾಡುವ ಹೆಂಡತಿ. ವಿನಯವನ್ನು ತೋರಿಸುತ್ತಿದ್ದ ಮಗ ಎದುರು ಬೀಳುವುದು, ಅನ್ಯರ ಕರುಣೆಗೆ ನರಸಯ್ಯ ಸಹಜವಾಗಿಯೇ ಬೇಸರಿಸಿಕೊಳ್ಳುವುದು, ಆತ್ಮಹತ್ಯೆಗೆ ಪ್ರಯತ್ನಿಸಿದಾಗ ಕೆಲಸದ ಚಿಕ್ಕ ಹುಡುಗಿ ನಿಂಗಿ "ನಂಗೆ ಅಕ್ಷರ ಕಲ್ಸಿ" ಎಂದು ಹೇಳಿದ್ದನ್ನು ನೆನೆದು, ಸಾಯುವ ಪ್ರಯತ್ನ ವಿಫಲವಾದಾಗ್ಲೂ ನೂರು ಬೆಳಕಿನ ಬಾಗಿಲು ತೆಗೆದ ಅನುಭವವಾಗಿ ಮನಸ್ಸು ಹಗುರವಾಗುವುದರೊಂದಿಗೆ ಕಥೆ ಮುಗಿಯುತ್ತದೆ. ಕೇಳುಗ ಸಮಾಧಾನದ ನಿಟ್ಟುಸಿರು ಬಿಟ್ಟಿರಲೂಬಹುದು ಕಥೆ ಕೇಳಿದಾಗ.

ಕಥೆಗಳಲ್ಲಿ ಬರುವ ಸಂಭಾಷಣೆಗಳೂ ಸಹ ಸಹಜವಾಗಿ ಮೂಡಿ ಬಂದವುಗಳು. ತುಣುಕು ಅಥವಾ ಚುಟುಕು ಸಂಭಾಷಣೆಗಳು ಕಥೆಯನ್ನು ಗ್ರಹಿಸುವುದಕ್ಕೆ ಸಹಕಾರಿ. ಅರ್ಧರ್ಧ ಪ್ಯಾರಾ ಸಂಭಾಷಣೆಗಳ ದೊಂಬರಾಟ ಇವರ ಕಥೆಗಳಲ್ಲಿ ಕಾಣುವುದಿಲ್ಲ.

ಉದಾ: ಕಥೆ ಪೆಟ್ಟಿಗೆ-

"ಇದೇನು ಸಾರಿಗೆ ಇಷ್ಟೊಂದು ಉಪ್ಪು ಹಾಕಿದ್ದಿ? ನಂಗೆ
ಬ್ಲಡ್ ಪ್ರೆಷರ್ ಜಾಸ್ತಿ ಇದೆ ಅಂತ ಗೊತ್ತಿದ್ದೂ ಗೊತ್ತಿದ್ದೂ?"

"ಏನೋ ಕೈತಪ್ಪಿ ಜಾಸ್ತಿ ಬಿದ್ದಿರ್ಬೇಕು. ಸ್ವಲ್ಪ ಬೆಲ್ಲ ಹಾಕಿ
ಕುದಿಸಿಕೊಂಡು ಬರ್ತೀನಿ, ತಾಳಿ"
"ಬೆಲ್ಲ ಹಾಕ್ತಾಳಂತೆ ! ಬೆಲ್ಲ, ಸಕ್ಕರೆ ತಿನ್ಸಿ ತಿನ್ಸಿ ನನ್ನ ಸಾಯ್ಸ
-ಬೇಕೂಂತ ಮಾಡಿದ್ದೀಯಾ."

ಹೀಗೆ ಕಥೆಯನ್ನು ಪ್ರಾರಂಭಿಸಿ ಅತ್ಯಂತ ಕುತೂಹಲದಿಂದ ಕಥೆ ಕೇಳುವಂತೆ ಮಾಡಿದ್ದಾರೆ. 'ಪೆಟ್ಟಿಗೆ'ಯ ನಾಯಕ ಸಂಜೀವಪ್ಪ ಕೊನೆಗೆ ಗೆಳೆಯನ ಸಾವಿನಿಂದ ಜೀವನದರ್ಶನವನ್ನು ಕಂಡುಕೊಂಡು ಹುಲಿಯಂತಿದ್ದವರು ಬಹಳ ಮೆತ್ತಗಾಗುತ್ತಾರೆ.

ಇವರ ಅನೇಕ ಕಥೆಗಳು ಸುಂದರ ಸರಳ ಶೈಲಿಯಿಂದ ಓದುಗನನ್ನು ಗೆದ್ದುಕೊಂಡಂತೆ-ರೇಡಿಯೊ ತಂತ್ರಕ್ಕೆ ಸರಿಹೊಂದುವಂತೆ ಕಥೆ ಬರೆದು ಕೇಳುಗನನ್ನು ಗೆದ್ದುಕೊಂಡಿದ್ದಾರೆ.

ಸಹಜವಾಗಿ ಕಾಲದ ಮಿತಿ ರೇಡಿಯೋಕ್ಕೆ ಇರುವುದರಿಂದ ಚಿಕ್ಕದಾದ ಚೊಕ್ಕದಾದ ಕಥೆಗಳನ್ನು ಇವರು ಬರೆದಿದ್ದಾರೆ; ಯಶಸ್ವೀ ಆಗಿದ್ದಾರೆ. ಹೀಗೆ ಕೇವಲ ಕಥೆಯಿಂದ ಮಾತ್ರವಲ್ಲದೆ ರೇಡಿಯೋದಲ್ಲಿ ಮೂಡಿ ಬರುವ ಅನೇಕ ವಿಭಾಗಗಳ ಕಾರ್ಯಕ್ರಮಕ್ಕೆ ಇವರು ತಮ್ಮ ಕಾಣಿಕೆ ನೀಡಿದ್ದಾರೆ.

ನಮ್ಮ ಓದುಗರೆನ್ನಿ-ಕೇಳುಗರೆನ್ನಿ ಸಿನಿಮಾ ನಟ ನಟಿಯರ ಬಗ್ಗೆ ಅರಿಯುವ ಕುತೂಹಲವಿರುವಂತೆ ತಮ್ಮ ನೆಚ್ಚಿನ ಸಾಹಿತಿಗಳ ಬಗ್ಗೆ ತಿಳಿಯುವ ಹಂಬಲ ಇದ್ದೇ ಇರುತ್ತದೆ.

ಸಂದರ್ಶನಗಳ ಮೂಲಕ-ಅವರು ಅನುಭವಗಳನ್ನು ಮೆಲಕು ಹಾಕುವುದರ ಮೂಲಕ ಕೇಳುಗರ ಈ ಕುತೂಹಲವನ್ನು ತಣಿಸುವ ಪ್ರಯತ್ನ ಮಾಡಲಾಗುತ್ತದೆ. ಅಂತೆ ಕಂತೆಗಳನ್ನು ದಾಟಿ ಅವರ ಧ್ವನಿಯಲ್ಲಿ ಜೀವನದ ಕಹಿ-ಸಿಹಿ ಅನುಭವಗಳನ್ನು ಕೇಳುವಾಗ ಕೇಳುಗ ತನ್ನನ್ನೇ ಮರೆತು ಇವರ ಅನುಭವದ ಆಳಕ್ಕೆ ಇಳಿಯುತ್ತಾನೆ. ಹೀಗೆ ಇವನನ್ನು ತಮ್ಮ ವೃತ್ತದೊಳಗೆ ಸೆಳೆದುಕೊಳ್ಳಬೇಕಾದ್ರೆ ತಮ್ಮ ಅನುಭವಗಳನ್ನು ಹೇಳುವ ರೀತಿ ಬಹಳಷ್ಟು ಮುಖ್ಯ. "ಅಂಟಿದ ನಂಟು" ಅನುಪಮಾರವರು ತಮ್ಮ-ನಿರಂಜನರ ನಡುವಿನ ನಂಟಿನ ಎಳೆಗಳನ್ನು ಬಿಡಿಸಿದ ಪರಿ ನಮ್ಮ ಶ್ರೋತೃಗಳ ಮೆಚ್ಚುಗೆಯನ್ನು ಅಪಾರವಾಗಿ ಪಡೆದಿದ್ದು ಸಹಜ. ಯಾಕೆಂದರೆ ಅವರು ತಮ್ಮ ಅನುಭವಗಳನ್ನು ಹೇಳುತ್ತಾ ಹೋದಂತೆ ಅದರಲ್ಲಿ ಮುಳುಗಿ ಅವರ ಧನ್ಯತಾ ಭಾವ-ಹೇಳಿ ಮುಗಿಸಿದಾಗ ನಮ್ಮೊಳಗೆ ಸೇರಿಕೊಂಡು ಬಿಡುತ್ತದೆ.

ಅವರ ಪ್ರಥಮ ಭೇಟಿ–ಮದುವೆ-ಜೀವನದ ಹೋರಾಟದ ಬಗ್ಗೆ ಸ್ವಲ್ಪದರಲ್ಲೇ ಸಂಪೂರ್ಣ ಮಾಹಿತಿ ನಮಗೆ ದೊರಕುತ್ತದೆ.

"ನನಗಾಗ ಎಲ್ಲವೂ ಇತ್ತು - ಒಳ್ಳೆಯ ವೈದ್ಯಕೀಯ ಅಭ್ಯಾಸ - ಸಾಹಿತ್ಯ ರಚನೆ - ಒಪ್ಪವಾದ ಮನೆ-ಪ್ರೀತಿಸುವ ಗಂಡ ಅನ್ಯೋನ್ಯವಾದ ಮಕ್ಕಳು - ಹೆಂಗಸಿಗೆ ಇನ್ನೇನು ಬೇಕು? ಈ ಸ್ವರ್ಗಕ್ಕೂ ಕಿಚ್ಚು ಬಿತ್ತು....................
ನಮ್ಮ ಬದುಕಿನಲ್ಲಿ ಸಿಹಿಕಹಿ-ನೋವು ನಲಿವು ಧಾರಾಳವಾಗಿಯೇ ಸಿಕ್ಕಿವೆ. ಸುಖ ಬಂದಾಗ ಹಿಗ್ಗಲಿಲ್ಲ. ದುಃಖ ಬಂದಾಗ ಕುಗ್ಗಲಿಲ್ಲ. ಈ ಎಲ್ಲ ಬಿರುಗಾಳಿಯ ಮಧ್ಯೆ ನಮಗೆ ಅಂಟಿದ ನಂಟು ಮಾತ್ರ ಇನ್ನೂ ಭದ್ರವಾಗಿಯೇ ಇದೆ."

ಇದು ಆತ್ಮಕಥನ ಮಾತ್ರವಲ್ಲ-ನೋವಿನಲ್ಲೂ ನಲಿವುಗ್ಗುವ ಬಗೆಯನ್ನು ನಮಗೆ ಆಗಾಗ್ಗೆ ನೆನಪಿಸುತ್ತದೆ.

ಬೆಳಗಿನ ಪ್ರಶಾಂತ ವಾತಾವರಣದಲ್ಲಿ ಮನಸ್ಸನ್ನು ಹಗುರವಾಗಿಸಿ ಚಿಂತನೆಗೆ ಅವಕಾಶವೀಯುವ ನಮ್ಮ ಕಾರ್ಯಕ್ರಮಗಳಲ್ಲಿ 'ಚಿಂತನ'ವೂ ಒಂದು. ಈ ವಿಭಾಗಕ್ಕೂ ಅನುಪಮಾರವರು ತಮ್ಮ ಚಿಕ್ಕ ಚೊಕ್ಕ ಭಾಷಣ ಬರೆದು ಓದಿದ್ದಾರೆ. ಹೆಣ್ಣಿನ ಸ್ಥಾನ ಕುರಿತು ಅವರು ಹೇಳಿದ್ದು ಹೀಗೆ-

"ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಯ ಅರಿವು ಇನ್ನೂ ವ್ಯಾಪಕವಾಗಿ ಎಲ್ಲಾ ಸ್ತರದ ಜನರನ್ನೂ ಮುಟ್ಟಬೇಕು. ಈ ಕೆಲಸದಲ್ಲಿ ಪ್ರಗತಿಪರ ಮಹಿಳೆಯರ ಜೊತೆಗೆ ಪ್ರಜ್ಞಾವಂತ ಪುರುಷರೂ ಜನಪರ ದನಿಗಳೂ ಸೇರಿಕೊಳ್ಳುತ್ತವೆ. ಆಗ ಹಳೆಯ ಮೌಲ್ಯಗಳು ಅಳಿದು ಹೊಸ ಮೌಲ್ಯಗಳು ಉದಯಿಸುತ್ತವೆ."

ಇಂಥ ವಿಚಾರಗಳು ನಮ್ಮ ಮಾಧ್ಯಮದ ಮೂಲಕ ಜನರನ್ನು ತಟ್ಟಿ ಎಬ್ಬಿಸಿದಾಗ ಪ್ರಗತಿಯಾಗದೇ ಇದ್ದೀತೆ?

ಇಂಥ ವಿಚಾರವಂತ-ಮೌಲ್ಯಭರಿತ ಧಾರೆಯ ದಾಹ ನಮ್ಮ ಕೇಳುಗರಿಗೆ ಇದೆ. ಅದನ್ನು ತಣಿಸಲು ವಿಚಾರಶೀಲ ಲೇಖಕ-ಲೇಖಕಿಯರ ಪ್ರಯತ್ನವೂ ಅವಶ್ಯ.

ಹೀಗೆ ಅರಿವಿನ ಬಗ್ಗೆ ಇವರ ಚಿಂತನ ಪ್ರಸಾರವಾದಾಗ ನಮ್ಮಲ್ಲಿ ಬಹಳಷ್ಟು ಜನಕ್ಕೆ ಯೋಚಿಸುವುದಕ್ಕೆ ಪ್ರೇರೇಪಿಸಿದ್ದಲ್ಲದೆ, ಮೆಚ್ಚುಗೆ ಗಳಿಸಿತು. ಇವರ ಸರಳ ಸುಂದರ ಶಬ್ದ ಪ್ರಯೋಗದ ಮೋಡಿಗೆ ಚಕ್ಕನೆ ಕೇಳುಗ ಸಿಕ್ಕಿ ಬಿಡುತ್ತಾನೆ.

> "ಅರಿವು ವಿಜ್ಞಾನ ಕ್ಷೇತ್ರದಲ್ಲಿ ಅರಳಿದಾಗ-ಲೋಕ ದಾಪುಗಾಲು
> ಹಾಕಿಕೊಂಡು ಮುನ್ನಡೆಯುತ್ತದೆ. ಹೊಸ ಅನ್ವೇಷಣೆಗಳಿಂದ
> ನಮ್ಮ ಬದುಕು ಸಹ್ಯವಾಗುತ್ತದೆ. ಸುಂದರವಾಗುತ್ತದೆ...."

ಇಂಥ ಅನುಭವಗಳ ಗಂಟನ್ನು ನಮ್ಮ ರೇಡಿಯೋ ಮಾಧ್ಯಮದಲ್ಲಿ ಅನೇಕ ಸಲ ಬಿಚ್ಚಿ ಬಿಡಿಸಿ ಅವರು ಶ್ರೋತೃಗಳೊಡನೆ ಒಂದಾಗಿ ಹಂಚಿಕೊಂಡಿದ್ದಾರೆ.

ಇನ್ನು ರೂಪಕಗಳ ಬಗ್ಗೆ ಮಾತನಾಡಲು ಹೊರಟರೆ-ಮಹಿಳಾ ವಿಭಾಗದಲ್ಲಿ ಪ್ರಸಾರವಾದ 'ದಾರಿದೀಪ' ಮಾಲಿಕೆಯಲ್ಲಿ ನಂಜನಗೂಡು ತಿರುಮಲಾಂಬಾ ಅವರ ಬಗ್ಗೆ ರೂಪಕವನ್ನು ಅನುಪಮಾರವರು ಬರೆದಿದ್ದಾರೆ. ತಿರುಮಲಾಂಬಾ ಅವರ ಕೃತಿಗಳ ವಿಮರ್ಶೆಯನ್ನು ಸೂಕ್ಷ್ಮವಾಗಿ ಮಾಡುತ್ತಾ ಅವರ ಜೀವನ ಚಿತ್ರಣವನ್ನು ಮನ ತುಂಬುವಂತೆ ಮಾಡಿದ್ದಾರೆ. ನಿರೂಪಕಿ-ವರದಿಗಾರ್ತಿಯರನ್ನು ಸೃಷ್ಟಿಸಿ ರೂಪಕಕ್ಕೆ ಹೊಸ ತಂತ್ರವನ್ನು ಬಳಸಿ, ಅವರಿಬ್ಬರನ್ನೂ ಚಿತ್ರಕಾರರನ್ನಾಗಿ ಮಾಡಿ ಮಧ್ಯೆ ಮಧ್ಯೆ ತಿರುಮಲಾಂಬಾರವರು ಸೃಷ್ಟಿಸಿದ ಪಾತ್ರಗಳ ಸಂಭಾಷಣೆಗಳನ್ನು ಸೇರಿಸಿ ಲೇಖಕಿ ಹಾಗು ಕೃತಿ ಪರಿಚಯವನ್ನು ಚೆನ್ನಾಗಿಯೇ ಸಾಧಿಸಿದ್ದಾರೆ.

ಅನುಪಮಾರವರು ಯಾಕೆ ನಾಟಕ ಹಾಗು ರೂಪಕಗಳನ್ನು ಜಾಸ್ತಿ ಬರೆಯುತ್ತಿಲ್ಲಾ-ರೇಡಿಯೋದವರು ಕೇಳಿದಾಗ ಬರೆಯುವುದಲ್ಲದೇ ಅವರೇ ಯಾಕೆ ಈ ಕ್ಷೇತ್ರದಲ್ಲಿ ಜಾಸ್ತಿ ಕೈಯಾಡಿಸಿಲ್ಲ? ಎಂಬ ಪ್ರಶ್ನೆ ಆಗಾಗ ನನಗೆ ಸುಳಿಯುವುದುಂಟು.

ಇವರ ಕಥೆ "ಚಾರುಲತೆಯೊಡನೆ" ಒಂದು ದಿನ ರೇಡಿಯೋ ರೂಪಾಂತರಗೊಂಡು ಬಿತ್ತರಿಸಿದಾಗ ಶ್ರೋತೃಗಳು ಮೆಚ್ಚುಗೆ ಸೂಸಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾರೆ.

ವೈದ್ಯೆಯಾಗಿ, ಲೇಖಕಿಯಾಗಿ ಈ ಮಾಧ್ಯಮದ ಬರವಣಿಗೆಯಲ್ಲಿ ಅನುಪಮಾ ಅನೇಕ ಬಾರಿ ಸುಳಿದಾಡಿದ್ದಾರೆ. ಕೈಗೆಟುಕ್ಕಿದ್ದು ಮಾತ್ರ ನನ್ನ ಇಣುಕು ನೋಟಕ್ಕೆ ದೊರಕಿದ್ದು. ಮುದ್ರಿತ ಟೇಪುಗಳು Rewind ಆಗಿ play back ಆದ ಹಾಗೇ ಕೆಲವು ನೆನಪುಗಳು ಇಲ್ಲಿ ಸುರುಳಿ ಬಿಟ್ಟುಕೊಂಡಿವೆ.

ಡಾ|ಅನುಪಮಾ ನಿರಂಜನರ ಪ್ರವಾಸ ಸಾಹಿತ್ಯ

-ಬಾಳಿ ಮೀನಾಕ್ಷಿ

ಕನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಕಾವ್ಯ ಹುಲುಸಾಗಿ ಬೆಳೆದು ಬಂದಂತೆ ಹರಟೆ, ಪ್ರಬಂಧ, ವಿಮರ್ಶೆಗಳು ಬರಲಿಲ್ಲ. ಪ್ರವಾಸಕಥನ, ಆತ್ಮಚರಿತ್ರೆಗಳಂಥ ರೂಪಗಳು ತೀರ ಕಡಿಮೆ ಎಂದೇ ಹೇಳಬೇಕು. ಕಥೆ, ಕಾದಂಬರಿಗಳು ಬೆಳೆದಷ್ಟು ಪ್ರವಾಸಕಥನಗಳು ಬೆಳೆಯದಿರುವುದಕ್ಕೆ ಅನೇಕ, ಸಾಹಿತ್ಯಿಕ ಮತ್ತು ಇತರ ಕಾರಣಗಳಿವೆ. "ದೇಶ ನೋಡಬೇಕು, ಕೋಶ ಓದಬೇಕು" ಎಂಬ ಗಾದೆ ಮಾತಿದ್ದರೂ ಭಾರತೀಯರು ಪ್ರವಾಸ ಪ್ರಿಯರಲ್ಲ. ಪ್ರವಾಸ ಮಾಡುವಲ್ಲಿ ಎದುರಾಗುವ ಅಡ್ಡಿ

ಆತಂಕಗಳನ್ನು ಪಾಶ್ಚಿಮಾತ್ಯರಂತೆ ಎದುರಿಸುವ ಸಾಹಸಪ್ರಿಯರೂ ಇವರಲ್ಲ. ನಮ್ಮಲ್ಲಿ ಪ್ರವಾಸ ಮಾಡುವವರೇ ಕಡಿಮೆ. ಒಂದು ವೇಳೆ ಪ್ರವಾಸ ಮಾಡಿದರೂ ಬರವಣಿಗೆ ಸಾಧ್ಯವಾಗುವದಿಲ್ಲ.

ಇತ್ತೀಚಿಗೆ ಆಟಗಾರರು, ವ್ಯಾಪಾರಿಗಳು, ರಾಜಕೀಯ ಮುಖಂಡರು ಸರಕಾರದ ಖರ್ಚಿನಲ್ಲಿ ವಿದೇಶಕ್ಕೆ ಹೋಗುತ್ತಿರುವದುಂಟು. ಅವರೆಲ್ಲ ತಮ್ಮ ತಮ್ಮ ವಲಯಗಳ ವೀಕ್ಷಣೆಗೆ ಮಾತ್ರವೇ ಹೋಗುತ್ತಾರೆ. ಅಧ್ಯಯನ ಪ್ರವಾಸಗಳಾಗಲಿ, ಹವ್ಯಾಸಿ ಪ್ರವಾಸಗಳಾಗಲಿ ತೀರ ಕಡಿಮೆ. ಹವ್ಯಾಸಿ ಪ್ರವಾಸ ಕೈಗೊಳ್ಳುವ ಆಸಕ್ತಿ ಯಾರಿಗಿಲ್ಲ ಹೇಳಿ? ಆಸಕ್ತಿ ಇದ್ದಾಕ್ಷಣ ಐಶ್ವರ್ಯ ಬೇಕಲ್ಲವೇ? ಆಸಕ್ತಿ, ಐಶ್ವರ್ಯ, ಎರಡೂ ಇದ್ದು ವಿದೇಶಗಳಿಗೆ ಹೋಗಿ ಬಂದವರೆಲ್ಲರಿಗೂ, ತಾವು ಕಂಡದ್ದನ್ನು ಭಾಷೆಯಲ್ಲಿ ಹಿಡಿದಿಡುವ ಸಾಮರ್ಥ್ಯ ಇರುವದಿಲ್ಲ.

ಸೃಜನಶೀಲರಾದ ಬರಹಗಾರರು ಆಸಕ್ತಿ ಹೊಂದಿದ್ದು ಪ್ರಯಾಣ ಮಾಡಿ. ಅಲ್ಲಿನ ಜೀವನ, ಸಂಸ್ಕೃತಿಯನ್ನು ಸಾದ್ಯಂತ್ಯವಾಗಿ ಗಮನಿಸಿ ಟಿಪ್ಪಣಿಗಳನ್ನು ಮಾಡಿಕೊಂಡು ನಂತರ ಶ್ರಮಪಟ್ಟು ಬರವಣಿಗೆಯಲ್ಲಿ ಇಳಿಸಿದಾಗಲೆ ಪ್ರವಾಸಕಥನಗಳ ಸಂಖ್ಯೆ ಹೆಚ್ಚಬಹುದು. ಈ ಎಲ್ಲ ಅಡ್ಡಿಗಳ ಮಧ್ಯೆಯೂ ಹಲವಾರು ಕನ್ನಡ ಬರಹಗಾರರು ವಿದೇಶಿ ಪ್ರವಾಸಗಳನ್ನು ಕೈಕೊಂಡು ಕೆಲವಾರು ಪ್ರವಾಸಕಥನಗಳನ್ನು ನೀಡಿದ್ದಾರೆ. ಉದಾಹರಣೆಗೆ ನಾಡಿಗ ಕೃಷ್ಣಮೂರ್ತಿಯವರ "ನಮ್ಮ ಕಾಗದಗಳು", ವೈ. ಎಸ್. ಲೂಯಿಸ್‌ರವರ 'ಕೊಲಂಬಿಯಾ ಯಾತ್ರೆ', ಬಿ.ಜಿ.ಎಲ್. ಸ್ವಾಮಿಯವರ "ಅಮೇರಿಕದಲ್ಲಿ ನಾನು", ಕೃಷ್ಣಾನಂದ ಕಾಮತರ "ನಾನೂ ಅಮೇರಿಕೆಗೆ ಹೋಗಿದ್ದೆ" ಮತ್ತು ಪದ್ಮಾ ಉಮಾಪತಿಯವರ "ನಾವು ಕಂಡ ಅಮೇರಿಕಾ", ಕಾರಂತರ "ಪಾತಾಳಕ್ಕೆ ಪಯಣ", "ಅಬುವಿಂದ ಬರಾಮಕ್ಕೆ", "ಅಪೂರ್ವ ಪಶ್ಚಿಮ", ಶಿವರುದ್ರಪ್ಪನವರ "ಮಾಸ್ಕೊದಲ್ಲಿ ೨೨ ದಿನಗಳು", ಎಚ್. ಎಲ್. ನಾಗೇ ಗೌಡರ "ನಾ ಕಂಡ ಪ್ರಪಂಚ", ಗೊರೂರು ರಾಮಸ್ವಾಮಿ ಅಯ್ಯಂಗಾರರ "ಅಮೇರಿಕದಲ್ಲಿ ಗೊರೂರು" ಮುಂತಾದವುಗಳನ್ನು ಗಮನಿಸಬಹುದು.

ಪ್ರವಾಸಕಥನಗಳಲ್ಲಿ ಸ್ವದೇಶಿ ಪ್ರವಾಸಕಥನ ಮತ್ತು ವಿದೇಶಿ ಪ್ರವಾಸಕಥನ ಎಂದು ಎರಡು ವಿಭಾಗಗಳನ್ನು ಮಾಡಬಹುದು. ಶಿವರುದ್ರಪ್ಪನವರ "ಗಂಗೆಯ ಶಿಖರಗಳಲ್ಲಿ", ಶಾಂತಾದೇವಿ ಮಾಳವಾಡರ "ಶ್ರೀಗಿರಿಯಿಂದ ಹಿಮಗಿರಿಗೆ" ಇವು ಸ್ವದೇಶಿ ಪ್ರವಾಸಕಥನಗಳಾದರೆ, "ಅಬುವಿಂದ ಬರಾಮ"ಕ್ಕೆ ಬಿಟ್ಟು ಈ ಮೊದಲು ಹೆಸರಿಸಿದವುಗಳು ವಿದೇಶಿ ಪ್ರವಾಸಕಥನಗಳು.

ಕನ್ನಡ ಪ್ರವಾಸ ಕಥನಗಳ ಭಂಡಾರಕ್ಕೆ ಲೇಖಕಿಯರ ಕಾಣಿಕೆ ಕಡಿಮೆ. ತನ್ನೂರಿನಿಂದ ಇನ್ನೊಂದೂರಿಗೆ ಹೋಗಲು ಹಿಂದೆ ಮುಂದೆ ನೋಡುವ ಸ್ತ್ರೀ ತಾನೊಬ್ಬಳೆ ವಿದೇಶಗಳಿಗೆ ಹೋಗುವುದು ತುಂಬಾ ಕಷ್ಟವೆ ಸರಿ. ಇಂಥ ಸಾಹಸವನ್ನು ಡಾ।ಅನುಪಮಾ ನಿರಂಜನರವರು ಮಾಡಿದ್ದು ಸ್ವಾಗತಾರ್ಹ. ಅನುಪಮಾ ರವರು ಪ್ರವಾಸಪ್ರಿಯರು. "ನನಗೆ ಮೊದಲಿನಿಂದಲೂ ಊರೂರು ಸುತ್ತುವ ಗೀಳು" ಎಂದು ತಾವೇ ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಇವರು ಹಲವಾರು ದೇಶಗಳನ್ನು ಸುತ್ತಿ ಬಂದರೂ ಒಟ್ಟು ಪ್ರವಾಸವನ್ನು ಕುರಿತು ಬರೆದ ಪುಸ್ತಕಗಳು ಎರಡು.

೧೯೬೫ರಲ್ಲಿ ಬರ್ಲಿನ್‌ನಲ್ಲಿ ಜರುಗಿದ ಅಂತರರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ಗೆ ಬೆಂಗಳೂರಿನ ಪ್ರತಿನಿಧಿಯಾಗಿ ಹೊರಟು ಪೂರ್ವ ಜರ್ಮನಿ, ರಷ್ಯಾ, ಪೋಲೆಂಡಗಳನ್ನು ಸುತ್ತಿ ಬಂದು ತಮ್ಮ ಅನುಭವಗಳನ್ನು "ಸ್ನೇಹಯಾತ್ರೆ"ಯಲ್ಲಿ ಹಿಡಿದಿಟ್ಟಿದ್ದಾರೆ. ಈ ಕೃತಿಗೆ ಸೋವಿಯತ್ ಲ್ಯಾಂಡ ನೆಹರೂ ಪುರಸ್ಕಾರ ಕೂಡ ಸಂದಿದೆ. ನಿರಂಜನರು ಆಗಾಗ "ಹೆಚ್ಚಿನ ಖರ್ಚಿಗೆ ಬೇಕಾಗುವಷ್ಟು ಹಣ ಸಂಪಾದಿಸಿದ ಮೇಲೆ ನಾವೆಲ್ಲಾ ಪ್ರಪಂಚ ಸುತ್ತಿ ಬರೋಣ" ಎಂದು ಹೇಳುತ್ತಿದ್ದರಂತೆ. ಆದರೆ ಲೇಖಕಿಯ ಬಾಳಿನಲ್ಲಿ ಆ ಕನಸು ನನಸಾಗಲೆ ಇಲ್ಲ. ಆದರೂ ಒಂಟಿಯಾಗಿಯೆ ಇಟಲಿ, ಫ್ರಾನ್ಸ, ಸ್ವಿಟ್ಸರ್ಲೆಂಡ, ಇಂಗ್ಲೆಂಡ, ಅಮೇರಿಕಾಗಳನ್ನು ಸುತ್ತಿ ಬಂದರು. ಇದರ ಪ್ರತಿಫಲವಾಗಿಯೇ ೧೯೦ ಪುಟಗಳ "ಅಂಗೈಯಲ್ಲಿ ಯೂರೊ ಅಮೇರಿಕ" ಎಂಬ ಸುಂದರ ಪ್ರವಾಸ ಕಥನ ಕನ್ನಡಿಗರ ಕೈಯಲ್ಲಿದೆ.

ಪ್ರವಾಸಕಥನ ಬರೆಯುವದು ಒಂದು ಕಾದಂಬರಿ ಬರೆಯುವದಕ್ಕಿಂತ ಕಠಿಣ. ಕಥಾವಸ್ತುವಿಲ್ಲದೆ ಒಂದು ಕಥೆ ಇರಬೇಕು. ಪಾತ್ರಗಳಿಲ್ಲದೆಯೂ ಘಟನೆ ಜರುಗಬೇಕು. ಅಥವಾ ಅಲ್ಲಿ ಹೋದೆ, ಇಲ್ಲಿ ಇಳಿದೆ, ಅದು ತಿಂದೆ, ಇದು ಕುಡಿದೆ. ಅದು ನೋಡಿದೆ, ಇದು ಖರೀದಿಸಿದೆ ಎಂಬ ಶುಷ್ಕ ವರದಿಯೂ ಇರದಾಗದೆ ಓದುಗರ ಕುತೂಹಲ ಕೆರಳಿಸಿಕೊಂಡು ಹೋಗುವ ರಮ್ಯ ಕಾದಂಬರಿಯಾಗಬೇಕು. ಅನುಪಮಾರ ಈ ಎರಡು ಪ್ರವಾಸ ಕಥನಗಳು ಒಂದು ಕಾದಂಬರಿ ಓದಿದಷ್ಟೆ ಖುಷಿಯನ್ನು ಕೊಡುತ್ತವೆ.

ಲೇಖಕಿಯರ ನಿರೂಪಣಾ ರೀತಿ ವಿಶಿಷ್ಟವಾದದ್ದು. ಪಂಡಿತ, ಪಾಮರ ರಿಬ್ಬರನ್ನು ಏಕಕಾಲಕ್ಕೆ ಮೆಚ್ಚಿಸಬಲ್ಲ ಸರಳತೆ, ಸ್ಪಷ್ಟತೆ ಈ ಕಥನಗಳ ಜೀವಾಳವಾಗಿವೆ. ವಿದೇಶಗಳ ಪ್ರವಾಸ ಮಾಡುವದು ಒಂದು ಕಲೆ. ಇದನ್ನು ಅನುಪಮಾರಿಂದ ಕಲಿಯಬೇಕು. ಏಕೆಂದರೆ ವಿದೇಶಗಳಿಗೆ ಹೋದಾಗ ಅಲ್ಲಿ ನೋಡಬೇಕಾದವುಗಳು

ಹಲವಾರು ಇರುತ್ತವೆ. ಹಣ ಮತ್ತು ಸಮಯ ಇವೆರಡರ ಸಮತೋಲನವನ್ನು ಕಾಪಾಡಿಕೊಂಡು ಯಾವ ಯಾವ ಸ್ಥಳಗಳನ್ನು ಎಷ್ಟು ಹೊತ್ತು ನೋಡಬೇಕು ಎಂಬುದನ್ನು ಮೊದಲೆ ನಿರ್ಧರಿಸಿಕೊಂಡು ಲೇಖಕಿ ಕಟ್ಟುನಿಟ್ಟಾದ ಪದ್ಧತಿಯನ್ನು ಪಾಲಿಸುತ್ತಾರೆ. ಹೀಗಾಗಿ ಅವರ ಪ್ರವಾಸ ಪಕ್ಷಿನೋಟವಾದರೂ ಸಮಗ್ರ ಎನಿಸುತ್ತದೆ.

ಕುಮಾರವ್ಯಾಸ ಭಾರತವನ್ನು ಓದಿದಾಗ ಕಲಿಯುಗ ದ್ವಾಪರವಾಗುವದು, ಎಂಬ ಮಾತು ಎಷ್ಟು ಸಹಜವೋ, ಅನುಪಮಾರ ಪ್ರವಾಸ ಕಥನಗಳನ್ನು ಓದಿದರೆ ಯುರೋಪ, ಅಮೇರಿಕಾ, ರಷ್ಯಾ, ಪೋಲೆಂಡ, ಪೂರ್ವ ಜರ್ಮನಿಗಳನ್ನು ಕಣ್ಣಾರೆ ಕಂಡಂತಾಗುತ್ತದೆ ಎಂಬುದು ಅಷ್ಟೆ ಸಹಜ. ಕಾರಣ ಅನುಪಮಾ ಅನುಭವಗಳನ್ನು ಹಿಡಿದಿಡುವ ರೀತಿ ಅನನ್ಯವಾದದ್ದು, ಮತ್ತು ಪರಿಪೂರ್ಣವಾದದ್ದು. ಇವರು ಯಾವುದೇ ಕಟ್ಟಡ, ಮ್ಯೂಸಿಯಂ, ಆರ್ಟ್ ಗ್ಯಾಲರಿ, ಸೇತುವೆ, ಉದ್ಯಾನ, ಊರನ್ನೆ ಚಿತ್ರಿಸಲಿ, ನೀಡುವ ಚಿತ್ರಣ ವಿಶಿಷ್ಟವಾದದ್ದು. ಈ ದಿಸೆಯಲ್ಲಿ ತಮ್ಮದೆ ಆದ ಒಂದು ಶಾಸ್ತ್ರೀಯ ಪದ್ಧತಿ ಅನುಸರಿಸುತ್ತಾರೆ. ಯಾವುದೇ ಸ್ಥಳವಿರಲಿ ಮೊದಲು ಅದರ ಇತಿಹಾಸ, ನಂತರ ಅದರ ಭೌಗೋಳಿಕ ವಿನ್ಯಾಸ, ಅದರ ವೈಶಿಷ್ಟ್ಯ, ಕಟ್ಟಿಸಿದವನ ಹೆಸರು, ಚರಿತ್ರೆ, ಮತ್ತು ಅದು ಕಟ್ಟಲ್ಪಟ್ಟ ಉದ್ದೇಶ, ಪ್ರಸ್ತುತ ಅದರ ಪರಿಸ್ಥಿತಿ ಮುಂತಾದವುಗಳನ್ನು ಕ್ರಮವಾಗಿ ಹೇಳುತ್ತಾರೆ. ಉದಾಹರಣೆಗೆ ರಮಣೀಯ ರೋಮನ್ನು ಕುರಿತು ಹೇಳುವಾಗ "ಕ್ರಿ. ಪೂ. ಎಂಟನೆ ಶತಮಾನದಲ್ಲಿ ಕನ್ಯೆಯಾದ ರಾಜಕುಮಾರಿಗೆ ರೋಮ್ಯುಲಸ್ ಮತ್ತು ರೇಮಸ್ ಎಂಬ ಅವಳಿ ಮಕ್ಕಳು ಹುಟ್ಟಿದರು. ಈ ಮಕ್ಕಳ ತಂದೆ ರೋಮನರ ಯುದ್ಧ ದೇವತೆ ಮಾರ್ಸ. ಚಕ್ರವರ್ತಿ ಸಿಟ್ಟುಗೊಂಡು ಮಕ್ಕಳನ್ನು ಟೈಬರ್ ನದಿಗೆ ಎಸೆದುಬಿಡಿ ಎಂದು ಆಜ್ಞಾಪಿಸಿದನಂತೆ. ಆಗ ಆ ಮಕ್ಕಳಿಗೆ ಹಾಲು ಕುಡಿಸಿದ್ದು ಹೆಣ್ಣು ತೋಳ. ಆ ಮಕ್ಕಳನ್ನು ಕಂಡ ಕುರಿಗಾಹಿಯೊಬ್ಬ ಅವರನ್ನು ಕರೆದೊಯ್ದು ಬೆಳೆಸಿದ. ದೊಡ್ಡವರಾದ ಮೇಲೆ ಟೈಬರ ನದಿ ತಟದಲ್ಲಿ ದೊಡ್ಡ ಸಾಮ್ರಾಜ್ಯವೊಂದನ್ನು ಕಟ್ಟಿದರಂತೆ. ಅಂದಿನಿಂದ ಅದು ರೋಮ ಸಾಮ್ರಾಜ್ಯವಾಯಿತಂತೆ." ಈ ರೀತಿ ಒಂದು ಸ್ಥಳದ ಪೂರ್ವ ಮಾಹಿತಿ ಒದಗಿಸಿ ಮುಂದೆ ಭೌಗೋಳಿಕ ವರ್ಣನೆಗಿಳಿಯುತ್ತಾರೆ. ಹೀಗಾಗಿ ಓದುಗರಿಗೆ ಅನಾಯಾಸವಾಗಿ ಇತಿಹಾಸ ಮತ್ತು ಭೂಗೋಳದ ಪರಿಚಯವಾಗುತ್ತದೆ.

ಅನುಪಮಾರು ಯಾವುದೇ ವಸ್ತುವನ್ನು ಕುರಿತೆ ಹೇಳಲಿ ಅದರ ಸಮಗ್ರವಾದ, ಕಟ್ಟುನಿಟ್ಟಾದ ಚಿತ್ರಣ ಅಲ್ಲಿರುತ್ತದೆ. ನ್ಯೂಯಾರ್ಕಿನ ಎಂಪೈರ್ ಸ್ಟೇಟ ಬಿಲ್ಡಿಂಗ್ ವರ್ಣನೆ ಹೀಗಿದೆ: "ಈ ಕಟ್ಟಡಕ್ಕೆ ಪ್ರತಿ ವರ್ಷ ೧೫ ಲಕ್ಷ ಪ್ರವಾಸಿಗಳು ಭೇಟಿಕೊಡುವರು. ೧೪೭೨ ಅಡಿ ಎತ್ತರವಿರುವ ಈ ಕಟ್ಟಡದಲ್ಲಿ ೧೦೨ ಅಂತಸ್ತುಗಳಿವೆ,

ಇದರ ತುದಿಯಲ್ಲಿ ಪ್ರತಿಷ್ಠಾಪಿತವಾಗಿದೆ ಟಿ.ವಿ. ಗೋಪುರ. ೮೬ ಮತ್ತು ೧೦೨ನೇ ಅಂತಸ್ತಿನಲ್ಲಿ ಗ್ರಹ ವೀಕ್ಷಣಾಲಯವಿರುವದೊಂದು ವಿಶೇಷ. ಇಲ್ಲಿ ನಿಂತು ನಕ್ಷತ್ರಗಳನ್ನು ನೋಡಬಹುದು. ಕಿಟಕಿಗಳಿಗೆ ಹೊಳಪು ಉಕ್ಕಿನ ಪಟ್ಟಿಗಳಿರುವದರಿಂದ ಬಿಸಿಲಿನಲ್ಲಿ ಈ ಕಟ್ಟಡ ಬೆಳಕಿನ ರಥದಂತೆ ಕಂಗೊಳಿಸುತ್ತದೆ". ಆದರೆ ಸ್ಥಳಗಳ ಭೌಗೋಳಿಕ ವಿನ್ಯಾಸದ ವಿವರಣೆ ಮಾತ್ರ ನೀಡಿದರೆ ವರ್ಣನೆ ಶುಷ್ಕವಾಗಿ ಓದುಗರಿಗೆ ಬೋರಾಗಬಹುದೆಂಬ ಸೂಕ್ಷ್ಮ ಕಲ್ಪನೆಯೂ ಲೇಖಕಿಗಿದೆ. ಆದ್ದರಿಂದಲೆ ಪ್ರಸಿದ್ಧ ಕಟ್ಟಡಗಳ ಹಿಂದಿರುವ ಸ್ವಾರಸ್ಯಪೂರ್ಣವಾದ ದಂತಕಥೆಗಳನ್ನು ನಡುನಡುವೆ ಸೇರಿಸುತ್ತಾರೆ. ಉದಾಹರಣೆಗೆ "ಹಾಲಿವುಡ್‌ನ ಗ್ರಾಮನ್ಸ್ ಚೈನೀಸ್ ಥಿಯೇಟರ್‌ನ ಬಗೆಗೆ ಘಟನೆಯೊಂದು ಹೀಗಿದೆ. ಈ ಥಿಯೇಟರನ್ನು ಕಟ್ಟುತ್ತಿದ್ದ ಸಂದರ್ಭದಲ್ಲಿ ಹೊರ ಅಂಗಳದಲ್ಲಿ ಗಾರೆಗಚ್ಚು ಹಾಕುತ್ತಿರುವಾಗ, ಮಾಲಿಕ ಗ್ರಾಮನ್ ಹಸಿಗಾರೆ ಮೇಲೆ ಹೆಜ್ಜೆ ಇಟ್ಟ. ಗಾರೆಯವನು ಬೊಬ್ಬೆ ಹೊಡೆದ. ಆಗ ಮಾಲಿಕ 'ನಾನು ಸಿಡ್ ಗ್ರಾಮನ್' ಎಂದು ಹೇಳಿದರೂ ಗಾರೆಯವನಿಗೆ ಅವನ್ಯಾರು ಗೊತ್ತಾಗಲಿಲ್ಲ. ಗಾರೆಯವನು ಸಿಟ್ಟಿನಿಂದ 'ನೀನಷ್ಟು ದೊಡ್ಡ ಕುಳವಾದ್ರೆ ನಿನ್ನ ಹೆಸರನ್ನು ಈ ಗಾರೆಯ ಮೇಲೆ ಬರೀತೀನಿ' ಎಂದು ಬರೆದೂ ಬಿಟ್ಟನಂತೆ. ಆಗ ಸಿಡ್ ಗ್ರಾಮನ್‌ಗೆ ಥಕ್ಕನೆ ಒಂದು ಯೋಚನೆ ಹೊಳೆಯಿತು. ನಮ್ಮ ತಾರೆಯರ ಹೆಜ್ಜೆ ಗುರುತುಗಳನ್ನೂ ಹೀಗೆ ಹಾಕಿಸಬಹುದಲ್ಲ ಎಂದು. ಹೀಗಾಗಿ ಅಲ್ಲಿ ಅನೇಕ ಪ್ರಸಿದ್ಧ ತಾರೆಯರ ಹೆಜ್ಜೆ ಗುರುತುಗಳು ಈಗಲೂ ಇವೆಯಂತೆ. ಇಂಥ ರೋಚಕವಾದ ಅನೇಕ ಘಟನೆಗಳನ್ನು ಸಂಗ್ರಹಿಸಿ ಕೊಟ್ಟಿರುವದರಿಂದಲೆ ಈ ಕಥನಗಳು ಬೇಸರ ಬರದಂತೆ ಓದಿಸಿಕೊಂಡು ಹೋಗುತ್ತವೆಯಲ್ಲದೆ, ಅನೇಕ ಸ್ಥಳಗಳು ನೆನಪಿನಲ್ಲೂ ಉಳಿಯುತ್ತವೆ.

ಯಾವುದೇ ಒಂದು ದೇಶದ ಕಟ್ಟಡಗಳನ್ನು, ಉದ್ಯಾನಗಳನ್ನು, ಪ್ರೇಕ್ಷಣೀಯ ಸ್ಥಳಗಳನ್ನು, ಭಾರಿ ಔದ್ಯಮಿಕ ಸಂಸ್ಥೆಗಳನ್ನು ಕುರಿತು ಹೇಳಿದ ಮಾತ್ರಕ್ಕೆ ಆ ದೇಶವನ್ನು ಪೂರ್ತಿ ಪರಿಚಯಿಸಿದಂತಾಗಲಾರದು. ಆ ದೇಶದ ಜನಾಂಗದ ಒಟ್ಟು ಸಂವೇದನೆ, ಅವರ ಬದುಕಿನ ರೀತಿ, ನೀತಿ, ನಂಬಿಕೆಗಳು, ಅವರ ಆಡಳಿತ ಪದ್ಧತಿ, ರಾಜಕೀಯ ವ್ಯವಸ್ಥೆ, ಅವರ ಸುಸಂಸ್ಕೃತ ಮನೋಭೂಮಿಕೆ ಮುಂತಾದವುಗಳನ್ನು ದರ್ಶಿಸಿದಾಗಲೆ ಪೂರ್ಣ ಪರಿಚಯವಾಗುತ್ತದೆ. ಈ ದಿಸೆಯಲ್ಲಿ ಅನುಪಮಾರದು ತುಂಬ ತೀಕ್ಷ್ಣವಾದ ದೃಷ್ಟಿಕೋನ. ವಿದೇಶಗಳಲ್ಲಿ ತಾವು ಕಳೆದ ಅಲ್ಪ ಸಮಯದಲ್ಲೆ ಅವರ ಒಳಗನ್ನು ಹೊಕ್ಕು ನೋಡಿದ ಅವರ ಪ್ರಜ್ಞೆ ಅನುಕರಣಶೀಲವಾದದ್ದು.

ಲೇಖಕಿ ಅಮೇರಿಕಾದ ಹೊಟೆಲೊಂದರಲ್ಲಿ ತಂಗಿದಾಗ ಕೋಣೆಯನ್ನು ಶುಚಿ ಮಾಡಲು ಬಂದ ನಿಗ್ರೊ ಮಹಿಳೆಯನ್ನು ಅವರ ಬದುಕಿನ ಬಗ್ಗೆ ವಿಚಾರಿಸುತ್ತಾರೆ. ಆಗ ಆ ಮಹಿಳೆ ಅತೀವ ವೇದನೆಯಿಂದ "ಇಲ್ಲಿ ಬಿಳಿಯರೂ ಇದಾರೆ. ತಪ್ಪು ಹಾಕೋದು

ಮಾತ್ರ ಬ್ಲ್ಯಾಕ್ ಅಮೇರಿಕನ್ಸ ಮೇಲೆ. ವರ್ಣಭೇದದ ವಿಷಯ ಕಪ್ಪು ಜನವಾದ ನಿಮಗೂ ಗೊತ್ತಿರಬೇಕು. ಹೊರನೋಟಕ್ಕೆ ಎಲ್ಲರೂ ಒಂದು ಅಂತ ಹೇಳ್ತಾರೆ. ಆದರೆ ಒಬ್ಬ ನಿಗ್ರೋ ಬಂದರೆ ಅವನಿಗೆ ಹೋಟೆಲಿನಲ್ಲಿ ರೂಮು ಕೊಡಲ್ಲ ಗೊತ್ತೆ," ಎಂದು ಹೇಳಿ "ಈ ಮಾತುಕತೆ ನಮ್ಮ ನಮ್ಮಲ್ಲೆ ಇರಲಿ" ಎಂದು ಪಿಸುಗುಟ್ಟಿ ಓಡಿದಳಂತೆ. ಜಗತ್ತಿನಲ್ಲೆ ಅತ್ಯಂತ ಶ್ರೀಮಂತ ದೇಶವಾದ ಅಮೇರಿಕದ ಮಾನವೀಯ ಬಡತನ ಎಷ್ಟು ಭೀಕರವಾದದ್ದು ಎಂಬ ಅರಿವು ಓದುಗರಿಗಾಗುತ್ತದೆ.

ಪೂರ್ವ ಜರ್ಮನಿಯನ್ನು ಕುರಿತು ಹೇಳುವಾಗ ಹಿಟ್ಲರನ ದಾಳಿ ಮತ್ತು ಅದರಿಂದಾದ ಭಯಂಕರ ಪರಿಣಾಮಗಳನ್ನು ಲೇಖಕಿ ಸರಳವಾಗಿ ಆದರೂ ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇನ್ನೆಂದೂ ಸುಧಾರಿಸಲಾರದೇನೊ ಎಂಬಷ್ಟು ಹಾನಿಗೊಳಗಾದ ಜರ್ಮನಿ ೨೫ ವರ್ಷಗಳಲ್ಲೆ ಜಗತ್ತಿನ ಶ್ರೀಮಂತ ರಾಷ್ಟ್ರಗಳ ಲ್ಲೊಂದಾದದ್ದು ಅದ್ಭುತ ಸಾಧನೆ. ಈ ಸಂದರ್ಭದಲ್ಲಿ ಲೇಖಕಿ ಜರ್ಮನರ ಗಾದೆ ಮಾತನ್ನು ಉದ್ದೇಶಪೂರ್ವಕವಾಗಿಯೇ ಉದಾಹರಿಸುತ್ತಾರೆ. ಅದು ಹೀಗಿದೆ: "ಎಲ್ಲ ಮನುಷ್ಯರು ಬದುಕೋಕೆಂತ ದುಡೀತಾರೆ, ಆದರೆ ಜರ್ಮನರು ದುಡಿಯೋದಕ್ಕೆ ಬದುಕ್ತಾರೆ". ಓದುತ್ತಾ ಹೋದ ಹಾಗೆ ಜರ್ಮನರ ಪರಿಶ್ರಮ, ಕಾರ್ಯಕ್ಷಮತೆ, ಪ್ರಾಮಾಣಿಕತೆ, ಶಿಸ್ತು, ಸಂಘಟನೆ, ದೇಶಭಕ್ತಿ ಇವುಗಳ ಗಾಢ ಪರಿಚಯವಾಗುತ್ತದೆ. ಇಲ್ಲಿ ಚಿತ್ರಿಸಿದ ಘಟನೆಗಳು ಓದುಗನ ಮೇಲೆ ಬೋಧಪ್ರದವಾದ ಪರಿಣಾಮ ಬೀರುವಲ್ಲಿ ಯಶಸ್ವಿಯಾಗುತ್ತವೆ. ಪ್ರವಾಸಕಥನವೂ ಕಾಂತಾಸಮ್ಮಿತವಾದ ಉಪದೇಶ ಮಾಡಬಲ್ಲದು ಎಂಬುದಕ್ಕೆ ಅನುಪಮಾರ "ಸ್ನೇಹಯಾತ್ರೆ" ಸಾಕ್ಷಿಯಾಗ ಬಲ್ಲದು. ಒಂದು ಇತಿಹಾಸದ ಪುಸ್ತಕ ಮಾಡಬಹುದಾದ ಪರಿಣಾಮವನ್ನು ಈ ಪ್ರವಾಸಕಥನಗಳು ಮಾಡಬಲ್ಲವು ಎಂಬುದರಲ್ಲಿ ಸಂದೇಹವಿಲ್ಲ.

ಯಾವುದೇ ಒಂದು ಸಾಹಿತ್ಯ ಕೃತಿ (ಅದು ಯಾವ ರೂಪದಲ್ಲೇ ಇರಲಿ) ಮಹತ್ವದ್ದು ಎನಿಸಿಕೊಳ್ಳಬೇಕಾದರೆ, ಅದರಲ್ಲಿ ಸಾಮಾಜಿಕ ಪ್ರಜ್ಞೆ ಕಾಣಿಸಿಕೊಳ್ಳ ಬೇಕಾದದ್ದು ಅನಿವಾರ್ಯ. ಸಾಮಾಜಿಕ ಪ್ರಜ್ಞೆ ಎಂದರೆ ಲೇಖಕ ತನ್ನ ಸುತ್ತ ಮುತ್ತಲಿನ ಬದುಕಿನೊಂದಿಗೆ ಸಂವೇದನೆಗೊಂಡು, ವ್ಯಷ್ಟಿ ಭಾವವನ್ನು ಸಮಷ್ಟಿಭಾವ ದೊಂದಿಗೆ ಸಂಗತಗೊಳಿಸುವ ಕ್ರಿಯೆ. ಈ ಮೂಲಕ ತನಗಾದ ಅನುಭವಗಳನ್ನು, ಒಂದು ನಿರ್ದಿಷ್ಟ ನಿಲುವಿನಲ್ಲಿ ಸಂಧಿಸಿ, ಅವುಗಳನ್ನು ಕಲಾಕೃತಿಯ ಶಿಸ್ತಿಗೆ ಅಳವಡಿಸು ತ್ತಾನೆ. ಆದ್ದರಿಂದಲೇ ಕೃತಿ ಬದುಕನ್ನು ಅರ್ಥೈಸುವ ವ್ಯಾಖ್ಯಾನವಾಗುವದುಂಟು. ಸೃಜನಶೀಲ ಬರಹಗಾರರಿಗೆ ಮಾನವನ ಚಿಕ್ಕ ವರ್ತನೆಯೂ ಅರ್ಥಪೂರ್ಣವೆನಿಸುತ್ತದೆ. ಬಾಳಿನಲ್ಲೊದಗುವ ಅಘಟಿತ ಘಟನೆಗಳಷ್ಟೆ ಪಾಠ ಕಲಿಸಬಹುದೆಂದಲ್ಲ. ಅತಿ ಪುಟ್ಟ ಘಟನೆಯೂ ವ್ಯಕ್ತಿಗಳಿಗೆ ಪಾಠ ಕಲಿಸಬಲ್ಲ ಶಕ್ತಿ ಹೊಂದಿವೆ ಎಂಬುದನ್ನು ಅನುಪಮಾ ಹಲವಾರು ಕಡೆ ಎತ್ತಿ ತೋರಿಸುತ್ತಾರೆ. ಅಂಥ ಒಂದೆರಡು ಉದಾಹರಣೆಗಳು ಹೀಗಿವೆ:

ಲೇಖಿಕಿ ಲಂಡನ್ ಪ್ರಯಾಣ ಮಾಡುತ್ತಿದ್ದರು. ಎಲ್ಲ ಸ್ಥಳಗಳನ್ನು ತೋರಿಸಲು ಒಬ್ಬ ಮಾರ್ಗದರ್ಶಿ ಅವರ ಜೊತೆ ಹೊರಟಿದ್ದಳು. ಅವಳ ಕೈಯಲ್ಲಿ "ಡೈಲಿ ಟೆಲಿಗ್ರಾಫ್" ಎಂಬ ಆಂಗ್ಲ ಪತ್ರಿಕೆ ಇತ್ತಂತೆ. ಅಷ್ಟರಲ್ಲಿ ಯಾರೋ ಭಾರತೀಯ ರೊಬ್ಬರು "ಸ್ವಲ್ಪ ಪತ್ರಿಕೆಯನ್ನು ಕೊಡುತ್ತೀರಾ" ಎಂದಾಕೆಯನ್ನು ಕೇಳಿದರಂತೆ. ಆಗ ಅವಳು ಪತ್ರಿಕೆ ಕೇಳಿದ ವ್ಯಕ್ತಿಯನ್ನು ಆಶ್ಚರ್ಯದಿಂದ ನೋಡಿ "No. We don't lend papers. We buy them" ಎಂದು ಹೇಳಿದಳಂತೆ.

ಇನ್ನೊಮ್ಮೆ ಲೇಖಿಕಿ ಜರ್ಮನ್ನಿನ ರಸ್ತೆಯಲ್ಲಿ ಹೊರಟ್ಟಿದ್ದರಂತೆ. ಶುಭ್ರವಾದ ರಸ್ತೆಯ ಮೇಲೆ ಭಾರತೀಯ ಮಹಿಳೆಯೊಬ್ಬಳು ತನ್ನ ಜಾಯಮಾನದಂತೆ ಪಿಚಕ್ಕನೆ ಉಗುಳಿದಳಂತೆ. ಆಗ ಸಮೀಪದಲ್ಲಿ ಹೊರಟ ಜರ್ಮನ ಮಹಿಳೆ ಉಗುಳಿದವಳನ್ನು ಸಿಟ್ಟಿನಿಂದ ನೋಡಿ ಉಗುಳುವ ಡಬ್ಬದ ಕಡೆ ಕೈ ಮಾಡಿ ತೋರಿಸಿ ಮುಂದೆ ಹೋದಳಂತೆ. ಇಂಥ ಅನೇಕ ಪ್ರಸಂಗಗಳನ್ನು ಹೇಳುವಲ್ಲಿ ಲೇಖಿಕಿ ಭಾರತೀಯರ ಜೀವನದ ಶಿಸ್ತನ್ನು ವಿಡಂಬಿಸುತ್ತಾರೆ. ಅರ್ಥಾತ್ ಇಂಥಲ್ಲೆಲ್ಲಾ ನಮ್ಮವರ ಬದುಕನ್ನು ಲೇವಡಿ ಮಾಡುವ ಬಯಕೆ ಲೇಖಿಕಿಗೆ ಇದೆ ಎಂದಲ್ಲ. ಬದಲಾಗಿ ತೀವ್ರವಾದ ಸಾಮಾಜಿಕ ಕಳಕಳಿ ಇದೆ. ಭಾರತೀಯರು ಇನ್ನೂ ತಮ್ಮನ್ನು ತಾವು ಎಲ್ಲೆಲ್ಲಿ ತಿದ್ದಿಕೊಳ್ಳಬೇಕಾಗಿದೆ ಎಂಬುದನ್ನು ತೋರಿಸುವ ಹಂಬಲ ಇದೆ. ಪಾಶ್ಚಿಮಾತ್ಯ ಬದುಕಿನ ಧೋರಣೆಯನ್ನು ಚಿತ್ರಿಸುವಾಗ ಅವರೊಂದಿಗೆ ಭಾರತೀಯ ಬದುಕನ್ನು ತುಲನೆಗೈಯುತ್ತಾ, ಈ ಮೂಲಕ ನಮ್ಮವರು ಹೇಗೆ ಮುಂದುವರಿಯಬಹುದು ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತಾರೆ. ಪ್ರವಾಸ ಕಥನದಂಥ ಸಾಹಿತ್ಯರೂಪವೊಂದು ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸುವ ಜನಾಂಗದ ಮನವನ್ನು ಸಂಸ್ಕರಿಸಬಲ್ಲದು ಎಂಬುದನ್ನು ಅನುಪಮಾರ ಈ ಎರಡು ಪುಸ್ತಿಕೆಗಳು ಸ್ವಲ್ಪ ಮಟ್ಟಿಗೆ ದೃಢೀಕರಿಸುತ್ತವೆ.

ಅನುಪಮಾರದು ವಸ್ತುನಿಷ್ಠ ದೃಷ್ಟಿಕೋನ. ಪರಿಸ್ಥಿತಿಯನ್ನು ವಿಜೃಂಭಿಸಿ ಹೇಳುವದು ಅವರ ಜಾಯಮಾನವಲ್ಲ. ವಿದೇಶಗಳನ್ನು, ಅದರಲ್ಲೂ ಮುಂದುವರಿದ ದೇಶಗಳನ್ನು ಕುರಿತು ಹೇಳುವಾಗ ನಮ್ಮವರು ಆ ದೇಶದೆಲ್ಲವನ್ನು ಅಟ್ಟಕ್ಕೇರಿಸಿ ನಮ್ಮದೆಲ್ಲವೂ ಕಳಪೆ ಎನ್ನುವದುಂಟು. ಆದರೆ ಲೇಖಿಕಿಗೆ ಈ ತರದ ಹುಚ್ಚು ವ್ಯಾಮೋಹವಿಲ್ಲ. ಬ್ರಿಟಿಷ ರಾಣಿಯ ಅರಮನೆ ನೋಡಿ ಇದು ಮೈಸೂರಿನ ಅರಮನೆಗಿಂತ ಸುಂದರವೇನು ಇಲ್ಲ ಎಂದು ನಿರ್ಭಿಡೆಯಿಂದ ಸತ್ಯವನ್ನೇ ಹೇಳುತ್ತಾರೆ.

ಯಾವ ದೇಶವನ್ನೇ ಕುರಿತು ಹೇಳಲಿ, ಆ ದೇಶದ ಚಿತ್ರಕಲೆ, ಸಂಗೀತ, ಶಿಲ್ಪಕಲೆ, ಸಾಹಿತ್ಯ ಮತ್ತು ಅವರ ರಾಜಕೀಯ, ವೈಜ್ಞಾನಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಬದುಕು ಹೀಗೆ ಎಲ್ಲಾ ಆಯಾಮಗಳ ಪೂರ್ಣ ಪರಿಚಯ ಮಾಡಿಕೊಡುತ್ತಾರೆ. ಪಾಶ್ಚಿಮಾತ್ಯ ದೇಶದ ದಾರ್ಶನಿಕರ, ಪ್ರಸಿದ್ಧ ಕವಿಗಳ, ವಿಜ್ಞಾನಿಗಳ

ಬದುಕಿನ ಹಲವಾರು ಸ್ವಾರಸ್ಯಪೂರ್ಣವಾದ ಘಟನೆಗಳನ್ನು ಸಾಂದರ್ಭಿಕವಾಗಿ ಹೇಳಲು ಮರೆಯುವದಿಲ್ಲ. ಪ್ರಸಿದ್ಧ ದಾರ್ಶನಿಕ "ಇಮ್ಯಾನ್ಯುಯಲ್ ಕ್ಯಾಂಟ್"-ಈತ ದಿನಾಲು ತಪ್ಪದೆ ಹವಾ ಸೇವನೆಗೆ ಹೋಗುತ್ತಿದ್ದನಂತೆ. ಎಷ್ಟು ಕರಾರುವಕ್ಕಾಗಿ ಈತ ವಾಯು ವಿಹಾರಕ್ಕೆ ಮನೆಬಿಟ್ಟು ಹೊರಡುತ್ತಿದ್ದನೆಂದರೆ ಕೋನಿಗ್ಸಬರ್ಗನ ಹೆಂಗಸರು ಅವನನ್ನು ಬೀದಿಯಲ್ಲಿ ನೋಡಿದೊಡನೆ ತಮ್ಮ ಗಡಿಯಾರದ ಸಮಯವನ್ನು ಸರಿಪಡಿಸಿಕೊಳ್ಳು ತ್ತಿದ್ದರಂತೆ.

ಜರ್ಮನ ಕಾವ್ಯ ಪ್ರಪಂಚದ ಸಾಮ್ರಾಟನಾದ ಗಯಟೆ ತುಂಬು ವೃದ್ಧಾಪ್ಯದ ವರೆಗೆ ಬದುಕಿ, ತನ್ನ ಕುರ್ಚಿಯಲ್ಲಿ ಕುಳಿತು ಬರೆಯುತ್ತಲೆ ಸತ್ತನಂತೆ. ಆತ ಯಾವಾಗಲೂ "ನಾನು ಹುಟ್ಟಿದ್ದೇ ಬರಹಗಾರನಾಗುವದಕ್ಕಾಗಿ. ನನಗೆ ಅನಿಸಿದ್ದನ್ನು ಹಾಳೆಯ ಮೇಲೆ ಚೆನ್ನಾಗಿ ಬರೆದರೆ ನನಗಾಗುವ ಸಂತೋಷ ವರ್ಣನೆಗೆ ನಿಲುಕದ್ದು ಎಂದು ಹೇಳುತ್ತಿದ್ದನಂತೆ. ಇಂಥ ಎಷ್ಟೋ ಸಂಗತಿಗಳು ಇಲ್ಲಿ ಮೂಡಿಬಂದಿವೆ. ಲೇಖಕಿಗೆ ಹಲವಾರು ಕ್ಷೇತ್ರಗಳ ಆಳವಾದ ಅಧ್ಯಯನವಿಲ್ಲದಿದ್ದರೂ, ಪ್ರಾಥಮಿಕ ಅಭ್ಯಾಸವಂತೂ ಅವಶ್ಯವಾಗಿ ಇದೆ. ಅದಕ್ಕೆಂತಲೆ ಯಾವುದೇ ಕಟ್ಟಡವನ್ನು ಕುರಿತು ಅದು ಗಾಥಿಕ್, ಕೊರಿಯಾಂಥಿನ್, ಬರೂಕ್ ಮುಂತಾದ ಯಾವ ಶೈಲಿಯಲ್ಲಿದೆ ಎಂಬು ದನ್ನು ಕರಾರುವಕ್ಕಾಗಿ ಹೇಳಲು ಸಾಧ್ಯವಾಗಿದೆ.

ಈ ಎರಡು ಪ್ರವಾಸಕಥನಗಳು ಓದಿದಾಗ ಅಲ್ಲಿ ವರ್ಣಿತವಾದ ದೇಶಗಳ ಅಂತರಂಗ ಮತ್ತು ಬಹಿರಂಗಗಳ ಒಟ್ಟು ದಿಗ್ದರ್ಶನವಾಗುತ್ತದೆ ಎಂಬುದು ಖಚಿತ.

ಎರಡೂ ಕೃತಿಗಳನ್ನು ಓದಿ ಮುಗಿಸಿದಾಗ ಮುಂದುವರೆದ ದೇಶಗಳೊಂದಿಗೆ ನಮ್ಮ ದೇಶವನ್ನು ಹೋಲಿಸಿ ತೂಗಿ ನೋಡುವ ಒಂದು ದೃಷ್ಟಿಕೋನ ಸಹೃದಯ ನಲ್ಲಿ ಮೊಳೆಯತೊಡಗುತ್ತದೆ. ಇತರರಿಂದ ನಾವು ಕಲಿಯಬೇಕಾದ ಅಂಶಗಳಿವೆ ಎಂಬ ಭಾವನೆ ಉತ್ಪನ್ನವಾಗದೆ ಇರದು. ಇಂಥ ಪರಿಭಾವನೆಯನ್ನು ಓದುಗನ ಮೇಲೆ ಬಿಟ್ಟು ಕೊಡುವಲ್ಲಿಯೆ ಕಲಾಕೃತಿಗಳ ಸಾರ್ಥಕ್ಯ ಅಡಗಿದೆಯಲ್ಲವೆ?

* 'ಅಂಗೈಯಲ್ಲಿ ಯೂರೋ ಅಮೇರಿಕ'

-ವರದಾ ಶ್ರೀನಿವಾಸ

ಇಲ್ಲಿ ಲೇಖಕಿಯರ ಕೃತಿಗಳು ಹಾಗೂ ಆ ಕೃತಿಗಳನ್ನು ಓದುವ ಓದುಗರು-ಈ ಕುರಿತು ಎರಡು ಮಾತುಗಳನ್ನು ಮೊದಲು ಹೇಳಬೇಕು.

ಸಾಹಿತ್ಯ ಪ್ರಕಾರಗಳಲ್ಲಿ ಮಹಿಳೆಯರನ್ನು ಅತೀ ಹೆಚ್ಚು ಆಕರ್ಷಿಸಿದ ಪ್ರಕಾರ ವೆಂದರೆ ಕಾದಂಬರಿ. ಪುರುಷಪ್ರಧಾನ ಸಮಾಜದಲ್ಲಿ ಗಂಡಿನಿಂದ ಶೋಷಣೆಗೊಳಗಾದ, ಆಗುತ್ತಿರುವ ಹೆಣ್ಣು, ಹೆಣ್ಣಿನ ಸಮಸ್ಯೆಗಳ ಹಲವಾರು ಮುಖಗಳು, ಪ್ರೀತಿ-ಪ್ರಣಯ, ತ್ರಿಕೋಣ ಪ್ರೇಮ, ತ್ಯಾಗ-ಇತ್ಯಾದಿ ನಮ್ಮ ಕಾದಂಬರಿಕಾರ್ತಿಯರ ಕಾದಂಬರಿಗಳ ವಿಷಯ. ಸಾಹಿತ್ಯದ ಈ ಪ್ರಕಾರದಲ್ಲಿ ಸಂಖ್ಯಾದಾಖಲೆ ನಿರ್ಮಿಸುತ್ತಿರುವ ಕಾದಂಬರಿ ಗಳು ಕೇವಲ ಒಂದು ವರ್ಗದ ಓದುಗರನ್ನು ಸೆಳೆಯುತ್ತವೆ. ಹದಿಹರೆಯದ ಹುಡುಗ ಹುಡುಗಿಯರು, ಉದ್ಯೋಗಸ್ಥರಲ್ಲದ ವಿವಾಹಿತ, ಅವಿವಾಹಿತ ಮಹಿಳೆಯರು ತಮ್ಮ ಮನೆಕೆಲಸದ ತರುವಾಯದ ಅವಧಿಯನ್ನು ಕಳೆಯುವವರು ಇಂಥ ಕಾದಂಬರಿಗಳ ಓದುಗರು. ಕೇವಲ ಸಮಯವನ್ನು ಕೊಲ್ಲಲು ಅಥವಾ ಕಳೆಯಲು, ಒಂದು ಬಾರಿ ಓದಿ ಬದಿಗಿರಿಸುವಂಥ ಕಾದಂಬರಿಗಳೇ ಈಗ ಬಹು ಪಾಲು ಬರುತ್ತಿವೆಯೆಂಬುದು ನಿಷ್ಠುರ ವಾದ ಮಾತಾದರೂ ಸಹಜ ಸತ್ಯ.

ಯಾವುದೇ ಒಂದು ಕೃತಿ ಕಾಲ, ದೇಶ, ಪರಿಸರಗಳನ್ನು ಮೀರಿಯೂ ಉಳಿದಾಗ ಶ್ರೇಷ್ಠ ಕೃತಿಯಾಗುತ್ತದೆ. ಅದು ಸಮಾಜ, ಲೋಕ ಅನುಸರಿಸುವ ಅನುಕರಿಸುವ ವಿಷಯ ವಿಚಾರಗಳನ್ನು ಒಳಗೊಂಡಿರುತ್ತದೆ. ಅದು ಸಾಹಿತ್ಯದ ಯಾವುದೇ ಪ್ರಕಾರವಾಗಬಹುದು. ಇತ್ತೀಚಿನ ಕಾದಂಬರಿಗಳನ್ನು ಗಮನಿಸಿದಾಗ ತನ್ನ ವಸ್ತು ವಿಷಯದಿಂದ, ಹೊಸತಂತ್ರದಿಂದ, ಪಾತ್ರವಿನ್ಯಾಸದಿಂದ, ವಿಶಿಷ್ಟ ಶೈಲಿಯಿಂದ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುವಂಥ ಒಂದು ಉತ್ತಮ ಕಾದಂಬರಿ ದೊರೆಯಲಿಲ್ಲ ವೆನ್ನುವುದನ್ನು ಕಳಕಳಿಯಿಂದ ಹೇಳಬೇಕಾಗಿದೆ.

ಕಾವ್ಯ, ನಾಟಕ, ಹಾಗೂ ಇತರ ಪ್ರಕಾರಗಳನ್ನು ಗಮನಿಸಿದಾಗಲೂ ಮಹಿಳೆಯರ ಕೃತಿಗಳ ಪ್ರಕಟಣೆ ಕೈಬೆರಳೆಣಿಕೆಯಷ್ಟು ಇಲ್ಲವೆಂಬುದು ವಾಸ್ತವ ಸತ್ಯ. ಈ ನಿಟ್ಟಿನಲ್ಲಿ ಗ್ರಂಥಾಲಯ ಹಾಗೂ ಪ್ರಕಾಶನಗಳನ್ನು ಶೋಧಿಸಿದಾಗ ಎರಡು ದೃಷ್ಟಿ ಗಳಿಂದ ಓದಲೇಬೇಕಾದ ಕೃತಿ ಎಂದು ನನಗನಿಸಿದ್ದನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಅಂದರೆ ಓದಬಹುದಾದ, ಓದಬೇಕಾದ ಕೃತಿ ಒಂದೇ ಒಂದು; ಮಿಕ್ಕಿದ್ದು ಅರ್ಹವಲ್ಲ, ಅನರ್ಹ ಎಂದು ಅರ್ಥೈಸಬಾರದು. ಲಘು ಓದಿಗಾಗಿ, ಮನರಂಜನೆಗಾಗಿ, ಕೇವಲ ಸಮಯ ಕಳೆಯಲು ಓದಬಹುದಾದ ಕೃತಿಗಳು ಹೇರಳವಾಗಿವೆ.

ಮೊದಲನೇ ದೃಷ್ಟಿಯೆಂದರೆ ಸಾಹಿತ್ಯದ ಮೇಲಿನ ಅಭಿಮಾನದಿಂದ ಓದುವ ಓದುಗರು. ಸಾಹಿತ್ಯಾಭ್ಯಾಸದ ದೃಷ್ಟಿಯಿಂದ ಓದುವ ಓದುಗರು. ಈ ವರ್ಗಕ್ಕೆ ಸೇರಿದವರು ಪುರುಷರ ಕೃತಿಗಳಾಗಿರಲಿ, ಮಹಿಳೆಯರ ಕೃತಿಗಳಾಗಿರಲಿ, ಒಟ್ಟಿನಲ್ಲಿ ಓದುತ್ತಾರೆ. ಇನ್ನೊಂದು ದೃಷ್ಟಿಯೆಂದರೆ ಯಾವುದೇ ಒಂದು ಕೃತಿ ಓದಿದರೆ ಅದರಿಂದ ಏನಾದರೂ ಪ್ರಯೋಜನವಾಗಬೇಕು. ಫಲ ಪಡೆಯಬೇಕು. ಓದಿದ ಸಮಯ ವ್ಯರ್ಥವಾಗಬಾರದು; ಜ್ಞಾನ ವೃದ್ಧಿಯಾಗಬೇಕು, ಎಂಬ ಉದ್ದೇಶ ಹೊಂದಿದ ಓದುಗರು.

ಡಾ। ಅನುಪಮಾ ನಿರಂಜನ ಅವರ 'ಅಂಗೈಯಲ್ಲಿ ಯೂರೋ ಅಮೇರಿಕ' ಈ ಎರಡೂ ದೃಷ್ಟಿಗಳಿಂದ ಓದಲೇಬೇಕಾದ ಕೃತಿ. ಈ ಕೃತಿಯನ್ನು ಇಲ್ಲಿ ವಿಮರ್ಶಿಸಲಿದ್ದೇನೆ. ವಿಮರ್ಶೆಯೆಂದರೆ ಸಾಧಾರಣವಾಗಿ ಎಲ್ಲರೂ ತಿಳಿದಿರುವಂತೆ ಕೃತಿಯೊಂದನ್ನು ಸಮರ್ಥವಾದ ಓದುಗ ತನಗಾಗಿ ಅರ್ಥ ಮಾಡಿಕೊಳ್ಳುವ ಹಾಗೂ ಸುತ್ತಣವರಿಗೆ ಅರ್ಥ ಮಾಡಿಕೊಡುವ ಒಂದು ಪ್ರಾಮಾಣಿಕ ಪ್ರಯತ್ನ. ಸೀಮಿತ ಅವಧಿಯಲ್ಲಿ ನಾನು ಓದಿದ ಕೃತಿಯ ವಿಮರ್ಶೆಯನ್ನು ಸಾಧ್ಯವಾದಷ್ಟು ಪ್ರಾಮಾಣಿಕವಾಗಿ ಹೇಳಲು ಪ್ರಯತ್ನಿಸಿದ್ದೇನೆ.

'ಅಂಗೈಯಲ್ಲಿ ಯೂರೋ ಅಮೇರಿಕ'-ಒಂದು ಪ್ರವಾಸ ಕಥನ. ಪ್ರವಾಸದ ಉದ್ದೇಶಗಳು ಹಲವು ವಿಧ. ನಾನಾ ತೆರ. ಅವರವರ ಅಭಿರುಚಿ, ವಿದ್ಯೆ, ಸಂಸ್ಕಾರ, ಆದ್ಯತೆ, ವಿಶಿಷ್ಟತೆಯನ್ನು ಕಾಣುವ ಕಣ್ಣು-ಇವಕ್ಕೆ ಅನುಗುಣವಾಗಿ ಪ್ರವಾಸಿಗರ ಅನುಭವ ವರ್ಣರಂಜಿತ, ಕಥನ ಯೋಗ್ಯ.

ಪ್ರತಿಯೊಂದು ಪ್ರವಾಸವೂ ಒಂದು ಅಪೂರ್ವ ಪ್ರಯೋಗ. ಒಂದು ಹೊಸ ಅನುಭವ. ಅದರೊಂದಿಗೆ ಆಗುವ ನಾನಾ ವಿಧದ ನಾಡು-ನುಡಿ, ಜನರ ಸಂಪರ್ಕ, ಕಂಡ ವೈವಿಧ್ಯಪೂರ್ಣ ದೃಶ್ಯಗಳು ಮನಸ್ಸನ್ನು ಅರಳಿಸುವುದರ ಜತೆಯಲ್ಲಿ ಜ್ಞಾನ ವಿಕಸನಕ್ಕೆ ಸಹಕಾರಿಯಾಗುತ್ತವೆ. ಅದರಿಂದ ಜೀವನಕ್ಕೊಂದು ಹೊಸ ಅರ್ಥ, ಹೊಸ ಕಳೆ! ಅದನ್ನು ಬರೆಹ ರೂಪಕ್ಕಿಳಿಸಿದಾಗ ಆ ಅನುಭವದ ಗಟ್ಟಿ ಒಂದು ರಸಸೃಷ್ಟಿ! ಅಂಥ ಒಂದು ಪ್ರವಾಸಕಥನ ಡಾ। ಅನುಪಮಾ ನಿರಂಜನ ಅವರ 'ಅಂಗೈಯಲ್ಲಿ ಯೂರೋ ಅಮೇರಿಕ'. ಸಂಪ್ರದಾಯದ ಮುಸುಕು, ಧಾರ್ಮಿಕ ದೃಷ್ಟಿಕೋನಗಳಿಗೆ ಬದ್ಧರಾಗುವಿಕೆಯಿಂದ ಹೊರತಾದ ಕೃತಿ ಇದು.

ಸಾಹಿತ್ಯ ಸೃಜನೆಗೆ ತೊಡಗಿದ ಮೂರು ದಶಕಗಳ ಅವಧಿಯಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ೪೫ ಕೃತಿಗಳನ್ನು ರಚಿಸಿದ ಲೇಖಿಕೆ ಡಾ। ಅನುಪಮಾ ನಿರಂಜನ ವೈದ್ಯಕೀಯ ವಿಚಾರದರ್ಶನವನ್ನೂ ಸರಳ ಕನ್ನಡದಲ್ಲಿ ವಿಷದೀಕರಿಸಿದ್ದಾರೆ. ಓದುಗ

ಸಹೃದಯರನ್ನು ಕಾದಂಬರಿಯ ರಮ್ಯ ಮಧುರ ಲೋಕ ಸಂಚಾರಿಗಳನ್ನಾಗಿಸಿದ್ದಾರೆ. 'ದಿನಕ್ಕೊಂದು ಕಥೆ' ನೀಡಿ ಮಕ್ಕಳ ಸಾಹಿತಿಯೂ ಆಗಿದ್ದಾರೆ. ಪ್ರವಾಸ ಸಾಹಿತ್ಯಕ್ಕೆ ಅವರ ಎರಡನೇ ಅಮೂಲ್ಯ ಕೊಡುಗೆ 'ಅಂಗೈಯಲ್ಲಿ ಯೂರೋ ಅಮೇರಿಕ'.

೧೯೮೧ರಲ್ಲಿ ಯೂರೋಪು ಮತ್ತು ಅಮೇರಿಕಾ ಪ್ರವಾಸ ಮಾಡಿ ಬಂದ ಅನುಪಮಾ ನಿರಂಜನ ಅವರ ಈ ಕೃತಿ ಮೊದಲು ಮಾಸಪತ್ರಿಕೆ ಒಂದರಲ್ಲಿ ಧಾರಾವಾಹಿಯಾಗಿ ಹರಿದು ಬಂತು. ಈ ಪ್ರವಾಸಕಥನ ಹದಿನಾರು ಅಧ್ಯಾಯಗಳನ್ನು ಹೊಂದಿದೆ.

ಪ್ರವಾಸದ ಪ್ರಾರಂಭದಲ್ಲೇ ಪಾಸ್‌ಪೋರ್ಟ್, ಟಿಕೇಟನ್ನು ತೀರಾ ವಿಳಂಬವಾಗಿ ಪಡೆಯುವಾಗ ಯೂರೋಪು ಪ್ರವಾಸ ರದ್ದೇ ಆಯಿತೆನ್ನುವಷ್ಟು ನಿರಾಶೆ ಹೊಂದಿದ ಲೇಖಕಿ ಕೊನೆಗೂ ಪಾಸ್‌ಪೋರ್ಟ್, ಟಿಕೇಟು ಪಡೆದು ವಿಮಾನವೇರಿದಾಗ ನಿರಾಳ ನಿಟ್ಟುಸಿರು ಬಿಟ್ಟು ವಿಘ್ನ ನಿವಾರಣೆಯಾಯಿತು ಅಂದುಕೊಂಡರೆ, ಪ್ರಪಂಚದ ಅತ್ಯುನ್ನತ ಕಲೆ ಅರಳಿದ ರಮಣೀಯ ರೋಮಾದಲ್ಲಿ ಕಾಲಿರಿಸಿದಾಗ ಪ್ರಸೀತರಾದರೂ. ಸೂಟ್‌ಕೇಸ್ ಕಳೆದುಕೊಂಡು ವಿದೇಶ ಪ್ರಯಾಣ ಪ್ರಾರಂಭಿಸಬೇಕಾಯಿತಲ್ಲ ಎಂದು ವ್ಯಥೆ ಪಡುತ್ತಾರೆ. ಉಟ್ಟಸೀರೆ ಬಿಟ್ಟು ಬೇರೆ ಬಟ್ಟೆ ಇಲ್ಲದಾಗ 'ರೋಮನ್ ಟೋಗಾ'ವನ್ನೇ ರಾತ್ರಿಯುಡುಪು ಮಾಡಿಕೊಂಡ ಅವರು ತಮ್ಮ ಅನುಭವವನ್ನು ರಮಣೀಯ ರೋಮಾ, ಪುಷ್ಪನಗರಿ, ಪರ್ವತಶಿಖರಕ್ಕೆ ಹಿಮಕಿರೀಟ, ಸರೋವರಗಳ ನಾಡಿನಲ್ಲಿ ಚತುರೆ, ವಿಜ್ಞಾನ-ಸಾಹಿತ್ಯ-ಕಲೆಗಳ ತವರೂರು, ಥೇಮ್ಸ್ ನದೀ ತಟದಲ್ಲೊಂದು ನಗರ, ಗಗನಚುಂಬಿ ನಗರದಲ್ಲಿ ಶಾಂತಿ ಸ್ವಾತಂತ್ರ್ಯ, ನ್ಯೂಯಾರ್ಕ್‌ನಲ್ಲಿ ಕನ್ನಡ, ವರ್ಣಮಯ ನಯಾಗರ, ವಾಷಿಂಗ್‌ಟನ್‌ನಲ್ಲೊಂದು ಕಲಾಕ್ಷೇತ್ರ, ವಿಜ್ಞಾನದ ದಿಟ್ಟ ಹೆಜ್ಜೆ ಸ್ಮಿತ್ ಸೋನಿಯನ್, ಡಿಸ್ನಿ ಮಾಯಾಲೋಕ, ದೇವತೆಗಳ ನಗರ - ಈ ರೀತಿ ಹದಿನಾರು ಶೀರ್ಷಿಕೆಗಳಡಿಯಲ್ಲಿ ತಮ್ಮ ಪ್ರವಾಸಾನುಭವವನ್ನು ರಮಣೀಯವಾಗಿ, ಸರಸವಾಗಿ, ಚಿತ್ರವತ್ತಾಗಿ, ಆಕರ್ಷಕ ಸುಲಲಿತ ಶೈಲಿಯಲ್ಲಿ ನಮ್ಮ ಮುಂದಿರಿಸಿದ್ದಾರೆ. ಕೇವಲ ಅನುಭವವನ್ನಷ್ಟೇ ಅಲ್ಲ, ಆಯಾ ಸ್ಥಳಗಳ ಇತಿಹಾಸ ಪ್ರಸಿದ್ಧ ವಿಷಯಗಳನ್ನು ಸ್ಪಷ್ಟ ದಾಖಲೆಗಳ ಸಹಿತ ದಾಖಲಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.

ರೋಮಿನಲ್ಲಿ ಅವರು ಕಂಡ ಪ್ಯಾಂಥಿಯಾನ್- ಅದ್ಭುತ ದೇವಾಲಯ. ಜಗತ್ತಿನಲ್ಲೇ ಅತೀ ದೊಡ್ಡ ಸೈಂಟ್‌ಪೀಟರನ ಚರ್ಚ್ ಕುರಿತ ಲೇಖಕಿಯ ವರ್ಣನೆ ಓದುಗರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಮಾಡಿದೆ. ಅಲ್ಲಿಯ ಜಗತ್‌ಪ್ರಸಿದ್ಧ ಕಲಾಕಾರ ಮೈಕೆಲ್ ಏಂಜೆಲೋ ರಚಿಸಿದ ಅಪೂರ್ವ ಚಿತ್ರಗಳನ್ನು ಹಾಗೂ ಶಿಲ್ಪವನ್ನು ಅಷ್ಟೇ ಅಪೂರ್ವವಾಗಿ ತಮ್ಮ ಲೇಖನಿಯಲ್ಲಿ ಹಿಡಿದಿರಿಸಿದ್ದಾರೆ.

ರೋಮ್, ಫ್ಲಾರೆನ್ಸ್, ಮಿಲಾನೋ, ಜಿನೀವಾ, ಸ್ವಿಜರ್‌ಲ್ಯಾಂಡ್‌ಗಳಲ್ಲಿನ ಅನುಭವ ಓದಿಯೇ ತೀರಬೇಕು. ಅಲ್ಲೆಲ್ಲ ಎಲ್ಲಾ ಕೆಲಸಗಳೂ ಯಂತ್ರಗಳ ಮೂಲಕ ನಡೆಯುವುದರಿಂದ ಅಲ್ಲಿಯವರಿಗೆ ದೈಹಿಕ ಶ್ರಮವೇ ಇಲ್ಲವಾದರೂ ಒಳ್ಳೆಯ ಮೈಮಾಟ ಉಳಿಸಿಕೊಂಡಿರುವುದನ್ನು ನೋಡಿ ಲೇಖಕಿ ಆಶ್ಚರ್ಯ ಪಟ್ಟುಕೊಂಡಿದ್ದಾರೆ.

ಪ್ಯಾರಿಸ್, ಸೀನ್ ನದಿ, ಲುಕ್ಸೆಂಬರ್ಗ್ ಉದ್ಯಾನ, ಇಂಗ್ಲೆಂಡ್, ಲಂಡನ್, ನಯಾಗರ, ವಾಷಿಂಗ್‌ಟನ್, ಶಿಕಾಗೋ, ಡಿಸ್ನಿಲ್ಯಾಂಡ್, ಲಾಸ್‌ಏಂಜಲೀಸ್ ಮೊದಲಾದ ಸ್ಥಳಗಳಲ್ಲಿನ ಇತಿಹಾಸ ವೈಶಿಷ್ಟ್ಯ, ಇತರ ವೈಶಿಷ್ಟ್ಯಗಳನ್ನು ರಸವತ್ತಾದ ಶೈಲಿಯಲ್ಲಿ ವಿವರಿಸಿರುವುದು ಲೇಖಕಿಯ ವೈಶಿಷ್ಟ್ಯ.

ಅಲ್ಲಲ್ಲಿ ಅವರ ಭಾರತೀಯ ಮಿತ್ರರ ಮನೆಯಲ್ಲಿ ಉಳಕೊಂಡಾಗ ಭಾರತೀಯ ಅಡುಗೆ ಸಿಕ್ಕಾಗ ಅವರು ಪಟ್ಟ ಖುಷಿ, ಭಾರತೀಯ ಮಿತ್ರರ ಪ್ರತಿಕ್ರಿಯೆ-ಎಲ್ಲವನ್ನು ಓದಿಯೇ ಆನಂದಿಸಬೇಕು.

ಒಟ್ಟಿನಲ್ಲಿ ಹೆಸರೇ ಹೇಳುವಂತೆ ಲೇಖಕಿ ಓದುಗರಿಗೆ ಅಂಗೈಯಲ್ಲಿ 'ಯೂರೋ ಅಮೇರಿಕ ದರ್ಶನ' ಮಾಡಿಸಿದ್ದಾರೆ.

ಅಡುಗೆ ಮನೆಯಲ್ಲಿ ಕುಳಿತು ಪ್ರಪಂಚದ ಕನಸು ಕಾಣುವವರಿಗೆ, ಹದಿಹರೆಯದ ಪ್ರಣಯ ಲೋಕದಲ್ಲಿ ವಿಹರಿಸುವ ಕನ್ಯೆಯರಿಗೆ, ನಡುಹರೆಯದ 'ಮಡಿ' ವಿಚಾರವಂತರಿಗೆ, ಪುರಾಣ ಪಠಣ ಮಾಡುವ ಪ್ರೌಢ ಮಹಿಳೆಯರಿಗೆ-ಕೇವಲ ಮಹಿಳೆಯರಿಗಷ್ಟೇ ಅಲ್ಲ, ಎಲ್ಲರಿಗೂ ಈ ಕೃತಿ ವಿಶ್ವರೂಪದರ್ಶನ ಮಾಡಿಸುತ್ತದೆ. ಜ್ಞಾನವನ್ನು ಬಯಸುವವರಿಗೆ ವಿಶೇಷ ಜ್ಞಾನ ಇಲ್ಲಿದೆ. ರಸವತ್ತಾದ ಅನುಭವ ಇಲ್ಲಿದೆ. ಪ್ರಪಂಚದ ವಿಚಾರ ಇಲ್ಲಿದೆ. ಇತಿಹಾಸ ಇಲ್ಲಿದೆ. ಕಥೆ ಇಲ್ಲಿದೆ - ಇಲ್ಲಿ ಏನಿಲ್ಲ? ಇಂಥ ಒಂದು ಕೃತಿ, ಕಾದಂಬರಿಯನ್ನು ಹೊರತು ಪಡಿಸಿದ ಕೃತಿ, ಲೇಖಕಿಯೊಬ್ಬರ ಕೃತಿ-ಎಲ್ಲರೂ ಓದಬೇಕಾದ ಕೃತಿ ಎಂಬುದು ನನ್ನ ಅನಿಸಿಕೆ.

'ದೇಶನೋಡು ಕೋಶ ಓದು' ಎಂಬುದು ಎಲ್ಲರೂ ಬಲ್ಲ ಮಾತು. ದೇಶ ನೋಡದೇ ಕೋಶ ಓದಿ ದೇಶ ನೋಡುವ ಒಂದು ಸುಯೋಗವನ್ನು ಲೇಖಕಿ ಇಲ್ಲಿ ಕಲ್ಪಿಸಿ ಕೊಟ್ಟಿದ್ದಾರೆ. ಈ ಪ್ರವಾಸಕಥನ ಒಂದು ರಸಲೋಕಯಾತ್ರೆ!

* ೨೯-೯-೮೫ರಂದು ಬೆಂಗಳೂರು ಆಕಾಶವಾಣಿಯ 'ವನಿತಾವಿಹಾರ' ಕಾರ್ಯಕ್ರಮದಲ್ಲಿ ಪ್ರಸಾರವಾಗಿದೆ.

* ಅನುಪಮಾ ನಿರಂಜನರ ವೈದ್ಯಕೀಯ ಸಾಹಿತ್ಯ ೧

-ಡಾ। ರಾಮಚಂದ್ರ ನಾಯಕ

ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ಪ್ರಾಚ್ಯ, ಪಾಶ್ಚಾತ್ಯ ಶಿಕ್ಷಣ ತಜ್ಞರು ಕೂಲಂಕಷವಾಗಿ ಸಮೀಕ್ಷೆ ನಡೆಸಿ ತೆಗೆದುಕೊಂಡ ತೀರ್ಮಾನ ಸರ್ವ ವಿದಿತ. ಇದನ್ನು ಮನಗಂಡಂಥ ಕೇಂದ್ರ-ರಾಜ್ಯ ಸರಕಾರಗಳ ಈ ನಿಟ್ಟಿನಲ್ಲಿಯ ಪ್ರಯತ್ನವೂ ಸ್ತುತ್ಯ. ಶಾಲೆ-ಸ್ನಾತಕ-ಸ್ನಾತಕೋತ್ತರ ವಿದ್ಯಾಭ್ಯಾಸಗಳು ಕನ್ನಡ ಮಾಧ್ಯಮದಲ್ಲಾದಂತೆ ಮುಂಬರುವ ಕೆಲವರುಷಗಳಲ್ಲಿ ವೈದ್ಯ ಶಾಸ್ತ್ರವನ್ನೂ ಕನ್ನಡ ಮಾಧ್ಯಮದಲ್ಲಿ ಕಲಿಸುವ ದಿನ ದೂರವಿಲ್ಲ. ಈ ಹಿನ್ನೆಲೆಯಲ್ಲಿ, ಸ್ವಾತಂತ್ರ್ಯಾನಂತರದ ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯದ ಬೆಳವಣಿಗೆಯ ಸಿಂಹಾವಲೋಕನ ಮಾಡಿದಾಗ, ಈ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದ ಹೆಸರಾಂತ ಲೇಖಕರು - ವಿದ್ವಾಂಸರು ಬೆರಳೆಣಿಕೆಗೆ ಮಾತ್ರ ದೊರೆಯುತ್ತಾರೆ. ಅದರಲ್ಲೂ ಮಹಿಳೆಯರು ಮತ್ತೂ ವಿರಳ. ಇಂಥವರಲ್ಲಿ, ವೈದ್ಯ ಸಾಹಿತ್ಯಕ್ಕೆ ಡಾ। ಅನುಪಮಾ ನಿರಂಜನರ ಸುಮಾರು ಮೂರು ದಶಕಗಳ ಕೊಡುಗೆ ಗಣ್ಯವಾದದ್ದು. ಮೂಲತಃ ವೈದ್ಯಪದವೀಧರೆಯಾದರೂ, ಇವರು ತಮ್ಮ ಜೀವನವನ್ನೇ ಸಾಹಿತ್ಯ ಸೇವೆಗೆ ಮೀಸಲಿಟ್ಟವರು. ಇದು ಕನ್ನಡದ ಮೇಲಣ ಪ್ರೀತಿಯಿಂದ, ಕಾರ್ಯನಿಷ್ಠೆಯಿಂದ ಎಸಗುತ್ತಿರುವ ತಪಸ್ಸು.

ಶಿಕ್ಷಣದಲ್ಲಿ ಎರಡು ಪ್ರಕಾರಗಳು-ಅದು ವೈದ್ಯ ಶಿಕ್ಷಣವೇ ಆಗಿರಲಿ, ಇನ್ನಾವುದೇ ಆಗಿರಲಿ - ಪ್ರೌಢ ಶಿಕ್ಷಣ ಮತ್ತು ಜನಪ್ರಿಯ ಶಿಕ್ಷಣ. ಪ್ರೌಢಶಿಕ್ಷಣದ ಉದ್ದೇಶ ಜ್ಞಾನ ಬೆಳೆಸುವುದು; ಜನಪ್ರಿಯ ಶಿಕ್ಷಣದ್ದು ಅದನ್ನು ಹರಡುವುದು, ಹಾಗೂ ಈಗಾಗಲೇ ತಿಳಿದಿರುವ ವಿಷಯಗಳಲ್ಲಿ ಜನರ ಆಸಕ್ತಿಯನ್ನು ಹೆಚ್ಚಿಸುವುದು. ಇಂಥ ಜನಪ್ರಿಯ ಸಾಹಿತ್ಯವನ್ನು ವೈದ್ಯಕೀಯ ವಿಷಯಗಳಲ್ಲಿ, ಮನೆಮನೆಗೂ ಮುಟ್ಟಿಸಿದ ಹಾಗೂ ಮುಟ್ಟಿಸುತ್ತಿರುವ ಡಾ। ಅನುಪಮಾರ ಪ್ರಯತ್ನ ಅನುಪಮ ವಾದದ್ದು; ಅದನ್ನು "ತೇನಸಿಂಗ ಸಾಹಸ"ವೆಂದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ.

"ಡಾ। ಅನುಪಮಾ ನಿರಂಜನ ಕೃತಿ ಸೂಚಿ"ಯನ್ನು ಗಮನಿಸಿದಾಗ ಅವರ ಕಾದಂಬರಿಗಳಿಗಿಂತ ವೈದ್ಯಕೀಯ ಕೃತಿಗಳೇ ಹೆಚ್ಚು ಮಾರಾಟವಾಗಿವೆಯೆಂದು ಗೊತ್ತಾಗುತ್ತದೆ. ಈವರೆಗೆ ಪ್ರಕಟವಾದ ಅವರ ವೈದ್ಯಕೀಯ ಕೃತಿಗಳು ಈ ಕೆಳಕಂಡಂತಿವೆ:

(೧) "ಕೆಂಪಮ್ಮನ ಮಗು" (೧೯೬೪) (೨) "ತಾಯಿ - ಮಗು" (೧೯೬೮)
(೩) "ಆರೋಗ್ಯ ದರ್ಶನ" (೧೯೭೦) (೪) "ಕೇಳು ಕಿಶೋರಿ" (೧೯೭೨)
(೫) "ದಾಂಪತ್ಯ ದೀಪಿಕೆ" (೧೯೭೩) (೬) "ಸ್ತ್ರೀಸ್ವಾಸ್ಥ್ಯ ಸಂಹಿತೆ" (೧೯೭೬)

೭) "ಆರೋಗ್ಯ ಭಾಗ್ಯಕ್ಕಾಗಿ ವ್ಯಾಯಾಮ" (೧೯೮೦),
೮) "ಶಿಶುವೈದ್ಯ ದೀಪಿಕೆ" (೧೯೮೨), ಮತ್ತು (೯) "ಒತ್ತಡದ ಜೇನೆಗಳು" (ಈಗ ಅಚ್ಚಿನಲ್ಲಿದೆ).

೧೯೬೪ರಲ್ಲಿ ಪ್ರಕಟವಾದ 'ಕೆಂಪಮ್ಮನ ಮಗು' ನವವಯಸ್ಕ ಶಿಕ್ಷಣ ಪಡೆಯುವವರಿಗಾಗಿ ರಚಿಸಿದ ಕೃತಿ. ಹಳ್ಳಿಗಳಲ್ಲಿ ಗರ್ಭಿಣಿಯ ಆರೈಕೆ ಮತ್ತು ಮಗುವಿನ ಯೋಗಕ್ಷೇಮ-ಇವುಗಳ ಕುರಿತಾಗಿ ಬರೆದ ಪುಸ್ತಕ. ಒಂದು ರೀತಿಯಿಂದ "ತಾಯಿ-ಮಗು"ವಿನ ಸಂಕ್ಷಿಪ್ತ ಆವೃತ್ತಿ ಎನ್ನಬಹುದು. ಇದಕ್ಕೆ ೧೯೬೫ರಲ್ಲಿ ವಯಸ್ಕ ಶಿಕ್ಷಣದ ರಾಷ್ಟ್ರೀಯ ಪುರಸ್ಕಾರ ದೊರೆಯಿತು.

"ತಾಯಿ - ಮಗು"ವಿನ ಪ್ರಥಮ ಮುದ್ರಣ ೧೯೬೮ರಲ್ಲಿ ಪ್ರಕಟವಾಗಿ, ಈ ವರೆಗೆ ೧೨ ಆವೃತ್ತಿಗಳನ್ನು ಕಂಡಿದೆ. ಪ್ರತಿ ಬಾರಿಯೂ ೩,೦೦೦ ಪ್ರತಿಗಳು ಮುದ್ರಿಸಲ್ಪಟ್ಟಿವೆ. "ತಾಯಿ-ಮಗು", ಶ್ರೀಮತಿ ನಿರಂಜನರ ಜನಪ್ರಿಯ ಕೃತಿ ಯೆಂದು ಇದರಿಂದ ವಿದಿತ. ಹೆಸರೇ ಸೂಚಿಸುವಂತೆ, 'ತಾಯಿ-ಮಗು' ಗರ್ಭಿಣಿ ಸ್ತ್ರೀಯರಿಗೆ, ತಾಯಂದಿರಿಗೆ ಅತಿ ಉಪಯುಕ್ತ ಪುಸ್ತಕ. ಇದರಿಂದ ಅಸಂಖ್ಯಾತ ತಾಯಂದಿರು ಉಪಯೋಗ ಪಡೆದಿದ್ದಾರೆ. ನೂತನ ವಧುವಿಗೆ ಗರ್ಭಕೋಶದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿ, ಹೊಸ ಜೀವದ ಸೃಷ್ಟಿಯ ನಿಗೂಢತೆಯನ್ನು ಓದುಗರ ಆಸಕ್ತಿ ಕೆರಳಿಸುವ ರೀತಿಯಲ್ಲಿ ವಿವರಿಸುತ್ತ ಈ ಕೃತಿಯು ಆರಂಭವಾಗುತ್ತದೆ. ಮುಂದಿನ ಪುಟಗಳಲ್ಲಿ ಗರ್ಭಿಣಿಯರು ಎದುರಿಸುವ ತೊಂದರೆಗಳು, ಗರ್ಭಿಣಿಯ ಆರೋಗ್ಯ ಆರೈಕೆ, ಗರ್ಭಪಾತ, ರಕ್ತಹೀನತೆಗಳಂತಹ ಕಾಯಿಲೆಗಳ ವಿವರಣೆಯುಂಟು. ಒಂದು ಜೀವ, ಎರಡು ಜೀವವಾಗುವ ಸಂದರ್ಭ ಸನಿಹ ಬಂದಾಗ ಸ್ತ್ರೀಯಲ್ಲಿ ಸಹಜ ವಾಗಿ ಮನೆ ಮಾಡುವ ಆತಂಕ-ಗಾಬರಿಗಳನ್ನು ದೂರ ಮಾಡುವ ಮರುಭರವಸೆಯೂ ಅಲ್ಲಿದೆ. ಕಂದನ ಆಗಮನಕ್ಕೆ ತಾಯಿಯು ಹೇಗೆ ಸಿದ್ಧವಾಗಿರಬೇಕು? ಇಂಥ ಸಂದರ್ಭದಲ್ಲಿ ತಂದೆಯಾಗುವ ವ್ಯಕ್ತಿಯ ಪಾತ್ರವೇನು? ಈ ವಿಷಯಗಳ ಬಗ್ಗೆ ಚರ್ಚಿಸುವುದನ್ನೂ ಲೇಖಕಿಯರು ಮರೆತಿಲ್ಲ. ಪ್ರಸವ, ಪ್ರಸವೋತ್ತರದ ಸಮಸ್ಯೆ ಗಳನ್ನು ವಿವರಿಸುತ್ತಾ. ತಾಯಿ ಹಾಲು ಮಗುವಿಗೆ ಎಂಥ ಸಂಜೀವಿನಿ ಎಂಬುದನ್ನು ಒತ್ತಿ ಹೇಳಿದ್ದಾರೆ: ಅಷ್ಟೇ ಅಲ್ಲ, ಮೇಲ್ ಹಾಲು (ಹೊರ್ಗ್ ಹಾಲು) ಹಾಗೂ ಇತರ ಆಹಾರವನ್ನು ಕ್ರಮೇಣ ಹೇಗೆ ಆರಂಭಿಸಬೇಕು ಎಂಬುದನ್ನು ಸುಸ್ಪಷ್ಟವಾಗಿ ತಿಳಿಯಪಡಿಸಿದ್ದಾರೆ. ಕೊನೆಯ ಅಧ್ಯಾಯಗಳಲ್ಲಿ ಮಗುವಿನ ಬೆಳವಣಿಗೆ, ಅದರಲ್ಲಿ ತಾಯಿಯ ಪಾತ್ರ, ಮತ್ತು ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡು ಬರುವ ರೋಗಗಳ ಸಂಕ್ಷಿಪ್ತ ವಿವರಣೆ ಇದೆ. ಪುಸ್ತಕದ ಕೊನೆಯ ಅಧ್ಯಾಯದಲ್ಲಿ, "ನಿಮ್ಮ ಮದುವೆ ಯಾದ ಆ ವಸಂತದ ದಿನಗಳಿಂದ ಹಿಡಿದು, ಇಬ್ಬರು ಮುದ್ದುಮಕ್ಕಳ

ತಾಯಿಯಾಗುವವರೆಗೆ ನೀವು ನಡೆದು ಬಂದಿದ್ದೀರಿ..........."ಎಂದು ನುಡಿವ ಲೇಖಿಕೆ, ಸೂಕ್ಷ್ಮವಾಗಿ ಕುಟುಂಬ ಯೋಜನೆಯ ಬಗ್ಗೆಯೂ ಒತ್ತುಕೊಟ್ಟಿದ್ದಾರೆಂದು ಭಾಸವಾಗುತ್ತದೆ. ಒಟ್ಟಿನಲ್ಲಿ ಪ್ರತಿಯೊಬ್ಬ ಸ್ತ್ರೀಯೂ ಓದಲೇಬೇಕಾದ ಶ್ರೇಷ್ಠ ಕೃತಿ "ತಾಯಿ-ಮಗು".

೧೯೭೦ರಲ್ಲಿ ಪ್ರಕಟವಾದ "ಆರೋಗ್ಯ ದರ್ಶನ" ಡಾ। ಅನುಪಮಾರ ಮತ್ತೊಂದು ಪ್ರಮುಖ ಕೃತಿ. ೧೯೭೧ರಲ್ಲಿ ಇದಕ್ಕೆ ಆ ವರ್ಷದ ಶ್ರೇಷ್ಠ ವೈಜ್ಞಾನಿಕ ಕೃತಿಯೆಂದು ರಾಜ್ಯ ಸಾಹಿತ್ಯ ಅಕಾಡೆಮಿಯು ಬಹುಮಾನ ನೀಡಿತು. ಈ ಪುಸ್ತಕದ ಪ್ರಥಮಾರ್ಧದಲ್ಲಿ ಸಾಮಾನ್ಯ ರೋಗಗಳಾದ ಇನಫ್ಲುಯೆಂಜಾ, ಡೆಂಗು ಜ್ವರ, ನ್ಯುಮೋನಿಯಾ, ಮಲೇರಿಯಾ, ಭೇದಿ, ಸೋಂಕು ರೋಗಗಳ ಬಗ್ಗೆ, ಉತ್ತರಾರ್ಧದಲ್ಲಿ ಅಸಾಮಾನ್ಯ ರೋಗಗಳಾದ ವಿಷಮಜ್ವರ, ಪ್ಯಾರಾಟೈಫಾಯಿಡ್, ಕ್ಷಯ, ಕಾಮಾಲೆ, ಜಠರ ಕಾಯಿಲೆ, ಗರ್ಭಕೋಶದ ಕಾಯಿಲೆಗಳು, ಸಿಹಿ ಮೂತ್ರ ರೋಗ, ರಕ್ತದ ಅಧಿಕ ಒತ್ತಡ, ಹೃದಯಾಘಾತ, ಕ್ಯಾನ್ಸರ್ ಹಾಗೂ ಮಾನಸಿಕ ರೋಗಗಳ ಕಾರಣ, ಉಗಮ, ಪ್ರಮುಖ ಚಿಹ್ನೆಗಳು, ರೋಗ ಪತ್ತೆ, ಚಿಕಿತ್ಸೆ ಹಾಗೂ ಮುಂಜಾಗ್ರತೆ ಕ್ರಮಗಳ ಬಗ್ಗೆ ವಿಸ್ತೃತ ವಿವರಣೆಯುಂಟು. ಲೇಖಕಿಯರ ವ್ಯಾಪಕ ವೈದ್ಯ ಶಾಸ್ತ್ರದ ಜ್ಞಾನ, ಇಲ್ಲಿ ಪ್ರತಿಫಲಿತ. ಇಷ್ಟೆಲ್ಲಾ ವಿವರಣೆಗಳನ್ನು ಕೆಲವೇ ಪುಟಗಳಲ್ಲಿ ಸಂಗ್ರಹವಾಗಿ ಬರೆದ ಲೇಖಕಿಯರ ಜಾಣ್ಮೆ ಪ್ರಶಂಸನೀಯ. ಇದು ಅವರ ಲೇಖನಾ ಸಾಮರ್ಥ್ಯದ ಹಿರಿಮೆಗೊಂದು ನಿದರ್ಶನ.

ನಮ್ಮ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಆರೋಗ್ಯ ಹಾಗೂ ಲೈಂಗಿಕ ಶಿಕ್ಷಣದ ಕೊರತೆಯಿದೆ. ಇವಿಲ್ಲದೆ ವಿದ್ಯಾಭ್ಯಾಸ ಅಪೂರ್ಣ. ಈ ದಿಶೆಯಲ್ಲಿ ಯುವತಿಯರಿಗೆ ಇಂಥ ಶಿಕ್ಷಣದ ಕ್ಲುಪ್ತ ವಿವರಣೆ ನೀಡುವ ಪುಸ್ತಿಕೆಯೇ "ಕೇಳು ಕಿಶೋರಿ" ಶ್ರೀಮತಿ ನಿರಂಜನರು ಬೆಂಗಳೂರಿನ ನ್ಯಾಶನಲ್ ಕಾಲೇಜ್ ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ನೀಡಿದ ಉಪನ್ಯಾಸಗಳನ್ನು ಆಧರಿಸಿಯೇ ಬರೆದ ಈ ಕೃತಿ ೧೯೭೨ರಲ್ಲಿ ಪ್ರಕಟವಾಗಿ, ಈ ವರೆಗೆ ೫ ಮುದ್ರಣಗಳನ್ನು ಕಂಡಿದೆ. ಇದರಲ್ಲಿ ಲೈಂಗಿಕ ಶಿಕ್ಷಣದ ಮಹತ್ವ, ಯೌವನದಲ್ಲಿ ಅದೀಗ ತಾನೇ ಪಾದಾರ್ಪಣ ಮಾಡುತ್ತಿರುವ ಕಿಶೋರಿ ಆರೋಗ್ಯ ಹಾಗೂ ಲೈಂಗಿಕ ಶಿಕ್ಷಣದ ಅಭಾವದಿಂದ ಎದುರಿಸಬಹುದಾದ ತೊಂದರೆಗಳ ಮನೋಜ್ಞ ವಿವರಣೆಯನ್ನು ಕಾಣಬಹುದು.

೧೯೭೩ರಲ್ಲಿ ಪ್ರಕಟವಾದ "ದಾಂಪತ್ಯ ದೀಪಿಕೆ"ಯು ಶ್ರೀಮತಿ ನಿರಂಜನರ ಇನ್ನೊಂದು ಜನಪ್ರಿಯ ಕೃತಿ. ಈ ವರೆಗೆ ೧೩ ಆವೃತ್ತಿಗಳನ್ನು ಇದು ಕಂಡಿದೆ. ಪ್ರತಿ ಆವೃತ್ತಿಯಲ್ಲೂ ೩,೦೦೦ ಪ್ರತಿಗಳು ಮುದ್ರಿತವಾಗಿವೆ. ಈ ಕೃತಿ ಮತ್ತು

"ತಾಯಿ-ಮಗು" ಕನ್ನಡ ವೈಜ್ಞಾನಿಕ ಪುಸ್ತಕಗಳ ಮಾರಾಟದಲ್ಲಿ ದಾಖಲೆಯನ್ನೇ ಮಾಡಿವೆ. ವೈವಾಹಿಕ ಬದುಕಿನಲ್ಲಿ ಅಸುಖಿಯಾದ ಅನೇಕ ರೋಗಿಗಳನ್ನು ನಾವು ದಿನನಿತ್ಯ ನೋಡುತ್ತೇವೆ. ಇದಕ್ಕೆ ಕಾರಣ ದಾಂಪತ್ಯ ಜೀವನದ ವೈಜ್ಞಾನಿಕ ಜ್ಞಾನದ ಅಭಾವ. ಸತಿಪತಿಯರಲ್ಲಿ ಪರಸ್ಪರ ಹೊಂದಾಣಿಕೆಯ ಅಗತ್ಯವಿರುವ ವೈವಾಹಿಕ ಬದುಕು ಸುಖಮಯವಾಗಲು ಬೇಕಾದ ಮನೋ-ವೈಜ್ಞಾನಿಕ, ಶರೀರ-ವೈಜ್ಞಾನಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ದೃಷ್ಟಿಕೋನಗಳ ತಿಳುವಳಿಕೆಯನ್ನು ಮೂಡಿಸುವ ಕೃತಿ "ದಾಂಪತ್ಯ ದೀಪಿಕೆ". ಇದು ಕೇವಲ ಗೃಹಸ್ಥಾಶ್ರಮಕ್ಕೆ ಕಾಲಿಡುವವರಿಗೆ ಮಾತ್ರವಲ್ಲ, ವಿವಾಹಿತರಿಗೂ ಉಪಯುಕ್ತವಾದ ಕೃತಿಯೆಂದು ಹೇಳಬಹುದು.

೧೯೭೭ರಲ್ಲಿ ಪ್ರಕಟವಾದ "ಸ್ತ್ರೀಸ್ವಾಸ್ಥ್ಯ ಸಂಹಿತೆ"ಯಲ್ಲಿ ಸ್ತ್ರೀಜನನೇಂದ್ರಿಯ ಗಳಿಗೆ ಸಂಬಂಧಪಟ್ಟ ರೋಗಗಳಾದ ಬಂಜೆತನ, ಗರ್ಭಪಾತ, ಮುಟ್ಟುದೋಷಗಳು, ನಿರ್ನಾಳ ಗ್ರಂಥಿಗಳ ರೋಗಗಳು, ಗರ್ಭಕೋಶದ ಜಾರಿಳಿತ, ಗಡ್ಡೆಗಳು, ಕ್ಯಾನ್ಸರ್, ಕ್ಷಯ, ಮೇಹ ರೋಗಗಳು. ಸ್ತನ ರೋಗಗಳ ವ್ಯಾಪ್ತಿ, ತೊಡಕುಗಳು. ಚಿಕಿತ್ಸಾ ವಿಧಾನ ಮತ್ತು ಮುಂಜಾಗ್ರತೆ ಕ್ರಮಗಳ ವೈಜ್ಞಾನಿಕ ತಿಳುವಳಿಕೆಗಳ ವಿಪುಲ ಚರ್ಚೆ ಇದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಜನಸಾಮಾನ್ಯರಲ್ಲಿ ಮೂಢನಂಬಿಕೆಗಳು ಅನೇಕ. ಇವು ವ್ಯಕ್ತಿಯ ಜೀವನವನ್ನೇ ನಾಶ ಮಾಡುವಂಥವು. ಇವುಗಳನ್ನು ತೊಡೆದು ಹಾಕುವಲ್ಲಿ. ಜನಸಾಮಾನ್ಯರ ಮುಖ್ಯವಾಗಿ ಸ್ತ್ರೀಯರ ಜ್ಞಾನವೃದ್ಧಿ ಮಾಡು ವಲ್ಲಿ ಈ ಪುಸ್ತಕ ಖಂಡಿತವಾಗಿಯೂ ಯಶಸ್ವಿಯಾಗಿದೆ ಎಂದು ಹೇಳಬಹುದು. ರೋಗದ ಚಿಹ್ನೆಗಳನ್ನು ಗುರುತಿಸಿ, ಉಪೇಕ್ಷಿಸದೇ, ಸ್ತ್ರೀಯು ನಾಚಿಕೆ ಸಂಕೋಚ ಗಳನ್ನು ಬದಿಗಿರಿಸಿ, ಚಿಕಿತ್ಸೆ ಪಡೆಯಬೇಕೆನ್ನುವುದು ಈ ಪುಸ್ತಕದ ಸದಾಶಯ.

೧೯೮೦ರಲ್ಲಿ ಪ್ರಕಟವಾದ "ಆರೋಗ್ಯ ಭಾಗ್ಯಕ್ಕಾಗಿ ವ್ಯಾಯಾಮ"ವು ಆರೋಗ್ಯ ವರ್ಧನದ ಗುಟ್ಟನ್ನು ತಿಳಿಸುವ ಪುಸ್ತಿಕೆ. ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೆ ಸಹಾಯ ಮಾಡುವ, ದೇಹದ ಮಾಂಸಖಂಡಗಳನ್ನು ಲವಲವಿಕೆಯಿಂದಿರುವ, ಉಬ್ಬಸ, ಸಿಹಿ ಮೂತ್ರ ರೋಗ, ಮಾನಸಿಕ ಒತ್ತಡಗಳು, ಸ್ಥೂಲಕಾಯ, ರಕ್ತದ ಅಧಿಕ ಒತ್ತಡ ಇತ್ಯಾದಿಗಳಲ್ಲಿ ಉಪಯುಕ್ತವಾಗುವ ಅನೇಕ ವ್ಯಾಯಾಮ ಹಾಗೂ ಯೋಗಾಸನಗಳ ಸುದೀರ್ಘ, ಸಚಿತ್ರ ವಿವರಣೆ ಈ ಕೃತಿಯ ವೈಶಿಷ್ಟ್ಯ. ಈ ಕೃತಿಯ ಕೂಲಂಕಶ ಅಧ್ಯಯನ ಪ್ರತಿ ವ್ಯಕ್ತಿಗೂ ಅವಶ್ಯ. ಇದರ ಕೊನೆಗೆ ಕೊಟ್ಟಿರುವ ಕೆಲೋರಿ ಪಟ್ಟಿಗಳು ಆಹಾರ ಪಥ್ಯ ಮಾಡುವವರಿಗೊಂದು ಮಾರ್ಗದರ್ಶಿ.

೧೯೮೭ರಲ್ಲಿ ಪ್ರಕಟವಾದ "ಶಿಶುವೈದ್ಯ ದೀಪಿಕೆ" ಮಕ್ಕಳಲ್ಲಿ ಕಾಣಬರುವ ಕಾಯಿಲೆ ಸಮಸ್ಯೆಗಳನ್ನು ಚರ್ಚಿಸುವ ಉತ್ಕೃಷ್ಟ ಕೃತಿ. ಮಗುವಿನ ಹೊಣೆ ತಂದೆ ತಾಯಿಗಳದು; ತತ್ಕಾರಣ, ಮಕ್ಕಳಲ್ಲಿ ಕಾಣಬರುವ ರೋಗಗಳ ಸ್ಥೂಲ ಪರಿಚಯ

ಅವರಿಗೆ ಇರಲೇಬೇಕು. ಸಕಾಲಕ್ಕೆ ವೈದ್ಯಕೀಯ ಚಿಕಿತ್ಸೆ ಕೊಡಿಸಲು ಇದು ಉಪಯುಕ್ತ. ಇಂಥ ಜ್ಞಾನವನ್ನು ಸಮರ್ಪಕ ರೀತಿಯಲ್ಲಿ ಬಿಂಬಿಸುತ್ತದೆ - ಈ ಕೃತಿ. ಸಮತೋಲದ ಆಹಾರದಿಂದ ಹಿಡಿದು, ಕೊರತೆಯ ಕಾಯಿಲೆ, ಸೋಂಕು ರೋಗಗಳು, ರಕ್ತಹೀನತೆ, ಬುದ್ಧಿಮಾಂದ್ಯ, ರಕ್ತಾರ್ಬುದ, ಕ್ಷಯ, ಅಪಸ್ಮಾರ, ಕೀಲುರೋಗಗಳು, ಮತ್ತು ಸಂಜಾತ ಹೃದಯ ರೋಗಗಳ ವರೆಗೆ ಸುದೀರ್ಘ ವಿವರಣೆ ಲೇಖಕಿ ನೀಡಿದ್ದಾರೆ.

೧೯೮೭ರಲ್ಲಿ "ಸುಧಾ"ದಲ್ಲಿ ಧಾರಾವಾಹಿಯಾಗಿ ಬಂದ 'ಒತ್ತಡದ ಬೇನೆಗಳು' ಈಗ ಅಚ್ಚಿನಲ್ಲಿದೆ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋ:"- ಎಂಬ ನುಡಿಮುತ್ತಿನಲ್ಲಿ ಮನುಷ್ಯನ ಸುಖದುಃಖಗಳಿಗೆ ಮನಸ್ಸೇ ಮೂಲಕಾರಣವೆಂಬ ಸತ್ಯ ಅಂತರ್ಗತ. ಅಂದ ಮೇಲೆ ವ್ಯಕ್ತಿ ಮತ್ತು ಸಮಾಜಗಳ ಬದುಕಿನಲ್ಲಿ ಸುಖ ಸಂತೃಪ್ತಿಗಳು ನೆಲೆಗೊಳ್ಳಬೇಕಾದರೆ, ದೈಹಿಕ ಆರೋಗ್ಯದಷ್ಟೇ ಮಾನಸಿಕ ಸ್ವಾಸ್ಥ್ಯವೂ ಮುಖ್ಯ. ಆದರೆ ಇಂದಿನ ಯಾಂತ್ರಿಕ ಜೀವನದಲ್ಲಿ ವ್ಯಕ್ತಿ ನಾನಾ ತರಹದ ದೈಹಿಕ ಮಾನಸಿಕ ಒತ್ತಡಗಳಿಗೆ ಒಳಗಾಗುವುದು ಅನಿವಾರ್ಯ. ಇವು "ಒತ್ತಡ-ಬೇನೆ"ಗಳಿಗೆ ಎಡೆ ಮಾಡಿಕೊಡುತ್ತವೆ. ಇದರ ಪ್ರಥಮ ಅಧ್ಯಾಯದಲ್ಲಿ ಮನಸ್ಸು-ದೇಹಗಳ ತಾದಾತ್ಮ್ಯ ಸಂಬಂಧ, ಅವಿನಾಭಾವವನ್ನು ಲೇಖಕಿ ಸಮರ್ಥವಾಗಿ ವಿಶ್ಲೇಷಿಸಿದ್ದಾರೆ. ಒತ್ತಡದ ಪ್ರಕಾರಗಳು, ಒತ್ತಡಕ್ಕೆ ದೇಹದ ಅನುವೇದಕ ಮತ್ತು ಉಪಾನುವೇದಕ ನರಮಂಡಲಗಳ ಪ್ರತಿಕ್ರಿಯೆಗಳು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲ್ಪಟ್ಟ ವಿಷಯ. ನಿದ್ದೆಯ ಮಹತ್ವವನ್ನು ಮೂರನೆಯ ಅಧ್ಯಾಯ ಸಾರಿದರೆ, ಮುಂದಿನ ಐದು ಅಧ್ಯಾಯಗಳಲ್ಲಿ ಒತ್ತಡದಿಂದ ಬರುವ ರೋಗಗಳಾದ ಜಠರ ಹುಣ್ಣು, ರಕ್ತದ ಅಧಿಕ ಒತ್ತಡ, ಹೃದಯಾಘಾತ, ಸಿಹಿ ಮೂತ್ರ ರೋಗ, ಮಾನಸಿಕ ತಳಮಳಗಳ ಉಗಮ, ಲಕ್ಷಣಗಳು, ಚಿಕಿತ್ಸೆ ಮತ್ತು ಮುಂಜಾಗ್ರತೆಗಳ ಬಗ್ಗೆ ಸುಂದರ ವಿವರಣೆಯಿದೆ. ಕೊನೆಯ ಭಾಗದಲ್ಲಿ, ಮನದ ಸಮತೋಲನವನ್ನು ಕಾಯ್ದುಕೊಳ್ಳುವ ಬಗ್ಗೆಯೂ ತಿಳಿಯಪಡಿಸಿದ್ದಾರೆ. ಒಟ್ಟಿನಲ್ಲಿ, ಮಧ್ಯವಯಸ್ಸಿನ ಪುರುಷ ಸ್ತ್ರೀ ಚಿತ್ತೈಕಾಗ್ರ್ಯವನ್ನು ಪಡೆಯಲು, ಮಾನಸಿಕ ಆರೋಗ್ಯವನ್ನು ಆನಂದಿಸಲು ಓದಬೇಕಾದ ವಿಶಿಷ್ಟ ಕೃತಿ.

ಇವೆಲ್ಲ ಡಾ। ಅನುಪಮಾ ನಿರಂಜನರ ಪುಸ್ತಕ ರೂಪದಲ್ಲಿ ಪ್ರಕಟಿತ ಕೃತಿಗಳು. ಇದಲ್ಲದೆ. ಅವರ ಅನೇಕ ಜನಪ್ರಿಯ ಲೇಖನಗಳು, "ಸುಧಾ", "ಕರ್ಮವೀರ"," ಸುದ್ದಿ ಸಂಗಾತಿ"ಗಳಂಥ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ೧೯೮೭ರ "ಸುಧಾ"ದಲ್ಲಿ ಪ್ರಕಟವಾದ "ಗರ್ಭ ಕುತ್ತಿಗೆಯ ಕ್ಯಾನ್ಸರ್" ಲೇಖನದಲ್ಲಿ, ಕ್ಯಾನ್ಸರ್‌ನ ಆರಂಭದ ಲಕ್ಷಣಗಳನ್ನು ಹಾಗೂ ಮಧ್ಯವಯಸ್ಸಿನ ಮಹಿಳೆ ಮೇಲಿಂದ ಮೇಲೆ 'ಪ್ಯಾಪ್' ಪರೀಕ್ಷೆಗೆ ಒಳಗಾಗಬೇಕಾದುದರ ಮಹತ್ವವನ್ನು ತಿಳಿಯಪಡಿಸಿದ್ದಾರೆ. ಅದೇ ರೀತಿ, ೧೯೮೫ರ

"ಪ್ರಜಾವಾಣಿ"ಯಲ್ಲಿ ಪ್ರಕಟವಾದ "ಸ್ತನ ಕ್ಯಾನ್ಸರ್" ಲೇಖನದಲ್ಲಿ ಸ್ತನದ ಸ್ವಂತ ಪರೀಕ್ಷೆಯ ಮಹತ್ವವನ್ನು ಅರಿಯಪಡಿಸಿ, ಜನರಲ್ಲಿ ಅನಾವಶ್ಯಕವಾಗಿ ತುಂಬಿರುವ ಮೂಢನಂಬಿಕೆ, ಗಾಬರಿ, ಆತಂಕಗಳನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಷ್ಟೇ ಅಲ್ಲ, ಕೆಲ ತಿಂಗಳುಗಳ ಹಿಂದೆ ಡಾ| ಅನುಪಮಾರ ಜತೆ 'ದೂರ ದರ್ಶನ'ದಲ್ಲಿ "ಕ್ಯಾನ್ಸರ್" ಬಗ್ಗೆ ಸಂದರ್ಶನ ನೋಡಿದ ಮೇಲೆಯೇ, ನಮ್ಮ ಕುಟುಂಬದ ಆತ್ಮೀಯ ಸ್ನೇಹಿತರ ಪತ್ನಿ, ತಮ್ಮ ಸ್ತನದಲ್ಲಿದ್ದ ಗಡ್ಡೆಯ ಪರೀಕ್ಷೆಗಾಗಿ ಡಾಕ್ಟರನ್ನು ಕಂಡರು; ಇಲ್ಲಿಯವರೆಗೂ, ನಾಲ್ಕಾರು ತಿಂಗಳು ಅವರು ಅದನ್ನು ಉಪೇಕ್ಷಿಸಿದ್ದರು. ವೈಜ್ಞಾನಿಕ ಸಾಹಿತ್ಯವನ್ನು ಕನ್ನಡದಲ್ಲಿ ಜನಸಾಮಾನ್ಯರಿಗೆ ಮುಟ್ಟಿಸಿ, ತಿಳುವಳಿಕೆ ಮೂಡಿಸುವ ಮಹತ್ವ ಇದರಿಂದ ಅರಿವಾದೀತು.

"ಸುದ್ದಿ ಸಂಗಾತಿ" ೧೯೮೬ರಲ್ಲಿ ಪ್ರಕಟವಾದ "ರಕ್ತದ ಅಧಿಕ ಒತ್ತಡ" ಮತ್ತು "ಬೊಜ್ಜು ಮೈ ಇಳಿಸುವುದು ಹೇಗೆ?" ಡಾ| ಅನುಪಮಾರ ಇನ್ನಿತರ ಉಪಯುಕ್ತ ಲೇಖನಗಳು. ಮೈಸೂರು ವಿಶ್ವವಿದ್ಯಾನಿಲಯ ೧೯೭೯ರಲ್ಲಿ ಪ್ರಕಟಿಸಿದ "ಪ್ರಬುದ್ಧ ಕರ್ನಾಟಕ-ಚಿನ್ನದ ಸಂಚಿಕೆ-ವಿಜ್ಞಾನ ವಿಭಾಗ"ಕ್ಕೂ ಇವರ ಕೊಡುಗೆ ಉಂಟು-"ಆ್ಯಂಟಿಬಯೊಟಿಕ್ಸ್" ಲೇಖನದ ಮೂಲಕ.

ಒಟ್ಟಿನಲ್ಲಿ ಡಾ| ಅನುಪಮಾ ನಿರಂಜನರ ಗ್ರಂಥಗಳ, ಲೇಖನಗಳ ಮೂಲ ಉದ್ದೇಶ-"ಜನಸಾಮಾನ್ಯರೆಲ್ಲರಿಗೂ ವೈದ್ಯಕೀಯ ತಿಳುವಳಿಕೆ ಅಗತ್ಯ." ಈ ದಿಶೆಯಲ್ಲಿ ಅವರು ಪೂರ್ಣ ಯಶಸ್ವಿ. ಅವರ ಶೈಲಿ ಸರಳ, ಸಹಜ, ಸುಸ್ಪಷ್ಟ. ಪ್ರತಿ ಹಂತದಲ್ಲೂ ಮೂಢ ನಂಬಿಕೆಯನ್ನು ತೊಡೆಯುವಲ್ಲಿ ಪ್ರಾಮಾಣಿಕ ಯತ್ನ. ಸರಳ ರೇಖಾ-ಚಿತ್ರಗಳ ಮೂಲಕ ನೀಡುವ ವಿವರಣೆ ಕೃತಿಗಳಿಗೊಂದು ಕಳಸವಿಟ್ಟಂತೆ. ಸಾಮಾನ್ಯ ಓದುಗನ ಸ್ಥಾನದಲ್ಲಿ ತಾವು ನಿಂತು, ಅವನಿಗೆ ಬರಬಹುದಾದ ಸಂಶಯಗಳನ್ನು ಕಲ್ಪಿಸಿ, ಅವಕ್ಕೆಲ್ಲಾ ಪೂರ್ಣ ವಿವರಣೆ ನೀಡುವ ಯತ್ನ ಅಭಿನಂದನಾರ್ಹ. ಪ್ರತಿ ಲೇಖನವನ್ನು ಓದುಗರ ಕುತೂಹಲ ಕೆರಳಿಸುವ ಸಂಭಾಷಣೆಯಿಂದ ಆರಂಭಿಸುವುದು ಆಕರ್ಷಕ.

ಆಧುನಿಕ ವೈದ್ಯ ವಿಜ್ಞಾನ ವರ್ಷ-ವರ್ಷವೂ ಅನೇಕ ಹೊಸತುಗಳನ್ನು ಮೈಗೂಡಿಸಿಕೊಳ್ಳುವಂಥದು. ಕಳೆದ ೨೫ ವರ್ಷಗಳಲ್ಲಿ ವೈದ್ಯ ಸಾಹಿತ್ಯದ ಪ್ರಗತಿ 'ಹನುಮಂತ ನೆಗೆತ'. ಈ ಹಿನ್ನೆಲೆಯಲ್ಲಿ ಶ್ರೀಮತಿ ನಿರಂಜನರು ೧೯೫೬ರ ಸುಮಾರಿಗೆ ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿ ಅನಂತರ ೨೫ ವರ್ಷ ವೈದ್ಯಕೀಯ ಪ್ರಾಕ್ಟೀಸ್ ಮಾಡಿದರು. ಇವರು ಹೆಚ್ಚು ಹೆಚ್ಚಾಗಿ ಸಾಹಿತ್ಯ ಕ್ಷೇತ್ರದಲ್ಲಿ ಮುಂದುವರೆದರಾದರೂ, ವೈದ್ಯವಿಜ್ಞಾನದ ಬೆಳವಣಿಗೆಗಳ ಬಗ್ಗೆ ಸಾಕಷ್ಟು ಗಮನಹರಿಸಿ, ಅಂಥವನ್ನು ತಮ್ಮ ಕೃತಿಗಳ ಪರಿಷ್ಕೃತ ಮುದ್ರಣಗಳಲ್ಲಿ ಸೇರಿಸಿಕೊಂಡಿದ್ದಾರೆಂಬುದು ಮೆಚ್ಚಬೇಕಾದ ವಿಷಯ.

ಕೊನೆಯದಾಗಿ ಪಾರಿಭಾಷಿಕ ಶಬ್ದಗಳ ಕುರಿತು ಒಂದು ಮಾತು. ಡಾ। ಅನುಪಮಾರು ೧೯೭೫ ಕ್ಕೂ ಮೊದಲು ಬರೆದ ಹಾಗೂ ನಂತರ ಬರೆದ ಕೃತಿಗಳಲ್ಲಿ ಕಂಡು ಬರುವ ಒಂದು ಮುಖ್ಯ ವ್ಯತ್ಯಾಸವೆಂದರೆ, ಅನಂತರದ ಪುಸ್ತಕಗಳಲ್ಲಿ ಇಂಗ್ಲಿಷ್ ತಾಂತ್ರಿಕ ಶಬ್ದಗಳಿಗೆ ಹೆಚ್ಚಿನ ಪ್ರಮಾಣದ ಕನ್ನಡ ಸಮಾನಾರ್ಥ ಪದಗಳ ಬಳಕೆಯಾಗಿದೆ. ಉದಾ: ಕೆನ್ನೀಲಿಕೆ, ಪೆಡಸು ಹಾವಸೆ, ಪುಲ್ಲಂ ಪುರಿ, ವಿಷಮುಗಂತಿ ಇತ್ಯಾದಿ. ೧೯೭೫ರ ನಂತರವೂ ಸಹ, ಇವು "ಸ್ತ್ರೀಸ್ವಾಸ್ಥ್ಯ ಸಂಹಿತೆ"ಯಲ್ಲಿ ಜಾಸ್ತಿಯಿದ್ದು "ಶಿಶುವೈದ್ಯದೀಪಿಕೆ" ಯಲ್ಲಿ ಕಡಿಮೆಯಾಗುತ್ತ, ನಂತರ ಇತ್ತೀಚೆಗೆ ಬರೆದ "ಒತ್ತಡದ ಬೇನೆಗಳ"ಲ್ಲಿ ಇಲ್ಲವೆಂದೇ ಹೇಳಬಹುದು. ಇಂಥ ಪದಗಳ ಬಳಕೆ ಮಾಡುವಾಗ ಕಂಸಿನಲ್ಲಿ ಅಥವಾ ಪುಸ್ತಕದ ಕೊನೆಗೆ "ವಿಶೇಷ ಪರಿಶಿಷ್ಟ"ದಲ್ಲಿ ಇಂಗ್ಲಿಷ್ ಸಮಾನಾರ್ಥಗಳ ಪಟ್ಟಿ ಕೊಟ್ಟರೆ, ಕಿರಿಯ ವೈದ್ಯ ಲೇಖಕರಿಗಷ್ಟೇ ಅಲ್ಲ, ಎಲ್ಲ ಓದುಗರಿಗೂ ತುಂಬಾ ಸಹಾಯವಾದೀತು. ಏಕೆಂದರೆ ಇದರಿಂದ ಅರ್ಥ ಸ್ಪಷ್ಟತೆ ಹೆಚ್ಚುವದು; ಅಷ್ಟೇ ಅಲ್ಲ, ಅದೇ ಪದಕ್ಕೆ ಬೇರೆ ಸಮಾನಾರ್ಥ ಪದ ಹುಡುಕುವ ಸಾಧ್ಯತೆಯೂ ಇದೆ. ಉದಾ: Metabolismನ ವ್ಯಾಖ್ಯೆ - anabolism (ಉಪಚಯ)+Catabolism (ಅಪಚಯ) ಅಂದರೆ 'ಉಪಾಪಚಯ ಕ್ರಿಯೆ'ಯೆನ್ನಬಹುದು. ಈ ಪದ 'ಜೀವ ವಸ್ತುಕರಣ'ಕ್ಕಿಂತ ಹೆಚ್ಚಿನ ಅರ್ಥ ಕೊಡುವದೆಂದು ನನ್ನ ಅನಿಸಿಕೆ.

ಇನ್ನೂ ಕೆಲವೆಡೆ ಏಕರೂಪತೆ ಇಲ್ಲವೆಂಬಂತೆ ಭಾಸವಾಗುವದು. ಉದಾ: "ಶಿಶು ವೈದ್ಯದೀಪಿಕೆ"ಯಲ್ಲಿ ರಕ್ತದ ರೋಗಗಳನ್ನು ಚರ್ಚಿಸುವಾಗ Hemophilia ಪದ (ಹಿಮೊಫಿಲಿಯಾ) ಹಾಗೆ ಉಳಿಸಿ, Purpura (ಪರ್ಪ್ಯೂರಾ)ಕ್ಕೆ ಮಾತ್ರ 'ಕೆನ್ನೀಲಿಕೆ' ಎಂದು ಉಪಯೋಗಿಸಿದ್ದು; "ಸ್ತ್ರೀ ಸ್ವಾಸ್ಥ್ಯ ಸಂಹಿತೆ"ಯಲ್ಲಿ ಪಿಟ್ಯುಟರಿ, ಅಡ್ರಿನಲ್, ಪ್ಯಾರಾಥೈರಾಯಿಡ್ ಪದಗಳನ್ನು ಹಾಗೇ ಇಟ್ಟು ಥೈರಾಯಿಡ್‌ಗೆ ಮಾತ್ರ ಗುರಾಣಿಗ್ರಂಥಿ ಅಂದದ್ದು ಇತ್ಯಾದಿ. ಆದರೆ ಮುಂದಿನ ಕೃತಿಗಳಲ್ಲಿ ಥೈರಾಯಿಡ್ ಪದವನ್ನೇ ಬಳಸುತ್ತಾ ಬಂದಿದ್ದಾರೆ.

ಇವೆಲ್ಲವುಗಳನ್ನು ವೀಕ್ಷಿಸಿದರೆ, ೧೯೭೩ರಲ್ಲಿ ಪ್ರಕಟವಾದ ಡಾ। ಡಿ. ಶಿವಪ್ಪನವರ "ಕನ್ನಡ-ಇಂಗ್ಲಿಷ್ ವೈದ್ಯ ಪದಕೋಶ"ದ ಪ್ರಭಾವ ಲೇಖಕಿಯ ಮೇಲೆ ಸ್ವಲ್ಪ ಮಟ್ಟಿಗೆ ಆಗಿರಬಹುದೆಂದು ನನ್ನ ಊಹೆ. ನಿಜಕ್ಕೂ ಡಾ। ಶಿವಪ್ಪನವರ ಪ್ರಯತ್ನ 'ಭಗೀರಥ ಪ್ರಯತ್ನ'ವೆಂದೇ ಹೇಳಬಹುದು. ಇದುವರೆಗೂ, ಅವರ ಗ್ರಂಥವನ್ನು ಬಿಟ್ಟರೆ, ಇನ್ನೊಂದು ವೈದ್ಯ ನಿಘಂಟು ಲಭ್ಯವಿಲ್ಲ. ಆದರೆ, ಶಿವಪ್ಪನವರೇ ಹೇಳಿಕೊಂಡಂತೆ, ಅದರಲ್ಲಿಯ ಪದಗಳು ಅವರೇ ಟಂಕಿಸಿದ ಶಬ್ದಗಳು. ಇಂಗ್ಲಿಷಿನ ಅನೇಕ ತಾಂತ್ರಿಕ ಪದಗಳು, ಉದಾ: Fibrinogen (ಫೈಬ್ರಿನೋಜನ್), Prothrombin (ಪ್ರೋಥ್ರೋಂಬಿನ್) ಇತ್ಯಾದಿಗಳೂ ಅಂತರರಾಷ್ಟ್ರೀಯ

ಮಾನ್ಯತೆ ಪಡೆದ ಶಬ್ದಗಳು; ಅವುಗಳನ್ನು ಹಾಗೇ ಬಳಸಬೇಕೆ ಅಥವಾ ಇನ್ನೂ ಸರ್ವಮಾನ್ಯವಾಗದ ತಂತುಕ ಜನಕ, ರಕ್ತ ಹೆಪ್ಪು ಜನಕಗಳಂಥ ಶಬ್ದಗಳಿಂದ ಸ್ಥಳಾಂತರಿಸಬೇಕೆ? ಹೀಗೆ ಎಲ್ಲ ಲೇಖಕರೂ ತಾವೇ ಸೃಷ್ಟಿಸಿದ ಪದಗಳನ್ನು ಬಳಸುತ್ತ ಹೋದಲ್ಲಿ, ವೈದ್ಯ ಸಾಹಿತ್ಯ ಲೇಖನಗಳಲ್ಲಿ ಏಕರೂಪತೆ ಉಳಿದೀತೆ? ಇದು ನಮ್ಮಂತಹ ಕಿರಿಯ ಲೇಖಕರನ್ನು ಕಾಡಿಸುವ ಸಮಸ್ಯೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ, ಡಾ। ಅನುಪಮಾ ನಿರಂಜನ ಮತ್ತು ಇನ್ನಿತ್ತರ ಹಿರಿಯ ವೈದ್ಯ ಲೇಖಕರು, ತಮ್ಮಲ್ಲೇ ಚರ್ಚಿಸಿ, ಹಿರಿಯ ಸಾಹಿತಿಗಳೆಲ್ಲ ಒಮ್ಮತಕ್ಕೆ ಬರುವ 'ಶಬ್ದಕೋಶ' ರಚನೆ ಮಾಡಿ, ಎಂಥ ಸಂದರ್ಭದಲ್ಲಿ ಇಂಗ್ಲಿಷ್ ತಾಂತ್ರಿಕ ಪದಗಳನ್ನು ಉಳಿಸಿಕೊಳ್ಳಬೇಕು, ಎಂಥ ಸಂದರ್ಭದಲ್ಲಿ ಅನುವಾದ - ಸ್ಥಳಾಂತರ - ಯುಕ್ತವೆಂದು ನಿರ್ಧರಿಸಿದರೆ, ಕಿರಿಯ ಲೇಖಕರಿಗೊಂದು ಮೇಲ್ಪಂಕ್ತಿ ಹಾಕಿಕೊಟ್ಟಂತಾದೀತು; ಸಾಮಾನ್ಯ 'ಓದುಗರಿಗೂ ಅದರ ಗೊಂದಲ ತಪ್ಪೀತು'. ಇದೊಂದು ನನ್ನ ಕಳಕಳಿಯ ಬಿನ್ನಹ.

ಏಕೋಹಿ ದೋಷೋ ಗುಣಸನ್ನಿಪಾತೇ
ನಿಮಜ್ಜತಿ ಇಂದೋ; ಕಿರಣೇಷುಇವಾಂಕಃ"

ಎಂಬಂತೆ ಶ್ರೀಮತಿ ನಿರಂಜನರ ಸಾಹಿತ್ಯಸಾಧನೆಯನ್ನು ಗಮನಿಸಿದಾಗ, ನಾನು ಈವರೆಗೆ ಹೇಳಿದ ತುಂಬಿ ಬರಬೇಕಾದ ಚಿಕ್ಕ ಪುಟ್ಟ ವಿಷಯಗಳು ಗೌಣವೆಂದೇ ಪರಿಗಣಿಸಬಹುದು. ಅವರ ಮೂಲ ಉದ್ದೇಶ ವೈದ್ಯ ಸಾಹಿತ್ಯವು ಜನಪ್ರಿಯ ಸಾಹಿತ್ಯವಾಗಲೀ ಎಂಬುದೇ ಆಗಿದೆ. ಈಗ ಅದಂತೂ ಯಶಸ್ವಿಯಾಗಿದೆ. ಅಷ್ಟೇ ಅಲ್ಲ, "ಆರೋಗ್ಯ ದರ್ಶನ", "ತಾಯಿ ಮಗು," "ಸ್ತ್ರೀ ಸ್ವಾಸ್ಥ್ಯಸಂಹಿತೆ", ಮತ್ತು "ಶಿಶುವೈದ್ಯದೀಪಿಕೆ"ಗಳನ್ನು ಇನ್ನೂ ಸ್ವಲ್ಪ ವಿಸ್ತರಿಸಿ ಬರೆದರೆ ಅವು ಕ್ರಮವಾಗಿ ವೈದ್ಯ ಶಾಸ್ತ್ರ (Medicine), ಪ್ರಸವ ಶಾಸ್ತ್ರ, (obstetrics), ಸ್ತ್ರೀ ರೋಗಶಾಸ್ತ್ರ (Gynecology) ಹಾಗೂ ಮಕ್ಕಳ ವೈದ್ಯ ಶಾಸ್ತ್ರ (Pediatrics)ಗಳ ಪಠ್ಯ ಪುಸ್ತಕಗಳಾಗುವ ಯೋಗ್ಯತೆ ಪಡೆಯುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಅಲ್ಲದೆ ಕನ್ನಡ ಮಾಧ್ಯಮ ವಿರೋಧಿಗಳಿಗೆ ಇದೊಂದು ಸಶಕ್ತ ಸವಾಲು! ಕನ್ನಡವು ವೈಜ್ಞಾನಿಕ ಭಾಷೆಯಾಗಿಲ್ಲವೆಂದು ಗೊಣಗುಟ್ಟುವವರಿಗೆ ಇದೊಂದು ಗದಾ ಪ್ರಹಾರ!

* ೨೯ ನವೆಂಬರ್ ೧೯೮೭ರಂದು ಗುಲಬರ್ಗಾದಲ್ಲಿ ನಡೆದ ಅನುಪಮಾ ಸಾಹಿತ್ಯ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಲೇಖನ.

ವಿಜ್ಞಾನ ಸಾಹಿತ್ಯ

- ಅಡ್ಯನಡ್ಕ ಕೃಷ್ಣ ಭಟ್

ಏಳನೇ ದಶಕ-ಕನ್ನಡ ವಿಜ್ಞಾನ ಸಾಹಿತ್ಯದ ಹಲವು ಮಗ್ಗುಲುಗಳು ತೆರೆದ ಕಾಲ; ಪತ್ರಿಕೆ, ವಿಶ್ವಕೋಶ, ಆಕರ ಗ್ರಂಥಗಳೆಲ್ಲ ಕನ್ನಡದಲ್ಲೂ ಬೇಕು ಎಂದು ಹೇಗೆ ಎನಿಸತೊಡಗಿತೋ ಅದೇ ರೀತಿ ಬರತೊಡಗಿದ ಕಾಲ. ಕನ್ನಡ ಬಲ್ಲ ಸಹಸ್ರಾರು ತಂದೆ ತಾಯಂದಿರಿಗೆ ಬೇಕಾದ ಜನಪ್ರಿಯ ವೈದ್ಯ ವಿಜ್ಞಾನ ಪುಸ್ತಕವೊಂದು ಅದೇ ದಶಕದಲ್ಲಿ ಪ್ರಕಟವಾಯಿತು. ಕೊಂಡು ಓದಿದವರೆಷ್ಟೋ ಅಂಥವರಿಂದ ಪಡೆದು ಓದಿದವರು ಇನ್ನೂ ಹೆಚ್ಚು ಮಂದಿ; ಡಾ। ಅನುಪಮಾ ನಿರಂಜನರ 'ತಾಯಿ-ಮಗು' ಜನಪ್ರಿಯವಾದದ್ದು ಹೀಗೆ. ಸ್ವಂತ ಓದು, ಅನುಭವಗಳ ಆಧಾರದಲ್ಲಿ ಜನಪದ ಪ್ರಜ್ಞೆಗೆ ಆಗತ್ಯವೆನಿಸಿದ್ದನ್ನು ಹೇಳಲು ಹೊರಟಾಗ ಹುಟ್ಟಿದ್ದು ಅವರ ವೈದ್ಯ ವಿಜ್ಞಾನ ಸಾಹಿತ್ಯ.

ಕೃತಿಗಳು:

'ಪ್ರಜಾವಾಣಿ'ಗೆ ಓದುಗರಿಂದ ಬರುವ ಆರೋಗ್ಯ ಸಮಸ್ಯೆಗಳ ಕುರಿತಾದ ಪ್ರಶ್ನೆಗಳಿಗೆ ಪ್ರತಿವಾರವೂ ಉತ್ತರಿಸಲು ಆರಂಭಿಸಿದಾಗ (೧೯೬೦ರ ವೇಳೆ) ಕತೆ ಬರೆಯುವುದರೊಂದಿಗೆ ಡಾ। ಅನುಪಮಾ ನಿರಂಜನ ವೈದ್ಯ ವಿಜ್ಞಾನ ಸಾಹಿತ್ಯಕ್ಕೂ ಕೈಯಿಕ್ಕಿದರು. ಪ್ರಾಯಶಃ ಆರೋಗ್ಯ ಕ್ಷೇತ್ರದಲ್ಲಿ ಸಾಮಾನ್ಯ ಜನರ ಅಗತ್ಯವನ್ನು ಮನಗಂಡು ಪ್ರತಿಸ್ಪಂದಿಸುವ ಅವಕಾಶವೂ ಆಗ ಅವರಿಗೆ ದೊರಕಿತು. ಮುಂದಿನ ವರ್ಷಗಳಲ್ಲಿ ಕೆಂಪಮ್ಮನ ಮಗು (೧೯೬೪), ತಾಯಿಮಗು (೧೯೬೮), ಆರೋಗ್ಯ ದರ್ಶನ (೧೯೭೦), ವಧುವಿಗೆ ಕಿವಿಮಾತು (೧೯೭೧), ಕೇಳು ಕಿಶೋರಿ (೧೯೭೨), ದಾಂಪತ್ಯ ದೀಪಿಕೆ (೧೯೭೩), ಸ್ತ್ರೀ ಸ್ವಾಸ್ಥ್ಯ ಸಂಹಿತೆ (೧೯೭೬), ಆರೋಗ್ಯ ಭಾಗ್ಯಕ್ಕೆ ವ್ಯಾಯಾಮ (೧೯೮೦), ಶಿಶುವೈದ್ಯ ದೀಪಿಕೆ (೧೯೮೨), ಒತ್ತಡದ ಜೇನೆ-ಕೃತಿಗಳನ್ನು ರಚಿಸಿದರು.

'ಕೆಂಪಮ್ಮನ ಮಗು'-ವಯಸ್ಕರ ಶಿಕ್ಷಣಕ್ಕೆ ಅನುಕೂಲವಾಗುವ ಹಳ್ಳಿಯ ಹಿನ್ನೆಲೆಗೆ ಆದ್ಯತೆ ಕೊಟ್ಟು ಬರೆದ ಪುಸ್ತಿಕೆ. ಹಳ್ಳಿಗರಲ್ಲಿ ರೂಢಿಗತವಾಗಿರುವ ನಂಬಿಕೆಗಳನ್ನು ಭೇದಿಸಿಯೂ ಕೆಲವು ಆರೋಗ್ಯ ಸೂತ್ರಗಳನ್ನು ಮನವರಿಕೆ ಮಾಡುವ ಪ್ರಯತ್ನ ಇದರಲ್ಲಿದೆ.

ಮಧ್ಯಮ ವರ್ಗದ ವಿದ್ಯಾವಂತ ಹೆತ್ತವರಿಗೆ ಉಪಯುಕ್ತ ಕೃತಿಯಾಗಿ ಬಂದ 'ತಾಯಿ ಮಗು' ಗರ್ಭಧಾರಣೆಯಿಂದ ಮಗುವಿನ ಬೆಳವಣಿಗೆಯ ತನಕ ಅವರು

ತಾಳಬೇಕಾದ ಮನೋವೃತ್ತಿ, ನಡೆಸಬೇಕಾದ ಕೆಲಸಗಳನ್ನು ವಿವರವಾಗಿ ಒಳಗೊಂಡಿದೆ. ಮೊದಲ ಬಾರಿಗೆ ತಾಯಿಯಾಗುತ್ತಿರುವ ಹೆಣ್ಣುಮಗಳ ಸಮಸ್ಯೆಗಳನ್ನೆತ್ತಿಕೊಂಡು ಪರಿಹಾರಗಳನ್ನು ವಿಶ್ವಾಸ-ಆತ್ಮೀಯತೆಗಳಿಂದ ಮನವರಿಕೆ ಮಾಡುವುದು ಈ ಕೃತಿಯ ವಿಶೇಷ ಆಕರ್ಷಣೆ.

ಸಾಮಾನ್ಯ ನೆಗಡಿಯಿಂದ ಹಿಡಿದು ಹೃದಯಾಘಾತ, ಕ್ಯಾನ್ಸರ್, ಮಾನಸಿಕ ರೋಗಗಳ ತನಕ ಮಾನವನನ್ನು ಕಾಡುವ ಕಾಯಿಲೆಗಳ ಉಗಮ, ಚಿಹ್ನೆ, ರೋಗ ಪತ್ತೆ, ಚಿಕಿತ್ಸೆಗಳನ್ನು ಅಡಕವಾಗಿ 'ಆರೋಗ್ಯ ದರ್ಶನ' ಒಳಗೊಂಡಿದೆ.

ಸಂತೋಷ-ತಿಳುವಳಿಕೆಗಳಿಂದ ಕೂಡಿದ ಬಾಳುವೆಯನ್ನು ನಡೆಸಲು ಬೇಕಾದ ಲೈಂಗಿಕ ಜ್ಞಾನ, ಶಾರೀರಿಕ-ಮಾನಸಿಕ ಚಟುವಟಿಕೆಗಳು, ವ್ಯಕ್ತಿಯೊಬ್ಬ ರೂಢಿಸಿ ಕೊಳ್ಳಬೇಕಾದ ಮನೋವೃತ್ತಿ-ಇವಕ್ಕೆ ಆಯಾ ಪ್ರಾಯ, ಅವಸ್ಥೆಗೆ ಬೇಕಾದ ಒತ್ತು ಕೊಟ್ಟಾಗ ಮೂಡಿದ ಕೃತಿಗಳು 'ವಧುವಿಗೆ ಕಿವಿಮಾತು', 'ಕೇಳು ಕಿಶೋರಿ' ಮತ್ತು 'ದಾಂಪತ್ಯ ದೀಪಿಕೆ'.

ಸ್ತ್ರೀಯರ ಮತ್ತು ಮಕ್ಕಳ ವಿಶಿಷ್ಟ ಕಾಯಿಲೆಗಳನ್ನು ವಿಷದೀಕರಿಸುವ ಕೃತಿ ಗಳು: 'ಸ್ತ್ರೀ ಸ್ವಾಸ್ಥ್ಯ ಸಂಹಿತೆ' ಮತ್ತು 'ಶಿಶುವೈದ್ಯದೀಪಿಕೆ'. ಆರೋಗ್ಯವರ್ಧನೆಗಾಗಿ ಬೇರೆ ಬೇರೆ ವಿಧದ ವ್ಯಾಯಾಮಗಳ ಸಚಿತ್ರ ವಿವರಣೆ 'ಆರೋಗ್ಯಭಾಗ್ಯಕ್ಕಾಗಿ ವ್ಯಾಯಾಮ' ಕೃತಿಯಲ್ಲಿವೆ.

'ಸುಧಾ' ವಾರ ಪತ್ರಿಕೆಯಲ್ಲಿ ೧೯೮೬ರಲ್ಲಿ ಬಂದ 'ಒತ್ತಡದ ಬೇನೆಗಳು' ಲೇಖನಮಾಲೆಯಲ್ಲಿ ಮಾನಸಿಕ ಅಸೌಖ್ಯಗಳ ಉಗಮ, ಲಕ್ಷಣ, ಚಿಕಿತ್ಸೆ ಮತ್ತು ವಹಿಸ ಬೇಕಾದ ಮುಂಜಾಗ್ರತೆಗಳ ವೃತ್ತಾಂತವಿದೆ.

ವೈಶಿಷ್ಟ್ಯ :

ಪ್ರತಿಯೊಬ್ಬನಿಗೂ ವೈದ್ಯಕೀಯ ಜ್ಞಾನ ಅಗತ್ಯವೆಂಬ ಖಚಿತ ಅಭಿಪ್ರಾಯ ದಿಂದ ವೈದ್ಯವಿಜ್ಞಾನ ಸಾಹಿತ್ಯ ಕೃತಿಗಳನ್ನು ಅನುಪಮಾ ನಿರಂಜನರು ರಚಿಸಿದ್ದಾರೆ. ವ್ಯಕ್ತಿಯೊಬ್ಬನಿಗೆ ಔಷಧ-ಚಿಕಿತ್ಸೆಗಳು ವೈದ್ಯರ ವೈಯಕ್ತಿಕ ಪರೀಕ್ಷಣ ಮತ್ತು ನಿಧಾನ ದಿಂದ ನಡೆಯಬೇಕಾದರೂ ಆರೋಗ್ಯ ಪ್ರಜ್ಞೆಯನ್ನು ಹೆಚ್ಚಿಸಲು ಲಿಖಿತ ಸಾಹಿತ್ಯದಿಂದ ಸಾಧ್ಯ ಎಂಬುದು ಅವರ ಮತ.

ವೈದ್ಯ ವಿಜ್ಞಾನ ಕೃತಿಗಳಲ್ಲಿ ದೇಹದ ರಚನೆ, ದೈಹಿಕ-ಮಾನಸಿಕ ವ್ಯಾಪಾರ ಗಳು, ಆರೋಗ್ಯ - ಅನಾರೋಗ್ಯಗಳ ಬಗ್ಗೆ ಮಾಹಿತಿಗಳನ್ನು ನೀಡಿ ಜ್ಞಾನವನ್ನು ಹೆಚ್ಚಿಸುವಂಥವು ಒಂದು ಬಗೆಯವು. ಆರೋಗ್ಯಕ್ಕೆ ಸಂಬಂಧಿಸಿದಂತೆ ದಿನನಿತ್ಯದ

ಸಮಸ್ಯೆಗಳಿಗೆ ಉತ್ತರ ಪಡೆಯುವ ದಿಕ್ಕಿನಲ್ಲಿ ಉಪಯುಕ್ತ ಕೈಪಿಡಿಯಂತೆ ಒದಗು ವಂಥವು ಇನ್ನೊಂದು ಬಗೆಯವು. 'ಆರೋಗ್ಯದರ್ಶನ' ಮೊದಲಿನ ವರ್ಗಕ್ಕೆ ಹೆಚ್ಚು ವಾಲಿಕೊಂಡಿದ್ದರೆ 'ತಾಯಿ ಮಗು' ಎರಡನೇ ವರ್ಗಕ್ಕೆ ಸಮೀಪವಾಗಿದೆ. ಹೆಚ್ಚಿನ ಕೃತಿಗಳಲ್ಲಿ ಈ ಎರಡು ಉದ್ದೇಶಗಳನ್ನು ಒಗ್ಗೂಡಿಸುವ ಪ್ರಯತ್ನ ನಡೆದಿದೆ. ಆದರೆ ಬದುಕಿಗೆ ಅನ್ವಯವಾಗುವ ಲಕ್ಷಣಗಳೇ ಹೆಚ್ಚು ಗಾಢವಾಗಿ ಮೂಡಿವೆ. ಉದಾಹರಣೆಗೆ 'ತಾಯಿ ಮಗು', 'ದಾಂಪತ್ಯ ದೀಪಿಕೆ'ಗಳಲ್ಲಿ ಓದುಗರಿಗೆ ಪ್ರಾಥಮಿಕ ತಿಳುವಳಿಕೆ ನೀಡಲು ಅಂಗಗಳ ರಚನೆ ಮತ್ತು ಕ್ರಿಯೆಗಳ ಸಚಿತ್ರ ನಿರೂಪಣೆಯನ್ನು ಮೊದಲಲ್ಲಿ ಕೊಡಲಾಗಿದೆ. ಪಾರಿಭಾಷಿಕ ಪದಗಳು ಮತ್ತು ಕಾರ್ಯ-ಕಾರಣ ವಿವರಗಳಿಂದ ಕೂಡಿದ ಈ ಭಾಗಗಳನ್ನು ಸಾಮಾನ್ಯ ಓದುಗರು ಮೇಲಿಂದ ಮೇಲೆ ಕಣ್ಣು ಹಾಯಿಸಿ ಕೊಂಡು ಮುಂದೆ ಸಾಗುವ ಸಾಧ್ಯತೆ ಇದೆ. ಹೀಗೆ ಸ್ವಲ್ಪ ಜಿಗಿದರೂ ಉಪಯುಕ್ತ ವಾದುದನ್ನು ಮುಂದೆ ಅವರು ಪಡೆಯುತ್ತಾರೆ.

ತಂಗಿ ತಮ್ಮಂದಿರನ್ನುದ್ದೇಶಿಸಿ ಅಕ್ಕ ಹೇಳುವಂತೆ, ಬೋಧಕನೊಬ್ಬ ವಿದ್ಯಾರ್ಥಿಗಳಿಗೆ ವಿವರಿಸುವಂತೆ ವ್ಯಕ್ತಿ-ವ್ಯಕ್ತಿಗತವಾದ ಆತ್ಮೀಯ ನಿರೂಪಣೆ ಹೆಚ್ಚಿನ ಕೃತಿಗಳಲ್ಲಿದೆ. ಮಗಳು, ವಿದ್ಯಾರ್ಥಿನಿ, ಡಾಕ್ಟರು, ಪತ್ನಿ, ಸೊಸೆ, ತಾಯಿ, ಸೃಜನಶೀಲ ಲೇಖಕಿ-ಹೀಗೆ ತನ್ನ ಬದುಕೇ ಲೇಖಕಿಯವರಿಗೆ ಮುಖ್ಯ ಆಧಾರ ವಾಗಿರುವುದರಿಂದ ಅದು ಹೆಚ್ಚು ಪರಿಣಾಮಕಾರಿಯೂ ಆಗಿದೆ. ಆದ್ದರಿಂದಲೇ ಇಂಗ್ಲಿಷ್ ಬಾರದವರಷ್ಟೇ ಅಲ್ಲ, ಇಂಗ್ಲಿಷ್ ಬಲ್ಲ ಕನ್ನಡ ಓದುಗರೂ ಡಾ। ಅನುಪಮಾ ನಿರಂಜನರ ಪುಸ್ತಕಗಳನ್ನು ಓದುತ್ತಾರೆ; ಉಡುಗೊರೆಯಾಗಿ ತಮ್ಮ ಹತ್ತಿರದ ಮಂದಿಗೆ ಕೊಡುತ್ತಾರೆ. ಈ ಕ್ರಿಯೆ ಸತತ ನಡೆಯುತ್ತಿರುವುದರಿಂದ ಕನ್ನಡ ಪ್ರಕಾಶನ ಪ್ರಪಂಚದಲ್ಲಿ 'ತಾಯಿ ಮಗು' (೧೨ ಬಾರಿ ಮುದ್ರಣ-೩೬ ಸಾವಿರ ಪ್ರತಿ ಗಳು) ಮತ್ತು 'ದಾಂಪತ್ಯ ದೀಪಿಕೆ' (೧೩ ಬಾರಿ ಮುದ್ರಣ ೪೯ ಸಾವಿರ ಪ್ರತಿಗಳು) ದಾಖಲೆ ನಿರ್ಮಿಸಿವೆ. ಸಾಮಾನ್ಯ ಕನ್ನಡ ಜನಕ್ಕೆ ಅನುಪಮಾ ನಿರಂಜನ ತಮ್ಮ ವೈದ್ಯ ಲೇಖನಗಳಿಂದ ಹೆಚ್ಚು ಆಪ್ತರಾಗಿದ್ದಾರೆ.

ಆರಂಭ, ಬೆಳವಣಿಗೆ ಮತ್ತು ಕೊನೆಗಳನ್ನು ಸಿದ್ಧಕ್ರಮದಲ್ಲಿ ಸೀಮಿತ ಕ್ಷೇತ್ರಕ್ಕೆ ಒಳಪಡಿಸಿ ಕೃತಿಶಿಲ್ಪವನ್ನು ಅವರು ಕಡೆಯುತ್ತಾರೆ. ಮೊದಲಲ್ಲಿ ವರ್ತಮಾನ ಕಾಲದ ಸಮೀಕ್ಷೆ, ನಿರೀಕ್ಷೆಗಳು ವ್ಯಕ್ತವಾಗುತ್ತ ಅಂತ್ಯದಲ್ಲಿ ತಿಳಿವಿನ ಹಾರೈಕೆ, ಆಶಾಭಾವ ಗಳು ತುಂಬಿರುವುದನ್ನು ಅವರ ಹೆಚ್ಚಿನ ಬರವಣಿಗೆಗಳಲ್ಲಿ ಕಾಣಬಹುದು.

೧. 'ದಾಂಪತ್ಯ ಜೀವನದ ಹೊಸ್ತಿಲಲ್ಲಿರುವ ನಿಮಗೆ ಸುತ್ತಲ ಪ್ರಪಂಚ ಸಪ್ತವರ್ಣ ಗಳ ಕಾಮನಬಿಲ್ಲು........ಅನುರಾಗ, ಪ್ರೀತಿ ನಿಮ್ಮ ಮನಸ್ಸನ್ನು ಒಂದುಗೂಡಿಸಿವೆ. ಗಂಡು ಹೆಣ್ಣುಗಳಲ್ಲಿ ಮೂಡುವ ಇಂಥ ತನ್ಮಯತೆ, ಆತ್ಮೀಯತೆ ಪ್ರೇಮದ ಅಂಕುರಕ್ಕೆ ನಾಂದಿ.'

'ಸತಿಪತಿಯರನ್ನು ಒಂದಾಗಿಸುವ ಕ್ರಿಯೆಗಳು ಪ್ರೀತಿ ಮತ್ತು ಸಂಯೋಗ. ಅತ್ಯುನ್ನತ ಸಂತೋಷವನ್ನು ಸವಿವ ಹಾಗೆಯೇ ಪರಸ್ಪರರಿಗೋಸ್ಕರ, ತ್ಯಾಗಕ್ಕೂ ಸಿದ್ಧರಾಗಿ. ನಿಮ್ಮಿಬ್ಬರ ಮದುವೆ ಇಂಥ ಸಂಬಂಧಕ್ಕೆ ನಾಂದಿಯಾಗಲಿ....(ದಾಂಪತ್ಯ ದೀಪಿಕೆಯ ಆದಿ ಮತ್ತು ಅಂತ್ಯ)

೨. "ಹೆಣ್ಣು ಸಮಾಜದ ಆಧಾರಸ್ತಂಭ....ಸಾಮಾನ್ಯ ಸ್ತ್ರೀಗೆ ತನ್ನ ಮೇಲೆ ಬಿದ್ದಿರುವ ಈ ಹಿರಿ ಹೊಣೆಯ ಅರಿವೇ ಇಲ್ಲ...."

"ಕುರುಡು ನಂಬಿಕೆಗಳನ್ನು ತೊಡೆದು ಹಾಕಿ ನೀವು ಹೊಸ ರೀತಿಯ ಬಾಳುವೆಯನ್ನು ನಡೆಸುತ್ತೀರಿ. ನಿಮ್ಮ ಬದುಕಿನಲ್ಲಿ ಮಾತ್ರವಲ್ಲ, ನಿಮ್ಮ ನೆರೆಹೊರೆಯವರ, ಸ್ನೇಹಿತರ, ನೆಂಟರ ಬದುಕಿನಲ್ಲೂ ಆರೋಗ್ಯ ಪ್ರಜ್ಞೆ ಬೆಳೆಸುವ ನೀವು ಕೃತಕೃತ್ಯರು." (ಸ್ತ್ರೀ ಸ್ವಾಸ್ಥ್ಯ ಸಂಹಿತೆಯ ಆದಿ ಮತ್ತು ಅಂತ್ಯ.)

೩. 'ಮದುವೆಯಾದ ವಸಂತದ ದಿನಗಳಿಂದ ಹಿಡಿದು ಮುದ್ದು ಮಕ್ಕಳ ತಾಯಿಯಾಗುವ ವರೆಗೆ ನಡೆದು ಬಂದಿದ್ದೀರಿ. ನಿಮ್ಮ ತಿಳುವಳಿಕೆಗೆ ವೈಜ್ಞಾನಿಕ ತಳಹದಿ ಇರಬೇಕು.' ('ತಾಯಿ ಮಗು' ಕೊನೆಯ ಪುಟ)

ವಾಸ್ತವ ನಿರೂಪಣೆಯಲ್ಲೂ ಕಾವ್ಯಮಯತೆ ಮಿಂಚುವುದುಂಟು. ವೈಜ್ಞಾನಿಕ ನಿಲುವನ್ನು ಬಿಡದೆ ವಾಸ್ತವತೆಗೆ ಅಂಟಿಕೊಂಡು ಆದರ್ಶದತ್ತ ದಿಟ್ಟಿಸುತ್ತಾ ಬರವಣಿಗೆ ಸಾಗುತ್ತದೆ.

ವೈದ್ಯಕೀಯ ಬರಹಗಳಲ್ಲಿ ಒಂದು ವಾಸ್ತವ ದೃಷ್ಟಾಂತವನ್ನು ತೆಗೆದು ಕೊಂಡು ಅದರ ಸುತ್ತ ಸಾರ್ವತ್ರಿಕ ತಿಳಿವಿನ ಲೇಖನವನ್ನು ಹೆಣೆಯುವುದು ಒಂದು ವಿಧಾನವಾದರೆ ಸಾರ್ವತ್ರಿಕ ಹಿನ್ನೆಲೆಯನ್ನು ನೀಡಿ ದೃಷ್ಟಾಂತಗಳಿಂದ ಪುಷ್ಟೀಕರಿಸುವುದು ಇನ್ನೊಂದು ರೀತಿ. ಅನುಪಮಾ ನಿರಂಜನರ ಕೃತಿಗಳಲ್ಲಿ ಎರಡನೆಯ ತಂತ್ರದ ಬಳಕೆಯನ್ನು ಅಲ್ಲಲ್ಲಿ ಕಾಣಬಹುದು: ಚಲನೆಯಿಲ್ಲದ ವೀರ್ಯಾಣು, ಕೆನ್ನೆ ಬಾವು ಮೇಹ ರೋಗಗಳಿಂದ ಫಲಶಕ್ತಿಗೆ ಬರುವ ಕುತ್ತು (ಫಲಶಕ್ತಿ-ದಾಂಪತ್ಯ ದೀಪಿಕೆ); ಸಂಜನಕ ವಿರೂಪಗಳು, ಗರ್ಭಪಾತ, ಮುಟ್ಟು ತಡೆ (ಸ್ತ್ರೀ ಸ್ವಾಸ್ಥ್ಯ ಸಂಹಿತೆ). ಇಂಥ ದೃಷ್ಟಾಂತಗಳನ್ನು ವಿವರಿಸುವಾಗ ಹಾಗೂ ಇತರೆಡೆಗಳಲ್ಲಿ ಅವರು ರೋಗಿ-ವೈದ್ಯರನ್ನೊಳಗೊಂಡ ಪ್ರಶ್ನೋತ್ತರಗಳನ್ನು ಜನಪದದಲ್ಲಿ ರೂಢಿಯಲ್ಲಿರುವ ನುಡಿಗಟ್ಟು, ಲೋಕಾನುಭವದ ಮಾತುಗಳನ್ನೂ ಹಸನಾದ ರೀತಿಯಲ್ಲಿ ಉಪಯೋಗಿಸುತ್ತಾರೆ. ಕಾಯಿಲೆಯ ವಿವರಗಳನ್ನು ಸಾಮಾನ್ಯ ಜನ ಮೌಖಿಕವಾಗಿ ಚಿತ್ರಿಸುವಂತೆಯೇ ಬರಹದಲ್ಲೂ ಬರಲು ಇದರಿಂದ ಸಾಧ್ಯವಾಗಿದೆ. ವಿಸ್ತಾರವಾಗಿ ಹಬ್ಬಿರುವ ಓದುಗರ ಮನೋವ್ಯಾಪಾರಗಳಿಗೆ ಅನುಕ್ರಿಯೆ ವ್ಯಕ್ತಪಡಿಸುವ ಒಂದು ವಿಶಿಷ್ಟ ತಂತ್ರವೂ ಇದರಿಂದ ರೂಪುಗೊಂಡಿದೆ.

ರೋಗಿಗಳ ಮನಸ್ಸಿನಲ್ಲಿ ಮನೆ ಮಾಡಿರುವ ಭಾವನೆಗಳನ್ನು ಅವರ ಮಾತುಗಳಿಂದಲೇ ಹೇಳಿ ಅವುಗಳ ಸತ್ಯಾಸತ್ಯವನ್ನು ತೆಗೆದುಕೊಳ್ಳಬೇಕಾದ ಕ್ರಮಗಳನ್ನೂ ಮಂದಟ್ಟು ಮಾಡುತ್ತ ಆರೋಗ್ಯ ಪ್ರಜ್ಞೆ ವೈಜ್ಞಾನಿಕ ಮನೋಭಾವದ ತಳಹದಿಯಲ್ಲಿ ಬೆಳೆಯುವಂತೆ ಮಾಡುವ ಪ್ರಯತ್ನವನ್ನು ಕೃತಿಗಳುದ್ದಕ್ಕೂ ಕಾಣಬಹುದು. ಎಲ್ಲ ಕೃತಿಗಳನ್ನು ಓದಿದಾಗ ಇದು ಒಂದು ಮುಖ್ಯ ಉದ್ದೇಶವಾಗಿ ಅವನ್ನೆಲ್ಲ ಹೆಣೆದಿರುವುದು ಕೂಡ ಸ್ಫುಟವಾಗುತ್ತದೆ. 'ಮಗುವಿನ ತಲೆಯಲ್ಲಿ ಕೂದಲು ಹೆಚ್ಚಿದ್ದರೆ ಎದೆ ಉರಿ ಬರುತ್ತದೆ', 'ಮುಟ್ಟಿನ ನೋವು ಬಂದ್ರೆ ಮಕ್ಕಳಾಗೊಲ್ಲ ಅಂತಾರೆ. ನಿಜವೇ?', 'ತಾಯಿಯ ಮನೋದ್ವೇಗ ಮಗುವಿನ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುತ್ತದೆ', 'ನಮಗೆ ಬೇಕು ಅನಿಸಿದ ಮಗುವನ್ನು ಪಡೆಯಲು ಸಾಧ್ಯವೆ?'-ಹೀಗೆ ವೈಜ್ಞಾನಿಕ ವಿಶ್ಲೇಷಣೆಗೆ ಸಿಗುವ ಉದ್ಗಾರಗಳು ಒಂದೆರಡಲ್ಲ. ಅವನ್ನು ನಿರೂಪಣೆಗೆ ಬಲತರುವಂತೆ ಉಪಯೋಗಿಸಲು ಡಾ।ಅನುಪಮಾ ನಿರಂಜನ ಪ್ರಯತ್ನಿಸುತ್ತಾರೆ.

ನಿರೂಪಣೆಯ ಮಧ್ಯೆ ಬಹಳ ಸಹಜವಾಗಿ ಸಾರ್ವಕಾಲಿಕ ಮೌಲ್ಯ ಅಥವಾ ಸತ್ಯಗಳ ಬಗ್ಗೆ ಬರುವ ಮಾತುಗಳು ಮತ್ತು ಸುಖ-ಸಂತೋಷಗಳೊಂದಿಗೆ ಅನಿವಾರ್ಯವಾದ ಸಂಯಮ-ತ್ಯಾಗಗಳ ನಿಷ್ಕರ್ಷೆ ಓದುಗರನ್ನು ಗಂಭೀರ ಚಿಂತನೆಗೆ ಹಚ್ಚಬಲ್ಲುವು. ('ಪ್ರೀತಿ-ಎರಡು ಜೀವಿಗಳಿಗೆ ಸೀಮಿತವಲ್ಲ; ಜಗತ್ತಿನ ಅಳಿವು ಉಳಿವುಗಳಿಗೂ ಅದರಲ್ಲಿ ಸ್ಥಾನವಿದೆ'. 'ಸಾಮಾನ್ಯವಾಗಿ ಇನ್ನೊಬ್ಬರಿಗೆ ಕಾಯಿಲೆಯಾದಾಗ 'ಅಯ್ಯೊ ಪಾಪ' ಎಂದು ಅನುಕಂಪ ಸೂಚಿಸುತ್ತೇವೆ. ಆದರೆ ಕಾಯಿಲೆ ನಮ್ಮ ಬಾಗಿಲಿಗೇ ಬಂದಾಗ ಕಂಗಾಲಾಗುವುದು ಮಾನವನ ಸ್ವಭಾವ'.)

ವಿಷಯದ ಮುಕ್ತವೂ ನಿರಾಳವೂ ಆದ ನಿರೂಪಣೆಯಲ್ಲಿ ಪಾರಿಭಾಷಿಕ ಅಥವಾ ತಾಂತ್ರಿಕ ಎನಿಸುವ ಪದಗಳ ಬಗ್ಗೆ ಅವರು ತಲೆಕೆಡಿಸಿಕೊಂಡಿಲ್ಲ. ಸುಗಮವಾಗಿ ಬಂದುದು-ಇಂಗ್ಲಿಷ್, ಕನ್ನಡ, ಹೊಸದಾಗಿ ಟಂಕಿಸಿದಂಥವು, ರೂಢಿಗತವಾದಂಥವು-ಯಾವುದೇ ಇರಲಿ ಅವನ್ನು ಉಪಯೋಗಿಸಿದ್ದಾರೆ. ಕೊರತೆಯ ಕಾಯಿಲೆ, ಬಯಕೆ, ಪುಟ್ಟಮಾಲೆ, ಕೋಶಿಕೆ, ಫಲದತೆ, ಕೆಂಜಾರ ಇತ್ಯಾದಿ ಪದಗಳನ್ನು ವಿಶೇಷ ವೈಜ್ಞಾನಿಕ ಅರ್ಥಛಾಯೆಯಿಂದ ಬಳಸಿಕೊಂಡಂತೆಯೇ ಟ್ರೋಫೊಬ್ಲಾಸ್ಟ್, ಬ್ಲಾಸ್ಟುಲ, ಇಂಜೆಕ್ಷನ್, ಆಂಟಿಬಯೊಟಿಕ್ ಸಿರಪ್, ಮಾತ್ರೆ, ಕ್ಯಾಪ್‌ಸೂಲ್‌ಗಳನ್ನು ಅದೇ ರೂಪದಲ್ಲಿ ಇಟ್ಟುಕೊಂಡಿದ್ದಾರೆ. ಪ್ರಾಯಶಃ ಮುಂದೆ ಕನ್ನಡದಲ್ಲಿ ಬೇರೂರಬಹುದಾದ-ಕನ್ನಡ ರೂಪವಾಗಲೀ ಇಂಗ್ಲಿಷ್ ರೂಪವಾಗಲೀ ಬಳಕೆಗೆ ಬಂದುದನ್ನು ಅಥವಾ ಅನುಕೂಲವಾದುದನ್ನು ಹಾಗೇ ಉಪಯೋಗಿಸುವ-ರೂಢಿಗೆ ಈ ಕ್ರಮ ಸೂಚಕವಾಗಿದೆ. ಒಂದು ಮೂಲ ಪದಕ್ಕೆ ಒಂದೇ ಪಾರಿಭಾಷಿಕ ಪದವನ್ನು ಎಲ್ಲ ಸಂದರ್ಭಗಳಲ್ಲೂ ಬಳಸಿಕೊಳ್ಳದ ಉದಾಹರಣೆಗಳೂ ಅವರ ಕೃತಿಗಳಲ್ಲಿ ಸಿಗುತ್ತವೆ.

ಓದುಗರಿಗೆ ತಿಳಿದೇ ಇದೆ ಎಂಬ ಭಾವನೆಯಿಂದ ಡಿಂಭ, ಅಂಡಾಣು, ಪಿಂಡ, ಭ್ರೂಣ ಇತ್ಯಾದಿ ಅನ್ಯೋನ್ಯ ಸಂಬಂಧಿತ ಪದಗಳನ್ನು ವಿಶೇಷ ವಿವರಣೆಯಿಲ್ಲದೆ ಅವರು ಬಳಸಿದ್ದುಂಟು. ಈ ಹಿಂದೆ ಹೇಳಿದಂತೆ ಇವು ಅರ್ಥವಾಗದಿದ್ದರೂ ತೇಲಿಸಿ, ಆಸಕ್ತಿಯನ್ನು ಕುದುರಿಸುವ ಮುಂದಿನ ಪುಟಗಳಿಗೆ ಓದುಗ ಸಾಗಬಲ್ಲ.

ಡಾ।ಅನುಪಮಾ ನಿರಂಜನರು ಶಿಕ್ಷಣ ಪಡೆದ, ಓದಿದ, ವೃತ್ತಿ ನಡೆಸಿದ ಕ್ಷೇತ್ರ ವೈದ್ಯಕೀಯ. ಜನವರ್ಗದಲ್ಲಿ ಅವರ ವಿಶೇಷ ಗಮನ ಸೆಳೆದವರು ಮಹಿಳೆಯರು ಮತ್ತು ಮಕ್ಕಳು. ಅವರು ಬರೆದುದಾದರೂ ಹೆಚ್ಚಾಗಿ ಈ ವರ್ಗದವರ ಆರೋಗ್ಯದ ಬಗ್ಗೆ. ಹೀಗೆ ಸ್ವಕ್ಷೇತ್ರಕ್ಕೆ ಸಂಬಂಧಿಸಿದ ವಿಷಯದಲ್ಲಿ ಕೃತಿ ರಚನೆ ಮಾಡಿ ಅವರು ಜನಪ್ರಿಯ ವಿಜ್ಞಾನ ಲೇಖಕರಿಗೊಂದು ದಾರಿ ತೋರಿಸಿದ್ದಾರೆ. 'ವಿಷಯ ಮತ್ತು ಭಾಷೆಗಳ ಮೇಲಿನ ಪ್ರಭುತ್ವ ಯಶಸ್ವೀ ಕೃತಿ ರಚನೆಗೆ ಆವಶ್ಯಕ.' ತಿಳುವಳಿಕೆ, ಪ್ರೀತಿ, ವಿಶ್ವಾಸ, ಅಸ್ವಾಸ್ಥ್ಯ ಕಾಲದಲ್ಲಿ ಅಪಾರ ಧೈರ್ಯಗಳನ್ನು -ತಾವೇ ಸಾಧ್ಯವೆಂದು ತೋರಿಸಿದ್ದನ್ನು -ತಮ್ಮ ಕೃತಿಗಳ ಮೂಲಕ ಕನ್ನಡ ಓದುಗರಿಗೆ ಡಾ।ಅನುಪಮಾ ನಿರಂಜನ ಹಂಚಿದ್ದಾರೆ. ಅನ್ವಯಿಕ ಜ್ಞಾನವನ್ನೊಳಗೊಂಡ ವಿಷಯ ಸೃಜನಶೀಲ ಸಾಹಿತಿಯ ಕೈಯಿಂದ ಹೇಗೆ ಕೃತಿರೂಪ ಪಡೆಯಬಹುದೆಂಬುದಕ್ಕೆ ಅವರ ವೈದ್ಯ ವಿಜ್ಞಾನ ಪುಸ್ತಕಗಳು ಪುರಾವೆಯಾಗಿವೆ. ಜನಮೆಚ್ಚುಗೆ ಅವರ ಕೃತಿಗಳ ಉಪಯುಕ್ತತೆಗೆ ಸೂಚಕವಾಗಿದೆ.

೦ ಶುಭಕಾಮನೆ ಮತ್ತು ಮಾನಿನಿ

-ಲೀಲಾವತಿ ಎಸ್. ರಾವ್

ಅನುಪಮಾ ನಿರಂಜನ ಅವರು ಕತೆ, ಕಾದಂಬರಿಗಳನ್ನು ಬರೆದು ಜನಪ್ರಿಯರಾಗಿರುವುದರ ಜೊತೆಗೆ ಮಹಿಳೆಯರಿಗೆ ಅಗತ್ಯವೂ, ಉಪಯುಕ್ತವೂ ಆದ ವೈದ್ಯಕೀಯ, ದಾಂಪತ್ಯ ವಿಜ್ಞಾನ, ವೈಚಾರಿಕ ಲೇಖನಗಳನ್ನು ಬರೆದು ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿ ಮಹದುಪಕಾರ ಮಾಡಿದ್ದಾರೆ.

ವೃತ್ತಿಯಿಂದ ವೈದ್ಯರೂ, ಪ್ರವೃತ್ತಿಯಿಂದ ಸಾಹಿತಿಯೂ, ಉತ್ತಮ ಗೃಹಿಣಿಯೂ, ತಾಯಿಯೂ ಆಗಿರುವ ಅನುಪಮಾ ತಮ್ಮ ಈ ಎಲ್ಲಾ ಅನುಭವಗಳನ್ನು ವಿಚಾರದ ಮೂಸೆಯಲ್ಲಿ ಕುದಿಸಿ, ಚೊಕ್ಕ ಗೊಳಿಸಿ ಉಳಿದವರಿಗೆ ಹಂಚಿದ್ದಾರೆ. ಲೇಖಕಿಯರು ಕಲ್ಪಿತವೂ ಅತಿ ರಂಜಕವೂ ಆದ ಕೇವಲ ಮನೋರಂಜನೆಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡ ಕೃತಿಗಳನ್ನು ರಚಿಸುತ್ತಾರೆ; ವೈಚಾರಿಕ ಬರಹಗಳನ್ನು ಬರೆಯುವಲ್ಲಿ ಸಮರ್ಥರಾಗಿಲ್ಲ ಎಂಬ ಆರೋಪವನ್ನು ಅನುಪಮಾ ಸ್ವಲ್ಪ ಮಟ್ಟಿಗಾದರೂ ಹುಸಿಯಾಗಿಸಿದ್ದಾರೆ ಎಂಬುದು ಸಮಾಧಾನದ ಸಂಗತಿ.

ಶುಭಕಾಮನೆ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ 'ಪ್ರಜಾವಾಣಿ' ಸಾಪ್ತಾಹಿಕದ 'ಮಹಿಳಾವಾಣಿ' ವಿಭಾಗದಲ್ಲಿ ಪ್ರತಿವಾರವೂ ಗೆಳತಿಗೆ ಬರೆದ ಪತ್ರ ರೂಪದ ಲೇಖನಗಳ ಸಂಗ್ರಹ. ಚಿಕ್ಕ ಚಿಕ್ಕ ಸಲ್ವತ್ತು ಲೇಖನಗಳಿವೆ. ಸ್ತ್ರೀಯರಿಗೆ ಉಪಯುಕ್ತವಾಗುವ ಹಲವು ವಿಷಯಗಳ ಮಾಹಿತಿಯೊಂದಿಗೆ ವಿಚಾರಶಕ್ತಿಯನ್ನು ಪ್ರಚೋದಿಸುವ ಅಂಶಗಳು ಹಲವಿವೆ. ಧೈರ್ಯ, ಆತ್ಮವಿಶ್ವಾಸಗಳನ್ನು ಮೂಡಿಸಲು ಸಹಾಯಕವಾಗುವ ಜಗತ್ತಿನ ವಿವಿಧ ಮಹಿಳೆಯರ ಪರಿಚಯವೂ ದೊರೆಯುತ್ತದೆ. ಧೀಮಂತೆ ಅನಿಬೆಸೆಂಟ್, ಲೇಖಿಕೆ ಪರ್ಲ್‌ಬಕ್, ಜಪಾನಿನ ಟ್ಸುರುಯೋ ಕೊಂಡೊ, ಶ್ರೀಮತಿ ರೂಸ್‌ವೆಲ್ಟ, ನ್ಯೂಯಾರ್ಕಿನ ಈವಾ ಒರ್ನೆ ಮುಂತಾದವರ ಆತ್ಮಸ್ಥೈರ್ಯ, ಕೆಚ್ಚು, ಛಲಗಳ ಬಗ್ಗೆ ಓದಿದಾಗ ಹೊಸ ಸ್ಫೂರ್ತಿ, ಆಶಾಕಿರಣ ಮೂಡಿ ಬರುತ್ತದೆ.

'ಅಡಿಗೆ ಮನೆಯಿಂದ ಗ್ರಾಮ ಚಾವಡಿಗೆ'. 'ಶಾಂತಿಗೆ ಸಮ್ಮೋಹನಾಸ್ತ್ರ 'ಬದುಕು ರೂಪಿಸುವಾಕೆ', 'ವನಿತೆಗೆ ಯುದ್ಧ ಕಲೆ' ಮುಂತಾದ ಕಿರುಲೇಖನಗಳು ಮಹಿಳೆ ಮನ ಮಾಡಿದರೆ ಏನು ಬೇಕಾದರೂ ಸಾಧಿಸಬಲ್ಲಳು, ಯಾವುದರಲ್ಲೂ ಆಕೆ ಪುರುಷನಿಗಿಂತ ಕಡಿಮೆಯಿಲ್ಲ ಎಂಬುದನ್ನು ಸ್ಪಷ್ಟಗೊಳಿಸುತ್ತವೆ.

ಒಳ್ಳೆಯ ಕತೆಗಾರ್ತಿಯಾದ ಅನುಪಮಾ ಬಹು ಸ್ವಾರಸ್ಯವಾಗಿ, ನವಿರಾದ ಹಾಸ್ಯಲೇಪದೊಂದಿಗೆ ಆತ್ಮೀಯ ಶೈಲಿಯಲ್ಲಿ ಈ ಲೇಖನಗಳನ್ನು ಬರೆದಿದ್ದಾರೆ. ಪ್ರತಿಯೊಬ್ಬ ಮಹಿಳೆಯೂ ತಪ್ಪದೆ ಓದಬೇಕಾದ ಪುಸ್ತಕ ಶುಭಕಾಮನೆ!

ಇಪ್ಪತ್ತೈದು ವರ್ಷಗಳ ಹಿಂದಿನ ಬರಹವಾದ್ದರಿಂದ ಅಲ್ಲೊಮ್ಮೆ ಇಲ್ಲೊಮ್ಮೆ ಇಂದಿಗೆ ಒಪ್ಪಿತವಾಗದ ಒಂದೆರಡು ವಿಚಾರಗಳು ಬಂದಿವೆ. ಪ್ರಾಯಶಃ ಅನುಪಮಾ ಅವರ ನಿಲುವು ಕೂಡ ಈ ಬಗ್ಗೆ ಬದಲಾಗಿದೆ. ಇದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು. "ಇಂದು ಹೈಸ್ಕೂಲು ಕಾಲೇಜುಗಳಲ್ಲಿ ಓದುತ್ತಿರುವ ಬಹುಮಂದಿ ನಾಳೆ ಗೃಹಿಣಿಯರಾಗುವವರು. ಆಗ ಕಲಿಸುವ ಭೌತಶಾಸ್ತ್ರ, ರಸಾಯನ ಶಾಸ್ತ್ರಗಳು ಮುಂದೆ ಗೃಹಕೃತ್ಯದಲ್ಲಿ ಅವರಿಗೆ ಹೆಚ್ಚಿನ ಸಹಾಯ ನೀಡುವುದಿಲ್ಲ. ಇಂತಹವರು ಮನೆಗೆಲಸಗಳನ್ನು ಸರಿಯಾಗಿ ತೂಗಿಸಿಕೊಂಡು ಹೋಗುವುದಿಲ್ಲವಾದುದರಿಂದ ಓದಿದ ಹುಡುಗಿಯರು ಬೇಡ ಎಂದು ಇಂದಿನ ಯುವಕರು ಅನ್ನುವಂತಾಗಿದೆ. ಆದುದರಿಂದ ಜೀವನದಲ್ಲಿ ಹೆಣ್ಣು ಮಕ್ಕಳಿಗೆ ಅತ್ಯವಶ್ಯಕವಾದ ಗೃಹ ವಿಜ್ಞಾನ. ಕಸೂತಿ, ಮನೆಯ ಅಲಂಕಾರ, ಮಕ್ಕಳ ಲಾಲನೆ ಪಾಲನೆ-ಇವುಗಳೊಂದಿಗೆ ಸಂಗೀತದಲ್ಲೂ ಹೆಚ್ಚಿನ ಶಿಕ್ಷಣ ದೊರೆತರೆ ನಾಳಿನ ಗೃಹಿಣಿಯರು ಸಂಸಾರವನ್ನು ಇನ್ನೂ ಹೆಚ್ಚು ಸುಖಮಯವನ್ನಾಗಿ ಮಾಡಬಲ್ಲರು." (ಲಾಲಿ ತನಯಾ-ಜೋ. ಶುಭಕಾಮನೆ ಪುಟ ೬೭)

ಹೆಣ್ಣನ್ನು ಕೇವಲ ಸಂಸಾರದ ಚೌಕಟ್ಟಿನೊಳಗಷ್ಟೆ ಇಟ್ಟು ನೋಡ ಹೊರಟಿರುವ ಅನುಪಮಾ ಅವರ ದೃಷ್ಟಿ 'ಮಾನಿನಿ'ಯಲ್ಲಿ ಸಂಪೂರ್ಣ ಬದಲಾಗಿದೆ.

"ಹೆಂಗಸು ಆರ್ಥಿಕ ಉತ್ಪಾದನೆಯಲ್ಲಿ ಪಾಲುಗೊಂಡ ಹೊರತು ಅವಳಿಗೆ ನಿಜವಾದ ಅರ್ಥದಲ್ಲಿ ಸಮಾನತೆ, ಸ್ವಾತಂತ್ರ್ಯ ದೊರಕಲಾರದು. ಹೊರಗಿನ ಉದ್ಯೋಗ ಅವಳಿಗೆ ಗೌರವ, ಆತ್ಮವಿಶ್ವಾಸ ಮತ್ತು ಭದ್ರತೆಗಳನ್ನು ಒದಗಿಸುವುದಲ್ಲದೆ ಅವಳ ಪ್ರಾಪಂಚಿಕ ಅರಿವನ್ನು ವಿಸ್ತರಿಸುತ್ತದೆ.........ಮನೆಗೆಲಸ ಒಂದು ಉದ್ಯೋಗವಲ್ಲ, ಮಾಡಲೇ ಬೇಕಾದದ್ದು. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮಾಡಿ ಮುಗಿಸುವಂಥದು. ಅದಕ್ಕಿಂತ ಹೆಚ್ಚಿನ ಮಹತ್ವ ಅದಕ್ಕೆ ಕೊಡಬಾರದು" (ಮಾನಿನಿ ಪು.೧೭೮)

೧೯೮೭ರಲ್ಲಿ ಪ್ರಕಟವಾದ 'ಮಾನಿನಿ' ಮಹಿಳೆಯರ ಮನೋರಂಗ ಹಾಗೂ ವೈಚಾರಿಕ ಪ್ರಜ್ಞೆಯನ್ನು ಕುರಿತ ಮಹಿಳಾ ಅಧ್ಯಯನದ ವಿವಿಧ ಮುಖಗಳನ್ನು ಪರಿಚಯ ಮಾಡಿ ಕೊಡುತ್ತದೆ. ಹೆಣ್ಣಿನ ಬಗ್ಗೆ ತೀವ್ರವಾದ ಕಾಳಜಿಯುಳ್ಳ ಅನುಪಮಾ ಈ ಅಧ್ಯಯನದಲ್ಲಿ ಮಹಿಳೆಯ ಬದುಕಿನ ಹರಹನ್ನು ಅವಲೋಕಿಸುತ್ತಾ, ಹೆಣ್ಣಿನ ಬದುಕಿನ ಪ್ರಮುಖ ಘಟ್ಟಗಳಾದ ಬಾಲ್ಯ, ಹದಿಹರೆಯ, ಯೌವ್ವನ, ಮಧ್ಯ ವಯಸ್ಸು ಮತ್ತು ಅಪರ ವಯಸ್ಸುಗಳಲ್ಲಿ ದೈಹಿಕವಾಗಿ, ಮಾನಸಿಕವಾಗಿ ಹೊಂದುವ ಬದಲಾವಣೆಗಳು ಅವುಗಳ ಪರಿಣಾಮ, ಹೊಂದಾಣಿಕೆ ಇವುಗಳನ್ನು ವಿವರವಾಗಿ ಮನ ಮುಟ್ಟುವಂತೆ ಹೇಳಿದ್ದಾರೆ. ಅವರ ವೈದ್ಯಕೀಯ ಜ್ಞಾನ ಮತ್ತು ವೈಚಾರಿಕ ಪ್ರಜ್ಞೆ ಬರಹದ ಪೌಲ್ಯವನ್ನು ಹೆಚ್ಚಿಸಿದೆ.

ಸ್ತ್ರೀ ಪುರುಷರಾದಿಯಾಗಿ ಪ್ರತಿಯೊಬ್ಬರೂ ಈ ಪುಸ್ತಕವನ್ನು ಓದುವುದರಿಂದ ಪರಸ್ಪರರ ಬಗ್ಗೆ ಅರಿವು ಮೂಡಿ, ಪ್ರತಿಯೊಬ್ಬರ ವರ್ತನೆಯ ಹಿನ್ನೆಲೆ ತಿಳಿದು ಕುಟುಂಬದಲ್ಲಿ ಹೆಚ್ಚಿನ ಸ್ನೇಹ ಸೌಹಾರ್ದ ಮೂಡಿ ಸಂಬಂಧಗಳು ಹೆಚ್ಚು ಅರ್ಥ ಪೂರ್ಣವಾಗಬಹುದು.

ಅಜ್ಞಾನ, ಅಂಧಶ್ರದ್ಧೆಗಳು ಮಹಿಳೆಯ ಶೋಷಣೆಗೆ ಕಾರಣವಾಗಿವೆ. ತನ್ನ ಶಾರೀರಿಕ ಬದಲಾವಣೆಗಳು, ಅದರೊಂದಿಗೆ ನಿಕಟ ಸಂಬಂಧವಿರುವ ಮನೋವ್ಯಾಪಾರಗಳು ಇವುಗಳ ತಿಳುವಳಿಕೆಯಿಲ್ಲದ ಹೆಣ್ಣು ಹಲವು ರೀತಿಯ ಸಂಶಯ, ಗೊಂದಲಗಳಿಗೆ ಒಳಗಾಗಿ ಒದ್ದಾಡುತ್ತಾಳೆ. ಸ್ಪಷ್ಟವಾದ ಕಾರಣಗಳು, ವೈಜ್ಞಾನಿಕ ವಿಚಾರಗಳು ಅವಳಿಗೆ ತಿಳಿದಾಗ ಅವನ್ನು ಎದುರಿಸಲು ಆಕೆ ಶಕ್ತಳಾಗುತ್ತಾಳೆ. ತನಗಿಂತ ಭಿನ್ನವಾದ ಶಾರೀರಿಕ, ಲೈಂಗಿಕ, ಮಾನಸಿಕ ಸ್ಥಿತಿಯನ್ನು ಹೊಂದಿರುವ ಹೆಣ್ಣಿನ ಬಗ್ಗೆ ಸರಿಯಾದ ಮಾಹಿತಿಯುಳ್ಳ ಗಂಡು ಆಕೆಯನ್ನು ಅರ್ಥ ಮಾಡಿಕೊಳ್ಳಲು ಸಮರ್ಥನಾಗುತ್ತಾನೆ. ಈ ಕಾರಣಕ್ಕಾಗಿ 'ಮಾನಿನಿ'ಯನ್ನು ಪ್ರತಿಯೊಬ್ಬರೂ ಓದಬೇಕು.

ಹೆಣ್ಣು ಹುಟ್ಟಿನಿಂದಲೇ ಗಂಡಿಗಿಂತ ಕೀಳಲ್ಲ. ಸಾಮಾಜಿಕ ಪರಿಸ್ಥಿತಿಯಿಂದ ಆ ಸ್ಥಾನ ಬಂದಿದೆ. ಅದನ್ನು ಬದಲಾಯಿಸಲು ಸಾಧ್ಯ ಎಂಬ ಭರವಸೆಯಿಂದ ಅನುಪಮಾ 'ಮಾನಿನಿ'ಯಲ್ಲಿ ಮಹಿಳೆಯ ಬದುಕನ್ನು ವಿಶ್ಲೇಷಿಸಿದ್ದಾರೆ. ಶಿಕ್ಷಣ, ಆರ್ಥಿಕ ಸ್ವಾತಂತ್ರ್ಯ ದೊರೆತಾಗ ಮಾತ್ರವೇ ಆಕೆಯ ವೈಚಾರಿಕ ಪ್ರಜ್ಞೆ ವಿಕಾಸಗೊಂಡು ಅಡುಗೆ ಕೋಣೆಯ ನಾಲ್ಕು ಗೋಡೆಗಳಿಂದ ಹೊರಬಂದು ಪುರುಷನಿಗೆ ಸಮಾನವಾಗಿ ಬದುಕಲು ಸಾಧ್ಯ ಎಂಬುದನ್ನು ಒತ್ತಿ ಹೇಳಿದ್ದಾರೆ.

'ಶುಭಕಾಮನೆ' ಮತ್ತು 'ಮಾನಿನಿ' ಎರಡನ್ನು ಓದಿದಾಗ ೨೦–೨೫ ವರ್ಷಗಳಲ್ಲಿ ಅನುಪಮಾ ಬೆಳೆದಿರುವುದು ನಮ್ಮ ಗಮನಕ್ಕೆ ಬರುತ್ತದೆ. ಅವರ ಅನುಭವಗಳು, ವಿಚಾರಗಳು ಹೆಚ್ಚು ಪಕ್ವವಾಗಿವೆ. ಅದು ಸಹಜವೇ.

'ಮಾನಿನಿ'ಯ ಒಂದು ಸಣ್ಣ ಕೊರತೆ ಎಂದರೆ ಕೆಲವೊಮ್ಮೆ ಬರುವ ಪುನರಾವರ್ತನೆ. ಮತ್ತಷ್ಟು ಪರಿಷ್ಕರಿಸಿ ಸಂಗ್ರಹಿಸಿ ಪ್ರಕಟಿಸಿದರೆ ಪುಸ್ತಕದ ಬೆಲೆ ಹೆಚ್ಚುವುದರಲ್ಲಿ ಸಂಶಯವಿಲ್ಲ.

ಲೈಂಗಿಕ ವಿಜ್ಞಾನ-ಮೂರು ಕೃತಿಗಳ ಸಮೀಕ್ಷೆ ೨೨

-ಎನ್.ಲಲಿತಾ

ಬಾಳೊಂದು ಪ್ರಕೃತಿ ಸಹಜ ಹಾಗೂ ಪ್ರೇರಕ ಕ್ರಿಯಾ ತರಂಗಗಳಿಂದ ಕೂಡಿದ ಪ್ರವಾಹ. ಇದನ್ನು ಈಸಿ ಬರಲು ಯಾರಿಗೇ ಆದರೂ ಸಾಕಷ್ಟು ಧೈರ್ಯ ಬೇಕು; ಜೊತೆಗೆ ಈಜಿನ ಸಂತೋಷವೂ ಸಿಗಬೇಕು. ತನ್ನ ಹಿಂದು-ಇಂದು-ಮುಂದುಗಳ ಗೊಂದಲ ರಹಿತ ಸೂಕ್ಷ್ಮ, ಸ್ಪಷ್ಟ ಹಾಗೂ ವಿವರವಾದ ಜ್ಞಾನವಿದ್ದಾಗ ಯಾರೇ ಆದರೂ ಧೈರ್ಯಗೊಳ್ಳುವರು. ಇಂತಹ ಧೈರ್ಯ ನೀಡಬಲ್ಲ ಜೀವನದ ಪರಿಪೂರ್ಣ ವಿದ್ಯೆಯ ಒಂದಂಶವೇ ಲೈಂಗಿಕ ಜ್ಞಾನ. ಈ ಲೈಂಗಿಕ ಜ್ಞಾನವನ್ನು ನೈತಿಕ ನೆಲೆಯಲ್ಲಿ ವೈಜ್ಞಾನಿಕವಾಗಿ ಡಾ|ಅನುಪಮಾ ನಿರಂಜನರು ಸಾಮಾಜಿಕ ಹಾಗೂ ಮಾನವೀಯ ಕಳಕಳಿಯಿಂದ ತಮ್ಮ 'ಕೇಳು ಕಿಶೋರಿ', 'ವಧುವಿಗೆ ಕಿವಿಮಾತು' ಮತ್ತು 'ದಾಂಪತ್ಯ ದೀಪಿಕೆ'-ಈ ಮೂರು ಕೃತಿಗಳ ಮೂಲಕ ನೀಡಿರುವರು. ಅವರ ಈ ಮೂರು ಕೃತಿಗಳ ಸಮೀಕ್ಷೆ ಈ ಲೇಖನದ ಉದ್ದೇಶ.

'ಕೇಳು ಕಿಶೋರಿ' ಗಾತ್ರದಲ್ಲಿ ಉಳಿದೆರಡು ಕೃತಿಗಳಿಗಿಂತ ಕಿರಿದಾದರೂ ಬಾಳಿನ ಹಿರಿ ಅರ್ಥದಿಂದ ತುಂಬಿದೆ. ಮೂಲತಃ ಕುಮಾರಿಯರು ಶಾಲಾ ಕಾಲೇಜುಗಳಲ್ಲಿ ಪಡೆಯುವ ಶಿಕ್ಷಣದೊಂದಿಗೆ ಆರೋಗ್ಯ ಮತ್ತು ಲೈಂಗಿಕ ಶಿಕ್ಷಣವನ್ನು

ಪಡೆಯುವಂತೆ ರಚಿತವಾಗಿದೆ. ಇಲ್ಲಿ ಲೇಖಕಿ ಕಿಶೋರಿಯರು ಎದುರಿಸುವ ಅಸಹಜ, ಉದ್ರಿಕ್ತ ಹಾಗೂ ಅನಿವಾರ್ಯ ಸಮಸ್ಯೆಗಳಿಗೆ ರಸೌಷಧಿಯನ್ನಿತ್ತು ಜನಾಂಗ ಸ್ವಾಸ್ಥ್ಯವನ್ನು ಕಾಪಾಡಲು ಸಹಕರಿಸಿದ್ದಾರೆ.

'ಕೇಳು ಕಿಶೋರಿ' ಕೃತಿ ವಿದ್ಯೆ-ವ್ಯಾಪ್ತಿ, ಜನನೇಂದ್ರಿಯಗಳು, ಯೌವನ. ರೋಗದರ್ಶನ, ಯೋಜಿತ ಕುಟುಂಬ ಮತ್ತು ಸಂಸಾರ ಸಮಾಜ ಎಂಬ ಆರು ಭಾಗಗಳಿಂದ ಕಿಶೋರಿಯರಿಗಷ್ಟೇ ಅಲ್ಲ, ಅವರ ಬಗ್ಗೆ ಪ್ರೀತಿ, ಆಸ್ಥೆ ಉಳ್ಳವರಿಗೆಲ್ಲಾ ಆರೋಗ್ಯ ಮತ್ತು ಲೈಂಗಿಕ ಜ್ಞಾನವನ್ನು ನೀಡಬಲ್ಲ ಕೈದೀವಿಗೆಯಾಗಿದೆ.

'ವಿದ್ಯೆ-ವ್ಯಾಪ್ತಿ'ಯಲ್ಲಿ ವಿದ್ಯಾಭ್ಯಾಸದ ಧ್ಯೇಯೋದ್ದೇಶಗಳನ್ನು ಎರಡು ಮುಖಗಳಿಂದ ಕಂಡಿದ್ದಾರೆ. ಒಂದು ವಿದ್ಯಾರ್ಥಿನಿಯರ ವಿದ್ಯಾರ್ಥಿದೆಸೆಯಲ್ಲಿ ಅವರ ಜ್ಞಾನದಾಹ ತಣಿದು ಅವರ ಸುಪ್ತ ಕಲೆಗಳ ಬೆಳವಣಿಗೆಯಾಗಿ, ನೈತಿಕ ಮೌಲ್ಯಗಳ ಸ್ವೀಕರಣೆಯೊಂದಿಗೆ ವ್ಯಕ್ತಿತ್ವ ರೂಪುಗೊಳ್ಳಬೇಕಾದುದು. ಇನ್ನೊಂದು ಮುಖ ವ್ಯಕ್ತಿನಿಷ್ಠ ಹಾಗೂ ಸಾಮಾಜಿಕ ಋಣ ಸಂದಾಯದ ಮೂಲಕ ವಿದ್ಯೆಯ ವ್ಯಾಪ್ತಿ.

ಪಠ್ಯಕ್ರಮಗಳಲ್ಲಿ ಲೈಂಗಿಕ ವಿಜ್ಞಾನವೂ ಸೇರಬೇಕೆಂದು ಅಭಿಪ್ರಾಯ ಪಟ್ಟಿರುವ ಲೇಖಕಿ, ಶಿಕ್ಷಣ ತಜ್ಞೆಯಾಗಿಯೂ. ಸಾಮಾಜಿಕ ಸ್ವಾಸ್ಥ್ಯಕಲ್ಪನೆಯ ವೈದ್ಯೆಯೂ ಆಗಿರುವರು. ಲೈಂಗಿಕ ವಿಜ್ಞಾನದ ಬಗ್ಗೆ ಸಂಕೋಚ ಪ್ರವೃತ್ತಿ ಸಲ್ಲದು. ಮುಕ್ತ ಮನಸ್ಸಿನಿಂದ ಅಭ್ಯಾಸ ಮುಖ್ಯ. "ಲೈಂಗಿಕ ವಿಜ್ಞಾನವೆಂದರೆ. ಜನನೇಂದ್ರಿಯಗಳ ರಚನೆ ಹಾಗೂ ಕ್ರಿಯೆಗಳು ಮತ್ತು ಅವುಗಳ ಕಾಯಿಲೆಗಳು ಹಾಗೂ ಚಿಕಿತ್ಸೆಗಳು-ಇವನ್ನು ತಿಳಿಸುವ ವಿಜ್ಞಾನ. ನಮ್ಮ ದೇಹದಲ್ಲಿ ಹೃದಯ ಅಥವಾ ಶ್ವಾಸಕೋಶ ಇದ್ದ ಹಾಗೆ ಜನನೇಂದ್ರಿಯಗಳೂ ಇವೆ. ಇವಿಲ್ಲದೆ ಜಗತ್ತಿನಲ್ಲಿ ಜೀವಸೃಷ್ಟಿಯೇ ಇಲ್ಲ. ಅಂದರೆ ಇವು ಬದುಕಿಗೆ ಮೂಲಾಧಾರ ಎನ್ನೋಣ. ದೈಹಿಕ ಆರೋಗ್ಯವನ್ನು ನಾವು ಅಭ್ಯಾಸ ಮಾಡುವಾಗ, ಬೇರೆಲ್ಲ ಅವಯವಗಳಂತೆಯೇ ಜನನೇಂದ್ರಿಯಗಳ ವಿಷಯವನ್ನು ತಿಳಿದುಕೊಳ್ಳೋಣ. ಮನುಷ್ಯನ ಮೆದುಳಿನ ರಚನೆಯ ಬಗ್ಗೆ ತಿಳಿದುಕೊಳ್ಳಲು ನಿಮಗೆ ನಾಚಿಕೆಯೆನಿಸುವುದೇ? ಇದೂ ಹಾಗೆ." (ಪುಟ ೧೪) ಎಂಬ ಧೋರಣೆಯೊಂದಿಗೆ ಲೇಖಕಿ ಸಹೃದಯತೆಯನ್ನು ಗೆದ್ದುಕೊಂಡಿರುವರು.

ಲೈಂಗಿಕ ಜ್ಞಾನ ಪ್ರಾಚೀನ ಕಾಲದಿಂದಲೂ ಇದ್ದಿತಾದರೂ ಇಂದು ಇದಕ್ಕೆ ವೈಜ್ಞಾನಿಕ ಒಪ್ಪ ಓರಣ ಬೇಕೆನ್ನುತ್ತಾ ಇದನ್ನು ಸಮರ್ಥ ರೀತಿಯಲ್ಲಿ ನಿಭಾಯಿಸಲು ಮಾತೆಯೇ ಮೊದಲ ಗುರು ಎಂಬ ಅಂಶಕ್ಕೆ ಲೇಖಕಿ ಒತ್ತು ನೀಡಿ ಸ್ತ್ರೀ ಶಿಕ್ಷಣದಲ್ಲಿ ಲೈಂಗಿಕ ಜ್ಞಾನದ ಮಹತ್ವವನ್ನು ಕಾಣಿಸಿದ್ದಾರೆ. ಋತುಮತಿಯಾಗಿ ಯೌವನದಲ್ಲಿ ಕಾಲಿಡಬೇಕಾದರೂ ಮುಂದೆ ಸುಖಮಯ ವೈವಾಹಿಕ ಜೀವನ ನಡೆಸಬೇಕಾದಾಗ

ಲೈಂಗಿಕ ವಿಜ್ಞಾನ ಬೇಕೇ ಬೇಕು. "ಇಲ್ಲವಿದ್ದರೆ ನಿಮ್ಮ ಬದುಕು ಭೀತಿ ಸಂಶಯಗಳ ಕಗ್ಗಂಟಾಗುತ್ತದೆ." ಎಂಬ ಭೀತಿಯು ಎಚ್ಚರಿಕೆ ಕಿಶೋರಿಯರಿಗೆ ಮಾತ್ರವಲ್ಲ ಇಡೀ ಮಾನವ ಜನಾಂಗಕ್ಕೇ ಅನ್ವಯಿಸುವಂತಿದೆ. ಈ ಅಧ್ಯಾಯದಲ್ಲಿ ಹೇಳಿದ ಸಭ್ಯತೆ-ಶಿಸ್ತುಗಳಿಂದ ಕೂಡಿದ, ಲೈಂಗಿಕ ಸ್ವೇಚ್ಛಾವೃತ್ತಿಯಿಂದ ದೂರವಿರುವ, ಸಂಯಮ ನಿಷ್ಠೆಗಳಿಂದ ಕೂಡಿದ ಲೈಂಗಿಕ ಬದುಕಿನ ಅಗತ್ಯ ಯುವಜನಾಂಗಕ್ಕೆ ಮಾತ್ರವಲ್ಲ ಸರ್ವರಿಗೂ ಅತ್ಯಾವಶ್ಯಕ. ಯೌವನದ ಪ್ರಕೃತಿಸಹಜ ಬದಲಾವಣೆಗಳನ್ನು ಮಾನಸಿಕ ಮತ್ತು ದೈಹಿಕ ಎಂಬ ವಿಭಾಗಗಳಲ್ಲಿ ಕ್ರಮವತ್ತಾಗಿ ಪ್ರತಿಯೊಂದು ಲಕ್ಷಣವನ್ನೂ ಮುಚ್ಚುಮರೆಯಿಲ್ಲದೆ ಹೇಳಿರುವರು.

ಲೈಂಗಿಕ ವಿಜ್ಞಾನದ ವ್ಯಾಪ್ತಿಯ ವೈಜ್ಞಾನಿಕ ತಿಳಿವಳಿಕೆಯನ್ನು ಕಿಶೋರಿಯರಿಗೆ ನೀಡಿ, ಅವರ ಜ್ಞಾನ ಸುಭದ್ರವಾಗಲು ಸ್ತ್ರೀ ಹಾಗೂ ಪುರುಷ ಜನನೇಂದ್ರಿಯಗಳ ರಚನೆಯನ್ನೂ, ಆ ವಿವಿಧ ಅಂಗಗಳು ದೇಹದ ಯಾವ ಭಾಗಗಳಲ್ಲಿವೆ-ಅವು ಹೇಗೆ ಕೆಲಸ ಮಾಡುತ್ತವೆ ಎಂಬ ವಿವರಗಳನ್ನೂ ಸೂಕ್ತ ಚಿತ್ರಗಳ ಸಹಾಯದಿಂದ ಸ್ಪಷ್ಟಪಡಿಸಿರುವ ರೀತಿ ಪರಿಣಾಮಕಾರಿ ತಂತ್ರವಾಗಿದೆ. ಯೌವನದ ಲಕ್ಷಣಗಳು, ಗರ್ಭಧಾರಣೆ-ಪ್ರಸವ ಇತ್ಯಾದಿ ಚಿತ್ರಾಧಾರಿತ ವಿವರಗಳೂ, ಯೌವನದಲ್ಲಿ ಬರುವ ರೋಗಗಳು, ಅವುಗಳ ಕಾರಣಗಳು - ಚಿಕಿತ್ಸೆಗಳು ಸಾಕಷ್ಟು ವಿವರಣೆಯೊಂದಿಗೆ ಸೂಕ್ತವಾಗಿ ಬಂದಿವೆ.

'ಯೋಜಿತ ಕುಟುಂಬ'- ಈ ಭಾಗದಲ್ಲಿ ಕುಟುಂಬ ಯೋಜನೆಗೆ ನೆರವಾಗುವ ವೈಜ್ಞಾನಿಕ ವಿಧಾನಗಳು ಮತ್ತು ಸಾಧನೆಗಳ ಬಗ್ಗೆ ವಿವರಗಳಿವೆ. ಸಾಮಾಜಿಕ ಸ್ವಾಸ್ಥ್ಯ ಮತ್ತು ಸಭ್ಯ ಜನಾಂಗ ನಿರ್ಮಾಣಕ್ಕೆ ಯೋಗ್ಯ ಶಿಕ್ಷಣದ ಅಗತ್ಯವನ್ನು ಲೇಖಕಿ ಒತ್ತಿ ಹೇಳುತ್ತಾ ಕೌಮಾರ್ಯದಲ್ಲಿ ಪಡೆದ ಲೈಂಗಿಕ ಜ್ಞಾನ ತಪ್ಪುದಾರಿಗೆ ಎಳೆಯದಂತೆ "ಈ ಎಲ್ಲಾ ತಿಳಿವಳಿಕೆ ನಿಮ್ಮ ಇಂದಿನ ಉಪಯೋಗಕ್ಕಲ್ಲ. ನಾಳಿನ ನಿಮ್ಮ ವೈವಾಹಿಕ ಜೀವನ ಸುಗಮವಾಗಲಿ. ದೇಶದ ಜನನ ನಿಯಂತ್ರಣ ಯೋಜನೆಯಲ್ಲಿ ನೀವೂ ಪರೋಕ್ಷವಾಗಿ ನೆರವಾಗಿ ಎಂಬ ದೃಷ್ಟಿಯಿಂದ ಈ ವಿವರಗಳನ್ನೆಲ್ಲಾ ನೀಡಿದ್ದೇನೆ." (ಪುಟ ೭೪)ಎಂಬ ಪ್ರಾಮಾಣಿಕ, ಸಮಯೋಚಿತ ಆಶಯ ವ್ಯಕ್ತವಾಗಿದೆ.

ಕೃತಿಯು ಕೊನೆಗೆ ಯುವ ಜನಾಂಗದ ಬಂಡಾಯ ಪ್ರವೃತ್ತಿಯನ್ನು ನಿಗ್ರಹಿಸುವ ಪ್ರಯತ್ನವಿದೆ. "ಹಿರಿಯರ ಅನುಭವ ಕಿರಿಯರಿಗೆ ಅಮೂಲ್ಯ ಸಂಪತ್ತು. ಆದುದರಿಂದ ಕಿರಿಯರ ಉತ್ಸಾಹದೊಂದಿಗೆ ಹಿರಿಯರ ಅನುಭವ ಸಮರಸಗೊಂಡಾಗ ಬಾಳು ಸತ್ಯವಾಗುತ್ತದೆ" (ಪುಟ ೮೫) ಎಂಬ ವಿವೇಕದಿಂದಲೇ ಪ್ರಗತಿಪರ ವಿಚಾರಗಳಿಗೂ ನಮ್ಮ ಸಂಸ್ಕೃತಿಗೂ ಸಮನ್ವಯ ಕಾಣಬೇಕೆನ್ನುವ ಸೂಚನೆ ಅತ್ಯಮೂಲ್ಯವಾದುದು.

ಬೇರೊಡೆದು ಚಿಗುರಿಟ್ಟ ಎಳೆ ಸಸಿಯು ಹುಲುಸಾದ ಬೆಳೆಗೆ ಎಚ್ಚರಿಕೆಯಿಂದ ಪೋಷಣೆ ಅಗತ್ಯ; ದಾಂಪತ್ಯ ಬದುಕಿಗೆ ಕಾಲಿರಿಸಿರುವ ನವ ವಧುವಿನ ಸವಿಬಾಳ್ವೆಗೆ ಸೂಕ್ತ ಮಾರ್ಗದರ್ಶನದ ಅಗತ್ಯವಿದೆ ಎಂಬ ದೃಷ್ಟಿಯಿಂದಲೇ ಡಾ। ಅನುಪಮಾ ನಿರಂಜನರ 'ವಧುವಿಗೆ ಕಿವಿಮಾತು' ರಚಿತವಾಗಿದೆ. ಲೈಂಗಿಕ ಜೀವನಕ್ಕೆ ಸರ್ವಶ್ರೇಷ್ಠ ರೂಪು ಕೊಟ್ಟ ಕಾರಣದಿಂದಲೇ ಈ ಕೃತಿ ಸಾಕಷ್ಟು ಜನಪ್ರಿಯವಾಗಿದೆ. 'ವಿವಾಹ ನಿಶ್ಚಿತ' ವಂಂಗಳ ಮುಹೂರ್ತದಿಂದಾರಂಭಿಸಿ, ಮಧುಚಂದ್ರ ಕಳೆದು ಸತಿಪತಿಗಳು ಅನ್ಯೋನ್ಯತೆಯಿಂದ ಬಾಳಲು ಬೇಕಾದ ರಸದೌತಣ ಇದರಲ್ಲಿದೆ. ವಧುವಿನಲ್ಲಿ ಸಾಕಷ್ಟು ಆತ್ಮವಿಶ್ವಾಸ ಮೂಡಿಸಿ, ಸತಿ-ಪತಿಗಳಿಬ್ಬರಿಗೂ ಪರಸ್ಪರರನ್ನು ಅರ್ಥೈಸಿ ನಡೆಯುವ ಸವಿವರ ರೀತಿ ನೀತಿಗಳನ್ನು ನೀಡುವುದೇ ಈ ಕೃತಿಯ ಉದ್ದೇಶ. ಇದರಲ್ಲಿನ ಅಧ್ಯಾಯಗಳೆಲ್ಲವೂ ವಧುವಿನ ಅನೇಕ ಸಮಸ್ಯೆ ಸಂದೇಹಗಳಿಗೆ ಉತ್ತರ ನೀಡುತ್ತವೆ. "ಪುಸ್ತಕವನ್ನು ನೀನು ಒಮ್ಮೆಯೇ ಓದಿ ಮುಗಿಸಬೇಕೆಂದಿಲ್ಲ. ಅಗತ್ಯ ಬಿದ್ದಾಗ ಆಯಾ ಅಧ್ಯಾಯ ಓದಿದರೂ ಸರಿ. ನಿನ್ನ ಪತಿಯೂ, ನೀನೂ ಜೊತೆಗೂಡಿ ಓದಿದಾಗ. ಪರಸ್ಪರರನ್ನು ಕುರಿತ ನಿಮ್ಮ ಅರಿವು ಹೆಚ್ಚುವುದರಲ್ಲಿ ಸಂಶಯವಿಲ್ಲ. ಅಂತೂ ಹುಟ್ಟಿದ ಮನೆಗೆ ಮಾತ್ರವಲ್ಲ, ಸೇರಿದ ಮನೆಗೂ ಕೀರ್ತಿ ತರುವುದು ನಿನ್ನ ಹೊಣೆ." ಎಂಬ ಶುಭಹಾರೈಕೆಯ ಮೊದಲ ಮಾತುಗಳಲ್ಲಿಯೇ ಲೇಖಿಕೆಗೆ ತನ್ನ ಈ ಕೃತಿಯ ಪರಿಣಾಮಕತೆಯಲ್ಲಿ ಆತ್ಮವಿಶ್ವಾಸವಿರುವುದು ವ್ಯಕ್ತವಾಗುತ್ತದೆ. ಈ ಕೃತಿಯ ಸಹಾಯದಿಂದ ವೈವಾಹಿಕ ಬಾಳಿನ ನಿಷ್ಠುರ ಸಮಸ್ಯೆಗಳನ್ನು ಲೀಲಾಜಾಲವಾಗಿ ಪರಿಹರಿಸಿಕೊಳ್ಳಲು ಬೇಕಾದ ಮನಸ್ಥಿತಿ ಹೊಂದುವುದರಲ್ಲಿ ಸಂದೇಹವಿಲ್ಲ.

"ವಧುವಿಗೆ ಕಿವಿಮಾತು" ನೇರವಾಗಿ ವಧುವನ್ನು ಉದ್ದೇಶಿಸಿರುವುದಾದರೂ, ಎಲ್ಲಾ ಜಾತಿಯ, ಎಲ್ಲಾ ಮತದ, ಎಲ್ಲಾ ನಂಬಿಕೆಗಳ, ವಿಭಿನ್ನ ಮನೋವೃತ್ತಿಯ ಯುವತಿಯರ ವೈವಾಹಿಕ ಬಾಳಿನ ಗುಟ್ಟನ್ನು ತಿಳಿಸುವುದು. ವ್ಯಾಪಕವಾಗಿ ಇದು ಎಲ್ಲರಲ್ಲೂ ಮಿಡಿಯುವ ಮಾನವ ಹೃದಯಕ್ಕೆ ಅನ್ವಯಿಕವಾದ ನೀತಿ ಸಂಹಿತೆಯಾಗಿದೆ. "ವಿವಾಹವೆಂದರೆ ದೈಹಿಕ ಆಕರ್ಷಣೆ ಮಾತ್ರವಲ್ಲ. ಬೌದ್ಧಿಕ ಸೆಳೆತವೂ ಇರಬೇಕು. ಪ್ರೀತಿ-ಒಲವಿನಿಂದ ಮಾತ್ರ ವಿವಾಹ ನಿಲ್ಲಲಾರದು. ಗಂಡ ಹೆಂಡಿರ ತ್ಯಾಗ, ಹೊಂದಾಣಿಕೆಗಳೂ, ಪರಸ್ಪರ ಗೌರವವೂ ಮದುವೆಯ ಬಂಧನ ಶಾಶ್ವತ ಆಗಲು ನೆರವಾಗುತ್ತವೆ ಎಂಬುದನ್ನು ನೆನಪಿಡಿ." (ಪುಟ ೯) ವಿವಾಹ ಪ್ರೇಮದ್ದೇ ಆಗಲಿ, ಅಂತರ್ಜಾತೀಯವೇ ಆಗಲಿ, ಹಿರಿಯರಿಂದ ಯೋಜಿತವಾದ ಜಾತೀಯವೇ ಆಗಲಿ, "ದೈಹಿಕ ಸಾಮೀಪ್ಯದಿಂದ ನೀವಿಬ್ಬರೂ ಸುಖಪಡಬೇಕಾದರೆ ಲೈಂಗಿಕ ತಿಳಿವಳಿಕೆ ಅತ್ಯಗತ್ಯ............ ಸ್ತ್ರೀ ಪುರುಷರ ಜನನೇಂದ್ರಿಯ ರಚನಾ ವಿಧಾನ, ಅವು ಕೆಲಸ ಮಾಡುವ ಬಗೆ, ಹೊರಗಿನ ಉದ್ರೇಕಗಳಿಗೆ ಇವು ಪ್ರತಿಕ್ರಿಯೆ ತೋರಿಸುವ ರೀತಿ" (ಪುಟ ೧೨–೧೩)-ಈ ವೈಜ್ಞಾನಿಕ ಜ್ಞಾನವನ್ನು ಲೇಖಿಕೆ ಕೃತಿಯುದ್ದಕ್ಕೂ ವೈವಾಹಿಕ ಬಾಳಿಗೆ ಆರೋಗ್ಯವರ್ಧಕ ಔಷಧಿಯನ್ನಾಗಿ ನೀಡಿದ್ದಾರೆ.

ವಿವಾಹಾನಂತರ ವಧು ಹೊಸತೊಂದು ಜೀವದೊಂದಿಗೆ ಹೊಂದಾಣಿಕೆ ಮಾತ್ರವಲ್ಲ, ಸಾಂಸಾರಿಕವಾಗಿ, ಸಾಮಾಜಿಕವಾಗಿ ಭಿನ್ನ ಭಿನ್ನ ವ್ಯಕ್ತಿಗಳೊಂದಿಗೆ ಸಮನ್ವಯವಾಗಿ ಬಾಳುವ ಗುಟ್ಟನ್ನು ಎಲ್ಲರೂ ತಿಳಿಯಲೇ ಬೇಕಾದುದು ಮುಖ್ಯ. ಮನೋ ವಿಜ್ಞಾನದ ನೆಲೆಯಲ್ಲಿ ಲೇಖಕಿಯು ವ್ಯಕ್ತಿ ಸಂಬಂಧದ ವಿಭಿನ್ನ ಸಮಸ್ಯಾತ್ಮಕ ಕ್ಷಣಗಳನ್ನು ಎತ್ತಿಹಿಡಿದು ವಧುವು ವ್ಯವಹರಿಸಬೇಕಾದ ರೀತಿಯನ್ನು ನೇರವಾಗಿ ಹೇಳಿರುವರು. ಅಲ್ಲಲ್ಲಿ ಕೊಟ್ಟಿರುವ ದೃಷ್ಟಾಂತಗಳಿಂದ ವೈವಾಹಿಕ ವಸ್ತುವನ್ನೊಳಗೊಂಡ ಕಾದಂಬರಿಯ ಓಟ ಕಾಣುವುದಲ್ಲದೆ, ವಿವರಣೆ, ಸಮರ್ಥನೆ ಹಾಗೂ ಶೋಧನೆಗಳನ್ನೊಳಗೊಂಡು ಬಳಸಿದ ತಂತ್ರ ಹೆಚ್ಚು ಶಕ್ತಿಯುತವಾಗಿದೆ. ವಿವಾಹದಿಂದ ಮೂಡುವ ಭೀತಿಯನ್ನು ನಿವಾರಿಸಲು ತಾಯಿಯಾಗಲೀ, ಅಜ್ಜಿಯಾಗಲೀ, ಬೇರೆ ಯಾರೇ ಆದರೂ, ಅವರು ನೀಡುವ ಜ್ಞಾನ ಅಪೂರ್ಣ. ಪೂರ್ಣ ಮಾಹಿತಿಗೆ ಮನೆ ಡಾಕ್ಟರರ ಸಲಹೆ ಪಡೆದುಕೊಳ್ಳಿರಿ ಎಂದು ಹೇಳಿರುವ ಲೇಖಕಿಯೇ ಎಲ್ಲಾ ವಧುಗಳಿಗೆ ಸೂಕ್ತ ಸಲಹೆಗಳನ್ನು ಮನೆಯ ಮಾತ್ರವಲ್ಲ ಮನದ ಡಾಕ್ಟರರೂ ಆಗಿ ಗೌರವದ ಸ್ಥಾನಕ್ಕೆ ಅರ್ಹರಾಗಿರುವರು.

ಭಿನ್ನ ಆಸಕ್ತಿ, ಅಭಿರುಚಿ, ಸ್ವಭಾವದ ಪತಿಯನ್ನು ಒಲಿಸಿಕೊಳ್ಳುವುದು ವಧುವಿಗೆ ಪ್ರಯಾಸಕರ. ದಾಂಪತ್ಯ ಜೀವನದ ಯಶಸ್ಸಿಗೆ ಪರಸ್ಪರರಲ್ಲಿ ಹೊಂದಾಣಿಕೆ ತೀರಾ ಅಗತ್ಯ ಎಂಬುದನ್ನು ಒತ್ತಿ ಹೇಳಿರುವುದು ಕೃತಿಯ ಮಾನ್ಯವಾದ ವಿಷಯ. ಪತಿಗೆ ತಕ್ಕ ಸತಿಯಾಗಿ ಬಾಳುವ ಒಳಗುಟ್ಟು ಬಹಿರಂಗಗೊಳಿಸುವಂತಹದ್ದಲ್ಲ; ಕೃತಿಯನ್ನು ಓದಿದಾಗಲೇ ಸೂಕ್ಷ್ಮ ಎಳೆಗಳಲ್ಲಿ ಹುದುಗಿದ ಗುಟ್ಟು ಸಹೃದಯಿಗಳಿಗೆ ಅರಿವಾಗುವುದು.

ಗಂಡ ಹೆಂಡಿರ ಜಗಳದ ಬಗ್ಗೆ ವಿವರಣೆ ನೀಡುತ್ತಾ, ಸ್ವಾನುಭವವನ್ನು ಸಂದರ್ಭೋಚಿತವಾಗಿ "ಪ್ರತಿ ಸಾರಿ ಜಗಳವಾದಾಗಲೂ ನಾವು ಒಬ್ಬರನ್ನೊಬ್ಬರು ಹೆಚ್ಚು ಅರ್ಥಮಾಡಿಕೊಂಡಿದ್ದೇವೆ". "ಜೀವನ ಒಂದೇ ರೀತಿಯಲ್ಲಿದ್ದರೆ ಬೇಸರ ಬರುತ್ತದೆ. ಸದಾ ಸಂತೋಷ, ಶಾಂತಿ-ಇವಿದ್ದರೂ ಜೀವನ ಬರಡು ಎನಿಸುತ್ತದೆ. ಬರಿಯ ಬಯಲನ್ನೇ ನೋಡಿದರೆ ಬೇಜಾರಾಗುವುದಿಲ್ಲವೇ? ಹಾಗೆ ಬಯಲು ದಾಟಿ ಗುಡ್ಡವೊಂದು ಬರಬೇಕು, ಹಸಿರು ಕಣಿವೆಯೊಂದು ಕಾಣಬೇಕು, ಧುಮುಕುವ ನದಿಯೊಂದು ಗೋಚರಿಸಬೇಕು. ಆಗ ನೋಟ ವರ್ಣರಂಜಿತವಾಗುತ್ತದೆ. ನಮ್ಮ ಬಾಳಿನಲ್ಲೂ ಹೀಗೆಯೇ. ಆಗಾಗ್ಗೆ ಮಾತಿನ ಚಕಮಕಿ, ಸಿಟ್ಟು, ಸೆಡವು-ಇವುಗಳಿದ್ದರೆ ಸಂತೋಷ ತೃಪ್ತಿಗಳ ನಿಜವಾದ ಬೆಲೆ ನಮಗೆ ತಿಳಿಯುತ್ತದೆ." (ಪುಟ ೪೮) ಎಂದು ಹೇಳಿಕೊಂಡಾಗ ಸೌಂದರ್ಯಮುಗ್ಧವಾದ ಕವಿಹೃದಯವುಳ್ಳ ಡಾಕ್ಟರ್ ಸೋದರಿಯ ಅನುಭವದಲ್ಲಿ ವಿಶ್ವಾಸ ಬೆಳೆದು, ಸಮಸ್ಯೆಗಳ ಮೌಲ್ಯ ಗುರುತಿಸಲು ಎಡೆ ದೊರಕಿದೆ.

ಅವರ "ಯಾವ ಸಂದರ್ಭವೇ ಆಗಲಿ. ಜಗಳ ದೊಡ್ಡದಾಗಲು ಬಿಡಬೇಡಿ" (ಪುಟ ೪೮) ಎಂಬ ಹಿತೋಕ್ತಿ ಸ್ವೀಕಾರಾರ್ಹ. ನಾನಾ ಸನ್ನಿವೇಶಗಳನ್ನು ಕೊಟ್ಟು ಸಂಘರ್ಷವೇಯು ಭಿನ್ನಾಭಿಪ್ರಾಯಕ್ಕೆ ಎಡೆಕೊಡದಂತೆ ಪತ್ನಿ ತಡೆಗೋಡೆಯಾಗಲು ನೀಡಿದ ಸೂಚನೆಗಳೆಲ್ಲವೂ ಲೇಖಕಿಯ ವಿಶಾಲ ಹೃದಯವಂತಿಕೆಗೆ ಸಾಕ್ಷಿ.

ವಧು ಪತಿಗೃಹದ ಒಡತಿಯಾಗಿ ಅವಳ ತ್ಯಾಗ-ವಾತ್ಸಲ್ಯದ ಗುಣಗಳು ಚಿತ್ರರವಾಗುವ ವಿವಿಧ ಸಂದರ್ಭಗಳ ಸೂಕ್ತ ಸೂಚನೆಗಳು ಸಂದರ್ಭೋಚಿತ ವಿವರಣೆಗಳೊಂದಿಗೆ ಬಂದಿದೆ. ಕಷ್ಟ ಸಹಿಷ್ಣುತೆ ಬಾಳಿನ ಆನಂದಕ್ಕೆ ಎಂಬ ತತ್ವಾಧಾರದಲ್ಲಿ ವೈವಾಹಿಕ ಜೀವನ ಸಸೂತ್ರವಾಗಲು ಗಂಡ ಹೆಂಡಿರಲ್ಲಿ ತ್ಯಾಗ-ಸಹನೆಗಳು ಅಗತ್ಯ ಎಂಬ ಲೇಖಕಿಯ ವಿವೇಕದಲ್ಲಿ ಆದರ್ಶ ದಾಂಪತ್ಯಕ್ಕೆ ಸಹೃದಯರನ್ನು ಸ್ವಾಗತಿಸುವ ಸುಸಂಸ್ಕೃತ ನೀತಿಯಿದೆ.

'ಲೈಂಗಿಕ ಸಾಮರಸ್ಯ'-ಈ ಅಧ್ಯಾಯದಲ್ಲಿ ವಿವಾಹಾನಂತರದ ಪ್ರಥಮ ರಾತ್ರಿಯ ವಿಭಿನ್ನ ಅನುಭವ ವಿಶೇಷಗಳನ್ನು ಸತಿ ಪತಿಗಳ ಮುಂದಿಟ್ಟು ಕಥನ ಶೈಲಿ ಸ್ವಾರಸ್ಯಕರವಾಗಿ ಮೂಡಿರುವುದನ್ನು ಕಾಣಬಹುದು. ವಾತ್ಸಾಯನರ 'ಕಾಮಸೂತ್ರ'ದ ಪ್ರೀತಿಯ ವಿಜ್ಞಾನ ಮತ್ತು ಕಲೆಗೆ ಮನಶ್ಶಾಸ್ತ್ರದ ಹಿನ್ನೆಲೆಯನ್ನೊದಗಿಸಿ ಸಾರ್ವಕಾಲಿಕ ಸತ್ಯವನ್ನು ಪ್ರಮಾಣೀಕರಿಸಿದ್ದಾರೆ. "ಹೆಣ್ಣು ಮೃದು ಸ್ವಭಾವದವಳಾದುದರಿಂದ ಮೆಲು ನುಡಿಗಳಿಂದ ವರ ಅವಳನ್ನು ಗೆದ್ದುಕೊಳ್ಳಬೇಕು. ವಧುವಿನ ನಂಬಿಕೆ. ಪ್ರೀತಿಗಳನ್ನು ಗಳಿಸಿಕೊಳ್ಳುವ ತನಕ. ವರ ಅವಳ ದೈಹಿಕ ಸಾಮೀಪ್ಯ ಬಯಸಬಾರದು. ವರ ಒರಟಾಗಿ ನಡೆದುಕೊಂಡರೆ ವಧುವಿಗೆ ದೈಹಿಕ ವಿಷಯಗಳ ಬಗ್ಗೆ ಮಾತ್ರವಲ್ಲ. ಗಂಡು ಜಾತಿಯ ಬಗ್ಗೆಯೇ ಜಿಗುಪ್ಸೆ ತಿರಸ್ಕಾರ ಮೂಡಬಹುದು." ಎಂದು ತನ್ನ ಅಭಿಪ್ರಾಯಕ್ಕೆ ಸತಿ ಪತಿಗಳ ಅನುಭವ ವಿಶೇಷಗಳನ್ನು ಎತ್ತಿ ಹಿಡಿದು ಸಾಮರಸ್ಯದ ಮೆರುಗನ್ನು ಎಲ್ಲರೂ ಕಾಣುವಂತೆ ನಡೆಯುವ ಸೂಚನೆ ಸೂಕ್ತ. ಈ ಸಂಗತಿಗಳಿಗೆ ಪೂರಕವಾಗಿ ಅನೇಕ ದಾಂಪತ್ಯಗಳ ತನಗೆದುರಾದ ಕೌತುಕದಾಯಕ ಸನ್ನಿವೇಶಗಳನ್ನು ಡಾಕ್ಟರರಾದ ಲೇಖಕಿ ದೃಷ್ಟಾಂತವೆಂಬಂತೆ ನೀಡಿ ಲೈಂಗಿಕ ಸಾಮರಸ್ಯದ ಮಹತ್ವವನ್ನು ಹೇಳಿರುವುದು ಗಮನಾರ್ಹ.

ಪ್ರೇಮ ವಿವಾಹದ ಬ್ರಹ್ಮ. ದೈವ, ಆರ್ಷ, ಪ್ರಾಜಾಪತ್ಯ, ಗಾಂಧರ್ವ. ಅಸುರ, ರಾಕ್ಷಸ, ಮತ್ತು ಪೈಶಾಚ ಎಂಬ ಎಂಟು ಬಗೆಗಳನ್ನು ಹೇಳಿ ಸತಿ ಪತಿಗಳು ಪ್ರಾಚೀನ ವಿವಾಹ ಪರಂಪರೆಯತ್ತ ನೋಟಹರಿಸುವಂತೆ ಮಾಡಿರುವರು. ಲೇಖಕಿ ಇಂದಿನ ಪ್ರೇಮ ವಿವಾಹಕ್ಕೆ ಹೆಚ್ಚು ಮಹತ್ವ ನೀಡುತ್ತಾ ಅವುಗಳ ಬಗ್ಗೆ ಸಮಾಜದ ಕುತ್ಸಿತ ನೋಟವನ್ನು ಸರ್ವಾಂಗ ಸುಂದರವನ್ನಾಗಿ ಕಾಣುವುದಕ್ಕೆ ಅನುವು

ಕೊಟ್ಟಿರುವಲ್ಲಿ ಲೇಖಕಿಯ ಪ್ರಗತಿಪರ ಧೋರಣೆಯು ಒಪ್ಪವೆನಿಸಿದ ಅಂಶ ಮನದಟ್ಟಾ ಗುವುದು. ಅಂತರ್ಜಾತೀಯ ವಿವಾಹದ ಅನಿವಾರ್ಯ ಅಂಶಗಳೊಂದಿಗೆ ಭಾರತೀಯರ ಜಾತಿ ಪಂಥದ ಸಂಕುಚಿತ ಮನೋಭಾವವನ್ನು ತೊಡೆದು ಹಾಕಿ ಜಾತ್ಯತೀತ ಸಮಾಜದ ನಿರ್ಮಾಣದಲ್ಲಿ ಪ್ರಗತಿಪರ ನೋಟ ಬೀರಬೇಕಾದುದು ಇಂದಿನ ಅನಿವಾರ್ಯ ಪರಿಸ್ಥಿತಿಯೂ, ಅಗತ್ಯವೂ ಇದೆಯೆನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕಾದುದು. ಪ್ರೇಮ ವಿವಾಹವಾದಾಗ ಸತಿ ಎದುರಿಸುವ ವ್ಯಕ್ತಿನಿಷ್ಠ ಸಮಸ್ಯೆ ಗಳ ಜಟಿಲತೆಯನ್ನು ತಿಳಿಸಿಕೊಟ್ಟಿರುವುದಲ್ಲದೆ, ಸಾಮಾಜಿಕ ಸಮಸ್ಯೆಗಳನ್ನೂ ಗುರುತಿಸಿ ಕೊಟ್ಟಿರುವರು. ಆದರೆ ಅವುಗಳನ್ನೆಲ್ಲಾ ತೊಡೆದು ಹಾಕಿ ಬಾಳಿನಲ್ಲಿ ಭರವಸೆ ಮೂಡಿಸುವ 'ಕಿವಿಮಾತು' ಔಚಿತ್ಯ ಪೂರ್ಣ, ಸೂಕ್ತ ಪರಿಹಾರಗಳನ್ನು ಕಾಣುವ, ಧೈರ್ಯ ತುಂಬುವ ಅನೇಕ ಹಿತನುಡಿಗಳು ಸರ್ವರಿಗೂ ವೇದ್ಯವಾಗು ವಂತಿವೆ. ಇಂತಹ ಸಂದರ್ಭದಲ್ಲಿ ಪ್ರೇಮಿಗಳು ಪರಸ್ಪರ ಅನ್ಯೋನ್ಯವಾಗಿರುದಷ್ಟೇ ಅಲ್ಲ, ಸಮಾಜದ ಕಣ್ಣು ತೆರೆಯಿಸುವಂತೆ ತಮ್ಮ ವ್ಯಕ್ತಿತ್ವವನ್ನು ತೋರಬೇಕಾದುದರ ಅಗತ್ಯವನ್ನೂ ಒತ್ತಿ ಹೇಳಿ, ದಾಂಪತ್ಯದಲ್ಲಿ, ಸಮಾಜದಲ್ಲಿ ಗಣ್ಯವ್ಯಕ್ತಿಗಳಾಗಿ ಬಾಳು ವಂತೆ ಸೂಚನೆ ನೀಡಿದ್ದಾರೆ. ಲೇಖಕಿಯ ಅನುಕಂಪ ಸಹಿತವಾದ ಬಾಳಿನ ಸೂತ್ರ ಗಳು ಪ್ರೇಮ ವಿವಾಹದ ಭದ್ರತೆಗೆ, ಸಾಂಸಾರಿಕ ಸುಖಕ್ಕೆ, ಸಾಮಾಜಿಕ ಪ್ರಗತಿಗೆ ಎಡೆ ಮಾಡಿಕೊಡುವಂತೆ ಪ್ರೇಮಿಗಳು ದಾಂಪತ್ಯವನ್ನು ದಿಟ್ಟತನದಿಂದ ಸಾಗಿಸುವ ಕೆಚ್ಚನ್ನು ಪಡೆಯುವರೆಂಬುದರಲ್ಲಿ ಸಂದೇಹವಿಲ್ಲ.

"ಉದ್ಯೋಗಂ ಸ್ತ್ರೀ ಲಕ್ಷಣಂ?"-ಅಧ್ಯಾಯದಲ್ಲಿ ದಾಂಪತ್ಯ ಬದುಕಿನ ಆರ್ಥಿಕ ಭದ್ರತೆಗಾಗಿ ಸ್ತ್ರೀ ಉದ್ಯೋಗಿಯಾಗಬೇಕಾದುದು ಅನಿವಾರ್ಯ ಎಂದಾಗಿ ವಿವರಿಸಿರುವುದಲ್ಲದೆ, ಆರ್ಥಿಕ ಸ್ವಾತಂತ್ರ್ಯ ಬಯಸಿದ ಹೆಣ್ಣು ಸಂಪಾದಿಸಲು ಹೊರಗೆ ಹೊರಟಾಗ ಉದ್ಭವಿಸುವ ಹಲವಾರು ಸಮಸ್ಯೆಗಳನ್ನು ಎತ್ತಿ ಹಿಡಿದು, ಅವುಗಳನ್ನು ಪರಿಹರಿಸಲು ಹೆಣ್ಣಿಗೆ ನೀಡಿದ ಸಂದರ್ಭೋಚಿತ ಸೂಚನೆಗಳು ಸತ್ವಯುತವಾಗಿವೆ.

ಕೊನೆಯ 'ಪರಿಣೀತ' ಒಂದು ಚಿಕ್ಕ ಅಧ್ಯಾಯ. ಇದರಲ್ಲಿ ಲೇಖಕಿ ತನ್ನ ಕೃತಿಯ ಉದ್ದೇಶ ಈಡೇರಿದ ತೃಪ್ತಿಯನ್ನುಂಡಿರುವುದು ಬಳಸಿದ ರೀತಿಯಲ್ಲೇ ವ್ಯಕ್ತ ವಾಗುತ್ತದೆ. "ಪರಿಣೀತ ಎಂದರೆ ವಿವಾಹವಾದವಳು. ಈ ಪದದೊಂದಿಗೆ ಸಾಲಂಕೃತೆಯಾದ, ಗಂಭೀರ ಕಳೆಯಿಂದ ಕೂಡಿದ ಯುವತಿಯ ಚಿತ್ರ ನಮ್ಮ ಕಣ್ಣ ಮುಂದೆ ಕಟ್ಟುತ್ತದೆ. ಇದೀಗ ಮೊಗ್ಗಲ್ಲ, ಪೂರ್ಣ ಅರಳಿ ಸುವಾಸನೆ ಬೀರುತ್ತಿರುವ ಹೂ ಎಂದೆನಿಸುತ್ತದೆ. ಇಂಥ ಕುಸುಮಗಳನ್ನು ಕಂಡರೆ ನೋಡುವವರಿಗೂ ಹಿಗ್ಗು, ಮುಡಿದವರಿಗೂ ಧನ್ಯತೆ." ವಿವಾಹಿತ ಸ್ತ್ರೀ, ದಾಂಪತ್ಯದಲ್ಲಿ ಸಾಕಷ್ಟು ಅನುಭವ

ಪಡೆದಿರುವುದಲ್ಲದೆ, ಆದರ್ಶ ದಾಂಪತ್ಯ ನಡೆಸಿ ಇತರರಿಗೂ ಆದರ್ಶಪ್ರಾಯವಾಗಿರಬೇಕು. ಅದಕ್ಕೇ ಅವಳಲ್ಲಿ ಆತ್ಮವಿಶ್ವಾಸವಿರಬೇಕು. ಅದನ್ನು ಲೇಖಕಿ ಕೃತಿಯುದ್ದಕ್ಕೂ, ವಧುವಿನ ಕಿವಿಯಲ್ಲೂ, ದಾಂಪತ್ಯದ ಹೆಜ್ಜೆ ಹೆಜ್ಜೆಗೂ ಗುಟ್ಟಾಗಿ ಹೇಳಿ, ತಪ್ಪುವಲ್ಲಿ ಸಾಕಷ್ಟು ಎಚ್ಚರಿಕೆ ಕೊಟ್ಟು ತುಂಬಿಕೊಟ್ಟಿದ್ದಾರೆ. "ನಿಮ್ಮ ಆತ್ಮವಿಶ್ವಾಸ ನಿಮ್ಮನ್ನು ಜಯಶಾಲಿಯಾಗಿ ಮಾಡಿತು - ನಿಮ್ಮ ಸಹನೆ ಅತ್ತೆ ಮಾವಂದಿರ, ನಾದಿನಿ ಮೈದುನರ ಪ್ರೀತಿ ಗೌರವಗಳನ್ನು ಗೆದ್ದು ಕೊಟ್ಟಿತು". "ನಿಮ್ಮ ಪತಿಯೊಂದಿಗೆ ಲೈಂಗಿಕ ಸಾಮರಸ್ಯ ಸಾಧಿಸಿಕೊಂಡು ನೀವು ಆತನಿಗೆ ಅತ್ಯಂತ ಆತ್ಮೀಯ ವ್ಯಕ್ತಿಯಾಗಿದ್ದೀರಿ........ಮನುಷ್ಯರ ಸ್ವಭಾವ, ನಡತೆಗಳನ್ನು ಅಭ್ಯಸಿಸಿದ ನೀವೀಗ ದೊಡ್ಡ ಮನಶಾಸ್ತ್ರಜ್ಞೆ. ಮನೆಯಲ್ಲಿ ಯಾರ ಯಾರ ನಡವಳಿಕೆ ಹೇಗೆ ಹೇಗೆ ಇರುತ್ತದೆ? ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಹೇಗೆ? ಅದರಿಂದ ಯಾರಿಗೂ ನೋವಾಗದಂತೆ ನೋಡಿಕೊಳ್ಳುವುದು ಹೇಗೆ? ಗೃಹಕೃತ್ಯದ ಸೂಕ್ಷ್ಮಗಳೆಲ್ಲಾ ನಿಮಗೆ ಈಗ ಕರತಲಾಮಲಕ. ಇದನ್ನು ಗಳಿಸಲು ನೀವು ಪಟ್ಟ ಕಷ್ಟ ಕಡಿಮೆ ಏನಲ್ಲ. ಆ ಸಾಹಸಕ್ಕೂ ನಿಮಗೆ ಪ್ರತಿಫಲ ಸಿಕ್ಕಿದೆ. ಗೃಹಶಾಂತಿ, ಮನೆಯಲ್ಲಿನ ಎಲ್ಲರ ಆದರ, ಮನ್ನಣೆ ನಿಮಗೆ ಲಭ್ಯವಾಗುತ್ತದೆ." (ಪುಟ ೮೪-೮೫) ಇಲ್ಲಿ ಆದರ್ಶ ಸತಿಯ ಮಾನ್ಯತೆಗೆ ಸಲ್ಲಿಸಿದ ಅಭಿನಂದನೆ ಆದರೂ ಲೇಖಕಿಗೆ ಸಲ್ಲಿಸಬೇಕಾದ ಅಭಿನಂದನೆಯೂ ಆಗುತ್ತದೆ.

ವಿವಾಹಿತ ಹೆಣ್ಣಿನ ಗಣ್ಯ, ಮಾನ್ಯ, ಶೋಭಾಯ ನಿಲುವಿನ ಬಗ್ಗೆ ಲೇಖಕಿ ಏನನ್ನು ಸಾಧಿಸಹೊರಟಿದ್ದರೋ, ಅದು ಸಾರ್ಥಕ ಎಂಬ ತೃಪ್ತಿ "ನೀವು ಯಾವ ಧರ್ಮಪಂಗಡಗಳಿಗೆ ಸೇರಿದ್ದರೂ, ನಿಮ್ಮ ನಡತೆಯಿಂದಾಗಿಯೇ ಸಮಾಜದಲ್ಲಿ ಶೋಭಿಸುತ್ತೀರಿ. ನೀವು ಪ್ರೇಮವಿವಾಹವಾಗಿದ್ದರೂ ಸರಿಯೇ; ಉದ್ಯೋಗದಲ್ಲಿದ್ದರೂ ಸರಿಯೇ; ತಾಯಿ ತಂದೆಗಳು ಆರಿಸಿದ ವರನನ್ನು ಕೈಹಿಡಿದಿದ್ದರೂ ಸರಿಯೇ, ನೀವು ಎಲ್ಲಿದ್ದರೂ ಅಲ್ಲಿ ನಗೆ ಇರುತ್ತದೆ. ಸಂತೋಷ ತುಂಬಿ ತುಳುಕುತ್ತದೆ." (ಪು.೮೫) ಪರಿಣೀತಳನ್ನು ಉದ್ದೇಶಿಸಿ ಹೇಳಿರುವಲ್ಲಿ ವ್ಯಕ್ತವಾಗುತ್ತದೆ.

ಲೇಖಕಿಯು ಸುರಿದ ಹಿತವಚನಗಳ ಕಿವಿಮಾತು-ಎಲ್ಲರಲ್ಲೂ ಅನುರಣಿಸುವಂತಾಗಬೇಕು ಎಂಬ ನಿಸ್ವಾರ್ಥಪರ ನೀತಿ ಸರ್ವ ಜನರೂ ಸುಖಿಗಳಾಗಲು ಸಹಕಾರಿ. "ಮುಗ್ಧ ಹುಡುಗಿಯಾಗಿ ಮೊನ್ನೆ ಮೊನ್ನೆ ವಧುವಾದ ನೀವು ಸಾಧನೆಯ ಮೆಟ್ಟಿಲುಗಳನ್ನೇರಿ ಈಗ ಪ್ರಬುದ್ಧೆಯಾಗಿದ್ದೀರಿ. ನಿಮ್ಮವರ ಏಳಿಗೆಗೂ ನೀವು ಕಾರಣರಾಗಿದ್ದೀರಿ. ಸಮಾಜಸೇವೆಗೂ ನೀವು ಬದ್ಧಕಂಕಣರಾಗಿದ್ದೀರಿ. ಹುಟ್ಟಿದ ಮನೆಯ ಬೆಳಕಾಗಿದ್ದ ನೀವು ಸೇರಿದ ಮನೆಯಲ್ಲೂ ಜ್ಯೋತಿಯಾಗಿದ್ದೀರಿ. ನಿಮ್ಮ ಜ್ಞಾನದ ದೀಪದಿಂದ ಇತರರ ಅಜ್ಞಾನವನ್ನು ಹೋಗಲಾಡಿಸಿ ಅಲ್ಲಿಯೂ ತಿಳಿವಿನ ನೊಡರನ್ನು ಹಚ್ಚಿದ್ದೀರಿ. ನಿಮ್ಮ ಅನುಭವವನ್ನು ನಿಮ್ಮಂಥ ನೂರು, ಸಾವಿರ ಸೋದರಿಯರಿಗೆ

ಹಂಚಿ. ಆಗ ಎಲ್ಲ ಮನೆಗಳಲ್ಲೂ ಅನುದಿನವೂ ಬೆಳಕಿನ ಹಬ್ಬದ ಸಡಗರವನ್ನು ನೀವು ಕಾಣುವಿರಿ. ನಾನು ಸುಖಿ ಎಂಬ ಭಾವನೆಯಿಂದ ನೀವು ಬೆಳಗುವಿರಿ." ಇಲ್ಲಿ ಲೇಖಕಿಯು ಕೃತಿ ಗುರಿ ಸಾಧಿಸಿದ ತೃಪ್ತಿಯೊಂದಿಗೆ ತನ್ನ ಜ್ಞಾನವನ್ನು ಕೃತಿ ಮೂಲಕ ಬಳಸಿ ಯಶಸ್ವಿಯಾದ ಆತ್ಮತೃಪ್ತಿಯೂ ಮೇಳವಿಸಿರುವುದು ಕಾಣುತ್ತದೆ.

ದಾಂಪತ್ಯ ಕಲೆ ಮತ್ತು ವಿಜ್ಞಾನದ ವಿಷಯಕವಾಗಿ ಡಾ। ಅನುಪಮಾ ನಿರಂಜನರ ಆಳವಾದ ಲೈಂಗಿಕ ಜ್ಞಾನ ಮೂಡಿ ಬಂದಿರುವ ಇನ್ನೊಂದು ಕೃತಿಯೇ 'ದಾಂಪತ್ಯ ದೀಪಿಕೆ'. ಗಾತ್ರದಲ್ಲೂ ವಿಷಯದ ಗಾಢತೆಯಲ್ಲಿಯೂ ಈ ಕೃತಿ ಪ್ರೌಢ ಸ್ಥಾನ ಪಡೆದಿದೆ ಎಂಬುದು ಗಮನಾರ್ಹ. ಆದರ್ಶ ಹಾಗೂ ಸುಖೀ ದಾಂಪತ್ಯಕ್ಕೆ ಇಲ್ಲಿ ಸಾಕಷ್ಟು ಸೂತ್ರಗಳಿವೆ. ಮುನ್ನುಡಿಯಲ್ಲಿ ಲೇಖಕಿ ಹೇಳಿಕೊಂಡಂತೆ "ಪ್ರೀತಿ, ವಿಶ್ವಾಸ, ನಂಬಿಕೆಗಳ ಜೊತೆಗೆ ದಾಂಪತ್ಯ ಜೀವನದ ಬಗ್ಗೆ ವೈಜ್ಞಾನಿಕ ತಿಳಿವಳಿಕೆ ಇದ್ದಾಗಲೇ ಅವರ ಸಂಬಂಧ ಅರ್ಥಪೂರ್ಣವಾಗುತ್ತದೆ. ಈ ದೃಷ್ಟಿಯಿಂದ ವಿವಾಹಿತರಿಗೆ ಮಾತ್ರವಲ್ಲ, ನಾಳೆ ಮದುವೆಯಾಗಲಿರುವ ನೂತನ ವಧೂವರರಿಗೂ ಉಪಯುಕ್ತವಾಗಲೆಂದು 'ದಾಂಪತ್ಯ ದೀಪಿಕೆ' ರಚಿತವಾಗಿದೆ.

"ದಾಂಪತ್ಯ ಜೀವನವನ್ನು ಶರೀರ-ವೈಜ್ಞಾನಿಕ, ಮನೋ-ವೈಜ್ಞಾನಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ದೃಷ್ಟಿಕೋನಗಳಿಂದ ಅಭ್ಯಾಸ ಮಾಡಿ ಒಂದು ಪುಸ್ತಕ ಬರೆದು ಕೊಡಿ' ಎಂದು ಶ್ರೀ ಡಿ. ವಿ. ಕೆ. ಮೂರ್ತಿ ಸಲಹೆ ಮಾಡಿದ್ದರು. ವೈವಾಹಿಕ ಬದುಕಿನಲ್ಲಿ ಅಸುಖಿಗಳಾಗಿದ್ದ ಅನೇಕ ರೋಗಿಗಳನ್ನು ಕಂಡಿದ್ದ ನನಗೆ ಇಂಥ ಹೊತ್ತಗೆ ಪ್ರಯೋಜನವಾಗಬಹುದು ಅನಿಸಿತು. ಅದರ ಪರಿಣಾಮ ಈ ಕೃತಿ.

"ವಿವಾಹದ ವ್ಯಾಪ್ತಿ ಹಿರಿದಾದದ್ದು. ಮದುವೆಗೆ ಅರ್ಹತೆಗಳೇನು? ಬದುಕಿನಲ್ಲಿ ವಿವಾಹದ ಪಾತ್ರ ಎಂಥದು? ಜನನೇಂದ್ರಿಯಗಳ ರಚನೆ ಹಾಗೂ ಕ್ರಿಯೆಗಳು ಹೇಗೆ? ಗಂಡು ಹೆಣ್ಣಿನಲ್ಲಿ ಅವರ ಬದುಕಿನ ಕ್ರಿಯೆಗಳಿಗನುಗುಣವಾಗಿ ಅಂಗಗಳು ಹೇಗೆ ಭಿನ್ನವಾಗಿವೆ? ಪ್ರೇಮದ ಉಗಮದಲ್ಲಿ ಪಂಚೇಂದ್ರಿಯಗಳ ಪಾತ್ರವೇನು? ಕಾಮಕಲೆ ಎಂದರೇನು? ಅದರಲ್ಲಿ ವೈವಿಧ್ಯ ಸಾಧನೆ ಸಾಧ್ಯವೇ? ಮಗುವಿನ ಜನನ ಹೇಗೆ? ಕುಟುಂಬ ಯೋಜನೆ ಮಾಡುವುದೆಂತು? ಲೈಂಗಿಕ ಬದುಕಿನ ವ್ಯವಸ್ಥೆಗಳನ್ನು ಸರಿಪಡಿಸಿಕೊಳ್ಳುವುದು ಹೇಗೆ? ಲೈಂಗಿಕ ಆರೋಗ್ಯವನ್ನು ಕಾಪಾಡಿಕೊಂಡು ಆದರ್ಶ ದಂಪತಿ ಆಗುವ ಬಗೆ ಎಂತು?-ಈ ಪ್ರಶ್ನೆಗಳಿಗೆಲ್ಲಾ 'ದೀಪಿಕೆ' ಉತ್ತರ ನೀಡುತ್ತದೆ.

"ನಮ್ಮ ನಾಡಿನ ವಿದ್ಯಾವಂತ ಯುವಕ ಯುವತಿಯರಲ್ಲಿ ಇಂಥ ವೈಜ್ಞಾನಿಕ ತಿಳಿವಳಿಕೆ ಸಾಕಷ್ಟಿಲ್ಲ. ಅವರ ಅಜ್ಞಾನದಿಂದಾಗಿ ಬಾಳು ಅಸಂತೋಷದ ನೆಲೆಯಾಗುತ್ತದೆ. ಈ ಅರಿವನ್ನು ನೀಡಲು ಹೆತ್ತವರಾಗಲಿ ಗುರುಹಿರಿಯರಾಗಲಿ ಅಶಕ್ತರು. ವೈಜ್ಞಾನಿಕ ಕೃತಿಗಳ ವ್ಯಾಸಂಗದಿಂದಲೇ ಇದು ಸಾಧ್ಯವಾಗಬೇಕು.

"ಇಂಥ ವೈಜ್ಞಾನಿಕ ಹಿನ್ನೆಲೆಯನ್ನು ಒದಗಿಸುವ ಪುಸ್ತಕಗಳು ಆಂಗ್ಲ ಭಾಷೆಯಲ್ಲಿ ಹೇರಳವಾಗಿವೆ. ಆದರೆ ನಮ್ಮ ಪರಿಸರ ಪಾಶ್ಚಾತ್ಯರದಕ್ಕಿಂತ ಭಿನ್ನ. ನಮಗೆ ಬೇಕಾಗಿರುವುದು ಇಲ್ಲಿನ ಜೀವನಕ್ಕೆ ಅನ್ವಯಿಸುವಂತಹ ಬರವಣಿಗೆ"- ಈ ಎಲ್ಲಾ ದೃಷ್ಟಿಯನ್ನಿರಿಸಿಕೊಂಡೇ ಡಾ। ಅನುಪಮಾ ನಿರಂಜನರು 'ದಾಂಪತ್ಯ ದೀಪಿಕೆ'ಯನ್ನು ಬರೆದಿದ್ದಾರೆ. ಈ ಎಲ್ಲಾ ವಿಷಯಗಳನ್ನು ಓದಿ ಸತಿ-ಪತಿಗಳು ಅಪೂರ್ವ ಸುಖಿಗಳಾದಾಗಲೇ ಕೃತಿಯು ಸಾರ್ಥಕ ಎಂಬ ಆಶಯ ಲೇಖಕಿಯದು.

ಮೊದಲ ಅಧ್ಯಾಯ 'ಧರ್ಮೇಚ, ಅರ್ಥೇಚ, ಕಾಮೇಚ'ದಲ್ಲಿ 'ಪ್ರೇಮ' ವೈವಾಹಿಕ ಜೀವನದ ಭದ್ರ ಅಡಿಪಾಯ ಎಂಬ ವಿಚಾರದೊಂದಿಗೆ ವಿವಾಹದ ಸಿದ್ಧಿಗೆ ದಂಪತಿಗಳಲ್ಲಿ ಸಾಮರಸ್ಯ ಅಗತ್ಯವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ಪ್ರೇಮ ಎಂದರೆ ಸ್ನೇಹ, ಗೌರವ, ಸಮರ್ಪಣ ಮನೋಭಾವ. ಗಂಡು ಹೆಣ್ಣುಗಳ ಮಧ್ಯೆ ಈ ಭಾವ ಮೂಡಿದರೆ, ಅವುಗಳ ಹಿಂದೆ ಲೈಂಗಿಕ ಬಯಕೆಯೂ ಇರುತ್ತದೆ. ಪ್ರೇಮದಿಂದ ಒಬ್ಬ ವ್ಯಕ್ತಿಗೆ ಸಂತೋಷ ಸಿಗುತ್ತದೆ, ನಿಜ. ಆದರೆ ಇದೇ ವ್ಯಕ್ತಿ ತಾನು ಪ್ರೀತಿಸುವ ಇನ್ನೊಂದು ಜೀವಕ್ಕಾಗಿ ಯಾವ ತ್ಯಾಗವನ್ನುಬೇಕಾದರೂ ಮಾಡಲು ಸಿದ್ಧನಾಗಿರಬೇಕು. ಬದುಕಿನ ಯಾವ ಕಷ್ಟದಿಂದಲೂ ಪ್ರೇಮಕ್ಕೆ ಹಾನಿ ತಟ್ಟದು. ಬದಲಿಗೆ ಇಂಥ ಪರೀಕ್ಷೆಗಳು ಪ್ರೇಮವನ್ನು ರಸಘಟ್ಟಿಯಾಗಿ ಮಾಡುತ್ತವೆ. ದೈಹಿಕ ಆಕರ್ಷಣೆ ಇರುವ ಯೌವನದಲ್ಲಿ ಮಾತ್ರವಲ್ಲ, ಸದಾಕಾಲವೂ. ಜೀವನದುದ್ದಕ್ಕೂ ಈ ಪ್ರೀತಿಯು ಸೆಲೆ ಬತ್ತದಂತೆ ನೀವು ನೋಡಿಕೊಳ್ಳಬೇಕು." (ಪುಟ ೧೦)

ವಿವಾಹ ಎಂದರೇನು ? ಎಂಬುದನ್ನು ತಿಳಿಸುತ್ತಾ ಸಾರ್ಥಕ ವಿವಾಹದ ಮೂಲಕ ವಿವಾಹದ ಸಿದ್ಧಿ ಎಂಬ ಅಂಶದತ್ತ ಲೇಖಕಿಯ ಒಲವು ಹರಿದಿದೆ."ವೈವಾಹಿಕ ಜೀವನ ಹೂವಿನ ಸುಪ್ಪತ್ತಿಗೆಯಲ್ಲ. ಅದರ ಕ್ಷೇತ್ರ ಬಲು ವಿಸ್ತಾರ. ನೀವು ವಿವಾಹದ ಸಾಧನೆ ಮಾಡಬೇಕಾದುದು ಮುಂದೆ. ಅದು ನಿಮ್ಮಿಬ್ಬರ ಜೊತೆಗೂಡಿದ ಪಯಣ. ದಾರಿಯಲ್ಲಿ ನಿಮಗೆ ಹೂದೋಟಗಳು ಸಿಗಬಹುದು; ಕಲ್ಲು, ಮುಳ್ಳು, ಹಳ್ಳ-ಕೊಳ್ಳ. ನದೀ-ನದಗಳು, ಪ್ರಪಾತಗಳು, ಬೆಟ್ಟಗಳು, ಕಡೆಗೆ ಹಸಿರಿನಿಂದ ಕಂಗೊಳಿಸುವ ಬಯಲು ಸಿಗಬಹುದು. ಯಾವುದಾದರೂ ಸರಿ, ಜೊತೆಯಲ್ಲಿರುವ ನೀವು ಪರಸ್ಪರ ಅವಲಂಬಿಗಳು. ಆಮೆಯ ನಡಿಗೆಯ ಈ ಪಯಣದ ಬಳಿಕವೇ ನಿಮ್ಮ ವಿವಾಹದ ಸಿದ್ಧಿ." (ಪುಟ ೧೧) ಈ ತಮ್ಮ ಅಭಿಪ್ರಾಯಕ್ಕೆ ಖ್ಯಾತ ಲೈಂಗಿಕ ತಜ್ಞ ಹ್ಯಾವ್‌ಲಾಕ್ ಎಲ್ಲಿಸರ ಮಾತುಗಳನ್ನು ಉದ್ಧರಿಸಿಕೊಂಡು ವಿವಾಹದ ನಿಜವಾದ ಅರ್ಥವನ್ನೂ, ಸಾಧನೆಯ ಮೂಲಕ ಸಿದ್ಧಿಯ ಪ್ರಯೋಜನವನ್ನೂ ಕಾಣಿಸಿರುವುದು ಅರ್ಥಪೂರ್ಣವಾಗಿದೆ. "ಸಾರ್ಥಕ ವಿವಾಹದಲ್ಲಿ ಲೈಂಗಿಕ ಹೊಂದಾಣಿಕೆ ಮಾತ್ರವಲ್ಲದೆ ಬಹು ಮುಖವಾದ ಅಲೈಂಗಿಕ ಒಲವೂ, ಅಭಿರುಚಿ ಭಾವನೆಗಳ ಹಿಂದೂ ಮಾತಾಪಿತೃಗಳ

ಜವಾಬ್ದಾರಿಯೂ ಒಗ್ಗೂಡುತ್ತವೆ. ಹೀಗೆ ಬೇರೆ ವಿಷಯಗಳಲ್ಲೂ ವೈವಾಹಿಕ ಬಂಧನ ಬಿಗಿಯಾದಾಗ ಲೈಂಗಿಕ ಆಸಕ್ತಿಯ ಪ್ರಾಮುಖ್ಯ ಕಡಮೆಯಾಗಿ ಪರಸ್ಪರ ಸಮರ್ಪಣ ಭಾವವೊಂದೇ ಮೇಲುಗೈಯಾಗಿ ನಿಲ್ಲುತ್ತದೆ." (ಪುಟ ೧೧) ಗಂಡು-ಹೆಣ್ಣುಗಳ ಸಾಧನೆಗಳಿಗೆ ವೈವಾಹಿಕ ಜೀವನ ಬಲು ಪ್ರಮುಖವಾದ ಹಿನ್ನೆಯಾಗುತ್ತದೆ ಎಂಬ ವಿಚಾರ ಇಲ್ಲಿ ಸ್ಪಷ್ಟಗೊಂಡಿದೆ.

ವಿವಾಹದ ಉದ್ದೇಶಗಳಲ್ಲಿ ಮೊದಲನೆಯದು ಪ್ರೇಮ, ಎರಡನೆಯದು ಲೈಂಗಿಕ ಜೀವನ, ಮೂರನೆಯದು ವಂಶಾಭಿವೃದ್ಧಿ, ನಾಲ್ಕನೆಯದು ಸತಿಪತಿಗಳಿಬ್ಬರ ಆಸಕ್ತಿ ಅಭಿರುಚಿಗಳಿಂದ ವ್ಯಕ್ತಿತ್ವ ಪಕ್ವವಾಗುವುದು. ಇವೆಲ್ಲವುಗಳು ಸಮಾನವಾಗಿ ಬೆಳೆದಾಗ ಮಾತ್ರ ವೈವಾಹಿಕ ಜೀವನ ಸುಭದ್ರವಾಗುತ್ತದೆ. "ವಿವಾಹಕ್ಕೆ ವಯಸ್ಸು ಮಾತ್ರ ಮುಖ್ಯವಲ್ಲ, ಬೇರೆಯೂ ಅರ್ಹತೆಗಳಿರಬೇಕು. ಅವುಗಳಲ್ಲಿ ವೈಚಾರಿಕ ಅರ್ಹತೆ, ಆರ್ಥಿಕ ಅರ್ಹತೆ, ಲೈಂಗಿಕ ಹಾಗೂ ಅರೋಗ್ಯ ಅರ್ಹತೆ ಪ್ರಮುಖವಾದವು." ಎಂಬ ಲೇಖಕಿಯ ವಿಚಾರ ವಿವಾಹೇಚ್ಛಿತರಿಗೆ ಮುನ್ನೆಚ್ಚರಿಕೆ ನೀಡಿ ದಾಂಪತ್ಯ ಸಿದ್ಧಿಗೆ ಆಹ್ವಾನಿಸಿದಂತಾಗಿದೆ.

ವಿವಾಹ ಸಂಬಂಧವೇರ್ಪಡಬೇಕಾದ ಕೂಲಂಕಷ ವಿಶ್ಲೇಷಣೆ ಕ್ರಮ ಪತ್ತ್ಯಾಗಿದೆ. "ವಿವಾಹ ಪೂರ್ವದಲ್ಲಿ ಗಂಡು ಹೆಣ್ಣು ರೂಪ ಹಾಗೂ ಗುಣಗಳಿಂದ ಪರಸ್ಪರರು ಮೆಚ್ಚಬೇಕು. ನಿಶ್ಚಯದ ಬಳಿಕ ಪರಸ್ಪರರೊಡನೆ ವಿಚಾರ ವಿನಿಮಯ ಮಾಡಿಕೊಂಡು ತಮ್ಮಿಬ್ಬರ ಪ್ರವೃತ್ತಿಗಳೂ, ಆಸೆ, ಅಭಿರುಚಿಗಳೂ ಹೊಂದಿಕೊಳ್ಳುತ್ತವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಒಳಿತು. ಒಂದು ವೇಳೆ ಹೊಂದಾಣಿಕೆ ಸಾಧ್ಯವೇ ಇಲ್ಲ ಎಂದಾದರೆ ವಿವಾಹ ನಿಶ್ಚಯವನ್ನು ಮುರಿಯಬಹುದು. ವಿವಾಹದ ಬಳಿಕ ಜೀವನ ಪರ್ಯಂತ ವಿರಸದಿಂದ ನರಳಾಡುವುದಕ್ಕಿಂತ ಈ ನಿರ್ಧಾರ ಮೇಲು." ಎಂಬ ಅಭಿಪ್ರಾಯ ವಿವಾಹೇಚ್ಛಿತರಿಗೆ ಸೂಕ್ತ ಮಾರ್ಗದರ್ಶನವಾಗಿದೆ. ಇಷ್ಟಲ್ಲದೆ ಅವರಿಬ್ಬರೂ ಲೈಂಗಿಕ ಜೀವನಕ್ಕೆ ಹೊಂದಿಕೊಳ್ಳಲು ಅರ್ಹರೋ ಎಂಬುದನ್ನು ವೈದ್ಯರ ಪರೀಕ್ಷೆಯಿಂದ ಖಚಿತಪಡಿಸಿಕೊಳ್ಳಬೇಕಾದ ಅಗತ್ಯವಿದೆ. ಗಂಡು ಹೆಣ್ಣುಗಳಲ್ಲಿ ವೈಚಾರಿಕ ಪ್ರಬುದ್ಧತೆ ಅವರ ಮುಂದಿನ ಜೀವನ ಸುಗಮವಾಗಲು ಬಹಳಷ್ಟು ಸಹಕಾರಿ. ಗಂಡಿಗೆ ಆರ್ಥಿಕ ಅರ್ಹತೆ ಇರಲೇಬೇಕು. ಸಾಕಷ್ಟು ಸಂಪಾದನೆ ಗಂಡಿಗೆ ಇಲ್ಲದಾಗ ಹೆಣ್ಣು ಕೂಡ ಆರ್ಥಿಕ ಅರ್ಹತೆಯುಳ್ಳವಳಾಗುವುದು ಒಳ್ಳೆಯದು. ಲೈಂಗಿಕ ಅರ್ಹತೆ ಎಂದರೆ ಸಂಭೋಗ ಮಾಡಲು ಶಕ್ತಿ ಇರುವಿಕೆ. ಲೈಂಗಿಕ ಅವಯವಗಳು ಊನವಾಗಿದ್ದರೆ ಕ್ರಿಯೆಗೆ ತೊಂದರೆಯಾಗಬಹುದು. ವಿವಾಹದ ಬಯಕೆ ಇರುವವರಿಗೆ ತೀವ್ರವಾದ ರೋಗಗಳಿರಬಾರದು. ಮುಖ್ಯವಾಗಿ ಹೃದಯ, ಮೂತ್ರಜನಕಾಂಗದ ಕಾಯಿಲೆಗಳು, ಮೇಹರೋಗ, ಕ್ಷಯ, ಮನೋರೋಗ,

ಆನುವಂಶಿಕ ರೋಗಗಳು. ಸುಖೀ ದಾಂಪತ್ಯಕ್ಕೆ ಕಾಲಿರಿಸಬೇಕಾದರೆ ಅನುಸರಿಸಬೇಕಾದ ರೀತಿ ಸಾಕಷ್ಟು ಪೂರ್ವ ಸಿದ್ಧತೆಗಳಿಂದ ಕೂಡಿರಬೇಕೆಂಬ ಲೇಖಕಿಯ ಸೂಚನೆ ವೈದ್ಯ ವೃತ್ತಿಯ ಸೇವಾ ಮನೋಭಾವದ ಎಚ್ಚರಿಕೆಯೊಂದಿಗೆ ಬಂದಿದೆ. ಗಂಡು ಹೆಣ್ಣುಗಳ ವಿವಾಹಕ್ಕೆ ಅವರ ರೂಪ, ಗುಣ, ಕುಲ, ಜಾತಕಗಳಿಗೆ ಕೊಟ್ಟಷ್ಟೇ ಪ್ರಾಮುಖ್ಯತೆ ಆರೋಗ್ಯ ಹಾಗೂ ಲೈಂಗಿಕ ಪರೀಕ್ಷೆಗೂ ಕೊಡಬೇಕಾದುದು ಅತ್ಯಗತ್ಯ. ಗಂಡು ಹೆಣ್ಣುಗಳಲ್ಲಿ ಮದುವೆಗಾಗಿ ವೈಯಕ್ತಿಕ ಸಿದ್ಧತೆ ಮುಖ್ಯ. ವೈಯಕ್ತಿಕ ಸಿದ್ಧತೆಯಲ್ಲಿ ಇಬ್ಬರಿಗೂ ಅತೀವ ಆತ್ಮವಿಶ್ವಾಸವಿರುವುದರ ಜೊತೆಗೆ ಪರಸ್ಪರರಲ್ಲಿ ಮಾನವ ಸ್ವಭಾವವನ್ನು ಅರ್ಥಮಾಡಿಕೊಳ್ಳುವ ಮತ್ತು ಲೈಂಗಿಕ ವಿಜ್ಞಾನದ ತಿಳಿವೂ ಇರಲೇ ಬೇಕು. ವಿವಾಹ ಪೂರ್ವ ಸಿದ್ಧತೆಗಳಿಲ್ಲದೆ ಹೋದರೆ ಸಹಬಾಳ್ವೆ ಅಸಾಧ್ಯ; ಮುಂದೆ ದುರಂತವನ್ನೆದುರಿಸಬೇಕಾಗುವುದು ಇಲ್ಲವೇ ವಿರಸದಲ್ಲಿ ಪರ್ಯವಸಾನವಾಗುವುದು. ವಿವಾಹೇಚ್ಛಿತರಿಗೆ ಇಲ್ಲಿ ನೀಡಿದ ಸಮಯೋಚಿತ ನೀತಿಯನ್ನು ಎತ್ತಿ ಹಿಡಿದ ಲೇಖಕಿಯ ವಿಶಾಲ, ಮಾನವೀಯ ಹೃದಯವಂತಿಕೆಯನ್ನು ಗುರುತಿಸಬೇಕು.

ಲೈಂಗಿಕ ವಿಜ್ಞಾನದ ವಿವರಣೆಯಲ್ಲಿ 'ಕೇಳು ಕಿಶೋರಿ'ಯಲ್ಲಿ ಬಂದಿರುವ ವಿಷಯ, ವಿವರಣೆ ಹಾಗೂ ಚಿತ್ರಗಳು ಇಲ್ಲಿವೆ ಎಂಬುದು ಮೇಲ್ನೋಟಕ್ಕೆ ಕಂಡರೂ ಇಲ್ಲಿ ದಾಂಪತ್ಯ ಸುಖಕ್ಕೆ ಎಡೆಮಾಡಿ ಕೊಡುವ ಉದ್ದೇಶದಿಂದ ಕೂಡಿದೆ. ಅಲ್ಲಿ ಓದಿನ ಮೂಲಕ ಪಡೆದ ಜ್ಞಾನ ಇಲ್ಲಿ ಸುಕೃತಿಯಾಗಬೇಕು-ಕ್ರಿಯೆಗೆ ಸಹಕಾರಿಯಾಗಿ ದಾಂಪತ್ಯ ಸುಖಕ್ಕೆ ಎಡೆ ಮಾಡಿಕೊಡಬೇಕು ಎಂಬ ಉದ್ದೇಶವನ್ನು ಲೇಖಕಿ ಇರಿಸಿ ಕೊಂಡಂತಿದೆ. 'ದಾಂಪತ್ಯ ದೀಪಿಕೆ'ಯಲ್ಲಿ ಎಲ್ಲವೂ ಸುಸಂಗತವಾಗಿವೆ. ಲೈಂಗಿಕ ಪ್ರವೃತ್ತಿಯ ಕುರಿತು ಎಲ್ಲರೂ ತಿಳಿದಿರಲಿ ಎಂಬ ವಿಚಾರವಂತಿಕೆಯನ್ನೊಳಗೊಂಡ ವಿವರಣೆ ಅತ್ಯಂತ ಸೂಕ್ತ. ಡಾ। ಅನುಪಮಾರವರು ಈ ಲೈಂಗಿಕ ವಿಚಾರಗಳನ್ನು ತಿಳಿಹೇಳಬಹುದಲ್ಲದೆ ಇತರ ವೈದ್ಯರಿಂದ ಸುಲಭವಾಗಿ ಈ ಎಲ್ಲಾ ಪ್ರವೃತ್ತಿಗಳ ವಿಚಾರ ತಿಳಿಯಲಸಾಧ್ಯ. ಲೇಖಕಿ ತಾನು ಹೇಳಿದ ಲೈಂಗಿಕ ಪ್ರವೃತ್ತಿಗಳ ಸಮರ್ಥನೆಗೆ ಮನೋವಿಜ್ಞಾನಿ ಫ್ರಾಯ್ಡನ ಸಿದ್ಧಾಂತವನ್ನು ಸ್ವೀಕರಿಸಿ ಲೈಂಗಿಕ ಜೀವನಕ್ಕೂ, ಮನೋವಿಜ್ಞಾನಕ್ಕೂ ಹಿತ ಸಂಬಂಧವಿದೆ ಎಂದು ಒಪ್ಪಿಕೊಂಡಂತಾಗಿದೆ.

ವ್ಯಕ್ತಿಯಲ್ಲಿ ಆಯಾ ವಯಸ್ಸಿಗನುಗುಣವಾಗಿ ವಿವಿಧ ಲೈಂಗಿಕ ಪ್ರವೃತ್ತಿ ಗಳಿರುತ್ತವೆ. ಅವುಗಳ ಸೂಚನೆ ಮತ್ತು ಬೆಳವಣಿಗೆಗೆ ಹಲವು ಪ್ರಚೋದನೆಗಳೂ ಇವೆ. ಲೈಂಗಿಕ ಬಯಕೆ ದೈಹಿಕ ಅವಶ್ಯಕತೆ ಮಾತ್ರವಲ್ಲ ಪರಸ್ಪರ ನಂಬಿಕೆ ಹಾಗೂ ಅನುಭವಗಳ ಹಿರಿಯ ಆಧಾರ. ಈ ಪ್ರವೃತ್ತಿಯಿಂದ ಮಾನವ ಪಶುವೂ ಆಗಬಲ್ಲ, ದೇವತೆಯೂ ಆಗಬಲ್ಲ ಎಂಬ ವಾಸ್ತವಿಕ ಸತ್ಯವನ್ನು ತೆರೆದು ತೋರಿರುವುದು ಪ್ರಶಂಸನೀಯ. ಲೈಂಗಿಕ ಪ್ರವೃತ್ತಿಯ ಮೂಲ ಪ್ರೇಮ. ಬಳಿಕ ಕಾಮ. ಕಾಮದಲ್ಲಿ

ಇಂದ್ರಿಯಗಳ ಕೆಲಸ ಮುಖ್ಯ. ಲೈಂಗಿಕ ಚಟುವಟಿಕೆಗೆ ಮುಖ್ಯವಾದ ಅಂಗ ಸ್ಪರ್ಶೇಂದ್ರಿಯ. ಇವುಗಳಲ್ಲಿ ಕಾಮೋದ್ರೇಕಕ್ಕೆ ಒಳಗಾಗುವ ಭಾಗಗಳನ್ನು ಸೂಚಿಸಿ ಮದನ ಚೇಷ್ಟೆಗಳ ಸಂಪೂರ್ಣ ವಿವರಗಳನ್ನು ಶಾಸ್ತ್ರೀಯವಾಗಿ ನೀಡಿ ಕಾಮ ಕಲಾಭ್ಯಾಸಿಗಳಿಗೆ ಉಪಕಾರ ಮಾಡಿದ್ದಾರೆ, ಇಲ್ಲಿ ಲೇಖಕಿ ಕಾಳಿದಾಸನ 'ಮಾಳವಿಕಾಗ್ನಿಮಿತ್ರ'ದ ಭಾಗವನ್ನು ಉದ್ಧರಿಸಿ ಕಾಮ ಜೀವನಕ್ಕೆ ಪೂರಕವಾದ ಮಾಹಿತಿಯನ್ನು ನೀಡಿರುವುದು ಮುಖ್ಯವಾದ ವಿಚಾರ.

ಕಾಮಕಲೆಯ ವಿವರವಾದ ಮಾಹಿತಿ ಅತ್ಯಂತ ಸೂಕ್ತವಾದುದು. 'ಸಂಯೋಗ ಅಥವಾ ಸಂಭೋಗ'ದ ಅರ್ಥವನ್ನು ಪ್ರಬುದ್ಧರಾದ ಗಂಡು ಹೆಣ್ಣುಗಳು ಪರಸ್ಪರ ಒಪ್ಪಿಗೆಯಿಂದ ನಡೆಸುವ ಲೈಂಗಿಕ ಕ್ರಿಯೆಯೆಂದು ಸ್ಪಷ್ಟಪಡಿಸಿ, ಗರ್ಭಧಾರಣೆಯೊಂದೇ ಸಂಯೋಗದ ಉದ್ದೇಶವಾಗಿರದೆ ಪರಸ್ಪರ ಲೈಂಗಿಕ ಆಸೆಯ ಪೂರೈಕೆಯೂ ಆಗಬೇಕಾದುದು ಮುಖ್ಯ. ಇದರಿಂದ ಸಿಗುವ ತೃಪ್ತಿಯೇ ಬಲು ಮುಖ್ಯ ಎಂಬ ವಿಶ್ಲೇಷಣೆ ಸೂಕ್ತವಾದುದು. ವೈಜ್ಞಾನಿಕವಾಗಿ ಸಂಯೋಗದ ನಾಲ್ಕು ಹಂತಗಳನ್ನು ಕ್ರಮವಾಗಿ ಪೀಠಿಕೆ, ಪ್ರೇಮದ ಆಟ, ಸಂಯೋಗ ಮತ್ತು ಅನಂತರದ ಆಟವೆಂದು ಕಾಣಬೇಕು. ಮೊದಲ ಮೂರು ಹಂತದ ಸಂತೋಷದ ಸವಿ ದೇಹಕ್ಕಾದರೆ ಕೊನೆಯದು ಮನಸ್ಸಿಗೆ ಸಂಬಂಧಿಸಿದುದು. ಇದನ್ನು "ಸುಸಂಸ್ಕೃತ ಮನುಷ್ಯ ಅಭ್ಯಾಸ ಮಾಡಬೇಕು, ಬೆಳೆಸಿಕೊಳ್ಳಬೇಕು" ಎಂದು ಕಾಮ ಕಲಾಭ್ಯಾಸಿಗಳಿಗೆ ಪ್ರಾಮಾಣಿಕವಾದ ಸೂಚನೆ ಇತ್ತಿರುವುದು ಗಮನಾರ್ಹ.

ವಿವಾಹಿತ ದಂಪತಿಗಳ ಕಾಮ ಸಂಬಂಧದಲ್ಲಿ ನಾನಾ ವೈವಿಧ್ಯಗಳಿರುತ್ತವೆ. ಲೈಂಗಿಕ ತೃಪ್ತಿ ಪಡೆಯಲು ಕಲಾತ್ಮಕ ಸ್ಪಂದನವಿರಬೇಕು. ಸೃಷ್ಟಿಕಾರ್ಯದಲ್ಲಿ ಅಡಕವಾದ ಗರ್ಭಧಾರಣೆ, ಗರ್ಭದಲ್ಲಿ ಶಿಶುವಿನ ಬೆಳವಣಿಗೆ, ಪ್ರಸವ ರೀತಿಗಳು-ವೈಜ್ಞಾನಿಕ ವಿವರಗಳು ಲೈಂಗಿಕ ತಿಳಿವಳಿಕೆಯನ್ನು ನೀಡುತ್ತವೆ. ಆರೋಗ್ಯಕರ ಪೀಳಿಗೆ, ಸಾಮಾಜಿಕ ಮತ್ತು ಸಾಂಸಾರಿಕ ನೆಮ್ಮದಿ, ಆರ್ಥಿಕ ಮತ್ತು ಶೈಕ್ಷಣಿಕ ನೆಮ್ಮದಿ ಕುಟುಂಬ ಯೋಜನೆಯಿಂದ ಸಾಧ್ಯ ಎಂಬ ತಾರ್ಕಿಕ, ವೈಜ್ಞಾನಿಕ, ಸಾಮಾಜಿಕ ಹಾಗೂ ಆರೋಗ್ಯದ ದೃಷ್ಟಿಗಳಿಂದ ಅತೀ ಮುಖ್ಯವೆಂದು ಕುಟುಂಬಯೋಜನೆಯ ಆವಶ್ಯಕತೆ ವಿವರವಾಗಿ ಬಂದಿದೆ. ಮಾನವ ಪ್ರಕೃತಿಗೆ ವಿರುದ್ಧವಾಗಿ ಹೋಗದೆ ಇದೀಗ ವೈಜ್ಞಾನಿಕ ವಿಧಾನ, ವೈಜ್ಞಾನಿಕ ಸಾಧನಗಳಿಂದ ಜನನ ನಿಯಂತ್ರಣ ಸಾಧ್ಯವಾಗಿದೆ. ಬ್ರಹ್ಮಚರ್ಯ, ವೀರ್ಯ ಹೊರಪತನ ವಿಧಾನ, ವೀರ್ಯ ನಿರೋಧಕವಾದ ರಬ್ಬರ್ ಟೊಪ್ಪಿಗೆಗಳು, ಗರ್ಭನಿರೋಧಕ ಜೆಲ್ಲಿ, ಮುಲಾಮುಗಳು, ಲೂಪ್ ಅಥವಾ ವಂಕಿಧಾರಣೆ, ರಬ್ಬರ್ ಟೊಪ್ಪಿಗೆ, ಕಾಪರ್ T ವಂಕಿ, ಮಾತ್ರೆಗಳು, ಒಡಲು ದರ್ಶಕ, ಸಂತಾನ ನಿರೋಧ ಶಸ್ತ್ರಕ್ರಿಯೆಗಳು ಸಾಧ್ಯವಾಗುವ ರೀತಿಗಳ ಮಾಹಿತಿ, ಬಳಸಬಹುದಾದ

ರೀತಿ, ಪ್ರತಿಯೊಂದರ ಸಾಧಕ ಬಾಧಕಗಳಿಂದ ಕೂಡಿದ ವಿವರ ಅರ್ಥಪೂರ್ಣ. ಕುಟುಂಬ ಯೋಜನೆ ದಂಪತಿಗಳು ಪರಸ್ಪರರ ಒಪ್ಪಿಗೆಯಿಂದ ನಡೆಸಬೇಕಾದ ಕಾರ್ಯ. ಲೇಖಕಿ ದಂಪತಿಗಳನ್ನು ವೈಚಾರಿಕ ಹಂತಕ್ಕೆ ಕೊಂಡೊಯ್ದು ಅವರನ್ನು ಅವರ ನಿಷ್ಕರ್ಷೆಗೆ ಬಿಟ್ಟಿರುವುದು ವೈಚಾರಿಕ ನಿಲುವಿನಲ್ಲಿ ನಂಬಿಕೆ ಇರಿಸಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.

"ಮಕ್ಕಳಾಗುವಿಕೆ ವಿವಾಹದ ಅವಿಭಾಜ್ಯ ಅಂಗವೇನೋ ನಿಜ. ಆದರೆ ಮದುವೆಯಾದವರಿಗೆಲ್ಲಾ ಮಕ್ಕಳಾಗಬೇಕು ಎಂಬ ನಿಯಮವೇನೂ ಇಲ್ಲ." "ಪ್ರತಿಯೊಬ್ಬ ದಂಪತಿಯಲ್ಲೂ ಫಲಶಕ್ತಿ ಬೇರೆ ಬೇರೆ. ಇದು ಅವರ ವೈಯಕ್ತಿಕ ಆರೋಗ್ಯ, ವಾತಾವರಣ ಹಾಗೂ ಆನುವಂಶತೆಯನ್ನು ಅವಲಂಬಿಸಿದೆ." ಎಂಬ ವಿಚಾರ ಬಂದಾಗ ವಿಷಮ ದಾಂಪತ್ಯದ ದುಃಖಿಗಳಿಗೆ, ಮಕ್ಕಳಿಲ್ಲದೆ ಕೊರೆಯುವವರಿಗೆ ತಂತಮ್ಮ ಫಲಶಕ್ತಿಯ ಕುರಿತು ಅವಲೋಕಿಸಿ ಸಮಾಧಾನಿಗಳಾಗಲು ಎಡೆ ದೊರಕಿದೆ. ಗಂಡು ಹೆಣ್ಣುಗಳ ಫಲಶಕ್ತಿಯ ಕಾಲ-ಗಂಡು ಹೆಣ್ಣುಗಳ ಬಂಜೆತನ, ಅದಕ್ಕೆ ಕಾರಣ ಗಳು, ಗರ್ಭಧಾರಣೆಯ ಕ್ರಿಯೆ, ಗಂಡು ಹೆಣ್ಣು ಜನನೇಂದ್ರಿಯಗಳ ರಚನಾದೋಷ ಗಳು, ಅವುಗಳ ರೋಗಗಳು ಇತ್ಯಾದಿಗಳ ವಿವರಣೆಯೊಂದಿಗೆ ಸೂಕ್ತ ಚಿಕಿತ್ಸೆಗಳು, ಗರ್ಭಧಾರಣೆಗೆ ಇರುವ ಅಡೆತಡೆಗಳು ಇತ್ಯಾದಿ ಸೃಷ್ಟಿಕಾರ್ಯದ ವೈವಿಧ್ಯ ಮತ್ತು ವಿಶೇಷಗಳ ನಿರೂಪಣೆ ಸರ್ವರಿಗೂ ವಿಹಿತವಾಗಿದೆ.

ದಂಪತಿಗಳಲ್ಲಿ ದೈಹಿಕ ಮತ್ತು ಮಾನಸಿಕ ಏರುಪೇರುಗಳಿಗೆ ಮುಖ್ಯವಾಗಿ ಅವರ ಲೈಂಗಿಕ ಅವ್ಯವಸ್ಥೆಯಿಂದಾಗಿ ಅವರಲ್ಲಿ ಲೈಂಗಿಕ ಹೊಂದಾಣಿಕೆ ಇಲ್ಲವಾಗು ವುದೇ ಕಾರಣ. ಈ ಏರುಪೇರುಗಳು ಸಾಮಾಜಿಕ ಹಾಗೂ ವ್ಯಕ್ತಿನಿಷ್ಠ ಜೀವನದ ವಿಪರ್ಯಾಸಗಳಾಗಲು ಎಡೆಕೊಡಬಾರದು. ಲೈಂಗಿಕ ಸ್ವಾಸ್ಥ್ಯಕ್ಕಾಗಿ ಲೈಂಗಿಕ ಆರೋಗ್ಯ, ಲೈಂಗಿಕ ಕಾಯಿಲೆಗಳು, ಜನನೇಂದ್ರಿಯಗಳ ಸ್ವಚ್ಛತೆ, ದೈಹಿಕ ಮಾನಸಿಕ ಆರೋಗ್ಯಕರ ಯೋಗಾಸನಗಳು-ಇವುಗಳ ಪೂರ್ಣ ಮಾಹಿತಿಯನ್ನಿತ್ತು ಲೇಖಕಿ ಸಹಕರಿಸಿದ್ದಾಗಿದೆ. ದಾಂಪತ್ಯ ಜೀವನದಲ್ಲಿ ಒಬ್ಬರಿಗೊಬ್ಬರು ಆಸರೆ, ಸ್ಫೂರ್ತಿ, ಸಹಬಾಳ್ವೆಯೇ ಸುಖೀ ದಾಂಪತ್ಯಕ್ಕೆ ಮೂಲ ಎಂಬ ತತ್ವವನ್ನು ಒತ್ತಿ ಹೇಳಲಾಗಿದೆ.

ಡಾ। ಅನುಪಮಾರು ಗುರಿಕಾಣುವುದು ಆದರ್ಶ ದಾಂಪತ್ಯದಲ್ಲಿ. ಸತಿ ಪತಿ ಗಳು ಮಾಡಬೇಕಾದ ಸಾಧನೆ, ನಡೆವಳಿಕೆಗಳು, ಸೂಕ್ತ ಸೂಚನೆಗಳು ಕ್ರೋಢೀಕೃತ ವಾಗಿ ಆದರ್ಶ ದಾಂಪತ್ಯಕ್ಕೆ ದಾರಿ ತೋರಿಸಿಕೊಟ್ಟಿದ್ದಾರೆ. ಮುನ್ನಡೆವ ಕೆಚ್ಚನ್ನು ಎಲ್ಲರೂ ಪಡೆದದ್ದಾದರೆ ಆದರ್ಶ ದಾಂಪತ್ಯದ ಮೂಲಕ ಲೈಂಗಿಕ ಜೀವನ ಸುಖಮಯ ವಾಗುವುದು ಎಂಬ ಭರವಸೆ ಲೇಖಕಿಯಲ್ಲಿ ಗಾಢವಾಗಿದೆ.

ಲೈಂಗಿಕ ಜ್ಞಾನದ ಪೂರ್ಣ ವಿವರವನ್ನು 'ದಾಂಪತ್ಯ ದೀಪಿಕೆ' ಸಾಕಷ್ಟು ನೀಡಬಲ್ಲುದು. ಈ ಪೂರ್ಣ ವಿವರಗಳು, 'ಕೇಳು ಕಿಶೋರಿ' ಮತ್ತು 'ವಧುವಿಗೆ ಕಿವಿಮಾತು' ಮತ್ತು 'ದಾಂಪತ್ಯ ದೀಪಿಕೆ' ಒಟ್ಟಾಗಿ ಲೈಂಗಿಕ ವಿಜ್ಞಾನದ ಸುಖವನ್ನು ಸವಿಯಲೆಡೆ ಮಾಡಿ ಕೊಟ್ಟಂತಾಗಿದೆ. 'ಕೇಳು ಕಿಶೋರಿ'ಯಲ್ಲಿ ನೀಡಲಾದ ಲೈಂಗಿಕ ಜ್ಞಾನ ಕ್ರಿಯಾತ್ಮಕವಾಗಿ ಬಳಕೆಯಾಗಲು ಸಾಕಷ್ಟು ಸಿದ್ಧತೆ ಬೇಕು. ಇದರ ಪೂರ್ವ ಸಿದ್ಧತೆಯೇ 'ವಧುವಿಗೆ ಕಿವಿಮಾತು' ಕೃತಿಯಲ್ಲಿ ನಡೆದಿದೆ. ಅದರ ಸಾಧನಾ ಸಿದ್ಧಿಯೇ 'ದಾಂಪತ್ಯ ದೀಪಿಕೆ' - ಒಟ್ಟಾಗಿ ಈ ಮೂರು ಕೃತಿಗಳಿಂದಲೇ ಲೈಂಗಿಕ ಜ್ಞಾನ ಪಡೆದುಕೊಳ್ಳಬಹುದಾಗಿದೆ: ಸಾಧನೆಯಲ್ಲಿ ಪಕ್ವತೆ ಸಾಧಿಸಿಕೊಳ್ಳಬಹುದಾಗಿದೆ. ಸಾಮಾಜಿಕ, ಕೌಟುಂಬಿಕ ಕಥಾವಸ್ತು ಇಲ್ಲಿಂದಲೇ ಆಯ್ಕೆಯಾಗಲು ಸಾಧ್ಯವೆಂಬಂತೆ ಬದುಕಿನ ಒಂದು ಚಿತ್ರವನ್ನಿಲ್ಲಿ ಕಾಣಬಹುದು. ಆತ್ಮೀಯರೊಬ್ಬರ ಸ್ವಾನುಭವ ಚಿಂತನೆಯಲ್ಲಿ ಪಾಲ್ಗೊಳ್ಳುವ ಆನಂದ ಇವುಗಳಲ್ಲಿ ಸಿಗುತ್ತದೆ. ಲೈಂಗಿಕ ಜೀವನ ಹಾಗೂ ಸಾಮಾಜಿಕವಾಗಿ ತಲೆ ಎತ್ತಿದ ಹಲವಾರು ಸಮಸ್ಯೆಗಳಿಗೆ ಉತ್ತರ ಇವು ಗಳಲ್ಲಿದೆ. ಲೈಂಗಿಕ ಅನಾರೋಗ್ಯಕ್ಕೆ ಸಿದ್ಧೌಷಧಿ ನೀಡುವ ವೈದ್ಯರ ಚಿಕಿತ್ಸೆಯ ಗುಣ ಮತ್ತು ಅದರಿಂದಾಗುವ ಆನಂದ ಇವುಗಳ ಓದಿನ ಫಲವಾಗುವುದು. ಸಹಬಾಳ್ವೆಯ ಪಾಠಹೇಳುವ ಗುರುವಿನ ಸಾನಿಧ್ಯ ಈ ಕೃತಿಗಳಲ್ಲಿ ಸಿಗುವುದು. ನಿಸ್ಸತ್ವ ಬಾಳಿಗೆ ಸತ್ತ್ವವನ್ನು ತುಂಬುವ ರಸಿಕ ಕಲೆ ಇವುಗಳಲ್ಲಿದೆ.

ಲೈಂಗಿಕ ಬದುಕಿನ ಸಂಪೂರ್ಣ ಜ್ಞಾನವನ್ನು ಡಾ।ಅನುಪಮಾ ನಿರಂಜನರು ತಮ್ಮ 'ಕೇಳು ಕಿಶೋರಿ', 'ವಧುವಿಗೆ ಕಿವಿಮಾತು', ಮತ್ತು 'ದಾಂಪತ್ಯದೀಪಿಕೆ'ಗಳ ಮೂಲಕ ಲೈಂಗಿಕ ಜೀವನಾಸಕ್ತರಿಗೆ ಮಾತ್ರವಲ್ಲ ಜ್ಞಾನಪೂರ್ಣ ಸುಖೀ ಬದುಕನ್ನು ಬಾಳುವ ಆಶಯವುಳ್ಳ ಎಲ್ಲರಿಗೂ ನೀಡುವುದರೊಂದಿಗೆ ತಮ್ಮ ಪ್ರತಿಯೊಂದು ಕೃತಿಯ ಉದ್ದೇಶ, ಕಾರ್ಯವ್ಯಾಪ್ತಿಯ ಸಾಧನೆಯಲ್ಲಿ ಯಶಸ್ವಿಯಾಗಿದ್ದಾರೆ. ಒಟ್ಟಿನಲ್ಲಿ ಒಬ್ಬ ಶಿಕ್ಷಣತಜ್ಞ, ಒಬ್ಬ ಸಮಾಜವಾದಿ, ಒಬ್ಬ ಮನೋವಿಜ್ಞಾನಿ, ಒಬ್ಬ ಲೈಂಗಿಕ ವಿಜ್ಞಾನಿ, ಒಬ್ಬ ಸಾಹಿತಿ, ಒಬ್ಬ ವೈದ್ಯೆ, ಒಬ್ಬ ಋಷಿ, ಒಬ್ಬ ಸಮಾಜ ಶಾಸ್ತ್ರಜ್ಞ, ಒಬ್ಬ ಆತ್ಮೀಯ ಬಂಧು, ಒಬ್ಬ ಸ್ವಾನುಭವಿ ತನ್ನ ಕ್ಷೇತ್ರದಲ್ಲಿ ಏನು ಕೆಲಸ ಮಾಡ ಬಲ್ಲನೋ, ಅದೆಲ್ಲವನ್ನೂ ಡಾ। ಅನುಪಮಾ ನಿರಂಜನರು ತಮ್ಮ ಈ ಮೂರು ಕೃತಿ ಗಳಲ್ಲಿ ಸಮಯೋಚಿತವಾಗಿ, ಸಮನ್ವಯಿಸಿ ಕೃತಿಗಳ ಅಭ್ಯಾಸ ಸಾರ್ಥಕವಾಗುವ ಪ್ರಯತ್ನ ನಡೆಸಿದ್ದಾರೆ.

೨ ಅನುಪಮಾ ನಿರಂಜನರ ಸಿಹಿ-ಕಹಿ ನೆನಪು

-ಎಮ್. ರಾಮಚಂದ್ರ

'ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು' ಎಂಬುದು ಕವಿ ಕಡೆಂಗೋಡ್ಲು ಅವರ ಒಂದು ಸುಪ್ರಸಿದ್ಧ ಸೂಕ್ತಿ. ಅನುಭವವು ಸವಿಯಾಗಿರದಿದ್ದರೆ ಅದರ ನೆನಪು ಸವಿಯೆನಿಸುವುದಾದರೂ ಹೇಗೆ ಎಂದು ಕೆಲವರು ಕೇಳಬಹುದು. ಯಾವುದೋ ಒಂದು ಅನುಭವ ತತ್ಕಾಲದ ಪರಿಸ್ಥಿತಿ-ಮನಸ್ಥಿತಿಗಳಲ್ಲಿ ಒಬ್ಬಾತನಿಗೆ ಕಟು ವಾಗಿರಬಹುದು ಅಥವಾ ಹಾಗೆ ಭಾಸವಾಗಬಹುದು. ಆದರೆ ಕಾಲಾನಂತರ ದಲ್ಲಿ ಪರಿಸ್ಥಿತಿಯಲ್ಲಿ ಪರಿವರ್ತನೆ ಆದಾಗ, ಮನಸ್ಸು ಪರಿಪಕ್ವಗೊಂಡಾಗ ಪೂರ್ವದ ಆ ಅನುಭವ ಮಧುರವೆಂದೇ ತೋರಬಹುದು - ನೆಲ್ಲಿಯ ಕಾಯನ್ನು ಜಗಿದಂತೆ: ಜಗಿಯು ವಾಗ ಕಹಿ, ಕೊಂಚ ಹೊತ್ತಿನಲ್ಲಿ ಸಿಹಿ. ಹೀಗೆ ಬದುಕಿನ ನಿಚ್ಚಣಿಗೆಯನ್ನು ಏರಿ ಇಳಿದು, ಬಾಳದಾರಿಯಲ್ಲಿ ಬಿದ್ದು ಎದ್ದು, ಅನುಭವದ ಬಟ್ಟಲಿನ ಕಹಿ-ಸಿಹಿಗಳನ್ನು ತಿಂದು ಉಂಡು ವ್ಯಕ್ತಿ ಜೀವನ ಪರಿಪೂರ್ಣವೂ ಸುಂದರವೂ ಸತ್ವಸಂಪನ್ನವೂ ಆಗುತ್ತದೆ. ಅನುಪಮಾ ನಿರಂಜನರ ಆತ್ಮಕಥೆ 'ನೆನಪು: ಸಿಹಿ-ಕಹಿ' ಅಂತಹದೊಂದು ಜೀವನದ ಸರಳ, ಪ್ರಾಂಜಲ ನಿರೂಪಣೆ. ಈ ಸರಳತೆ-ಪ್ರಾಂಜಲತೆಗಳೇ ಅದರ ಧನಾಂಶಗಳಾಗಿ ಕೃತಿ ವಾಚನೀಯವೆನಿಸುತ್ತದೆ, ಚೇತೋಹಾರಿಯಾಗುತ್ತದೆ.

ಇತ್ತೀಚೆಯ ವರ್ಷಗಳಲ್ಲಿ ಕನ್ನಡದ ಪ್ರಸಿದ್ಧ ಲೇಖಕರನೇಕರು ತಮ್ಮ ಆತ್ಮಕಥನಗಳನ್ನು ಪ್ರಕಟಿಸಿದ್ದಾರೆ. ಮಾಸ್ತಿ, ಕಾರಂತ, ಅನಕೃ, ಕುವೆಂಪು, ತರಾಸು, ಕಟ್ಟೀಮನಿ, ದೇಜಗೌ ಹೀಗೆ ಖ್ಯಾತನಾಮರನೇಕರ ಆತ್ಮಚರಿತ್ರೆಗಳು ಪ್ರಕಟವಾಗಿವೆ. ಇನ್ನೂ ಅನೇಕರು ತಮ್ಮ ಜೀವನ-ದರ್ಶನಗಳನ್ನು ಕುರಿತು ಹ್ರಸ್ವ-ದೀರ್ಘ ಪ್ರಬಂಧ ಗಳನ್ನು ಪ್ರಕಟಿಸಿದ್ದಾರೆ. ಅಡಿಗ, ಕೈಯಾರ ಮೊದಲಾದವರು ಪದ್ಯರೂಪದಲ್ಲಿ ಅಂತಹದ್ದನ್ನು ಬರೆದದ್ದೂ ಉಂಟು. ಹೀಗೆ ಈಗ ಆತ್ಮ ಚರಿತ್ರೆ ಒಂದು ತುಂಬು ಹೊಳೆಯಾಗಿ ಹರಿಯುತ್ತಿದ್ದರೂ ಅದು ಮೂಲದಲ್ಲಿ ಒಂದು ಸಣ್ಣ ಬುಗ್ಗೆಯಾಗಿ, ಹೊಸಲಾಗಿ ಹೊಮ್ಮಿದ್ದೇ ಹೌದು. ದಿ| ಜಿ. ಪಿ. ರಾಜರತ್ನಂ ಅವರ 'ಹತ್ತು ವರುಷ' ವೆಂಬುದು ಅದು ಪ್ರಕಟವಾದ (೧೯೩೫) ಕಾಲಕ್ಕೆ ಹೇಗೆ ವಿನೂತನವೋ ಇಂದಿಗೂ ಹಾಗೆಯೇ ಒಂದು ವಿಶಿಷ್ಟ ಕೃತಿ. ೧೯೪೭ರಲ್ಲಿ ಧಾರವಾಡದ ಮಿಂಚಿನ ಬಳ್ಳಿಯ ಬುರ್ಲಿ ಬಿಂದುಮಾಧವರು 'ಕಂನಾಡ ಸಾಹಿತ್ಯಜ್ಞರ ಆತ್ಮಕಥನ'ವೆಂಬ ಪುಸ್ತಕವನ್ನು ಪ್ರಕಟಿಸಿದರು. ಅದರಲ್ಲಿ ಕನ್ನಡದ ಹನ್ನೊಂದು ಮಂದಿ ಪ್ರಾತಃಸ್ಮರಣೀ ಯರ ಸ್ವ-ಜೀವನ ಚಿತ್ರಣಗಳನ್ನು ಕಾಣಬಹುದು. ೧೯೪೮ರಲ್ಲಿ ಶಿವರಾಮ ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಪ್ರತ್ಯಕ್ಷವಾದುವು. ಅದೇ ಸುಮಾರಿಗೆ

ದಿ। ಎಂ. ಗೋವಿಂದ ಪೈಯವರು, ಸಂಕ್ಷಿಪ್ತವಾದರೂ ಸರಸವಾದ 'ಬರೆಹಗಾರನ ಹಣೆಬರೆಹ'ವನ್ನು ಬರೆದರು. ಹೀಗೆ ಆತ್ಮಚರಿತ್ರಕಾರರ ಪರಂಪರೆ ಬೆಳೆಯುತ್ತಾ ಹೋಯಿತು.

ಆತ್ಮಚರಿತ್ರೆಯಲ್ಲಿ ಮುಖ್ಯವಾದದ್ದು ಚರಿತ್ರಕಾರನ ಪ್ರಾಂಜಲತೆ. ಮನುಷ್ಯಸಾಮಾನ್ಯನಲ್ಲಿರಬಹುದಾದ ದೋಷ ಭಾಗಗಳನ್ನು ಮುಚ್ಚಿ ಅಥವಾ ತೇಲಿಸಿ, ಗುಣಾಂಶಗಳನ್ನೇ ಹೆಚ್ಚಿಸಿ, ಹಿಗ್ಗಿಸಿ ಹೇಳಿದರೆ ಒಂದು ವ್ಯಕ್ತಿ ಜೀವನ ಹೇಗೆ ಸಾವಯವವಾಗಿ, ಸಮಗ್ರವಾಗಿ ವಿಕಾಸಗೊಂಡಿತು ಎಂಬುದರ ಪೂರ್ಣ ಚಿತ್ರ ದೊರೆಯಲಾರದು. ಗಾಂಧೀಜಿಯವರು ತಮ್ಮ 'My Experiments with Truth' ನಲ್ಲಿ ಪ್ರದರ್ಶಿಸಿದ ಋಜುತೆ, ಪ್ರಾಂಜಲತೆ ಇತರರಿಗೂ ಒಂದು ಮಾದರಿ. ಮಾಸ್ತಿಯವರು ತಮ್ಮ ಆತ್ಮಚರಿತ್ರೆ 'ಭಾವ'ದಲ್ಲಿ ಒಂದು ಎಚ್ಚರಿಕೆಯ ಮಾತು ಹೇಳಿದ್ದಾರೆ: " No man can speak of himself and be wise- ಮಮತೆ ವಿವೇಕವನ್ನು ಕೆಡಿಸುತ್ತದೆ." ಆತ್ಮಚರಿತ್ರೆಯೆಂದರೆ ಒಬ್ಬ ಲೇಖಕ ತನಗೆ ತಾನೇ ಹಿಡಿಯುವ ಕನ್ನಡಿ. ಬಿಂಬವು ತದ್ವತ್ತಾಗಿ ಕನ್ನಡಿಯಲ್ಲಿ ಪಡಿಮೂಡಬೇಕು. ಅಲ್ಲವೆಂದಾದರೆ ಆತ್ಮಚರಿತ್ರೆ ಯಥಾರ್ಥ ಚಿತ್ರಣವೆನಿಸುವುದಿಲ್ಲ. ಲೇಖಕ ನಿಜವನ್ನು ನುಡಿಯಬೇಕು, ಎಚ್ಚರದಿಂದ ನುಡಿಯಬೇಕು; ಅದು ಸಾಹಿತ್ಯಕವಾಗಿಯೂ ಇರಬೇಕು. ಆಗಲೇ 'ಆತ್ಮಚರಿತ್ರೆ'ಗೆ ಸಾರ್ಥಕ್ಯ.

ಅನುಪಮಾ ನಿರಂಜನರ 'ನೆನಪು: ಸಿಹಿ-ಕಹಿ,' ಅವರ ಬಾಳಬಟ್ಟೆಯ ಹಾಸು. ಹೊಕ್ಕುಗಳ, ತಗ್ಗು ದಿನ್ನೆಗಳ ಸಹಜ ಸರಳ ನಿರೂಪಣೆ. ಇಲ್ಲಿ ವರ್ಣ ರಂಜನೆಯಿಲ್ಲ, ಯಥಾರ್ಥ ಚಿತ್ರಣಕ್ಕೆ ಪ್ರಾಶಸ್ತ್ಯ. ಅನುಪಮಾ ಅನೇಕ ಕಾದಂಬರಿಗಳನ್ನು ಬರೆದಿದ್ದಾರೆಂಬುದು ನಿಜ. ಆದರೆ ಅವರ ಜೀವನವೇ ಒಂದು ಕಾದಂಬರಿ-'Truth is stranger than fiction' ಎಂಬಂತೆ, ಈ ಯಥಾರ್ಥ ಜೀವನ ಚಿತ್ರಣವೇ ಒಂದು ಕಾದಂಬರಿಯಂತೆ, ಕಾದಂಬರಿಗಿಂತ ಹೆಚ್ಚು ಸಜೀವವಾಗಿದೆ, ರೋಚಕವಾಗಿದೆ.

ಮುನ್ನೂರುಪುಟಗಳ ಈ ಆತ್ಮಕಥನದಲ್ಲಿ ಅನುಪಮಾ ತಮ್ಮ ಬದುಕಿನ ಪದರಗಳನ್ನೆಲ್ಲ ಮುಚ್ಚುಮರೆಯಿಲ್ಲದೆ ಲೋಕದ ಎದುರು ಬಿಡಿಸಿ ಇಡಿಸಿದ್ದಾರೆ. ತಮ್ಮ ಮನೆತನ, ಹಿರಿಯರು, ಹೆತ್ತವರು; ಅವರ ಸಂಪ್ರದಾಯಶರಣತೆ, ಅಹಂಮನ್ಯತೆ; ಮೂಲದಲ್ಲಿ ವೆಂಕಟಲಕ್ಷ್ಮಿಯಾಗಿದ್ದ ಅನುಪಮಾ ಅವರ ಬಾಲ್ಯ-ವಿದ್ಯಾಭ್ಯಾಸ; ಅದಕ್ಕಾಗಿ ಅವರು ಪಟ್ಟ ಪಾಡು; ಕಷ್ಟ ಕಾಲದಲ್ಲಿ ಒದಗಿದ ಬಂಧುಗಳು, ಮಿತ್ರರು; ತಮ್ಮ ವಿದ್ಯಾಭ್ಯಾಸ ಕಾಲದಲ್ಲೆ,ಆಗ ಕುಳುಕುಂದ ಶಿವರಾಯರಾಗಿದ್ದ ನಿರಂಜನರ ಪ್ರಥಮದರ್ಶನ,ತತ್ಪರಿಣಾಮವಾದ ಪ್ರೇಮಾಂಕುರ; ಪ್ರೇಮ ಪಥವೆಂದಿಗೂ ಸುಕರವಲ್ಲವೆಂಬುದನ್ನು ಸ್ಥಾಪಿಸುವಂತೆ,

ಹೆತ್ತವರಿಂದ ಎದುರಾದ ವಿರೋಧ; ಅದನ್ನು ಮೀರಿ, ದೂರದ ತಿರುಪತಿಯಲ್ಲಿ ಅನುಪಮಾ ನಿರಂಜನರು ವಿವಾಹವಾದದ್ದು: ವೈದ್ಯಕೀಯ ಶಿಕ್ಷಣ ಮುಗಿಸಿ, ಅನುಪಮಾ ಸ್ವತಂತ್ರ ವೃತ್ತಿ ಜೀವನವನ್ನು ಆರಂಭಿಸಿದ್ದು, ಬೆಂಗಳೂರು ಬಿಟ್ಟು ಧಾರವಾಡಕ್ಕೆ ಹೋದದ್ದು: ಅಲ್ಲಿ ಅನುಪಮಾ ಪ್ರಥಮ ಪುತ್ರಿ ತೇಜಸ್ವಿನಿಗೆ ಜನ್ಮ ವಿತ್ತದ್ದು: ಅಲ್ಲಿಂದ ಬೆಂಗಳೂರಿಗೆ ಹಿಂದಿರುಗಿದ್ದು; ಜಾಗ ಕೊಂಡದ್ದು, ಮನೆ ಕಟ್ಟಿದ್ದು: ಮತ್ತೊಬ್ಬಳು ಮಗಳು ಸೀಮಂತಿನಿಯನ್ನು ಪಡೆದದ್ದು; ಈ ಸುಂದರ-ಸುಖೀ ಕುಟುಂಬವನ್ನು ಕಂಡು ವಿಧಿ ಕರುಬಿತೋ ಎಂಬಂತೆ ನಿರಂಜನರು ಪಾರ್ಶ್ವವಾಯು ಪೀಡಿತರಾದದ್ದು: ಸತೀ ಸಾವಿತ್ರಿಯಂತೆ ಅನುಪಮಾ ನಿರಂಜನರನ್ನು ಮೃತ್ಯು ಮುಖ ದಿಂದ ಬಿಡಿಸಿ ತಂದದ್ದು: ಕೆಲಕಾಲದ ಅನಂತರ ಸ್ವತಃ ಅನುಪಮಾ ಅವರೇ ಭಯಾನಕ ವಾದ ಕ್ಯಾನ್ಸರ್ ರೋಗಗ್ರಸ್ತೆಯಾದದ್ದು: ಆದರೂ ತಮ್ಮ ಧೃತಿ ಶಕ್ತಿಯಿಂದ ಸಾವನ್ನು ಗೆದ್ದು ನಿಂತದ್ದು-ಇಂತಹ ಹತ್ತು ಹಲವು ವಿವರಗಳು ಈ ಕಥನದಲ್ಲಿ, ಚಲ ಚ್ಚಿತ್ರದ ಸುರುಳಿಯಂತೆ ಒಂದೊಂದಾಗಿ ಕಣ್ಣ ಮುಂದೆ ಸರಿಯುತ್ತಾ ಹೋಗುತ್ತವೆ. ವೈಯಕ್ತಿಕ - ಕೌಟುಂಬಿಕ - ದಾಂಪತ್ಯ ಜೀವನಗಳ ನಿರೂಪಣೆಯೊಂದಿಗೆ ಅನುಪಮಾ ತಮ್ಮ ಸಾಹಿತ್ಯ ಜೀವನದ ಆನೇಕ ಸನ್ನಿವೇಶಗಳನ್ನೂ ಇಲ್ಲಿ ಅನಾವರಣಗೊಳಿಸಿದ್ದಾರೆ. ಹಾಗೆಯೇ,-ಸ್ವಭಾವ ಸಹಜವಾಗಿದ್ದದ್ದೋ ಅಥವಾ ನಿರಂಜನ ಸಂಪರ್ಕ, ಸಂದರ್ಭ ಪ್ರೇರಣೆಗಳಿಂದ ಒದಗಿ ಬಂದದ್ದೋ,-ಅನುಪಮಾರವರಲ್ಲಿ ವಿಚಾರವಾದವು ಪ್ರಬಲ ವಾಗಿ, ಪವಾಡ ತನಿಖಾ ಸಮಿತಿಯ ಸದಸ್ಯೆಯಾಗಿ ಭಸ್ಮ ಕರಂಡಗಳನ್ನು ತೆರೆದು ಒಳಗಿನ ಟೊಳ್ಳನ್ನೋ ಗುಟ್ಟನ್ನೋ ಲೋಕದೆದುರು ಬಯಲು ಮಾಡಲು ಹೊರಟಾಗ ಎದುರಾದ ವಿರೋಧಗಳು, ಎದ್ದ ಸಮಸ್ಯೆಗಳು ಇಂತಹವುಗಳ ಉಲ್ಲೇಖವೂ ಸಾಂದರ್ಭಿಕವಾಗಿ ಈ ಗ್ರಂಥದಲ್ಲಿ ಬರುತ್ತದೆ.

'ನೆನಪು: ಸಿಹಿ-ಕಹಿ' ಅನುಪಮಾ ಅವರ ಆತ್ಮಚರಿತ್ರೆ ಎಂದರೆ ಜೀವನಾನುಭವ, ಸ್ವಾಭಿಪ್ರಾಯ ಸಂಗ್ರಹವಾದದ್ದರಿಂದ ಅದನ್ನು ಪ್ರಶ್ನಿಸುವ ಅಥವಾ ಟೀಕಿಸುವ ಧೋರಣೆ ಅಷ್ಟೇನೂ ಉಚಿತವೆನಿಸದು. ಗ್ರಂಥದಲ್ಲಿ ಏನು ಹೇಳಿದ್ದಾರೆ, ಹೇಗೆ ಹೇಳಿದ್ದಾರೆ ಎಂಬುದೇ ಮುಖ್ಯ. ಲೇಖಿಕೆಯ ದೃಷ್ಟಿ-ಧೋರಣೆಗಳನ್ನು ನಿರಾಕರಿಸುವ, ಖಂಡಿಸುವ, 'ಹಾಗಲ್ಲ ಹೀಗೆ' ಎಂದು ತಿದ್ದುವ ಅಧಿಕಾರ ನನ್ನದಲ್ಲ, ಆ ಹಂಬಲವೂ ನನಗಿಲ್ಲ. ಈ ಕಥನದಲ್ಲಿ ನಾನು ಒಪ್ಪದ ಅಂಶಗಳು ಒಂದೋ ಎರಡೋ: ಮೆಚ್ಚಿದ ಸಂಗತಿಗಳು ಎಂಟೋ ಒಂಬತ್ತೋ. ಪುಸ್ತಕದಲ್ಲಿ ನನಗೆ ಬಹು ಮುಖ್ಯವಾಗಿ ಕಂಡದ್ದು- ಅನುಪಮಾ ನಿರಂಜನ ದಂಪತಿಗಳನ್ನು ಬಲ್ಲವರಿಗೆಲ್ಲ ಅದು ತಿಳಿದದ್ದೇ-ತಾನು ಮೆಚ್ಚಿದ ಗಂಡನ್ನು, ಕಾಲ ಬರುವ ತನಕ ಕಾದು, ಕೈಹಿಡಿದು, ಕಷ್ಟ-ನಿಷ್ಠುರಗಳನ್ನೆಲ್ಲ ಎದುರಿಸಿದ ದಿಟ್ಟತನ; ಲೋಕ ಬೆರಗಾಗಿ ತಲೆದೂಗುವಂತೆ ಸಾವಿನೊಂದಿಗೆ ಸೆಣಸಿ ಗಂಡನನ್ನೂ ತನ್ನನ್ನೂ ಉಳಿಸಿಕೊಂಡ ಕೆಚ್ಚು: ಅಂತರ್ಜಾತೀಯ ಪ್ರೇಮ ವಿವಾಹಿತರಾದ

ತಮ್ಮನ್ನು ಯಾರು ಯಾರೋ ಹಿಂದೆ - ಮುಂದೆ ನಿಂದಿಸಿದರೂ ನಿರ್ಲಿಪ್ತವಾದ ನಡೆ-ನುಡಿ; ಒಳ್ಳೆಯ ಮಡದಿಯಾಗಿ, ಸೊಸೆಯಾಗಿ, ತಾಯಿಯಾಗಿ, ವೈದ್ಯೆಯಾಗಿ, ಲೇಖಕಿಯಾಗಿ, ಗೆಳತಿಯಾಗಿ ಬಾಳಿದ ಬಗೆ; ಪರಿಸರದ ಸಮಸ್ಯೆಗಳಿಗೆಲ್ಲ ತೀವ್ರ ಸ್ಪಂದಿಸುವವರಾಗಿ ಅನುಪಮಾ ತಮ್ಮನ್ನು ತಾವೇ ಲೋಕ ಜೀವನದ ಕುಲುಮೆಯಲ್ಲಿ ಹೇಗೆ ಪುಟಕ್ಕಿಟ್ಟುಕೊಂಡರು, ವಿವಿಧಾನುಭವಗಳ ಕೊಡತಿ ಪೆಟ್ಟನ್ನು ತಿಂದು ಜೀವ ಲೋಹವನ್ನು ಹೇಗೆ ಒಂದು ಕಲಾ ಮೂರ್ತಿಯಾಗಿ ತಿದ್ದಿಕೊಂಡರು ಎಂಬ ಸ್ವಾತ್ಮ ಶಿಕ್ಷಣ.

ಪುಸ್ತಕದ ಪುಟಗಳೆಂದರೆ ಅನುಪಮಾ ಅವರ ಬಾಳ ಹೊತ್ತಗೆಯ ಪುಟಗಳು. ಅವನ್ನು ತಿರುವುತ್ತಿದ್ದಂತೆ ಅನೇಕ ಚಿತ್ರಗಳು ಕಣ್ಣಿಗೆ ಕಟ್ಟಿ ದಟ್ಟವಾಗಿ ನಿಲ್ಲುತ್ತವೆ. ಆರಂಭದಲ್ಲೇ ಬರುವ, ಸೇವಾನಿರತ ಕೊಂಗಾಡಿಯಪ್ಪ, ದರ್ಪ-ಜಬರದಸ್ತುಗಳ ಡಾ। ಪುಟ್ಟಣ್ಣ, ಸಾಹಿತ್ಯ ಕ್ಷೇತ್ರದಲ್ಲೂ ಪ್ರಸಿದ್ಧರಾಗಿದ್ದ ಡಿ.ಸಿ. ಸುಬ್ಬರಾಯಪ್ಪ ಮೊದಲಾದ ಹಿರಿಯರ ಗುಣಶೀಲಗಳ ಚಿತ್ರಣ ಸಹಜವೂ ಸಜೀವವೂ ಆಗಿವೆ. ತಮ್ಮ ತಂದೆ ಶಿವರಾಮಯ್ಯ ಮನೆತನದ ನೇಕಾರ ವೃತ್ತಿಗೆ ವಿಮುಖರಾಗಿ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದ್ದನ್ನು ನಿರೂಪಿಸುವುದರೊಂದಿಗೆ ಅವರ ಒಳ್ಳೆಯತನದ ಎಡೆ ಎಡೆಯಲ್ಲಿದ್ದ ಸಣ್ಣ ಗುಣಗಳನ್ನೂ ಎತ್ತಿ ಹೇಳಲು ಅನುಪಮಾ ಹಿಂಜರಿಯುವುದಿಲ್ಲ. ಅನುಪಮಾ ಅವರಲ್ಲಿ ಸುಪ್ತವಾಗಿದ್ದ ಸಾಹಿತ್ಯ ಪ್ರತಿಭೆ ಪ್ರಕಟವಾಗತೊಡಗಿದಾಗ ಹಿರಿಯರು ಹೇಗೆ ಬಿಸಿ ನೀರೆರೆದರು; ಆದರೂ ಅದು ಹೇಗೆ ತನ್ನಿಂದ ತಾನೆ ಎದ್ದು ನಿಂತಿತು, ಎತ್ತರಕ್ಕೆ ಅಗಲಕ್ಕೆ ಬೆಳೆಯಿತು, ಪುಷ್ಪ-ಫಲ ಸಮೃದ್ಧವಾಯಿತು ಎಂಬುದನ್ನು ಮನೋಜ್ಞವಾಗಿ ನಿರೂಪಿಸಿದ್ದಾರೆ. ಮನೆ ಮಂದಿಯ ನಂಬಿಕೆ, ನಡವಳಿಕೆಗಳನ್ನು ವರ್ಣಿಸುವುದರೊಂದಿಗೆ, ಅನುಪಮಾ ಅವರ ವಿದ್ಯಾಭ್ಯಾಸದಲ್ಲಿ, ಅವ್ಯಾಜ ಸ್ನೇಹದಿಂದ ನೆರವಾದ ಅಕ್ಕಮ್ಮ, ಸಹಪಾಠಿನಿಯರೂ, ಸಮಾನಶೀಲೆಯರೂ ಆಗಿ, ಮುಂದೆ ಜೀವನದ ವಿವಿಧ ಕ್ಷೇತ್ರಗಳನ್ನು ಪ್ರವೇಶಿಸಿದ ಚೂಡಾರತ್ನ, ಇಂದಿರಾ, ಸ್ವರ್ಣ, ಕಮಲ, ಸರೋಜ; ನಿರಂಜನರ ನಿಮಿತ್ತವಾಗಿ, ತಮಗೂ ಮಿತ್ರರೂ ಸಹಕಾರಿಗಳೂ ಆಗಿ ಒದಗಿದ ಸತ್ಯ ನಾರಾಯಣ ರಾವ್, ಹಾ.ಮಾ. ನಾಯಕ, ಅನಂತಮೂರ್ತಿ, ಭಾರದ್ವಾಜ; ಸಹ ಲೇಖಿಕೆಯರಾದ ವಾಣಿ, ತ್ರಿವೇಣಿ; ಹಿರಿಯರೂ ಹಿತೈಷಿಯೂ ಆಗಿದ್ದ ಡಾ। ಎಂ. ಶಿವರಾಮ್, ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲರು, ಪ್ರಾಧ್ಯಾಪಕರು, ಸಹಪಾಠಿಗಳು ಇವರೆಲ್ಲರನ್ನೂ ಅನುಪಮಾ ಉಚಿತಕ್ಕೆ ತಕ್ಕಂತೆ ಖಚಿತವಾಗಿ ಸ್ಮರಿಸಿ ಸರಸವಾಗಿ ರೇಖಿಸಿದ್ದಾರೆ. ಸಾರಸ್ವತ ಪ್ರಪಂಚದಲ್ಲಿ ಅನುಪಮಾ ಹೆಸರು ಗಟ್ಟಿಯಾಗಿ, ಎದ್ದು ಕಾಣಿಸಿದ ಮೇಲೆ ಅವರಿಗೆ ಲಭಿಸಿದ ಸ್ನೇಹ ಸಂಪತ್ತು, ಮಾಡಿದ ಸಾಹಿತ್ಯ ಯಾತ್ರೆ, ಪಾಲ್ಗೊಂಡ ಸಭೆ-ಸಮ್ಮೇಳನ, ದೊರಕಿದ ಮಾನ-ಸಂಮಾನಗಳು ಇವುಗಳ ಹೃದ್ಯ ವಿವರಣೆಗಳೂ ಪುಸ್ತಕದಲ್ಲಿ ಅಲ್ಲಲ್ಲಿ ಸೊಗಸಾಗಿ ಬಂದಿವೆ. ತಮ್ಮ ಅತ್ತೆ-ನಿರಂಜನರ ತಾಯಿ-

ಮುದಿ ಹೆಂಗಸಾದರೂ ಮಗನ ಮನೋಧರ್ಮವನ್ನರಿತುಕೊಂಡು, ಸೊಸೆಯನ್ನು ವಾತ್ಸಲ್ಯದಿಂದ ಕಂಡು ತಮ್ಮ ಬೇಕು-ಬೇಡಗಳನ್ನು ಎಂದಿಗೂ ಅವರ ಮೇಲೆ ಹೇರದೆ, ಕಳಿತ ಹಣ್ಣು ತಾನಾಗಿ ಮರದಿಂದ ಉದುರಿ ಬೀಳುವಂತೆ ಕಾಲ ಬಂದಾಗ ಆ ಹಿರಿಯ ಜೀವ ಹೇಗೆ ತಣ್ಣನೆ ಕಣ್ಮುಚ್ಚಿದರೆಂಬ ವರ್ಣನೆಯಾಗಲಿ, ತಾಯಿ ತಂದೆಯರ ಸುಖ ದುಃಖಗಳಲ್ಲಿ ಪಾಲುಗಾತಿಯರಾಗಿ, ಮನೆಯೊಳಗಿನ ಆರತಿಗೂ ಮನೆ ಹೊರಗಿನ ಕೀರುತಿಗೂ ತಕ್ಕವರಾದ ಹೆಣ್ಮಕ್ಕಳು ತೇಜಸ್ವಿನಿ ಮತ್ತು ಸೀಮಂತಿನಿಯರ ಉಲ್ಲೇಖವೂ, 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬ ದುರ್ಮೋಹದೂರವಾಗಿ, ಯಥಾವತ್ತಾಗಿ, ಪ್ರಮಾಣಬದ್ಧವಾಗಿ ಕಾಣಿಸಿಕೊಂಡಿದೆ.

ಪುಸ್ತಕದಲ್ಲಿ ಮತ್ತೆ ಮತ್ತೆ ಎತ್ತಿ ಹೇಳಲೇ ಬೇಕಾದ, ಸರಸತಮವಾದ ಭಾಗ ವೆಂದರೆ ಅನುಪಮಾ - ನಿರಂಜನರ ದಾಂಪತ್ಯ ಜೀವನ. ಅದರ ಚಿತ್ರಣ. ಮೊದಲೇ ಹೇಳಿದಂತೆ ಅದು ಒಂದು ಕಾದಂಬರಿಯಂತೆ ಸ್ವತಂತ್ರವಾದದ್ದು, ಸುದೀರ್ಘವಾದದ್ದು ಮತ್ತು ಸ್ವಾರಸ್ಯಕರವಾದದ್ದು. ಕುಳಕುಂದ ಶಿವರಾಯರ ಬಗ್ಗೆ ಆ ಮೊದಲು ಅಷ್ಟೇನೂ ಕಾಡು ಕೇಳಿ ಅರಿಯದಿದ್ದ ಅನುಪಮಾ - ಆಗಿನ ವೆಂಕಟಲಕ್ಷ್ಮಿ, ಸ್ನೇಹಿತೆಯರೊಂದಿಗೆ ಅವರನ್ನು ಮೊತ್ತ ಮೊದಲ ಸಲ ಒಂದು ಕಡೆ ಭೇಟಿಯಾದುದನ್ನು ಹೀಗೆ ಬಣ್ಣಿಸುತ್ತಾರೆ:

"........ಕುಳಕುಂದ ಶಿವರಾಯರು. ಎತ್ತರದ ದೃಢಕಾಯರಾದ ಸುಮಾರು ೨೭-೨೮ರ ತರುಣ,ಗೌರಾಂಗ. ಗುಂಗುರು ಕೂದಲನ್ನು ಓರಣವಾಗಿ ಹಿಂದಕ್ಕೆ ಬಾಚಿಕೊಂಡಿದ್ದರು. ನೀಳವೂ ಅಲ್ಲ, ದುಂಡೂ ಅಲ್ಲ. ಅನ್ನುವಂಥ ಮುಖ. ಎದ್ದು ಕಾಣುತ್ತಿದ್ದ ಉದ್ದನೆಯ ಮೂಗು. ಮುಖಕ್ಕೆ ಸಣ್ಣವೇನೋ ಎನಿಸುವಂತಿದ್ದ ಕಣ್ಣುಗಳು. ಆದರೆ ಅವು ತುಂಬಾ ಕಾಂತಿಯುಕ್ತವಾಗಿದ್ದುವು. ದಟ್ಟ ಹುಬ್ಬು, ದೃಢತೆಯನ್ನು ಸೂಚಿಸುತ್ತಿದ್ದ ತುಟಿಗಳು, ಗಲ್ಲ. ಒಟ್ಟಿನಲ್ಲಿ ಸ್ಫುರದ್ರೂಪಿಯಾದ ಯುವಕ." ಮುಂದೆ ಪರಸ್ಪರ ಪರಿಚಯ, ಪ್ರಸ್ತಾವನೆ, ಲೋಕಾಭಿರಾಮವಾದ ಮಾತು-ಕತೆ. ಹೊರಡುವ ಮುನ್ನ ಶಿವರಾಯರು ಕೇಳುತ್ತಾರೆ: "ನಿಮ್ಮ ಕಥೆಗಳ್ನ ಸರೋಜಾ ಅವರ್ಹತ್ರ ಕೊಡಿ. ಅವರು ನನಗೆ ಅವನ್ನ ತಲಪಿಸ್ತಾರೆ. ಓದಿ ನೋಡಿ ಹಿಂದಿರುಗಿಸ್ತೀನಿ."

ಅದನ್ನು ಕೇಳಿದ ವೆಂಕಟಲಕ್ಷ್ಮಿಯ ಎದೆ ಢವಗುಟ್ಟುತ್ತದೆ. ಮನೆಗೆ ಬಂದವರೇ, ತಮ್ಮ ದಿನಚರಿಯಲ್ಲಿ ಹೀಗೆ ಬರೆದರು: "ಮದುವೆಯಾದರೆ ಇಂಥವರನ್ನು ಆಗ್ಬೇಕು"! ತಮ್ಮ ಕಥೆಗಳನ್ನು ಓದಿದ ನಿರಂಜನರು ಕಡತದ ಕೊನೆಯಲ್ಲಿ ಮೆಚ್ಚು ನುಡಿಗಳನ್ನು ಬರೆದಾಗ ವೆಂಕಟಲಕ್ಷ್ಮಿಯ ಹೃದಯ ಹುಚ್ಚೆದ್ದು ಕುಣಿಯುತ್ತದೆ!

ಸರಿ, ಮುಂದೆ ಆಗಾಗ ಭೇಟಿ, ಏಕಾಂತದಲ್ಲಿ ಮಾತು-ಕತೆ. ತಮ್ಮ ಅವ್ಯಕ್ತ ಪ್ರಣಯ ಭಾವನೆಗಳಿಗೆಲ್ಲ, 'ಉಷಾ' ಪತ್ರಿಕೆಯ 'ಸಾಧನ ಸಂಚಯ'ವೆಂಬ ಅಂಕಣದಲ್ಲಿ ನಿರಂಜನರು ಮೂರ್ತ ಅಕ್ಷರ ರೂಪವನ್ನು ನೀಡಿದರಾದರೆ ಅನುಪಮಾ ತಮ್ಮ ಅಂತರಂಗವನ್ನು ಯಾರ ಮುಂದೆಯೂ ತೆರೆಯಲಾಗದೆ ತಿಂಗಳು-ತಿಂಗಳು ಚಡಪಡಿಸಿದರು; "ರಾತ್ರಿ ಮಲಗಿದಾಗ ಮಾತ್ರ ಕಲ್ಪನೆಗೆ ಲಗ್ಗೆ" ಹಾಕತೊಡಗಿದರು. ಹೀಗೆ ೧೯೫೦ರ ನವಂಬರ ೨೩ ರಂದು ಆರಂಭವಾದ ಪ್ರಣಯ ೬ ವರ್ಷಗಳ ಕಾಲ ಗುಪ್ತಗಾಮಿನಿಯಾಗಿ ಅವರಿಬ್ಬರ ನಡುವೆ ಪ್ರವಹಿಸಿತು. ಇದೇ ಸಂಧಿಯಲ್ಲಿ, ನಿರಂಜನರ ಸೂಚನೆಯಂತೆ ವೆಂಕಟಲಕ್ಷ್ಮಿ ಹೆಸರನ್ನು ಬದಲಿಸಿಕೊಂಡು ಅನುಪಮಾ ಎಂಬ ಹೆಸರಿಟ್ಟುಕೊಂಡರು. ಇಬ್ಬರೂ ಉತ್ಕಟ ಪ್ರಣಯದ ಹುಚ್ಚು ಹೊಳೆಯಲ್ಲಿ ಕೊಚ್ಚಿ ಹೋಗದಂತೆ ಎಚ್ಚರಿಕೆ ವಹಿಸಿದರು. ಆರು ವರ್ಷಗಳ ಕಾಲ ಕಾದರು, ಕಾಲವನ್ನು ಗೆದ್ದರು, ಮುಂದೊಂದು ದಿನ ಗುಪ್ತ ಪ್ರಣಯದ ಬಹಿರಂಗ ಸ್ಫೋಟವಾಯಿತು. ೧೯೫೬ರ ಫೆಬ್ರುವರಿ ೨ ರಂದು ಅನುಪಮಾ-ನಿರಂಜನರು ಮದುವೆಯಾಗಿ ಕೈ ಕೈ ಹಿಡಿದರು; ಕಾಣುವ ಈ ತೀರದಿಂದ, ಕಾಣದ ಆ ತೀರವನ್ನು ಸೇರುವುದಕ್ಕಾಗಿ ಕೆಚ್ಚು-ನೆಚ್ಚುಗಳಿಂದ ಬಾಳ ಕಡಲಿಗೆ ಇಳಿದರು. ಈಸ ತೊಡಗಿದರು. ಅನುಪಮಾ ಬರೆಯುತ್ತಾರೆ:

"ನಿರಂಜನರ ಹಸ್ತಗಳಲ್ಲಿ ನನ್ನ ಹಸ್ತಗಳನ್ನಿಟ್ಟಾಗ ನನಗೆ ಮೊದಲ ಬಾರಿಗೆ ಉಮ್ಮಳ ಬಂತು. ಇಲ್ಲಿ ನನ್ನ ತಂದೆ ತಾಯಿಯಿಲ್ಲ. ಒಡಹುಟ್ಟಿದವರು ಆರು ಜನರಿದ್ದರೂ ಅಲ್ಲಿಗೆ ಬಂದಿದ್ದವನು ವಿಶು ಒಬ್ಬನೆ. ಆತ್ಮೀಯ ಸ್ನೇಹಿತರಿದ್ದರು. ಅದು ಬೇರೆ ಮಾತು. ಆಗ ಅನಿಸಿತು, ನಿರಂಜನರ ಕೈ ಹಿಡಿದು ಪ್ರಪಂಚದ ಕೊನೆಯ ವರೆಗೂ ಹೋಗಬಲ್ಲೆ, ಯಾವ ಭಯವೂ ಇಲ್ಲವೆ ಎಂದು. ಕಷ್ಟವಿರಲಿ ಸುಖವಿರಲಿ, ಸಮಭಾಗಿಗಳಾಗುತ್ತೇವೆ ಎಂದು ಮನಸ್ಸಿನಲ್ಲಿ ಸಾರಿ ಸಾರಿ ಹೇಳಿಕೊಂಡೆ. ಆ ಗಳಿಗೆಯಲ್ಲಿ ನನಗೆ ದುಃಖವಾಗಲಿಲ್ಲ, ಸಂಪ್ರದಾಯದ ಸಂಕೋಲೆಯನ್ನು ಕಳಚಿ ಬಂದೆನೆಂದು ಸಂತೋಷವಿತ್ತು, ತೃಪ್ತಿಯಿತ್ತು."

ಈ ಕಟು-ಮಧುರ ಆಖ್ಯಾನದ ನಡುವಿನ ಎಷ್ಟೋ ವಿಷ್ಕಂಭಕಗಳೂ ರಸವತ್ತಾಗಿವೆ. ಮನಸ್ಸಿನಲ್ಲಿ ಕೆತ್ತಿ ನಿಲ್ಲುತ್ತವೆ. ಒಂದು ಪ್ರಸಂಗ ಹೀಗಿದೆ:

"ನಾವು ಗುಡ್ಡ ಏರಿದೆವು. ನಿರ್ಮಲವಾದ ಆಕಾಶದಲ್ಲಿ ಒಂದೆರಡು ಹಕ್ಕಿಗಳು ಹಾರುತ್ತಿದ್ದುವು. ನಮ್ಮಿಬ್ಬರ ಮನಸ್ಸು ಅಷ್ಟೇ ಸ್ವಚ್ಛಂದವಾಗಿದ್ದುವು. ಬಂಡೆಗಲ್ಲೊಂದರ ಮೇಲೆ ಕುಳಿತಾಗ ನಿರಂಜನ, ತಾವು ತಂದಿದ್ದ ಎರಡು ಸೇಬು ಹಣ್ಣುಗಳನ್ನು ತೆಗೆದು 'ಇದನ್ನು ಹ್ಯಾಗೆ ಪಾಲು ಮಾಡೋದು? ಕಚ್ಚೋಣವೊ?' ಎಂದು ಕೇಳಿದರು.

'ಥೂ ಬೇಡಪ್ಪ!' 'ಹಾಗಾದರೆ ಕೈಲೇ ಮುರೀತೀನಿ' ಎನ್ನುತ್ತಾ ತಮ್ಮ ಬಲವಾದ ಕೈಗಳ ಮಧ್ಯೆ ಸೇಬುಹಣ್ಣು ಅವುಕಿ ಎರಡು ಹೋಳು ಮಾಡಿದರು. ಇಬ್ಬರೂ ತಿನ್ನತೊಡಗಿದೆವು...."

ಹೀಗೆ ಅನಾಮತ್ತಾಗಿ ಸೇಬುಹಣ್ಣನ್ನು ಸೀಳಿದ ನಿರಂಜನರು ಮುಂದೊಮ್ಮೆ ಜಾರಿ ಬಿದ್ದು, ಬಲಗೈಯ ಮೂಳೆ ಮುರಿದುಕೊಂಡಾಗ, (ಅನುಪಮಾರನ್ನುದ್ದೇಶಿಸಿ) ಬರೆದ 'ಸಾಧನ ಸಂಚಯ'ದ ಒಕ್ಕಣೆ ಹೀಗಿದೆ: "........ಹಿಂದೊಮ್ಮೆ ಎರಡು ವರ್ಷಗಳ ಹಿಂದೆ ನಾವಿಬ್ಬರೂ ಮೊದಲ ಬಾರಿ ಗುಡ್ಡವನ್ನೇರಿ ಹೋಗಿ ಅಲ್ಲಿ ಕುಳಿತಾಗ ಎರಡು ಅಂಗೈಗಳ ಮಧ್ಯೆ ಸೇಬುಹಣ್ಣನ್ನು ನಾನು ಒಡೆದಿದ್ದೆ, ನೆನಪಿದೆಯೇ? ಇನ್ನು ಮುಂದೆ ನಾನೆಂದಿಗೂ ಹೀಗೆ ಸೇಬುಹಣ್ಣನ್ನು ಒಡೆಯಲಾರೆ..........." ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ಅನುಪಮಾ ಸುದ್ದಿ ಕೇಳಿ, ಬೆಂಗಳೂರಿಗೆ ಧಾವಿಸಿ, ರತ್ನ ವಿಲಾಸ ರಸ್ತೆಯ ಪುಟ್ಟ ಮನೆಯಲ್ಲಿ ಚೇತರಿಸುತ್ತಿದ್ದ ನಿರಂಜನರನ್ನು ನೋಡಿ, ಬಲಗೈಯನ್ನು ಹಿಡಿದು ಕಣ್ಣೀರು ಸುರಿಸುತ್ತಾರೆ. ಓದುಗನೂ ಅಪ್ರಯತ್ನವಾಗಿ ಎರಡು ತೊಟ್ಟು ಕಣ್ಣ ಹನಿ ಉದುರಿಸುತ್ತಾನೆ !

ಮೆಡಿಕಲ್ ಕಾಲೇಜು ಸೇರುವ ಮೊದಲಿನ ಒಂದು ಸಂದರ್ಭವನ್ನು ಅನುಪಮಾ ವರ್ಣಿಸಿದ್ದಾರೆ. ಅದರ ಹಿನ್ನೆಲೆ ಹೀಗಿದೆ : ಅನುಪಮಾರ ತಂದೆ ವಿದ್ಯಾಧಿಕಾರಿಯಾಗಿದ್ದರೂ ಮನೆಯಲ್ಲಿ ಅಷ್ಟೇನೂ ದ್ರವ್ಯಾನುಕೂಲತೆ ಇರಲಿಲ್ಲ. ಹೀಗಾಗಿ ಕಾಲೇಜು ಕನ್ಯೆ ಅನುಪಮಾ ಸಾದಾ ಉಡುಪಿನಲ್ಲಿ, ಬರಿಗಾಲಲ್ಲಿ ಓಡಾಡುತ್ತಿದ್ದರು. ಅದನ್ನು ಕಂಡ ನಿರಂಜನ ಒಮ್ಮೆ, "ಮೆಡಿಕಲ್ ಕಾಲೇಜಿಗೆ ಹೋಗುವವರು ನೀವು ಚಪ್ಪಲಿ ಹಾಕ್ಕೋಬೇಕು." ಎಂದೆನ್ನುತ್ತಾ ಅಂಗಡಿಗೆ ಕರೆದೊಯ್ದು ಚಪ್ಪಲಿ ಕೊಡಿಸಿದರು. ಅನಂತರ ಒಂದಿಷ್ಟು ಖಾಲಿ ಪೇಪರನ್ನೂ ಇಂಕು ಬಾಟಲನ್ನೂ ಒಂದು ಪೆನ್ನನ್ನೂ ಉಡುಗೊರೆಯಾಗಿ ನೀಡಿದರು. " 'ಪೇಪರೇಕೆ ಕಥೆ ಬರೆಯಲಿಕ್ಕಾ?' ಎಂದು ನಾನು ಕೇಳಿದೆ. ಅವರು ಮೆಲ್ಲನೆ ನನ್ನ ಕಿವಿ ಹಿಂಡಿ,'ಅಲ್ಲ ನನಗೆ ಕಾಗದ ಬರೆಯಲಿಕ್ಕೆ' ಎಂದರು!"

ಎಷ್ಟು ಆತ್ಮೀಯವಾದ ಚಿತ್ರಣವಿದು! ಇಂತಹ ಚಿತ್ರಣಗಳು ಇನ್ನೂ ಎಷ್ಟೋ ಇವೆ. ಅವುಗಳ ಜೊತೆಗೆ ಮಾರ್ಮಿಕ ಪ್ರಸಂಗಗಳ ವರ್ಣನೆಯೂ ಇದೆ. ಅನುಪಮಾ-ನಿರಂಜನರು ದಾಂಪತ್ಯ ದೀಕ್ಷೆಯನ್ನು ಪಡೆದು ಬದುಕಿನ ನಾವೆ ಒಂದು ನೆಲೆಯನ್ನು ಮುಟ್ಟಿತೆನ್ನುವ ಹೊತ್ತಿಗೆ, ವಿಧಿಯ ದೊಡ್ಡದೊಂದು ಅಲೆ ಬಂದು ಅದಕ್ಕೆ ಅಪ್ಪಳಿಸಿ ದೋಣಿಯನ್ನು ತೊಯ್ದಾಡಿಸುತ್ತದೆ - ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆ ನಡೆಯುತ್ತಿದ್ದಾಗಲೇ, ನಿರಂಜನರು ಪಾರ್ಶ್ವವಾಯು ಪೀಡಿತರಾಗುವ ಸನ್ನಿವೇಶ ಚಿತ್ರಣವಾಗಲೀ, ಮುಂದಿನ ವಿವರಣೆಗಳಾಗಲೀ, ಹೃದಯವೇಧಕವಾಗಿವೆ. ಶರೀರದ

ಎಡ ಭಾಗದ ಮೇಲೆ ಹತೋಟಿಯನ್ನು ಕಳೆಕೊಂಡರೂ ನಿರಂಜನರು ಹೇಗೆ ಒಕ್ಕೈಯಾಗಿ ಹಿಡಿದ ಕೆಲಸವನ್ನು ಪಟ್ಟಿನಿಂದ ಮಾಡಿ ಮುಗಿಸುತ್ತಿದ್ದರು, 'ಜ್ಞಾನ ಗಂಗೋತ್ರಿ'ಯನ್ನು ಹೇಗೆ ಅವರು ಭಗೀರಥನಂತೆ ನೆಲಕ್ಕೆ ತಂದರು ಎಂಬ ಭಾಗವನ್ನು ಓದುವಾಗ, ಮನುಷ್ಯನ ಸಂಕಲ್ಪಶಕ್ತಿ ಎಷ್ಟಿರುತ್ತದೆ, ಹೇಗಿರುತ್ತದೆ ಎಂಬುದನ್ನು ಪರಿಭಾವಿಸಿ ಮೂಗಿಗೆ ಬೆರಳೇರಿಸುವಂತಾಗುತ್ತದೆ; ಯಾರಾದರೂ ಸಂಕಲ್ಪ ಶಕ್ತಿ ಎಂದರೇನು ಎಂದು ಕೇಳಿದರೆ, ನಿರಂಜನ ಎಂದು ಉತ್ತರಿಸುವಂತಾಗುತ್ತದೆ !

"ಯಾವ ಹೊತ್ತಿಗೂ ಸೋಲನ್ನು ಒಪ್ಪಿಕೊಳ್ಳಬಾರದು." ನಿರಂಜನರ ಈ ಮಾತನ್ನು ಅನುಪಮಾ ಒಂದು ಕಡೆ ಉದ್ಧರಿಸಿದ್ದಾರೆ. ಹೌದು, ನಿರಂಜನ ಯಾವುದೇ ಪರಿಸ್ಥಿತಿಯಲ್ಲೂ ಸೋಲು ಒಪ್ಪಿಕೊಳ್ಳಲಿಲ್ಲ. ಬದುಕಿಗೆ ಬೆನ್ನು ತೋರಿಸಲಿಲ್ಲ. ನಿರಂಜನರಿಗೆ ತಕ್ಕ ಸಹಧರ್ಮಿಣಿ ಅನುಪಮಾ. ಕಾದಂಬರಿಕಾರ ಎಸ್. ಎಲ್. ಭೈರಪ್ಪ ಒಮ್ಮೆ ನಿರಂಜನರೊಂದಿಗೆ "ಸಾವಿನ ಬಗ್ಗೆ ನಿಮ್ಮ ಅಭಿಪ್ರಾಯ ವೇನು" ಎಂದು ಕೇಳಿದಾಗ ಅವರು ಅನುಪಮಾ ಕಡೆಗೆ ಬೆಟ್ಟು ಮಾಡಿ "ಸಾವಿನ ಬಗ್ಗೆ ಉತ್ತರ ಕೊಡಲು ಇವರು ಯೋಗ್ಯ ವ್ಯಕ್ತಿ" ಎಂದರಂತೆ! ಆಗ ಅನುಪಮಾ "ಸಾವಿನ ಬಾಗಿಲ ಬಳಿ ಹೋಗಿ ಬಂದಿದ್ದೇನೆ ನಿಜ. ಸಾವಿನ ಬಗ್ಗೆ ಅಂಜಿಕೆಯಿಲ್ಲ" ಎಂದರು. ದಿಟ್ಟತನದ ಮಾತು, ನಿಜವಾದ ಮಾತು. ಸ್ವತಃ ಅನುಪಮಾ ಒಂದಲ್ಲ-ಮೂರು ಸಲ, ಅದೂ ಮಾರಕವಾದ ಕ್ಯಾನ್ಸರ್ ನಿವಾರಣೆಗಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರು. ನೋವನ್ನೆಲ್ಲ ನಗುನಗುತ್ತಾ ನುಂಗಿಕೊಂಡವರು. ಮುಂದೊಂದು ದಿನ, ಗೃಹಕೃತ್ಯ, ವೈದ್ಯಕೀಯ ವೃತ್ತಿ, ಸಾಹಿತ್ಯ ರಚನೆ ಈ ಮೂರನ್ನೂ ಹೊಂದಿಸಿಕೊಳ್ಳುವುದು ಪ್ರಯಾಸಕರವೆಂದು ತೋರಿದಾಗ ಕೈ ತುಂಬಾ ಕಾಸು ತರುತ್ತಿದ್ದ, ಒಳ್ಳೆಯ ಹೆಸರನ್ನು ತಂದಿತ್ತ ವೈದ್ಯಕೀಯ ವೃತ್ತಿಯನ್ನು ಬಿಟ್ಟುಕೊಟ್ಟರು - ಎಂಥ ಗಟ್ಟಿ ಜೀವ ಅನುಪಮಾ ಅವರದು, ಅದೆಂತಹ ಧೈರ್ಯ! - 'ನೆನಪು : ಸಿಹಿ-ಕಹಿ'ಯ ಪುಟಗಳ ಎಡೆಯಿಂದ ಒಂದು ಗಟ್ಟಿ - ದಿಟ್ಟ ಜೀವ ಮುಖ ತುಂಬ ನಗುನಗುತ್ತಾ ಎದ್ದು ಬರುತ್ತದೆ, ಆತ್ಮ ವಿಶ್ವಾಸ-ಲೋಕ ಸ್ನೇಹಗಳನ್ನು ಸೂಸುವ ಕಣ್ಣುಗಳಿಂದ ಓದುಗನನ್ನು ನೋಡುತ್ತಾ, ತನ್ನ ಬೆಚ್ಚನೆಯ ಕೈಗಳನ್ನು ಓದುಗನ ಹೆಗಲ ಮೇಲೆ ಇರಿಸುತ್ತದೆ, ಅವನನ್ನು ತನ್ನ ಸ್ನೇಹಲ ಹೃದಯದ ವಿಶಾಲ ಪ್ರಾಂಗಣಕ್ಕೆ ಬರಮಾಡಿಕೊಳ್ಳುತ್ತದೆ, ಗೆದ್ದು ನಗುತ್ತದೆ

'ಮೃತ್ಯುಂಜಯ' ಎಂಬುದು ನಿರಂಜನರ ಒಂದು ಕಾದಂಬರಿಯ ಶೀರ್ಷಿಕೆ ಆ ಶೀರ್ಷಿಕೆ, ಆ ವಿಶೇಷಣ, ನಿರಂಜನರಿಗೂ, ಅವರ ಸಹಧರ್ಮಿಣಿ ಅನುಪಮಾ ಅವರಿಗೂ ಅಷ್ಟೇ ಚೆನ್ನಾಗಿ ಒಪ್ಪುತ್ತದೆ. ಅನುಪಮಾ ಆತ್ಮಕಥೆಯನ್ನು ಬರೆದಿದ್ದಾರೆ. ನಿರಂಜನರು ಇನ್ನೂ ಬರೆದಿಲ್ಲ, ಅವರು ಬರೆದಾಗ ಎರಡನ್ನೂ ಒಂದು ಸಂಯುಕ್ತ ಸಂಪುಟವಾಗಿ ಪ್ರಕಟಿಸಿ ಅದಕ್ಕೂ ಒಂದು ಉಚಿತವಾದ ಹೆಸರನ್ನು ಇಡಬಹುದು- ಅದೇ "ಮೃತ್ಯುಂಜಯ"!

23 Ghosham

-Payyannur Kunhiraman

All forms of art are meant for the common mobs. Art and literature are the reflections of the emotions and feelings of the public. In our society there are people who live in darkness since their birth, in slums and hutments of the suburban areas and villages. They suffer without food and clothes. They even shiver and startle in sleep. But the magic wand of fate controls them.

A novelist or a writer just can't neglect the downtrodden people. He simply cannot close his eyes towards them.

Is it ever possible ? Now we are forced to think of an era when art and literature are turned into sharp weapons.

Most of the evils and other anti-social elements, which were prevalent in the ancient society and which were supposed to have been removed from our land from the root level have started to germinate again with their fully blossomed foliage. Alas ! we live in the midst of such a society. Recent incidents of 'Sati' are ample examples of that. India is again getting transfered into a barbarious and illiterate people's land. The perennial problems of poverty and unemployment are ever increasing. Over and above all there is a challenge to the unity and integrity of the country. Communal forces who perform their wild and ghostly dances everywhere threaten the country's integration.

Ideological and moral strength is necessary to preserve what we have gained by the noble method. To some extent cultural organizations only can distribute weapons of ideas and principles. It was only with this target "Purogamana Sahithya Prasthana" was introduced. The Niranjan couple of

Karnataka are travelling through the clear cut path followed by Yashpal, Prem Chand, Thakazhi and Mulk Raj Anand. It is praiseworthy and of course, a relief. It was Stalin who referred literary people to the "Engineers of human soul".

Today, literature is mostly limited to the field of novels. People are not that much attracted towards poetry and short stories. All magazines and weekly publications appear with a large number of serialised novels. The ancient strength of the theme and seriousness of the situations have disappeared from them. Today's novel is just a stimulus to awaken the tender and soft feelings of romance, which get intoxicated by them. It is a dangerous situation altogether.

There are still some small islands which do not get washed away in the flood of this kind of "painkili" literature. Niranjana and Anupama are some of the proud owners of such places. They have their own strength, divinity, and brightness. The flourishing tender coconuts of those islands, quench the thirst of the travellers and welcome the public with their gentle breeze.

Niranjana and Anupama couple has no comparison either in Kannada literature or in any other Indian literature.

In the prelude to the novel, she states that the theme and spirit of the "Ghosham" are quite different from other novels. Not only in Kannada literature but in the whole lot of Indian languages "Ghosham" makes its impact in a strong way.

'Ghosham' is the story of a set of slaves who throw away their ploughs and come back to a fresh life. There are downtrodden and suffering masses and a dictator whose tyranny is unbearable. In order to capture power he blows away the tender ties of personal relationships. Women are ill-treated and made to suffer. One fine independent morning, the masses get together and start their actions. They are turned into a form of tempest. The president who is the personification of all sins and evils is finally forced to commit suicide.

People are relieved and they breath the fresh air of freedom and satisfaction.

The story is being enacted in an imaginary group of islands. The novel begins with the bursting of a volcano. The central point of importance in the novel is the teacher named Bhoodevi. Almost all the incidents bloom one after another around this character only. The death of the cruel Elayaraja, and the happenings thereafter are woven together without losing the natural suspense and anxiety.

Bhoodevi is arrested for a crime which she never committed. She prepares herself to spread the light of knowledge even in the jail. Her husband died for the nation and her husband's brother too was hanged to death for fighting of the country.

The parallel theme of the novel is the attrocities committed towards the women folk. Bhoodevi is unhappy and irritated about it. She falls in sympathy for Subaida who strangles her baby to death. Another tragic character of the novel is Meena who was illtreated by the police. Then, there is Gilda, the prostitute too.

The writer is successful in giving a natural and genuine touch to all the other characters like Jaythilak, the leader, Fernandes, the journalist, Lawra and Jabala.

In total, "Ghosham" can be treated as the declaration of independence of the down-trodden people. One's duty towards the society is neatly drawn out in this novel by the writer. She deserves gratitude and satisfaction. Her pen is ploughing the society and her seeds are absolutely new.

This novel can be linked with the typical Indian atmosphere. The bursting of the volcano reminds the declaration of emergency. The unforgettable and cruel experiences of emergency could be all compared with the tyranny of the president and the sufferings of the masses in the island. May be, it is just a feeling or a vision. It is the duty of the critics to give the final judgement.

ಅನುಪಮಾ ಅಭಿನಂದನ

೪

ಅನುಪಮಾ : ನಡೆದು ಬಂದ ದಾರಿ

೧೯೩೪ ೧೭ ಮೇ-ಅನುಪಮಾ ಜನನ.

೧೯೪೭ ಕಥೆ ಬರೆಯಲು ಆರಂಭ.

೧೯೪೮ ಮಲ್ಲೇಶ್ವರಂ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ. ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಮೊದಲ ತರಗತಿಯಲ್ಲಿ ತೇರ್ಗಡೆ.

೧೯೪೯ ಇಂಟರ್ ಮೀಡಿಯಟ್ ಓದಲು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಸೇರ್ಪಡೆ.

೧೯೫೦ ನವೆಂಬರ್ ೨೩-ನಿರಂಜನರ ಪರಿಚಯವಾದದ್ದು.

೧೯೫೧ ನಿರಂಜನ-ಅನುಪಮಾ ಪ್ರೇಮ ದಟ್ಟವಾದದ್ದು.
ಇಂಟರ್ ಮೀಡಿಯಟ್‌ನಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆ.
ಮೈಸೂರಿನ ಮೆಡಿಕಲ್ ಕಾಲೇಜಿಗೆ ಪ್ರವೇಶ.

೧೯೫೩ 'ಕಣ್ಮಣಿ' ಕಥಾಸಂಕಲನ ಪ್ರಕಟಣೆ-ನಿರಂಜನರಿಂದ.

೧೯೫೪ 'ಅನಂತಗೀತ' ಮತ್ತು 'ಸಂಕೋಲೆಯೊಳಗಿಂದ' ಕಾದಂಬರಿಗಳ ಪ್ರಕಟಣೆ.

೧೯೫೬ ನಿರಂಜನರೊಂದಿಗೆ ವಿವಾಹ-ಫೆಬ್ರವರಿ ೨.
ಮೈಸೂರಿನಲ್ಲಿ ಹೊಸ ಬದುಕು ಆರಂಭ.
ಎಂ. ಬಿ. ಬಿ. ಎಸ್. ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆ.

೧೯೫೭ ಮೈಸೂರಿನಲ್ಲಿ ಹೌಸ್ ಸರ್ಜನ್ಸಿ.

೧೯೫೮ ಜನವರಿಯಲ್ಲಿ ಧಾರವಾಡಕ್ಕೆ ಪಯಣ.
ಜುಲೈ ೨೬-ತೇಜಸ್ವಿನಿಯ ಜನನ.
ಅಕ್ಟೋಬರ್-"ಅನುಪಮಾ ಚಿಕಿತ್ಸಾಲಯ ಮತ್ತು ಪ್ರಸೂತಿ ಗೃಹ" ಆರಂಭ.

೧೯೬೦ ಮರಳಿ ಬೆಂಗಳೂರಿಗೆ.

೧೯೬೨ ಜಯನಗರದಲ್ಲಿ 'ಅನುಪಮಾ ಚಿಕಿತ್ಸಾಲಯ' ಆರಂಭ.
ಉದ್ಘಾಟನೆ-ಡಾ। ಶಿವರಾಂ ಅವರಿಂದ.

೧೯೬೩ ಡಿಸೆಂಬರ್ ೨೯-ಶ್ರೀಮಂತಿನಿಯ ಆಗಮನ.

೧೯೬೬ 'ಸ್ನೇಹಪಲ್ಲವಿ' ಕಾದಂಬರಿ ಬರೆದದ್ದು. 'ಸುಧಾ'ದಲ್ಲಿ ಮೊದಲ ಧಾರಾವಾಹಿಯಾಗಿ ಪ್ರಕಟವಾದದ್ದು.

೧೯೬೮ "ತಾಯಿ-ಮಗು" ಪ್ರಕಟಣೆ.

೧೯೭೦ "ಋಣ" ಕಾದಂಬರಿ.
ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ನಿರಂಜನರಿಗೆ ಪಾರ್ಶ್ವವಾಯುವಾದದ್ದು.

೧೯೭೨ ಡಿ. ವಿ. ಕೆ. ಮೂರ್ತಿ ಅವರಿಂದ ಅನುಪಮಾ ಪುಸ್ತಕಗಳ ಪ್ರಕಟಣೆ ಆರಂಭವಾದದ್ದು.
ದಿನಕ್ಕೊಂದು ಕಥೆ-೩೬೫ ಮಕ್ಕಳ ಕಥೆಗಳ ಸಂಗ್ರಹ ಬಿಡುಗಡೆ.

೧೯೭೩ "ದಾಂಪತ್ಯ ದೀಪಿಕೆ" ಪ್ರಕಟಣೆ.

೧೯೭೪ "ಮಾಧವಿ" ಕಾದಂಬರಿ ರಚನೆ.
ಬೆಂಗಳೂರಿನಲ್ಲಿ 'ದುಡಿಯುವ ಮಹಿಳೆಯರ ಸಮ್ಮೇಳನ' ಏರ್ಪಡಿಸಿದ್ದು.
ಅಕ್ಟೋಬರ್‌ನಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ನಲ್ಲಿ ಭಾರತದ ಪ್ರತಿನಿಧಿ ತಂಡದಲ್ಲಿ ಒಬ್ಬಳಾಗಿ ಭಾಗವಹಿಸಿದ್ದು.

೧೯೭೬ ಬೆಂಗಳೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ಸಮಿತಿಯ ಸದಸ್ಯೆ.

೧೯೭೭ ಕಾಸರಗೋಡು ಮಹಿಳಾ ಸಮ್ಮೇಳನದ ಅಧ್ಯಕ್ಷತೆ.

೧೯೭೮ ಮೊದಲ ಬಾರಿಗೆ ಕ್ಯಾನ್ಸರ್ ಮುಖ ತೋರಿಸಿದ್ದು; ಶಸ್ತ್ರಕ್ರಿಯೆಯ ಅನಂತರ ಮುಂಬಯಿಯಲ್ಲಿ ಚಿಕಿತ್ಸೆ: ಮರಳಿ ಕೆಲಸ ಆರಂಭ ಮಾಡಿದ್ದು.
ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ.
ಸೋವಿಯಟ್ ಲ್ಯಾಂಡ್ ನೆಹರೂ ಪುರಸ್ಕಾರ.

೧೯೭೯ ಮುಂಬಯಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೮೧ ಆನೇಕಲ್ಲಿನಲ್ಲಿ ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.
ಯೂರೋಪು-ಅಮೇರಿಕಾ ಪ್ರವಾಸ ಸ್ವಂತ ಖರ್ಚಿನಲ್ಲಿ.

೧೯೮೨ ಕ್ಯಾನ್ಸರ್‌ಗೆ ಎರಡನೇ ಬಾರಿ ಶಸ್ತ್ರಚಿಕಿತ್ಸೆ: ವೈದ್ಯಕೀಯ ಪ್ರಾಕ್ಟೀಸ್ ನಿಲುಗಡೆ: "ನೆನಪು:ಸಿಹಿ ಕಹಿ" ಆತ್ಮಕಥನ ರಚನೆ; ಡಾಕ್ಟರೇಟ್ ವ್ಯಾಸಂಗಕ್ಕೆ ತೇಜಸ್ವಿನಿ ಅಮೇರಿಕೆಗೆ ಹೋದದ್ದು.

೧೯೮೩ ಆತ್ಮಕಥನ 'ತರಂಗ'ದಲ್ಲಿ ಧಾರಾವಾಹಿಯಾಗಿ ಪ್ರಕಟಣೆ - ಕನ್ನಡ ರಾಜ್ಯೋತ್ಸವ ಬೆಳ್ಳಿ ಹಬ್ಬದ ಪ್ರಶಸ್ತಿ.

೧೯೮೪ 'ಅಂಗೈಯಲ್ಲಿ ಯೂರೋ ಅಮೇರಿಕ' ಪ್ರವಾಸ ಕಥನ ಪ್ರಕಟಣೆ.
ತೇಜಸ್ವಿನಿ ನಿರಂಜನ-ವಿವೇಕ ಧಾರೇಶ್ವರರ ವಿವಾಹ.

೧೯೮೫ "ಘೋಷ" ಕಾದಂಬರಿ ಪ್ರಕಟಣೆ.
ಮೂರನೇ ಬಾರಿಗೆ ಕ್ಯಾನ್ಸರ್‌ಗೆ ಶಸ್ತ್ರಕ್ರಿಯೆ.

೧೯೮೬ ಸೀಮಂತಿನಿ ಎಂ. ಎ. (ಸಮಾಜವಿಜ್ಞಾನ)ದಲ್ಲಿ ಮೊದಲ ರ್‍ಯಾಂಕ್ ಪಡೆದು ಎರಡು ಚಿನ್ನದ ಪದಕ ಪಡೆದದ್ದು.

೧೯೮೭ ನಂಜನಗೂಡು ತಿರುಮಲಾಂಬಾ ಪ್ರಶಸ್ತಿ.
"ಆಳ" ಕಾದಂಬರಿ ರಚನೆ.

೧೯೮೮ ನಾಲ್ಕನೇ ಬಾರಿಗೆ ಕ್ಯಾನ್ಸರ್‌ಗೆ ಶಸ್ತ್ರಕ್ರಿಯೆ.
ತೇಜಸ್ವಿನಿ ಡಾಕ್ಟರೇಟ್ ಪಡೆದು ಇಂಡಿಯಾಕ್ಕೆ ಹಿಂತಿರುಗಿ, ಹೈದರಾಬಾದಿನಲ್ಲಿ ಅಧ್ಯಾಪಕಳಾದದ್ದು.
ಸೀಮಂತಿನಿ ಡಾಕ್ಟರೇಟ್ ವ್ಯಾಸಂಗಕ್ಕೆ ಆರಂಭ ಮಾಡಿದ್ದು.
"ಅನುಪಮಾ ಅಭಿನಂದನ" ಗ್ರಂಥ ಪ್ರಕಟಣೆ.

೨ ಅನುಪಮಾ ಸಾಹಿತ್ಯ: ಕೃತಿ ಸೂಚಿ

ಕಥಾ ಸಂಗ್ರಹ

ಕಣ್ಮಣಿ 1952, 72, 79

ರೂಪಾರಿಯ ಲಕ್ಷ್ಮಿ 1960, 72, 79

ನೀರಿಗೆ ನೈದಿಲೆ ಶೃಂಗಾರ 1960, 72, 79

ಏಳು ಸುತ್ತಿನ ಮಲ್ಲಿಗೆ 1966, 72

ಹೃದಯ ಸಮುದ್ರ 1968

ಗಿರಿಧಾಮ 1969

ಒಡಲು 1972

ಪುಷ್ಪಕ 1980

ಒಂದು ಗಿಣಿಯ ಕಥೆ 1983

ಕಾದಂಬರಿ

ಅನಂತಗೀತ 1954, 68, 72, 80

ಸಂಕೋಲೆಯೊಳಗಿಂದ 1954, 70, 78

ಶ್ವೇತಾಂಬರಿ 1957, 72, 75, 86

ನೂಲು ನೆಯ್ದ ಚಿತ್ರ 1961

ಹಿಮದ ಹೂ 1966, 71, 78

ಸ್ನೇಹಪಲ್ಲವಿ 1967, 71, 76 ತೆಲುಗು ಆವೃತ್ತಿ 1975

ಹೃದಯ ವಲ್ಲಭ 1968, 70, 73, 82

ಆಕಾಶಗಂಗೆ 1969, 72, 82 ತೆಲುಗು ಆವೃತ್ತಿ 1975

ಸಸ್ಯಶ್ಯಾಮಲಾ 1970, 78

ಋಣ 1971, 74, 82, 84 ಮಲಯಾಳಂ ಆವೃತ್ತಿ 1979

ಮೂಡಣ ಪಡುವಣ 1971, 74

ಚಿತ್ತ ಮೋಹನ 1972, 78

ಕಣಿವೆಗೆ ಬಂತು ಬೇಸಗೆ 1972, 82

ಪರೀಕ್ಷೆ 1974, 82

ನಟಿ 1975, 82

ಮಾಧವಿ 1976, 82, 86 ತೆಲುಗು ಆವೃತ್ತಿ 1979
ಮಲಯಾಳಂ ಆವೃತ್ತಿ 1981

ಎಳೆ 1980, 84

ಸೇವೆ 1981, 84

ಕೊಳಚೆ ಕೊಂಪೆಯ ದಾನಿಗಳು 1981

ಘೋಷ 1985

ಮುಕ್ತಿಚಿತ್ರ 1988

ಆಳ (ಅಚ್ಚಿನಲ್ಲಿ)

ನಾಟಕ

ಕಲ್ಲೋಲ 1970

ಶಿಶು ಸಾಹಿತ್ಯ

ದಿನಕ್ಕೊಂದು ಕಥೆ : ಸಮಗ್ರ ಸಂಪುಟ 1972

ಚೈತ್ರ 1972, 78, 80, 83, 85, 87

ವೈಶಾಖ 1972, 78, 80, 84, 85, 87

ಜ್ಯೇಷ್ಠ 1972, 78, 80, 83, 85, 87

ಆಷಾಢ 1972, 80, 82, 85, 88

ಶ್ರಾವಣ 1972, 81, 83, 85, 87

ಭಾದ್ರಪದ 1972, 82, 84, 86, 88

ಆಶ್ವಯುಜ 1972, 82, 84, 86, 88

ಕಾರ್ತೀಕ 1972, 82, 84, 85, 88

ಮಾರ್ಗಶಿರ 1972, 84, 85, 87

ಪುಷ್ಯ 1972, 84, 86, 88

ಮಾಘ 1972, 85

ಫಾಲ್ಗುಣ 1972, 87, 88

ಆತ್ಮವೃತ್ತ

ನೆನಪು : ಸಿಹಿ-ಕಹಿ 1985

ಪ್ರವಾಸ ಕಥನ

ಸ್ನೇಹಯಾತ್ರೆ 1978

ಅಂಗೈಯಲ್ಲಿ ಯೂರೋ ಅಮೇರಿಕ 1984

ಲೇಖನ ಸಂಗ್ರಹ

ಅಧ್ಯಯನ (ಅಚ್ಚಿನಲ್ಲಿ)

ಸಾಹಿತ್ಯ-ಪ್ರಗತಿ (ಅಚ್ಚಿನಲ್ಲಿ)

ಮಹಿಳೆಯರಿಗೆ

ಶುಭ ಕಾಮನೆ 1973, 76, 81, 84, 86

ಮಾನಿನಿ 1986

ನಾರೀ ಲೋಕ (ಅಚ್ಚಿನಲ್ಲಿ)

ದಾಂಪತ್ಯ ವಿಜ್ಞಾನ

ವಧುವಿಗೆ ಕಿವಿಮಾತು 1971, 73, 74, 75, 76, 77, 79, 81, 83, 86, 88

ದಾಂಪತ್ಯ ದೀಪಿಕೆ 1973, 74, 75, 77, 78, 80, 81, 82, 83, 84, 85, 86, 87

Super Marriage Super Sex 1980

ವೈದ್ಯಕೀಯ

ಕೇಳು ಕಿಶೋರಿ 1972, 73, 75, 81, 86

ಕೆಂಪಮ್ಮನ ಮಗು 1964

ತಾಯಿ-ಮಗು 1968, 71, 72, 75, 76, 79, 80, 82, 84, 85, 86, 88

ಶಿಶು ವೈದ್ಯ ದೀಪಿಕೆ 1982, 85

ಆರೋಗ್ಯ ಭಾಗ್ಯಕ್ಕೆ ವ್ಯಾಯಾಮ 1980, 81, 83, 85, 87

ಆರೋಗ್ಯ ದರ್ಶನ 1970, 1985

ಸ್ತ್ರೀ ಸ್ವಾಸ್ಥ್ಯ ಸಂಹಿತೆ 1976, 80, 84, 87

ಆಹಾರದಿಂದ ಆರೋಗ್ಯ 1988

ಒತ್ತಡದ ಬೇನೆ (ಅಚ್ಚಿನಲ್ಲಿ)

"ಅನುಪಮಾ ಅಭಿನಂದನ": ಯಾರು? ಯಾರು? ೩

೧ **ಡಾ। ಡಿ. ಪಿ. ಜಯರಾಂ**, ನಿವೃತ್ತ ಚರ್ಮವ್ಯಾಧಿ ತಜ್ಞರು,
425, ಎರಡನೇ ಲಿಂಕ್ ರೋಡ್, ಮೂರನೇ ಬ್ಲಾಕ್, ಜಯನಗರ
ಬೆಂಗಳೂರು - 560 011

೨ **ಸುಭದ್ರಾ ಸದಾಶಿವಯ್ಯ**, ಗೃಹಿಣಿ, 21, ಕೃಷ್ಣ ರಸ್ತೆ, ಬಸವನ ಗುಡಿ
ಬೆಂಗಳೂರು - 560 004

೩ **ಟಿ. ಎಸ್. ಅನ್ನಪೂರ್ಣ**, ಸಸ್ಯಶಾಸ್ತ್ರ ಪ್ರಾಧ್ಯಾಪಿಕೆ, 'ರಜತಾದ್ರಿ',
ಬಿ. ಎಚ್. ರಸ್ತೆ, ತುಮಕೂರು

೪ **ಚೂಡಾರತ್ನ ತಿಗಡಿ**, ಭೌತಶಾಸ್ತ್ರ ಪ್ರಾಧ್ಯಾಪಿಕೆ, 'ಸಂಗಮ', ಸಪ್ತಾಪುರ
ಧಾರವಾಡ - 580 001

೫ **ಡಾ। ಶಾರದಾ ಸುಬ್ಬಯ್ಯ**, ನಿವೃತ್ತ ಮೆಡಿಕಲ್ ಸೂಪರಿಂಟೆಂಡೆಂಟ್,
ಎಚ್. ಎಂ. ಟಿ. ಆಸ್ಪತ್ರೆ, 144, 4ನೇ ಕ್ರಾಸ್, ಎಚ್. ಎಂ. ಟಿ. ಲೇಔಟ್
ಮತ್ತಿಕೆರೆ, ಬೆಂಗಳೂರು - 560054

೬ **ಲೀಲಾ ಮಿರ್ಲೆ,** ಲೇಖಕಿ, 220, ಬಳ್ಳಾರಿ ರಸ್ತೆ, ಪ್ಯಾಲೆಸ್ ಆರ್ಚರ್ಡ್ಸ್ ಬೆಂಗಳೂರು - 560 080

೭ **ಕೆ. ಶಾಂತಾ,** ಉಪಾಧ್ಯಾಯಿನಿ, ನಟಿ, 1312,25 ನೇ ಮೈನ್, 9ನೇ ಬ್ಲಾಕ್ ಜಯನಗರ, ಬೆಂಗಳೂರು - 560 069

೮ **ಕಮಲಾ ರಾಮಸ್ವಾಮಿ,** ಲೇಖಕಿ, 410, ಲಿಂಕ್ ರೋಡ್, 3ನೇ ಬ್ಲಾಕ್ ಜಯನಗರ, ಬೆಂಗಳೂರು - 560 011

೯ **ಟಿ. ಎಸ್. ಸತ್ಯನಾರಾಯಣ ರಾವ್,** ಅಧಿಕಾರಿ, ಎಚ್. ಎ. ಎಲ್. 1854, 40ನೇ ಎ ಕ್ರಾಸ್, 25ನೇ ಮೈನ್, 9ನೇ ಬ್ಲಾಕ್, ಜಯನಗರ, ಬೆಂಗಳೂರು - 560 069

೧೦ **ನಂದಾ ಡಿ. ಎಸ್.,** ಉಪನ್ಯಾಸಕಿ. c/o ಶ್ರೀ ಎಚ್. ಎಂ. ಕುಮಾರಸ್ವಾಮಿ, ಉಪನ್ಯಾಸಕರು, ಎನ್. ಎಂ. ಕಾಲೇಜು, ಸುಳ್ಯ, ದ. ಕ. 574 239

೧೧ **ಕಾಮಾಕ್ಷಿ ಧಾರೇಶ್ವರ,** ನಿವೃತ್ತ ಉಪಾಧ್ಯಾಯಿನಿ, ಶಿರಸಿ, ಉ. ಕ. 581 401

೧೨ **ಎಂ. ಎನ್. ಸುಮಿತ್ರಾ,** ಲೇಖಕಿ, 1096, ಚಾಮರಾಜಪುರಂ ಮೈಸೂರು - 570 003

೧೩ **ಡಾ| ರಘುವೀರ ಭಟ್,** ವೈದ್ಯರು 4/1 ಸೀಮಾ, ಚಾರ್ ಬಂಗಲೋಸ್ ರೋಡ್, ಅಂಧೇರಿ ವೆಸ್ಟ್, ಮುಂಬಯಿ - 400 058

೧೪ **ಶಾಂತಾದೇವಿ ಮಾಳವಾಡ,** ಲೇಖಕಿ, 'ಪ್ರಶಾಂತ', ಕಲ್ಯಾಣನಗರ ಧಾರವಾಡ - 580 007

೧೫ **ಡಾ| ಮೀರಾ ಆರ್.ಕಾಮತ್,** ನಿವೃತ್ತ ಸ್ತ್ರೀರೋಗ ತಜ್ಞೆ, ಕಾಲೇಜು ರಸ್ತೆ ಮೂಲ್ಕಿ, ದ. ಕ 574 154

೧೬ **ಪದ್ಮಾ ಶೆಣೈ,** ಲೇಖಕಿ. ಪಯಸ್ ಹಿಲ್. ಮಂಗಳೂರು - 575 006

೧೭ **'ಶಾರದೆ',** ಲೇಖಕಿ, 673, 15ನೇ ಮೈನ್, ನಾಲ್ಕನೇ ಬ್ಲಾಕ್ 'ಟಿ' ಜಯನಗರ, ಬೆಂಗಳೂರು - 560 011

೧೮ **ಡಾ| ಕೆ. ಗಂಗಾಧರ ಶೇಕ,** ವೈದ್ಯರು, ಬೆಳ್ತಂಗಡಿ - 574 214

೧೯ **ಡಾ| ಎಸ್. ಲಲಿತ,** ಪ್ರಾಧ್ಯಾಪಕಿ, ಮುಖ್ಯಸ್ಥೆ, ಔಷಧಿ ಶಾಸ್ತ್ರ ವಿಭಾಗ, ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆ, 52, ಸೌತ್‌ಎಂಡ್ ರೋಡ್, ನಾಗಸಂದ್ರ ಸರ್ಕಲ್, ಬೆಂಗಳೂರು - 560004

೨೦ **ಶಾಂತಾದೇವಿ ಕಣವಿ,** ಲೇಖಕಿ, 'ಚೆಂಬೆಳಗು', ಕಲ್ಯಾಣನಗರಿ, ಧಾರವಾಡ - 580 007

೨೧ **ಭುವನೇಶ್ವರಿ ಹೆಗಡೆ,** ಅರ್ಥಶಾಸ್ತ್ರ ಉಪನ್ಯಾಸಕಿ, ಲೇಖಕಿ, ಸರ್ಕಾರಿ ಕಾಲೇಜು, ಮಂಗಳೂರು

೨೨ **ಡಾ. ಟಿ.ವೃಂದಾ,** ಲೇಖಕಿ, ವೈದ್ಯೆ, ಭದ್ರಾ ನರ್ಸಿಂಗ್ ಹೋಂ, ಗಾಂಧಿನಗರ ಭದ್ರಾವತಿ - 577 301

೨೩ **ವೈದೇಹಿ,** ಲೇಖಕಿ, 3/1/65, ಬ್ಲಾಕ್ 'ಎಫ್', ಓರಾಬಾಗ್, ಉಡುಪಿ ದ. ಕ - 576 103

೨೪ **ನೇಮಿಚಂದ್ರ,** ವೈಮಾನಿಕ ಎಂಜಿನಿಯರ್, ಲೇಖಕಿ, 'ಜೆ' ಬ್ಲಾಕ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು - 560 012

೨೫ **ಕೆ.ಉಷಾ ಪಿ ರೈ,** ಅಧಿಕಾರಿ, ವಿಜಯಾ ಬ್ಯಾಂಕ್, ಲೇಖಕಿ, 'ಸಮೃದ್ಧ', 345, ಲಕ್ಷ್ಮಿ ರಸ್ತೆ, 7ನೇ ಕ್ರಾಸ್, ಶಾಂತಿ ನಗರ, ಬೆಂಗಳೂರು - 560 027

೨೬ **ಆನಂದಿ ಸದಾಶಿವ ರಾವ್,** ಲೇಖಕಿ, ಕದ್ರಿ ರೋಡ್, ಮಂಗಳೂರು - 575 003

೨೭ **ಸುವಾಸಿನಿ ಭಂಡಾರಿ,** ಗೃಹಿಣಿ, ಬೈಂದೂರು, ಮಂಗಳೂರು - 575 002

೨೮ **ಎ. ಪಿ. ಮಾಲತಿ,** ಲೇಖಕಿ, ಆರ್ಯಾಪು, ಅಂಚೆ: ಪುತ್ತೂರು, ದ. ಕ.

೨೯ **ಗಾಯತ್ರಿ ಅನ್ಮೆಂಬಳ,** ಲೇಖಕಿ, 'ಚಿಂತನ', ಭಂಡಾರ್‌ಕರ್ಸ್ ಕಾಲೇಜು ಕ್ವಾರ್ಟರ್ಸ್, ಕುಂದಾಪುರ, ದ. ಕ. 576 201

೩೦ **ಬಿ. ಟಿ. ಲಲಿತಾ ನಾಯಕ್**, ಲೇಖಕಿ, ಎಂ.ಎಲ್.ಸಿ., 'ಕ್ರಾಂತಿ ಪಥ', ಎಲ್. 230, ನಿಜಲಿಂಗಪ್ಪ ಕಾಲೊನಿ, ರಾಯಚೂರು - 584 101

೩೧ **ಸುಮಿತ್ರಾ ಕುಸುಮಾಕರ್,** ಗೃಹಿಣಿ, 577, 4ನೇ ಮೈನ್, 1ನೇ ಹಂತ ಇಂದಿರಾ ನಗರ - 560 038

೩೨ **ಹೇಮಲತಾ ಮಹಿಷಿ,** ವಕೀಲರು, ಲೇಖಕಿ, ಅಧ್ಯಕ್ಷೆ, ಕರ್ನಾಟಕ ಲೇಖಕಿಯರ ಸಂಘ, ಡಿ-213, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರು - 560 012

೩೩ **ಡಾ! ಸರೋಜಿನಿ ಶಿಂತ್ರಿ,** ಪ್ರಾಧ್ಯಾಪಕಿ, ಲೇಖಕಿ, ಇಂಗ್ಲೀಷ್ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

೩೪ **ಡಾ| ಭಾರತಿ ಹಾವನೂರ,** ಹೋಮಿಯೋಪಥಿ ವೈದ್ಯೆ.
20, 8ನೇ ಮೈನ್, ಸೆಂಟ್ರಲ್ ಎಕ್ಸೈಜ್ ಲೇ ಔಟ್, ವಿಜಯನಗರ
ಬೆಂಗಳೂರು - 560 040

೩೫ **‘ಗಂಗಾ’ ಪಾದೇಕಲ್,** ಲೇಖಕಿ, ಸಂಗೀತ ಟಾಕೀಸ್ ಬಳಿ. ದರ್ಬೆ
ಪುತ್ತೂರು - 574 202

೩೬ **ವಿ. ಸಾಂ. ದೇವುಳ್‌ಗಾಂವಕರ್,** ಅನುವಾದಕ.ಸಾಮಾಜಿಕ ಕಾರ್ಯಕರ್ತ,
‘ವಿಶ್ರಾಮ್’. ಎಸ್. ಬಿ. ಕಾಲೇಜ್ ರಸ್ತೆ
ಗುಲಬರ್ಗಾ - 585 103

೩೭ **ಎಚ್. ಎಸ್. ಪಾರ್ವತಿ,** ಲೇಖಕಿ, ಅಧಿಕಾರಿ, ಆಕಾಶವಾಣಿ, ಬೆಂಗಳೂರು.
‘ಸ್ನೇಹ’. 3368, 13ನೇ ಕ್ರಾಸ್, ಹೊಸ ಕೆ. ಆರ್. ರಸ್ತೆ. ಶಾಸ್ತ್ರಿ ನಗರ
ಬೆಂಗಳೂರು - 560 070

೩೮ **ಸರೋಜ ನಾರಾಯಣ ರಾವ್,** ಲೇಖಕಿ,
215, ಇಂದಿರಾನಗರ. ಎರಡನೇ ಹಂತ
ಬೆಂಗಳೂರು - 560 038

೩೯ **ಶಶಿಕಲಾ ವೀರಯ್ಯಸ್ವಾಮಿ,** ಕವಯಿತ್ರಿ, ‘ಶ್ರೀಗಿರಿ’, ನಂ. 16 ಮಹಡಿ
2ನೇ ಮೈನ್, 9ನೇ ಕ್ರಾಸ್. ಗೋವಿಂದರಾಜ ನಗರ
ಬೆಂಗಳೂರು - 560 040

೪೦ **ನೀಳಾದೇವಿ,** ಲೇಖಕಿ, 41, 13ನೇ ಕ್ರಾಸ್. 10ನೇ ಮೈನ್. ಮಲ್ಲೇಶ್ವರಂ.
ಬೆಂಗಳೂರು - 560 003

೪೧ **ಟಿ. ಸುನಂದಮ್ಮ,** ಹಾಸ್ಯಲೇಖಕಿ. ‘ನಂದಿತಾ’. 74. ಗಾಯತ್ರಿ ದೇವಿ
ವಿಸ್ತರಣ, ವಯ್ಯಾಲಿಕಾವಲ್
ಬೆಂಗಳೂರು - 560 003

೪೨ **ನಿರಂಜನ,** ಲೇಖಕರು, 515.7ನೇ ಮೈನ್, 5ನೇ ಬ್ಲಾಕ್
ಜಯನಗರ, ಬೆಂಗಳೂರು

೪೩ **ಸಾರಾ ಅಬೂಬಕರ್,** ಲೇಖಕಿ, ಮಾರ್ಟಿನ್ ಪಯಸ್ ರೋಡ್.
ಪಯಸ್ ಹಿಲ್, ಮಂಗಳೂರು - 575 006

೪೪ **‘ಚಿರಂಜೀವಿ’,** ಸಹಾಯಕ ಸಂಪಾದಕ, ‘ತರಂಗ’. 29. 13ನೇ ಮೈನ್.
ಐ. & ಸಿ. ಡಿಪಾರ್ಟ್‌ಮೆಂಟ್ ಎಂಪ್ಲಾಯಿಸ್ ಸೊಸೈಟಿ ಲೇ ಔಟ್.
ವಿಜಯನಗರ, ಬೆಂಗಳೂರು - 560 040

೪೫ **ಚದುರಂಗ,** ಸಾಹಿತಿ, 2823, 8ನೇ ಕ್ರಾಸ್, ವಾಣಿ ವಿಲಾಸ ಮೊಹಲ್ಲಾ
ಮೈಸೂರು - 570 002

೪೬ **ಶರ್ವಾಣಿ,** ಅನುವಾದಕಿ, 'ಬಸವಗಂಗ ಕೃಪ', ನಂ. 18 ಶಾಂತಿ ಕಾಲೊನಿ,
ವಿದ್ಯಾನಗರ, ಹುಬ್ಬಳ್ಳಿ - 580 021

೪೭ **ಬಿ. ಎ. ಸನದಿ,** ಸಾಹಿತಿ, ಅಧಿಕಾರಿ, ಆಕಾಶವಾಣಿ ಮುಂಬಯಿ.
456, ಸೆಕ್ಟರ್ III, ಸಿ. ಜಿ. ಕಾಲೊನಿ, ಆಂಟಾಪ್ ಹಿಲ್, ಸಯಾನ್
ಕೋಳಿವಾಡ, ಮುಂಬಯಿ - 400 037

೪೮ **ವಿಜಯಾ,** ಪತ್ರಕರ್ತೆ, ಲೇಖಕಿ, 153,4 ನೇ ಮೈನ್, 8ನೇ ಕ್ರಾಸ್
ಚಾಮರಾಜಪೇಟೆ, ಬೆಂಗಳೂರು - 560 018

೪೯ **ವ್ಯಾಸರಾಯ ಬಲ್ಲಾಳ,** ಸಾಹಿತಿ, ಡಿ 1 - 52/497 ಎಂ.ಐ.ಜಿ. ಕಾಲೊನಿ
ಬಾಂದ್ರಾ ಈಸ್ಟ್, ಮುಂಬಯಿ - 400 051

೫೦ **ಸರಿತಾ ಕುಸುಮಾಕರ ದೇಸಾಯಿ,** ವಕೀಲರು, ಲೇಖಕಿ, ಸಂಜೀವನಿ,
ಗಾರ್ಡನ್ ರೋಡ್, ಗುಲಬರ್ಗಾ - 585 102

೫೧ **ಎಂ. ಸರಸ್ವತಿ ಗೌಡ,** ಕವಯಿತ್ರಿ, ಮತ್ತೀಕೆರೆ, ಶೆಟ್ಟಿ ಹಳ್ಳಿ ಅಂಚೆ
ಚನ್ನಪಟ್ಟಣ ತಾಲೂಕು, ಬೆಂಗಳೂರು ಜಿಲ್ಲೆ

೫೨ **ಎಚ್. ಪಿ. ಫಿಲೋಮಿನಾ,** ಸಹಸಂಪಾದಕಿ, 'ಪ್ರಜಾಮತ', ಲೇಖಕಿ
ಪ್ರಜಾಮತ ಕಾರ್ಯಾಲಯ, ಬಸವನಗುಡಿ
ಬೆಂಗಳೂರು - 560 004

೫೩ **ಎನ್. ಗಾಯತ್ರಿ,** ಸಂಪಾದಕಿ, 'ಅಚಲ', ಬಿ-20, ಆರ್.ಬಿ.ಐ. ಕ್ವಾರ್ಟರ್ಸ್
1ನೇ ಮೈನ್, 9ನೇ ಕ್ರಾಸ್, ವಿಜಯನಗರ 2ನೇ ಹಂತ,
ಬೆಂಗಳೂರು - 560 040

೫೪ **ಚಿ. ನ. ಮಂಗಳಾ,** ಲೇಖಕಿ, ಪ್ರಾಂಶುಪಾಲರು, ಎನ್. ಎಂ. ಕೆ. ಆರ್. ವಿ
ಕಾಲೇಜು, ಜಯನಗರ 3ನೇ ಬ್ಲಾಕ್,
ಬೆಂಗಳೂರು - 560 011

೫೫ **ಸರಸ್ವತೀ ಗಜಾನನ ರಿಸಬೂಡ,** ಅನುವಾದಕಿ, 643, ಜೆ. ಪಿ. ನಗರ
ಎರಡನೇ ಹಂತ
ಬೆಂಗಳೂರು - 560 078

೫೬ **ಡಾ। ಯಶೋದಾ ಭಟ್,** ಪ್ರಾಧ್ಯಾಪಿಕೆ, ಕವಯಿತ್ರಿ, ಡಿ-32,
ಗವರ್ನಮೆಂಟ್ ಕ್ವಾರ್ಟರ್ಸ್, ಕೆರೊಲ್ ಬಾಗ್
ನ್ಯೂಡೆಲ್ಲಿ - 110 005

೫೭ **ಡಾ। ಲಲಿತಾ ಭಟ್,** ವೈದ್ಯೆ, ನರ್ಸಿಂಗ್ ಹೋಂ
ಕಾಸರಗೋಡು

೫೮ **ಡಾ। ಹಾ. ಮಾ. ನಾಯಕ,** ಹಿರಿಯ ಪ್ರಾಧ್ಯಾಪಕರು, ಲೇಖಕರು,
'ಗೋಧೂಳಿ', ಗೋಕುಲಂ ರಸ್ತೆ, ಜಯಲಕ್ಷ್ಮಿಪುರಂ,
ಮೈಸೂರು - 570 020

೫೯ **ಕಲ್ಯಾಣಿ ಎನ್,** ಉಪನ್ಯಾಸಕಿ, ಗವರ್ನಮೆಂಟ್ ಮೆನ್ಸ್ ಕಾಲೇಜು
ಶ್ರೀಕಾಕುಳಂ,
ಎ. ಪಿ. - 532 001

೬೦ **ಶಶಿ ದೇಶಪಾಂಡೆ,** ಲೇಖಕಿ, 409,41ನೇ ಕ್ರಾಸ್, 5ನೇ ಬ್ಲಾಕ್,
ಜಯನಗರ, ಬೆಂಗಳೂರು 560 041

೬೧ **ವಿಜಯಶ್ರೀ ಸಬರದ,** ಲೇಖಕಿ, ಉಪನ್ಯಾಸಕಿ, ಅಕ್ಕಮಹಾದೇವಿ ಮಹಿಳಾ
ಮಹಾ ವಿದ್ಯಾಲಯ, ಬೀದರ - 585 401

೬೨ **ಡಾ। ಬಸವರಾಜ ಸಬರದ,** ಲೇಖಕ, ರೀಡರ್, ಕನ್ನಡ ವಿಭಾಗ
ಗುಲಬರ್ಗಾ ವಿಶ್ವವಿದ್ಯಾನಿಲಯ, ಗುಲಬರ್ಗಾ - 585 106

೬೩ **ಡಾ। ಕಮಲಾ ಹಂಪನಾ,** ಲೇಖಕಿ, ಪ್ರಾಧ್ಯಾಪಕಿ, ಮಹಾರಾಣಿ
ಕಲಾ ವಾಣಿಜ್ಯ ಕಾಲೇಜು, ಬೆಂಗಳೂರು, 1079, 'ಸ್ವನಿಮಾ', 5ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು - 560 010

೬೪ **ಡಾ। ನಾ. ದಾಮೋದರ ಶೆಟ್ಟಿ,** ನಾಟಕಕಾರರು ಮತ್ತು ನಾಟಕ
ನಿರ್ದೇಶಕರು, ಪ್ರಾಧ್ಯಾಪಕರು, ಕನ್ನಡ ವಿಭಾಗ, ಸೈಂಟ್ ಎಲೋಸಿಯಸ್
ಕಾಲೇಜು, ಮಂಗಳೂರು - 575 003

೬೫ **ಡಾ। ಚೆನ್ನಣ್ಣ ವಾಲಿಕಾರ,** ಲೇಖಕ, ರೀಡರ್, ಕನ್ನಡ ವಿಭಾಗ, ಗುಲಬರ್ಗಾ
ವಿಶ್ವವಿದ್ಯಾನಿಲಯ, ಗುಲಬರ್ಗಾ - 585 106

೬೬ **ಆರ್. ವಿ. ಭಂಡಾರಿ,** ಲೇಖಕ, ಅಧ್ಯಾಪಕ, ಅರೆಯಂಗಡಿ
ಹೊನ್ನಾವರ, ಉತ್ತರ ಕನ್ನಡ

೬೭ **ಬಿ. ಜನಾರ್ದನ ಭಟ್,** ಲೇಖಕ ಮತ್ತು ವಿಮರ್ಶಕ, ಉಪನ್ಯಾಸಕರು, ಇಂಗ್ಲೀಷ್ ವಿಭಾಗ, ಸರ್ಕಾರಿ ಪದವಿಪೂರ್ವ ಕಾಲೇಜು, ಪಡುಬಿದ್ರಿ, ದ. ಕ.

೬೮ **ಡಾ। ಎಚ್. ಎಸ್. ಸುಜಾತಾ,** ಲೇಖಕಿ, ವಿಮರ್ಶಕಿ, ರೀಡರ್ ಕನ್ನಡ ವಿಭಾಗ, ಬಸುಮಯ್ಯ ಕಾಲೇಜು, ಮೈಸೂರು. 'ಸುಹಾಸ', 53,6ನೇ ಬ್ಲಾಕ್, ಕುವೆಂಪು ನಗರ, ಮೈಸೂರು - 570 023

೬೯ **ಡಾ। ತೇಜಸ್ವಿನೀ ನಿರಂಜನ,** ಕವಯತ್ರಿ, ಉಪನ್ಯಾಸಕಿ, ಇಂಗ್ಲೀಷ್ ವಿಭಾಗ, ಸೆಂಟ್ರಲ್ ಯೂನಿವರ್ಸಿಟಿ, ಹೈದರಾಬಾದ್ - 500 134

೭೦ **ಸೀಮಂತಿನೀ ನಿರಂಜನ,** ಪಿ.ಎಚ್.ಡಿ. ವಿದ್ಯಾರ್ಥಿನಿ, 515,7ನೇ ಮೈನ್, 5ನೇ ಬ್ಲಾಕ್, ಜಯನಗರ, ಬೆಂಗಳೂರು - 560 041

೭೧ **ಮುರಳೀಧರ ಉಪಾಧ್ಯ, ಹಿರಿಯಡಕ,** ಲೇಖಕ ಮತ್ತು ವಿಮರ್ಶಕ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಪೂರ್ಣಪ್ರಜ್ಞ ಸಂಜೆ ಕಾಲೇಜು, ಉಡುಪಿ, ದ. ಕ. - 576 103

೭೨ **ಡಾ। ಕೃಷ್ಣ ಮೂರ್ತಿ ಕಿತ್ತೂರ,** ನಿವೃತ್ತ ಕನ್ನಡ ಪ್ರಾಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾನಿಲಯ, ಗುಲಬರ್ಗಾ - 585 106

೭೩ **ವಿ. ಗ. ನಾಯಕ,** ಕವಿ, ವಿಮರ್ಶಕ, ಅಧ್ಯಾಪಕರು, ಜನತಾ ಪ್ರೌಢ ಶಾಲೆ, ಅಡ್ಯನಡ್ಕ, ಬಂಟ್ವಾಳ ತಾಲೂಕು, ದ. ಕ.

೭೪ **ಡಾ। ಬಿ. ಎನ್. ಸುಮಿತ್ರಾಬಾಯಿ,** ಖ್ಯಾತ ವಿಮರ್ಶಕಿ, ಉಪನ್ಯಾಸಕಿ, ಸರ್ಕಾರಿ ಕಾಲೇಜು, ಹಾಸನ. 1034, ಕಾಲೇಜ್ ರಸ್ತೆ, ಪಿ. ಡಬ್ಲ್ಯು. ಡಿ. ಕಾಲೋನಿ ಹತ್ತಿರ, ಹಾಸನ - 573 201

೭೫ **ಸರಸ್ವತಿ ಪೂಜಾರ,** ಲೇಖಕಿ, ಉಪನ್ಯಾಸಕಿ, ವೀರ ಗಂಗಸಿರಿ ಮಹಿಳಾ ವಿದ್ಯಾಲಯ, ಗುಲಬರ್ಗಾ - 585 101

೭೬ **ಬಾಳಿ ಮೀನಾಕ್ಷಿ,** ಉಪನ್ಯಾಸಕಿ, ಕಲಾವಾಣಿಜ್ಯ ಕಾಲೇಜು, ಚಿಂಚೋಳಿ, ಗುಲಬರ್ಗಾ ಜಿಲ್ಲೆ

೭೭ **ವರದಾ ಶ್ರೀನಿವಾಸ,** ಲೇಖಕಿ, 108/2, 1ನೇ ಮೈನ್, 9ನೇ ಕ್ರಾಸ್, ಚಾಮರಾಜ ಪೇಟೆ, ಬೆಂಗಳೂರು - 560 018

೭೮ **ವಸುಂಧರಾ ಶ್ರೀಧರ,** ಕಾರ್ಯ ನಿರ್ವಹಣಾ ಸಹಾಯಕಿ.
ಆಕಾಶವಾಣಿ ನಿಲಯ,
ಬೆಂಗಳೂರು - 560 001

೭೯ **ಡಾ| ರಾಮಚಂದ್ರ ನಾಯಕ,** ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿ,
ರಾಂಪುರೆ ಮೆಡಿಕಲ್ ಕಾಲೇಜು, ಗುಲಬರ್ಗಾ. 'ಕಮಲಕುಂಜ', ದರ್ಗಾರಸ್ತೆ,
ಗುಲಬರ್ಗಾ - 585 101

೮೦ **ಅಡ್ಯನಡ್ಕ ಕೃಷ್ಣ ಭಟ್,** ವಿಜ್ಞಾನ ಲೇಖಕರು, ಪ್ರಾಧ್ಯಾಪಕ,
ವಿಜಯಾ ಕಾಲೇಜು. ಮೂಲ್ಕಿ. 'ಮಾಧವ ಕೃಪಾ'
ಮೂಲ್ಕಿ, ದ. ಕ. 574 154

೮೧ **ಲೀಲಾವತಿ ಎಸ್. ರಾವ್,** ಲೇಖಕಿ, ಪ್ರಾಧ್ಯಾಪಿಕೆ, ಕನ್ನಡ ವಿಭಾಗ,
ಗೋವಿಂದದಾಸ ಕಾಲೇಜು, ಸುರತ್ಕಲ್ ದ. ಕ.

೮೨ **ಲಲಿತಾ ಎನ್.,** ಉಪನ್ಯಾಸಕಿ, ಕನ್ನಡ ವಿಭಾಗ,
ಸರ್ಕಾರಿ ಪದವಿಪೂರ್ವ ಕಾಲೇಜು,
ಪುತ್ತೂರು, ದ. ಕ. - 574 201

೮೩ **ಎಂ. ರಾಮಚಂದ್ರ,** ಲೇಖಕ, ವಿಮರ್ಶಕ, ಪ್ರಾಧ್ಯಾಪಕರು,
ಭುವನೇಂದ್ರ ಕಾಲೇಜು, ಕಾರ್ಕಳ, ದ. ಕ.

೮೪ **ಪಯ್ಯನ್ನೂರು ಕುಞ್ಞಿರಾಮನ್,** ಅನುವಾದಕ, ಅಧ್ಯಾಪಕ,
ಮೂತೆಡತ್ತ್ ಹೈಸ್ಕೂಲು,
ಅಂಚೆ: ತಳಿಪರಂಬ - 670 141 ಕೇರಳ

ಕರ್ನಾಟಕ ಸಂಘ
ಪುತ್ತೂರು. (ದ.ಕ). 574 201.



ಅನುಪಮಾ ಅಭಿನಂದನ

ಪ್ರಧಾನ ಸಂಪಾದಕರು
ಬೊಳಂತಕೋಡಿ ಈಶ್ವರ ಭಟ್ಟ

ಸಹ ಸಂಪಾದಕರು
ವಿ. ಬಿ. ಮೊಳೆಯಾರ
ವಿ. ಬಿ. ಅರ್ತಿಕಜೆ